ಗ್ರಾಮಪಂಚಾಯಿತಿ:
ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ

ರಾಜ್ಯಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಎಚ್.ಡಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು
ಕಿಚಿಡಿ ಚನ್ನಪ್ಪ
ಸಹಾಯಕ ಪ್ರಾಧ್ಯಾಪಕರು
ಎಸ್.ಯು.ಬಿ.ಎಸ್. ಥಿಯೋಸಾಫಿಕಲ್ ಮಹಿಳಾ ಕಾಲೇಜು
ಹೊಸಪೇಟೆ

ಮಾರ್ಗದರ್ಶಕರು
ಡಾ. ಎ. ಶ್ರೀಧರ
ಸಹಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜವಿಜ್ಞಾನ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ ೫೮೩ ೨೭೬
೨೦೧೪

586

ಗ್ರಾಮಪಂಚಾಯಿತಿ:
ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ

ರಾಜ್ಯಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಎಚ್.ಡಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು
ಕಿಚಿಡಿ ಚನ್ನಪ್ಪ
ಸಹಾಯಕ ಪ್ರಾಧ್ಯಾಪಕರು
ಎಸ್.ಯು.ಬಿ.ಎನ್. ಥಿಯೋಸಾಫಿಕಲ್ ಮಹಿಳಾ ಕಾಲೇಜು
ಹೊಸಪೇಟೆ

ಮಾರ್ಗದರ್ಶಕರು
ಡಾ. ಎ. ಶ್ರೀಧರ
ಸಹಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜವಿಜ್ಞಾನ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬
೨೦೧೪

ದೃಢೀಕರಣ ಪತ್ರ

ಗ್ರಾಮಪಂಚಾಯಿತಿ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ ಎಂಬ ವಿಷಯದ ಕುರಿತು ಕಿಚಿಡಿ ಚನ್ನಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಮಾಡಿ ಪಿಎಚ್.ಡಿ. ಪದವಿಗಾಗಿ ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿ ಅಥವಾ ಡಿಪ್ಲೋಮ ಪದವಿಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಈ ಮಹಾಪ್ರಬಂಧವು ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ. ಇದು ಅವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : ೧೦/೦೩/೨೦೧೪
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರು
ಡಾ. ಎ. ಶ್ರೀಧರ
ಸಹ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

ಗ್ರಾಮಪಂಚಾಯಿತಿ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ ಎಂಬ ವಿಷಯದ ಕುರಿತು ಡಾ. ಎ. ಶ್ರೀಧರ ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಮಾಡಿ ಪಿಎಚ್.ಡಿ. ಪದವಿಗಾಗಿ ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೇನೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿ ಅಥವಾ ಡಿಪ್ಲೋಮ ಪದವಿಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಈ ಮಹಾಪ್ರಬಂಧವು ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ. ಇದು ನನ್ನ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

ದಿನಾಂಕ : ೧೦/೦೩/೨೦೧೪
ಸ್ಥಳ : ವಿದ್ಯಾರಣ್ಯ

ಕಿಚಿಡಿ ಚನ್ನಪ್ಪ
ಸಹಾಯಕ ಪ್ರಾಧ್ಯಾಪಕರು
ಎಸ್.ಯು.ಬಿ.ಎನ್ ಥಿಯೋಸಾಫಿಕಲ್
ಮಹಿಳಾ ಮಹಾವಿದ್ಯಾಲಯ
ಹೊಸಪೇಟೆ ೫೮೩ ೨೦೧

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಸಂಶೋಧನಾ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಹಿಂದಿನ ಕುಲಪತಿಗಳಾಗಿದ್ದ ಡಾ. ಎ. ಮುರಿಗೆಪ್ಪ ಅವರಿಗೆ ಹಾಗೂ ಇಂದಿನ ಕುಲಪತಿಗಳಾದ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೆ, ಹಿಂದಿನ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ ಹಾಗೂ ಇಂದಿನ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಅಶೋಕಕುಮಾರ ರಂಜೇರಿ ಅವರಿಗೆ, ಸಮಾಜ ವಿಜ್ಞಾನ ನಿಕಾಯದ ಡೀನ್‌ರಾದ ಡಾ. ಕೆ. ಎಂ. ಮೇತ್ರಿ ಅವರಿಗೆ ಹಾಗೂ ಆಂತರಿಕ ವಿಷಯತಜ್ಞರಾದ ಡಾ. ಪಾಂಡುರಂಗಬಾಬು ಅವರಿಗೆ ಕೃತಜ್ಞತೆಗಳು.

ಗ್ರಾಮಪಂಚಾಯಿತಿ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ ಎಂಬ ವಿಷಯದ ಕುರಿತು ಅಧ್ಯಯನ ಮಾಡುವ ನನ್ನಾಸೆಗೆ ಪೂರಕವಾಗಿ ಪ್ರೋತ್ಸಾಹಿಸಿದ, ಸಕಾಲಕ್ಕೆ ತಮ್ಮ ಅಮೂಲ್ಯ ಜ್ಞಾನ ಮತ್ತು ಸಮಯವನ್ನು ನೀಡಿ ಮಾರ್ಗದರ್ಶನ ಮಾಡಿದ ಡಾ. ಎ. ಶ್ರೀಧರ ಅವರಿಗೆ ನನ್ನ ಹೃದಯ ಪೂರ್ವಕ ಕೃತಜ್ಞತೆಗಳು.

ವಿಷಯ ಆಯ್ಕೆ ಮಾಡಿಕೊಟ್ಟು ಪ್ರೋತ್ಸಾಹಿಸಿದ, ಸಂಶೋಧನೆಯ ಉದ್ದಕ್ಕೂ ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಆಲಿಸಿ, ಚರ್ಚಿಸಿ, ಸೂಕ್ತ ಸಲಹೆ, ಮಾರ್ಗದರ್ಶನ ನೀಡಿ ಮುನ್ನಡೆಸಿದ ವಿದ್ಯಾಗುರುಗಳು ಹಾಗೂ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಟಿ. ಆರ್. ಚಂದ್ರಶೇಖರ ಅವರಿಗೆ ಹಾಗೂ ಡಾ. ಎಂ ಚಂದ್ರ ಪೂಜಾರಿ ಅವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು. ಸಂಶೋಧನಾ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಕಾಣುವ, ಅಧ್ಯಯನದ ವಿಷಯವನ್ನು ಚರ್ಚಿಸಿ, ಪ್ರೋತ್ಸಾಹಿಸುವ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಹೆಚ್.ಡಿ. ಪ್ರಶಾಂತ, ಡಾ. ಜನಾರ್ಧನ ಮತ್ತು ಡಾ. ಸಿದ್ದಗಂಗಮ್ಮ ಅವರಿಗೆ ನನ್ನ ಕೃತಜ್ಞತೆಗಳು. ಅಭಿವೃದ್ಧಿ ಅಧ್ಯಯನದ ವಿಭಾಗದ ಕಛೇರಿ ವರ್ಗದವರಾದ ಶ್ರೀ ಚಂದ್ರಕಾಂತ, ಶ್ರೀ ಪಿ. ಕರೀಮ್‌ಸಾಬ್, ಶ್ರೀ ಮೆಟ್ಟಿ ವೀರಪ್ಪ, ಶ್ರೀ ಗಣೇಶ ಇವರಿಗೆ ನನ್ನ ಕೃತಜ್ಞತೆಗಳು. ನನ್ನ ಸಂಶೋಧನ ಅಧ್ಯಯನಕ್ಕೆ ಆಕರ ಗ್ರಂಥಗಳನ್ನು ನೀಡಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯ, ಗ್ರಂಥಾಲಯದ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು.

ಕ್ಷೇತ್ರಾಧ್ಯಯನದಲ್ಲಿ ಪ್ರಾಥಮಿಕ ಮಾಹಿತಿ ನೀಡಿ ಸಹಕರಿಸಿದ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಹಾಗೂ ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳ ಚುನಾಯಿತ ಜನಪ್ರತಿನಿಧಿಗಳು ಹಾಗೂ ಗ್ರಾಮಸ್ಥರಿಗೆ ನನ್ನ ಕೃತಜ್ಞತೆಗಳು.

ಅಧ್ಯಯನಕ್ಕೆ ಪೂರಕವಾದ ಅಂಕಿಅಂಶಗಳನ್ನು ನೀಡಿ ಸಹಕರಿಸಿದ ಶ್ರೀ ಗಣಪತಿ ಕಟ್ಟಿನಕರ, ತಹಶೀಲ್ದಾರ್ ಹಾಗೂ ಇವರ ಸಿಬ್ಬಂದಿವರ್ಗ ಶ್ರೀ ಚಂದ್ರು ಮತ್ತು ಕುಮಾರಿ ಸಂಗೀತ, ತಾಲೂಕು ಕಛೇರಿ, ಸಿದ್ದಾಪುರ ಅವರಿಗೆ, ಜಿಲ್ಲಾಪಂಚಾಯಿತಿ ಕಾರವಾರ, ತಾಲೂಕುಪಂಚಾಯಿತಿ ಸಿದ್ದಾಪುರ ಮತ್ತು ಬೇಡ್ಕಣಿ ಹಾಗೂ ಕೋಲಸಿರ್ಸಿ ಗ್ರಾಮಪಂಚಾಯಿತಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು. ಶ್ರೀ ಮಂಜುನಾಥ, ತಹಶೀಲ್ದಾರ್ ಹಾಗೂ ಇವರ ಸಿಬ್ಬಂದಿವರ್ಗ ಶ್ರೀ ರಾಘವೇಂದ್ರ, ಶಿರಸ್ತೆದಾರ, ಶ್ರೀ ಚಂದ್ರನಾಯ್ಕ, ಶ್ರೀ ಪಂಪಾಪತಿ ಮತ್ತು ಕುಮಾರಿ ಎಂ. ಲಾವಣ್ಯ ತಾಲೂಕು ಕಛೇರಿ, ಹೊಸಪೇಟೆ ಅವರಿಗೆ, ಜಿಲ್ಲಾಪಂಚಾಯಿತಿ ಬಳ್ಳಾರಿ, ತಾಲೂಕುಪಂಚಾಯಿತಿ ಹೊಸಪೇಟೆ, ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿವರ್ಗದವರಿಗೆ ನನ್ನ ಕೃತಜ್ಞತೆಗಳು.

ಅಧ್ಯಯನವನ್ನು ಸಂಪೂರ್ಣಗೊಳಿಸಲು ನನಗೆ ಸೂಕ್ತ ಸಲಹೆ, ಸೂಚನೆ ಮತ್ತು ಸಹಕಾರ ನೀಡಿ ಉತ್ತೇಜಿಸಿದ ಪ್ರೊ. ಅರವಿಂದ ನಡಹಳ್ಳಿ, ಪ್ರೊ. ವಿ. ಎಸ್ ಹೆಗಡೆ, ಡಾ. ಕೆ. ಪನ್ನಂಗಧರ, ಡಾ. ಕೆ. ವೆಂಕಟೇಶ್, ಡಾ. ಬಿ. ಜಿ. ಕನಕೇಶಮೂರ್ತಿ, ಡಾ ಜೆ. ಕೃಷ್ಣ, ಡಾ. ಎಂ. ಯರಿಸ್ವಾಮಿ, ಡಾ. ಮೋಹನ್ ಶಾಂತಿಮೂಲೆ, ಡಾ. ದಯಾನಂದ ಕಿನ್ನಾಳ್, ಡಿ. ಮುತಾಲಿಕ್ ದೇಸಾಯಿ, ನಾಗರಾಜ ಕೊಮ್ಮದ್ದಿ, ಜಿ. ಹನುಮಂತಪ್ಪ, ಬಿ. ಗುರುಬಸಪ್ಪ, ಕೆ. ಪಂಪಾಪತಿ, ಸಿ. ಎಸ್. ಪಂಪಾಪತಿ, ಸುದೀಂದ್ರ, ಶ್ರೀಮತಿ ಬಿ. ಲಲಿತಾ ಅವರಿಗೆ ಹಾಗೂ ಮಹಾಪ್ರಬಂಧದ ಕರಡು ತಿದ್ದಿಕೊಟ್ಟ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ನಾನು ಋಣಿಯಾಗಿದ್ದೇನೆ.

ಸಂಶೋಧನೆಗೆ ಅನುಕೂಲ ಮಾಡಿಕೊಟ್ಟು, ಸಹಕಾರ ನೀಡಿದ ಮಹಾತ್ಮಾಗಾಂಧಿ ಶತಾಬ್ದಿ ಮಹಾವಿದ್ಯಾಲಯ, ಸಿದ್ದಾಪುರ, (ಉ.ಕ) ಮತ್ತು ಎಸ್.ಯು.ಬಿ.ಎನ್ ಥಿಯೋಸಾಫಿಕಲ್ ಮಹಿಳಾ ಮಹಾವಿದ್ಯಾಲಯ, ಹೊಸಪೇಟೆ ಈ ಆಡಳಿತ ಮಂಡಳಿಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ, ಪ್ರಾಂಶುಪಾಲರಿಗೆ ಹಾಗೂ ಸಹೋದ್ಯೋಗಿಗಳಿಗೆ ನನ್ನ ಕೃತಜ್ಞತೆಗಳು.

ಗ್ರಾಮೀಣ ಮಹಿಳೆಯರ ಬಗ್ಗೆ ಅಧ್ಯಯನ ಮತ್ತು ಅವರ ಏಳ್ಗೆಗೆ ಚಿಂತನೆ ಮಾಡಲು ಕಾರಣೀಭೂತರಾದ ನನ್ನ ತಾಯಿ ದಿ. ಶ್ರೀಮತಿ ಕಿಚಿಡಿ ಹನುಮವ್ವ ಅವರಿಗೆ ಎಂದೆಂದಿಗೂ ನಾನು ಚಿರಋಣಿಯಾಗಿರುತ್ತೇನೆ. ಅಧ್ಯಯನಕ್ಕೆ ಸಂಪೂರ್ಣ ಸಹಕಾರ ನೀಡಿದ ಅತ್ತೆಯವರಾದ ಶ್ರೀಮತಿ ಮಹಾರಾಜ ಗಂಗಮ್ಮ ಅವರಿಗೆ, ಪ್ರೀತಿಯ ಪತ್ನಿ ಪದ್ಮಜಾ, ಪುತ್ರರಾದ ಕೆ. ಸಿ. ಹರ್ಷವರ್ಧನ, ಕೆ. ಸಿ. ಅಮೋಘವರ್ಷ, ಅಕ್ಕ ತಾಯಮ್ಮ, ಅಣ್ಣ ಹನುಮಂತಪ್ಪ ಹಾಗೂ ಸಹೋದರರು ಕಿಚಿಡಿ ನಾಗರಾಜ ಮತ್ತು ಕಿಚಿಡಿ ಹನುಮಂತ ಅವರಿಗೆ ಕೃತಜ್ಞತೆಗಳು.

ಕಿಚಿಡಿ ಚನ್ನಪ್ಪ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಪ್ರಸ್ತಾವನೆ, ಸಮಸ್ಯೀಕರಣ, ಉದ್ದೇಶ, ವಿಧಾನ, ವ್ಯಾಪ್ತಿ, ಮಿತಿಗಳು, ಮಹತ್ವ, ಅಧ್ಯಾಯಗಳ ವಿನ್ಯಾಸ ಮತ್ತು ಅಧ್ಯಯನಗಳ ಸಮೀಕ್ಷೆಗಳು

1.1 ಅಧ್ಯಯನದ ಪ್ರಸ್ತಾವನೆ

ಭಾರತದ ಜನತಂತ್ರ ಆಡಳಿತ ವ್ಯವಸ್ಥೆಯಲ್ಲಿ ತಳಮಟ್ಟದ ಆಡಳಿತವಾದ "ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ"ವನ್ನು ಅಧ್ಯಯನ ಮಾಡುವುದು ಈ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಜನತಂತ್ರ ವಿಕೇಂದ್ರೀಕರಣ ವ್ಯವಸ್ಥೆಯ ಅಡಿಪಾಯವಾಗಿರುವ ಗ್ರಾಮಪಂಚಾಯಿತಿಯಲ್ಲಿ ಮಹಿಳೆ ಪ್ರಾತಿನಿಧ್ಯ ಪಡೆದರೆ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಸೇವಾವಲಯಗಳಲ್ಲಿ ಪ್ರಾತಿನಿಧ್ಯ ಪಡೆಯಲು ಸಾಧ್ಯವಾಗುತ್ತದೆ. ಗ್ರಾಮೀಣ ಸಮುದಾಯದ ಪರಿಸರದಲ್ಲಿ ಸುಧಾರಣೆ ಕಂಡುಬರುತ್ತದೆ ಎಂಬ ನಂಬಿಕೆ ಹಾಗೂ ಉದ್ದೇಶವನ್ನು ಹೊತ್ತುಕೊಂಡು ಬಂದ ಹಲವಾರು ಕಾನೂನು ಮತ್ತು ಅವಕಾಶಗಳಲ್ಲಿ 1992ರ ಪಂಚಾಯತ್‌ರಾಜ್ ಅಧಿನಿಯಮವು ಒಂದು. ಐತಿಹಾಸಿಕ 73ನೇ ತಿದ್ದುಪಡಿಯು ಪಂಚಾಯಿತಿಗಳಿಗೆ ಸಂವಿಧಾನಾತ್ಮಕ ಮಾನ್ಯತೆ ನೀಡುವುದರೊಂದಿಗೆ ಜನತಂತ್ರ ವಿಕೇಂದ್ರೀಕರಣವನ್ನು ದೇಶಾದ್ಯಂತ ಏಕರೂಪದಲ್ಲಿ ವಿಸ್ತಾರಗೊಳಿಸಿದೆ. ಜನತಾಂತ್ರಿಕ ವಿಕೇಂದ್ರೀಕರಣದ ಆಶಯದಂತೆ ಲಿಂಗಸಮಾನತೆಯನ್ನು ಎತ್ತಿಹಿಡಿದ ಕೇಂದ್ರ ಸರ್ಕಾರವು 2009ರಲ್ಲಿ ಪಂಚಾಯತ್‌ರಾಜ್ ಸಂಸ್ಥೆಯಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ನೀಡಿ, ಜನತಂತ್ರ ವಿಕೇಂದ್ರೀಕರಣಕ್ಕೆ ಭದ್ರ ಬುನಾದಿ ಹಾಕಿತು.

ಸ್ವತಂತ್ರ ಭಾರತವು ಜನತಂತ್ರ ಮತ್ತು ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಆರಂಭಿಸಿತು. ಲಿಂಗ, ಜಾತಿ, ವರ್ಗ ಭೇದಗಳಿಲ್ಲದೆ ಸರ್ಕಾರದ ಆಡಳಿತದ ಪ್ರಕ್ರಿಯೆಯಲ್ಲಿ ಎಲ್ಲರೂ ಭಾಗಿಯಾಗಬೇಕು ಮತ್ತು ಅಧಿಕಾರಗಳು ಸರ್ಕಾರಗಳ ನಡುವೆ ಹಂಚಿಕೆಯಾಗಬೇಕು ಎಂಬುದೇ ಇದರ ಮುಖ್ಯ ಉದ್ದೇಶ. ಈ ಉದ್ದೇಶಕ್ಕಾಗಿಯೇ ಮಹಾತ್ಮ ಗಾಂಧೀಜಿ ಗ್ರಾಮಗಳ ಅಭ್ಯುದಯಕ್ಕಾಗಿ ಗ್ರಾಮಸ್ವರಾಜ್ಯದ ಕನಸು ಕಂಡರು. ಅವರ ಕನಸು ನನಸಾಗಿಸಲು ಸಂವಿಧಾನದ 4ನೇ ಭಾಗದಲ್ಲಿ ಗ್ರಾಮಪಂಚಾಯಿತಿಗೆ ಅವಕಾಶ ಕಲ್ಪಿಸಲಾಯಿತು. ಆದರೆ ಅದು ನಿರೀಕ್ಷಿತ ಫಲ ನೀಡಲಿಲ್ಲ. ಕಾರಣ, ಊಳಿಗಮಾನ್ಯ, ವೈದಿಕ ಪರಂಪರೆಯ ನೆರಳಲ್ಲಿ ಬೆಳೆದು ಬಂದ ಪುರುಷ ಯಾಜಮಾನ್ಯ ಲಕ್ಷಣಗಳು ಜನಸಾಮಾನ್ಯರಿಗೆ

ಮತ್ತು ವಿಶೇಷವಾಗಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲು ಅಡ್ಡಿಯಾದವು ಎಂಬುದು ಬಲವಂತರಾಯ್ ಮೆಹತಾ ಸಮಿತಿ ನೀಡಿರುವ ವರದಿಯಲ್ಲಿ ಕಂಡುಬರುತ್ತದೆ. ಇದಕ್ಕೂ ಮುಂಚೆ 1957ರಲ್ಲಿ 'ಸೆಂಟ್ರಲ್ ಕೌನ್ಸಿಲ್ ಆಫ್ ಲೋಕಲ್ ಗವರ್ನ್‌ಮೆಂಟ್' ಮಹಿಳೆ ಮತ್ತು ಮಕ್ಕಳ ಕುರಿತು ಕೆಲಸ ಮಾಡಲು ಆಸಕ್ತಿ ಇರುವ ಇಬ್ಬರು ಮಹಿಳೆಯರನ್ನು ಪಂಚಾಯಿತಿ ಸದಸ್ಯರನ್ನಾಗಿ ಸಹಆಯ್ಕೆ(co-opt) ಮಾಡಲು ಸಲಹೆ ನೀಡಿತು. ಈ ವಾದವನ್ನೇ ಬಲವಂತರಾಯ್ ಮೆಹತಾ(1957) ಮತ್ತು ಅಶೋಕ್ ಮೆಹತಾ(1977) ಸಮಿತಿಗಳು ಶಿಫಾರಸ್ಸು ಮಾಡಿದವು. 1971ರಲ್ಲಿ 'ಮಹಿಳಾ ಸ್ಥಾನಮಾನ ಅಧ್ಯಯನ ಸಮಿತಿ'ಯು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅಸಮರ್ಪಕ ಪ್ರಾತಿನಿಧ್ಯವಿದೆಯೆಂದು ತಿಳಿಸುತ್ತಾ ಮಹಿಳೆಯರ ಉತ್ತಮ ಪ್ರಾತಿನಿಧ್ಯಕ್ಕಾಗಿ ಪ್ರತ್ಯೇಕ ವಾರ್ಡ್‌ಗಳ ರಚನೆಗೆ ಶಿಫಾರಸ್ಸು ಮಾಡಿತು. ತಳಮಟ್ಟದ ಆಡಳಿತದಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ಸಿಗಬೇಕೆಂಬ ದೃಷ್ಟಿಯಿಂದ ರಾಜೀವ್‌ಗಾಂಧಿ ತೋರಿದ ಆಸಕ್ತಿಯ ಫಲವಾಗಿ ರಾಷ್ಟ್ರಮಟ್ಟದ ಚರ್ಚೆ ನಡೆಯಿತು. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿ ಕ್ರಮದಿಂದಲೇ ಮಹಿಳೆಗೆ ನಿರೀಕ್ಷಿತ ಮಟ್ಟದಲ್ಲಿ ಪ್ರಾತಿನಿಧ್ಯ ಪಡೆಯಲು ಸಾಧ್ಯವೆಂಬ ತೀರ್ಮಾನಕ್ಕೆ ಬರಲಾಯಿತು. ಇದಕ್ಕೆ ಪೂರಕವಾಗಿ 1988ರಲ್ಲಿ 'ರಾಷ್ಟ್ರೀಯ ಮಹಿಳಾ ದೃಷ್ಟಿಕೋನ ಯೋಜನೆಯು' ಪಂಚಾಯಿತಿಯ ಸದಸ್ಯತ್ವ ಮತ್ತು ಹುದ್ದೆಗಳಲ್ಲಿ ಶೇ.30ರಷ್ಟು ಮಹಿಳಾ ಮೀಸಲಾತಿ ನೀಡಬೇಕೆಂದು ಶಿಫಾರಸ್ಸು ಮಾಡಿತು. ಇದಕ್ಕೂ ಮುಂಚೆ ಕರ್ನಾಟಕ ಸರ್ಕಾರವು ಜಾರಿಗೆ ತಂದ 1983ರ ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆ ಅನ್ವಯ, ರಚನೆಗೊಂಡ ಜಿಲ್ಲಾಪರಿಷತ್, ತಾಲೂಕುಪಂಚಾಯಿತ್ ಸಮಿತಿ ಮತ್ತು ಮಂಡಲಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಶೇ.25ರಷ್ಟು ಮೀಸಲಾತಿ ನೀಡಿತು. ಇದು ಪಂಚಾಯಿತಿಯಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಉತ್ತಮ ತಳಪಾಯ ಹಾಕಿಕೊಟ್ಟಿತು. ಆದರೂ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ನಿಯಮಿತವಾಗಿ ಕಾಲಕಾಲಕ್ಕೆ ಚುನಾವಣೆಗಳು ನಡೆಯಲಿಲ್ಲ. ಪರಿಶಿಷ್ಟ ಮತ್ತು ದುರ್ಬಲ ವರ್ಗಗಳ ಮಹಿಳೆಯರಿಗೆ ಸಮರ್ಪಕ ಪ್ರಾತಿನಿಧ್ಯ ಕಂಡುಬರಲಿಲ್ಲ. ಈ ಕಾರಣದಿಂದಲೇ 1992ರಲ್ಲಿ ಸಂವಿಧಾನದ 73ನೇ ತಿದ್ದುಪಡಿ ಮಹಿಳೆಯರಿಗೆ ಯೋಗ್ಯ ಪ್ರಾತಿನಿಧ್ಯ ನೀಡುವ ಉದ್ದೇಶವನ್ನು ಹೊತ್ತು ಜಾರಿಗೆ ಬಂದಿತು.[1] ಜನತಂತ್ರ ವಿಕೇಂದ್ರೀಕರಣದ ಆಶಯಕ್ಕೆ ಅನುಗುಣವಾಗಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸಂಘಟಿಸುವ ದೃಷ್ಟಿಯಿಂದ 1992ರಲ್ಲಿ ಸಂವಿಧಾನದಕ್ಕೆ 73ನೇ ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿಗೆ ಅನುಗುಣವಾಗಿ ಜಾರಿಗೆ ತಂದ 1993ರ ಪಂಚಾಯತ್‌ರಾಜ್ ಅಧಿನಿಯಮವನ್ನು ಒಕ್ಕೂಟ(ರಾಜ್ಯ) ಸರ್ಕಾರಗಳು ಯಥಾವತ್ತಾಗಿ ಜಾರಿಗೆ ತಂದವು. ಈ ಅಧಿನಿಯಮವು ಗ್ರಾಮೀಣ ಮಹಿಳೆಯರಿಗೆ ಪ್ರಾತಿನಿಧ್ಯದ ಖಾತರಿ ನೀಡಿದೆ.[2] ಗ್ರಾಮೀಣ ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಮತ್ತು ಸಬಲೀಕರಣದ ಉದ್ದೇಶವನ್ನು ಒಳಗೊಂಡಿದೆ. ಈ ತಿದ್ದುಪಡಿಯು ಬಹುಮುಖ್ಯವಾದ ಎರಡು ಉದ್ದೇಶಗಳನ್ನು ಹೊಂದಿದೆ. ಒಂದು, ತಳಮಟ್ಟದ ಆಡಳಿತದಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಕಡಿಮೆ ಇಲ್ಲದಷ್ಟು ಮತ್ತು ಆಯಾ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡುವುದು. ಎರಡು, ಸ್ಥಳೀಯ ಸಂಸ್ಥೆಗಳ ಪ್ರಾತಿನಿಧ್ಯ ಮತ್ತು ಆಡಳಿತಕ್ಕೆ ಸಂಬಂಧಿಸಿದ ಪ್ರಕ್ರಿಯೆಯಲ್ಲಿ ಮಹಿಳೆಯರು

ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳಬೇಕು ಹಾಗೂ ಸಕ್ರಿಯವಾಗಿ ಭಾಗವಹಿಸಬೇಕು. 73ನೇ ತಿದ್ದುಪಡಿಯ ಈ ಎರಡು ಉದ್ದೇಶಗಳು ಮಹಿಳಾ ಸಬಲೀಕರಣದ ಅಸ್ತ್ರವಾಗಿ ನಮ್ಮ ಮುಂದೆ ಇವೆ. ತಳಮಟ್ಟದ ಆಡಳಿತದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಿದರೆ ಅವರು ಸಬಲೀಕರಣಗೊಳ್ಳುವರು ಎಂಬ ಸರಳ ನಂಬಿಕೆ ಈ ಮೀಸಲಾತಿ ನೀತಿಯ ಹಿಂದೆ ಇದೆ. ಆದರೆ ಗ್ರಾಮೀಣ ಮಹಿಳೆಯರ ಸಂಪೂರ್ಣ ಸಬಲೀಕರಣ ಕಂಡುಬರಲಿಲ್ಲ. ಪಂಚಾಯತ್‌ರಾಜ್ ಸಂಸ್ಥೆಗಳ ಸ್ಥಾನ ಮತ್ತು ಹುದ್ದೆಗಳಲ್ಲಿ ಶೇ.33.33 ಕಡಿಮೆ ಇಲ್ಲದಷ್ಟು ಮಹಿಳೆಯರು ಜನಪ್ರತಿನಿಧಿಗಳಾಗಿ ನೀತಿ ರೂಪಿಸುವ ಮತ್ತು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಗ್ರಾಮೀಣ ಮಹಿಳೆಯರು ತಮಗೆ ದೊರೆತ ಅಧಿಕಾರ ಮತ್ತು ಅವಕಾಶವನ್ನು ಸ್ವತಂತ್ರವಾಗಿ ಚಲಾಯಿಸಲು ಸಾಧ್ಯವಾಗುತ್ತಿಲ್ಲ. ದೈನಂದಿನ ಬದುಕಿನಲ್ಲಿ ಜಮೀನ್ದಾರರ, ಮೇಲ್ವರ್ಗದವರ ಮತ್ತು ಪುರುಷರ ಮರ್ಜಿಯಲ್ಲಿ ಬದುಕಬೇಕಾದ ದಲಿತ ಹಾಗೂ ಹಿಂದುಳಿದ ವರ್ಗಗಳ ಮಹಿಳೆಯರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ, ದುಸ್ಥಿತಿಯಲ್ಲಿದ್ದಾರೆ.[3] ಆದ್ದರಿಂದ ಸಮಾಜದ ಅಂಚಿನಲ್ಲಿರುವ ಗ್ರಾಮೀಣ ಮಹಿಳೆಯರ ಬದುಕು ವಿಶೇಷವಾಗಿ ಬದಲಾಗಲಿಲ್ಲ. ಆದರೂ ಮಹಿಳಾ ಸಬಲೀಕರಣಕ್ಕೆ ಬದ್ಧವಾಗಿರುವ ಕೇಂದ್ರ ಸರ್ಕಾರವು(ಆಗಸ್ಟ್ 27, 2009ರಂದು ಕ್ಯಾಬಿನೆಟ್ ತೆಗೆದುಕೊಂಡ ನಿರ್ಧಾರ) ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂಬ ಉದ್ದೇಶದಿಂದ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಶೇ.50ರಷ್ಟು ಪ್ರಾತಿನಿಧ್ಯ ನೀಡಿದೆ.[4] ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯ ನೀಡಿರುವುದು ಕ್ರಾಂತಿಕಾರಿ ಬೆಳವಣಿಗೆಯಾಗಿದೆ.

ಮೀಸಲಾತಿ ವ್ಯವಸ್ಥೆ ಮಹಿಳೆಯರ ಸಬಲೀಕರಣಕ್ಕೆ ಪೂರಕವಾಗಿ ಕಂಡುಬರುತ್ತಿದೆ. ಆದರೆ ಈ ಮೀಸಲಾತಿ ವ್ಯವಸ್ಥೆ ಕೇವಲ ಅವರ ಸದಸ್ಯತ್ವಕ್ಕಷ್ಟೇ ಸಿಕ್ಕಿತೇ ಹೊರತು ಪದಾಧಿಕಾರತ್ವದಲ್ಲಿ ಸಮರ್ಪಕವಾಗಿ ಸಿಕ್ಕಿಲ್ಲ[5] ಎಂಬ ಅಭಿಪ್ರಾಯಗಳು ಕೇಳಿಬರುತ್ತಿವೆ. ಪಂಚಾಯಿತಿಯಲ್ಲಿನ ಮಹಿಳಾ ಪ್ರಾತಿನಿಧ್ಯವೊಂದೇ ಮಹಿಳಾ ಸಬಲೀಕರಣವಾಗಿ ಕಂಡುಬರುವುದಿಲ್ಲ. ಮಹಿಳಾ ಪ್ರಾತಿನಿಧ್ಯವು ಮಹಿಳಾ ಸಬಲೀಕರಣವಾಗಿ ಕಂಡುಬರಬೇಕಾದರೆ, ಪಂಚಾಯಿತಿಯ ಪ್ರಾತಿನಿಧ್ಯ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಪುರುಷ ಮಧ್ಯಸ್ಥಿಕೆಯಿಲ್ಲದೇ ಮಹಿಳೆಯರು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಬೇಕು. ಮಹಿಳೆ ತನ್ನ ವೈಯಕ್ತಿಕ ಮತ್ತು ಸಮುದಾಯದ ಜೀವನಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳಲ್ಲಿ ಸ್ವನಿರ್ಧಾರಕ್ಕೆ ಬದ್ಧವಾಗಿ ನಿರ್ಧಾರ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದೇ ಮಹಿಳಾ ಸಬಲೀಕರಣ.[6] ಪಂಚಾಯಿತಿಯ ಪ್ರಮುಖ ಪ್ರಾತಿನಿಧ್ಯದ ಸಂಗತಿಗಳಾದ ಮತದಾನ, ಉಮೇದುವಾರಿಕೆ, ಸಭೆಗಳಲ್ಲಿ ಮಹಿಳೆಗೆ ಸ್ವಾತಂತ್ರ್ಯ ಮತ್ತು ಸ್ವನಿರ್ಧಾರ ಇಲ್ಲವಾಗಿದೆ. ವಿಶೇಷವಾಗಿ ಉಮೇದುವಾರಿಕೆ ನಿರ್ಧಾರದಲ್ಲಿ ಮತ್ತು ಮತದಾರರಿಂದ ಮತ ಪಡೆಯುವಲ್ಲಿ ಮಹಿಳೆ ಸಂಪೂರ್ಣ ಗೌಣವಾಗಿದ್ದಾಳೆ. ಪಂಚಾಯಿತಿಗೆ ಚುನಾಯಿತಗೊಂಡ ಮಹಿಳೆಯರ ಪ್ರಾತಿನಿಧ್ಯವು ನಾಮಮಾತ್ರವಾಗಿ ಕಂಡುಬರುತ್ತದೆ. ಇವರ ಪರವಾಗಿ ಕುಟುಂಬದ ಪುರುಷ ಸದಸ್ಯರು ಪಂಚಾಯಿತಿಯ ಆಡಳಿತಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುತ್ತಾರೆ ಮತ್ತು ಅಧಿಕಾರ ಚಲಾಯಿಸುತ್ತಾರೆ. ಪಂಚಾಯಿತಿಯ ಪ್ರಾತಿನಿಧ್ಯವನ್ನು ಮಹಿಳೆ ಸ್ವನಿರ್ಧಾರದಿಂದ

ಪಡೆದಾಗ ಅಥವಾ ಪಡೆಯುವ ಅರ್ಹತೆಯನ್ನು ಹೊಂದಿದಾಗ ಮಾತ್ರ ಮಹಿಳಾ ಸಬಲೀಕರಣ ಸಾಧ್ಯವೆಂದು ಈ ಅಧ್ಯಯನದಲ್ಲಿ ಸಿದ್ಧಾಂತವನ್ನು ರೂಪಿಸಿಕೊಳ್ಳಲಾಗಿದೆ. ಹೀಗಾಗಿ, ಸಂವಿಧಾನದ 73ನೇ ತಿದ್ದುಪಡಿಯ ಲಾಭವು ಮಹಿಳಾ ಪ್ರಾತಿನಿಧ್ಯಕ್ಕಷ್ಟೇ ಸೀಮಿತವಾಯಿತೇ ಹೊರತು ಮಹಿಳಾ ಸಬಲೀಕರಣದ ಅಸ್ತ್ರವಾಗಿ ಕಂಡುಬರಲಿಲ್ಲ. ಆದ್ದರಿಂದ ಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಮೀಸಲಾತಿ ಒಂದು ಸಾಧನವೇ ಹೊರತು, ಅದುವೇ ಸಬಲೀಕರಣವಲ್ಲ. ಮೀಸಲಾತಿ ಕೊಡುಗೆ ಆಗಬಾರದು, ಅದು ಹಕ್ಕಾಗಬೇಕು. ಪಂಚಾಯಿತಿಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವ ಮತ್ತು ದಕ್ಕಿಸಿಕೊಳ್ಳುವ ಶಕ್ತಿ ಮಹಿಳೆಯರಲ್ಲಿ ಬರಬೇಕು. ಹೀಗೆ ಆದಾಗ ಮಾತ್ರ ಮಹಿಳಾ ಪ್ರಾತಿನಿಧ್ಯದಿಂದ ಮಹಿಳಾ ಸಬಲೀಕರಣ ಸಾಧ್ಯ. ಆದರೆ ಇಂದು ಗ್ರಾಮಪಂಚಾಯಿತಿಗಳು ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸಿ, ಅವರ ಸಬಲೀಕರಣಕ್ಕೆ ಸಂಬಂಧಿಸಿದಂತೆ ಪರಿಣಾಮಕಾರಿ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಪ್ರಯತ್ನ ಮಾಡುತ್ತಿವೆ. ಗ್ರಾಮೀಣ ಪರಿಸರದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನೀತಿಗಳನ್ನು ಸುಧಾರಣೆ ಮಾಡುವ ಮತ್ತು ಲಿಂಗಸಮಾನತೆಯನ್ನು ಪ್ರತಿಪಾದಿಸುವ ಆಧುನಿಕ ಪಂಚಾಯಿತಿಗಳಾಗಿ ಕಾರ್ಯ ಮಾಡುತ್ತಿವೆ. ಒಟ್ಟಾರೆಯಾಗಿ, ಗ್ರಾಮಪಂಚಾಯಿತಿಗಳು ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣಕ್ಕೆ ಉತ್ತಮ ಸಾಧನಗಳಾಗಿವೆ.

1.2 ಅಧ್ಯಯನದ ಸಮಸ್ಯೀಕರಣ

1. ಗ್ರಾಮಪಂಚಾಯಿತಿಯಲ್ಲಿ ಮಹಿಳೆಯ ಪ್ರಾತಿನಿಧ್ಯಕ್ಕಾಗಿ ನಿರೀಕ್ಷಿತ ಮಟ್ಟದಲ್ಲಿ ಮೀಸಲಾತಿ ನೀಡಲಾಗಿದೆ. ಆದರೆ ಈ ಮೀಸಲಾತಿ ನೀತಿಯು ಮಹಿಳಾ ಸಬಲೀಕರಣ ರೂಪದಲ್ಲಿ ಜಾರಿಗೆ ಬಂದಿದೆಯೆ?
2. ಪಂಚಾಯಿತಿಗಳಲ್ಲಿ ಮಹಿಳೆಯರು ಜನನಾಯಕರಾಗುವ ಬದಲು ಸಾಧನಗಳಾಗಿ ಕಂಡುಬರುತಿದ್ದಾರೆ. ಇದಕ್ಕೆ ಪುರುಷಪ್ರಧಾನ ಲಕ್ಷಣಗಳು ಪ್ರಮುಖ ಕಾರಣಗಳಾಗಿರಬಹುದೆ?
3. ಪಂಚಾಯಿತಿಯ ಪ್ರಾತಿನಿಧ್ಯ ಮತ್ತು ಆಡಳಿತದಲ್ಲಿ ಸಾಕಷ್ಟು ಲಿಂಗಮಧ್ಯಸ್ಥಿಕೆ/ಪುರುಷ ಯಜಮಾನಿಕೆ ಇರುವುದು ಮಹಿಳಾ ಸಬಲೀಕರಣಕ್ಕೆ ಪ್ರಧಾನ ಸಮಸ್ಯೆಯಾಗಿರಬಹುದೇ?
4. ದುಡಿಮೆ ಮತ್ತು ಸಂಪತ್ತಿನ ಒಡೆತನದಲ್ಲಿ ಮಹಿಳಾ ಸಹಭಾಗಿತ್ವ ಗೌಣವಾಗಿರುವುದರಿಂದ ಪಂಚಾಯಿತಿಯ ಪ್ರಾತಿನಿಧ್ಯ ಮತ್ತು ಆಡಳಿತದ ವಿಷಯದಲ್ಲಿ ಮಹಿಳಾ ನಿರ್ಧಾರ ಗೌಣವಾಗಿರಬಹುದೆ?
5. ಸಾಮಾಜಿಕ ಮತ್ತು ಆರ್ಥಿಕ ಪ್ರಾತಿನಿಧ್ಯ ನೀಡುವ ಮೊದಲೇ ರಾಜಕೀಯ ಪ್ರಾತಿನಿಧ್ಯ ನೀಡಿರುವುದು ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಹಿನ್ನಡೆಯಾಗುತ್ತಿದೆಯೇ?
6. ಗ್ರಾಮೀಣ ಮಹಿಳೆಯರ ವಯಸ್ಸು, ಜಾತಿ, ಶಿಕ್ಷಣ, ಆದಾಯಗಳು ಅವರ ಪ್ರಾತಿನಿಧ್ಯ ಮತ್ತು ಸ್ವನಿರ್ಧಾರಕ್ಕೆ ಅಡ್ಡಿಯಾಗಿರಬಹುದೇ?

1.3 ಅಧ್ಯಯನದ ಉದ್ದೇಶ

ಸಂವಿದಾನದ 73ನೇ ತಿದ್ದುಪಡಿಗೆ ಅನುನುಣವಾಗಿ ರಚನೆಯಾಗುವ ಗ್ರಾಮಪಂಚಾಯಿತಿಗಳಿಗೆ ಮುಖ್ಯವಾಗಿ ಎರಡು ಉದ್ದೇಶಗಳಿವೆ. ಒಂದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳು ಸೇರಿದಂತೆ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ನೀಡುವುದು. ಎರಡು, ಈ ಉದ್ದೇಶಿತ

ವರ್ಗ ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸುವುದು. ಮೊದಲನೇ ಉದ್ದೇಶ ಈಡೇರಿದರೆ ಎರಡನೇ ಉದ್ದೇಶ ಈಡೇರುತ್ತದೆ ಎನ್ನುವ ನೀತಿ ಇದರ ಹಿಂದೆ ಇದೆ. ಇಂದು ಗ್ರಾಮೀಣ ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯ ಸಿಕ್ಕಿದೆ. ಆದರೆ ಸಬಲೀಕರಣಕ್ಕೆ ಮುಖ್ಯವಾಗಿ ಅವರಲ್ಲಿ ಸ್ವನಿರ್ಧಾರದ ಕೊರತೆ ಕಂಡುಬರುತ್ತಿದೆ. ಮಹಿಳೆಯರು ಸ್ವಾವಲಂಬನೆ ಮತ್ತು ಸ್ವನಿರ್ಧಾರವನ್ನು ಹೊಂದಿದರೆ ಅಥವಾ ಹೊಂದಲು ಶಕ್ತರಾದರೆ ಅವರು ಸಬಲೀಕರಣಗೊಳ್ಳುವರು ಎಂಬ ನಿಯಮವಿದೆ. ಈ ನಿಯಮಕ್ಕೆ ಬದ್ಧವಾದ ಗ್ರಾಮಪಂಚಾಯಿತಿಯು ಪ್ರಾಥಮಿಕವಾಗಿ ಮಹಿಳೆಯರಿಗೆ ಪ್ರಾತಿನಿಧ್ಯವನ್ನು ನೀಡುವಲ್ಲಿ ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಿದೆ. ಆದರೆ ಪ್ರಾತಿನಿಧ್ಯದ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಮಹಿಳೆಯರ ಸ್ವನಿರ್ಧಾರದ ಪ್ರಮಾಣವನ್ನು ವಿಶ್ಲೇಷಿಸುವುದೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಗ್ರಾಮೀಣ ಮಹಿಳೆಯರ ಸಬಲೀಕರಣವು ಪಂಚಾಯಿತಿಯ ಪ್ರಾತಿನಿಧ್ಯ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಅವರು ತೆಗೆದುಕೊಳ್ಳುವ ಸ್ವನಿರ್ಧಾರದ ಪ್ರಮಾಣದ ಮೇಲೆ ಅವಲಂಬಿಸಿರುತ್ತದೆ. ಇದನ್ನು ಮಹಿಳೆಯರ ಮತ್ತು ಪುರುಷರ ಸ್ವನಿರ್ಧಾರಗಳನ್ನು ಪರಸ್ಪರ ಹೋಲಿಸಿ ಮಹಿಳಾ ಸಬಲೀಕರಣವನ್ನು ವಿಶ್ಲೇಷಣೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನದ ಉದ್ದೇಶಗಳನ್ನು ಈ ಕೆಳಗಿನಂತೆ ನಿರ್ವಚಿಸಿಕೊಳ್ಳಲಾಗಿದೆ.

1. ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳೆಯರು ಅವರ ಸ್ವನಿರ್ಧಾರಕ್ಕೆ ಬದ್ಧರಾಗಿ ಮತ ನೀಡುವರೇ ಎಂದು ಪರೀಕ್ಷಿಸುವುದು.
2. ಗ್ರಾಮಪಂಚಾಯಿತಿ ಚುನಾವಣಾ ಉಮೇದುವಾರಿಕೆಯನ್ನು ಪಡೆಯುವಲ್ಲಿ ಮಹಿಳೆಯರ ಸ್ವನಿರ್ಧಾರವನ್ನು ನೋಡುವುದು.
3. ಉಮೇದುವಾರಿಕೆಯಲ್ಲಿ ಮಹಿಳಾಸ್ಪರ್ಧೆ ಮತ್ತು ಮಹಿಳಾ ಅಭ್ಯರ್ಥಿಗಳು ಮತದಾರರಿಂದ ಪಡೆದ ಮತಗಳ ಆಧಾರ ಮೇಲೆ ಮಹಿಳಾ ಸಬಲೀಕರಣವನ್ನು ವಿಶ್ಲೇಷಿಸುವುದು.
4. ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳಾ ಮತದಾರರ ಸಂಖ್ಯೆ ಮತ್ತು ನಿರ್ಧಾರ ಆಧಾರದ ಮೇರೆಗೆ ಮಹಿಳಾ ಸಬಲೀಕರಣವನ್ನು ಮಾಪನ ಮಾಡುವುದು.
5. ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣಕ್ಕೆ ಇರುವ ಸಂಬಂಧವನ್ನು ಚರ್ಚಿಸುವುದು ಮತ್ತು ಸುಧಾರಣೆಗೆ ಅಗತ್ಯವಿರುವ ಕ್ರಮಗಳನ್ನು ಸೂಚಿಸುವುದು.

1.4 ಅಧ್ಯಯನದ ವಿಧಾನ

ಉದ್ದೇಶಿತ ಅಧ್ಯಯನವು ಪ್ರಾಯೋಗಿಕ(ಎಂಪಿರಿಕಲ್) ಅಧ್ಯಯನವಾಗಿದೆ. ಅಧ್ಯಯನದ ಉದ್ದೇಶಗಳನ್ನು ಪರೀಕ್ಷಿಸಲು ಪ್ರಾಥಮಿಕ ಮತ್ತು ಆನುಷಂಗಿಕ ಅಂಕಿ-ಅಂಶಗಳನ್ನು ಹಾಗೂ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಒಂದು, ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಗ್ರಾಮಪಂಚಾಯಿತಿಯಲ್ಲಿ ವಾರ್ಡ್‌ಗಳ ರಚನೆ, ಮೀಸಲಾತಿ, ಉಮೇದುವಾರಿಕೆ, ಮತದಾನ, ಗ್ರಾಮಸಭೆ ಇತ್ಯಾದಿ ಮುಖ್ಯ ವಿಷಯಗಳು. ಇವುಗಳಿಗೆ ಸಂಬಂಧಿಸಿದಂತೆ ಪಂಚಾಯಿತಿ ಕಾಯಿದೆ ಮತ್ತು ಚುನಾವಣಾ ನಿಯಮಗಳು ತುಂಬಾ ಸ್ಪಷ್ಟವಾಗಿವೆ. ಎರಡು, ಗ್ರಾಮಪಂಚಾಯಿತಿಯ ಆಡಳಿತದಲ್ಲಿ ನೇರವಾಗಿ ಭಾಗವಹಿಸುವ

ಚುನಾಯಿತ ಪ್ರತಿನಿಧಿಗಳ ಹಾಗೂ ಗ್ರಾಮಸ್ಥರಿಂದ ಪಡೆದ ಮಾಹಿತಿಗಳು. ಈ ಅಂಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸ್ಥೂಲವಾಗಿ ಈ ಎರಡು ಮೂಲಗಳಿಂದ ಪಡೆಯಲಾಗಿದೆ.

ಒಂದು, ಆನುಷಂಗಿಕ ಮಾಹಿತಿ. ಅಧ್ಯಯನದಲ್ಲಿ ಬಳಸಿಕೊಂಡ ಆನುಷಂಗಿಕ ಮಾಹಿತಿಗಳ ಮೂಲಗಳು ಇಂತಿವೆ. ಒಂದು, ಜಿಲ್ಲಾಪಂಚಾಯಿತಿ, ತಾಲೂಕುಪಂಚಾಯಿತಿ ಮತ್ತು ಗ್ರಾಮಪಂಚಾಯಿತಿಗಳ ದಾಖಲೆಗಳು. ಈ ದಾಖಲೆಗಳಿಂದ ಪ್ರಮುಖವಾಗಿ ಸದಸ್ಯತ್ವ ಮತ್ತು ಇತ್ಯಾದಿ ಅಂಕಿ-ಅಂಶಗಳ ಮಾಹಿತಿಗಳನ್ನು ಆಯಾ ಪಂಚಾಯಿತಿಗಳಿಂದ ಪಡೆಯಲಾಗಿದೆ. ಎರಡು, ಚುನಾವಣಾ ದಾಖಲೆಗಳು. ಮೀಸಲಾತಿ, ಚುನಾವಣಾ ಉಮೇದುವಾರಿಕೆ, ಮತದಾನದ ಅಂಕಿ ಅಂಶಗಳನ್ನು ಚುನಾವಣಾ ವಿಭಾಗದಿಂದ ಪಡೆಯಲಾಗಿದೆ. ಮೂರು, ಸೆನ್ಸಸ್ ಮತ್ತು ಸರ್ಕಾರಿ ದಾಖಲೆಗಳು. ಗ್ರಾಮಗಳ ಜನಸಂಖ್ಯೆ, ಸಾಕ್ಷರತೆ, ವಿವಿಧ ವಲಯಗಳಲ್ಲಿ ತೊಡಗಿಸಿಕೊಂಡಿರುವ ದುಡಿಯುವ ವರ್ಗಗಳ ಸಂಖ್ಯೆ ಇತ್ಯಾದಿಗಳನ್ನು ಈ ಮೂಲಗಳಿಂದ ಪಡೆಯಲಾಗಿದೆ. ನಾಲ್ಕು, ಪ್ರಕಟಿತ ಮತ್ತು ಅಪ್ರಕಟಿತ ಸಂಶೋಧನಾ ಪ್ರಬಂಧಗಳು, ಲೇಖನಗಳು ಮತ್ತು ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಬರಹಗಳು. ಗ್ರಾಮೀಣ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದುಕಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಶೋಧನಾ ಪ್ರಬಂಧಗಳು ಮತ್ತು ಲೇಖನಗಳಿಂದ ಪಡೆಯಲಾಗಿದೆ. ದೇಶದ ಇತರ ಭಾಗಗಳಲ್ಲಿನ ಪಂಚಾಯಿತಿಗಳ ಕಾರ್ಯಕ್ಷಮತೆ ಮತ್ತು ಮಹಿಳಾ ಪ್ರಾತಿನಿಧ್ಯ ಹಾಗೂ ಸಬಲೀಕರಣ ಕುರಿತ ಮಾಹಿತಿಯನ್ನು ಲೇಖನ ಮತ್ತು ಪುಸ್ತಕಗಳಿಂದ ಪಡೆಯಲಾಗಿದೆ.

ಎರಡು, ಪ್ರಾಥಮಿಕ ಮಾಹಿತಿ. ಅಧ್ಯಯನಕ್ಕೆ ಅವಶ್ಯವಾದ ಪ್ರಾಥಮಿಕ ಮಾಹಿತಿಯನ್ನು ಚುನಾಯಿತ ಪ್ರತಿನಿಧಿಗಳಿಂದ ಮತ್ತು ಆಯ್ದ ಗ್ರಾಮಸ್ಥರಿಂದ ಪ್ರಶ್ನಾವಳಿಗಳ ಮೂಲಕ ಪಡೆದಿದೆ. ಪ್ರಾತಿನಿಧ್ಯಕ್ಕೆ ಅಗತ್ಯವಾಗಿ ಕಂಡುಬರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿನ್ನೆಲೆ ಹಾಗೂ ಮತದಾನ, ಉಮೇದುವಾರಿಕೆ, ಗ್ರಾಮಸಭೆ ಇತ್ಯಾದಿ ಪಂಚಾಯಿತಿ ಪ್ರಕ್ರಿಯೆಗಳಲ್ಲಿ ವಿಶೇಷವಾಗಿ ಮಹಿಳೆಯರ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ(ಸ್ವನಿರ್ಧಾರ) ಕುರಿತು ಪ್ರಶ್ನಾವಳಿಯನ್ನು ತಯಾರಿಸಿದೆ. ಸಂದರ್ಶನ ಸೂಚಿಯ ಅನ್ವಯ ಪ್ರಶ್ನೆಗಳನ್ನು ಕೇಳಲಾಗಿದೆ. ಮಾಹಿತಿದಾರರು ನೀಡುವ ಉತ್ತರವನ್ನು ಅವರಿಂದ ಅಥವಾ ಅವರ ಸಮ್ಮುಖದಲ್ಲೇ ತುಂಬಿದೆ. ಚುನಾಯಿತ ಪ್ರತಿನಿಧಿಗಳನ್ನು ಮತ್ತು ಜನತೆಯನ್ನು ನೇರವಾಗಿ ಸಂದರ್ಶಿಸುವುದರ ಮೂಲಕ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ, ವಿಶ್ಲೇಷಣೆ ಮಾಡಿದೆ.

1.5 ಅಧ್ಯಯನದ ವ್ಯಾಪ್ತಿ

(ಪ್ರಸ್ತುತ ಅಧ್ಯಯನವು ತುಲನಾತ್ಮಕ ಅಧ್ಯಯನವಾಗಿದೆ. ಕರ್ನಾಟಕದಲ್ಲಿ ಹಿಂದುಳಿದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಿಗೆ ಹಾಗೂ ರಾಜ್ಯದ ಮುಂದುವರೆದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಿಗೆ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ) ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಈ ನಾಲ್ಕು ಗ್ರಾಮಪಂಚಾಯಿತಿಗಳು ಐತಿಹಾಸಿಕ ಹಿನ್ನೆಲೆಯುಳ್ಳ ಪ್ರದೇಶದ ವ್ಯಾಪ್ತಿಯೊಳಗೆ ಬರುತ್ತವೆ. ಮುಖ್ಯವಾಗಿ ಕೃಷಿ ಸಮುದಾಯಗಳಿಂದ ಕೂಡಿದ ಪಂಚಾಯಿತಿಗಳಾಗಿವೆ.

see page 10

ತಾಲೂಕುಕೇಂದ್ರಕ್ಕೆ ಹೊಂದಿಕೊಂಡಿರುವ, ಶಿಕ್ಷಣ, ಆರೋಗ್ಯ, ಉದ್ಯೋಗ, ಸಾರಿಗೆ-ಸಂಪರ್ಕ, ನಗರ ಜೀವನ ಇತ್ಯಾದಿಗಳ ಪರಿಚಯವಿರುವ ಮತ್ತು ಆಧುನಿಕ ಜೀವನವನ್ನು ಮೈಗೂಡಿಸಿಕೊಂಡಿರುವ ಪಂಚಾಯಿತಿಗಳಾಗಿವೆ. ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಈ ನಾಲ್ಕು ಗ್ರಾಮಪಂಚಾಯಿತಿಗಳು ಈ ಕೆಲವು ಅಂಶಗಳನ್ನು ಹೊರತು ಪಡಿಸಿದರೆ ಬೇರೆ ಬೇರೆ ಅಂಶಗಳಿಂದ ಭಿನ್ನವಾಗಿವೆ. ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ ಕುರಿತು ಸ್ಪಷ್ಟವಾದ ತುಲನಾತ್ಮಕವಾದ ಅಧ್ಯಯನವಾಗಿದೆ.

ಬಳ್ಳಾರಿ ಜಿಲ್ಲೆಯ ಇತರೆ ತಾಲೂಕುಗಳಿಗೆ ಹೋಲಿಸಿದರೆ ಹೊಸಪೇಟೆ ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಮತ್ತು ಅಭಿವೃದ್ಧಿ ಪಥದದಲ್ಲಿರುವ ತಾಲೂಕಾಗಿದೆ. ಇದು ಹೆಚ್ಚು ನೀರಾವರಿ ಕೃಷಿ ಪ್ರದೇಶ, ಗಣಿಗಾರಿಕೆ ಮತ್ತು ಕಾರ್ಖಾನೆ, ಸಾರಿಗೆ-ಸಂಪರ್ಕ ಮತ್ತು ಇತ್ಯಾದಿ ಸೌಲಭ್ಯಗಳನ್ನು ಹೊಂದಿರುವ ತಾಲೂಕಾಗಿದೆ.[7] ಹೊಸಪೇಟೆ ತಾಲೂಕು 23 ಗ್ರಾಮಪಂಚಾಯಿತಿಗಳನ್ನು ಹೊಂದಿದೆ. ತಾಲೂಕು ಕೇಂದ್ರಕ್ಕೆ ಹೊಂದಿಕೊಂಡಿರುವ, ಫಲವತ್ತಾದ ನೀರಾವರಿ ಕೃಷಿಪ್ರದೇಶವನ್ನು ಹೊಂದಿರುವ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದೆ. 2001ರ ಜನಗಣತಿ ಪ್ರಕಾರ, ಹೊಸೂರು ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬರುವ ನಾಲ್ಕು ಗ್ರಾಮಗಳ ಜನಸಂಖ್ಯೆಗೆ ಅನುಗುಣವಾಗಿ 10 ಸದಸ್ಯರು ಹಾಗೂ ನಾಗೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬರುವ ಆರು ಗ್ರಾಮಗಳ ಜನಸಂಖ್ಯೆಗೆ ಅನುಗುಣವಾಗಿ 15 ಸದಸ್ಯರು ಚುನಾಯಿತರಾಗಿದ್ದಾರೆ. ಈ ಎರಡು ಗ್ರಾಮಪಂಚಾಯಿತಿಗಳಲ್ಲಿ ಪರಿಶಿಷ್ಟರು ಬಹುಸಂಖ್ಯಾತರಾಗಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಇತರೆ ತಾಲೂಕುಗಳಿಗೆ ಹೋಲಿಸದರೆ ಸಿದ್ದಾಪುರ ಅತ್ಯಂತ ಕಡಿಮೆ ಸೌಲಭಗಳನ್ನು ಹೊಂದಿರುವ ಒಂದು ಹಿಂದುಳಿದ ತಾಲೂಕಾಗಿದೆ. ಇದು ನಿತ್ಯಹರಿದ್ವರ್ಣ ಕಾಡನ್ನು ಹೊಂದಿದ ಮತ್ತು ಹೆಚ್ಚು ಮಳೆ ಬೀಳುವ ಮಲೆನಾಡು ಪ್ರದೇಶವಾಗಿದೆ. ಸಂಪೂರ್ಣ ಮಳೆ ಆಶ್ರಿತ ಕೃಷಿ ಪ್ರದೇಶವನ್ನು ಹೊಂದಿದ, ಕಡಿಮೆ ಪ್ರಮಾಣದಲ್ಲಿ ಸಾರಿಗೆ-ಸಂಪರ್ಕ, ಆರೋಗ್ಯ ಇತ್ಯಾದಿ ಸೌಲಭ್ಯಗಳನ್ನು ಹೊಂದಿರುವ ತಾಲೂಕಾಗಿದೆ.[8] ಸಿದ್ದಾಪುರ ತಾಲೂಕಿನಲ್ಲಿ 21 ಗ್ರಾಮಪಂಚಾಯಿತಿಗಳಿವೆ. ತಾಲೂಕು ಕೇಂದ್ರಕ್ಕೆ ಹೊಂದಿಕೊಂಡಿರುವ ಮತ್ತು ಮಳೆ ಆಶ್ರಿತ ಕೃಷಿಯನ್ನು ಅವಲಂಬಿಸಿರುವ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಾಗಿದೆ. 2001ರ ಜನಗಣತಿ ಪ್ರಕಾರ, ಬೇಡ್ಕಣಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬರುವ ನಾಲ್ಕು ಗ್ರಾಮಗಳ ಜನಸಂಖ್ಯೆಗೆ ಅನುಗುಣವಾಗಿ 11 ಸದಸ್ಯರು ಹಾಗೂ ಕೋಲಸಿರ್ಸಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬರುವ ಒಂಬತ್ತು ಗ್ರಾಮಗಳ ಜನಸಂಖ್ಯೆಗೆ ಅನುಗುಣವಾಗಿ 13 ಸದಸ್ಯರು ಅಯ್ಕೆಯಾಗಿದ್ದಾರೆ. ಈ ಎರಡು ಗ್ರಾಮಪಂಚಾಯಿತಿಯಲ್ಲಿ ಇತರೆ ಹಿಂದುಳಿದ ವರ್ಗದವರು ಬಹುಸಂಖ್ಯಾತರಾಗಿದ್ದಾರೆ.

ಎರಡು ವಿಭಿನ್ನ ತಾಲೂಕುಗಳ ಈ ನಾಲ್ಕು ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಿಗೆ ಚುನಾಯಿತರಾದ ಜನಪ್ರತಿಗಳು ಮತ್ತು ಚುನಾವಣೆಗೆ ಸ್ಪರ್ಧಿಸಿದ್ದ, ಉಮೇದುವಾರಿಕೆ ವಾಪಾಸು ಪಡೆದ ಅಭ್ಯರ್ಥಿಗಳನ್ನು ಹಾಗೂ ಅಗತ್ಯವಿದ್ದಲ್ಲಿ ಹಿಂದಿನ ಅವಧಿಗಳಲ್ಲಿ ಚುನಾಯಿತ

ಮತ್ತು ಸ್ಪರ್ಧಿಸಿದ್ದ ಲಭ್ಯ ರಾಜಕೀಯ ಹಾಗೂ ಅಂಗನವಾಡಿ/ಆಶಾ ಕಾರ್ಯಕರ್ತರನ್ನು ಪ್ರಶ್ನಾವಳಿ ಮೂಲಕ ಸಂದರ್ಶಿಸಿ, ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಣೆ ಮಾಡಿದೆ. ಈ ಎರಡು ಅವಧಿಗಳಿಗೆ ಚುನಾಯಿತರಾದ ಸದಸ್ಯರಲ್ಲಿ ಹೊಸಪೇಟೆ ತಾಲೂಕಿನ ಹೊಸೂರು ಗ್ರಾಮಪಂಚಾಯಿತಿಯಿಂದ 18 ಜನಪ್ರತಿಗಳು ಹಾಗೂ ನಾಗೇನಹಳ್ಳಿ ಗ್ರಾಮಪಂಚಾಯಿತಿಯಿಂದ 29 ಜನಪ್ರತಿಗಳು ಮತ್ತು ಸಿದ್ದಾಪುರ ತಾಲೂಕಿನ ಬೇಡ್ಕಣಿ ಗ್ರಾಮಪಂಚಾಯಿತಿಯಿಂದ 22 ಜನಪ್ರತಿಗಳು ಹಾಗೂ ಕೋಲಸಿರ್ಸಿ ಗ್ರಾಪಂಚಾಯಿತಿಯಿಂದ 26 ಜನಪ್ರತಿಗಳನ್ನು ಸಂದರ್ಶಿಸಿದೆ. ಒಟ್ಟಾರೆ ಈ ನಾಲ್ಕು ಗ್ರಾಮಪಂಚಾಯಿತಿಗಳಿಂದ 95 ಜನಪ್ರತಿನಿಧಿಗಳನ್ನು ಸಂದರ್ಶನ ಮಾಡಿದೆ. ಅಧ್ಯಯನದ ಗ್ರಾಮಪಂಚಾಯಿತಿಗಳ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮ/ವಾರ್ಡ್‌ಗಳು ಒಳಗೊಂಡಂತೆ ಪ್ರತಿಯೊಂದು ಗ್ರಾಮಪಂಚಾಯಿತಿಯಿಂದ 2005 ಮತ್ತು 2010ರ ಅವಧಿಗಳ ಚುನಾವಣೆಗೆ ಸ್ಪರ್ಧಿಸಿದ್ದ, ಉಮೇದುವಾರಿಕೆ ವಾಪಾಸು ಪಡೆದ ಅಭ್ಯರ್ಥಿಗಳನ್ನು ಹಾಗೂ ಅಗತ್ಯವಿದ್ದಲ್ಲಿ ಹಿಂದಿನ ಅವಧಿಗಳಲ್ಲಿ ಚುನಾಯಿತ ಮತ್ತು ಸ್ಪರ್ಧಿಸಿದ್ದ ಲಭ್ಯ ರಾಜಕೀಯ ಹಾಗೂ ಅಂಗನವಾಡಿ/ಆಶಾ ಕಾರ್ಯಕರ್ತರನ್ನು ಒಳಗೊಂಡಂತೆ 50 ಗ್ರಾಮಸ್ಥರನ್ನು ಸಂದರ್ಶನ ಮಾಡಿದೆ. ಇವರಲ್ಲಿ ಶೇ.50ರಷ್ಟು ಮಹಿಳೆಯರು ಇದ್ದಾರೆ. ಈ ನಾಲ್ಕು ಗ್ರಾಮಪಂಚಾಯಿತಿಗಳಿಂದ 200 ಗ್ರಾಮಸ್ಥರನ್ನು ಸಂದರ್ಶನ ಮಾಡಿದೆ. ಒಟ್ಟಾರೆಯಾಗಿ 295(95 ಜನಪ್ರತಿನಿಧಿಗಳು ಹಾಗೂ 200 ಗ್ರಾಮಸ್ಥರು) ಮಾಹಿತಿದಾರರಿಂದ ಪಂಚಾಯಿತಿ ಪ್ರಾತಿನಿಧ್ಯ ಮತ್ತು ನಿರ್ಧಾರದ ಪ್ರಕ್ರಿಯೆಗಳಲ್ಲಿ ಮಹಿಳಾ ಸ್ವನಿರ್ಧಾರದ ಮಾಹಿತಿಯನ್ನು ಪಡೆದು, ಮಹಿಳಾ ಸಬಲೀಕರಣವನ್ನು ವಿಶ್ಲೇಷಣೆ ಮಾಡಿದೆ.

ಈ ರೀತಿಯಲ್ಲಿ ಸಂಗ್ರಹಿಸಲಾದ ಮಾಹಿತಿಯನ್ನು ಅಂಕಿ ಅಂಶಗಳ ರೂಪದಲ್ಲಿ ಮತ್ತು ವಿಶ್ಲೇಷಣಾತ್ಮಕ ವಿಧಾನದಲ್ಲಿ ಬಳಸಿಕೊಳ್ಳಲಾಗಿದೆ. ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಮಾಪನ ಮಾಡಲು ಮತದಾನ, ಉಮೇದುವಾರಿಕೆ, ಪಡೆದ ಮತಗಳು ಮತ್ತು ಗ್ರಾಮಸಭೆಗಳನ್ನು ಸೂಚ್ಯಾಂಕಗಳನ್ನಾಗಿ ಬಳಸಿಕೊಂಡಿದೆ. ಚುನಾವಣೆಯಲ್ಲಿ ಮತದಾನ ಮಾಡುವಾಗ, ಉಮೇದುವಾರಿಕೆ ಪಡೆಯುವಾಗ ಮತ್ತು ಗ್ರಾಮಪಂಚಾಯಿತಿಯ ಆತಂರಿಕ ಮತ್ತು ಬಾಹ್ಯ ಸಭೆಗಳಲ್ಲಿ ಭಾಗವಹಿಸುವಾಗ ಗ್ರಾಮೀಣ ಮಹಿಳೆಯರು ಅವರ ಸ್ವನಿರ್ಧಾರದಂತೆ ಭಾಗವಹಿಸುವರೇ ಎಂದು 2005 ಮತ್ತು 2010ರ ಅವಧಿಯ ಚುನಾಯಿತ ಪ್ರತಿನಿಧಿಗಳಿಂದ ಮತ್ತು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳಿಂದ ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ಮಹಿಳೆಯರ ಸಬಲೀಕರಣವನ್ನು ಮಾಪನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಮಹಿಳಾ ಸಬಲೀಕರಣವು ಎರಡು ಅಂಶಗಳಿಂದ ನಿರ್ಧರಿಸಲ್ಪಡುತ್ತದೆ ಎಂದು ಗ್ರಹಿಸಲಾಗಿದೆ. ಒಂದು, ಮಹಿಳಾ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ಚುನಾವಣಾ ನಿಯಮಗಳು. ಈ ಅಂಶವು ಗ್ರಾಮಪಂಚಾಯಿತಿಯ ಚುನಾವಣಾಕ್ಷೇತ್ರ/ವಾರ್ಡ್‌ಗಳ ರಚನೆ, ಮೀಸಲಾತಿ ನೀತಿ, ಉಮೇದುವಾರಿಕೆ ಮತ್ತು ಮತದಾನ ಇತ್ಯಾದಿ ನಿಯಮಗಳು. ಎರಡು, ಮಹಿಳಾ ಪ್ರಾತಿನಿಧ್ಯದಲ್ಲಿ ಸ್ವನಿರ್ಧಾರ. ಈ ಅಂಶವು ಮತದಾನ, ಉಮೇದುವಾರಿಕೆ, ಚುನಾವಣೆಯಲ್ಲಿ ಪಡೆಯುವ ಮತಗಳು

ಮತ್ತು ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರ ಸ್ವನಿರ್ಧಾರದ ಪ್ರಮಾಣ. ಈ ಎರಡು ಅಂಶಗಳಿಂದ ಪರಸ್ಪರ ಹೋಲಿಕೆ ಮಾಡಿ ಮಹಿಳಾ ಸಬಲೀಕರಣಕ್ಕೆ ಸಂಬಂಧವಿದೆಯೇ ಎಂದು ನೋಡಲಾಗಿದೆ. ಇವೆರಡರ ನಡುವೆ ಸಂಬಂಧ ಕಂಡುಬಾರದಿದ್ದ ಸಂದರ್ಭದಲ್ಲಿ ಗ್ರಾಮೀಣ ಪರಿಸರದಲ್ಲಿ ಅತಿಯಾದ ಪುರುಷ ಮಧ್ಯಸ್ಥಿಕೆ ಹಾಗೂ ನಿಯಂತ್ರಣ ಕಂಡುಬರುತ್ತಿದೆಯೇ ಎಂದು ನೋಡಲಾಗಿದೆ.

1.6 ಅಧ್ಯಯನದ ಮಿತಿಗಳು

ಪ್ರಸ್ತುತ ಅಧ್ಯಯನಕ್ಕೆ ಕೆಲವು ಮಿತಿಗಳಿವೆ. ರಾಜ್ಯದಲ್ಲಿ 1993ರ ಪಂಚಾಯತ್‌ರಾಜ್ ಅಧಿನಿಯಮ ಜಾರಿಗೆ ಬಂದ ತರುವಾಯ 2005 ಮತ್ತು 2010ರಲ್ಲಿ ಕ್ರಮವಾಗಿ ರಚನೆಗೊಂಡ ಗ್ರಾಮಪಂಚಾಯಿತಿಯ 3ನೇ ಮತ್ತು 4ನೇ ಅವಧಿಗಳಿಗೆ ಅಧ್ಯಯನವನ್ನು ಸೀಮಿತಗೊಳಿಸಿದೆ. ಅಧ್ಯಯನದಲ್ಲಿ ಪ್ರಯೋಗಾತ್ಮಕ (ಎಂಪಿರಿಕಲ್) ಮತ್ತು ವೈಜ್ಞಾನಿಕ ಅಂಕಿ-ಅಂಶಗಳಿಗೆ ಹೆಚ್ಚು ಮಹತ್ವ ನೀಡಲಾಗಿದೆ. ಸಂಗ್ರಹಣೆ ಮಾಡಿದ ಅಂಕಿ-ಅಂಶಗಳನ್ನು ಮತ್ತು ಮಾಹಿತಿಯನ್ನು ವಿಶ್ಲೇಷಣೆ ಮಾಡುವುದರ ಮೂಲಕ ಫಲಿತಾಂಶಗಳನ್ನು ಕಂಡುಕೊಳ್ಳಲಾಗಿದೆ. ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಹೆಚ್ಚಾಗಿ ಅವಲಂಬಿಸಲಾಗಿದೆ. ಇಂತಹ ಸಂದರ್ಭದಲ್ಲಿ ಕೆಲವು ಅಂಕಿ-ಅಂಶಗಳ ಇತಿಮಿತಿ ಮತ್ತು ಕೊರತೆಗಳು ಎದುರಾಗಬಹುದು. ಗ್ರಾಮಪಂಚಾಯಿತಿಗಳಲ್ಲಿ ಲಭ್ಯವಿರುವ ಅಗತ್ಯ ಮಾಹಿತಿಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇದೊಂದು ತುಲನಾತ್ಮಕ ಅಧ್ಯಯನವಾಗಿದೆ. ಈ ಅಧ್ಯಯನವು ಸೂಕ್ಷ್ಮ ಮತ್ತು ಆಳವಾದ ಅಧ್ಯಯನವಾಗಿರುವುದರಿಂದ ಎರಡು ತಾಲೂಕುಗಳ ತಲಾ ಎರಡೆರಡು ಗ್ರಾಮಪಂಚಾಯಿತಿಗಳಿಗೆ ಮಿತಿಗೊಳಿಸಲಾಗಿದೆ.

1.7 ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನವು ಪ್ರಯೋಗಾತ್ಮಕ(ಎಂಪಿರಿಕಲ್) ಅಧ್ಯಯನವಾಗಿದೆ. ಈ ಅಧ್ಯಯನದಿಂದ ಕಂಡುಕೊಳ್ಳುವ ಫಲಿತಗಳ ಆಧಾರಗಳ ಮೇಲೆ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಸುಧಾರಿಸಬಹುದಾಗಿದೆ. ಗ್ರಾಮೀಣ ಮಹಿಳೆಯರು ಮತದಾನ, ಉಮೇದುವಾರಿಕೆ, ಗ್ರಾಮಸಭೆ ಇತ್ಯಾದಿ ಪ್ರಾತಿನಿಧ್ಯದ ಜವಾಬ್ದಾರಿಗಳಲ್ಲಿ ಅವರು ಸ್ವನಿರ್ಧಾರದಂತೆ ಭಾಗವಹಿಸುವ ಅರಿವಿನ ಪ್ರಮಾಣದ ಉತ್ತಮ ಪರಿಣಾಮಗಳನ್ನು ಹಾಗೂ ಲಿಂಗಸಮಾನತೆಯ ಪ್ರಾಮುಖ್ಯತೆಯನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಗ್ರಾಮಪಂಚಾಯಿತಿಯ ಮಟ್ಟದಲ್ಲಿ ಮಹಿಳೆಯರ ಸ್ವನಿರ್ಧಾರಕ್ಕೆ ಇರುವ ಸಾಮಾಜಿಕ, ಆರ್ಥಿಕ, ರಾಜಕೀಯ ತೊಡಕುಗಳನ್ನು ಗುರುತಿಸಲಾಗಿದೆ. ಅಂತಹ ಸ್ಥಳೀಯ ಸಮಸ್ಯೆಗಳಿಗೆ ಸಾರ್ವತ್ರಿಕವಾಗಿ ಪರಿಹಾರ ಕಂಡುಕೊಳ್ಳಲಾಗಿದೆ. ಈ ಮಹಾಪ್ರಬಂಧವು ಸ್ಥಳೀಯ ಸರ್ಕಾರಗಳನ್ನು ಕುರಿತು ಅಧ್ಯಯನ ಮಾಡುವ ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ, ಬರಹಗಾರರಿಗೆ ಮತ್ತು ಓದುಗರಿಗೆ ತುಂಬಾ ಪ್ರಯೋಜನಕಾರಿಯಾಗಿದೆ. ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳು ಮಹಿಳಾ ರಾಜಕೀಯ ಪ್ರಾತಿನಿಧ್ಯ, ಸಬಲೀಕರಣ ಹಾಗೂ ಸ್ಥಳೀಯ ಆಡಳಿತಕ್ಕೆ ಸಂಬಸಿದಂತೆ ಇತರೆ ಪ್ರಮುಖ ವಿಷಯಗಳ ಕುರಿತು ನೀತಿ ನಿಯಮಗಳನ್ನು ರೂಪಿಸಲು ತುಂಬಾ ಮಹತ್ವದಾಗಿದೆ.

1.8 ಅಧ್ಯಾಯಗಳ ವಿನ್ಯಾಸ

ಈ ಸಂಶೋಧನಾ ಮಹಾಪ್ರಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳನ್ನು ಈ ಕೆಳಗಿನಂತೆ ರಚಿಸಲಾಗಿದೆ.

ಅಧ್ಯಾಯ ಒಂದು: ಈ ಅಧ್ಯಾಯವು ಅಧ್ಯಯನದ ಪ್ರಸ್ತಾವನೆ, ಅಧ್ಯಯನದ ಸಮಸ್ಯೀಕರಣ, ಅಧ್ಯಯನದ ಉದ್ದೇಶ, ಅಧ್ಯಯನದ ವಿಧಾನ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಮಿತಿ, ಅಧ್ಯಯನದ ಮಹತ್ವ, ಅಧ್ಯಾಯಗಳ ವಿನ್ಯಾಸ ಮತ್ತು ಅಧ್ಯಯನಗಳ ಸಮೀಕ್ಷೆಗಳನ್ನು ಒಳಗೊಂಡಿದೆ.

ಅಧ್ಯಾಯ ಎರಡು: ಈ ಅಧ್ಯಾಯವು ರಾಷ್ಟ್ರ ಮತ್ತು ರಾಜ್ಯದಲ್ಲಿ ಗ್ರಾಮಪಂಚಾಯಿತಿಯ ವಿಕಾಸದ ಸ್ಥೂಲ ಪರಿಚಯ, ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಪ್ರಾತಿನಿಧ್ಯ ಬೆಳೆದು ಬಂದ ದಾರಿ ಮತ್ತು ಮಹಿಳಾ ಪ್ರಾತಿನಿಧ್ಯ ಮೂಲಕ ಮಹಿಳಾ ಸಬಲೀಕರಣದ ಸ್ವರೂಪವನ್ನು ಪರಿಚಯವಿದೆ.

ಅಧ್ಯಾಯ ಮೂರು: ಈ ಅಧ್ಯಾಯವು ಅಧ್ಯಯನದ ಕ್ಷೇತ್ರ ಪರಿಚಯವನ್ನು ವಿವರಿಸುತ್ತದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಜಿಲ್ಲೆಗಳ, ತಾಲೂಕುಗಳ ಮತ್ತು ಗ್ರಾಮಪಂಚಾಯಿತಿಗಳ ಐತಿಹಾಸಿಕ, ಭೌಗೋಳಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಚಯವನ್ನು ಅಂಕಿ–ಅಂಶಗಳ ಮೂಲಕ ವಿಶ್ಲೇಷಣೆ ಒಳಗೊಂಡಿದೆ.

ಅಧ್ಯಾಯ ನಾಲ್ಕು: ಈ ಅಧ್ಯಾಯದಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಭಾಗವಹಿಸಿ ಮತ ಚಲಾಯಿಸುವ ಮಹಿಳೆಯರ ಸ್ವನಿರ್ಧಾರದ ಆಧಾರ ಮೇಲೆ ಅವರ ಸಬಲೀಕರಣವನ್ನು ಗುರುತಿಸಲಾಗಿದೆ. ಸಾಮಾಜೋ–ಆರ್ಥಿಕ ಸಂಗತಿಗಳಾದ ಲಿಂಗ, ವಯಸ್ಸು, ಜಾತಿ, ಶಿಕ್ಷಣ ಮತ್ತು ಆದಾಯಗಳನ್ನು ಬಳಸಿಕೊಂಡು ಮತದಾನದ ಪ್ರಕ್ರಿಯೆಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಗುರುತಿಸಿದೆ.

ಅಧ್ಯಾಯ ಐದು: ಈ ಅಧ್ಯಾಯದಲ್ಲಿ ಗ್ರಾಮಪಂಚಾಯಿತಿಗಳ ಕ್ಷೇತ್ರ/ವಾರ್ಡ್‌ಗಳ ರಚನೆ, ಮೀಸಲಾತಿ, ಮಹಿಳಾ ಉಮೇದುವಾರಿಕೆ, ಮತದಾರರು ಮತದಾನ ಮಾಡುವ ವಿಧಾನ ಮತ್ತು ಮಹಿಳಾ ಅಭ್ಯರ್ಥಿಗಳು ಮತದಾರರಿಂದ ಪಡೆಯುವ ಮತಗಳ ಪ್ರಮಾಣ ಇತ್ಯಾದಿಗಳ ಹಿನ್ನೆಲೆಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ವಿಶ್ಲೇಷಿಸಿದೆ.

ಅಧ್ಯಾಯ ಆರು: ಈ ಅಧ್ಯಾಯದಲ್ಲಿ ಗ್ರಾಮಸಭೆಯಲ್ಲಿ ಭಾಗವಹಿಸುವ ಮತದಾರರ ಸಂಖ್ಯೆ ಮತ್ತು ಮಹಿಳಾ ಮತದಾರರ ನಿರ್ಧಾರದ ಪ್ರಮಾಣದ ಆಧಾರದ ಮೇಲೆ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಮಾಪನ ಮಾಡಿದೆ.

ಅಧ್ಯಾಯ ಏಳು: ಈ ಕೊನೆಯ ಅಧ್ಯಾಯದಲ್ಲಿ ಅಧ್ಯಯನದ ಸಾರಾಂಶ ಮತ್ತು ಫಲಿತಗಳನ್ನು ನೀಡಲಾಗಿದೆ. ಗ್ರಾಮಪಂಚಾಯಿತಿ ಮಟ್ಟದಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಸುಧಾರಿಸಲು ಕೆಲವು ಸಲಹೆಗಳನ್ನು ಸೂಚಿಸಿದೆ.

ಪರಾಮರ್ಶನ ಗ್ರಂಥಗಳು

1.9 ಅಧ್ಯಯನಗಳ ಸಮೀಕ್ಷೆ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ.

ಚಂದ್ರ ಪೂಜಾರಿ ಎಂ(2008), *ದೇಶಿಯತೆಯ ನೆರಳಲ್ಲಿ ವಿಕೇಂದ್ರೀಕರಣ,* ಎಂಬ ಈ ಅಧ್ಯಯನದಲ್ಲಿ ಧಾರ್ಮಿಕ ನಂಬಿಕೆ ಮತ್ತು ಪರಂಪರೆ ಆಳವಾಗಿ ಬೇರೂರಿರುವ ಗ್ರಾಮೀಣ ಸಮುದಾಯದಲ್ಲಿ ಪಂಚಾಯತ್ ಸಂಸ್ಥೆಗಳ ಮೂಲಕ ಸಾಮಾಜಿಕ ಪರಿವರ್ತನೆ ಸಾಧ್ಯವಿಲ್ಲ. ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ಪರಿವರ್ತನೆ ಅಗತ್ಯವಿದೆ ಎಂಬುದು ಕಂಡುಬರುತ್ತದೆ. ತಳಮಟ್ಟದ ಆಡಳಿತದಲ್ಲಿ ಮಹಿಳಾ ಮೀಸಲಾತಿ ನೀಡಿದೆ. ಆದರೆ ಪಂಚಾಯಿತಿಗೆ ವಯಸ್ಸಾದ ಮಹಿಳೆಯರು ಪ್ರಾತಿನಿಧ್ಯ ಪಡೆಯುತ್ತಾರೆ. ಅಂದರೆ ದುಡಿಮೆ ಸೀಮಿತವಾಗಿರುವ ಹಾಗೂ ನಿರ್ಧಾರದ ಅಧಿಕಾರ ಇಲ್ಲದ ಮಹಿಳೆಯರ ಬದುಕು ಕಂಡುಬರುತ್ತದೆ. ಮಹಿಳೆಯರು ಲಿಂಗತಾರತಮ್ಯದ ಪ್ರಜ್ಞೆ ಮೀರಿ ಬೆಳೆಯಲಾರದಂತಹ ಸ್ಥಿತಿ ನಿರ್ಮಾಣ ಮಾಡಿರುವ ಮೇಲ್ಜಾತಿ ವ್ಯವಸ್ಥೆ, ಪಂಚಾಯಿತಿ ಆಡಳಿತದಲ್ಲಿ ಪರೋಕ್ಷ ಯಜಮಾನಿಕೆ ನಡೆಸುತ್ತಿದೆ. ದೌರ್ಜನ್ಯ, ಒಳಜಗಳ, ಮೇಲು-ಕೀಳು ಭಾವನೆ, ದೇವರು-ಧರ್ಮ ಹೆಸರಿನಲ್ಲಿ ನಡೆಯುವ ಶೋಷಣೆ ಇವೆಲ್ಲ ವಿಕೇಂದ್ರೀಕರಣಕ್ಕೆ ಬಹುಮುಖ ಸಮಸ್ಯೆಗಳಾಗಿವೆ. ಜನತಾಂತ್ರಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಮೂಲಸ್ವರೂಪ ಮತ್ತು ಮೂಲಭೂತ ಅಗತ್ಯಗಳ ಬಗ್ಗೆ ಅರಿವು ಇಲ್ಲದ ಹಾಗೂ ಬದಲಾವಣೆಯ ಆಸಕ್ತಿ ಇಲ್ಲದ ಗ್ರಾಮೀಣ ಜನರ ಮನಸ್ಥಿತಿ ವಿಕೇಂದ್ರೀಕರಣಕ್ಕೆ ಮತ್ತು ವಿಶೇಷವಾಗಿ ದಲಿತ, ಹಿಂದುಳಿದ ಮತ್ತು ಮಹಿಳೆಯರ ಸಬಲೀಕರಣಕ್ಕೆ ಹೇಗೆ ತಡೆ ಒಡ್ಡುತ್ತದೆ ಎನ್ನುವುದು ಈ ಅಧ್ಯಯನದ ತಿರುಳಾಗಿದೆ.

ಯರಿಸ್ವಾಮಿ ಎಂ(2002), *ಗ್ರಾಮಪಂಚಾಯಿತಿ ಮತ್ತು ಸಬಲೀಕರಣ* (ಬಳ್ಳಾರಿ ಜಿಲ್ಲೆಯ ಅಧ್ಯಯನ) ಎಂಬ ಈ ಅಧ್ಯಯನದಲ್ಲಿ ಅಧಿಕಾರ ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ರಚಿತವಾಗಿರುವ *ಗ್ರಾಮಪಂಚಾಯಿತಿ ಹಾಗೂ ಸಬಲೀಕರಣಕ್ಕೆ ಮೇಲ್‌ಸ್ತರದಲ್ಲಿ ರೂಪಗೊಳ್ಳುವ ಅಭಿವೃದ್ಧಿ ಕಾರ್ಯಗಳು ಕೆಳಮಟ್ಟದ ಜನರಿಗೆ ತಲುಪಿಸುವ ಹಾಗೂ ತಳಮಟ್ಟದ ಜನರ ಸಬಲೀಕರಣಕ್ಕೆ ಅನಿವಾರ್ಯವಾಗಿರುವ ಮೂಲಭೂತ ಸೌಲಭ್ಯಗಳು ಉದ್ದೇಶಿತ ವರ್ಗಕ್ಕೆ ತಲುಪಿಸುವ ಗ್ರಾಮಪಂಚಾಯಿತಿಯ ಕಾರ್ಯಕ್ಷಮತೆ ಮತ್ತು ಜವಾಬ್ದಾರಿಯನ್ನು* ವಿಶ್ಲೇಷಿಸಲಾಗಿದೆ.

ಬಿದುಯುತ್ ಮೋಹಂತಿ(2002), *ವುಮನ್ ಅಂಡ್ ಪೊಲಿಟಿಕಲ್ ಎಂಪವರ್‌ಮೆಂಟ್,* ಎಂಬ ಅಧ್ಯಯನದಲ್ಲಿ ಇವರು ಜ್ಞಾನದ ಮೂಲಕ ಸ್ವ-ಗ್ರಹಿಕೆಯ ಬದಲಾವಣೆ(The change of self perception through knowledge)ಯನ್ನೇ ಸಬಲೀಕರಣ ಎಂದು ತಿಳಿಸಿದ್ದಾರೆ. ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿಸರ ಸುಧಾರಣೆ ಮತ್ತು ಶಿಕ್ಷಣ ಹಾಗೂ ಸಂಪನ್ಮೂಲಗಳನ್ನು ಹೊಂದಿದರೆ ಅವರು ಸಬಲರಾಗುತ್ತಾರೆ. ಅಲ್ಲದೇ, ಪ್ರಜಾಪ್ರಭುತ್ವದ ಮೂಲಭೂತ ಅಂಶವಾದ ಭಾಗವಹಿಸುವ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಕಂಡುಬರುತ್ತಾರೆ. ಪಂಚಾಯಿತಿಗೆ ಆಯ್ಕೆಯಾಗುವ ಮಹಿಳೆಯರಲ್ಲಿ ಹೆಚ್ಚಾಗಿ ಹೊಸಬರು ಹಾಗೂ ಅನಕ್ಷರಸ್ಥರಾಗಿರುತ್ತಾರೆ. ಹೀಗಾಗಿ ಇವರು ಪುರುಷರನ್ನು ಅವಲಂಬಿಸುತ್ತಾರೆ. ಪುರುಷಸಂಬಂಧಿಗಳ ಅವಲಂಬನೆ ಹಾಗೂ ಮಹಿಳಾ ಮೀಸಲಾತಿಯಿಂದಾಗಿ ಗಂಡ-ಹೆಂಡಿರ ನಡುವಿನ ಅಧಿಕಾರ ಸಂಬಂಧ ಬದಲಾಗುತ್ತದೆ.

ಅಂದರೆ, ಮಹಿಳಾ ಸದಸ್ಯೆಯ ಗಂಡನಿಗೆ ಸಾರ್ವಜನಿಕವಾಗಿ ಉತ್ತಮ ಅವಕಾಶ ಮತ್ತು ಜನಪ್ರಿಯತೆ ಸಿಗುತ್ತದೆ. ಹೀಗಾಗಿ ಕೌಟುಂಬಿಕ ವಲಯದಲ್ಲಿ ಪುರುಷ(ಏಕ)ಶಾಹಿ ಯಜಮಾನಿಕೆ ಕಡಿಮೆಯಾಗುತ್ತದೆ. ಕಾಲಕ್ರಮೇಣ ಮಹಿಳೆಯರು ಪಂಚಾಯಿತಿ ಕಾರ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸುತ್ತಾರೆ ಎಂಬುದು ಈ ಅಧ್ಯಯನದಲ್ಲಿ ಕಂಡುಬಂದಿದೆ. ಪಂಚಾಯಿತಿಗಳಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಸುಧಾರಣೆ ಮಾಡುವುದು ಮಾತ್ರವಲ್ಲ ಅವರ ಸಾಮಾಜಿಕ-ಆರ್ಥಿಕ ಪರಿಸರ ಸುಧಾರಣೆ ಆಗಬೇಕು ಎನ್ನುವುದನ್ನು ಈ ಅಧ್ಯಯನದಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳಲಾಗಿದೆ.

ಮಾಣಿಕ್ಯಾಂಬ ಪಿ(1989), *ವುಮೆನ್ ಇನ್ ಪಂಚಾಯತ್ ಸ್ಟ್ರಕ್ಚರ್*, ಈ ಅಧ್ಯಯನದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿನ್ನೆಲೆಯ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳಲ್ಲಿ ಭಾಗವಹಿಸುವ ಸದಸ್ಯರ ಸ್ವರೂಪ ಮತ್ತು ಹಂತಗಳನ್ನು ಗುರುತಿಸಲಾಗಿದೆ. ಶಿಕ್ಷಣ ಮತ್ತು ಭಾಗವಹಿಸುವಿಕೆ ಪ್ರಕ್ರಿಯೆ ನಡುವೆ ಪರಸ್ಪರ ಸಂಬಂಧವಿದೆ. ಸೆಕೆಂಡರಿ ಶಿಕ್ಷಣ ಪಡೆದ ಮಹಿಳೆ ಸಭೆಗಳಲ್ಲಿ ನಿರಂತರವಾಗಿ ಮತ್ತು ಸಕ್ರಿಯವಾಗಿ ಭಾಗವಹಿಸುತ್ತಾಳೆ. ಆರ್ಥಿಕ ಸ್ಥಾನಮಾನ ಮಹಿಳಾ ಸದಸ್ಯರಿಗೆ ಭಾಗವಹಿಸುವಿಕೆಯಲ್ಲಿ ಜ್ಞಾನ, ಉತ್ತೇಜನ ಮತ್ತು ಭರವಸೆಯನ್ನು ನೀಡುತ್ತದೆ. ಬಡ ಮಹಿಳಾ ಸದಸ್ಯರ ಭಾಗವಹಿಸುವಿಕೆಯನ್ನು ಅಪ್ರಮುಖವಾಗಿ ಕಾಣಲಾಗಿದೆ. ಮಧ್ಯಮ ಮತ್ತು ಶ್ರೀಮಂತ ವರ್ಗದ ಮಹಿಳೆಯರು ಗರಿಷ್ಠ ಪ್ರಮಾಣದಲ್ಲಿ ಭಾಗವಹಿಸುವುದು ಕಂಡುಬಂದಿದೆ. ರಾಜಕೀಯ ಅನುಭವವುಳ್ಳ ವಯಸ್ಕ ಮಹಿಳೆಯರು ಪಂಚಾಯಿತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಗ್ರಾಮೀಣ ಮಹಿಳೆಯರು ಪಂಚಾಯತ್‌ರಾಜ್ ವ್ಯವಸ್ಥೆಯ ಅಭಿವೃದ್ಧಿ ಲಾಭವನ್ನು ಮಾತ್ರ ಪಡೆಯುವಂತವರಾಗದೇ ಅದಕ್ಕೆ ಕೊಡುಗೆ ನೀಡುವಂತವರಾಗಬೇಕು ಎಂಬುದು ಈ ಅಧ್ಯಯನದಲ್ಲಿ ಕಂಡುಬಂದಿದೆ.

ಸಚ್ಚಿದಾನಂದ ಸತ್ಪತಿ(2002), *ಮಹಿಳಾ ಸಬಲೀಕರಣ ಮತ್ತು ಪಂಚಾಯತ್‌ರಾಜ್*, ಈ ಅಧ್ಯಯನದಲ್ಲಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದೇ ಸಬಲೀಕರಣ ಎಂದು ತಿಳಿಸಲಾಗಿದೆ. ಸ್ತ್ರೀ-ಪುರುಷರು ಸಮಾನರು ಎಂದು ಸಮ್ಮತಿ ಪಡೆದ ರಾಜಕೀಯ ಸಂಸ್ಥೆಗಳಲ್ಲಿ ಸಹಭಾಗಿತ್ವ ಮೂಲಕ ಸಮಾಜದ ಅಭಿವೃದ್ಧಿ ಬೆಳವಣಿಗೆಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆ ಭಾಗವಹಿಸುವುದೇ, ಅವರ ಸಬಲೀಕರಣವಾಗಿದೆ. ಆದರೆ ಮಹಿಳಾ ಸಬಲೀಕರಣವು ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ಏಕೆ ಎಂದು ಈ ಅಧ್ಯಯನದಲ್ಲಿ ಪ್ರಶ್ನಿಸಲಾಗಿದೆ. ಜಾತಿ, ಧರ್ಮ, ಜಮೀನ್ದಾರಿ ನಡವಳಿಕೆಗಳು ಹಾಗೂ ಕುಟುಂಬದ ಘನತೆ ಮತ್ತು ಸಂಪ್ರದಾಯಬದ್ಧ ಕಾರಣಗಳು ಮಹಿಳೆಯನ್ನು ರಾಜಕೀಯದಿಂದ ದೂರ ಇಡಲಾಗಿತ್ತು. ಈ ಕಾರಣಗಳನ್ನು ದೂರ ಮಾಡಿ, ಮಹಿಳೆಯರಿಗೆ ಸ್ಥಳೀಯ ಮಟ್ಟದ ರಾಜಕೀಯದಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ನೀಡುವ ಕಾರಣಕ್ಕಾಗಿಯೇ 73ನೇ ತಿದ್ದುಪಡಿ ಮಾಡಲಾಗಿದೆ ಎಂದು ಈ ಅಧ್ಯಯನದಲ್ಲಿ ತಿಳಿಸಲಾಗಿದೆ. ಅನಕ್ಷರತೆ ಮತ್ತು ವಾರ್ಷಿಕ ಗೃಹಕೃತ್ಯಗಳು ಮಹಿಳೆಯರ ನಾಯಕತ್ವದ ಬೆಳವಣಿಗೆ ಮೇಲೆ ಅಡ್ಡ ಪರಿಣಾಮ ಬೀರುವುದಿಲ್ಲ. ರಾಜಕೀಯ ಅನುಭವ ಇಲ್ಲದ, ಹೆಚ್ಚು ಶಿಕ್ಷಣ ಪಡೆಯದ ಹಾಗೂ ಕೃಷಿ ಹಿನ್ನೆಲೆಯಿಂದ ಬಂದ ಮಹಿಳೆ ಪಂಚಾಯಿತಿ ಕಾರ್ಯವನ್ನು ಉತ್ತಮವಾಗಿ ನಿರ್ವಹಿಸಿದ್ದು ಕಂಡುಬರುತ್ತದೆ. ಶಿಕ್ಷಣ ನೈತಿಕತೆ ನೀಡುತ್ತದೆ ಎಂದು ನಿರೀಕ್ಷಿಸುವಂತಿಲ್ಲ. ಶಿಕ್ಷಣ

ಪಡೆದವರೇ ಹೆಚ್ಚು ಭ್ರಷ್ಟರಾಗಿರುವುದು ಈ ಅಧ್ಯಯನದಲ್ಲಿ ಕಂಡುಬಂದಿದೆ. ಗ್ರಾಮೀಣ ಸಂರಚನೆಯಲ್ಲಿ ಸಮಾಜೋ-ಆರ್ಥಿಕ ಹಿನ್ನೆಲೆಯಲ್ಲಿ ಉನ್ನತ ಮಟ್ಟದ ಅಭಿವೃದ್ಧಿಯನ್ನು ನಿರೀಕ್ಷಿಸುವಂತಿಲ್ಲ. ಆದರೆ ಸುಧಾರಣೆಗಳ ಮೂಲಕ ಮಾತ್ರ ಅಭಿವೃದ್ಧಿಯನ್ನು ನಿರೀಕ್ಷಿಸಬಹುದು ಎಂದು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಮೀನಾಕ್ಷಿ ಡಿ(2002), *ಗ್ರಾಮಪಂಚಾಯಿತಿಯಲ್ಲಿ ಮಹಿಳೆ ಪಾತ್ರ*, ಈ ಅಧ್ಯಯನದಲ್ಲಿ ಅಧಿಕಾರ ವಿಕೇಂದ್ರೀಕರಣ ಮತ್ತು ಮೀಸಲಾತಿಯಿಂದಾಗಿ ಮಹಿಳೆ ಅಡುಗೆ ಮನೆಯಿಂದ ಪಂಚಾಯಿತಿವರೆಗೆ ಬರುವಂತಾಗಿದೆ. ಊಳಿಗಮಾನ್ಯ ಮತ್ತು ಪುರುಷಶಾಹಿ ಸಮಾಜದಲ್ಲಿ ಮಹಿಳೆಯರನ್ನು ನಿಕೃಷ್ಟವಾಗಿ ಕಾಣಲಾಗುತ್ತಿದೆ. ಹೆಂಡತಿ ಹೆಸರಿನಲ್ಲಿ ಗಂಡ ಅಧಿಕಾರ ನಡೆಸುತ್ತಾನೆ. ಗ್ರಾಮಪಂಚಾಯಿತಿ ಪದಾಧಿಕಾರಿಗಳಾದ ಬಹುತೇಕ ಮಹಿಳಾ ಸದಸ್ಯರು/ಅಧ್ಯಕ್ಷರು ಅನಕ್ಷರಸ್ಥರು. ಇವರು ತಳಮಟ್ಟದ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವ ಮತ್ತು ನಿರ್ಧಾರ ತೆಗೆದುಕೊಳ್ಳುವ ಅರಿವು ಪಡೆಯಬೇಕು. ವಿಶೇಷವಾಗಿ ಮಹಿಳೆ ಶಿಕ್ಷಣ ಪಡೆಯಬೇಕು ಎಂದು ವಿಶ್ಲೇಷಿಸಿದೆ.

ವೆಂಕಟೇಶ್ ಎ(2003), *ನಗರ ಹಾಗೂ ಗ್ರಾಮೀಣ ರಾಜಕೀಯದಲ್ಲಿ ಮಹಿಳೆ*, ಈ ಅಧ್ಯಯನದಲ್ಲಿ ಮಹಿಳಾ ಸಂಖ್ಯೆ ಪುರುಷರಿಗೆ ಸಮವಿದ್ದರೂ ಸ್ಪರ್ಧೆಯಲ್ಲಿ ಸೋತಿದ್ದಾರೆ. ಸ್ತ್ರೀ-ಪುರುಷರ ಅನುಪಾತಕ್ಕೆ ಅನುಗುಣವಾಗಿ ರಾಜಕೀಯ ಹಕ್ಕುಗಳು ದೊರೆತಿಲ್ಲ, ಮಹಿಳೆಯರು ಚುನಾವಣೆಗಳಲ್ಲಿ ಓಟ್ ಬ್ಯಾಂಕ್‌ಗಳಾಗಿದ್ದಾರೆ. ಹೀಗಾಗಿ ರಾಜಕೀಯದಲ್ಲಿ ಮಹಿಳೆಯನ್ನು ಅಪನಂಬಿಕೆಯಿಂದ ಕಾಣಲಾಗುತ್ತಿದೆ. ಸ್ತ್ರೀ ರಾಜಕೀಯ ಪ್ರವೇಶದಿಂದ ಸ್ತ್ರೀತನ ನಾಶ, ಸಾಂಸ್ಕೃತಿಕ ಅಧಃಪತನ ಮುಂತಾದ ಸಮಸ್ಯೆಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳೆಯರ ಕುರಿತು ಗುರುತಿಸಿಕೊಂಡು, ಅವರ ಸಶಕ್ತೀಕರಣಕ್ಕೆ ಮಹಿಳಾ ರಾಜಕಾರಣದ ಚಲನೆ ಸ್ವರೂಪ, ಸೈದ್ಧಾಂತಿಕ ನೆಲೆಗಟ್ಟುಗಳು ಮತ್ತು ಕಾರ್ಯಸೂಚಿ ಬಗ್ಗೆ ವಿಶ್ಲೇಷಿಸಲಾಗಿದೆ.

ಯರಿಸ್ವಾಮಿ ಎಂ(1997) *ಪಂಚಾಯತ್‌ರಾಜ್ ಮತ್ತು ಮಹಿಳೆ: ಒಂದು ಅಧ್ಯಯನ* ಎಂಬ ಸಂಶೋಧನಾ ಪ್ರಬಂಧವು ಐತಿಹಾಸಿಕ ಮತ್ತು ಸಾಂಸ್ಕೃತಿಕ ನೆಲೆಯನ್ನು ಆಧರಿಸಿದ ಒಂದು ನಿದರ್ಶನಾತ್ಮಕ ಅಧ್ಯಯನವಾಗಿದೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳಾ ಪ್ರತಿನಿಧಿಗಳ ಕಾರ್ಯವೈಖರಿ ಮತ್ತು ಭಾಗವಹಿಸುವಿಕೆಯನ್ನು ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳು ಹಾಗೂ ಲಿಂಗಸಂವೇದಿ ಆಧಾರಗಳ ಮೇಲೆ ಅಧ್ಯಯನ ಮಾಡಲಾಗಿದೆ. ಮಹಿಳಾ ಮೀಸಲಾತಿ ಮತ್ತು ಅವರ ನೈಜ ಅಧಿಕಾರ ಕುರಿತು ಈ ಅಧ್ಯಯನ ಕೇಂದ್ರೀಕೃತವಾಗಿದೆ.

ವೆಂಕಟರಾಮ ಜಿ(2003), ಅವರ *ಮಹಿಳಾ ಸಬಲೀಕರಣ ಮತ್ತು ಅಧಿಕಾರ ಸಂರಚನೆ* ಎಂಬ ಅಧ್ಯಯನವು ಪುರುಷಪ್ರಧಾನ ಸಮಾಜ ಹಾಗೂ ಸ್ತ್ರೀವಾದಿ ನೆಲೆಗಟ್ಟಿನ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ *ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆ* ಹಾಗೂ ಅಧಿಕಾರ ಸಂರಚನೆಗೆ ಸಂಬಂಧಿಸಿದಂತೆ *ಮಹಿಳೆಗೆ ರಾಜಕೀಯ ಹಕ್ಕು ಸ್ವಾತಂತ್ರ್ಯಗಳ ಜೊತೆಗೆ ರಾಜಕೀಯ ರಂಗದಲ್ಲಿ ಮೀಸಲಾತಿ ಅವಶ್ಯಕ* ಎಂಬುದು ಈ ಅಧ್ಯಯನದಲ್ಲಿ ಕಂಡುಬರುತ್ತದೆ.

ಬೊಹರ ಒ.ಪಿ(Bohra O.P), (1997) *ವುಮೆನ್ ಇನ್ ಡಿಸೆಂಟ್ರಲೈಜ್ಡ್ ಡೆಮಾಕ್ರಸಿ*, ಈ ಕೇಸ್ ಸ್ಟಡಿ ಅಧ್ಯಯನ ವಿಧಾನದಲ್ಲಿ ತಮಿಳುನಾಡು ಪಂಚಾಯತ್‌ರಾಜ್ ವ್ಯವಸ್ಥೆ ಕರಿತು ವಿಶ್ಲೇಷಣೆ ಮಾಡಿದ್ದಾರೆ. ಮತದಾರರಲ್ಲಿ ಅರ್ಧದಷ್ಟು ಮಹಿಳಾ ಮತದಾರರು ಇದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸುವ ಮಹಿಳಾ ಅಭ್ಯರ್ಥಿಗಳನ್ನು ಒಳಗೊಂಡಂತೆ ಎಲ್ಲಾ ಅಭ್ಯರ್ಥಿಗಳು ಮಹಿಳೆಯರ ಮತ ಪಡೆಯುವಲ್ಲಿ ಆಸಕ್ತಿ ಮತ್ತು ಪ್ರಚಾರವನ್ನು ಮಾಡುತ್ತಾರೆ ಎಂದು ಗುರುತಿಸಿದ್ದಾರೆ. ಒ.ಪಿ. ಬೊಹರ ಪ್ರಕಾರ, ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಅಧಿಕಾರ ವಿಕೇಂದ್ರೀಕರಣ ಮತ್ತು ಲಿಂಗ ಅಸಮಾನತೆ ನಿವಾರಣೆ ಹಾಗೂ ದಲಿತ, ಶೋಷಿತ ಮತ್ತು ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡುವುದೇ 73ನೇ ತಿದ್ದುಪಡಿಯ ನೈಜ ಉದ್ದೇಶ. ಶೋಷಿತ, ದಲಿತ, ಹಿಂದುಳಿದ ಮತ್ತು ಮಹಿಳೆಯರಿಗೆ ಪ್ರಜಾಪ್ರಭುತ್ವ ಮತ್ತು ಪ್ರಾತಿನಿಧ್ಯತೆ ವಿಧಾನ ಮೂಲಕ ಇವರಿಗೆ ನ್ಯಾಯದ ಅನುಭವ, ಅಧಿಕಾರದ ರಚನೆಯಲ್ಲಿ ಅನುಭವ, ಸಾಮೂಹಿಕ ಸಬಲೀಕರಣಕ್ಕೆ ಮತ್ತು ರಾಜಕೀಯ ಅಧಿಕಾರಕ್ಕೆ ಧ್ವನಿ, ಬಲ ಮತ್ತು ಭಾವನೆ ನೀಡಿದೆ. ಇವರ ಇಂತಹ ನಿಶ್ಚಯಾರ್ಥಕ ಚಟುವಟಿಕೆಗಳು ತಳಮಟ್ಟದ ಆಡಳಿತದಲ್ಲಿ ಜನಪ್ರಿಯ ನಾಯಕತ್ವ ಬೆಳೆಸುವುದರ ಜೊತೆಗೆ ಪರಿಹಾರಾತ್ಮಕ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಅವಕಾಶ ನೀಡಿದೆ ಎಂಬುದಾಗಿ ವಿಶ್ಲೇಷಣೆ ಮಾಡಲಾಗಿದೆ.

ದೇವಕಿ ಜೈನ್, (1996), *ವುಮೆನ್: ನ್ಯೂ ವಿಜನ್ ಆಫ್ ಲೀಡರ್‌ಶಿಪ್*: ಈ ಅಧ್ಯಯನದಲ್ಲಿ ದೇವಕಿ ಜೈನ್ ಅವರು 73ನೇ ತಿದ್ದುಪಡಿಯ ಮೂಲಕ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೆ ತರುವ ಉದ್ದೇಶದ ಹಿಂದೆ ಸಂಸತ್ ಸದಸ್ಯರ ಎರಡು ಉದ್ದೇಶಗಳು ಇವೆ. ಒಂದು, ಪ್ರಜಾಪ್ರಭುತ್ವ ಮತ್ತು ನ್ಯಾಯ. ಎರಡು, ಮಾನವ ಸಂಪನ್ಮೂಲದ ಬಳಕೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಜನ ಮಹಿಳೆಯರು ಇದ್ದಾರೆ. ಮಹಿಳೆಯರ ಸಮರ್ಪಕ ಭಾಗವಹಿಸುವಿಕೆ ಇಲ್ಲದೇ ದೇಶದಲ್ಲಿ ಅಭಿವೃದ್ಧಿ ಸಾಧಿಸಲಾಗದು ಎಂದು ಇವರು ಅಭಿಪ್ರಾಯಪಟ್ಟಿದ್ದಾರೆ. ಗ್ರಾಮಪಂಚಾಯಿತಿಗೆ 25ರಿಂದ 45 ವರ್ಷದೊಳಗಿನ ಮಹಿಳೆಯರು ಆಯ್ಕೆ ಆಗುತ್ತಾರೆ. ಅವರಲ್ಲಿ ಶೇ.20ರಷ್ಟು ಮಹಿಳೆಯರು ಈ ಹಿಂದೆ ಆಯ್ಕೆಯಾದ ಮತ್ತು ರಾಜಕೀಯ ಅನುಭವ ಇರುವ ಮಹಿಳೆಯರೇ ಆಯ್ಕೆಯಾಗುತ್ತಾರೆ. ಸಂವಿಧಾನದ 73ನೇ ತಿದ್ದುಪಡಿ ಮಾಡುವ ಮುಂಚೆ ಇರುವ ಹಾಗೆ ಜಾತಿ ಪ್ರಾತಿನಿಧ್ಯವಿದೆ. ಶೇ.60ರಷ್ಟು ಮಹಿಳೆಯರು ಪ್ರಬಲ ಜಾತಿಯಿಂದಲೇ ಆಯ್ಕೆ ಆಗುತ್ತಿದ್ದಾರೆ. ಚುನಾಯಿತರಾದ ಬಹುಪಾಲು ಮಹಿಳೆಯರು ಅನಕ್ಷರಸ್ಥರಾಗಿದ್ದಾರೆ. ಇವರಲ್ಲಿ ಬಹುತೇಕ ಮಹಿಳೆಯರು ಗೃಹಿಣಿಯರೆಂದೇ ಸ್ವಯಂ ಘೋಷಿಸಿಕೊಂಡಿದ್ದಾರೆ. ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮಹಿಳಾ ಅನುಭವಗಳು ಇತರರಿಗೆ ವರ್ಗಾವಣೆ ಆಗಿರುವುದನ್ನು ಇವರು ತಮ್ಮ ಅಧ್ಯಯನದಲ್ಲಿ ಗುರುತಿಸಿದ್ದಾರೆ. ಸಬಲೀಕರಣ, ಸ್ವನಂಬಿಕೆ, ರಾಜಕೀಯ ತಿಳುವಳಿಕೆ ವರ್ಗಾವಣೆ ಆಗಿರುವ ಅಂಶಗಳೆಂದು ಗುರುತಿಸಿದ್ದಾರೆ. ಮಹಿಳಾ ಸಬಲೀಕರಣದ ಅರಿವು, ಸಂಪನ್ಮೂಲಗಳ ಮೇಲೆ, ಅಧಿಕಾರಿಗಳ ಮೇಲೆ ಮತ್ತು ಇತರ ಪುರುಷರ ಮೇಲೆ ನಿಯಂತ್ರಣ ಹೊಂದುವ ಅಗತ್ಯವಿದೆ. ಮಹಿಳಾ ಸಬಲೀಕರಣಕ್ಕೆ ಪುರುಷ ಯಜಮಾನಿಕೆ ಸವಾಲಾಗಿದೆ ಎಂಬ ವಾದವನ್ನು ಇವರು ಮಂಡಿಸಿದಿದ್ದಾರೆ.

ಭಾರ್ಗವ ಬಿ.ಎಸ್. ಮತ್ತು ಇತರು(1992), *ವುಮೆನ್ ಇನ್ ಗ್ರಾಸ್‌ರೂಟ್ಸ್ ಡೆಮಾಕ್ರಸಿ: ಎ ಸ್ಟಡಿ ಆಫ್ ಕೇರಳ:* ಅಧ್ಯಯನ ಮೀಸಲಾತಿ ನೀತಿಯನ್ನು ಜಾರಿಗೊಳಿಸುವ ಮೂಲಕ ಮಹಿಳಾ ಪ್ರಾತಿನಿಧ್ಯವನ್ನು ಉತ್ತಮಪಡಿಸುವ ಕುರಿತಂತೆ ಚರ್ಚಿಸುತ್ತದೆ. ಇವರ ಪ್ರಕಾರ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಿದರಿಂದ ಅವರಿಗೆ ಸಾಂಪ್ರದಾಯಿಕ ಸಮಾಜ ಮತ್ತು ಆರ್ಥಿಕತೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಅವಕಾಶ ನೀಡಿದೆ. ಮಹಿಳೆಯರು ಜೀವನದ ಎಲ್ಲಾ ರಂಗಗಳಲ್ಲೂ ಅಭಿವೃದ್ಧಿ ಹೊಂದಲು ತಳಮಟ್ಟದ ರಾಜಕೀಯ ಪ್ರಕ್ರಿಯೆಯ ಅಗತ್ಯವಿದೆ ಎಂಬುದನ್ನು ಇವರು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ.

ಶಿರಿನಾ ರಾಯ್(2000), *ಲುಕಿಂಗ್ ಟು ದಿ ಫ್ಯೂಚರ್: ಪಂಚಾಯತ್, ವುಮೆನ್ಸ್ ರೆಪ್ರೆಸೆಂಟೇಶನ್ ಆ್ಯಂಡ್ ಡೆಲಿಬರೇಶನ್ ಪೊಲಿಟಿಕ್ಸ್* ಈ ಅಧ್ಯಯನದಲ್ಲಿ ಸಂಸದರ ಸಹಜ ಬೇಡಿಕೆಗೆ ಅನುಗುಣವಾಗಿ ತಳಮಟ್ಟದ ಆಡಳಿತವಾದ ಪಂಚಾಯತ್‌ರಾಜ್ ಸಂಸ್ಥೆಗಳು ಪ್ರಜಾಸತ್ತಾತ್ಮಕ ಚರ್ಚಾ ಸಂಸ್ಥೆಗಳಾಗಿ ರೂಪುಗೊಳ್ಳುವುದಕ್ಕೆ 73ನೇ ತಿದ್ದುಪಡಿ ಅವಕಾಶ ನೀಡಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ಉಷಾ ನಾರಾಯಣ್(1996), *ವುಮೆನ್ ಇನ್ ಪಂಚಾಯತ್: ದಿ ಪಾಥ್ ಅಹೆಡ್* ಈ ಅಧ್ಯಯನ ಖಚಿತಪಡಿಸುವುದೇನಂದರೆ, ಸಂವಿಧಾನದ 73ನೇ ತಿದ್ದುಪಡಿಯು, ಮಹಿಳೆಯನ್ನು ಮತದಾರಳಾಗಿ, ಮಹಿಳೆಯನ್ನು ರಾಜಕೀಯ ಪಕ್ಷದ ಸದಸ್ಯಳಾಗಿ, ಮಹಿಳೆಯನ್ನು ಚುನಾವಣಾ ಅಭ್ಯರ್ಥಿಯಾಗಿ, ಮಹಿಳೆಯನ್ನು ಚುನಾಯಿತ ಪ್ರತಿನಿಧಿಯಾಗಿ ಗ್ರಾಮಪಂಚಾಯಿತಿ ಚಟುವಟಿಕೆಗಳಲ್ಲಿ ನಿರ್ಧಾರ ಕೈಗೊಳ್ಳುವ, ಯೋಜನೆಗಳನ್ನು ಜಾರಿಗೊಳಿಸುವ ಮತ್ತು ಅವುಗಳನ್ನು ಮೌಲ್ಯಮಾಪನ ಮಾಡುವವಳನ್ನಾಗಿ ಮಾಡುವ ಮುಖ್ಯ ಪಾತ್ರ ವಹಿಸಿದೆ. 73ನೇ ತಿದ್ದುಪಡಿಯಲ್ಲಿ ನೀಡಿರುವ ಮೀಸಲಾತಿ ಅವಕಾಶವು ಖಂಡಿತವಾಗಿ ಮಹಿಳೆಯರ ಸಬಲೀಕರಣಕ್ಕೆ ಅವಕಾಶ ನೀಡಿದೆ ಎಂಬುದು ಈ ಅಧ್ಯಯನದಿಂದ ಕಂಡುಬರುತ್ತದೆ.

Snehalata Panda(1996), *Emerging Pattern of Leadership among Rural Women in Orissa* ಈ ಅಧ್ಯಯನದಲ್ಲಿ ಮಹಿಳೆ ಆಜ್ಞಾಪೂರ್ವಕವಾದ ಮೀಸಲಾತಿ ಅವಕಾಶದ ಫಲವಾಗಿ ರಾಜಕೀಯ ಪ್ರವೇಶ ಪಡೆದಿದ್ದಾಳೆ ಎಂಬ ಸಂಗತಿ ಕಂಡುಬರುತ್ತದೆ. ರಾಜಕೀಯ ಹಿನ್ನೆಲೆ ಇಲ್ಲದ ಮೂರು-ಮುಕ್ಕಾಲು ಪಾಲು ಮಹಿಳೆಯರು ಕುಟುಂಬ ಸದಸ್ಯರ ಮನಒಲೈಕೆಗೆ ಅಥವಾ ಗ್ರಾಮ ಸಮುದಾಯದ ಒತ್ತಡಕ್ಕೆ ಮಣಿದು ರಾಜಕೀಯ ಪ್ರವೇಶ ಮಾಡಿದ್ದಾರೆ. ಇವರ ಅಧ್ಯಯನದ ಪ್ರಮುಖ ವಿಷಯವೆಂದರೆ ಮಹಿಳೆ ಒಲ್ಲದ ಮನಸ್ಸಿನಿಂದ ರಾಜಕೀಯ ಪ್ರವೇಶ ಪಡೆದರೂ ಪ್ರಬುದ್ಧತೆಯಿಂದ, ಆಸಕ್ತಿಯಿಂದ ರಾಜಕೀಯಪ್ರಜ್ಞೆ ಹೆಚ್ಚಿಸಿಕೊಂಡಿದ್ದಾಳೆ ಮತ್ತು ತನ್ನ ರಾಜಕೀಯ ಪಾತ್ರ ಮತ್ತು ಜವಾಬ್ದಾರಿಗಳನ್ನು ಗ್ರಹಿಕೆಯನ್ನು ಹೆಚ್ಚಿಸಿಕೊಂಡವಳಂತೆ ತೋರುತ್ತಿದ್ದಾಳೆ. ಎಲ್ಲಿ ಜಾತಿ ಭಾವನೆಗಳು ಗಟ್ಟಿಯಾಗಿ ನೆಲೆಗೊಂಡಿರುವಲ್ಲಿ ಮೇಲ್ಜಾತಿಯ ಮಹಿಳೆಯರು ಗ್ರಾಮಪಂಚಾಯಿತಿಯನ್ನು ಪ್ರತಿನಿಧಿಸಲು ಮುಂದೆ ಬರುವುದಿಲ್ಲ. ಈ ಅವಕಾಶವು ಕೂಲಿಕಾರ್ಮಿಕ ಮತ್ತು ಕೆಳಜಾತಿ ಮಹಿಳೆಯರು ಗ್ರಾಮ ರಾಜಕೀಯದಲ್ಲಿ ಶಕ್ತಿಯಾಗಿ ಹೊರಹೊಮ್ಮುವುದಕ್ಕೆ ಅವಕಾಶ ಸಿಕ್ಕಿದೆ ಎಂಬುವುದಾಗಿ ಗುರುತಿಸಿದ್ದಾರೆ.

S. Govinda Gowda and others(1996), *Developmental Role of Women Members of PanchayatRaj Institution: A study in Karnataka* ಈ ಕೃತಿ ಕರ್ನಾಟಕದಲ್ಲಿ ಗ್ರಾಮಪಂಚಾಯಿತಿಯಲ್ಲಿ ಚುನಾಯಿತಾ ಮಹಿಳಾ ಸದಸ್ಯರ ಕುರಿತು ಅಧ್ಯಯನಕ್ಕೆ ಸಂಬಂಧಿಸಿದೆ. ಈ ಅಧ್ಯಯನದಲ್ಲಿ ಹಿಂದುಳಿದ ತಾಲೂಕುಗಳಿಗಿಂತ ಮುಂದುವರೆದ ತಾಲೂಕುಗಳ ಗ್ರಾಮಪಂಚಾಯಿತಿಯ ಮಹಿಳಾ ಸದಸ್ಯರು ಉತ್ತಮವಾಗಿ ಅಭಿವೃದ್ಧಿಪರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ ಎಂಬುದನ್ನು ಗುರುತಿಸಲಾಗಿದೆ. ಈ ಅಧ್ಯಯನವು ಸಮಾಜೋ-ಆರ್ಥಿಕ ಸಂಗತಿಗಳಾದ ವಯಸ್ಸು, ಶಿಕ್ಷಣ, ಜಾತಿ, ಕುಟುಂಬದ ವಾರ್ಷಿಕ ಆದಾಯದ ಸುತ್ತ ಕೇಂದ್ರೀಕರಿಸಿಲಾಗಿದೆ. ಭೂ ಒಡೆತನ ಹೊಂದಿದ, ಶಿಕ್ಷಿತ ಮತ್ತು ಉತ್ತಮ ಆದಾಯವುಳ್ಳ ಕುಟುಂಬದ ಮಹಿಳೆಯರು ಅಭಿವೃದ್ಧಿಪರ ಚಟುವಟಿಕೆಗಳ ಜೊತೆಗೆ ನಿಕಟಸಂಬಂಧ ಮತ್ತು ಉತ್ತಮ ಪ್ರಗತಿಯನ್ನು ತೋರಿಸಿದ್ದಾರೆ. ಈ ಅಧ್ಯಯನದಿಂದ ಹೊರಬಂದ ಫಲಿತವೇನೆಂದರೆ, ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಸದಸ್ಯರ ಸಾಧನೆ ಗುರುತಿಸಿದರೆ ಮತ್ತು ಪ್ರೋತ್ಸಾಹಿಸಿದರೆ ಅವರು ಪ್ರಭಾವಿತ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳಲ್ಲಿ ದಕ್ಷತೆಯಿಂದ ತಮ್ಮ ಪಾತ್ರವನ್ನು ನಿರ್ವಹಿಸುತ್ತಾರೆ.

Arun & Rashmi(1997), *Role of Women in PanchayatRaj* ಇದು ಮಧ್ಯಪ್ರದೇಶದ ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರು ಕುರಿತು ಮಾಡಿದ ಕೇಸ್ ಸ್ಟಡಿ ಮಾದರಿಯ ಅಧ್ಯಯನವಾಗಿದೆ. ಪಂಚಾಯಿತಿಗೆ ಆಯ್ಕೆಯಾದ ಮಹಿಳೆಯರಲ್ಲಿ ಬಹುತೇಕ ಮಹಿಳಾ ಸದಸ್ಯರು ಗೃಹಿಣಿಯರು. ಇವರು ಪ್ರಥಮ ಬಾರಿಗೆ ತಳಮಟ್ಟದ ರಾಜಕೀಯ ಪ್ರವೇಶ ಮಾಡಿದ್ದಾರೆ. ಇವರಲ್ಲಿ ಅನಕ್ಷರಸ್ಥರು ಮತ್ತು ಪ್ರಾಥಮಿಕ ಶಿಕ್ಷಣ ಪಡೆದವರು ಬಹುತೇಕ ಮಹಿಳೆಯರು ಇದ್ದಾರೆ. ಆದರೆ ಇವರು ಎರಡು ವರ್ಷಗಳ ಅವಧಿಗಳ ನಂತರ ಸಾಕ್ಷರತೆ ಬೇಡಿಕೆ ಬಗ್ಗೆ ತಮ್ಮ ಕಾಳಜಿ ವ್ಯಕ್ತಪಡಿಸಿದ್ದು ಕಂಡುಬಂದಿದೆ. ಅಲ್ಲದೆ ಸಾಮಾನ್ಯವಾಗಿ ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅಗತ್ಯವಿದೆ ಎಂಬ ಭಾವನೆಯನ್ನು ಇವರು ತಮ್ಮ ಅಧ್ಯಯನದಲ್ಲಿ ಗುರುತಿಸಿಕೊಂಡಿದ್ದಾರೆ.

Nirmala Buch(2000), *Panchayatis and Women: Status of Panchayati Raj in the States and Union Territories of India* ಈ ಅಧ್ಯಯನದಲ್ಲಿ ನಿರ್ಮಲ ಬೂಚ್ ಅವರು 73ನೇ ತಿದ್ದುಪಡಿ ಮಾಡುವ ಮುಂಚೆ ಬಹುತೇಕವಾಗಿ 20 ಎಕರೆಗಿಂತ ಹೆಚ್ಚು ಭೂಮಿಯುಳ್ಳ ಕುಟುಂಬದ ಪ್ರಬಲವರ್ಗದ ಮಹಿಳೆಯರು ಗ್ರಾಮಪಂಚಾಯಿತಿಗೆ ಆಯ್ಕೆ ಆಗುತ್ತಿದ್ದರು. ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಮರಾಠರು ಮತ್ತು ಕರ್ನಾಟಕದಲ್ಲಿ ಒಕ್ಕಲಿಗರು ಮತ್ತು ಲಿಂಗಾಯಿತ ಮಹಿಳೆಯರು ಗ್ರಾಮಪಂಚಾಯಿತಿಗೆ ಆಯ್ಕೆಯಾಗುವುದನ್ನು ಗೊತ್ತುಪಡಿಸಿದ್ದಾರೆ. 73ನೇ ತಿದ್ದುಪಡಿಯ ನಂತರ ಇಂದು ಮಹಿಳಾ ಪ್ರಾತಿನಿಧ್ಯದ ಸ್ವರೂಪ ಬದಲಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅನಕ್ಷರಸ್ಥ ಮಹಿಳೆಯರು ಬಹುತೇಕವಾಗಿ ಆಯ್ಕೆ ಆಗುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಗ್ರಾಮಪಂಚಾಯಿತಿಗೆ ಆಯ್ಕೆಯಾದ ಮಹಿಳೆಯರಿಗೆ ಹೋಲಿಕೆ ಮಾಡಿದರೆ ಇಂದು ಆಯ್ಕೆಯಾಗುವ ಮಹಿಳೆಯರು ವಯಸ್ಕರಾಗಿದ್ದು, ಸಾರ್ವಜನಿಕವಾಗಿ ರಾಜಕೀಯ ಪ್ರವೇಶ ಪಡೆದ ಹೊಸ ತಲೆಮಾರಿನವರಾಗಿದ್ದಾರೆ. ಇವರ ಅಧ್ಯಯನದಲ್ಲಿ ಸಿಕ್ಕ ಮಾಹಿತಿಗಳ ಪ್ರಕಾರ ಪುರುಷರು

ಮಹಿಳಾ ಪ್ರಾತಿನಿಧ್ಯವನ್ನು ಬೆಂಬಲಿಸಿದ್ದಾರೆ. ಆದರೆ ಇದು ವ್ಯಾಪಕವಾಗಿ ಕಂಡುಬರುವುದಿಲ್ಲ. ಮಹಿಳೆಯರು ಗ್ರಾಮಪಂಚಾಯಿತಿಯನ್ನು ಪ್ರವೇಶಿಸುವುದಾದರೆ ಚಪಾತಿ ಮಾಡುವರು ಯಾರು ಎಂಬುದು ಅಲ್ಲಿನ ಜನರ ಪ್ರಶ್ನೆಯಾಗಿದೆಯೆಂಬುದನ್ನು ಗುರುತಿಸಿದ್ದಾರೆ. ಭಾರತದ ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳೆಯರು ಸಾಮಾಜಿಕವಾಗಿ ತಾರತಮ್ಯಕ್ಕೆ ಒಳಗಾಗಿದ್ದಾರೆ. ಇದರ ಫಲವಾಗಿ ಮಹಿಳೆಯರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಸಮಾನತೆಯ ಅವಕಾಶಗಳಿಂದ ವಂಚಿತರಾಗಿದ್ದಾರೆ. ತಳಮಟ್ಟದ ಆಡಳಿತದಲ್ಲಿನ ಭಾಗವಹಿಸುವಿಕೆ ಮತ್ತು ಅಭಿವೃದ್ಧಿ ಕುರಿತು ಈ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಆದರೆ ಮಹಿಳೆಯರ ವಿಷಯ ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಶ್ಲೇಷಣೆ ಕಂಡುಬರುವುದಿಲ್ಲ. ಒಟ್ಟಾರೆಯಾಗಿ ರಾಷ್ಟ್ರದ ಅಭಿವೃದ್ಧಿಗೆ ಗರಿಷ್ಠ ಮಟ್ಟದಲ್ಲಿ ಮಾನವ ಸಂಪನ್ಮೂಲವನ್ನು ಸಂಪೂರ್ಣವಾಗಿ ಮತ್ತು ಸಮರ್ಪಕವಾಗಿ ಬಳಸುವ ಅಗತ್ಯವಿದೆ. ಮಹಿಳೆಯರು ಸಂಪೂರ್ಣ ಪ್ರಮಾಣದಲ್ಲಿ ಭಾಗವಹಿಸುವುದರ ಮೂಲಕ ಅವರ ಸಬಲೀಕರಣ ಸಾಧ್ಯ. ಸಮಾಜದ ಬೃಹತ್‌ಪ್ರಮಾಣದ ಅಭಿವೃದ್ಧಿಗೆ ದೊಡ್ಡ ಪ್ರಮಾಣದಲ್ಲಿ ಮಹಿಳೆ ಭಾಗವಹಿಸುವುದು ಪ್ರಮುಖವಾದ ಅಂಶವಾಗಿದೆ. ಹೀಗಾಗಿ, ಮುಂದಿನ ರಾಜಕೀಯ ವಿದ್ಯಮಾನಗಳಲ್ಲಿ ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳಾ ಪ್ರಾತಿನಿಧ್ಯ ಅವರ ಸಬಲೀಕರಣಕ್ಕೆ ಪ್ರಮುಖ ಘಟ್ಟವಾಗಲಿದೆ ಎಂದು ತಿಳಿಸಿದ್ದಾರೆ.

ಕೊನೆ ಟಿಪ್ಪಣಿಗಳು

1. ಮಹಿಪಾಲ್, *"ವೈ ರಿಥಿಂಕ್ ರೋಟೇಶನ್ ಆಫ್ ರಿಜರ್ವೇಷನ್ ಇನ್ ಪಂಚಾಯತ್ಸ್?"*, *ಇಕಾಮಿಕ್ಸ್ ಅಂಡ್ ಪೋಲಿಟಿಕಲ್ ವೀಕ್ಲಿ*, ಮುಂಬೈ: ಎ ಸಮೀಕ್ಷ ಟ್ರಸ್ಟ್ ಪಬ್ಲಿಕೇಶನ್, ಜೂನ್ 6–12, 2008, ಪು. 70–71.
2. ಸುಧಾ ಪಿಳ್ಳೈ, ಮಾಳ್ಕೋಡ್(ಅನು), *"ಮಹಿಳೆಯ ಸಬಲೀಕರಣ ಮತ್ತು ಪಂಚಾಯತ್‌ರಾಜ್"*, *ಯೋಜನಾ*, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಸಂಪುಟ 27, ಸಂಚಿಕೆ 3, ಆಗಸ್ಟ್ 2001, ಪು. 42.
3. ಚಂದ್ರಶೇಖರ ಟಿ. ಆರ್, "ಮಹಿಳಾ ವಿಶ್ವವಿದ್ಯಾಲಯ ಒಂದು ಚರ್ಚೆ", ಚಂದ್ರಶೇಖರ. ಟಿ. ಆರ್ ಮತ್ತು ಚಂದ್ರ ಪೂಜಾರಿ. ಎಂ, (ಸಂ), *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಸಂಪುಟ–2, ಸಂಚಿಕೆ–2, ಜನವರಿ–ಜೂನ್, 2003, ಪುಟ.7
4. ಕನ್ನಡ ಪ್ರಭ, ದಿನಾಂಕ 27/8/2009 ಮತ್ತು ಪ್ರಜಾವಾಣಿ, ದಿನಾಂಕ 28/8/2009.
5. ಸುಧಾ ಪಿಳ್ಳೈ, ಮಾಳ್ಕೋಡ್, ಪೂರ್ವೋಕ್ತ,.
6. ಸಚ್ಚಿದಾನಂದ ಸತ್ಪತಿ, *ಮಹಿಳಾ ಸಬಲೀಕರಣ ಮತ್ತು ಪಂಚಾಯತ್‌ರಾಜ್: ಒರಿಸ್ಸಾ ಒಂದು ಅಧ್ಯಯನ*, ಎಂ.ಫಿಲ್ ಪ್ರಬಂಧ, Googal: Wikipedia Pdf.file, 2002, ಪು. 6.
7. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, *ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ*, ಬಳ್ಳಾರಿ: ಜಿಲ್ಲಾಪಂಚಾಯತ್, 2010.
8. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, *ಉತ್ತರ ಕನ್ನಡ ಜಿಲ್ಲಾ ಅಂಕಿ ಅಂಶಗಳ ನೋಟ*, ಕಾರವಾರ: ಜಿಲ್ಲಾ ಪಂಚಾಯತ್, 2009–10.

ಅಧ್ಯಾಯ ಎರಡು

ಗ್ರಾಮಪಂಚಾಯಿತಿ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ

ಪೀಠಿಕೆ

ಭಾರತ ವಿಶ್ವದಲ್ಲೇ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಭಾರತದ ಪ್ರಜಾಪ್ರಭುತ್ವದ ಯಶಸ್ವಿಗೆ ಅಧಿಕಾರ ವಿಕೇಂದ್ರೀಕರಣ ಅಡಿಪಾಯ. ಪ್ರಜಾಪ್ರಭುತ್ವದ ಯಶಸ್ಸಿಗೆ ಸ್ವಾತಂತ್ರ್ಯೋತ್ತರ ಭಾರತವು ಅಧಿಕಾರ ವಿಕೇಂದ್ರೀಕರಣ ಮತ್ತು ಪ್ರಾತಿನಿಧ್ಯ ಪ್ರಕ್ರಿಯೆಯನ್ನು ಆರಂಭಿಸಿತು. ಕೇಂದ್ರ, ರಾಜ್ಯ, ನಗರ ಹಾಗೂ ಗ್ರಾಮೀಣ ಮಟ್ಟಗಳಲ್ಲಿ ಅಧಿಕಾರವನ್ನು ಹಂಚಿಕೊಂಡು ಆಡಳಿತ ನಡೆಸುವುದು ಆಧಿಕಾರ ವಿಕೇಂದ್ರೀಕರಣದ ಮೂಲಮಂತ್ರ. ತಳಮಟ್ಟದ ಆಡಳಿತವಾದ ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯಕ್ಕಾಗಿ ಸಂವಿಧಾನಕ್ಕೆ 73ನೇ ತಿದ್ದುಪಡಿ ಮಾಡಿದ್ದರ ಫಲವಾಗಿ ಭಾರತದ ಪ್ರಜಾಪ್ರಭುತ್ವಕ್ಕೆ ಮತ್ತಷ್ಟು ಬಲ ಬಂದಾಗಿದೆ. ಈ ಕಾರಣಕ್ಕಾಗಿಯೇ *ಗ್ರಾಮಪಂಚಾಯಿತಿಯನ್ನು ತಳಮಟ್ಟದ ಪ್ರಜಾಪ್ರಭುತ್ವ* ಎನ್ನಲಾಗಿದೆ.

ಪ್ರಾಚೀನ ಭಾರತದಲ್ಲಿ ಸ್ಥಳೀಯ ಸಂಸ್ಥೆಗಳು ಚಿಕ್ಕ ಗಣರಾಜ್ಯಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು ಎಂದು ಹೇಳಲಾಗುತ್ತದೆ. ಇವುಗಳು ಗ್ರಾಮೀಣ ಸಮುದಾಯದ ಸಾಮಾಜಿಕ ಮತ್ತು ಧಾರ್ಮಿಕ ಆಡಳಿತದ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಬರುತ್ತಿದ್ದವು ಎಂಬದು ಕಂಡುಬರುತ್ತದೆ. ಆದರೆ ಆಗ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಇರಲಿಲ್ಲ. ಬ್ರಿಟಿಷ್ ಆಡಳಿತದ ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಗಳಿಗೆ ಮಹತ್ವದ ಬೆಳವಣಿಗೆ ಸಿಕ್ಕಿತು. ಪಂಚಾಯತ್‌ರಾಜ್ ವ್ಯವಸ್ಥೆಯು 1830ರಲ್ಲಿ ಬ್ರಿಟಿಷ್ ಗವರ್ನರ್ ಆಗಿದ್ದ ಸರ್ ಚಾರ್ಲ್ಸ್ ಮೆಟ್‌ಕಾಫ್‌ನ 'ಚಿಕ್ಕ ಗಣರಾಜ್ಯ'ದಿಂದ ಪ್ರಾರಂಭವಾಗಿ, ಗಾಂಧೀಜಿಯವರ 'ಗ್ರಾಮಸ್ವರಾಜ್ಯ' ಎಂಬ ರೂಪತಾಳಿ, ದೇಶದ ಪ್ರಥಮ ಪ್ರಧಾನಿ ನೆಹರು ಅವರ 'ಸಮುದಾಯದ ಘಟಕ'ವಾಗಿ, 1970ರಲ್ಲಿ ಕೇಂದ್ರದ ಸರ್ಕಾರದ 'ಸಮಗ್ರ ಗ್ರಾಮೀಣ ಅಭಿವೃದ್ಧಿ' ಕಾರ್ಯಕ್ರಮವಾಗಿ ವಿಕಾಸಗೊಂಡು ಐತಿಹಾಸಿಕ 73ನೇ ತಿದ್ದುಪಡಿ ಮೂಲಕ ಸಾಂವಿಧಾನಿಕ ಮಾನ್ಯತೆಯೊಂದಿಗೆ ವಿಕೇಂದ್ರೀಕರಣಗೊಂಡು, 2010ರಲ್ಲಿ ಶೇ.50ರಷ್ಟು ಲಿಂಗಸಮಾನ ಪ್ರಾತಿನಿಧ್ಯದೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿದೆ.

2.1 ಭಾರತದಲ್ಲಿ ಗ್ರಾಮಪಂಚಾಯಿತಿ ಬೆಳವಣಿಗೆ

ಭಾರತದಲ್ಲಿ ಆಳರಸರ ಕಾಲದಿಂದ ಬ್ರಿಟಿಷ್ ಆಡಳಿತ ಅವಧಿಯವರೆಗೆ ಸ್ಥಳೀಯ ಸರ್ಕಾರಗಳು ಅಸ್ತಿತ್ವದಲ್ಲಿದ್ದವು. ಆದರೆ ಅವುಗಳ ಆಡಳಿತಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾದ ಕಾಯ್ದೆ-ಕಾನೂನುಗಳ ಆಧಾರ ಇರಲಿಲ್ಲ. ಬ್ರಿಟಿಷ್ ಆಡಳಿತ ಅವಧಿಯಲ್ಲಿ ಸ್ವಯಂ ಆಡಳಿತ ಘಟಕಗಳು ದುರ್ಬಲಗೊಂಡವು. ಜನಸಾಮಾನ್ಯರಿಗೆ ಸ್ಥಳೀಯ ಸರ್ಕಾರಗಳ ಆಡಳಿತದಲ್ಲಿ ಭಾಗವಹಿಸುವ ಅವಕಾಶಗಳು ಇರಲಿಲ್ಲ. ಬ್ರಿಟಿಷರು ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಪ್ರೋತ್ಸಾಹಿಸಿದ್ದರಿಂದ ಅವು ಕ್ರಮೇಣ ಶಿಥಿಲಗೊಂಡವು. ಆದರೆ ಇವು ಹೊಸರೂಪ ಪಡೆದುಕೊಂಡವು. ಬ್ರಿಟಿಷ್ ಸರ್ಕಾರವು ಸ್ಥಳೀಯ ಜನರೊಂದಿಗೆ ಆಡಳಿತ ಸಂಪರ್ಕ ಇಟ್ಟುಕೊಳ್ಳಲು 'ಸರಪಂಚರ' ಸ್ಥಾನಗಳ ಬದಲಾಗಿ, ಗ್ರಾಮ ಪಟೇಲ, ಶಾನುಭೋಗ, ಗೌಡ ಎಂಬ ಇತ್ಯಾದಿ ಹುದ್ದೆಗಳನ್ನು ಹುಟ್ಟು ಹಾಕಿದರು.

ಬ್ರಿಟಿಷ್ ಆಡಳಿತಗಾರರಿಗೆ ಪಂಚಾಯತ್ ವ್ಯವಸ್ಥೆ ಆದ್ಯತೆಯ ಸಂಗತಿ ಆಗಿರಲಿಲ್ಲ.[2] ಬ್ರಿಟಿಷ್ ಆಡಳಿತಗಾರರು ಗ್ರಾಮೀಣ ಜನರಿಂದ ತೆರಿಗೆ ವಸೂಲಿ ಮಾಡುವ ವ್ಯಾಪಾರಿ ನೀತಿಯ ಉದ್ದೇಶದಿಂದ ನಿಯಂತ್ರಿತ ಸ್ಥಳೀಯ ಸಂಸ್ಥೆಗಳ ರಚನೆಗೆ ಆಸಕ್ತಿ ತೋರಿದರು. ಕಂಪನಿ ಸರ್ಕಾರವು ತನ್ನ ಆಡಳಿತ ಅವಧಿಯಲ್ಲಿ 1687ರಲ್ಲಿ ಮದ್ರಾಸ್ ಮುನ್ಸಿಪಲ್ ಕಾರ್ಪೋರೇಷನ್ ಹಾಗೂ 1726ರಲ್ಲಿ ಮುಂಬೈ ಮತ್ತು ಕಲ್ಕತ್ತಾ ಮುನ್ಸಿಪಲ್ ಕಾರ್ಪೋರೇಷನ್‌ಗಳನ್ನು ರಚನೆ ಮಾಡಿತು. 1857ರ ದಂಗೆಯ ನಂತರ ವಸಾಹತು ಆಡಳಿತವು ತೀವ್ರವಾಗಿ ಹಣಕಾಸಿನ ಒತ್ತಡಕ್ಕೆ ಸಿಲುಕಿತು. ಈ ಹಣಕಾಸಿನ ಒತ್ತಡದಿಂದ ಹೊರಬರಲು ವಿಕೇಂದ್ರೀಕರಣದ ಹೆಸರಿನಲ್ಲಿ ರಸ್ತೆ ಮತ್ತು ಇತರ ಸಾರ್ವಜನಿಕ ಕಾಮಗಾರಿಗಳ ಜವಾಬ್ದಾರಿಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲಾಯಿತು. ಹೀಗೆ ಒತ್ತಾಯಪೂರ್ವಕವಾಗಿ ನೂಕಲ್ಪಟ್ಟ ವಿಕೇಂದ್ರೀಕರಣದ ಫಲವಾಗಿ ಮುನ್ಸಿಪಲ್ ಆಡಳಿತವು ಅಸ್ತಿತ್ವಕ್ಕೆ ಬಂದಿತು.

1870ರಲ್ಲಿ ವೈಸ್‌ರಾಯ್ ಲಾರ್ಡ್ ಮೇಯೋ ಠರಾವು(ಆಡಳಿತದಲ್ಲಿ ದಕ್ಷತೆ ಕಂಡುಕೊಳ್ಳಲು ಮತ್ತು ವಸಾಹತು ಸರ್ಕಾರಕ್ಕೆ ಹಣಕಾಸಿನ ಮೂಲ ಹೆಚ್ಚಿಸುವ ಆರ್ಥಿಕ ವಿಕೇಂದ್ರೀಕರಣ ಉದ್ದೇಶದಿಂದ) ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಅಗತ್ಯ ಚಾಲನೆ ನೀಡಿತು. ಗ್ರಾಮೀಣ ಅಭಿವೃದ್ಧಿಯನ್ನು ಸಮರ್ಪಕವಾಗಿ ಸಾಧಿಸಲು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಅಥವಾ ಪಂಚಾಯತ್‌ರಾಜ್ ಪದ್ಧತಿಯನ್ನು ಜಾರಿಗೆ ತರಬೇಕೆಂದು 1871ರಲ್ಲಿ ಬಂಗಾಳದ ಲೆ. ಗರ್ವನರ್ ಆಗಿದ್ದ ಸರ್ ಜಾರ್ಜ್ ಕ್ಯಾಂಪ್‌ಬೆಲ್ ಶಿಫಾರಸ್ಸು ಮಾಡಿದ್ದರು.[3] ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ಸರ್ಕಾರ ಜಾರಿಗೆ ತಂದ ಕಾಯ್ದೆಗಳಲ್ಲಿ ಲಾರ್ಡ್ ರಿಪ್ಪನ್ ಮೇ 18, 1882ರಂದು ಹೊರಡಿಸಿದ ಸ್ಥಳೀಯ ಸರ್ಕಾರದ ರಚನೆಯ ಠರಾವು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳ ರಚನೆಗೆ ಹೆಚ್ಚು ಅವಕಾಶ ನೀಡಿತು. ಈ ಸ್ಥಳೀಯ ಸಂಸ್ಥೆಗಳು ನಾಮಕರಣಗೊಳ್ಳುವ ಅಧಿಕಾರಿಗಳ ಬದಲಾಗಿ ಬಹುಸಂಖ್ಯಾತ ಚುನಾಯಿತ ಸದಸ್ಯರಿಂದ ಕೂಡಿದ್ದವು. 1907ರಲ್ಲಿ 'ರಾಯಲ್ ಕಮೀಷನ್ ಆಫ್ ಡೀಸೆಂಟ್ರಲೈಜೇಷನ್' ವಿಕೇಂದ್ರೀಕರಣದ ಹಿತದೃಷ್ಟಿಯಿಂದ ಹಾಗೂ ಸ್ಥಳೀಯ ಆಡಳಿತದಲ್ಲಿ ಜನರ ಸಹಭಾಗಿತ್ವ ಹೊಂದುವ ಉದ್ದೇಶದಿಂದ ಗ್ರಾಮಪಂಚಾಯಿತಿಗಳ ರಚನೆ ಮತ್ತು ಅಭಿವೃದ್ಧಿ ಅತ್ಯವಶ್ಯಕ ಸಂಗತಿಯಾಗಿದೆ

ಎಂಬುದನ್ನು ಶಿಫಾರಸ್ಸು ಮಾಡಿತು. ಮಾಂಟೆಗೊ ಮತ್ತು ಚೇಮ್ಸ್‌ಫರ್ಡ್ ಸುಧಾರಣೆಗಳು(1919) ಸಹ ಆಡಳಿತದಲ್ಲಿ ಬೇಕಾದ ಕಾರ್ಯಕ್ಷಮತೆಯ ದೃಷ್ಟಿಯಿಂದ ವಿಕೇಂದ್ರೀಕರಣ ಸೂಕ್ತ ಹಾಗೂ ಸ್ಥಳೀಯ ಆಡಳಿತಕ್ಕೆ ಗ್ರಾಮಪಂಚಾಯಿತಿಯೇ ಉತ್ತಮ ಸಂಸ್ಥೆ ಎಂದು ಶಿಫಾರಸ್ಸು ಮಾಡಿತು.[4] 1919 ಮತ್ತು 1935ರ ಭಾರತ ಸರ್ಕಾರದ ಕಾಯ್ದೆಗಳು ಪಂಚಾಯಿತಿಗಳ ರಚನೆ, ಅಧಿಕಾರ, ಕಾರ್ಯಗಳು ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾಂತೀಯ ಸರ್ಕಾರಗಳಿಗೆ ಹೆಚ್ಚಿನ ಅಧಿಕಾರ, ಸ್ವಾಯತ್ತತೆ ಮತ್ತು ಜವಾಬ್ದಾರಿಯನ್ನು ನೀಡಿದವು. ಬ್ರಿಟಿಷರು ಸ್ಥಳೀಯ ಆಡಳಿತ ಸಂಸ್ಥೆಗಳನ್ನು ರಚಿಸಿದರೂ ಅವು ನೈಜಪ್ರಭುತ್ವ ಸಂಸ್ಥೆಗಳಾಗಿ ರಚನೆಗೊಳ್ಳದೇ ನಿಯಂತ್ರಿತ ಪ್ರಜಾಸತ್ತಾತ್ಮಕ ಘಟಕಗಳಾಗಿದ್ದವು. ಅವು ತಮಗೆ ವಹಿಸಿದ ಕಾರ್ಯಗಳನ್ನು ಮಾತ್ರ ನಿರ್ವಹಿಸುತ್ತಿದ್ದವು. ಅವು ಸ್ವಾಯತ್ತತಾ ಘಟಕಗಳಾಗಿರಲಿಲ್ಲ. ಬ್ರಿಟಿಷರಿಗೆ ವಸಾಹತುಶಾಹಿ ಉದ್ದೇಶವೇ ಮುಖ್ಯವಾಗಿತ್ತೇ ವಿನಾ ಪ್ರಜಾಪ್ರಭುತ್ವದ ವಿಕೇಂದ್ರೀಕರಣದ ಉದ್ದೇಶ ಇರಲಿಲ್ಲ.[5]

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 1920ರಿಂದ 1947ರವರೆಗೆ ಮಹಾತ್ಮ ಗಾಂಧೀಜಿಯವರ ನಾಯಕತ್ವದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಸಂಘಟಿಸಿ, ಪೂರ್ಣ ಸ್ವರಾಜ್ಯ ಘೋಷಿಸಿತು. ಗಾಂಧೀಜಿಯವರು ಗ್ರಾಮಸ್ವರಾಜ್ಯದ ಪರವಾಗಿದ್ದವರು. ಸ್ವರಾಜ್ಯವೆಂದರೆ, ಗ್ರಾಮಸ್ವರಾಜ್ಯ; ಗ್ರಾಮ ಸ್ವಯಂ ಆಡಳಿತ ಸ್ಥಾಪಿಸುವುದೇ ಅವರ ರಾಷ್ಟ್ರೀಯ ಆದರ್ಶ. ಗ್ರಾಮಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ನೀಡಿ, ಬಲಪಡಿಸಲು ಬಯಸಿದ್ದರು. ಹೀಗಾಗಿ, ಗ್ರಾಮಗಳು ಸ್ವಾವಲಂಬನೆಯಾಗಬೇಕಾದರೆ, ಅವು ಚುನಾಯಿತ ಸಂಸ್ಥೆಗಳ ಮೂಲಕ ಸ್ವಯಂಅಧಿಕಾರ ಪಡೆಯಬೇಕು ಎಂಬುದು ಗಾಂಧೀಜಿಯವರ ಉನ್ನತ ಧ್ಯೇಯವಾಗಿತ್ತು. ಆದರೆ ಡಾ.ಬಿ.ಆರ್. ಅಂಬೇಡ್ಕರ್ ಗ್ರಾಮಸ್ವರಾಜ್ಯದ ಕಲ್ಪನೆಯನ್ನು ಸಂಪೂರ್ಣವಾಗಿ ವಿರೋಧಿಸಿದರು. ಗ್ರಾಮಪಂಚಾಯಿತಿಗಳು ಮೇಲ್ಜಾತಿ ಮತ್ತು ಮೇಲ್ವರ್ಗವನ್ನು ಪ್ರತಿನಿಧಿಸುತ್ತವೆ; ಶೋಷಣೆಯ ಮೂಲ ಆಗುತ್ತವೆ; ಭಾರತವನ್ನು ಹಿಮ್ಮೆಟ್ಟಿಸುತ್ತವೆ ಎಂದು ನಂಬಿದ್ದರು. ಕಾರಣ, ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಳೀಯ ಆಡಳಿತಾಧಿಕಾರವು ಜಮೀನ್ದಾರರ, ಮೇಲ್ವರ್ಗದವರ ಕೈಯಲ್ಲಿ ಕೇಂದ್ರೀಕೃತಗೊಂಡಿತ್ತು. ಅಂತಹ ಪರಿಸ್ಥಿತಿಯಲ್ಲಿ ಗ್ರಾಮಸ್ವರಾಜ್ಯ ಜಾರಿಗೆ ತಂದಿದ್ದರೆ, ಈ ಮೇಲ್ವರ್ಗಗಳು ಅಧಿಕಾರದ ಲಾಭವನ್ನು ಪಡೆಯುತ್ತವೆ. ಗ್ರಾಮದ ದುರ್ಬಲರು, ಕೆಳಜಾತಿ ಮತ್ತು ಮಹಿಳೆಯರು ಹೆಚ್ಚು ಶೋಷಣೆಗೆ ಒಳಗಾಗುತ್ತಾರೆ ಎಂದು ಅರಿತ್ತಿದ್ದರು. ಹೀಗಾಗಿ ಸಂವಿಧಾನ ರಚನೆ ವೇಳೆಯಲ್ಲಿ ಗ್ರಾಮಪಂಚಾಯಿತಿಯನ್ನು ನ್ಯಾಯಾಂಗದ ರಕ್ಷಣೆಗೆ ಒಳಪಡದ(ನ್ಯಾಯಸಮ್ಮತವಲ್ಲದ) ಸಂವಿಧಾನದ ನಾಲ್ಕನೇ ಭಾಗವಾದ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಸೇರ್ಪಡಿಸಲಾಗಿದೆ. ರಾಜ್ಯವು ಗ್ರಾಮಪಂಚಾಯಿತಿಗಳನ್ನು ಸ್ಥಾಪಿಸಿ, ಅವು ಸ್ಥಳೀಯ ಸರ್ಕಾರಗಳಂತೆ ಕೆಲಸ ಮಾಡಲು ಅಧಿಕಾರಗಳನ್ನು ನೀಡಬೇಕೆಂದು ಸಂವಿಧಾನದ 40ನೇ ವಿಧಿ ತಿಳಿಸುತ್ತದೆ. ಗ್ರಾಮಪಂಚಾಯಿತಿಗಳ ಸ್ಥಾಪನೆಯ ಮೂಲ ಉದ್ದೇಶ, ಗ್ರಾಮೀಣ ಸಮುದಾಯದ ಜನರು ಸ್ಥಳೀಯರನ್ನೇ ತಮ್ಮ ಪ್ರತಿನಿಧಿಗಳಾಗಿ ಆಯ್ಕೆ ಮಾಡುವ ಮತ್ತು ನೀತಿ-ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಅವಕಾಶ ಕಲ್ಪಿಸಿಕೊಡುವುದಾಗಿದೆ. ಹೀಗಿದ್ದರೂ, ರಾಷ್ಟ್ರ ಅಥವಾ ರಾಜ್ಯಮಟ್ಟದಲ್ಲಿ ಗ್ರಾಮಪಂಚಾಯಿತಿ ಬಲವರ್ಧನೆಗೆ

ಕುರಿತಂತೆ ಸೂಕ್ತ ಶಾಸನಗಳು ಜಾರಿಗೆ ಬರಲಿಲ್ಲ. ಭಾರತದ ಸಂವಿಧಾನ ಜಾರಿಗೆ ಬಂದು ನಾಲ್ಕು ದಶಮಾನಗಳ ನಂತರ ಸಂವಿಧಾನದ 73ನೇ ತಿದ್ದುಪಡಿ ಮೂಲಕ ನ್ಯಾಯಸಮ್ಮತವಲ್ಲದ ಭಾಗದಿಂದ ಪ್ರಯಾಣ ಬೆಳೆಸಿ, ಹೊರಬಂದ ಗ್ರಾಮಪಂಚಾಯಿತಿಗಳು ಸಂವಿಧಾನಾತ್ಮಕ ಮನ್ನಣೆ ಪಡೆದು ಹೊಸ ಘನತೆ ಗೌರವದೊಂದಿಗೆ ತನ್ನ ಇತಿಹಾಸವನ್ನು ಮರುಸೃಷ್ಟಿಸಿವೆ.[11]

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಹಲವಾರು ಹಂತಗಳನ್ನು ದಾಟಿ ಮುಂದೆ ಸಾಗಿ ಬಂದಿದೆ. 1959ರಲ್ಲಿ ಸಮುದಾಯದ ಅಭಿವೃದ್ಧಿ ಯೋಜನೆಗಳ ಭಾಗವಾಗಿ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಸಂಘಟಿಸುವ ಪ್ರಯತ್ನ ಮಾಡಲಾಯಿತು. ಅಭಿವೃದ್ಧಿ ಪಾರುಪತ್ಯಕ್ಕೆ ಸಂಬಂಧಿಸಿದಂತೆ ಇವುಗಳನ್ನು ರಾಜಕೀಯೇತರ ಸಂಸ್ಥೆಗಳೆಂದು ಪರಿಗಣಿಸಲಾಗಿತು. ಭಾರತೀಯ ಗ್ರಾಮಗಳ ಸ್ವಾವಲಂಬನೆ ಮತ್ತು ಪ್ರತ್ಯೇಕತೆಯ ರಮ್ಯಾತ್ಮಕ ದೃಷ್ಟಿಕೋನದೊಂದಿಗೆ ಪಂಚಾಯತ್ ಕುರಿತು ಈ ನಿಲುವಿಗೆ ಮನ್ನಣೆ ದೊರಕಿತು.[12] ಕೇಂದ್ರ ಸರ್ಕಾರವು ಗ್ರಾಮೀಣ ಜನರ, ವಿಶೇಷವಾಗಿ ಹಿಂದುಳಿದ ಜಾತಿ ಮತ್ತು ವರ್ಗಗಳ ಕಲ್ಯಾಣಕ್ಕಾಗಿ ಕ್ರಮ ಕೈಗೊಂಡಿತು. ಮೊದಲ ಬಾರಿಗೆ ಪಂಚವಾರ್ಷಿಕ ಯೋಜನೆಗಳ ಮೂಲಕ ಸಮುದಾಯದ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ಸೇವಾ ವಿಸ್ತರಣಾ ಯೋಜನೆಗಳು ಜಾರಿಗೆ ಬಂದವು. ಈ ಯೋಜನೆಗಳ ಮುಖ್ಯ ಉದ್ದೇಶ ಗ್ರಾಮೀಣ ಜನರ ವೈಯಕ್ತಿಕ ಮತ್ತು ಸಮುದಾಯದ ಬದುಕಿನಲ್ಲಿ ಸುಧಾರಣೆ ಮತ್ತು ನ್ಯಾಯ ದೊರಕಿಸಿಕೊಡುವುದಾಗಿತ್ತು. ಅನ್ನ, ನೀರು, ಬಟ್ಟೆ, ವಸತಿ ಮುಂತಾದ ಅಗತ್ಯ ಸಂಗತಿಗಳನ್ನು ತಳಮಟ್ಟದ ಜನರಿಗೆ ತಲುಪಿಸುವುದು ಹಾಗೂ ಶಿಕ್ಷಣ, ಆರೋಗ್ಯ, ರಸ್ತೆ, ಸಾರಿಗೆ, ಸಂಪನ್ಮೂಲ ಮುಂತಾದ ಅಭಿವೃದ್ಧಿ ಸಂಗತಿಗಳ ಬಗ್ಗೆ ನೀತಿ–ನಿರ್ಣಯ ಕೈಗೊಳ್ಳುವ ಹಾಗೂ ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ಜನರನ್ನು ಭಾಗವಹಿಸುವಂತೆ ಮತ್ತು ತೊಡಗಿಸಿಕೊಳ್ಳುವಂತೆ ಮಾಡುವುದಾಗಿತ್ತು. ಆದರೆ ಈ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸುವ ಮತ್ತು ಜಾರಿಗೆ ತರುವ ಪ್ರಕ್ರಿಯೆಯಲ್ಲಿ ಗ್ರಾಮೀಣ ಜನರನ್ನು ಭಾಗವಹಿಸುವಂತೆ ಮಾಡುವಲ್ಲಿ ಮತ್ತು ಅವರಲ್ಲಿ ನಾಯಕತ್ವ ಗುಣವನ್ನು ಬೆಳೆಸುವಲ್ಲಿ ಮೊದಲು ಪಂಚವಾರ್ಷಿಕ ಯೋಜನೆ ಯಶಸ್ಸು ಕಾಣಲಿಲ್ಲ. ಎರಡನೇ ಪಂಚವಾರ್ಷಿಕ ಯೋಜನೆಯ ವೇಳೆಗೆ ರಾಷ್ಟ್ರೀಯ ಸೇವಾವಿಸ್ತರಣಾ ಕೇಂದ್ರಗಳು ರಾಷ್ಟ್ರವ್ಯಾಪ್ತಿಯಾಗಿ ಇಡೀ ಗ್ರಾಮೀಣ ಪ್ರದೇಶ(ಸಮುದಾಯ)ವನ್ನು ವ್ಯಾಪಿಸಿತು. ಆದರೆ ಈ ಯೋಜನೆಯು ಸಹ ಉದ್ದೇಶಿತ ವಿಕೇಂದ್ರೀಕರಣವನ್ನು ಸಫಲಗೊಳಿಸುವಲ್ಲಿ ವಿಫಲವಾಯಿತು.

ಕೇಂದ್ರ ಸರ್ಕಾರವು ಗ್ರಾಮಪಂಚಾಯಿತಿಗಳನ್ನು ಸಂಘಟಿಸುವ ಮತ್ತು ಜಾರಿಗೆ ತಂದ ಯೋಜನೆಗಳನ್ನು ತಳಮಟ್ಟದ ಜನರಿಗೆ ತಲುಪಿಸುವ ಪ್ರಯತ್ನವನ್ನು ಮುಂದುವರಿಸಿತು. ಒಂದು, ಅಭಿವೃದ್ಧಿ ಯೋಜನೆಗಳ ಮೂಲಕ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತರುವ ಪ್ರಯತ್ನ. ಎರಡು, ವಿಕೇಂದ್ರೀಕರಣ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗ್ರಾಮೀಣ ಜನರಿಗೆ ತಲುಪಿಸುವ ಪ್ರಯತ್ನ. ತನ್ಮೂಲಕ ಗ್ರಾಮಪಂಚಾಯಿತಿಗಳನ್ನು ಸ್ವಾಯತ್ತತೆ ಸಂಸ್ಥೆಗಳನ್ನಾಗಿ ಮಾಡಿ, ಗ್ರಾಮೀಣ ಸಮುದಾಯದ ಹಿಂದುಳಿದ ಜಾತಿ ಹಾಗೂ ದುರ್ಬಲ ವರ್ಗದ ಜನರು ಅಭಿವೃದ್ಧಿ ಯೋಜನೆ

ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿಕೊಡುವುದು. ಆದರೆ ಭಾರತ ಬಾಹ್ಯವಾಗಿ ಸ್ವಾತಂತ್ರ್ಯಗೊಂಡಿತ್ತೇ ವಿನಾ ಆಂತರಿಕವಾಗಿ ಸ್ವಾತಂತ್ರ್ಯಗೊಂಡಿರಲಿಲ್ಲ. ಭಾರತ ಊಳಿಗಮಾನ್ಯ ಲಕ್ಷಣ, ಜಾತಿ ವ್ಯವಸ್ಥೆ ಮತ್ತು ಲಿಂಗ ಅಸಮಾನತೆಗಳಿಂದ ಮುಕ್ತವಾಗಿರಲಿಲ್ಲ. ಮೇಲ್ಮಟ್ಟದ ಸರ್ಕಾರಗಳು ಗ್ರಾಮಪಂಚಾಯಿತಿಗಳ ಆಡಳಿತಕ್ಕೆ ಒಂದು ಚೌಕಟ್ಟನ್ನು ನೀಡಿದ್ದರೂ ಸಹ ಅದರಲ್ಲಿ ಎಲ್ಲ ವರ್ಗಗಳ ಪ್ರಾತಿನಿಧ್ಯ ಇರಲಿಲ್ಲ. ಸಮುದಾಯದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಉದ್ದೇಶಿತ ತಳಮಟ್ಟದ ಜನರಿಗೆ ಪ್ರಾತಿನಿಧ್ಯ ಇರಲಿಲ್ಲ. ಇವು ಗ್ರಾಮೀಣ ಜನರನ್ನು ಸಬಲೀಕರಣದತ್ತ ಕೊಂಡೊಯ್ಯುವ ನಿರೀಕ್ಷಿತ ಭರವಸೆ ಮೂಡಿಸಲಿಲ್ಲ. ಈ ನಿರೀಕ್ಷಿತ ಉದ್ದೇಶಕ್ಕಾಗಿಯೇ ಈ ಯೋಜನೆಗಳನ್ನು ಮೌಲ್ಯಮಾಪನ ಮಾಡುವ ಅಗತ್ಯವಿದೆ ಎಂದು ಕೇಂದ್ರ ಸರ್ಕಾರ ನಿರ್ಧರಿಸಿತು. ಅಭಿವೃದ್ಧಿ ಲಾಭಗಳು ಗ್ರಾಮೀಣ ಜನರಿಗೆ ಏಕೆ ತಲುಪುತ್ತಿಲ್ಲ ಎಂದು ಜನವರಿ, 1957ರಲ್ಲಿ ರಾಷ್ಟ್ರೀಯ ಯೋಜನಾ ಆಯೋಗವು ಬಲವಂತರಾಯ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಮೌಲ್ಯಮಾಪನ ಮಾಡಲು ಅಧ್ಯಯನ ಸಮಿತಿ ರಚಿಸಿತು.[13] ಈ ಸಮಿತಿಯು ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ ತಳಮಟ್ಟದ ರಾಜಕೀಯ ಪ್ರಕ್ರಿಯೆಯಲ್ಲಿ ಊಳಿಗಮಾನ್ಯ ಗುಣಲಕ್ಷಣಗಳಿಂದ ಮುಕ್ತವಾಗಿಲ್ಲ. ಸರ್ಕಾರದ ನೇತೃತ್ವದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಸವಲತ್ತುಗಳು ಸ್ಥಳೀಯ ಬಲಾಢ್ಯರ ಮೂಲಕವೇ ಹಾದು ಜನಸಾಮಾನ್ಯರಿಗೆ ತಲುಪಬೇಕಾಗಿದೆ. ಇದರಿಂದಾಗಿ ಅಭಿವೃದ್ಧಿಯ ಲಾಭ ಜನಸಾಮಾನ್ಯರಿಗೆ ತಲುಪುತ್ತಿಲ್ಲ.[14] ಆದ್ದರಿಂದ ಗ್ರಾಮಮಟ್ಟದಲ್ಲಿ ಜನರಿಂದ ನೇರವಾಗಿ ಚುನಾಯಿತಗೊಂಡ ಗ್ರಾಮಪಂಚಾಯಿತಿಗಳು ಇರಬೇಕೆಂದು ಶಿಫಾರಸ್ಸು ಮಾಡಿತು. ಅಲ್ಲದೇ ಈ ಅಭಿವೃದ್ಧಿ ಯೋಜನೆಗಳು ಮೇಲ್ಮಟ್ಟದ ಸರ್ಕಾರಗಳಲ್ಲಿ ರೂಪುಗೊಳ್ಳುತ್ತಿರುವುದರಿಂದ ಇವು ಗ್ರಾಮೀಣ ಜನರ ವಾಸ್ತವ ಬೇಕು ಬೇಡಿಕೆ ಮತ್ತು ಸಮಸ್ಯೆಗಳನ್ನು ಈಡೇರಿಸುವ ಗುರಿ ಹೊಂದಿರುವುದಿಲ್ಲ. ಅಧಿಕಾರ ಮತ್ತು ಯೋಜನೆ ತಯಾರಿಸುವಲ್ಲಿ ವಿಕೇಂದ್ರೀಕರಣ ಆಗದೇ ಇರುವುದು ಸ್ಥಳೀಯ ಸಂಸ್ಥೆಗಳು ಸಂಪೂರ್ಣ ಅಧಿಕಾರ ಪಡೆಯದೇ ಇರುವುದಕ್ಕೆ ಮುಖ್ಯ ಕಾರಣವಾಗಿದೆ. ಸ್ಥಳೀಯ ಆಡಳಿತದಲ್ಲಿ ಪ್ರಾತಿನಿಧ್ಯ ಮತ್ತು ಅಭಿವೃದ್ಧಿ ಲಾಭಾಂಶವನ್ನು ಪಡೆದುಕೊಳ್ಳುವಲ್ಲಿ ಮೇಲ್ವರ್ಗದವರೇ ಸಿಂಹಪಾಲು ಪಡೆದುಕೊಂಡಿರುವರು. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮೆಹತಾ ಸಮಿತಿ ಕೇಂದ್ರೀಕೃತ ವ್ಯವಸ್ಥೆಯಿಂದ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಆಗದೆಂದು, ಅಧಿಕಾರ ವಿಕೇಂದ್ರೀಕರಣಕ್ಕೆ ಸಲಹೆ ಮಾಡಿತು. ಮೆಹತಾ ಸಮಿತಿಯು ಯೋಜನೆಗಳನ್ನು ರೂಪಿಸುವ, ನಿರ್ಧಾರ ತೆಗೆದುಕೊಳ್ಳುವ ಮತ್ತು ಜಾರಿಗೆ ತರುವ ಪ್ರಕ್ರಿಯೆಯಲ್ಲೇ ಗ್ರಾಮೀಣ ಜನರು ಸಕ್ರಿಯವಾಗಿ ಭಾಗವಹಿಸಬೇಕೆಂಬ ಉದ್ದೇಶದಿಂದ ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಗೆ ಶಿಫಾರಸ್ಸು ಮಾಡಿತು. 1958 ಜನವರಿ 12ರಂದು ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯು ಮೆಹತಾ ಸಮಿತಿಯ ವರದಿಯನ್ನು ಕೆಲವೊಂದು ಸೂಕ್ತ ಬದಲಾಣೆಯೊಂದಿಗೆ ಅಂಗೀಕರಿಸಿ, ಆಚರಣೆಗೆ ತರಲು ರಾಜ್ಯಗಳಿಗೆ ಅಧಿಕಾರವನ್ನು ನೀಡಿತು. ಅಕ್ಟೋಬರ್ 2, 1959 ರಂದು ರಾಜಸ್ಥಾನದಲ್ಲಿ ಮತ್ತು ಅಕ್ಟೋಬರ್ 11, 1959 ಆಂಧ್ರಪ್ರದೇಶದ ಶಾದ್ ನಗರದಲ್ಲಿ ಮೊದಲ ಬಾರಿಗೆ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೆ ಬಂದಿತು. ಈ ವ್ಯವಸ್ಥೆ ಯಶಸ್ವಿಯಾಗಲು ಬೇಕಾದ

ಜನರ ಸಹಭಾಗಿತ್ವವನ್ನು ಪಡೆದುಕೊಳ್ಳುವಲ್ಲಿ ಸಫಲವಾಗಲಿಲ್ಲ. ಇದಕ್ಕೆ ಅಧಿಕಾರ ಮತ್ತು ಆರ್ಥಿಕ ಸಂಪನ್ಮೂಲಗಳ ಕೊರತೆ, ಸ್ಥಳೀಯ ಮೇಲ್ಜಾತಿ ಮತ್ತು ಮೇಲ್ವರ್ಗದ ಮುಖಂಡರ ಸ್ವಾರ್ಥ ಮನೋಭಾವನೆಗಳು ವಿಕೇಂದ್ರೀಕರಣದ ವಿಫಲತೆಗೆ ಕಾರಣವೆನ್ನಲಾಗುತ್ತದೆ.

ಪಂಚಾಯತ್‌ರಾಜ್ ಸಂಸ್ಥೆಗಳ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ 1963ರಲ್ಲಿ ಕೆ. ಸಂತಾನಮ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚನೆ ಮಾಡಲಾಯಿತು. ಮೇಲ್‌ಹಂತದ ಸರ್ಕಾರಗಳು ಪೂರ್ವವಾಗಿ ಶ್ರೀಮಂತ ಆದಾಯ ಮೂಲಗಳ ಮೇಲೆ ವಿಕ್ರಯಾಧಿಕಾರವನ್ನು ಪಡೆದಿರುವುದರಿಂದ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಆರ್ಥಿಕ ಸಾಮರ್ಥ್ಯ ಕಡಿಮೆ ಇದೆ. ಹೀಗಾಗಿ ಪಂಚಾಯತ್‌ರಾಜ್ ಸಂಸ್ಥೆಗಳು ಆರ್ಥಿಕ ತೊಂದರೆಗಳಿಂದ ಹೊರಬರಲು ರಾಜ್ಯ ಸರ್ಕಾರ ಅನುದಾನಗಳನ್ನು ನೀಡಬೇಕು. ಇದು ಮೂರು ಹಂತದ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಪರಸ್ಪರ ಆರ್ಥಿಕ ಸಂಬಂಧವನ್ನು ಕ್ರಮವಾಗಿ ವಿಸ್ತರಿಸಬೇಕೆಂದು ತನ್ನ ವರದಿಯಲ್ಲಿ ತಿಳಿಸಿತು. ಪಂಚವಾರ್ಷಿಕ ಯೋಜನೆಗಳ ಫಲ ದುರ್ಬಲ ವರ್ಗಗಳಿಗೆ ಏಕೆ ತಲುಪುತ್ತಿಲ್ಲ ಎಂದು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಲು 1974ರಲ್ಲಿ ದಂತವಾಲ ಇವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚನೆ ಮಾಡಲಾಯಿತು. ಈ ಸಮಿತಿಯು ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಗೆ ಸರ್ಕಾರ ಜಾರಿಗೆ ತರುವ ಅಭಿವೃದ್ಧಿ ಯೋಜನೆಗಳಲ್ಲಿ ಸ್ಥಳೀಯರನ್ನು ತೊಡಗಿಸಿಕೊಳ್ಳಬೇಕೆಂದು ಶಿಫಾರಸ್ಸು ಮಾಡಿತು.[15] ಪ್ರಧಾನಿ ನೆಹರು ಮರಣದ ನಂತರ ಅಧಿಕಾರಕ್ಕೆ ಬಂದ ಪ್ರಧಾನಿಗಳು ಪಂಚಾಯತ್‌ರಾಜ್ ಸಂಸ್ಥೆಗಳ ಬಗ್ಗೆ ಹೆಚ್ಚು ಒಲವು ಮತ್ತು ಆಸಕ್ತಿ ತೋರಲಿಲ್ಲ. ಇಂತಹ ಸಂದರ್ಭದಲ್ಲಿ 1977ರಲ್ಲಿ ಮೊದಲ ಬಾರಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರವು ಪಂಚಾಯತ್‌ರಾಜ್ ವ್ಯವಸ್ಥೆಗೆ ಹೊಸ ಕಾಯಕಲ್ಪ ನೀಡುವ ಪ್ರಯತ್ನ ಮಾಡಿತು. ಈ ಸರ್ಕಾರವು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಕಂಡುಬರುವ ದೌರ್ಬಲ್ಯಗಳನ್ನು ನಿವಾರಿಸಿ ಅವುಗಳಿಗೆ ಹೆಚ್ಚು ಅಧಿಕಾರಗಳನ್ನು ನೀಡುವುದಕ್ಕೆ ಇರುವ ಸಾಧ್ಯಾಸಾಧ್ಯತೆಗಳ ಬಗ್ಗೆ ತಿಳಿಸಲು 1977ರಲ್ಲಿ ಅಶೋಕ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚನೆ ಮಾಡಿತು. ಈ ಸಮಿತಿಯು, "ಜನತಾಂತ್ರಿಕ ವಿಕೇಂದ್ರೀಕರಣಕ್ಕೆ ಪಂಚಾಯಿತಿಗಳೇ ಅವಿಭಾಜ್ಯ ಅಂಗ. ಗ್ರಾಮಸಭೆಯೇ ಪಂಚಾಯತ್‌ರಾಜ್ ವ್ಯವಸ್ಥೆಗೆ ಬುನಾದಿ". ಇಲ್ಲವಾದಲ್ಲಿ ಜನತಾಂತ್ರಿಕ ವಿಕೇಂದ್ರೀಕರಣಕ್ಕೆ ಅರ್ಥವಿಲ್ಲ[16] ಎಂಬ ಅಭಿಪ್ರಾಯದೊಂದಿಗೆ 1978ರಲ್ಲಿ ಕೇಂದ್ರ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಜನತಾಂತ್ರಿಕ ವ್ಯವಸ್ಥೆಯಲ್ಲಿ ಗ್ರಾಮೀಣ ಜನರ ಸಹಭಾಗಿತ್ವ ಸ್ಪಷ್ಟವಾಗಿ ಕಂಡುಬರಬೇಕಾದರೆ ಅಧಿಕಾರ ವಿಕೇಂದ್ರೀಕರಣವಾಗಬೇಕು ಎಂದು ತನ್ನ ವರದಿಯಲ್ಲಿ ಹೇಳಿ ದೇಶಾದ್ಯಂತ ಮಂಡಲಪಂಚಾಯಿತಿ ಮತ್ತು ಜಿಲ್ಲಾಪರಿಷತ್ ಎಂಬ ಎರಡು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲು ಶಿಫಾರಸ್ಸು ಮಾಡಿತು. ಈ ಸಮಿತಿಯ ವರದಿಯು ಅನುಷ್ಠಾನಕ್ಕೆ ಬರುವ ಮೊದಲೇ ಮೊರಾರ್ಜಿ ದೇಸಾಯಿ ಸರ್ಕಾರ ಪತನವಾಯಿತು. ಹೀಗಾಗಿ ಈ ಸಮಿತಿಯ ಶಿಫಾರಸ್ಸುಗಳು ಕಾರ್ಯರೂಪಕ್ಕೆ ಬರಲೇ ಇಲ್ಲ. ಆದರೆ ಕರ್ನಾಟಕ, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳ

ಸರ್ಕಾರಗಳು ಅಶೋಕ್ ಮೆಹತಾ ಸಮಿತಿ ಶಿಫಾರಸ್ಸಿನ ಆಧಾರದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಗೆ ಮರುಜೀವ ನೀಡಿದವು.

ಇಲ್ಲಿಯವರೆಗೆ ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯು ಎರಡು ಹಂತಗಳ ಬೆಳವಣಿಗೆ ಪಡೆದುಕೊಂಡಿತು. ಮೊದಲನೇ ಹಂತದಲ್ಲಿ ಅವು ಅಭಿವೃದ್ಧಿ ಏಜೆನ್ಸಿಗಳಾಗಿದ್ದವು. ಎರಡನೇ ಹಂತದಲ್ಲಿ ಅವು ರಾಜಕೀಯ ಸಂಸ್ಥೆಗಳಾಗಿ ರೂಪುಗೊಂಡವು. ಇವು ದೇಶದಾದ್ಯಂತ ಕೆಳಹಂತದಲ್ಲಿ ವ್ಯಾಪಕವಾಗಿ ಹರಡಿಕೊಂಡವು. 1987ರಲ್ಲಿ ಕರ್ನಾಟಕದಲ್ಲೊಂದೇ 2,500 ಮಂಡಲಪಂಚಾಯಿತಿಗಳು ಕಾರ್ಯ ನಿರ್ವಹಿಸುತ್ತಿದ್ದವು.[17] ಅಷ್ಟೇ ಅಲ್ಲ! ಈ ಅವಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಪಕ್ಷಾಧಾರಿತವಾಗಿ ಚುನಾವಣೆಗಳು ನಡೆದಿದ್ದರಿಂದ ಅವು ಅಭಿವೃದ್ಧಿ ಏಜೆನ್ಸಿಗಳು ಅಲ್ಲ! ರಾಜಕೀಯ ಸಂಸ್ಥೆಗಳೆಂದೇ ನಿರೂಪಿಸಲ್ಪಟ್ಟವು. ಇಂತಹ ಪಂಚಾಯತ್‌ರಾಜ್ ಸಂಸ್ಥೆಗಳ ವಿವಿಧ ವಿಷಯಗಳ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು ಕೇಂದ್ರ ಯೋಜನಾ ಆಯೋಗವು 1985ರಲ್ಲಿ ಜಿ.ವಿ.ಕೆ.ರಾವ್ ಸಮಿತಿಯನ್ನು ನೇಮಕ ಮಾಡಿತು. ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಗಳನ್ನು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ನೀಡಬೇಕು. ಕೆಳಹಂತದ ಪಂಚಾಯಿತಿಗಳ ಗ್ರಾಮೀಣಾಭಿವೃದ್ಧಿ ಕಾರ್ಯಗಳ ಯೋಜನೆ ರೂಪಿಸಲು ಜಿಲ್ಲಾಮಟ್ಟದಲ್ಲಿ ಜಿಲ್ಲಾ ಯೋಜನೆಯನ್ನು ಜಿಲ್ಲಾಪರಿಷತ್ ರೂಪಿಸಬೇಕು. ಗ್ರಾಮೀಣಾಭಿವೃದ್ಧಿಯ ಬೆನ್ನೆಲುಬಾಗಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸ್ ಸಮನ್ವಯ ಮತ್ತು ಉಸ್ತುವಾರಿ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಬೇಕೆಂದು[18] ಈ ಸಮಿತಿ ಶಿಫಾರಸ್ಸು ಮಾಡಿತು.

1983ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯ ಪ್ರಭಾವಕ್ಕೊಳಗಾದ ಕೇಂದ್ರ ಸರ್ಕಾರವು ಭಾರತದಾದ್ಯಂತ ಏಕರೀತಿಯ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೆ ತರಲು 1986ರಲ್ಲಿ ಡಾ. ಎಲ್. ಎಂ. ಸಿಂಘ್ವಿ ನೇತೃತ್ವದಲ್ಲಿ ಸಮಿತಿಯೊಂದನ್ನು ನೇಮಕ ಮಾಡಿತು. ಪಂಚಾಯತ್‌ರಾಜ್ ಸಂಸ್ಥೆಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಲು ಅವುಗಳಿಗೆ ಸಂವಿಧಾನಾತ್ಮಕ ಮಾನ್ಯತೆ ನೀಡುವ ಅಗತ್ಯವಿದೆ. ಇವುಗಳಿಗೆ ಜನರ ಭಾಗವಹಿಸುವ ಮಟ್ಟವನ್ನು ಹೆಚ್ಚಿಸಲು ವಿಕೇಂದ್ರೀಕೃತ ಜನತಾಂತ್ರಿಕ ಘಟಕವಾಗಿ ಗ್ರಾಮಸಭೆಗಳನ್ನು ರೂಪಿಸಬೇಕು. ಪಂಚಾಯತ್‌ರಾಜ್ ಸಂಸ್ಥೆಗಳು ಮೂಲ ಉದ್ದೇಶಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸಲು ಹೆಚ್ಚಿನ ಹಣಕಾಸಿನ ಸಂಪನ್ಮೂಲಗಳನ್ನು ಒದಗಿಸಬೇಕು. ಪಂಚಾಯಿತಿಗಳ ಚುನಾವಣೆಗಳಿಂದ ರಾಜಕೀಯ ಪಕ್ಷಗಳನ್ನು ದೂರ ಇಡಬೇಕೆಂದು ಡಾ.ಎಲ್.ಎಂ.ಸಿಂಘ್ವಿ ಸಮಿತಿ ಶಿಫಾರಸ್ಸು ಮಾಡಿತು.[19] ಸರ್ಕಾರಿಯಾ ಆಯೋಗವು ಈ ಸಮಿತಿಯ ವರದಿಯನ್ನು ವಿರೋಧಿಸಿತು. ಆದರೂ ಅಂದಿನ ಪ್ರಧಾನಿ ರಾಜೀವ್‌ಗಾಂಧಿಯವರು ಪಂಚಾಯಿತಿಗಳಿಗೆ ಸಂವಿಧಾನಾತ್ಮಾಕ ಮಾನ್ಯತೆ ನೀಡುವುದಕ್ಕೆ ಬದ್ಧರಾಗಿ 64ನೇ ಸಂವಿಧಾನದ ತಿದ್ದುಪಡಿ ಮಸೂದೆಯನ್ನು ಮೇ 15, 1985ರಂದು ಲೋಕಸಭೆಯಲ್ಲಿ ಮಂಡಿಸಿದರು. ಈ 64ನೇ ಸಂವಿಧಾನದ ತಿದ್ದುಪಡಿ ಮಸೂದೆಯು ಲೋಕಸಭೆಯಲ್ಲಿ ಅಂಗೀಕಾರಗೊಂಡರೂ, ರಾಜ್ಯಸಭೆಯಲ್ಲಿ ಬಹುಮತ ಸಿಗದೇ ಬಿದ್ದುಹೋಗಿತು. ಆದರೆ ಸಮಾಜದಲ್ಲಿ ಯಾವುದೇ ಸಾಮಾಜಿಕ, ಆರ್ಥಿಕ ಬದಲಾವಣೆ ತರಬೇಕಾದರೆ ಅದಕ್ಕೆ ಸಂವಿಧಾನಬದ್ಧ ಹಾಗು ಶಾಸನಬದ್ಧ ಬೆಂಬಲ ಬೇಕೇ ಬೇಕಾಗುತ್ತದೆ.[20] ಭಾರತದಲ್ಲಿ ಜನತಾಂತ್ರಿಕ

ವ್ಯವಸ್ಥೆ ಯಶಸ್ವಿಯಾಗಬೇಕಾದರೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ನಿಯಮಿತವಾಗಿ ಚುನಾವಣೆಗಳು ನಡೆಯಬೇಕು. ಇಲ್ಲವಾದಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯೇ ವೈಫಲ್ಯ ಕಾಣುತ್ತದೆ. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಕ್ರಮಬದ್ಧವಾಗಿ ಚುನಾವಣೆ ನಡೆಯಬೇಕಾದರೆ ಸಮಾಜದಲ್ಲಿ ರಾಜಕೀಯ ಇಚ್ಛಾಶಕ್ತಿ, ಜನಜಾಗೃತಿ ಮತ್ತು ಸಾಂವಿಧಾನಿಕ ಬೆಂಬಲ ಬೇಕೇಬೇಕು. ಈ ಮೂರು ಇದ್ದಾಗ ಮಾತ್ರ ವಿಕೇಂದ್ರೀಕರಣವು ಕೆಳಹಂತಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

1991ರಲ್ಲಿ ಕೇಂದ್ರದಲ್ಲಿ ಪಿ.ವಿ.ನರಸಿಂಹರಾವ್ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದಿತು. ರಾಜೀವ್‌ಗಾಂಧಿ ಅವರ ಕನಸನ್ನು ನನಸು ಮಾಡಲು 1991ರಲ್ಲಿ ಸಂಸತ್ತಿನ ಉಭಯ ಸದನಗಳ ಜಂಟಿ ಸಮಿತಿಯನ್ನು ರಚಿಸಿತು. ರಾಜೀವ್‌ಗಾಂಧಿ ಮಂಡಿಸಿದ ಪಂಚಾಯತ್‌ರಾಜ್ ಮಸೂದೆಯನ್ನು ಇದರ ಅಧ್ಯಯನಕ್ಕೆ ಒಪ್ಪಿಸಿತು.[21] ನಂತರ 1992ರಲ್ಲಿ ಸಂವಿಧಾನ 73ನೇ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು. ಈ ತಿದ್ದುಪಡಿ ಮಸೂದೆಯು, ಡಿಸೆಂಬರ್ 22, 1992ರಂದು ಲೋಕಸಭೆಯಲ್ಲಿ ಮತ್ತು ಡಿಸೆಂಬರ್ 23, 1992ರಂದು ರಾಜ್ಯಸಭೆಯಲ್ಲಿ ಅಂಗೀಕಾರ ಪಡೆಯಿತು. ಈ ಮಸೂದೆ ಏಪ್ರಿಲ್ 24, 1993ರಂದು ರಾಷ್ಟ್ರಪತಿ ಅಂಕಿತ ಪಡೆದು ಪಂಚಾಯತ್‌ರಾಜ್ ಕಾಯಿದೆಯಾಗಿ ಜಾರಿಗೆ ಬಂದಿತು. ಕೆಳಹಂತದ ಆಡಳಿತದಲ್ಲಿ ಜಮೀನ್ದಾರರ, ಮೇಲ್ವರ್ಗಗಳ ಮತ್ತು ಅಧಿಕಾರಶಾಹಿಗಳ ಬಿಗಿಹಿಡಿತವನ್ನು ತಪ್ಪಿಸಿ, ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಮೂರು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ದೇಶದಾದ್ಯಂತ ಜಾರಿಗೆ ತರುವ ಉದ್ದೇಶದಿಂದ ಸಂವಿಧಾನಕ್ಕೆ 73ನೇ ತಿದ್ದುಪಡಿ ಮಾಡಲಾಗಿದೆ.[22] ಈ ತಿದ್ದುಪಡಿಯಿಂದಾಗಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ಲಭಿಸಿತು. ಇಂದು ಐದು ಸ್ತರದ ಒಕ್ಕೂಟ ವ್ಯವಸ್ಥೆ ಜಾರಿಗೆ ಬಂದಿದೆ. ಜನತೆಗೆ ಅಧಿಕಾರ ನೀಡುವ ಉದ್ದೇಶದಿಂದ ಜಾರಿಗೆ ಬಂದ ಈ ತಿದ್ದುಪಡಿಯು, ಗ್ರಾಮ, ತಾಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಚುನಾಯಿತ ಸಂಸ್ಥೆಗಳನ್ನು ರಚಿಸುವುದು, ಪ್ರತಿ ಐದು ವರ್ಷಗಳಿಗೊಮ್ಮೆ ಚುನಾವಣೆಗಳನ್ನು ನಡೆಸಲು ಪ್ರತ್ಯೇಕ ಚುನಾವಣಾ ಆಯೋಗ ರಚನೆ, ಸಂವಿಧಾನದಲ್ಲಿ ಸೂಚಿಸಿದ ಮೀಸಲಾತಿಗೆ ಕಡಿಮೆ ಇಲ್ಲದಷ್ಟು ಆಯಾ ಪಂಚಾಯಿತಿ ಪ್ರದೇಶದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳಾ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಸ್ಥಾನ ಮತ್ತು ಹುದ್ದೆಗಳ ಹಂಚಿಕೆ, ಗ್ರಾಮಸಭೆಗಳ ರಚನೆ, ಸ್ಥಾಯಿ ಸಮಿತಿಗಳ ರಚನೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುದಾನ, ಸಂಪನ್ಮೂಲಗಳ ಕ್ರೋಡೀಕರಣ, ಹಣಕಾಸು ವ್ಯವಸ್ಥೆ ನಿರ್ವಹಣೆಗೆ ರಾಜ್ಯ ಹಣಕಾಸು ಆಯೋಗ ರಚನೆ, ಪ್ರತಿ ಜಿಲ್ಲೆಯಲ್ಲೂ ಯೋಜನಾ ಸಮಿತಿಗಳ ರಚನೆ ಮತ್ತು ಈ ಕಾಯ್ದೆಯ ಇತರ ವಿಷಯಗಳೊಂದಿಗೆ ಎಲ್ಲ ರಾಜ್ಯಗಳಲ್ಲೂ ಸಮಾನ ಸ್ವರೂಪದ ಪಂಚಾಯತ್‌ರಾಜ್ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂದು ಕಡ್ಡಾಯಗೊಳಿಸಿತು.[23] ಜನತಾಂತ್ರಿಕ ವ್ಯವಸ್ಥೆಯಲ್ಲಿ ಜನರಿಗೆ ಬಹಳ ಹತ್ತಿರವಿರುವ ಕೆಳಹಂತದ ಆಡಳಿದಲ್ಲಿ ಜನರ ಸಹಭಾಗಿತ್ವಕ್ಕೆ ಅವಕಾಶ ನೀಡಲಾಯಿತು. ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಗೆ ಅನುಗುಣವಾಗಿ ಯೋಜನೆ ರೂಪಿಸಿ, ಪರಿಣಾಮಕಾರಿ ಅನುಷ್ಠಾನದ ಜವಾಬ್ದಾರಿಯನ್ನು ಸ್ಥಳೀಯ ಜನರಿಗೆ ಮತ್ತು ಜನಪ್ರತಿನಿಧಿಗಳಿಗೆ ವಹಿಸಲಾಗಿದೆ. "ಭಾರತದ ಜೀವ

ಹಳ್ಳಿಗಳಲ್ಲಿದೆ" ಎಂಬ ಗಾಂಧೀಜಿಯವರ ನಂಬಿಕೆಗೆ ಬದ್ಧವಾಗಿ ಆಡಳಿತಾತ್ಮಕ, ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳನ್ನು ವಿಕೇಂದ್ರೀಕರಣಗೊಳಿಸಲಾಗಿದೆ. ಸಾಮಾಜಿಕವಾಗಿ ಹಿಂದುಳಿದ ಮತ್ತು ನಿರ್ಲಕ್ಷಕ್ಕೆ ಒಳಗಾದ ಜನರು ಸ್ಥಳೀಯ ಆಡಳಿತದಲ್ಲಿ ಹಾಗೂ ನಿರ್ಧಾರ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ 73ನೇ ತಿದ್ದುಪಡಿ ಅವಕಾಶ ನೀಡಿದೆ. "ದಿ ಪಂಚಾಯತ್" ಎಂಬ ಶೀರ್ಷಿಕೆಯೊಂದಿಗೆ ಸಂವಿಧಾನದ 9ನೇ ಭಾಗದಲ್ಲಿ 243ನೇ ವಿಧಿಯಿಂದ 243(ಓ) ವಿಧಿಗಳವರೆಗೆ ಒಟ್ಟು 16 ಹೊಸ ವಿಧಿಗಳನ್ನು ಸೇರ್ಪಡಿಸಲಾಗಿದೆ.[24] ಈ ಸ್ಥಳೀಯ ಸರ್ಕಾರಗಳು ಆರ್ಥಿಕ ಅಭಿವೃದ್ಧಿಗೆ ಹಾಗೂ ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದಂತೆ ಯೋಜನೆಗಳನ್ನು ಸಿದ್ಧಪಡಿಸಿ, ಅವುಗಳನ್ನು ಜಾರಿಗೆ ತರಲು ಹಾಗೂ ಸಂವಿಧಾನದ 11ನೇ ಅನುಸೂಚಿಯಲ್ಲಿ ಉಲ್ಲೇಖಿಸಿರುವ 29 ವಿಷಯಗಳ ಮೇಲೆ ಕಾನೂನು ಮಾಡಿ, ಅವುಗಳನ್ನು ಅನುಷ್ಠಾನಕ್ಕೆ ತರಲು ಅಧಿಕಾರವನ್ನು[25] ಕೊಡಲಾಗಿದೆ. ಸಂವಿಧಾನದ ದೃಷ್ಟಿಯಲ್ಲಿ ಪಂಚಾಯಿತಿಗಳು ಸ್ವಯಂ ಆಡಳಿತ ಸಂಸ್ಥೆಗಳಾಗಿವೆ. ಪಂಚಾಯಿತಿಗಳು ನಮ್ಮ ಒಕ್ಕೂಟ ವ್ಯವಸ್ಥೆಯ ರಾಜಕಾರಣದ ಭಾಗಗಳಾಗಿವೆ. ಆದರೆ ಅವುಗಳಿಗೆ ಸಂಬಂಧಿಸಿದ ಹಣಕಾಸಿನ ಸಂಪನ್ಮೂಲ, ಅಧಿಕಾರ ಮತ್ತು ಕಾರ್ಯಗಳನ್ನು ನಿರ್ಧರಿಸುವ ಅಧಿಕಾರ ರಾಜ್ಯ ಶಾಸಕಾಂಗದ ವಿವೇಚನೆಗೆ ಬಿಟ್ಟುಕೊಡಲಾಗಿದೆ. ಪರಿಣಾಮವಾಗಿ ಪಂಚಾಯತ್‌ರಾಜ್ ಸಂಸ್ಥೆಗಳ ಅಧಿಕಾರ ಮತ್ತು ಕಾರ್ಯಗಳಲ್ಲಿ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸ ಕಂಡುಬರುತ್ತಿದೆ. ಸ್ಥಳೀಯ ಆಡಳಿತದಲ್ಲಿ ಕಂಡುಬರುವ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಾತಿನಿಧ್ಯದ ಲಕ್ಷಣಗಳು ಗ್ರಾಮೀಣ ಪ್ರದೇಶಗಳಲ್ಲಿ ಜನತಾಂತ್ರಿಕ ವ್ಯವಸ್ಥೆಯನ್ನು ಮತ್ತಷ್ಟು ವಿಸ್ತರಿಸುವ ಮತ್ತು ಬಲಪಡಿಸುವ ನಿರೀಕ್ಷೆಯನ್ನು ನಿರೀಕ್ಷಿಸಲಾಗಿದೆ. ಈ ಕಾರಣಗಳಿಂದ ಇಂದು ಗ್ರಾಮಪಂಚಾಯಿತಿಗಳು ಸಾಂಪ್ರದಾಯಿಕ ಸಂಸ್ಥೆಗಳಿಂದ ಸಾಂವಿಧಾನಿಕ ಸಂಸ್ಥೆಗಳಾಗಿ ಪ್ರಯಾಣ ಬೆಳೆಸಿವೆ.

2.2 ಕರ್ನಾಟಕದಲ್ಲಿ ಗ್ರಾಮಪಂಚಾಯಿತಿ ಬೆಳವಣಿಗೆ

ಸ್ಥಳೀಯ ಸರ್ಕಾರಗಳ ಜನಕನೆಂದೇ ಕರೆಯಲ್ಪಡುವ ಲಾರ್ಡ್ ರಿಪ್ಪನ್ 1882ರಲ್ಲಿ ಸ್ಥಳೀಯ ಸರ್ಕಾರಗಳ ರಚನೆಗೆ ಕಾಯ್ದೆಯೊಂದನ್ನು ಜಾರಿಗೆ ತಂದನು. ಈ ಕಾಯ್ದೆಗೆ ಅನುಗುಣವಾಗಿ ಅಂದಿನ ಮೈಸೂರು ಸರ್ಕಾರವು 1897ರಲ್ಲಿ ಪ್ರಥಮ ಬಾರಿಗೆ ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶದಲ್ಲಿ ಮುನ್ಸಿಪಾಲಿಟಿ ರಚಿಸಲು ಕಾಯ್ದೆಯೊಂದನ್ನು ಜಾರಿಗೆ ತಂದಿತು. 1902ರಲ್ಲಿ ಮೈಸೂರು ಲೋಕಲ್ ಬೋರ್ಡ್ ಕಾಯ್ದೆ ಅಸ್ತಿತ್ವಕ್ಕೆ ತಂದು, ಮೂರು ಹಂತದ ಸ್ಥಳೀಯ ಸರ್ಕಾರಗಳನ್ನು ಜಾರಿಗೆ ತರುವ ಪ್ರಯತ್ನ ಮಾಡಲಾಯಿತು. "ವಿಲೇಜ್ ಪಂಚಾಯತ್, ತಾಲೂಕು ಡೆವಲಪ್‌ಮೆಂಟ್ ಬೋರ್ಡ್ ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್" ರಚಿಸುವಂತೆ ಕಾಯಿದೆ ರೂಪಿಸಲಾಯಿತು. 1914ರಲ್ಲಿ ಮೈಸೂರು ಸರ್ಕಾರವು ಸ್ಥಳೀಯ ಸರ್ಕಾರಗಳ ಅಧಿಕಾರ ಮತ್ತು ಹಣಕಾಸಿನ ಬಗ್ಗೆ ಚರ್ಚಿಸಲು ಕಾಂತ್‌ರಾಜ್ ಅರಸ್ ಮತ್ತು ಸಿ.ಶ್ರೀನಿವಾಸ ಅಯ್ಯಂಗಾರ್ ನೇತೃತ್ವದಲ್ಲಿ ಸಮಿತಿಗಳನ್ನು ರಚಿಸಿತು. 1918ರಲ್ಲಿ ಮೈಸೂರು ಸರ್ಕಾರವು ಮೈಸೂರು ಲೋಕಲ್ ಬೋರ್ಡ್ ಮತ್ತು ವಿಲೇಜ್ ಪಂಚಾಯತ್ ಕಾಯ್ದೆಯನ್ನು ಜಾರಿಗೆ ತಂದಿತು. 1927ರ ಕೊನೆಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾಯಿತ ಸದಸ್ಯರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.[26]

ಸ್ವಾತಂತ್ರ್ಯಾನಂತರದ ಭಾರತದಲ್ಲಿ ದೇಶದ ವಿವಿಧ ವರ್ಗಗಳ ರಾಜ್ಯಗಳಲ್ಲಿ ವಿವಿಧ ಮಾದರಿಯ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಯಲ್ಲಿತ್ತು. ಕರ್ನಾಟಕ(ಅಂದಿನ ಮೈಸೂರು ರಾಜ್ಯ)ದಲ್ಲಿ 1920ರ 'ಸೆಂಟ್ರಲ್ ಪ್ರಾವಿನ್ಸ್ ವಿಲೇಜ್ ಆಕ್ಟ್' ಅನುಗುಣವಾಗಿ ವಿವಿಧ ಪ್ರಾಂತೀಯ(ಬಾಂಬೆ, ಹೈದ್ರಾಬಾದ್, ಮದ್ರಾಸ್ ಮತ್ತು ಮೈಸೂರು) ಸರ್ಕಾರಗಳು ಅನುಷ್ಠಾನಗೊಳಿಸಿದ್ದ 1933ರ ಮುನ್ಸಿಪಲ್ ಬೋರ್ಡ್ ಮತ್ತು ಗ್ರಾಮಪಂಚಾಯಿತಿ ಕಾಯ್ದೆಗಳೇ ಮುಂದುವರೆದವು. ಆದರಿಂದ ಕರ್ನಾಟಕ(ಮೈಸೂರು) ಸರ್ಕಾರವು ಇಡೀ ರಾಜ್ಯಕ್ಕೆ ಏಕರೂಪದ ಪಂಚಾಯತ್‌ರಾಜ್ ರಚನೆಗೆ ಆದ್ಯತೆ ನೀಡಿತು. ಪ್ರತ್ಯೇಕ ಪಂಚಾಯತ್ ವ್ಯವಸ್ಥೆ ಬದಲು ಏಕರೂಪದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ರೂಪಿಸಲು ವಿ. ವೆಂಕಟಪ್ಪ ಕಮಿಟಿಯನ್ನು 1950ರಲ್ಲಿ ನೇಮಿಸಿತು.[27] ಈ ಸಮಿತಿಯು ಮಾಡಿದ ಶಿಫಾರಸ್ಸು ಅನ್ವಯ, ಕರ್ನಾಟಕ ಸರ್ಕಾರವು 1952ರಲ್ಲಿ ಮೈಸೂರು ಜಿಲ್ಲಾ ಬೋರ್ಡ್ ಮತ್ತು ಗ್ರಾಮಪಂಚಾಯತ್ ಕಾಯ್ದೆಯನ್ನು ಜಾರಿಗೆ ತಂದಿತು. 1952ರ ಗ್ರಾಮಪಂಚಾಯತ್ ಕಾಯಿದೆಯಲ್ಲಿ ಗುಂಪು ಪಂಚಾಯಿತಿಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದರಿಂದ ವ್ಯಾಪಕ ವಿರೋಧ ವ್ಯಕ್ತವಾಯಿತು.[28] ಆದಕಾರಣ ಕರ್ನಾಟಕ ಸರ್ಕಾರವು ಈ ಸಮಿತಿ ಮಾಡಿದ ಶಿಫಾರಸ್ಸಿನಲ್ಲಿ ಲೋಪದೋಷಗಳಿವೆ ಎಂದು ತೀರ್ಮಾನಿಸಿ, ಈ ಕಾಯ್ದೆಯನ್ನು ಪರಿಶೀಲನೆ ಮಾಡಲು 1953ರಲ್ಲಿ ಡಿ.ಹೆಚ್.ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ರಚಿಸಿತು. ಈ ಸಮಿತಿ ಆಗಸ್ಟ್ 1954ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ರಾಜ್ಯಗಳ ಪುನರ್‌ವಿಂಗಡನೆ ಪರ್ವಕಾಲದಲ್ಲಿ ಡಿ.ಹೆಚ್. ಚಂದ್ರಶೇಖರಯ್ಯ ಸಮಿತಿ ಮತ್ತು ಬಲವಂತರಾಯ್ ಮೆಹತಾ ಸಮಿತಿ ವರದಿಗಳನ್ನು ಗಮನದಲ್ಲಿಟ್ಟುಕೊಂಡು ಅಂದಿನ ಮೈಸೂರು ಸರ್ಕಾರವು 1959ರಲ್ಲಿ ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯನ್ನು ಅಂಗೀಕರಿಸಿತು. 1960ರಿಂದ ರಾಜ್ಯದಲ್ಲಿ ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೆ ಬಂದಿತು.[29] ಈ ಕಾಯ್ದೆ ಹೊಸ ಮೈಸೂರು ರಾಜ್ಯದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಗೆ ಉತ್ತಮ ತಳಪಾಯ ಹಾಕಿತು ಎನ್ನಬಹುದು. ಆದರೆ ಜಾತಿ, ಧರ್ಮ, ವರ್ಗ ತಾರತಮ್ಯದಿಂದ ಕೂಡಿದ್ದ ಗ್ರಾಮೀಣ ಸಮುದಾಯದಲ್ಲಿ ಸ್ಥಳೀಯ ಮೇಲ್ವರ್ಗಗಳು ಅಧಿಕಾರದ ಹೆಚ್ಚಿನ ಲಾಭವನ್ನು ಪಡೆದುಕೊಂಡವು. ದುರ್ಬಲ ವರ್ಗಗಳ ಮತ್ತು ಮಹಿಳೆಯರ ಸ್ಥಿತಿ ದಯನೀಯವಾಗಿತ್ತು. ಕಾರಣ ಪ್ರಭಾವಶಾಲಿ ಸ್ಥಳೀಯ ನಾಯಕರು ಮತ್ತು ಅಧಿಕಾರಿಗಳು ಅಧಿಕಾರವನ್ನು ತಮ್ಮ ಸ್ವಂತ ಲಾಭಕ್ಕಾಗಿ ಬಳಸಿಕೊಂಡಿದ್ದು ಕಂಡುಬಂತು. ಈ ಸ್ಥಳೀಯ ಮುಖಂಡರ ಸ್ವಾರ್ಥ ಮನೋಭಾವನೆ ಅಧಿಕಾರ ವಿಕೇಂದ್ರೀಕರಣದ ವಿಫಲತೆಗೆ ಕಾರಣವಾಯಿತು. ಈ ಪರಿಸ್ಥಿತಿಯನ್ನು ಅರಿತ ನಿಜಲಿಂಗಪ್ಪ ಸರ್ಕಾರವು ಜಾರಿಯಲ್ಲಿದ್ದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಹಾಗೂ ಗ್ರಾಮಮಟ್ಟದಲ್ಲಿ ನಾಯಕತ್ವವನ್ನು ಬೆಳೆಸುವ ಉದ್ದೇಶದಿಂದ ಅಧ್ಯಯನ ಮಾಡಿ ವರದಿ ನೀಡಲು ಕೊಂಡಜ್ಜಿ ಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಕ ಮಾಡಿತು. ಈ ಸಮಿತಿಯು 1963ರಲ್ಲಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿ ಕೆಲವು ಸಲಹೆಗಳನ್ನು ನೀಡಿತು. ಈ ಸಮಿತಿಯ ವರದಿಯನ್ನು ಆಧರಿಸಿ, ರಾಜ್ಯ ಸರ್ಕಾರವು 1964ರ ಮೈಸೂರು ಪಂಚಾಯತ್ ಕಾಯ್ದೆಯನ್ನು ಅನುಷ್ಠಾನಕ್ಕೆ ತಂದಿತು. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಕೆಲವು ಸುಧಾರಣೆಗೆ ಪ್ರಯತ್ನ ಮಾಡಿತು.

ನಿಜಲಿಂಗಪ್ಪ ಸರ್ಕಾರದ ನಂತರ ಬಂದ ಸರ್ಕಾರಗಳು ಈ ಕಾಯ್ದೆ ಬಗ್ಗೆ ಹೆಚ್ಚು ಆಸಕ್ತಿ ತೋರಲಿಲ್ಲ. 1969ರಲ್ಲಿ ವೀರೇಂದ್ರ ಪಾಟೀಲ್ ಸರ್ಕಾರ, 1978ರಲ್ಲಿ ದೇವರಾಜ ಅರಸು ಸರ್ಕಾರ ಮತ್ತು 1983ರಲ್ಲಿ ಆರ್. ಗುಂಡೂರಾವ್ ಸರ್ಕಾರಗಳು ಈ ಕಾಯ್ದೆಯ ಬದಲಾಗಿ 1959ರ ಮೈಸೂರು ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಮಂಡಳಿ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ಮಾಡಿ ಜಾರಿಗೊಳಿಸಿದವು. ಈ ಅವಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಅಧಿಕಾರಾವಧಿಯನ್ನು 4 ವರ್ಷದಿಂದ 5 ವರ್ಷಕ್ಕೆ ಹೆಚ್ಚಿಸಲಾಯಿತು. ಗ್ರಾಮಪಂಚಾಯಿತಿ ಮತ್ತು ತಾಲೂಕು ಬೋರ್ಡ್‌ಗಳಲ್ಲಿ ಸಾಮಾಜಿಕ ನ್ಯಾಯ ಸಮಿತಿ ರಚನೆ ಮತ್ತು ಕೆಳಜಾತಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಪ್ರಾಮುಖ್ಯತೆ ನೀಡಲಾಯಿತು.

1980ರ ದಶಕದಲ್ಲಿ ಕರ್ನಾಟಕ ಸರ್ಕಾರವು ಅಧಿಕಾರ ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ಹೊಸ ಶಕೆಗೆ ನಾಂದಿ ಹಾಡಿತು. 1983ರಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ಜನತಾ ಸರ್ಕಾರವು ಅಧಿಕಾರಕ್ಕೆ ಬಂದಿತು. ಈ ಸರ್ಕಾರವು ಕೊಂಡಜ್ಜಿ ಬಸಪ್ಪ ಸಮಿತಿ ಮತ್ತು ಅಶೋಕ್ ಮೆಹತಾ ಸಮಿತಿಗಳ ಶಿಫಾರಸ್ಸುಗಳನ್ನು ಗಮನದಲ್ಲಿಟ್ಟುಕೊಂಡು ಜಾರಿಯಲ್ಲಿದ್ದ ಪಂಚಾಯತ್‌ರಾಜ್ ಕಾಯ್ದೆಯನ್ನು ತಿದ್ದುಪಡಿ ಮಾಡಿ ಜಾರಿಗೆ ತರಲು ಕ್ರಮ ಕೈಗೊಂಡಿತು. ಮುಖ್ಯಮಂತ್ರಿಯ ಸಹಕಾರದೊಂದಿಗೆ ಅಂದಿನ ಗ್ರಾಮೀಣಾಭಿವೃದ್ಧಿ ಸಚಿವ ಅಬ್ದುಲ್ ನಜೀರ್‌ಸಾಬ್ 1983ರಲ್ಲಿ ಕರ್ನಾಟಕ ಜಿಲ್ಲಾ ಪರಿಷತ್, ತಾಲೂಕು ಪಂಚಾಯತ್ ಸಮಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿ ಮಸೂದೆಯನ್ನು ರೂಪಿಸಿ ಸದನದಲ್ಲಿ ಮಂಡಿಸಿದರು. ಈ ಮಸೂದೆಯು 1984ರಲ್ಲಿ ರಾಜ್ಯ ವಿಧಾನಮಂಡಲದಲ್ಲಿ ಅಂಗೀಕೃತವಾಗಿ, ಜುಲೈ 10, 1985ರಂದು ರಾಷ್ಟ್ರಪತಿ ಒಪ್ಪಿಗೆ ಪಡೆಯಲಾಯಿತು. ರಾಜ್ಯದಲ್ಲಿ ಆಗಸ್ಟ್ 14, 1985ರಿಂದ ಮಂಡಲಪಂಚಾಯಿತಿ ಮತ್ತು ಜಿಲ್ಲಾಪರಿಷತ್ ಎಂಬ ಎರಡು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೆ ಬಂದಿತು. ಇದು ಜನತಾಂತ್ರಿಕ ಮತ್ತು ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆಗೆ ಚಾಲನೆ ನೀಡಿತು. ಆಡಳಿತದಲ್ಲಿ ಜನಸಹಭಾಗಿತ್ವಕ್ಕೆ ಅವಕಾಶ ಕಲ್ಪಿಸುವ ಗ್ರಾಮಸಭೆಯನ್ನು ಅಸ್ತಿತ್ವಕ್ಕೆ ತಂದರು. ಸ್ಥಳೀಯ ಸರ್ಕಾರದಲ್ಲಿ ಮೊದಲ ಬಾರಿಗೆ ಮಹಿಳೆಯರಿಗೆ ಶೇ.25ರಷ್ಟು, ಪರಿಶಿಷ್ಟ ಜಾತಿಗೆ ಶೇ.15ರಷ್ಟು ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.3ರಷ್ಟು ರಾಜಕೀಯ ಪ್ರಾತಿನಿಧ್ಯಕ್ಕೆ ಮೀಸಲಾತಿ ನೀಡಿದ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿತ್ತು. 1983ರ ಕರ್ನಾಟಕ ಮಂಡಲಪಂಚಾಯಿತಿ ಮತ್ತು ಜಿಲ್ಲಾಪರಿಷತ್ ಕಾಯ್ದೆಯು ಪಂಚಾಯತ್‌ರಾಜ್ ವ್ಯವಸ್ಥೆಗೆ ನಿಜವಾದ ಅಧಿಕಾರ ಮತ್ತು ಕಾರ್ಯಭಾರಗಳನ್ನು ನೀಡಿತು. ಈ ಕಾಯ್ದೆಯನ್ನು ಇತರ ರಾಜ್ಯಗಳು ಮಾದರಿ ಎಂದು ಪರಿಗಣಿಸಿ, ತಮ್ಮ ರಾಜ್ಯಗಳಲ್ಲಿ ಪಂಚಾಯತ್‌ರಾಜ್ ಕಾಯ್ದೆಗಳನ್ನು ರೂಪಿಸಿಕೊಂಡವು.[30] ಆದರೆ 1983ರ ಕಾಯಿದೆಯು ಮಂಡಲಪಂಚಾಯಿತಿಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ನಾಯಕತ್ವವನ್ನು ಹಾಗೂ ಗ್ರಾಮೀಣ ಸಾಮಾಜಿಕ ಜೀವನದ ಸಂರಚನೆಯನ್ನು ಸಂಪೂರ್ಣವಾಗಿ ಬದಲಾಯಿಸುವಲ್ಲಿ ಸಫಲವಾಗಲಿಲ್ಲ. ಈ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಯೋಗ್ಯ ಪ್ರಾತಿನಿಧ್ಯ ನೀಡಿದ್ದರೂ ಇವರು ಸಾಂಪ್ರದಾಯಿಕ ಪ್ರವೃತ್ತಿ ಬಿಟ್ಟು ಪಂಚಾಯಿತಿಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಕಂಡುಬರಲಿಲ್ಲ.

ಮಹಿಳಾ ಜನಪ್ರತಿನಿಧಿಗಳು ಪುರುಷರ ನಿಯಂತ್ರಣ ಮತ್ತು ನಿರ್ದೇಶನದಂತೆ ನಡೆದುಕೊಳ್ಳುವುದು ಸಾಮಾನ್ಯ ಸಂಗತಿಯಾಗಿತ್ತು. ಗ್ರಾಮೀಣ ಜನರ ಸಾಂಪ್ರದಾಯಿಕ ಮತ್ತು ಸಂಕುಚಿತ ಭಾವನೆಗಳು ಮಹಿಳೆಯರ ಹಾಗೂ ಹಿಂದುಳಿದ ಜಾತಿ ಮತ್ತು ವರ್ಗದ ಜನರು ಸಬಲೀಕರಣಕ್ಕೆ ಅಡ್ಡಿಯಾದವು. ಹೀಗಾಗಿ ಕೆಳಹಂತದಲ್ಲಿ ಆಡಳಿತಾಧಿಕಾರಗಳು ಹೆಚ್ಚು ಕಡಿಮೆ ಶ್ರೀಮಂತ ಮತ್ತು ಬಲಾಢ್ಯ ಜಾತಿಗಳ ಅದರಲ್ಲೂ ವಿಶೇಷವಾಗಿ ಪುರುಷರ ಕೈಯಲ್ಲಿ ಸಿಕ್ಕಿಕೊಂಡಿತ್ತು.[31] ಆದುದರಿಂದ ಈ ವಿಕೇಂದ್ರೀಕರಣ ಕಾಯಿದೆಯು ಮಹಿಳಾ ಪ್ರಾತಿನಿಧ್ಯಕ್ಕೆ ಉತ್ತಮ ಅಡಿಪಾಯ ಹಾಕಿದರೂ ಮಹಿಳಾ ಸಬಲೀಕರಣಕ್ಕೆ ಸಹಕಾರಿಯಾಗಲಿಲ್ಲ.

ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಅಗತ್ಯ ಸಂಗತಿಗಳಾದ ಶಿಕ್ಷಣ, ಆರೋಗ್ಯ, ವಸತಿ, ಇತ್ಯಾದಿ ಯೋಜನೆಗಳು ಜಿಲ್ಲಾಪರಿಷತ್ ಮತ್ತು ಮಂಡಲಪಂಚಾಯಿತಿಗಳಿಂದ ಅನುಷ್ಠಾನಗೊಂಡಿವೆ. ಮಹಿಳೆಯರ ಸಬಲೀಕರಣಕ್ಕೆ ಪೂರಕವಾಗಿ ಸಂಪನ್ಮೂಲಗಳ ಸಂಗ್ರಹಣೆ ಮತ್ತು ವಿತರಣೆಗೆ ಸಂಬಂಧಿಸದಿದಂತೆ ಮಂಡಲಪಂಚಾಯಿತಿ ಮುಂದಾಗಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಈ ವ್ಯವಸ್ಥೆಯಲ್ಲಿ ಮಹಿಳೆಯರು ಸೇರಿದಂತೆ ಎಲ್ಲ ವರ್ಗಗಳ ಪ್ರಾತಿನಿಧ್ಯ ಹೊಂದಿರುವುದು ಪ್ರಗತಿದಾಯಕ ಸಂಗತಿಯಾಗಿದೆ. ಮಂಡಲ ಪ್ರಧಾನರಿಗೆ ಹೆಚ್ಚು ಅಧಿಕಾರವಿರುವುದರಿಂದ ಇವರು ಹೆಚ್ಚು ಜನಪ್ರಿಯರಾಗಿದ್ದಾರೆ. ಮಂಡಲ ಪಂಚಾಯಿತಿಗಳು ಇನ್ನಷ್ಟು ಉತ್ತಮವಾಗಿ ಕಾರ್ಯ ನಿರ್ವಹಿಸಲು ಸರ್ಕಾರಿ ಅಧಿಕಾರಿಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕು. ಗ್ರಾಮಪಂಚಾಯಿತಿಗಳ ಚುನಾವಣೆ ನಿಯಮಿತವಾಗಿ ನಡೆಯಬೇಕು. ಜಿಲ್ಲಾಪರಿಷತ್ ಮತ್ತು ಮಂಡಲಪಂಚಾಯಿತಿಗಳ ನಡುವಿನ ಸಂಬಂಧ ಇನ್ನಷ್ಟು ಸುಧಾರಿಸಬೇಕು. ಈ ಎಲ್ಲ ಅಂಶಗಳೊಂದಿಗೆ ಸಂಪನ್ಮೂಲಗಳನ್ನು ಇನ್ನಷ್ಟು ಹೆಚ್ಚಿಸಬೇಕೆಂದು 1989ರಲ್ಲಿ ಕೃಷ್ಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ರಚನೆಗೊಂಡ ಜಿಲ್ಲಾಪರಿಷತ್ ಮತ್ತು ಮಂಡಲಪಂಚಾಯಿತಿ ಮೌಲ್ಯಮಾಪನ ಸಮಿತಿ ತನ್ನ ವರದಿಯಲ್ಲಿ ತಿಳಿಸಿತು.[32] ಈ ಎರಡು ಹಂತದ ಪಂಚಾಯತ್‌ರಾಜ್ ಸಂಸ್ಥೆಗಳು ತಮ್ಮ ಅವಧಿಯಲ್ಲಿ ಸಾಕಷ್ಟು ಗ್ರಾಮೀಣಾಭಿವೃದ್ಧಿಯನ್ನು ಸಾಧಿಸಿವೆ ಎಂದು ದಾಖಲೆಗಳು ಹೇಳುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಇಷ್ಟೆಲ್ಲ ಹಣಕಾಸು ಮತ್ತು ಅಧಿಕಾರಗಳನ್ನು ಈ ಸಂಸ್ಥೆಗಳಿಗೆ ನೀಡಿದ್ದರೂ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನಗೊಳ್ಳಲಿಲ್ಲ. ಅವು ತಳಮಟ್ಟಕ್ಕೆ ಸರಿಯಾಗಿ ತಲುಪಲಿಲ್ಲ. ಇದರಿಂದ 1983ರ ಪಂಚಾಯತ್‌ರಾಜ್ ಕಾಯ್ದೆಯು ಮಹಿಳಾ ಪ್ರಾತಿನಿಧ್ಯಕ್ಕೆ ಉತ್ತಮ ವೇದಿಕೆಯಾಗಿ ಕಂಡುಬಂದರೂ ಮಹಿಳಾ ಸಬಲೀಕರಣದ ಪರಿಣಾಮಕಾರಿ ಅಸ್ತ್ರವಾಗಿ ಜಾರಿಗೆ ಬರಲಿಲ್ಲ.

ಈ ಹೊತ್ತಿಗೆ ಸರಿಯಾಗಿ ಜಾರಿಗೆ ಬಂದ ಸಂವಿಧಾನದ 73ನೇ ತಿದ್ದುಪಡಿಗೆ ಅನುಗುಣವಾಗಿ ಕರ್ನಾಟಕ ಸರ್ಕಾರವು ಜಾರಿಗೆ ತರಲು ಇಚ್ಚಿಸಿದ ಪಂಚಾಯತ್‌ರಾಜ್ ಅಧಿನಿಯಮವನ್ನು ವಿಧಾನಮಂಡಲದಲ್ಲಿ ಮಂಡಿಸಿತು. ಈ ಅಧಿನಿಯಮವು ಎರಡು ಸದನದಲ್ಲಿ ಒಪ್ಪಿಗೆ ಪಡೆದು, ರಾಜ್ಯಪಾಲರ ಅಂಕಿತದೊಂದಿಗೆ ಮೇ 10, 1993ರಂದು ಜಾರಿಗೆ ಬಂದಿತು. 1993ರ ಪಂಚಾಯತ್‌ರಾಜ್ ಕಾಯ್ದೆಯು, ಜಿಲ್ಲಾಪಂಚಾಯಿತಿ, ತಾಲೂಕುಪಂಚಾಯಿತಿ ಮತ್ತು ಗ್ರಾಮಪಂಚಾಯಿತಿ ಎಂಬ ಈ

ಮೂರು ಸ್ಥಳೀಯ ಸರ್ಕಾರಗಳ ಜೊತೆಗೆ ಗ್ರಾಮಸಭೆಗೆ ಅವಕಾಶ ನೀಡಿತು. ಆದರೆ ದೇವೇಗೌಡರ ನಾಯಕತ್ವದ ರಾಜ್ಯ ಸರ್ಕಾರವು 1993ರ ಪಂಚಾಯತ್‌ರಾಜ್ ಕಾಯ್ದೆಯನ್ನು ಪರಿಶೀಲಿಸಿ, ಸೂಕ್ತ ಬದಲಾವಣೆಗಳನ್ನು ಸೂಚಿಸಲು 1995ರಲ್ಲಿ ರಿಜರ್ವ್ ಬ್ಯಾಂಕಿನ ಮಾಜಿ ಡೆಪ್ಯೂಟಿ ಗವರ್ನರ್‌ರಾದ ಡಾ.ಕೆ.ಎಸ್.ಕೃಷ್ಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯೊಂದನ್ನು ರಚನೆ ಮಾಡಿತು. ನಂತರ ಕರ್ನಾಟಕದ ಹೆಚ್ಚುವರಿ ಕಾರ್ಯದರ್ಶಿ ಪಿ.ಆರ್.ನಾಯಕ ಅವರು ಈ ಸಮಿತಿಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡರು. ಈ ಸಮಿತಿ ಮಾರ್ಚ್ 1996ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು.[33] ಪಂಚಾಯಿತಿಗಳ ಅಧ್ಯಕ್ಷರು ಉತ್ತಮವಾಗಿ ಕಾರ್ಯ ನಿರ್ವಹಿಸಲು ಕಾನೂನಿನ ಚೌಕಟ್ಟಿನಲ್ಲಿ ಹೆಚ್ಚಿನ ಅಧಿಕಾರ ಮತ್ತು ಅವಕಾಶಗಳನ್ನು ನೀಡಬೇಕು, ಮೇಲ್ಮಟ್ಟದ ಸರ್ಕಾರಗಳ ಜನಪ್ರತಿನಿಧಿಗಳಿಗೆ ಗ್ರಾಮಪಂಚಾಯಿತಿಗಳ ಸದಸ್ಯತ್ವವನ್ನು ನೀಡಬಾರದೆಂದು ಶಿಫಾರಸ್ಸು ಮಾಡಿತು.

1993ರ ಪಂಚಾಯತ್‌ರಾಜ್ ಕಾಯ್ದೆಯು ಇಂದು ವ್ಯಾಪಕವಾಗಿ ಮಹತ್ತರವಾದ ಸ್ಥಾನ ಪಡೆದು ಕೊಂಡಿದೆ. ಪ್ರಜಾಸತ್ತಾತ್ಮಕವಾಗಿ ಮತ್ತು ರಾಜಕೀಯವಾಗಿ ಹರಿಜನರು, ಗಿರಿಜನರು ಮತ್ತು ಮಹಿಳೆಯರು ಪಂಚಾಯತ್ ಚುನಾವಣೆಯಲ್ಲಿ ಉತ್ಸಾಹಕರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಪಂಚಾಯಿತಿ ಚುನಾವಣೆ ನಡೆಸಲು, ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು, ಮೇಲ್ವಿಚಾರಣೆ ಮತ್ತು ನಿರ್ದೇಶನ ಮಾಡಲು ರಾಜ್ಯ ಚುನಾವಣಾ ಆಯೋಗವನ್ನು ರಚನೆ ಮಾಡಲಾಗಿದೆ. ರಾಜ್ಯದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ನಿಯಮಿತವಾಗಿ ಚುನಾವಣೆಗಳು ನಡೆಯುತ್ತಿವೆ. ಇಂದು ರಾಜ್ಯದಲ್ಲಿ ಸಂವಿಧಾನದಲ್ಲಿ ಸೂಚಿಸಿದ ಮೀಸಲಾತಿಗೆ ಕಡಿಮೆ ಇಲ್ಲದಷ್ಟು ಮತ್ತು ಆಯಾ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ, ಹಿಂದುಳಿದ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ನೀಡಲಾಗಿದೆ. ಮಹಿಳೆಯರಿಗೆ ಶೇ.33.33ರಷ್ಟು ಕಡಿಮೆ ಇಲ್ಲದಷ್ಟು ಸ್ಥಾನ ಮತ್ತು ಹುದ್ದೆಗಳಲ್ಲಿ ಮೀಸಲಾತಿ ನೀಡಲಾಗಿದೆ. ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಲಾಗಿದೆ. ರಾಜ್ಯ ಸರ್ಕಾರ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ನಡುವೆ ಹಣಕಾಸು ಸಂಪನ್ಮೂಲ ಹಂಚಿಕೆಯನ್ನು ನಿಗದಿಪಡಿಸುವ ಸಲುವಾಗಿ ರಾಜ್ಯ ಹಣಕಾಸು ಆಯೋಗವನ್ನು(243(1)ನೇ ವಿಧಿಯನ್ವಯ) ರಚಿಸಿದೆ.[34] ಸಂವಿಧಾನದ 11ನೇ ಅನುಸೂಚಿಯಲ್ಲಿ ಸ್ಥಳೀಯ ಸರ್ಕಾರಗಳಿಗೆ ನೀಡಿರುವ ಎಲ್ಲ 29 ವಿಷಯಗಳಿಗೆ ಸಂಬಂಧಿಸಿದಂತೆ ಹಣಕಾಸು ಮತ್ತು ಅಧಿಕಾರಗಳನ್ನು ವರ್ಗಾಯಿಸಿದ ಏಕೈಕ ರಾಜ್ಯವೆಂದರೆ ಕರ್ನಾಟಕವೆಂದು ಹೇಳಬಹುದು.[35] ಪ್ರಸ್ತುತ ರಾಜ್ಯದಲ್ಲಿ 5628 ಗ್ರಾಮಪಂಚಾಯಿತಿಗಳನ್ನು ಕ್ರಮಬದ್ಧವಾಗಿ ಸ್ಥಾಪಿಸಲಾಗಿದೆ. 1993ರ ಪಂಚಾಯತ್‌ರಾಜ್ ಅಧಿನಿಯಮ ಜಾರಿಗೆ ಬಂದ ಮೇಲೆ ರಾಜ್ಯದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಮೂರು ಅವಧಿಗಳನ್ನು ಮುಗಿಸಿ ನಾಲ್ಕನೇ ಅವಧಿಯಲ್ಲಿ ಆಡಳಿತ ನಡೆಸುತ್ತಿವೆ. ಕೇಂದ್ರ ಸರ್ಕಾರದ ಉದ್ದೇಶಕ್ಕೆ ಅನುಗುಣವಾಗಿ ರಾಜ್ಯದಲ್ಲಿ 2010ರಲ್ಲಿ ಪಂಚಾಯತ್‌ರಾಜ್ ಮಸೂದೆಯನ್ನು ಜಾರಿಗೆ ತಂದು, ಮಹಿಳಾ ಮೀಸಲಾತಿಯನ್ನು ಶೇ.50ಕ್ಕೆ ಹೆಚ್ಚಿಸಲಾಗಿದೆ. ಇದು ಗ್ರಾಮೀಣ ಮಹಿಳೆಯರ ರಾಜಕೀಯ ಸಬಲೀಕರಣದ ಸಂಕೇತವಾಗಿದೆ. ಅಂತೆಯೇ ಡಿಸೆಂಬರ್ 26 ಮತ್ತು 31, 2010ರಲ್ಲಿ ಜರುಗಿದ ತಾಲೂಕು ಮತ್ತು ಜಿಲ್ಲಾಪಂಚಾಯಿತಿಗಳ ಚುನಾವಣೆಗಳಲ್ಲಿ

ಶೇ.50ರಷ್ಟು ಮಹಿಳೆಯರಿಗೆ ಪ್ರಾತಿನಿಧ್ಯ ಲಭಿಸಿದೆ. ಆದರೆ ಮೇ 8 ಮತ್ತು 13, 2010ರಂದು ಜರುಗಿದ ಗ್ರಾಮಪಂಚಾಯಿತಿಗಳ ಚುನಾವಣೆಯಲ್ಲಿ ಶೇ.33.33ರ ಮೀಸಲಾತಿಗೆ ಅನುಸಾರ ಚುನಾವಣೆ ನಡೆದಿದೆ. ಆದರೆ ಆಯಾ ಭಾಗದ ಮಹಿಳೆಯರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡುವುದರಿಂದ ಹೆಚ್ಚು ಕಡಿಮೆ ಶೇ.50ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಹೀಗೆ ಕರ್ನಾಟಕದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸುಧಾರಣೆಗಳನ್ನು ತರಲಾಗಿದೆ. ಈ ಸುಧಾರಣೆಗಳು ಸ್ಥಳೀಯ ಸಂಸ್ಥೆಗಳನ್ನು ಬಲಯುತಗೊಳಿಸುವುದರ ಜೊತೆಗೆ ಗ್ರಾಮೀಣ ಸಮುದಾಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರನ್ನು ವಿಶೇಷವಾಗಿ ಮಹಿಳೆಯರನ್ನು ಸಬಲೀಕರಣದತ್ತ ಕೊಂಡೊಯ್ಯುವಲ್ಲಿ ಸಹಕಾರಿಯಾಗಿದೆ. ಇಂದು ಮಹಿಳೆಯರು ಗ್ರಾಮಪಂಚಾಯಿತಿ ಸದಸ್ಯರಾಗಿ, ಅಧ್ಯಕ್ಷರಾಗಿ ಮತ್ತು ಉಪಾಧ್ಯಕ್ಷರಾಗಿ ಗಾಮಪಂಚಾಯಿತಿಯ ನಿರ್ಧಾರದ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ಮೂರು ಹಂತದ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಶೇ.50ರಷ್ಟು ಮಹಿಳಾ ಪ್ರಾತಿನಿಧ್ಯದಿಂದಲೇ ರಚನೆಗೊಳ್ಳುತ್ತಿವೆ. ಇಲ್ಲಿ ರೂಪುಗೊಳ್ಳುವ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಗಳು ಗ್ರಾಮೀಣ ಮಟ್ಟದಲ್ಲೇ ಕಾರ್ಯರೂಪಕ್ಕೆ ಬರುತ್ತವೆ. ಆದುದರಿಂದ ಗ್ರಾಮಪಂಚಾಯಿತಿಗಳಲ್ಲಿ ಪ್ರಾತಿನಿಧ್ಯ ಪಡೆಯುವ, ಯೋಜನೆಗಳನ್ನು ರೂಪಿಸುವ ಮತ್ತು ಕಾರ್ಯರೂಪಕ್ಕೆ ತರುವ ನಿರ್ಧಾರ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮಹಿಳಾ ಪ್ರಮಾಣವನ್ನು ಮಹಿಳಾ ಪ್ರಾತಿನಿಧ್ಯವೆಂದೂ ಮತ್ತು ಈ ಪ್ರಕ್ರಿಯೆಗಳಲ್ಲಿ ಮಹಿಳೆಯರು ಅವರ ಸ್ವನಿರ್ಧಾರದಂತೆ ಭಾಗವಹಿಸುವ ಪ್ರಮಾಣವನ್ನು ಮಹಿಳಾ ಸಬಲೀಕರಣವೆಂದು ಪರಿಭಾವಿಸಿಕೊಳ್ಳಲಾಗಿದೆ. ಆದರೆ ಮಹಿಳೆ ಗ್ರಾಮಪಂಚಾಯಿತಿಗೆ ಪ್ರತಿನಿಧಿಸಲು ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುವರೇ? ಒಂದು ವೇಳೆ ಪಂಚಾಯಿತಿಗೆ ಆಯ್ಕೆಯಾದ ಪಕ್ಷದಲ್ಲಿ ಅಧಿಕಾರವನ್ನು ಚಲಾಯಿಸುವಲ್ಲಿ, ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಕ್ಕೆ ತರುವ ಪ್ರಕ್ರಿಯೆಯಲ್ಲಿ ಮಹಿಳಾ ಸ್ವನಿರ್ಧಾರವು ಪರಿಣಾಮಕಾರಿಯಾಗಿ ಕಂಡುಬರುತ್ತಿದೆಯೇ ಎಂದು ಪರೀಕ್ಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

2.3 ಗ್ರಾಮಪಂಚಾಯಿತಿ: ಮಹಿಳಾ ಪ್ರಾತಿನಿಧ್ಯ

ಪೀಠಿಕೆ

ಪ್ರಜಾಪ್ರಭುತ್ವದ ಮೂಲಮಂತ್ರ ಅಧಿಕಾರ ವಿಕೇಂದ್ರೀಕರಣ. ಪ್ರಪಂಚದಲ್ಲಿ ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತವು ಇದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸಾಗುತ್ತಿದೆ. ಸ್ವತಂತ್ರ ಭಾರತವು ಸಂವಿಧಾನಾತ್ಮಕ ಆಡಳಿತವನ್ನು ಒಪ್ಪಿಕೊಳ್ಳುವ ಮೂಲಕ ಪಂಚಾಯತ್‌ರಾಜ್ ವ್ಯವಸ್ಥೆಗೆ ಚಾಲನೆ ನೀಡಿತು. ಭಾರತದಲ್ಲಿ 1959ರಲ್ಲಿ ಮೂರು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೆ ತರುವುದರ ಮೂಲಕ ವಿಕೇಂದ್ರೀಕರಣ ವ್ಯವಸ್ಥೆಗೆ ಸೂಕ್ತ ತಳಪಾಯ ಹಾಕಿತು. 1993ರಲ್ಲಿ ಜಾರಿಗೆ ತಂದ 73ನೇ ತಿದ್ದುಪಡಿಯು ಪಂಚಾಯತ್‌ರಾಜ್ ವ್ಯವಸ್ಥೆಗೆ ಸಂವಿಧಾನಾತ್ಮಕ ಮಾನ್ಯತೆ ನೀಡಿತು. ಮಹಿಳೆಯರಿಗೆ ಸಕಾರಾತ್ಮಕ ಪ್ರಾತಿನಿಧ್ಯ ಕಲ್ಪಿಸಿಕೊಟ್ಟಿತು. ಕೇಂದ್ರ ಸರ್ಕಾರವು 2010ರಲ್ಲಿ ಸಂವಿಧಾನದ 243–ಡಿ(1) ಮತ್ತು(2)ನೇ ವಿಧಿಗೆ ತಿದ್ದುಪಡಿ ಮಾಡುವುದರ ಮೂಲಕ ಇಂದು ಪಂಚಾಯತ್‌ರಾಜ್

ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಸರಿಸಮಾನ(50%) ಪ್ರಾತಿನಿಧ್ಯವನ್ನು ನೀಡಿದೆ. ದ್ವಿತೀಯ ದರ್ಜೆಯ ಪ್ರಜೆಗಳಂತೆ ಬದುಕು ಸಾಗಿಸುತ್ತಿರುವ ಗ್ರಾಮೀಣ ಮಹಿಳೆಯರಿಗೆ ರಾಜಕೀಯವಾಗಿ ಸಮಾನ ಪ್ರಾತಿನಿಧ್ಯ ಮತ್ತು ಸಹಭಾಗಿತ್ವ ಪಡೆಯಲು ಪೂರಕವಾಗಿದೆ. ಒಂದು ಸಮಾಜದ ನಾಗರಿಕತೆ ಬೆಳವಣಿಗೆಯು ಆ ಸಮಾಜದಲ್ಲಿನ ಮಹಿಳೆಯರು ಹೊಂದಿರುವ ಸ್ಥಾನಮಾನದಿಂದ ನಿರ್ಧಾರವಾಗುತ್ತದೆ. ಭಾರತದಲ್ಲಿ ಸ್ಥಳೀಯ ಆಡಳಿತದ ಪರಂಪರೆಯಲ್ಲಿ, ಆಳರಸರ ಕಾಲದಿಂದಲೂ ಇಂದಿನ ಪ್ರಜಾಸತ್ತಾತ್ಮಕ ಆಡಳಿತದವರೆಗೆ ಅನೇಕ ಸ್ಥಿತ್ಯಂತರಗಳು ಕಂಡುಬಂದಿವೆ. ಆಡಳಿತದ ಬದಲಾವಣೆಯ ಜೊತೆಜೊತೆಗೆ ಸ್ಥಳೀಯ ಜನತೆಯ ಸಾಮಾಜಿಕ, ಆರ್ಥಿಕ, ರಾಜಕೀಯ ಜೀವನ ವಿಧಾನಗಳಲ್ಲಿ ಅನೇಕ ಬದಲಾವಣೆಗಳು ಕಂಡುಬಂದಿವೆ. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ರಾಷ್ಟ್ರ ಮತ್ತು ರಾಜ್ಯದಲ್ಲಿ ಜಾರಿಗೆ ಬಂದ ಆಡಳಿತ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ಮಹಿಳಾ ಪ್ರಾತಿನಿಧ್ಯ ಸಾಗಿಬಂದ ವಿವಿಧ ಹಂತಗಳನ್ನು ಪರಿಚಯಿಸುವುದು ಸಹ ಮಹಾಪ್ರಬಂಧದ ಆಶಯವಾಗಿದೆ.

ಮಹಿಳಾ ಪ್ರಾತಿನಿಧ್ಯ

ಭಾರತದ ಆಳರಸರ ಕಾಲದಲ್ಲಿ ಸ್ಥಳೀಯ ಆಡಳಿತ ಜಾರಿಯಲ್ಲಿದ್ದರೂ ಜನಸಾಮಾನ್ಯರಿಗೆ ಆಡಳಿತದಲ್ಲಿ ಪ್ರಾತಿನಿಧ್ಯ ಇರಲಿಲ್ಲ. ಮಹಿಳೆಯರಿಗಂತೂ ಇದು ಕನಸಿನ ಮಾತಾಗಿತ್ತು. ಇವರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸಮಾನತೆಗೆ ಒಳಗಾಗಿದ್ದರು. ಮುಸ್ಲಿಂ ಹಾಗೂ ಬ್ರಿಟಿಷರ ಆಡಳಿತ ಅವಧಿಯಲ್ಲಿ ಸ್ಥಳೀಯ ಆಡಳಿತಕ್ಕೆ ಸಾಕಷ್ಟು ಹಿನ್ನಡೆ ಉಂಟಾಯಿತು. ವಸಾಹತು ಸರ್ಕಾರ(1858ರಿಂದ) ಆಡಳಿತಕ್ಕೆ ಅನುಕೂಲವಾಗುವ ಸ್ಥಳೀಯ ಸಂಸ್ಥೆಗಳನ್ನು ಗ್ರಾಮ ಮತ್ತು ನಗರ ಪ್ರದೇಶದಲ್ಲಿ ಜಾರಿಗೆ ತಂದಿತು. ಈ ಸಂಸ್ಥೆಗಳಿಗೆ ಬಹುತೇಕ ಸದಸ್ಯರನ್ನು ಚುನಾವಣೆಗಳ ಮೂಲಕ ಆಯ್ಕೆ ಮಾಡಲು ಅವಕಾಶ ಸೃಷ್ಟಿಸಲಾಗಿತ್ತು. ಒಂದು ನಿರ್ದಿಷ್ಟ ಮೊತ್ತದ ಭೂಕಂದಾಯ ಕಟ್ಟುವವರಿಗೆ ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಮತ ಚಲಾಯಿಸಲು ಅವಕಾಶ ನೀಡಲಾಗಿತ್ತು. ಇದರಿಂದ ಅಯಾ ಪ್ರದೇಶದ ಭೂಮಾಲೀಕರು ಮಾತ್ರ ಸ್ಥಳೀಯ ಸಂಸ್ಥೆಗಳಲ್ಲಿ ಸ್ಪರ್ಧಿಸಲು ಮತ್ತು ಮತ ಚಲಾಯಿಸಲು ಸಾಧ್ಯವಾಯಿತು. ಗೇಣಿದಾರರು, ಭೂರಹಿತರು, ಕಾರ್ಮಿಕರು, ಸಾಂಪ್ರದಾಯಿಕ ಕಸುಬುಗಳಲ್ಲಿ ತೊಡಗಿಸಿಕೊಂಡವರು, ಮಹಿಳೆಯರು ಹಾಗೂ ಇತರರು ವಸಾಹತು ಕೊಡಮಾಡಿದ ರಾಜಕೀಯ ಪ್ರಕ್ರಿಯೆಯಲ್ಲಿ ಪಾಲುಗೊಳ್ಳಲು ಸಾಧ್ಯವಾಗಲಿಲ್ಲ.[36] ಈ ಸಂದರ್ಭದಲ್ಲಿ ವಸಾಹತು ಸರ್ಕಾರ ಜಾರಿಗೆ ತಂದ ಸ್ಥಳೀಯ ಸರ್ಕಾರಗಳ ಪ್ರಾತಿನಿಧ್ಯವು ಸಮಾಜದ ಸ್ಥಳೀಯ ಮೇಲ್ವರ್ಗದ ಪುರುಷರಿಗೆ ಮಾತ್ರ ಮೀಸಲಾಯಿತು. ಸ್ಥಳೀಯ ಸಂಸ್ಥೆಗಳ ನಾಯಕತ್ವ, ರಾಜಕೀಯ ತರಬೇತಿ ಮತ್ತು ರಾಜಕೀಯ ಶಿಕ್ಷಣ ಇತ್ಯಾದಿ ರಾಜಕೀಯ ಲಾಭಗಳು ಸ್ಥಳೀಯ ಮೇಲ್ವರ್ಗದ ಪುರುಷರು ಮಾತ್ರ ಪಡೆಯಲು ಸಾಧ್ಯವಾಯಿತು. ಇದನ್ನು ಅರಿತ ನಮ್ಮ ದೇಶೀಯ ನಾಯಕರು ಸ್ಥಳೀಯ ಆಡಳಿತದ ಹಕ್ಕಿಗಾಗಿ ಹೋರಾಟ ಪ್ರಾರಂಭಿಸಿದರು.

ಭಾರತೀಯರು ಸ್ಥಳೀಯ ಆಡಳಿತದ ಬೇಡಿಕೆಯನ್ನು ಪ್ರಥಮ ಬಾರಿಗೆ 1882ರಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿದರು. ಬ್ರಿಟಿಷ್ ಸರ್ಕಾರ ತನ್ನ ಆಡಳಿತದ ಕೊನೆ ಅವಧಿಯಲ್ಲಿ ಸ್ಥಳೀಯ ಆಡಳಿತದ

ಬಗ್ಗೆ ಗಮನ ಹರಿಸಿತು. ಇದರ ಫಲವಾಗಿ, ಗ್ರಾಮ ಆಡಳಿತ ಮತ್ತು ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ 1907ರಲ್ಲಿ ಬ್ರಿಟಿಷ್ ಸರ್ಕಾರ 'ರಾಯಲ್ ಕಮೀಷನ್ ಆಫ್ ಡೀಸೆಂಟ್ರಲೈಜೇಷನ್' ನೇಮಕ ಮಾಡಿತು.[37] 1909ರ ವೇಳೆಗೆ ಗ್ರಾಮಪಂಚಾಯತ್ ವ್ಯವಸ್ಥೆಯನ್ನು ಜಾರಿಗೆ ತರಲು ಕಾನೂನುಗಳು ರಚಿತವಾದವು. 'ಮೌಂಟ್‌ಫೋರ್ಡ್ ಸುಧಾರಣ ಸಮಿತಿ' ಆಡಳಿತದಲ್ಲಿ ಬೇಕಾದ ಕಾರ್ಯಕ್ಷಮತೆಯ ದೃಷ್ಟಿಯಿಂದ ವಿಕೇಂದ್ರೀಕರಣ ಆಡಳಿತ ಸೂಕ್ತ ಹಾಗು ಸ್ಥಳೀಯ ಆಡಳಿತಕ್ಕೆ ಗ್ರಾಮಪಂಚಾಯಿತಿಯೇ ಉತ್ತಮ ಸಂಸ್ಥೆ ಎಂದು ಶಿಫಾರಸ್ಸು ಮಾಡಿತು.

ಭಾರತದಲ್ಲಿ ಮಹಿಳೆಯರು ರಾಜಕೀಯ ಪ್ರವೇಶ ಮಾಡಿದ್ದೇ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ. ಬ್ರಿಟಿಷರ ವಿರುದ್ಧ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಹಲವಾರು ಮಹಿಳೆಯರು 1917ರಲ್ಲಿ ರಾಜಕೀಯಕ್ಕೆ ದುಮುಕಿದರು. ಆಗ ಮಹಿಳೆಯರಿಗೆ ಸಂಘಟನೆಯಲ್ಲಿ ಆದ್ಯತೆ ನೀಡಬೇಕು ಎಂಬ ಒಕ್ಕೊರಲಿನ ಒತ್ತಾಯ ಕೇಳಿ ಬಂದಿತ್ತು.[38] ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಬೇಕೆಂಬ ಬೇಡಿಕೆಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ 1918ರಲ್ಲಿ ತನ್ನ ಸಹಮತವನ್ನು ವ್ಯಕ್ತಪಡಿಸಿತು. ಬ್ರಿಟಿಷ್ ಸಂಸತ್ತು 1919ರಲ್ಲಿ ಈ ಬೇಡಿಕೆಯನ್ನು ಪರಿಶೀಲಿಸಲು 'ಸೌತ್ ಬಾರೊ ಸಮಿತಿ'ಯನ್ನು ನೇಮಿಸಿತು.[39] ಈ ಸಮಿತಿಯು ತನ್ನ ತಾಯಿನಾಡಿನಲ್ಲಿ ಮಹಿಳೆಯರಿಗೆ ರಾಜಕೀಯ ಹಕ್ಕು ನೀಡದಿರುವ ಪ್ರಭಾವದಿಂದಲೋ ಅಥವಾ ಭಾರತದಲ್ಲಿ ಪ್ರಚಲಿತವಲ್ಲದ ಸಾಮಾಜಿಕ ಪದ್ಧತಿ ಹಿನ್ನೆಲೆಯಿಂದಲೋ ಈ ಬೇಡಿಕೆ ಅಸಮಂಜಸವೆಂದು ಹೇಳಿ ತಳ್ಳಿಹಾಕಿತು. ಆದರೆ ಭಾರತದಲ್ಲಿ ಮಹಿಳಾ ಸಂಘಟನೆ ತನ್ನ ಹೋರಾಟವನ್ನು ಮುಂದುವರೆಸಿತು. ಭಾರತದ ಕಾರ್ಯದರ್ಶಿಗೆ ತನ್ನ ನಿರ್ಣಯದ ಪ್ರತಿಗಳನ್ನು ಕಳಿಸಿಕೊಟ್ಟಿತು. ಬ್ರಿಟಿಷ್ ಸಂಸತ್ತು ಜಂಟಿ ಆಯ್ಕೆ ಸಮಿತಿಯನ್ನು ನೇಮಕ ಮಾಡಿ, ಈ ವಿಷಯದ ಬಗ್ಗೆ ನಿರ್ಣಯಕ್ಕೆ ಬರಲು ಕೋರಿತು. ಈ ಸಮಿತಿಯು ಈ ವಿಷಯವನ್ನು ಭಾರತದ ಪ್ರಾಂತೀಯ ಶಾಸನಸಭೆಗೆ ಬಿಟ್ಟುಕೊಡುವ ನಿರ್ಣಯವನ್ನು ಸೂಚಿಸಿತು. ಆ ವೇಳೆಗೆ 1919ರ ಭಾರತ ಸರ್ಕಾರ ಕಾಯಿದೆ ಜಾರಿಗೆ ಬಂದಿತು. ಮಹಿಳಾ ಸಂಘಟನೆಗಳು ಪ್ರಾಂತೀಯ ಶಾಸನಸಭೆಗಳಿಗೆ ಮನವಿ ಸಲ್ಲಿಸಿ, ಮಹಿಳೆಯರಿಗೆ ಸ್ಥಳೀಯ ಸರ್ಕಾರಗಳಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡುವಂತೆ ಒತ್ತಾಯಪಡಿಸಿದವು.

ಬ್ರಿಟಿಷ್ ಸರ್ಕಾರವು ಮಹಿಳೆಯರ ಮತದಾನದ ಹಕ್ಕಿನ ಬಗ್ಗೆ ನಿರ್ಧಾರ ಕೈಗೊಳ್ಳಲು 'ಫ್ರಾಂಚೈಝ್ ಕಮಿಟಿ' ರಚಿಸಿತು. ಇದು ಸ್ಥಳೀಯ ಸಂಸ್ಕೃತಿ ಮತ್ತು ಸೂಕ್ಷ್ಮತೆಗೆ ಅನುಗುಣವಾಗಿ ಮಹಿಳಾ ಮತದಾನ ಹಕ್ಕಿನ ಬಗ್ಗೆ ನಿರ್ಧಾರ ಕೈಗೊಳ್ಳಲು ಪ್ರಾಂತೀಯ ಶಾಸನೀಯ ನ್ಯಾಯಾಲಯಗಳಿಗೆ ಅಧಿಕಾರ ನೀಡಿತು. ಎಲ್ಲ ಪ್ರಾಂತೀಯ ಗವರ್ನರ್‌ಗಳು ಮದ್ರಾಸ್‌ನಲ್ಲಿ ಸಭೆ ಸೇರಿ, ಮಹಿಳೆಯರಿಗೆ ಮತದಾನದ ಹಕ್ಕನ್ನು ವಿಸ್ತರಿಸಲಾಗಿದೆ ಎಂಬ ಶಾಸನವನ್ನು ಜಾರಿಗೆ ತಂದರು. ಆದರೆ 1919ರ ಭಾರತ ಸರ್ಕಾರದ ಕಾಯಿದೆಯಲ್ಲಿ ಮಹಿಳೆಗೆ ಪಂಚಾಯಿತಿಯಲ್ಲಿ ಸ್ಪರ್ಧಿಸುವ ಅವಕಾಶವನ್ನು ನೀಡಲಿಲ್ಲ. ಈ ಕಾಯ್ದೆಯು ಗ್ರಾಮಪಂಚಾಯಿತಿಗಳ ರಚನೆ ಹಾಗೂ ಅಧಿಕಾರ ನಿರ್ಧರಿಸುವ ಅಧಿಕಾರವನ್ನು ಪ್ರಾಂತೀಯ ಸರ್ಕಾರಗಳಿಗೆ ನೀಡಲಾಯಿತು. ಅಸ್ಸಾಂ, ಬಂಗಾಳ, ಬಿಹಾರ್, ಮುಂಬೈ, ಮಧ್ಯ(ಪ್ರಾಂತ)ಪ್ರದೇಶ,

ಪಂಜಾಬ್, ಉತ್ತರ ಪ್ರದೇಶ ಹಾಗು ಮದ್ರಾಸ್ ಪ್ರಾಂತೀಯ ಸರ್ಕಾರಗಳು 1920ರ 'ಸೆಂಟ್ರಲ್ ಪ್ರಾವಿನನ್ಸ್ ವಿಲೇಜ್ ಪಂಚಾಯತ್ ಆಕ್ಟ್' ಪ್ರಕಾರ ಗ್ರಾಮಪಂಚಾಯಿತಿಗಳನ್ನು ಸ್ಥಾಪನೆ ಮಾಡಿದವು. ಆದರೆ, ಮಹಿಳೆಯರಿಗೆ ಪಂಚಾಯಿತಿ ಚುನಾವಣೆಯಲ್ಲಿ ಮತ ಹಾಕುವ ಮತ್ತು ಸ್ಪರ್ಧಿಸುವ ಹಕ್ಕು ಇರಲಿಲ್ಲ. ಇದಕ್ಕೆ 1920ರ 'ಸೆಂಟ್ರಲ್ ಪ್ರಾವಿನನ್ಸ್ ವಿಲೇಜ್ ಪಂಚಾಯತ್ ಆಕ್ಟ್', 1920ರ 'ಬಾಂಬೆ ವಿಲೇಜ್ ಪಂಚಾಯತ್ ಆಕ್ಟ್' ಮತ್ತು 1928ರ 'ಹೊಲ್ಕರ್ ಸ್ಟೇಟ್ ಪಂಚಾಯತ್ ಆಕ್ಟ್‌ಗಳು' ಪ್ರಮುಖ ಸಾಕ್ಷಿಗಳಾಗಿವೆ.[40] ಕೃಷ್ಣ ನಾಯರ್ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡುವಂತೆ ಆಗ್ರಹಿಸಿ, 1921ರ ಮಾರ್ಚ್ ತಿಂಗಳಿನಲ್ಲಿ ಮದ್ರಾಸ್ ಶಾಸಕಾಂಗ ಸಭೆಯಲ್ಲಿ ನಿರ್ಣಯ ಮಂಡಿಸಿದರು. ಈ ನಿರ್ಣಯವು ಬಹುಮತದಿಂದ ಸ್ವೀಕೃತವಾಯಿತು. 1921ರ ಆಗಸ್ಟ್‌ನಲ್ಲಿ ಬಾಂಬೆ ಶಾಸಕಾಂಗ ಸಭೆಯಲ್ಲಿ ಮತ್ತು 1925ರಲ್ಲಿ ಬಂಗಾಳದ ಶಾಸಕಾಂಗ ಸಭೆಯಲ್ಲಿ ಈ ನಿರ್ಣಯವು ಅಂಗೀಕೃತವಾಯಿತು.[41] ಇದು ಭಾರತೀಯ ಮಹಿಳೆಗೆ ರಾಜಕೀಯವಾಗಿ ದೊರೆತ ದೊಡ್ಡ ಯಶಸ್ಸಾಗಿತು.

.ಸ್ವತಂತ್ರ ಭಾರತದಲ್ಲಿ ಮಹಿಳೆಯರಿಗೆ ಪುರುಷರಿಗೆ ಸಮಾನವಾಗಿ ಮತದಾನದ ಹಕ್ಕು ದೊರೆಯಿತೇ ವಿನಾ ಸಮಾನ ರಾಜಕೀಯ ಪ್ರಾತಿನಿಧ್ಯ ದೊರೆಯಲಿಲ್ಲ. ರಾಜಕೀಯ ಪ್ರಾತಿನಿಧ್ಯವೆಂದರೆ ಮತದಾನ ಹಕ್ಕು ಮಾತ್ರ ಅಲ್ಲ, ಅದು ಜನಪ್ರತಿನಿಧಿಯಾಗಿ ನೀತಿ ನಿಯಮಗಳನ್ನು ರೂಪಿಸುವ, ನಿರ್ಣಯಗಳನ್ನು ಕೈಗೊಳ್ಳುವ ಮತ್ತು ಸಮುದಾಯದ ಮೇಲೆ ಪ್ರಭಾವ ಬೀರುವ ಸಾಮರ್ಥ್ಯದ ರೂಪದಲ್ಲಿ ಕಂಡುಬರುತ್ತದೆ. ಸಂವಿಧಾನ ಜಾರಿಗೆ ಬಂದ ಪ್ರಾರಂಭದ ಅವಧಿಯಲ್ಲಿ ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ದೊರಕಲಿಲ್ಲ. ಕಾರಣ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆ ತಾಂಡವವಾಡುತ್ತಿತ್ತು. ಗ್ರಾಮೀಣ ಬದುಕು ಜಮೀನ್ದಾರರ ಮತ್ತು ಸ್ಥಳೀಯ ಮೇಲ್ವರ್ಗದ ಸುಪರ್ದಿಯಲ್ಲಿತ್ತು. ಮಹಿಳೆಯರ ಬದುಕು ಶೂದ್ರರಂತೆ ಇತ್ತು. ಅಸಮಾನತೆ, ಸ್ವಾತಂತ್ರ್ಯರಹಿತ ಮಹಿಳೆಯರ ಬದುಕು ಪುರುಷರ ನೇರ ನಿಯಂತ್ರಣಕ್ಕೆ ಒಳಪಟ್ಟಿತ್ತು. ಅಂತಹ ಪರಿಸರದಲ್ಲಿ ಗ್ರಾಮಸ್ವರಾಜ್ಯವನ್ನು ಜಾರಿಗೆ ತಂದರೆ ಸಮಾಜದ ಮೇಲ್ವರ್ಗ ಮತ್ತು ಮೇಲ್ಜಾತಿಗಳು ಹೆಚ್ಚಿನ ಲಾಭವನ್ನು ಪಡೆಯುತ್ತವೆ. ಗ್ರಾಮದಲ್ಲಿ ದುರ್ಬಲರು, ಕೆಳಜಾತಿಯವರು ಮತ್ತು ಮಹಿಳೆಯರು ಇನ್ನೂ ಶೋಷಣೆಗೆ ಒಳಗಾಗುತ್ತಾರೆ ಎಂದು ಅಂಬೇಡ್ಕರ್ ಅವರು ಗ್ರಹಿಸಿದ್ದರು.

ಭಾರತದ ಸಂವಿಧಾನದಲ್ಲಿ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸುವ ಮತ್ತು ಅವರನ್ನು ಸಶಕ್ತಗೊಳಿಸುವ ಉದ್ದೇಶದಿಂದ ಕೆಲವು ವಿಶೇಷ ಸವಲತ್ತುಗಳನ್ನು ನೀಡಲಾಗಿದೆ. ಸಂವಿಧಾನದ ಮೂರು ಮತ್ತು ನಾಲ್ಕನೇ ಭಾಗಗಳಲ್ಲಿ ಪುರುಷನಿಗೆ ಸಮಾನವಾಗಿ ಮಹಿಳೆಯರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆ ಜೊತೆಗೆ ಸಮಾನ ನ್ಯಾಯ ನೀಡಲಾಗಿದೆ. ಈ ಕಾರಣಕ್ಕಾಗಿಯೇ 1957ರಲ್ಲಿ 'ಸೆಂಟ್ರಲ್ ಕೌನ್ಸಿಲ್ ಆಫ್ ಲೋಕಲ್ ಗವರ್ನ್‌ಮೆಂಟ್' ಮಹಿಳೆ ಮತ್ತು ಮಕ್ಕಳ ಕುರಿತು ಆಸಕ್ತಿಯಿಂದ ಕೆಲಸ ಮಾಡಲು ಇಚ್ಛೆ ಇರುವ ಇಬ್ಬರು ಮಹಿಳೆಯರನ್ನು ಪಂಚಾಯಿತಿ ಸದಸ್ಯರಾಗಿ ಸಹ-ಆಯ್ಕೆ ಮಾಡಬೇಕೆಂದು ತಿಳಿಸಿತು. ಈ ವಾದವನ್ನೇ ಬಲವಂತರಾಯ್ ಮೆಹತಾ ಸಮಿತಿ ಸಹ ಶಿಫಾರಸ್ಸು ಮಾಡಿತು. ಭಾರತದಲ್ಲಿ ಮಹಿಳೆಯರಿಗೆ ಅಸಮರ್ಪಕ ಪ್ರಾತಿನಿಧ್ಯವಿದೆ ಎಂದು 1971ರಲ್ಲಿ

'ಮಹಿಳಾ ಸ್ಥಾನ-ಮಾನ ಅಧ್ಯಯನ ಸಮಿತಿ' ತನ್ನ ವರದಿಯಲ್ಲಿ ತಿಳಿಸಿತು. ಸ್ಥಳೀಯ ಮಟ್ಟದ ಪಂಚಾಯಿತಿಗಳಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ವಾರ್ಡ್‌ಗಳನ್ನು ರಚಿಸುವುದಕ್ಕೆ ಅವಕಾಶ ಕಲ್ಪಿಸುವ ಪಂಚಾಯತ್ ಕಾಯ್ದೆ ಜಾರಿಗೊಳಿಸುವಂತೆ ಈ ಸಮಿತಿ ಶಿಫಾರಸ್ಸು ಮಾಡಿತು. ಅಲ್ಲದೇ, ಸ್ಥಳೀಯ ಮಟ್ಟದಲ್ಲಿ ಸಂಪನ್ಮೂಲಗಳನ್ನು ಹೊಂದಿರುವ ಮತ್ತು ಅದನ್ನು ಬಳಸಲು ಅಧಿಕಾರವಿರುವ ಮಹಿಳಾ ಪಂಚಾಯಿತಿಗಳು ಇರಬೇಕೆಂದು ಶಿಫಾರಸ್ಸು ಮಾಡಿತು. ಆದರೆ ಯಾವ ರಾಜ್ಯ ಸರ್ಕಾರಗಳೂ ಈ ಶಿಫಾರಸ್ಸಿನ ಬಗ್ಗೆ ಗಮನ ಹರಿಸಲಿಲ್ಲ. ಹೀಗಾಗಿ ಈ ಶಿಫಾರಸ್ಸು ಫಲಪ್ರದವಾಗಲೇ ಇಲ್ಲ. ಆಂಧ್ರಪ್ರದೇಶದಲ್ಲಿ ಮಾತ್ರ ಈ ಶಿಫಾರಸ್ಸು ಚರ್ಚೆಗೆ ಒಳಪಟ್ಟು ಉತ್ತಮ ತಿರುವು ಪಡೆದುಕೊಂಡಿತು. 1979ರಲ್ಲಿ ಆಂಧ್ರಪ್ರದೇಶ ಸರ್ಕಾರವು ಮಹಿಳಾ ಮತದಾರರು ಹೆಚ್ಚು ಇರುವ ಪ್ರತಿ ಬ್ಲಾಕ್ ಮಟ್ಟದಲ್ಲಿ ಶೇ.5ರಷ್ಟು ಸರಪಂಚರ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲು ಶಿಫಾರಸ್ಸು ಮಾಡಿತು. 1978ರಲ್ಲಿ ಅಶೋಕ ಮೆಹತಾ ಸಮಿತಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಪರಿಷ್ಕರಿಸಿತು. ಮಹಿಳೆ ತನ್ನ ಸ್ವ-ಸಾಮರ್ಥ್ಯದ ಮೇಲೆ ಪಂಚಾಯಿತಿ ಚುನಾವಣೆಗಳಲ್ಲಿ ಗೆಲ್ಲಲು ಸಾಧ್ಯವಾಗದ ಸಂದರ್ಭದಲ್ಲಿ ಜಿಲ್ಲಾಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿ, ಸೋತ ಮಹಿಳೆಯರಲ್ಲಿ ಹೆಚ್ಚು ಮತ ಗಳಿಸಿದ ಇಬ್ಬರನ್ನು ಪಂಚಾಯಿತಿಗೆ ಸದಸ್ಯರಾಗಿ ಆಯ್ಕೆ ಮಾಡಬೇಕು. ಒಂದು ವೇಳೆ ಯಾವ ಮಹಿಳೆಯು ಲಭ್ಯವಾಗದ ಸಂದರ್ಭದಲ್ಲಿ ಸಹ-ಆಯ್ಕೆ/ನಾಮನಿರ್ದೇಶನ ಮಾಡುವಂತೆ ಶಿಫಾರಸ್ಸು ಮಾಡಿತು.[42] ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗಾಗಿ ಕೆಲವೊಂದು ಪ್ರದೇಶಗಳನ್ನು ಮೀಸಲು ಕ್ಷೇತ್ರಗಳೆಂದು ಘೋಷಿಸಬೇಕೆಂದು ತಿಳಿಸಿತು.[43] ವಿವಿಧ ರಾಜಕೀಯ ಪಕ್ಷಗಳ ಸ್ಪರ್ಧಾತ್ಮಕ ರಾಜಕೀಯ ಪೈಪೋಟಿಯಿಂದಾಗಿ ಮಹಿಳೆಯರು ಈ ಮೀಸಲಾತಿ ಲಾಭವನ್ನು ಪಡೆಯಲಾಗಲಿಲ್ಲ.

1983ರಲ್ಲಿ ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದ ಜನತಾದಳ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ನಜೀರ್‌ಸಾಬ್ ಅವರ ಆಸಕ್ತಿಗನುಗುಣವಾಗಿ ಪಂಚಾಯತ್ ಸಂಸ್ಥೆಗಳು ಪುನರುತ್ಥಾನಗೊಂಡವು. ಈ ಸರ್ಕಾರವು ಜಾರಿಯಲ್ಲಿದ್ದ 1959ರ ಮೈಸೂರು ಗ್ರಾಮ ಪಂಚಾಯತ್ ಮತ್ತು ಸ್ಥಳೀಯ ಶಾಸನವನ್ನು ತಿದ್ದುಪಡಿ ಮಾಡಿತು. ಕರ್ನಾಟಕ ಸರ್ಕಾರವು 1983ರ ಜಿಲ್ಲಾಪರಿಷತ್, ತಾಲೂಕುಪಂಚಾಯತ್ ಸಮಿತಿ, ಮಂಡಲಪಂಚಾಯತ್ ಮತ್ತು ನ್ಯಾಯಪಂಚಾಯತ್ ಕಾಯ್ದೆಯನ್ನು 1985ರಲ್ಲಿ ಜಾರಿಗೆ ತಂದಿತು. ಆ ಮೂಲಕ ಜನಸಂಖ್ಯೆ ಆಧಾರದ ಮೇಲೆ ಹತ್ತು ಸಾವಿರ ಜನಸಂಖ್ಯೆಯುಳ್ಳ ಹಳ್ಳಿಗಳ ಸಮುದಾಯದಲ್ಲಿ ತಳಮಟ್ಟದ ಮಂಡಲಪಂಚಾಯತಿಯನ್ನ ರಚನೆ ಮಾಡಲಾಯಿತು. ಹರಿಜನ, ಗಿರಿಜನ ಮತ್ತು ಹಿಂದುಳಿದ ಮಹಿಳೆಯರು ಒಳಗೊಂಡಂತೆ ಮಹಿಳೆಯರಿಗೆ ಮಂಡಲಪಂಚಾಯಿತಿಯಲ್ಲಿ ಶೇ.25ರಷ್ಟು ಮೀಸಲಾತಿ ನೀಡಲಾಯಿತು. ಈ ಸರ್ಕಾರವು ವಿಶೇಷವಾಗಿ ಮಹಿಳೆಯರಿಗೆ ದೇಶೀಯ ಆಡಳಿತದಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿತು. ಮುಂದುವರಿದ ಜನಸಮುದಾಯದ ಸಮನಾಗಿ ನಿಲ್ಲಬಲ್ಲ ಮಾನಸಿಕ ಮತ್ತು ಸಾಮಾಜಿಕ ಪರಿಸರವನ್ನು ನಿರ್ಮಿಸಿತು.

ಜಮೀನ್ದಾರಿ ಮತ್ತು ವೈದಿಕ ಪರಂಪರೆ ನೆರಳಿನಲ್ಲಿ ಬೆಳೆದು ಬಂದ ಪುರುಷ ಯಾಜಮಾನ್ಯ ಸಮುದಾಯವು ದೇಶೀಯ ಆಡಳಿತದಲ್ಲಿ ಈ ಮಹಿಳಾ ಮೀಸಲಾತಿಯಿಂದ ಆದ ಬದಲಾವಣೆಯನ್ನು

ಒಪ್ಪಿಕೊಳ್ಳಲು ಮಾನಸಿಕವಾಗಿ ಸಿದ್ಧರಿರಲಿಲ್ಲ. ಆದರೂ ಸಮುದಾಯದ ಜೀವನದಲ್ಲೂ ಬದಲಾವಣೆಗಳು ಕಂಡುಬಂದವು. ಮಹಿಳೆಯರು ಒತ್ತಡ ಹಾಗು ಒತ್ತಾಯದ ಅನಿವಾರ್ಯತೆಗಳಿಂದ ಸ್ಥಳೀಯ ಆಡಳಿತದಲ್ಲಿ ಅಧಿಕಾರವನ್ನು ಪಡೆದುಕೊಂಡರು. ಪುರುಷನಿಂದ ಮಹಿಳೆಗೆ ಆಡಳಿತ ವರ್ಗಾವಣೆಯಾದರೂ ಸಹ ಅಧಿಕಾರದ ಹಿಂದೆ ಪುರುಷನ ಕೈವಾಡವಿದೆ.[44]

1980ರ ದಶಕದಲ್ಲಿ ರಾಜಕೀಯವಾಗಿ ಮಹಿಳಾ ಅಭಿವೃದ್ಧಿ ಕಡೆಗೆ ಹೆಚ್ಚಿನ ಗಮನ ನೀಡಲಾಯಿತು. ಬಹಳ ಮುಖ್ಯವಾಗಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ನಿರ್ಧಾರ ಕೈಗೊಳ್ಳುವ ಸಭೆಗಳಲ್ಲಿ ಭಾಗವಹಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು. 1984ರಲ್ಲಿ ಇಂದಿರಾಗಾಂಧಿ ಹತ್ಯೆಯಾದ ನಂತರ ಜರುಗಿದ ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಇದರ ಫಲವಾಗಿ ರಾಜೀವ್‌ಗಾಂಧಿ ಅವರಿಗೆ ಹೆಚ್ಚಿನ ಬಹುಮತ ದೊರಕಿತು ಹಾಗೂ ಮಹಿಳಾ ಮತಗಳಿಗೆ ಹೆಚ್ಚಿನ ಮಹತ್ವ ಮತ್ತು ಮಾನ್ಯತೆ ದೊರಕಿತು. ಅಂದಿನಿಂದ ಎಲ್ಲ ರಾಜಕೀಯ ಪಕ್ಷಗಳು ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮಹಿಳಾ ಸಬಲೀಕರಣದ ಪರವಾಗಿ ಮಾತನಾಡುವುದಕ್ಕೆ ಪ್ರಾರಂಭಿಸಿದವು. ತಮ್ಮ ಪಕ್ಷಗಳ ಸಂಘಟನೆಗಳಲ್ಲಿ ಮಹಿಳಾ ಘಟಕಗಳನ್ನು ತೆರೆದವು. ಗ್ರಾಮೀಣ ಮತ್ತು ನಗರ ಸ್ಥಳೀಯ ಆಡಳಿತದಲ್ಲಿ ಮಹಿಳಾ ಮೀಸಲಾತಿಯನ್ನು ಬೆಂಬಲಿಸಿದವು.[45] 1988ರಲ್ಲಿ ಅಸ್ತಿತ್ವಕ್ಕೆ ಬಂದ 'ಮಹಿಳಾ ರಾಷ್ಟ್ರೀಯ ಅಭಿವೃದ್ಧಿ ಯೋಜನೆ' ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಉತ್ತಮ ಅಡಿಪಾಯ ಹಾಕಿಕೊಟ್ಟಿತು. ಇದು ಪಂಚಾಯಿತಿಯ ಸ್ಥಾನ ಮತ್ತು ಹುದ್ದೆಗಳಲ್ಲಿ ಶೇ.30ರಷ್ಟು ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡುವಂತೆ ಶಿಫಾರಸ್ಸು ಮಾಡಿತು. ಹುದ್ದೆಗಳಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಮಹಿಳೆಯರಿಗೆ ನೀಡುವಂತೆ ಹಾಗೂ ಕೆಲವು ವಾರ್ಡ್/ಕ್ಷೇತ್ರಗಳನ್ನು ಮಹಿಳೆಯರಿಗಾಗಿ ಗೊತ್ತುಪಡಿಸಬೇಕೆಂದು ತಿಳಿಸಿತು. ಕೆಲವು ನಿರ್ದಿಷ್ಟ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪಂಚಾಯಿತಿಗಳಲ್ಲಿನ ಎಲ್ಲಾ ಹುದ್ದೆಗಳನ್ನು ಮಹಿಳಾ ಪ್ರತಿನಿಧಿಗಳಿಗೆ ಮೀಸಲಿಡುವಂತೆ ಒತ್ತಾಯಪಡಿಸಿತು. 1957ರ ಬಲವಂತರಾಯ್ ಮೆಹತಾ ಮತ್ತು 1978ರ ಅಶೋಕ್ ಮೆಹತಾ ಸಮಿತಿಗಳು ಮಾಡಿದ ಶಿಫಾರಸ್ಸಿನಂತೆ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಒಂದೆರಡು ನಾಮನಿರ್ದೇಶಿತ ಸ್ಥಾನಗಳಿಂದ ಶೇ.30ರಷ್ಟು ಸ್ಥಾನಗಳನ್ನು ನೀಡುವುದನ್ನು ಈ ಯೋಜನೆ ನಿಧಾನವಾಗಿ ಒಪ್ಪಿಕೊಂಡಿತು.

ಸಂವಿಧಾನದ 64ನೇ ತಿದ್ದುಪಡಿಯ ಕರಡು ತಯಾರಿಸುವ ಮುನ್ನ, ಪಂಚಾಯಿತಿಗಳಲ್ಲಿನ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಲು ಆಯೋಜಿಸಲಾಗಿದ್ದ ಪೂರ್ವಸಿದ್ಧತಾ ವಿಚಾರ ಸಂಕಿರಣದ ಕಾರ್ಯಕ್ರಮದ ಪಟ್ಟಿಯಲ್ಲಿ ಮಹಿಳೆ ಮತ್ತು ಪಂಚಾಯತ್‌ಗೆ ಸಂಬಂಧಿಸಿದ ವಿಷಯ ಕಾರ್ಯಕ್ರಮದ ಪಟ್ಟಿಯಲ್ಲಿ ಇರಲೇ ಇಲ್ಲ. ಆದರೆ ವಿಚಾರ ಸಂಕಿರಣದ ಕೊನೆಯ ಭಾಗದಲ್ಲಿ ಮಹಿಳೆಯರಿಗೆ ಶೇ.30ರಷ್ಟು ಮೀಸಲಾತಿ ಒದಗಿಸುವುದರ ಕುರಿತು ಚರ್ಚಿಸಲಾಯಿತು. 64ನೇ ತಿದ್ದುಪಡಿ ಮಸೂದೆಯು ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಹಿಳೆಯರು ಒಳಗೊಂಡಂತೆ, ಮಹಿಳೆಯರಿಗೆ ಶೇ.30ರಷ್ಟು ಮೀಸಲಾತಿ ನೀಡಲು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಎರಡು ಸ್ಥಾನಗಳು ಮೀಸಲು ಇರುವಲ್ಲಿ ಒಂದು ಸ್ಥಾನವನ್ನು ಕಡ್ಡಾಯವಾಗಿ

ಮಹಿಳೆಗೆ ಮೀಸಲಿಡುವಂತೆ ಶಾಸನ ಜಾರಿಗೆ ತರಲು ನಿರ್ಧರಿಸಿತು. ಪಂಚಾಯಿತಿ ಅಧ್ಯಕ್ಷರ ಹುದ್ದೆಯ ಮೀಸಲಾತಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಹಿಳೆಯರ ಪರವಾಗಿ ನಿರ್ಧರಿಸುವ ವಿವೇಚನಾಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟುಕೊಟ್ಟಿತು.

1989ರಲ್ಲಿ ಅಧಿಕಾರ ಸ್ವೀಕರಿಸಿದ ವಿ.ಪಿ.ಸಿಂಗ್ ಸರ್ಕಾರವು ಮಹಿಳಾ ಮೀಸಲಾತಿಗೆ ಸಂಬಂಧಿಸಿದ ಮತ್ತೊಂದು ಹೊಸ ಕರಡು ಮಸೂದೆಯನ್ನು ಸದನದಲ್ಲಿ ಮಂಡಿಸಿತು. ಅದರ ಪ್ರಕಾರ, ಮೂರನೇ ಒಂದು ಭಾಗದಷ್ಟು ಕಡಿಮೆ ಇಲ್ಲದ ರೀತಿಯಲ್ಲಿ ಆವರ್ತನ ನೀತಿಯಲ್ಲಿ ಮಹಿಳಾ ಮೀಸಲಾತಿ ಇರುವಂತೆ ಅನುಮೋದಿಸಿತು. ಆದರೆ ಈ ಮಸೂದೆಯಲ್ಲೂ ಅಧ್ಯಕ್ಷರ ಸ್ಥಾನಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಇರಲಿಲ್ಲ. ಬಹುಶಃ ಈ ಎಲ್ಲ ಅಂಶಗಳಿಂದಲೇ 73ನೇ ತಿದ್ದುಪಡಿಯು, ಪಂಚಾಯಿತಿಯಲ್ಲಿ ಮಹಿಳೆಯರಿಗೆ ಸಕಾರಾತ್ಮಕ ಅವಕಾಶ ನೀಡಿದೆ.[46] 1991ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು ಪಂಚಾಯಿತಿಯ ಒಟ್ಟು ಸ್ಥಾನ ಮತ್ತು ಹುದ್ದೆಗಳಲ್ಲಿ ಮೂರನೇ ಒಂದು ಭಾಗದಷ್ಟಕ್ಕೆ ಕಡಿಮೆ ಇಲ್ಲದ ರೀತಿಯಲ್ಲಿ ಮಹಿಳಾ ಮೀಸಲಾತಿಯನ್ನು ಸಂವಿಧಾನದ 73ನೇ ತಿದ್ದುಪಡಿ ಮೂಲಕ ಜಾರಿಗೆ ತಂದಿತು. ಸುಧೀರ್ಘವಾದ ಈ ಮೀಸಲಾತಿ ಪ್ರಯಾಣದಲ್ಲಿ ನಿಧಾನವಾಗಿ ಮತ್ತು ಪ್ರಾಯೋಗಿಕವಾಗಿ ಒಲ್ಲದ ಮನಸ್ಸಿನಿಂದಲೇ ಪ್ರಥಮ ಬಾರಿಗೆ ಮಹಿಳೆಯರಿಗೆ ಅಧ್ಯಕ್ಷೀಯ ಹುದ್ದೆಯಲ್ಲಿ ಮೀಸಲಾತಿಯನ್ನು ನೀಡಲಾಯಿತು. ಗ್ರಾಮಪಂಚಾಯಿತಿಯ ಅಧ್ಯಕ್ಷರ ಹುದ್ದೆ ಘನತೆ ಮತ್ತು ಗೌರವದ ಹುದ್ದೆಯಾಗಿದ್ದು, ಜಿಲ್ಲಾಪಂಚಾಯಿತಿ ಮತ್ತು ತಾಲೂಕುಪಂಚಾಯಿತಿ ಸದಸ್ಯರ ಕಣ್ಣಿನಲ್ಲಿ ಮಹತ್ವದ ಹುದ್ದೆಯಾಗಿದೆ. ಆದರೆ ಇಂದು ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಸುಮಾರು 3 ಮಿಲಿಯನ್ ಚುನಾಯಿತ ಪ್ರತಿನಿಧಿಗಳು ಇದ್ದಾರೆ. ಇವರಲ್ಲಿ ಹೆಚ್ಚುಕಡಿಮೆ ಶೇ.50ರಷ್ಟು ಮಹಿಳಾ ಸದಸ್ಯರಾಗಿದ್ದಾರೆ. ಈ ಮಹಿಳಾ ಪ್ರತಿನಿಧಿಗಳು ಸುಮಾರು 2.4 ಲಕ್ಷಕ್ಕಿಂತ ಹೆಚ್ಚು ಗ್ರಾಮಪಂಚಾಯಿತಿಗಳನ್ನು, 6,000 ತಾಲೂಕುಪಂಚಾಯಿತಿಗಳನ್ನು ಮತ್ತು 500 ಜಿಲ್ಲಾಪಂಚಾಯಿತಿಗಳನ್ನು ಪ್ರತಿನಿಧಿಸಿದ್ದಾರೆ. ಇಂದು ಪಂಚಾಯಿತಿಗಳು ಭಾರತದ ಶೇ.96.6ರಷ್ಟು ಭಾಗವನ್ನು, 5.8 ಲಕ್ಷಕ್ಕಿಂತ ಹೆಚ್ಚು ಗ್ರಾಮಗಳನ್ನು ಮತ್ತು ಶೇ.99ಕ್ಕಿಂತ ಹೆಚ್ಚು ಗ್ರಾಮೀಣ ಜನತೆಯನ್ನು ಪ್ರತಿನಿಧಿಸುವುದು ಕಂಡುಬರುತ್ತದೆ. ಕೇಂದ್ರದಲ್ಲಿ ಯು.ಪಿ.ಎ ಸರ್ಕಾರವು ಅಗಸ್ಟ 27, 2009ರಂದು ನೀಡಿದ ಒಪ್ಪಿಗೆ ಮೇರೆಗೆ ಸಂವಿಧಾನದ 243-ಡಿ ವಿಧಿಗೆ ತಿದ್ದುಪಡಿ ತರಲಾಯಿತು. ಇದರ ಫಲವಾಗಿ ಇಂದು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿಯನ್ನು ವಿಸ್ತರಿಸಲಾಗಿದೆ. ಈ ಹೊಸ ಮಹಿಳಾ ಮೀಸಲಾತಿ ನಿಯಮದ ಪ್ರಕಾರ, 14 ಲಕ್ಷಕ್ಕಿಂತ ಹೆಚ್ಚು ಮಹಿಳಾ ಚುನಾಯಿತ ಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಿದೆ. ಪಂಚಾಯತ್‌ರಾಜ್ ವ್ಯವಸ್ಥೆಯ ಮೂಲಕ ಮಹಿಳಾ ಪ್ರಾತಿನಿಧ್ಯವು ದೇಶದ ಉದ್ದಗಲಕ್ಕೂ ವ್ಯಾಪಿಸಿಕೊಂಡಿದೆ.[47] 73ನೇ ತಿದ್ದುಪಡಿಯಿಂದಾಗಿ ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ಲಭಿಸಿದೆ. ಇಂದು ಇವು ದೇಶಾದ್ಯಂತ ಏಕರೂಪದಲ್ಲಿ ರಚನೆಗೊಂಡಿವೆ. ಈ ತಿದ್ದುಪಡಿಯನ್ವಯ ಕರ್ನಾಟಕದಲ್ಲಿ 1993 ಪಂಚಾಯತ್‌ರಾಜ್ ಕಾಯಿದೆ ಜಾರಿಗೆ ಬಂದಿದೆ.

ಇಡೀ ಭಾರತದಲ್ಲಿ ಪ್ರಪ್ರಥಮ ಬಾರಿಗೆ ಕರ್ನಾಟಕದಲ್ಲಿ ಮಹಿಳೆಯರಿಗೆ ರಾಜಕೀಯ ಅಧಿಕಾರ ನೀಡುವ ಪ್ರಯತ್ನ ಮಾಡಲಾಗಿದೆ. 1959ರ "ದಿ ಮೈಸೂರು ವಿಲೇಜ್ ಪಂಚಾಯತ್ ಅಂಡ್ ಲೋಕಲ್ ಬೋರ್ಡ್ ಆಕ್ಟ್‌ನಲ್ಲಿ" ಒಬ್ಬ ಮಹಿಳೆಯನ್ನು ನಾಮಕರಣ ಮಾಡಲಾಯಿತು. 1985ರ ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆ ಮಹಿಳೆಯರಿಗೆ ಪಂಚಾಯಿತಿಗಳಲ್ಲಿ ಶೇ.25ರಷ್ಟು ಮೀಸಲಾತಿ ಒದಗಿಸಿಕೊಡುವುದರ ಮೂಲಕ ಅವರ ರಾಜಕೀಯ ಸಹಭಾಗಿತ್ವಕ್ಕೆ ಮತ್ತಷ್ಟು ಬಲ ನೀಡಿತು. ಈ ಕಾಯ್ದೆ ಪ್ರಕಾರ, 1987ರಲ್ಲಿ ನಡೆದ ಚುನಾವಣೆಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ದೊರಕಿತು. ಇದರಿಂದ ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ಭಾರತದಲ್ಲೇ ಪಂಚಾಯತ್‌ರಾಜ್ ವ್ಯವಸ್ಥೆಗೆ ಹೊಸ ತಿರುವು ಸಿಕ್ಕಿತು. ಸ್ಥಳೀಯ ಸರ್ಕಾರಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುವಂತಾಯಿತು. ಈ ಚುನಾವಣೆಯಲ್ಲಿ ಒಟ್ಟು 2469 ಮಂಡಲಪಂಚಾಯಿತಿಗಳ 55,158 ಸ್ಥಾನಗಳಲ್ಲಿ 14,025(ಶೇ.25.41) ಸ್ಥಾನಗಳಿಗೆ ಪರಿಶಿಷ್ಟ ಜಾತಿ/ಪಂಗಡದ ಮಹಿಳೆಯರು ಮತ್ತು 2469(ಶೇ.17.60) ಸ್ಥಾನಗಳಿಗೆ ಇತರ ವರ್ಗದ ಮಹಿಳೆಯರು ಸದಸ್ಯರಾಗಿ ಆಯ್ಕೆಯಾದರು. ಜಿಲ್ಲಾಪರಿಷತ್‌ನ ಒಟ್ಟು 821 ಸ್ಥಾನಗಳಲ್ಲಿ 201(ಶೇ.24.48) ಸ್ಥಾನಗಳಿಗೆ ಮಹಿಳಾ ಸದಸ್ಯರು ಆಯ್ಕೆಯಾದರು. ಇವರಲ್ಲಿ 18 ಜನ ಪರಿಶಿಷ್ಟ ಜಾತಿ/ಪಂಗಡದ ಮಹಿಳಾ ಸದಸ್ಯರು ಆಯ್ಕೆಯಾಗಿದ್ದರು.[48] ಈ ಮೂಲಕ ಸ್ಥಳೀಯ ಸರ್ಕಾರದಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಕರ್ನಾಟಕವು ಪ್ರಯೋಗಶಾಲೆಯಾಗಿ ಕಂಡುಬಂತು. ಈ ಮಹತ್ವದ ಪ್ರಯೋಗ ಇಡೀ ರಾಷ್ಟ್ರದ ಗಮನ ಸೆಳೆಯಿತು. ಇದು ಮುಂದೆ 73ನೇ ಸಂವಿಧಾನದ ತಿದ್ದುಪಡಿಗೆ ದಿಕ್ಸೂಚಿಯಾಯಿತು.

ಸಂವಿಧಾನದ 73ನೇ ತಿದ್ದುಪಡಿಗನುಗುಣವಾಗಿ ರಾಜ್ಯದಲ್ಲಿ 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ ಜಾರಿಗೆ ಬಂದಿದೆ. ಈ ಅಧಿನಿಯಮದಲ್ಲಿ 321 ಪ್ರಕರಣಗಳು, 4 ಅನುಸೂಚಿಗಳು ಮತ್ತು 18 ಅಧ್ಯಾಯಗಳಿವೆ. ಪ್ರಸ್ತುತವಾಗಿ ರಾಜ್ಯದಲ್ಲಿ ಒಟ್ಟು 27,028 ಕಂದಾಯ ಗ್ರಾಮಗಳಿವೆ[49] ಹಾಗೂ 5,628 ಗ್ರಾಮಪಂಚಾಯಿತಿಗಳು ರಚನೆಗೊಂಡಿವೆ. ಸಂವಿಧಾನದ 73ನೇ ತಿದ್ದುಪಡಿಯಲ್ಲಿ ಪಟ್ಟಿ ಮಾಡಿದ, ಪಂಚಾಯಿತಿಗಳಿಗೆ ವರ್ಗಾವಣೆ ಮಾಡಬೇಕಾಗಿದ್ದ ಹಣಕಾಸು ಮತ್ತು ಅಧಿಕಾರಕ್ಕೆ ಸಂಬಂಧಿಸಿದ ಎಲ್ಲ 29 ವಿಷಯಗಳನ್ನು ವರ್ಗಾಯಿಸಿದ ಏಕಮಾತ್ರ ರಾಜ್ಯವೆಂದರೆ ಕರ್ನಾಟಕ ಎಂದು ಹೇಳಬಹುದು.[50] ಇಂದು ರಾಜ್ಯದಲ್ಲಿ ಮೂರು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಯಲ್ಲಿದೆ. ಜಿಲ್ಲಾಪಂಚಾಯಿತಿ, ತಾಲೂಕುಪಂಚಾಯಿತಿ ಮತ್ತು ಗ್ರಾಮಪಂಚಾಯಿತಿಗಳು ಕಾರ್ಯ ನಿರ್ವಹಿಸುತ್ತಿವೆ. ಆಯಾ ಪ್ರದೇಶದ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ದುರ್ಬಲ ವರ್ಗಗಳು ಒಳಗೊಂಡಂತೆ, ಮಹಿಳೆಯರಿಗೆ ಸ್ಥಾನಗಳಲ್ಲಿ ಮತ್ತು ಹುದ್ದೆಗಳಲ್ಲಿ ಶೇ.33ರಷ್ಟು ಮೀಸಲಾತಿ ನೀಡಿದೆ. ಆರ್ಥಿಕ ಅಭಿವೃದ್ಧಿ, ಸಾಮಾಜಿಕ ನ್ಯಾಯ ರೂಪಿಸುವ ಮತ್ತು ಜಾರಿಗೆ ತರುವ ಅಧಿಕಾರ ಪುರುಷ ಸದಸ್ಯರಷ್ಟೇ ಮಹಿಳಾ ಸದಸ್ಯರಿಗೂ ಲಭಿಸಿದೆ. ಆದರೆ ಈ ಮೀಸಲಾತಿ ಲಾಭವು ಮಹಿಳೆಯರ ಸದಸ್ಯತ್ವಕ್ಕೆ ಮಾತ್ರ ಸೀಮಿತವಾಯಿತೇ ಹೊರತು ಪದಾಧಿಕಾರತ್ವದಲ್ಲಿ ಸಮರ್ಪಕವಾಗಿ ಲಭಿಸಲಿಲ್ಲ ಎಂಬ ಅಸಮಾಧಾನ ಇನ್ನೂ ಕಂಡುಬರುತ್ತಿದೆ.

1993ರ ಪಂಚಾಯತ್‌ರಾಜ್ ಕಾಯ್ದೆ ಜಾರಿಗೆ ಬಂದ ಮೇಲೆ ಗ್ರಾಮಪಂಚಾಯಿತಿಗಳಿಗೆ ನಾಲ್ಕನೇ ಅವಧಿಗೆ ಯಶಸ್ವಿಯಾಗಿ ಚುನಾವಣೆ ನಡೆದಿದೆ. ಸ್ಥಳೀಯ ಸರ್ಕಾರಗಳ ರಚನೆಯಲ್ಲಿ ಜನರು ಹೆಚ್ಚು ಉತ್ಸಾಹ ತೋರುತ್ತಿದ್ದಾರೆ. ಈ ಪಂಚಾಯತ್‌ರಾಜ್ ಕಾಯಿದೆ ಪ್ರಕಾರ, ಪ್ರಥಮ ಬಾರಿಗೆ ಡಿಸೆಂಬರ್ 1993ರಲ್ಲಿ ನಡೆದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಒಟ್ಟು 5,640 ಗ್ರಾಮಪಂಚಾಯಿತಿಗಳ 80,627 ಸದಸ್ಯ ಸ್ಥಾನಗಳಲ್ಲಿ ಗ್ರಾಮೀಣ ಮಹಿಳೆಯರು ಶೇ.45.8(36,927) ಸ್ಥಾನಗಳಿಗೆ ಮತ್ತು ಶೇ.33.33(26873)ರಷ್ಟು ಅಧ್ಯಕ್ಷ ಮತ್ತು ಅಷ್ಟೇ ಪ್ರಮಾಣದ ಉಪಾಧ್ಯಕ್ಷರಾಗಿ ಆಯ್ಕೆಯಾದರು. 2000ರಲ್ಲಿ ನಡೆದ ಗ್ರಾಮಪಂಚಾಯತ್ ಚುನಾವಣೆಯಲ್ಲಿ 5,658 ಗ್ರಾಮಪಂಚಾಯಿತಿಗಳ ಒಟ್ಟು 78,460 ಸ್ಥಾನಗಳಲ್ಲಿ ಮಹಿಳೆಯರು ಶೇ.37.88(29,721) ಸದಸ್ಯ ಸ್ಥಾನಗಳಿಗೆ ಮತ್ತು ಶೇ.37.88(29,721)ರಷ್ಟು ಅಧ್ಯಕ್ಷ ಮತ್ತು ಅಷ್ಟೇ ಪ್ರಮಾಣದಲ್ಲಿ ಉಪಾಧ್ಯಕ್ಷರ ಹುದ್ದೆಗಳಿಗೆ ಚುನಾಯಿತರಾಗಿದ್ದಾರೆ. ಗ್ರಾಮಪಂಚಾಯಿತಿಗಳ ಒಟ್ಟು 78,460 ಸ್ಥಾನಗಳಲ್ಲಿ 12,842 ಸ್ಥಾನಗಳಿಗೆ ಪರಿಶಿಷ್ಟ ಜಾತಿ/ಪಂಗಡಗಳ ಮಹಿಳೆಯರು ಮತ್ತು 35,182 ಸ್ಥಾನಗಳಿಗೆ ಹಿಂದುಳಿದ ಮತ್ತು ಸಾಮಾನ್ಯ ವರ್ಗಗಳ ಮಹಿಳೆಯರು ಆಯ್ಕೆಯಾಗಿದ್ದಾರೆ. ಹಾಗೆಯೇ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಸಾಮಾನ್ಯ ವರ್ಗದ ಮಹಿಳೆಯರಿಗೆ ಕ್ರಮವಾಗಿ 5,424(ಶೇ.18.25), 1,560(ಶೇ.5.25), 9,906 (ಶೇ.33.33) ಮತ್ತು 12,831(ಶೇ.43.17) ಸ್ಥಾನಗಳನ್ನು ಮೀಸಲಿರಿಸಲಾಗಿತ್ತು. 2005ರಲ್ಲಿ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಒಟ್ಟು 80,073 ಸದಸ್ಯ ಸ್ಥಾನಗಳಲ್ಲಿ 35,922(ಶೇ.44.86) ಮಹಿಳಾ ಸದಸ್ಯರು ಆಯ್ಕೆಯಾಗಿದ್ದರು. ಇವರಲ್ಲಿ 7,218(ಶೇ.20) ಪರಿಶಿಷ್ಟ ಜಾತಿ, 5873(ಶೇ.16) ಪರಿಶಿಷ್ಟ ಪಂಗಡ ಮತ್ತು 10,716(ಶೇ.30) ಹಿಂದುಳಿದ ಹಾಗೂ 12,115(ಶೇ.34) ಸಾಮಾನ್ಯ ಮಹಿಳೆಯರು ಸದಸ್ಯರಾಗಿ ಆಯ್ಕೆಯಾಗಿದ್ದರು. 35,922 ಮಹಿಳಾ ಸದಸ್ಯರಲ್ಲಿ 2,155(ಶೇ.18) ಜನ ಪರಿಶಿಷ್ಟ ಜಾತಿ, 718(ಶೇ.6) ಜನ ಪರಿಶಿಷ್ಟ ಪಂಗಡ, 3,951(ಶೇ.33) ಜನ ಹಿಂದುಳಿದ ವರ್ಗ ಮತ್ತು 5148(ಶೇ.43) ಜನ ಸಾಮಾನ್ಯ ವರ್ಗದ(ಒಟ್ಟು 11,972) ಮಹಿಳೆಯರು ಅಧ್ಯಕ್ಷರಾಗಿ ಮತ್ತು ಅದೇ ಸಂಖ್ಯೆಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.[51] 2010ರಲ್ಲಿ ಗ್ರಾಪಂಚಾಯಿತಿಗಳಿಗೆ ನಾಲ್ಕನೇ ಅವಧಿಗೆ ಚುನಾವಣೆ ಜರುಗಿದೆ ಹಾಗೂ ಶೇ.70ರಷ್ಟು ಮತದಾನ ಆಗಿದೆ.[52] 5,628 ಗ್ರಾಮಪಂಚಾಯಿತಿಗಳಿಗೆ ಆಯ್ಕೆಯಾದ ಒಟ್ಟು 90,748 ಸದಸ್ಯರಲ್ಲಿ 39,318(ಶೇ.43.32) ಮಹಿಳಾ ಸದಸ್ಯರು ಇದ್ದಾರೆ. 90,318 ಸದಸ್ಯರಲ್ಲಿ ಶೇ.33.33ರಷ್ಟು(30,246) ಮಹಿಳಾ ಸದಸ್ಯರು ಅಧ್ಯಕ್ಷರಾಗಿ ಮತ್ತು ಅಷ್ಟೇ ಪ್ರಮಾಣದಲ್ಲಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರಲ್ಲಿ 5,444(ಶೇ.18) ಪರಿಶಿಷ್ಟ ಜಾತಿ ಮಹಿಳೆಯರು, 2,117(ಶೇ.7) ಪರಿಶಿಷ್ಟ ಪಂಗಡ ಮಹಿಳೆಯರು, 9,981(ಶೇ.33) ಹಿಂದುಳಿದ ಮಹಿಳೆಯರು ಹಾಗೂ 12,704(ಶೇ.42) ಸಾಮಾನ್ಯ ಮಹಿಳೆಯರು ಆಯ್ಕೆಯಾಗಿದ್ದಾರೆ.[53] ಮೀಸಲಾತಿ ಹೊರತಾಗಿ ಸರಿಸುಮಾರು 9,072(ಶೇ.10.01) ಮಹಿಳೆಯರು ಸಾಮಾನ್ಯ ಕ್ಷೇತ್ರಗಳಿಂದ ಆಯ್ಕೆಯಾಗಿರುವುದು ವಿಶೇಷವಾದ ಬೆಳವಣಿಗೆಯಾಗಿದೆ. ಕರ್ನಾಟಕದಲ್ಲಿ ಡಿಸೆಂಬರ್ 2010ರಲ್ಲಿ ಜರುಗಿದ ಜಿಲ್ಲಾಪಂಚಾಯಿತಿ ಮತ್ತು ತಾಲೂಕುಪಂಚಾಯಿತಿ ಚುನಾವಣೆಗಳಲ್ಲಿ ಮಹಿಳಾ ಸದಸ್ಯರ

ಪ್ರಾತಿನಿಧ್ಯ ಗಣನೀಯವಾಗಿ ಹೆಚ್ಚಳವಾಗಿದೆ. ಪ್ರಜಾಪ್ರಭುತ್ವದ ಮೂಲ ಆಶಯ ಹಾಗು ಬಹು ನಿರೀಕ್ಷೆಯ ರಾಜಕೀಯ ಸಮಾನತೆಯ ಸಂಖ್ಯೆಯ ದೃಷ್ಟಿಯಿಂದ ಪ್ರಥಮ ಬಾರಿಗೆ ರಾಜ್ಯದಲ್ಲಿ ಕೈಗೂಡಿದೆ ಎಂದು ಹೇಳಬಹುದು. ರಾಜ್ಯದ 30 ಜಿಲ್ಲಾಪಂಚಾಯಿತಿಗಳ ಒಟ್ಟು 1,013 ಸದಸ್ಯರಲ್ಲಿ ಶೇ.53.20(539) ಮಹಿಳಾ ಸದಸ್ಯರು ಆಯ್ಕೆಯಾಗಿದ್ದಾರೆ. 176 ತಾಲೂಕುಪಂಚಾಯಿತಿಗಳ ಒಟ್ಟು ಶೇ.55.15(3,659)ರಷ್ಟು ಸ್ಥಾನಗಳಲ್ಲಿ 2,018 ಸ್ಥಾನಗಳಿಗೆ ಮಹಿಳೆಯರು ಚುನಾಯಿತರಾಗಿದ್ದಾರೆ. ಮೀಸಲಾತಿ ಹೊರತಾಗಿ ಜಿಲ್ಲಾಪಂಚಾಯಿತಿಗಳಲ್ಲಿ ಶೇ.3.20(32)ರಷ್ಟು ಹಾಗೂ ತಾಲೂಕುಪಂಚಾಯಿತಿಗಳಲ್ಲಿ ಶೇ.5.15(188)ರಷ್ಟು ಹೆಚ್ಚು ಮಹಿಳೆಯರು ಆಯ್ಕೆಯಾಗಿರುವುದು ಕಂಡುಬರುತ್ತದೆ. ಇದು ವಿಶೇಷವಾದ ಬೆಳವಣಿಗೆಯಾಗಿದೆ. ಇದು ರಾಜ್ಯದಲ್ಲಿರುವ ಮಹಿಳಾ ಜನಸಂಖ್ಯೆಯ ಪ್ರಮಾಣಕ್ಕನುಗುಣವಾದ ಪ್ರಾತಿನಿಧ್ಯವಾಗಿದೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ನೀಡಿರುವುದರಿಂದ ಜನತಾಂತ್ರಿಕ ವಿಕೇಂದ್ರೀಕರಣದ ವ್ಯವಸ್ಥೆಗೆ ಮತ್ತಷ್ಟು ನ್ಯಾಯ ಒದಗಿಸಿದಂತಾಗಿದೆ.

2.4 ಗ್ರಾಮಪಂಚಾಯಿತಿ: ಮಹಿಳಾ ಸಬಲೀಕರಣ

ಪೀಠಿಕೆ

ಸ್ವಾತಂತ್ರ್ಯೋತ್ತರ ದಿನಗಳಲ್ಲಿ ದೇಶದ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಚಾಲನಶಕ್ತಿಯಾಗಿ ಗುರುತಿಸಿದ್ದ ಮುಖ್ಯ ಸಂಗತಿಯೆಂದರೆ ತಳಮಟ್ಟದ ಆಡಳಿತದಲ್ಲಿ ಮಹಿಳಾ ಪ್ರಾತಿನಿಧ್ಯ/ಭಾಗವಹಿಸುವಿಕೆ. ಮಹಿಳಾ ಪ್ರಾತಿನಿಧ್ಯಕ್ಕೆ ಮೀಸಲಾತಿ ನೀತಿಯೇ ನಿರ್ಣಾಯಕ ಶಕ್ತಿಯೆಂದು ನಿರ್ಣಯಿಸಲಾಗಿತ್ತು. ತಳಮಟ್ಟದ ಆಡಳಿತದಲ್ಲಿ ಮೀಸಲಾತಿ ವ್ಯವಸ್ಥೆಯಿಂದ ಮಹಿಳಾ ಪ್ರಾತಿನಿಧ್ಯ ಮಟ್ಟವನ್ನು(ಶೇ.33ಕ್ಕೆ) ವಿಸ್ತರಿಸುವುದೇ ಮಹಿಳಾ ಸಬಲೀಕರಣವೆಂದು ಹೇಳಲಾಗುತ್ತಿತ್ತು. ಯಾವ ರಾಜ್ಯದ ರಾಜಕೀಯ ಆಡಳಿದಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಾರೋ ಅಲ್ಲಿ ಮಹಿಳೆಯರು ಸಬಲರು ಎಂದು ಮತ್ತು ಯಾವ ರಾಜ್ಯದಲ್ಲಿ ರಾಜಕೀಯ ಆಡಳಿತದಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಅವಕಾಶ ಇರುವುದಿಲ್ಲವೋ ಅಲ್ಲಿ ಮಹಿಳೆಯರು ದುರ್ಬಲರು ಎಂಬುದು ಸಮಾಜವಿಜ್ಞಾನದ ಸಾಮಾನ್ಯ ನಿಯಮ. ಸಂವಿಧಾನ 73ನೇ ತಿದ್ದುಪಡಿಯ ಮುಂಚೆ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಬಲಪಡಿಸಲು ಜಾರಿಗೆ ಬಂದ ಕಾಯಿದೆಗಳು, ಅಧ್ಯಯನ ಸಮಿತಿಗಳು ಮತ್ತು ಅಭಿವೃದ್ಧಿ ಯೋಜನೆಗಳು ಮೀಸಲಾತಿ ನೀತಿಯಿಂದ ಮಹಿಳಾ ಸಬಲೀಕರಣಕ್ಕೆ ಪ್ರತ್ಯೇಕ ಪ್ರಮುಖ ಸ್ಥಾನ ನೀಡಲಾಯಿತು. 73ನೇ ತಿದ್ದುಪಡಿಯ ನಂತರದ ದಶಕಗಳಲ್ಲಿ ರಾಜಕೀಯವಾಗಿ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಸಂಶೋಧನಾ ಅಧ್ಯಯನಗಳು, ಪ್ರಬಂಧಗಳು, ಪುಸ್ತಕಗಳು ಮತ್ತು ಲೇಖನಗಳು ವಿಶೇಷವಾಗಿ ಮೀಸಲಾತಿ ನೀತಿಗೆ ಮೊದಲ ಆದ್ಯತೆ ನೀಡಿರುವುದು ಕಂಡುಬರುತ್ತದೆ. ಆದರೆ ಇಂದು ವಸ್ತುಸ್ಥಿತಿ ಬದಲಾಗಿದೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ.33.33ಕ್ಕೆ ಕಡಿಮೆ ಇಲ್ಲದಷ್ಟು ಸ್ಥಾನ ಮತ್ತು ಹುದ್ದೆಗಳನ್ನು ನೀಡಿದರೂ ಅಥವಾ ಶೇ.33ರಿಂದ ಶೇ.50ಕ್ಕೆ ಮೀಸಲಾತಿಯನ್ನು ವಿಸ್ತರಿಸಿದರೂ ಮಹಿಳೆ ಸಬಲೀಕರಣಗೊಳ್ಳುವಳು ಎಂದು ಹೇಳಲಾಗದು. ಏಕೆಂದರೆ, ಇಂದು

ಮಹಿಳೆ ಪುರುಷ ಯಾಜಮಾನ್ಯವನ್ನು ನಿರಾಕರಿಸಿ, ಸ್ವತಂತ್ರವಾಗಿ ಮತ್ತು ಸ್ವನಿರ್ಧಾರಕ್ಕೆ ಬದ್ಧವಾಗಿ ಮತ ನೀಡುವ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸುವ ಸಾಧ್ಯತೆಗಳಿವೆಯೇ? ಬಡತನ, ಅಜ್ಞಾನ, ಅನಕ್ಷರತೆ ಮತ್ತು ಅಸಮಾನತೆಗಳಿಂದ ವಿಮೋಚನೆ ಪಡೆದು ನಿರ್ಧಾರ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಅವಕಾಶಗಳಿವೆಯೇ? ಮಹಿಳೆ ಮೀಸಲಾತಿ ನೀತಿಯಿಂದ ಹೊರಬಂದು ಪ್ರಾತಿನಿಧ್ಯ ಪಡೆಯಲು ಸಾಮರ್ಥ್ಯವಿದೆಯೇ? ಈ ನಿಟ್ಟಿನಲ್ಲಿ ಪಂಚಾಯಿತಿ ಮೂಲಕ ಗ್ರಾಮೀಣ ಮಹಿಳೆಯರ ಸಬಲೀಕರಣವನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಮಹಿಳಾ ಸಬಲೀಕರಣ

ಈ ಅಧ್ಯಯನದಲ್ಲಿ ವೈಯಕ್ತಿಕ ಮತ್ತು ಸಮುದಾಯದ ಬದುಕಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಸ್ವನಿರ್ಧಾರದಂತೆ ಪ್ರಾತಿನಿಧ್ಯ ಪಡೆಯುವ ಮತ್ತು ನಿರ್ಧಾರ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಸಾಮರ್ಥ್ಯವನ್ನೇ ಸಬಲೀಕರಣವೆಂದು ಅರ್ಥೈಸಲಾಗಿದೆ. ಸ್ತ್ರೀ–ಪುರುಷರು ಸಮಾನರು ಎಂದು ಸಮ್ಮತಿ ಪಡೆದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹಿಳಾ ಸಬಲೀಕರಣವೆಂದರೇನು? ಗ್ರಾಮಪಂಚಾಯಿತಿಗಳ ಮೂಲಕವೇ ಮಹಿಳಾ ಸಬಲೀಕರಣವೇಕೆ? ಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕಾಗಿ ಶೇ.33ರಿಂದ ಶೇ.50ರಷ್ಟು ಅಥವಾ ಅವರ ಜನಸಂಖ್ಯೆಗೆ ಅನುಗುವಾಗಿ ಸ್ಥಾನ ಮತ್ತು ಹುದ್ದೆಗಳಲ್ಲಿ ಮೀಸಲಾತಿ ನೀಡಿದರೆ ಗ್ರಾಮೀಣ ಮಹಿಳೆಯರು ಸಬಲೀಕರಣಗೊಳ್ಳುವರೇ? ಇಂತಹ ಹತ್ತಾರು ಪ್ರಶ್ನೆಗಳು ನಮ್ಮ ಮುಂದೆ ಇರಬಹುದು. ಆದರೆ ಲೋಹಿಯಾ ಅವರು "ಶೋಷಿತರಲ್ಲಿ ಅತ್ಯಂತ ಹೆಚ್ಚು ಶೋಷಿತರು ಎಂದರೆ ಮಹಿಳೆಯರು" ಎಂದು ಹೇಳಿದ್ದಾರೆ. ಆದರೆ ಇಂದು ನಾವು ಮಹಿಳೆಯರಲ್ಲೇ ಹೆಚ್ಚು ಶೋಷಿತರು ಎಂದರೆ ಗ್ರಾಮೀಣ ಮಹಿಳೆಯರು ಎಂದು ಹೇಳಬಹುದು. ಆದ್ದರಿಂದ ಮಹಿಳಾ ಸಬಲೀಕರಣವು ಗ್ರಾಮಪಂಚಾಯಿತಿ ಪ್ರಾತಿನಿಧ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ರಂಗಗಳ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಾಗಿರುತ್ತದೆ. ಈ ರಂಗಗಳಲ್ಲಿ ಪ್ರಾತಿನಿಧ್ಯ ಪಡೆಯುವ ಮತ್ತು ನಿರ್ಧಾರ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಮಹಿಳಾ ಸ್ವನಿರ್ಧಾರದ ಪ್ರಮಾಣದ ಆಧಾರದ ಮೇಲೆ ಮಹಿಳಾ ಸಬಲೀಕರಣ ನಿರ್ಣಯವಾಗುತ್ತದೆ. ಇದು ಮಹಿಳೆ ತನ್ನ ವೈಯಕ್ತಿಕ ಮತ್ತು ಸಮುದಾಯದ ಜೀವನದ ಮೇಲೆ ನಿಯಂತ್ರಣ ಹೊಂದಲು ಸಹಾಯಕವಾಗುತ್ತದೆ. ಹೀಗೆ ಆದಾಗ ಮಾತ್ರ ಸಾಮಾಜಿಕ ಪರಿಸರದಲ್ಲಿ ಬದಲಾಣೆಯನ್ನು ಕಂಡುಕೊಳ್ಳಬಹುದು ಎಂಬ ನಂಬಿಕೆ ಇದೆ. ಹೀಗಾಗಿ ಗ್ರಾಮಪಂಚಾಯಿತಿಗಳಿಂದ ಮಹಿಳೆಯರನ್ನು ಹೊರಗಿಟ್ಟು ಮಹಿಳಾ ಸಬಲೀಕರಣದ ಕನಸು ಕಾಣಲಾಗದು. 'ಪ್ರಾತಿನಿಧ್ಯ ಪಡೆಯುವ ಮತ್ತು ನಿರ್ಧಾರವನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸ್ವನಿರ್ಧಾರದಂತೆ ಭಾಗವಹಿಸುವುದೇ ಸಬಲೀಕರಣ' ಎಂದು ನಿರ್ವಚಿಸಿಕೊಳ್ಳಲಾಗಿದೆ. ಅಂದರೆ ಮಹಿಳೆ ತನ್ನ ವೈಯಕ್ತಿಕ ಜೀವನ, ಸಮುದಾಯಕ್ಕೆ ಸಂಬಂಧಿಸಿದಂತೆ ಪ್ರಮುಖ ವಿಷಯಗಳ ಕುರಿತು ನಿರ್ಧಾರವನ್ನು ಕೈಗೊಳ್ಳುವ ಮತ್ತು ಜಾರಿಗೆ ತರುವ ಸಾಮರ್ಥ್ಯವೇ ಸಬಲೀಕರಣ. ಈ ದೃಷ್ಟಿಯಲ್ಲಿ ಸ್ತ್ರೀ–ಪುರುಷರ ಸಹಭಾಗಿತ್ವ ಇರುವ ರಾಜಕೀಯ ಸಂಸ್ಥೆಗಳಲ್ಲಿ ಸಮಾಜದ ಅಭಿವೃದ್ಧಿ ಮತ್ತು ನಿರ್ಧಾರ ಪ್ರಕ್ರಿಯೆಗಳಲ್ಲಿ ಮಹಿಳೆ ಸ್ವತಂತ್ರವಾಗಿ,

ಸ್ವನಿರ್ಧಾರದಂತೆ ಭಾಗವಹಿಸುವುದೇ ಮಹಿಳಾ ಸಬಲೀಕರಣ. ಮಹಿಳೆಯರು ತಾವು ಏನು ಆಗಬೇಕೆಂದಿದ್ದಾರೋ ಅದರಂತಾಗಲು ಮತ್ತು ಅವರು ಏನು ಮಾಡಬೇಕೆಂದಿದ್ದಾರೋ ಅದನ್ನು ಮಾಡಲು ಅಗತ್ಯವಾದ ಪ್ರಾತಿನಿಧ್ಯದ ಸ್ವಾತಂತ್ರ್ಯ ಮತ್ತು ನಿರ್ಧಾರದ ಸಾಮರ್ಥ್ಯವೇ ಸಬಲೀಕರಣ. ಈ ಸಂದರ್ಭದಲ್ಲಿ ಮಹಿಳೆಯರಿಗೆ ಇಂತಹ ಪ್ರಾತಿನಿಧ್ಯದ ಸ್ವಾತಂತ್ರ್ಯ ಮತ್ತು ನಿರ್ಧಾರದ ಸಾಮರ್ಥ್ಯವಿದೆಯೇ ಎಂದು ಕೇಳಿದರೆ ಉತ್ತರ ನೀಡುವುದು ಕಷ್ಟವಾಗುತ್ತದೆ. ಇಲ್ಲಿ ಸಬಲೀಕರಣವನ್ನು ವಿಶಿಷ್ಟ ಅರ್ಥದಲ್ಲಿ ಬಳಸಲಾಗಿದೆ. ಮಹಿಳೆಯರು ಸ್ವತಂತ್ರವಾಗಿ ಮತ್ತು ಮುಕ್ತವಾಗಿ ತಮ್ಮ ಬದುಕಿನ ಆಯ್ಕೆಗಳ ವ್ಯಾಪ್ತಿಯನ್ನು ನಿರ್ಧಾರ ಮಾಡುವುದಾಗಿದೆ. ಅವರ ಸ್ವಾತಂತ್ರ್ಯಕ್ಕೆ, ವಿಚಾರಕ್ಕೆ ಮತ್ತು ನಿರ್ಧಾರಕ್ಕೆ ಸಾಂಪ್ರದಾಯಿಕ ನಿಯಂತ್ರಣ ಮತ್ತು ನಿರ್ಬಂಧನೆಗಳಿಲ್ಲದ ಮುಕ್ತಸ್ಥಿತಿಯನ್ನು ಸಬಲೀಕರಣವೆಂದು ತಿಳಿಯಲಾಗಿದೆ.

ಇಂದು ಪಂಚಾಯತ್‌ರಾಜ್ ಅಧಿನಿಯಮ 1993ಕ್ಕೆ ಅಗತ್ಯವಾದ ತಿದ್ದುಪಡಿಗಳ ಮೂಲಕ ಮಹಿಳೆಯರಿಗೆ ಸರಿಸಮಾನ ಪ್ರಾತಿನಿಧ್ಯ ದೊರಕಿದೆ. ಇದು ಸೌಲಭ್ಯವಾಗಿದೆಯೇ ಹೊರತು ಹಕ್ಕಾಗಿಲ್ಲ. ಈ ಪ್ರಾತಿನಿಧ್ಯ ಮಹಿಳೆಯರಿಗೆ ಮೀಸಲಾತಿಯ ಅನಿವಾರ್ಯತೆಯಿಂದ ದೊರೆತ ಬಳುವಳಿಯಾಗಿದೆ. ಮಹಿಳೆಯರು ಸ್ವ-ಇಚ್ಛೆಯಿಂದ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತಿ ತೋರುತ್ತಿಲ್ಲ. ಮುಂದೆ ಬರುತ್ತಿಲ್ಲ. ಮೀಸಲಾತಿಯ ಅನಿವಾರ್ಯತೆಯನ್ನು ಒಪ್ಪಿಕೊಂಡ ರಾಜಕೀಯ ಹಿತಾಸಕ್ತಿಯ ಪುರುಷರು ಮಹಿಳೆಯರನ್ನು ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಒತ್ತಾಯಪಡಿಸುತ್ತಾರೆ. ನಂತರ ಇವರು ಪುರುಷರ ನೇರ ನಿಯಂತ್ರಣ ಮತ್ತು ನಿರ್ಬಂಧಕ್ಕೆ ಒಳಪಟ್ಟು ಪಂಚಾಯಿತಿ ನಿರ್ಧಾರ ಪ್ರಕ್ರಿಯೆಗಳಲ್ಲಿ ಭಾಗವಹಿಸುತ್ತಾರೆ.

ನಮ್ಮ ರಾಷ್ಟ್ರದಲ್ಲಿ ಮಹಿಳಾ ಸಬಲೀಕರಣಕ್ಕೆ ಇರುವ ಮುಖ್ಯ ಅಡ್ಡಿಯೆಂದರೆ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ ಮತ್ತು ಇಚ್ಛಾಶಕ್ತಿಯ ಕೊರತೆ ಇದೆಯೆಂದು ಗುರುತಿಸಲಾಗಿದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ ಊಳಿಗಮಾನ್ಯ ವ್ಯವಸ್ಥೆ, ಪುರುಷ ಯಜಮಾನಿಕೆ ಮತ್ತು ಲಿಂಗ ಅಸಮಾನತೆ. ಮಹಿಳಾ ಸಬಲೀಕರಣಕ್ಕೆ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅವರು ಸಕ್ರಿಯವಾಗಿ ಭಾಗವಹಿಸುವಿಕೆಯ ಕೊಡುಗೆ ಎಷ್ಟು ಎಂಬುದನ್ನು ಗುಣಾತ್ಮಕವಾಗಿ ಮತ್ತು ಪರಿಣಾಮಾತ್ಮಕವಾಗಿ ಅರಿಯಬೇಕಾಗಿದೆ. ಮಹಿಳಾ ಸಬಲೀಕರಣ ಭೌತಿಕವಾಗಿ ಅವರ ಪ್ರಾತಿನಿಧ್ಯ ಸಂಖ್ಯೆಗೆ ಸಂಬಂಧಿಸಿದ ಪ್ರಕ್ರಿಯೆ ಮಾತ್ರವಲ್ಲ. ಅದು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ್ದಾಗಿದೆ. 73ನೇ ತಿದ್ದುಪಡಿ ನಂತರ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಕೆಳಗಿನಿಂದ ಮೇಲಕ್ಕೆ ಹರಿಯುವ ಅನೇಕ ಅಭಿವೃದ್ಧಿಪರ ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಯೋಜನೆಗಳ ಮುಖ್ಯ ಉದ್ದೇಶ ಗ್ರಾಮೀಣ ಮಹಿಳೆಯರು ತಮ್ಮ ವೈಯಕ್ತಿಕ ಜೀವನ ಮತ್ತು ಸಮುದಾಯಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳಾದ ವಸತಿ, ಕುಡಿಯುವ ನೀರು, ಆರೋಗ್ಯ, ನೈರ್ಮಲ್ಯ, ಶಿಕ್ಷಣ, ಸಹಭಾಗಿತ್ವ, ಸಂಪನ್ಮೂಲ ಇತ್ಯಾದಿಗಳ ಕುರಿತು ನೀತಿ ನಿರ್ಣಯ ಕೈಗೊಳ್ಳುವ ಹಾಗೂ ಜಾರಿಗೆ ತರುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದು. ಆ ಮೂಲಕ ಸಾಮಾಜಿಕ ಮತ್ತು ಆರ್ಥಿಕ

ಪರಿಸರದಲ್ಲಿ ಬದಲಾವಣೆಯನ್ನು ನಿರೀಕ್ಷಿಸಲಾಗಿತ್ತು. ಆದರೆ ಈ ಯೋಜನೆಗಳು ನಿರೀಕ್ಷಿತ ಫಲವನ್ನು ನೀಡಲಿಲ್ಲ. ಊಳಿಗಮಾನ್ಯ, ಪುರುಷ ಯಜಮಾನಿಕೆಯ ಈ ಸಮಾಜದಲ್ಲಿ ರಾಜಕೀಯ ಹಿತಾಸಕ್ತಿಯ ಪುರುಷರು ಮಹಿಳಾ ಸದಸ್ಯರನ್ನು ಹಗುರವಾಗಿ ಕಾಣುತ್ತಿದ್ದಾರೆ. ಮಹಿಳೆಯ ಹೆಸರಿನಲ್ಲಿ ಅವರ ಪತಿ ಅಥವಾ ಪುರುಷ ಸಂಬಂಧಿಗಳು ಅಪ್ರತ್ಯಕ್ಷವಾಗಿ ಪಂಚಾಯಿತಿ ಅಧಿಕಾರಗಳನ್ನು ಚಲಾಯಿಸುತ್ತಿದ್ದಾರೆ. ಪಂಚಾಯಿತಿಗೆ ಆಯ್ಕೆಯಾಗುವ ಬಹಳಷ್ಟು ಜನ ಮಹಿಳೆಯರು ಸಾಮಾನ್ಯವಾಗಿ ಹಿಂದುಳಿದ ಜಾತಿ ವರ್ಗದವರಾಗಿದ್ದಾರೆ. ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಇಂದು ಗ್ರಾಮಪಂಚಾಯಿತಿಯಲ್ಲಿ ಸಾವಿರಾರು ಮಹಿಳೆಯರು ಜನಪ್ರತಿನಿಧಿಗಳಾಗಿ ನೀತಿ ನಿರ್ಣಯ ಕೈಗೊಳ್ಳುವಲ್ಲಿ ಭಾಗಿಗಳಾಗುತ್ತಿದ್ದಾರೆ. ಆದರೆ ಲಿಂಗಸಂಬಂಧಿ ಅಸಮಾನತೆಯಿಂದಾಗಿ ಅವರಲ್ಲಿ ಬಹುಪಾಲು ಮಹಿಳೆಯರಿಗೆ ತಮ್ಮ ಅಧಿಕಾರವನ್ನು ಚಲಾಯಿಸಲು ಸಾಧ್ಯವಾಗಿಲ್ಲ. ದಲಿತ, ಹಿಂದುಳಿದ ಸಮುದಾಯದ ಮಹಿಳೆಯರು ಸೇರಿದಂತೆ ಸಾಮಾನ್ಯ ವರ್ಗದ ಮಹಿಳೆಯರಿಗೆ ರಾಜಕೀಯ ಅಧಿಕಾರ ಬಂದಿದೆ. ಆದರೆ ದೈನಂದಿನ ಬದುಕಿನಲ್ಲಿ ಜಮೀನ್ದಾರರ, ಉನ್ನತ ವರ್ಗಗಳ ಮರ್ಜಿಯಲ್ಲಿ ಬದುಕಬೇಕಾದ ದಲಿತ ಹಾಗು ಹಿಂದುಳಿದ ವರ್ಗಗಳ ಮಹಿಳೆಯರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ, ದುಸ್ಥಿತಿಯಲ್ಲಿದ್ದಾರೆ.[54] ಪಂಚಾಯಿತಿಯಲ್ಲಿ ಗ್ರಾಮೀಣ ಮಹಿಳೆಗೆ ಮೀಸಲಾತಿ ರಾಜಕೀಯ ಪ್ರಾತಿನಿಧ್ಯಕ್ಕೆ ಸಾಧನವೇ ಹೊರತು ಅದುವೇ ಮಹಿಳಾ ಸಬಲೀಕರಣವಲ್ಲ. ಮಹಿಳೆ ಸಕ್ರಿಯ ರಾಜಕೀಯ ಪ್ರಾತಿನಿಧ್ಯದ ಜೊತೆಗೆ ಸ್ವತಂತ್ರವಾಗಿ ನಿರ್ಧಾರದ ಪ್ರಕ್ರಿಯೆಯಲ್ಲಿ ಭಾಗವಹಿಸುವುದೇ ಸಬಲೀಕರಣ. ಪ್ರಾತಿನಿಧ್ಯ ಕೊಡುಗೆ ಅಲ್ಲ. ಅದು ಹಕ್ಕಾಗಬೇಕು. ಒಟ್ಟಾರೆಯಾಗಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಾತಿನಿಧ್ಯ ನಿರ್ಧಾರವನ್ನು ಸ್ವತಂತ್ರವಾಗಿ ತೆಗೆದುಕೊಳ್ಳುವ ಮತ್ತು ದಕ್ಕಿಸಿಕೊಳ್ಳುವ ಶಕ್ತಿ ಮಹಿಳೆಯರಲ್ಲಿ ಬರಬೇಕು. ಹೀಗೆ ಆದಾಗ ಮಾತ್ರ ಸಮಾನ ಪ್ರಾತಿನಿಧ್ಯ ಮತ್ತು ಸಬಲೀಕರಣ ಸಾಧ್ಯವಾಗುತ್ತದೆ.

ತಳಮಟ್ಟದ ಆಡಳಿತದಲ್ಲಿ ಮಹಿಳಾ ಮೀಸಲಾತಿ ಮತ್ತು ಮಹಿಳಾ ಪ್ರಾತಿನಿಧ್ಯ ಇದೆಯೇ ವಿನಾ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ ಮತ್ತು ಸ್ವ–ನಿರ್ಧಾರ ಮಾಯವಾಗಿಬಿಟ್ಟಿದೆ. ಪಂಚಾಯಿತಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಸಾಧನವಾಗಿರುವ ಮೀಸಲಾತಿ ಮತ್ತು ಮೀಸಲಾತಿ ಆವರ್ತನ ನೀತಿ ರಾಜಕೀಯವಾಗಿ ಚರ್ಚಾ ವಿಷಯವಾಗಿದೆ. ಮೀಸಲಾತಿಯಿಂದ ಮಹಿಳೆ ಪ್ರಾತಿನಿಧ್ಯ ಕಂಡುಬಂದರೂ, ನಿರ್ಧಾರದ ಪ್ರಕ್ರಿಯೆಯಲ್ಲಿ ಅವರು ಇಲ್ಲವಾಗಿದ್ದಾರೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಪ್ರಾತಿನಿಧ್ಯ ಮತ್ತು ನಿರ್ಧಾರ ಪ್ರಕ್ರಿಯೆಗಳ ನಡುವಿನ ಸಂಬಂಧ ಗೊಂದಲಮಯವಾಗಿದೆ. ಪಂಚಾಯಿತಿ ಆಡಳಿತ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮತ್ತು ಸ್ವ–ನಿರ್ಧಾರ ಕೈಗೊಳ್ಳುವುದರಲ್ಲಿಯೇ ಮಹಿಳೆಯರ ಸಬಲೀಕರಣ ಇದೆಯೇ ವಿನಾ ಅವರಿಗೆ ಮೀಸಲಾತಿ ಹಾಗೂ ಪ್ರಾತಿನಿಧ್ಯದ ಅವಕಾಶಗಳನ್ನು ಹೆಚ್ಚಿಸುವುದರಲ್ಲಿಲ್ಲ. ಅತ್ಯಂತ ದುರದೃಷ್ಟಕರ ಸಂಗತಿಯೆಂದರೆ ಪಂಚಾಯಿತಿಗಳಲ್ಲಿ ಮಹಿಳಾ ಸಬಲೀಕರಣವು ಮೀಸಲಾತಿಯ ಭಾಗವಾಗಿದೆ. ಇಲ್ಲಿ ಮಹಿಳೆಯರ ಸ್ವ–ನಿರ್ಧಾರ ಮತ್ತು ಭಾಗವಹಿಸುವ ಪ್ರಕ್ರಿಯೆ ಮಾಯವಾಗಿಬಿಟ್ಟಿದೆ. ಇದನ್ನು ಸರಿಪಡಿಸುವ ಉದ್ದೇಶ ಇದ್ದರೆ, ಪಂಚಾಯಿತಿಯಲ್ಲಿ ಮಹಿಳೆಯರ ಭಾಗವಹಿಸುವುದರ ಜೊತೆಗೆ

ಸ್ವತಂತ್ರವಾಗಿ ಮತ್ತು ಮುಕ್ತವಾಗಿ ನಿರ್ಧಾರ ಕೈಗೊಳ್ಳುವ ಅವಕಾಶವನ್ನು ನೀಡಬೇಕಾಗಿದೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ವಿಕೇಂದ್ರೀಕರಣ ರಾಜಕೀಯಶಕ್ತಿಯಾಗಿ ಹೊರಹೊಮ್ಮಿದೆ. ಹಾಗೆಯೇ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯದ ಮೀಸಲಾತಿಯು ಮಹಿಳೆಯರಿಗೆ ರಾಜಕೀಯಶಕ್ತಿಯಾಗಿದೆ. ಉದಾರವಾದಿ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ತಳಮಟ್ಟದ ಆಡಳಿತದಲ್ಲಿ ಮೀಸಲಾತಿ ಆವರ್ತನ ನೀತಿ ಮತ್ತು ನಿಯತಕಾಲಿಕ ಚುನಾವಣೆಗಳು ಕ್ರಮಬದ್ಧವಾಗಿ ಸಾಗುತ್ತಿವೆ. ಇಂದು ಇದು ಎರಡು ಮಾರ್ಗಗಳಿಂದ ಯಶಸ್ವಿಯಾಗುತ್ತಿದೆ. ಒಂದು, ಜನತೆ ಮತ್ತು ಸರ್ಕಾರದ ನಡುವೆ ಸಂಪರ್ಕ ಗಟ್ಟಿಯಾಗುತ್ತಿರುವುದು ಮತ್ತು ಅದು ಪಾರದರ್ಶಕವಾಗಿರುವುದು. ಎರಡು, ಊಳಿಗಮಾನ್ಯ ಮತ್ತು ಪುರುಷ ಯಜಮಾನಿಕೆ ಜೊತೆ ಹೆಜ್ಜೆ ಹಾಕುತ್ತಿರುವುದು.

ವಿಕೇಂದ್ರೀಕರಣ ಮತ್ತು ಮೀಸಲಾತಿ ವ್ಯವಸ್ಥೆಯು ಮಹಿಳೆಯರ ಸಬಲೀಕರಣಕ್ಕೆ ಸಹಾಯಕ ಹಾಗೂ ಪೂರಕವಾಗಿದೆ. ಮಹಿಳೆಯರು ಪ್ರಜ್ಞಾವಂತರಾಗಿ ಹಾಗೂ ಬುದ್ಧಿವಂತರಾಗಿ ಪರಿವರ್ತಿತರಾದರೆ ಮಾತ್ರ ಅವರು ತಮಗೆ ದೊರೆತ ಪ್ರಾತಿನಿಧ್ಯವನ್ನು ಸಾಫಲ್ಯಗೊಳಿಸಲು ಸಾಧ್ಯ. ಪಂಚಾಯತ್‌ರಾಜ್ ಸಂಸ್ಥೆಗಳು ಸೇರಿದಂತೆ ಇತರೆ ರಾಜಕೀಯ ಸಂಸ್ಥೆಗಳ ಬಗ್ಗೆ ಮಹಿಳೆಯರು ವಿಮರ್ಶಾತ್ಮಕ ದೃಷ್ಟಿಯಿಂದ ವಿವೇಚಿಸಬೇಕು. ಲಿಂಗಸಮಾನತೆ ಮತ್ತು ವ್ಯಕ್ತಿ ಗೌರವ ನಿಜವಾದರೆ ಮಾತ್ರ ಮಹಿಳಾ ಸಬಲೀಕರಣ ಯಶಸ್ವಿಯಾಗಲು ಸಾಧ್ಯ. ಮಹಿಳಾ ಸಬಲೀಕರಣ ಎಂಬ ಪರಿಕಲ್ಪನೆ ಪ್ರಚಲಿತ ವರ್ತಮಾನದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಒಳಗಾಗಿರುವ ವಿಷಯವಾಗಿದೆ. "ಮಹಿಳಾ ಸಬಲೀಕರಣದ ಮುಖ್ಯ ಉದ್ದೇಶ ಮಹಿಳೆಯರ ಬದುಕಿನ ಆಯ್ಕೆಗಳ ವ್ಯಾಪ್ತಿಯನ್ನು ವಿಸ್ತರಿಸುವುದಾಗಿದೆ." ಮಹಿಳೆ ಸರ್ವಸ್ವತಂತ್ರಳಾಗಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ವಾತಾವರಣವನ್ನು ನಿರ್ಮಿಸುವುದಾಗಿರುತ್ತದೆ.

ಜಾತಿ, ಧರ್ಮ, ವರ್ಗ, ಲಿಂಗ ಅಸಮಾನತೆಗಳು ಮಹಿಳಾ ಬದುಕಿನ ಮೇಲೆ ತೀವ್ರ ಪರಿಣಾಮ ಬೀರುವ ಅಂಶಗಳಾಗಿವೆ. ಈ ಅಸಮಾನತೆಗಳು ಮಹಿಳೆಯರ ಶೋಷಣೆಗೆ ಮತ್ತು ದೂಷಣೆಗೆ ಮೂಲವಾಗಬಹುದು. ಇವು ಪ್ರಜಾಪ್ರಭುತ್ವ ವಿಕೇಂದ್ರೀಕರಣ ವ್ಯವಸ್ಥೆಗೆ ಮತ್ತು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯಕ್ಕೆ ಅಪಾಯ ಮತ್ತು ಗಂಡಾಂತರಗಳನ್ನು ತರುವ ಸಾಧ್ಯತೆಗಳಿರುವುದರಿಂದ ಇವುಗಳನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಈ ಅಸಮಾನತೆಗಳು ಮಹಿಳಾ ಸಬಲೀಕರಣಕ್ಕೆ ಧಕ್ಕೆ ತರುವಂಥವುಗಳಾಗಿವೆ. ಆಧುನಿಕ ಭಾರತವು ತನ್ನ ಮುಂದಿರುವ ಪ್ರಮುಖ ಗುರಿಗಳಲ್ಲಿ ವಿಕೇಂದ್ರೀಕರಣ ಮತ್ತು ಮಹಿಳಾ ಸಬಲೀಕರಣವು ಒಂದಾಗಿದೆ. ಸಂವಿಧಾನದ ಸಮಾನತೆಯ ಹಕ್ಕು ತಿಳಿಸಿರುವಂತೆ, ಸರ್ಕಾರವು ಸ್ತ್ರೀ–ಪುರುಷರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಸಮಾನ ಅವಕಾಶ ಮತ್ತು ಸಮಾನ ಕಾನೂನಿನ ರಕ್ಷಣೆ ನೀಡಿ, ವಿಶೇಷವಾಗಿ ಮಹಿಳೆಯರ ಸಬಲೀಕರಣಕ್ಕೆ ಪ್ರಯತ್ನ ಮಾಡಬೇಕೆಂದು ತಿಳಿಸಿದೆ. ಆದ್ದರಿಂದ ಸ್ತ್ರೀ–ಪುರುಷರ ನಡುವಿನ ಸಾಮಾಜಿಕ. ಆರ್ಥಿಕ ಮತ್ತು ರಾಜಕೀಯ ಅಸಮಾನತೆಯ ತೀವ್ರತೆ ನಿವಾರಿಸಿ, ಸಮಾನ ಅವಕಾಶ ಕಲ್ಪಿಸಿಕೊಡುವುದರ ಜೊತೆಗೆ ಮಹಿಳೆಯರನ್ನು ಸಬಲೀಕರಣಗೊಳಿಸುವುದು ಸರ್ಕಾರದ ಆದ್ಯ ಕರ್ತವ್ಯಗಳಲ್ಲಿ ಒಂದಾಗಿದೆ.

ಪ್ರಜಾಪ್ರಭುತ್ವ ವಿಕೇಂದ್ರೀಕರಣದ ಬಲಿಷ್ಠತೆಯ ಮತ್ತು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಸ್ಥಿರತೆಯ ದೃಷ್ಟಿಯಿಂದ ಮಹಿಳಾ ಪ್ರಾತಿನಿಧ್ಯ ಮತ್ತು ಸಬಲೀಕರಣವು ಅತ್ಯಂತ ಅವಶ್ಯಕವಾಗಿರುತ್ತದೆ.

ಮಹಿಳಾ ಸಬಲೀಕರಣ ತೊಂಬತ್ತರ ದಶಕದಲ್ಲಿ ಹೆಚ್ಚು ಚರ್ಚೆಗೆ ಒಳಗಾಗಿರುವ ವಿಷಯವಾಗಿದೆ. ಅದರೆ ರಾಜಕೀಯ ವಲಯದಲ್ಲಿ ಮಹಿಳಾ ಸಬಲೀಕರಣ ಕುರಿತಂತೆ ಸಾಕಷ್ಟು ಅಧ್ಯಯನ ನಡೆದಿವೆ. ಇಂದು ಸಬಲೀಕರಣಕ್ಕೆ ಸಂಬಂಧಿಸಿದಂತೆ ರಾಜಕೀಯ ಅಸಮಾನತೆಯ ಅಂತರಗಳನ್ನು ಸೀಮಿತ ನೆಲೆಯಲ್ಲಿ ಪರಿಭಾವಿಸುವುದಕ್ಕಿಂತಲೂ ಅದನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಷಯಗಳಲ್ಲಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯ ಆಧಾರಗಳ ಮೇಲೆ ಪರಿಭಾವಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ. ಪ್ರಾತಿನಿಧ್ಯದ ಸಮಾನತೆ ಮಹಿಳೆಯರ ಸಬಲೀಕರಣಕ್ಕೆ ಕಾರಣವಾಗುವಲ್ಲಿ ಒಂದು ಅಂಶವೇ ಹೊರತು, ಅದೇ ನಿರ್ಣಾಯಕವಲ್ಲ. ಪ್ರಾತಿನಿಧ್ಯದೊಂದಿಗೆ ಶಿಕ್ಷಣ, ಆರೋಗ್ಯ, ಇತ್ಯಾದಿ ಅಗತ್ಯ ಸೌಲಭ್ಯಗಳು ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಳು ಮತ್ತು ಇವುಗಳನ್ನು ಪಡೆಯುವ ನಿರ್ಧಾರಗಳು ಕಾರಣಗಳಾಗಿರುತ್ತವೆ.

ಇಲ್ಲಿಯವರೆಗೆ ಸ್ಥಳೀಯ ಆಡಳಿತದಲ್ಲಿನ ಪ್ರಾತಿನಿಧ್ಯ ಅಸಮಾನತೆಯೇ ಮಹಿಳೆಯರ ಸಬಲೀಕರಣಕ್ಕೆ ಅಡ್ಡಿಯಾಗಲು ಪ್ರಮುಖ ಕಾರಣವೆಂಬ ಮನೋಭಾವನೆ ಇತ್ತು. ಹೀಗಾಗಿ ಸರ್ಕಾರದ ನೀತಿ ಹಾಗೂ ಕಾನೂನುಗಳು ಈ ದೃಷ್ಟಿಯಿಂದಲೇ ರೂಪಿಸಲ್ಪಟ್ಟವು. ಮಹಿಳಾ ಸಬಲೀಕರಣಕ್ಕೆ ಪ್ರಾತಿನಿಧ್ಯ ಅಂಶದ ಜೊತೆಗೆ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅಂಶವು ಕಾರಣವಾಗಿದೆ. ಹೀಗಾಗಿ, ಭಾರತವನ್ನು ಒಳಗೊಂಡಂತೆ ಕರ್ನಾಟಕದಲ್ಲಿ ಮಹಿಳೆ ಸಂಪೂರ್ಣವಾಗಿ ಸಬಲೀಕರಣಗೊಂಡಿಲ್ಲ. ಶ್ರೇಣೀಕೃತ ಗ್ರಾಮೀಣ ಸಮಾಜದಲ್ಲಿ ಗ್ರಾಮಪಂಚಾಯಿತಿಯಲ್ಲಿರುವ ಪ್ರಾತಿನಿಧ್ಯ ಲಾಭವು ಮಹಿಳೆಗೆ ದೊರಕಬೇಕಾದರೆ ನಿರ್ಣಾಯಕ ಶಕ್ತಿ ಲಭಿಸಬೇಕು. ಇಲ್ಲಿ ನಿರ್ಣಾಯಕ ಶಕ್ತಿಯೆಂದರೆ ಪ್ರಾತಿನಿಧ್ಯ ನೀಡುವುದಲ್ಲ, ಪಡೆದುಕೊಳ್ಳುವುದಲ್ಲ. ನೀಡಿರುವ ಅವಕಾಶಗಳನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯವಾಗಿರುತ್ತದೆ. ಮಹಿಳಾ ಸಬಲೀಕರಣ ವಿಚಾರ ಪ್ರಣಾಳಿಕೆ ಈ ನಿರ್ಣಾಯಕ ಶಕ್ತಿಯನ್ನು ಮಹಿಳೆಯರಿಗೆ ಹೇಗೆ ಒದಗಿಸಬೇಕು ಎಂಬುದರ ವಿವರವಾದ ವಿವರಣೆ ನೀಡುತ್ತದೆ.

ಸಬಲೀಕರಣವನ್ನು ಅರ್ಥೈಸುವುದು ಇಲ್ಲವೇ ವ್ಯಾಖ್ಯಾನಿಸುವುದು ಒಂದು ಸಂಕೀರ್ಣವಾದ ವಿಷಯವಾಗಿದೆ. ಸಬಲೀಕರಣವನ್ನು ಕೇವಲ ಒಂದೇ ಚಲಕ(ಏರಿಳಿತ)ದಿಂದ ಅಳೆಯುವುದು ಅಸಾಧ್ಯ. ಸಬಲೀಕರಣ ಎಂಬುದು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಇತರ ರಂಗಗಳಲ್ಲಿ ವ್ಯಾಪಕವಾಗಿ ಹರಡಿಕೊಂಡಿದೆ. ಪ್ರಾತಿನಿಧ್ಯದ ಹೆಚ್ಚಳ ಸಬಲೀಕರಣ ಆಗಲಾರದು. ನಿಜಾರ್ಥದಲ್ಲಿ ಮಹಿಳೆಯರ ನಿರ್ಣಾಯಕ ಶಕ್ತಿಯನ್ನು ಹೆಚ್ಚಿಸುವುದೇ ಮಹಿಳಾ ಸಬಲೀಕರಣ. ಪಂಚಾಯಿತಿಯಲ್ಲಿನ ಶೇ.33ರಷ್ಟು ಮೀಸಲಾತಿ ಮಹಿಳೆಯರ ಸಬಲೀಕರಣವನ್ನು ಸೂಚಿಸಲಾರದು. ಸಬಲೀಕರಣ ಕೇವಲ ಪ್ರಾತಿನಿಧ್ಯಕ್ಕೆ ಸೀಮಿತವಾಗಿಲ್ಲ. ಏಕೆಂದರೆ ಇದು ಏಕರೂಪಿ ಪ್ರಕ್ರಿಯೆಯಲ್ಲ. ಇದು ಬಹುರೂಪಿ ಪ್ರಕ್ರಿಯೆ ಆಗಿದೆ. ಮಹಿಳೆಯರ ಬದುಕಿನ ಪ್ರತಿಹಂತದ ಬೆಳವಣಿಗೆಯನ್ನು ಈ ಪ್ರಕ್ರಿಯೆ ಒಳಗೊಳ್ಳುತ್ತದೆ. ರಾಜಕೀಯ

ಪ್ರಾತಿನಿಧ್ಯದೊಂದಿಗೆ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಾತಿನಿಧ್ಯವನ್ನು ಪರಿಗಣಿಸಿದಾಗ ಮಾತ್ರ ಸಬಲೀಕರಣದ ಸೂಕ್ಷ್ಮತೆಯನ್ನು ಅರಿಯಲು ಸಾಧ್ಯ. ಮಹಿಳಾ ಸಬಲೀಕರಣದ ವಿಚಾರ ಪ್ರಣಾಳಿಕೆಯ ವ್ಯಾಪ್ತಿಯು ಕೇವಲ ರಾಜಕೀಯ ಪ್ರಾತಿನಿಧ್ಯಕ್ಕೆ ಸೀಮಿತವಾಗಿರದೇ ಸಮಾಜದ ಎಲ್ಲ ರಂಗಗಳಿಗೂ ಸೀಮಿತವಾಗಿದೆ. ರಾಜಕೀಯ ಪ್ರಾತಿನಿಧ್ಯಕ್ಕೆ ನೀಡುವಂತಹ ಪ್ರಾಮುಖ್ಯತೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪ್ರಾತಿನಿಧ್ಯಕ್ಕೂ ಈ ವಿಚಾರ ಪ್ರಣಾಳಿಕೆ ಮಹತ್ವ ನೀಡಿದೆ. ರಾಜಕೀಯ ಅಂಶಗಳೊಂದಿಗೆ ರಾಜಕೀಯೇತರ ಅಂಶಗಳನ್ನು ಸಮ್ಮಿಲನ ಮಾಡಿಕೊಂಡಾಗ ಮಾತ್ರ ಮಹಿಳಾ ಸಬಲೀಕರಣಕ್ಕೆ ಮಹತ್ವದ ತಿರುವು ಸಿಕ್ಕಂತಾಗುತ್ತದೆ.

ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಸಬಲೀಕರಣದ ಜಾಡಿನಲ್ಲಿ ಪುರುಷಶಾಹಿತ್ವ ಹೆಚ್ಚಾಗಿ ಕಾಣುತ್ತದೆ. ಸಬಲೀಕರಣ ಲಿಂಗನಿರಾಕ್ಷೇಪಿತವಾಗಿದ್ದು, ಅದರ ಎಲ್ಲ ಫಲಗಳು ಲಿಂಗಭೇದ ಎಣಿಸದೇ ಎಲ್ಲರಿಗೂ ದೊರೆಯುತ್ತವೆ ಎಂದು ಭಾವಿಸಲಾಗುತ್ತಿದೆ. ಆದರೆ ಶ್ರೇಣೀಕೃತ ಸಮಾಜದಲ್ಲಿ ಅಭಿವೃದ್ಧಿ ಫಲಗಳು ಹೆಚ್ಚಾಗಿ ಪುರುಷರ ಪಾಲಾಗುತ್ತಿವೆ. ಅನಾದಿಕಾಲದಿಂದಲೂ ಮಹಿಳೆಯರನ್ನು ಸಮಾಜವು ನಿರ್ಲಕ್ಷಿಸುತ್ತಾ ಬಂದಿದೆ. ಗ್ರಾಮೀಣ ಭಾರತದಲ್ಲಿ ಪುರುಷರಿಗಿಂತ ಮಹಿಳೆಯರು ನಿರಕ್ಷರಸ್ಥರು, ನಿರುದ್ಯೋಗಿಗಳು, ಅಧಿಕಾರರಹಿತರು ಆಗಿದ್ದಾರೆ. ಆರೋಗ್ಯ ಮತ್ತು ಪೌಷ್ಟಿಕತೆಯಂಥ ವಿಷಯಗಳು ಸಹ ಇದರಿಂದ ಹೊರತಾಗಿಲ್ಲ. ಇಲ್ಲಿವರೆಗೂ ಅಧೀನಳು, ಅಪ್ರಧಾನಳು, ಕ್ರಯರಹಿತಳು ಹಾಗೂ ನಿಕೃಷ್ಟೀಕರಣಕ್ಕೆ ಒಳಗಾಗಿದ್ದ ಮಹಿಳೆ ಸಬಲೀಕರಣ ವಿಚಾರ ಪ್ರಣಾಳಿಕೆಯಲ್ಲಿ ಕೇಂದ್ರಬಿಂದುವಾಗಿದ್ದಾಳೆ. ಮಹಿಳೆಯರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಯ ಪ್ರಮುಖ ನಿಯೋಗಿಗಳಾಗಿದ್ದಾರೆ.[56] ಈ ನಿಟ್ಟಿನಲ್ಲಿ 73ನೇ ತಿದ್ದುಪಡಿಯು ಲಿಂಗಸಂವೇದನಾಶೀಲವಾಗಿದೆ. ಪ್ರಾತಿನಿಧ್ಯ ಲಿಂಗಸಂವೇದನಾಶೀಲವಾಗಿರಬೇಕು. ಇಲ್ಲವಾದಲ್ಲಿ ಅದು ಅಪಾಯಕಾರಿಯಾದುದು. ಅವಕಾಶಗಳನ್ನು ವಿಸ್ತರಿಸುವುದೇ ಸಬಲೀಕರಣ ಎಂದಾದರೆ, ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಹೊರಗಿಟ್ಟದ್ದಾದರೆ ಸಬಲೀಕರಣ ಪ್ರಕ್ರಿಯೆ ಹಳಿ ತಪ್ಪಿದಂತಾಗುತ್ತದೆ. ಪ್ರಾತಿನಿಧ್ಯ ಮತ್ತು ನಿರ್ಧಾರ ಸಂಗತಿಗಳಲ್ಲಿರುವ ಸಬಲೀಕರಣವು ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಪ್ರಾತಿನಿಧ್ಯವು ಮಹಿಳೆಯರಿಗೆ ನಿರ್ಣಾಯಕ ಶಕ್ತಿ ದೊರಕಿಸಿಕೊಡಬೇಕಾಗಿದೆ ಹೊರತು ಅವಕಾಶಗಳನ್ನಲ್ಲ.

ಪಂಚಾಯಿತಿಯಲ್ಲಿ ಮಹಿಳಾ ಸಬಲೀಕರಣವು ಕೇವಲ ಅವರ ಸ್ವ-ಅಭಿವೃದ್ಧಿಗೆ ಸೀಮಿತವಾಗಿಲ್ಲ. ಅವರು ಸಮಾಜದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವ ಸಾಮರ್ಥ್ಯದ ಆಧಾರದ ಮೇಲೆ ನಿರ್ಣಯವಾಗುತ್ತದೆ. ಮಹಿಳೆ ತನ್ನ ವೈಯಕ್ತಿಕ ಜೀವನ ಮತ್ತು ಸಮುದಾಯಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ನಿರ್ಧಾರ ಕೈಗೊಳ್ಳುವ ಮತ್ತು ಜಾರಿಗೆ ತರುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದೇ ಸಬಲೀಕರಣ.[57] ಮಹಿಳಾ ಸಬಲೀಕರಣಕ್ಕೆ ಮತ್ತೊಂದು ಪ್ರಮುಖ ಸಂಗತಿಯೆಂದರೆ, ತಳಮಟ್ಟದ ಆಡಳಿತದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯ

ಅಗತ್ಯತೆ. ಮಾನವ ಸಂಪನ್ಮೂಲದ ಸಮರ್ಪಕ ಬಳಕೆ ಜೊತೆಗೆ ಅಗತ್ಯ ಶಿಕ್ಷಣ, ಆರೋಗ್ಯ, ಜೀವನಮುಖಿ ಅಂಶಗಳು ಮಹಿಳಾ ಸಬಲೀಕರಣಕ್ಕೆ ಮುಖ್ಯ ಸಂಗತಿಗಳೆಂದು ಗುರುತಿಸಲಾಗಿದೆ. ಆದರೆ ಆರ್ಥಿಕ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಮಹಿಳೆಯರ ದುಡಿಮೆಯು ಸಂಗೋಪನಾ ಸಂಗತಿಯಾಗಿದೆ ವಿನಾ ಸಂಪಾದನೆಯ ಆದ್ಯತೆಯ ಸಂಗತಿಯಾಗಿಲ್ಲ.[58] ಇವುಗಳನ್ನು ಪೂರೈಸಿದಾಗ ಅಥವಾ ಪಡೆದಾಗ ಅಥವಾ ಪಡೆಯುವ ಅರ್ಹತೆ ಹೊಂದಿದಾಗ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ. ಆದರೆ ಇಂದಿಗೂ ಗ್ರಾಮೀಣ ಮಹಿಳೆಯರು ಸಬಲೀಕರಣಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸಂವಿಧಾನದ 73ನೇ ತಿದ್ದುಪಡಿ ಲಾಭವು ಮಹಿಳೆಯರಿಗೆ ಸದಸ್ಯತ್ವಕ್ಕೆ ಸೀಮಿತವಾಗಿದೆಯೇ ಹೊರತು ಪದಾಧಿಕಾರತ್ವದಲ್ಲಿ ಸಮರ್ಪಕವಾಗಿ ಲಭಿಸಲಿಲ್ಲ. ಅವರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸಿಗುತ್ತಿಲ್ಲ. ಆದರೆ ಗ್ರಾಮಪಂಚಾಯಿತಿಗಳು ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಮಸ್ಯೆಗಳಿಗೆ ಸ್ಪಂದಿಸಿ, ಪರಿಣಾಮಕಾರಿ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಪ್ರಯತ್ನ ಮಾಡುತ್ತಿವೆ. ಸಾಮಾಜಿಕ ಬದಲಾವಣೆ ಮತ್ತು ಆರ್ಥಿಕ ನೀತಿಗಳ ಸುಧಾರಣೆ ಮಾಡುವ ಆಧುನಿಕ ಪಂಚಾಯಿತಿಗಳಾಗಿ ಕಾರ್ಯ ಮಾಡುತ್ತಿವೆ. ಒಟ್ಟಾರೆಯಾಗಿ, ಗ್ರಾಮಪಂಚಾಯಿತಿಗಳು ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣಕ್ಕೆ ಉತ್ತಮ ಸಾಧನಗಳಾಗಿವೆ.

ಇಂದು ಗ್ರಾಮಪಂಚಾಯಿತಿಗಳು ಸಮಾಜದ ಅಂಚಿನಲ್ಲಿರುವ ದಲಿತ, ಹಿಂದುಳಿದ ಮತ್ತು ದುರ್ಬಲ ಜಾತಿ/ವರ್ಗಗಳ ಗ್ರಾಮೀಣ ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಮತ್ತು ಅವರ ಸಬಲೀಕರಣದ ಉದ್ದೇಶ ಇಟ್ಟುಕೊಂಡು ರಚನೆಗೊಂಡಿವೆ ಎಂಬ ತಾರ್ಕಿಕ ವಿಚಾರ ಇಲ್ಲಿದೆ. ಪ್ರಸ್ತುತ ಅಧ್ಯಯನದಲ್ಲಿ, ತಳಮಟ್ಟದ ಆಡಳಿತದಲ್ಲಿ ಮಹಿಳೆಯರಿಗೆ ನೀಡಿರುವ ರಾಜಕೀಯ ಸಮಾನತೆ ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬಂದಿದೆ? ಮಹಿಳೆಯರ ವಿಶೇಷವಾಗಿ ದಲಿತ, ಹಿಂದುಳಿದ, ದುರ್ಬಲ ವರ್ಗಗಳ ಮಹಿಳೆಯರ ಪ್ರಾತಿನಿಧ್ಯ ಹಿತಾಸಕ್ತಿ ಪಂಚಾಯಿತಿಯಿಂದ ರಕ್ಷಿತವಾಗುತ್ತದೆಯೇ? ಆ ಮೂಲಕ ಗ್ರಾಮೀಣ ಮಹಿಳೆಯರ ಸಬಲೀಕರಣ ಆಗಿದೆಯೇ? ಅಂದರೆ ಪಂಚಾಯಿತಿ ಪ್ರಾತಿನಿಧ್ಯ ಪಡೆಯುವ, ನಿರ್ಧಾರ ತೆಗೆದುಕೊಳ್ಳುವ ಮತ್ತು ಅಧಿಕಾರ ಚಲಾಯಿಸುವ ಸಂದರ್ಭಗಳಲ್ಲಿ ಮಹಿಳೆಯರು ಪುರುಷರ ಹಿಡಿತದಿಂದ ಪಾರಾಗಿದ್ದಾರೆಯೇ? ಒಂದು ವೇಳೆ ಉದ್ದೇಶಿತ ರೂಪದಲ್ಲಿ ಮಹಿಳೆಯರು ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಗದಿದ್ದರೆ, ಏಕೆ ಸಾಧ್ಯವಾಗುತ್ತಿಲ್ಲ? ಇತ್ಯಾದಿ ಉದ್ದೇಶಿತ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಈ ಅಧ್ಯಯನದ್ದಾಗಿದೆ. ಈ ಮೂಲಕ ಗ್ರಾಮಪಂಚಾಯಿತಿಗಳ ಕಾರ್ಯಕ್ಷಮತೆಯನ್ನು ಮಾಪನ ಮಾಡುವ ಸಾಧನವು ಇದಾಗಿದೆ. ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಮತ್ತು ಹೊಸೂರು ಗ್ರಾಮಪಂಚಾಯಿತಿಗಳು ಹಾಗೂ ಉತ್ತರ ಕನ್ನಡ(ಕಾರವಾರ) ಜಿಲ್ಲೆ ಸಿದ್ದಾಪುರ ತಾಲೂಕಿನ ಕೋಲಸಿರ್ಸಿ ಮತ್ತು ಬೇಡ್ಕಣಿ ಗ್ರಾಮಪಂಚಾಯಿತಿಗಳನ್ನು ಅಧ್ಯಯನ ಮಾಡುವುದರ ಮೂಲಕ ಮೇಲಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನ ಮಾಡಲಾಗಿದೆ.

ಕೊನೆ ಟಿಪ್ಪಣಿಗಳು

1. ಕೆ. ಆರ್. ಭೋಗೇಶ್ವರಪ್ಪ, "*ಪಂಚಾಯತ್‌ರಾಜ್ ವ್ಯವಸ್ಥೆ ವಿಕಾಸ*", ಯೋಜನಾ, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಸಂಪುಟ 27, ಸಂಚಿಕೆ 4, ನವೆಂಬರ್, 2010, ಪು.46.
2. ಜಾರ್ಜ್ ಮಾಥ್ಯೂ.(ಸಂ) *ಸ್ಟೇಟಸ್ ಆಫ್ ಪಂಚಾಯತ್‌ರಾಜ್ ಇನ್ ದಿ ಸ್ಟೇಟ್ಸ್ ಆಂಡ್ ಯೂನಿಯನ್ ಟೆರಿಟೊರಿಸ್ ಆಫ್ ಇಂಡಿಯಾ*, ದೆಹಲಿ: ಇನ್ಸಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್, 2000.
3. ವಿ. ವೆಂಕಟೇಶ್‌ರಾವ್ ಮತ್ತು ಎನ್. ಹಜರಿಕಾ, *ಲೋಕಲ್ ಸೆಲ್ಫ್ ಗವರ್ನ್‌ಮೆಂಟ್ ಇನ್ ಇಂಡಿಯಾ*, ನ್ಯೂ ದೆಹಲಿ: ಎಸ್. ಚಾಂದ್ ಆ್ಯಂಡ್ ಕಂ., 1980, ಪು.58.
4. ಎಸ್. ಜಿ. ಕರಭಂಟನಾಳ, *ಪಂಚಾಯತ್ ರಾಜ್ಯ*, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ, ಉಪನ್ಯಾಸ ಗ್ರಂಥಮಾಲೆ, ಮಾರ್ಚ್ 1971, ಪು.9–10.
5. ಎಂ. ವೆಂಕಟರಂಗಯ್ಯ ಮತ್ತು ಎಂ. ಪಟ್ಟಾಭಿರಾಮ, *ಲೋಕಲ್ ಗವರ್ನರ್‌ಮೆಂಟ್ ಇನ್ ಇಂಡಿಯಾ: ಸೆಲೆಕ್ಟ್ ರೀಡಿಂಗ್*, ನ್ಯೂ ದೆಹಲಿ: ಅಲೈಡ್ ಪಬ್ಲಿಷರ್ಸ್, 1969.
6. ಟಿ. ಎಂ. ಥಾಮಸ್ ಐಸಾಕ್ ಆಂಡ್ ರಿಚರ್ಡ್ ಡಬ್ಲ್ಯು ಫ್ರ್ಯಾಂಕ್, *ಲೋಕಲ್ ಡೆಮಾಕ್ರಸಿ ಆಂಡ್ ಡೆವಲಪ್‌ಮೆಂಟ್: ಪೀಪಲ್ಸ್ ಕಂಪಾನಿಯನ್ ಫಾರ್ ಡಿಸೆಂಟ್ರಲೈಜ್ಡ್ ಪ್ಲಾನ್ ಇನ್ ಕೇರಳ*, ನ್ಯೂ ದೆಹಲಿ; ಲೆಫ್ಟ್‌ವರ್ಡ್ 2004, ಪು.5.
7. ಎಂ. ಯರಿಸ್ವಾಮಿ, *ಗ್ರಾಮಪಂಚಾಯಿತಿ ಮತ್ತು ಸಬಲೀಕರಣ*, ಹಂಪಿ: ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿ.ಎಚ್.ಡಿ ಮಹಾಪ್ರಬಂಧ, 2002, ಪು.12.
8. ವರ್ಲ್ಡ್ ಬ್ಯಾಂಕ್, *ಓವರ್ ವ್ಯೂ ಆಫ್ ರೂರಲ್ ಡಿಸೆಂಟ್ರಲೈಜೇಷನ್ ಇನ್ ಇಂಡಿಯಾ*, ವ್ಯಾಲ್ಯೂಮ್–3, 2000, ಪು.18.
9. ಟಿ. ಎಂ. ಥಾಮಸ್ ಐಸಾಕ್, *ಪೂರ್ವೋಕ್ತ*, ಪು.5.
10. ಹೆಚ್. ಎಂ. ರಾಜಶೇಖರ, *ಭಾರತ ಸರ್ಕಾರ ಮತ್ತು ರಾಜಕೀಯ*, ಮೈಸೂರು: ಕಿರಣ್ ಪ್ರಕಾಶನ, 2006, ಪು.106.
11. ಭಾಜಪೈ ಮತ್ತು ವರ್ಮ, *ಪಂಚಾಯಿತಿರಾಜ್ ಇನ್ ಇಂಡಿಯಾ*, ನ್ಯೂದೆಹಲಿ: ಎ ನ್ಯೂಟ್ರಸ್ಟ್, ವ್ಯಾಲ್ಯೂಮ್–1, 1995, ಪು.3.
12. ಎ. ಶ್ರೀಧರ, *ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000, ಪು.11.
13. ಹಿರೇಮಠ ಜಿ. ಎಸ್, *ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ*, ಸಿಂದಿಗಿ: ಪ್ರದೀಪ್ ಪ್ರಕಾಶನ, 2008, ಪು.99.
14. ಚಂದ್ರ ಪೂಜಾರಿ ಎಂ, *ದೇಶೀಯತೆಯ ನೆರಳಲ್ಲಿ ವಿಕೇಂದ್ರೀಕರಣ*, ಹಂಪಿ:ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2008, ಪು.5.
15. ಎಂ.ಯರಿಸ್ವಾಮಿ, ಪೂರ್ವೋಕ್ತ, ಪು.16.
16. ಪ್ರೊ. ಹನುಮಂತು ಮತ್ತು ಇತರರು, *ಕರ್ನಾಟಕ ಪಂಚಾಯತ್‌ರಾಜ್ ವ್ಯವಸ್ಥೆಯ ಸಶಕ್ತೀಕರಣ: ಜನಾಂದೋಲನಕ್ಕೆ ಆಹ್ವಾನ*, ರಾಣೆಬೆನ್ನೂರು: ಗ್ರಾಮರಾಜ್ಯ ವೇದಿಕೆ, 2004, ಪು.11.

17. ಅದೇ, ಪು.12.

18. *ವರ್ಲ್ಡ್ ಬ್ಯಾಂಕ್, "ಓವರ್ ವ್ಯೂ ಆಫ್ ರೂರಲ್ ಡಿಸೆಂಟ್ರಲೈಜೇಷನ್ ಇನ್ ಇಂಡಿಯಾ",* ವರ್ಲ್ಡ್ ಬ್ಯಾಂಕ್: ಸಂಪುಟ-3, 2000, ಪು.21.

19. ಮನೋಜ್ ರಾಯ್ ಮತ್ತು ಇತರರು, *ಪೂರ್ವೋಕ್ತ,* ಪು.9.

20. ಪ್ರೊ. ಹನುಮಂತು ಮತ್ತು ಇತರರು, *ಪೂರ್ವೋಕ್ತ,* ಪು.20.

21. ಕೆ. ಆರ್. ಭೋಗೇಶ್ವರಪ್ಪ, *ಪೂರ್ವೋಕ್ತ,* ಪು.47.

22. ವಿಲ್‌ಫ್ರೆಡ್ ಡಿಸೋಜಾ, "ಗ್ರಾಮಪಂಚಾಯಿತಿಗಳು ಮತ್ತು ಜವಾಬ್ದಾರಿಗಳು", ಯೋಜನಾ, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಸಂಪುಟ 27, ಫೆಬ್ರುವರಿ, 2011, ಪು.17.

23. ಎಂ. ಯರಿಸ್ವಾಮಿ, ಪೂರ್ವೋಕ್ತ, ಪು.3

24. ಹೆಚ್. ಎಂ. ರಾಜಶೇಖರ, *ಪೂರ್ವೋಕ್ತ,* ಪು.317.

25. ಅದೇ., ಪು. 318.

26. ಕೆ. ಆರ್. ಭೋಗೇಶ್ವರಪ್ಪ, *ಪೂರ್ವೋಕ್ತ,* ಪು.46-47.

27. ಚಂದ್ರ ಪೂಜಾರಿ. ಎಂ, *ಪೂರ್ವೋಕ್ತ,* ಪು.87.

28. ಎ. ಶ್ರೀಧರ, *ಕರ್ನಾಟಕದಲ್ಲಿ ಪಂಚಾಯತ್‌ರಾಜ್ ಕಾಯ್ದೆಗಳು,* ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2002, ಪು.3.

29. ಎಂ, ಯರಿಸ್ವಾಮಿ, *ಪೂರ್ವೋಕ್ತ,* ಪು.20.

30. ಪ್ರೊ. ಹನುಮಂತು ಮತ್ತು ಇತರರು, *ಪೂರ್ವೋಕ್ತ,* ಪು.13.

31. ಎಂ, ಯರಿಸ್ವಾಮಿ, *ಪೂರ್ವೋಕ್ತ,* ಪು.24.

32. ಎ. ಶ್ರೀಧರ, *ಪೂರ್ವೋಕ್ತ,* ಪು.28.

33. ಪ್ರೊ. ಹನುಮಂತು ಮತ್ತು ಇತರರು, *ಪೂರ್ವೋಕ್ತ,* ಪು.33-34.

34. ಹೆಚ್. ಎಂ. ರಾಜಶೇಖರ, *ಪೂರ್ವೋಕ್ತ,* ಪು.319.

35. ಎ. ಶ್ರೀಧರ, *ಪೂರ್ವೋಕ್ತ,* ಪು.30-31

36. ಎಂ. ಚಂದ್ರ ಪೂಜಾರಿ, ಕರ್ನಾಟಕದ ಪಂಚವಾರ್ಷಿಕ ಯೋಜನೆಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2010, ಪು.25-26.

37. ಎಸ್.ಜಿ.ಕರಭಂಟನಾಳ, *ಪೂರ್ವೋಕ್ತ,* ಪು.9.

38. ಓಂಕಾರ ಕಾಕಡೆ ಮತ್ತು ಇತರರು, *"ಪಂಚಾಯತ್‌ರಾಜ್: ಮಹಿಳಾ ಸಬಲೀಕರಣ ಮತ್ತು ಮಾಧ್ಯಮ",* ಯೋಜನಾ, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಫೆಬ್ರವರಿ, 2011, ಪು.32-33.

39. ಅಶೋಕ್ ವಿ, *ಪ್ರೊಬ್ಲೆಮ್ಸ್ ಅ್ಯಂಡ್ ಪ್ರಾಸ್ಪೆಕ್ಟಸ್ ಆಫ್ ಎಂಪವರ್‌ಮೆಂಟ್ ಆಫ್ ದಿ ವೀಕರ್ ಸೆಕ್ಷನ್ಸ್: ದಿ ರೋಲ್ ಆಫ್ ದಿ ರೆಪ್ರೆಜೆಂಟೇಟಿವ್ ಆಫ್ ವೀಕರ್ ಸೆಕ್ಷನ್ಸ್ ಇನ್ ಗ್ರಾಮಪಂಚಾಯತ್ಸ್ ಇನ್ ರೂರಲ್ ಕರ್ನಾಟಕ,* ಬೆಂಗಳೂರು: ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿ.ಎಚ್.ಡಿ ಮಹಾಪ್ರಬಂಧ, 2008, ಪು.1-2.

40. ಮಹಿಪಾಲ್, *"ವೈ ರೀಥಿಂಕ್ ರೊಟೇಶನ್ ಆಫ್ ರಿಜರ್ವೇಶನ್ ಇನ್ ಪಂಚಾಯತ್ಸ್?"*, ಇಕಾಮಿಕ್ಸ್ ಅಂಡ್ ಪೋಲಿಡಿಕಲ್ ವೀಕ್ಲಿ, ಮುಂಬೈ: ಎ ಸಮೀಕ್ಷ ಟ್ರಸ್ಟ್ ಪಬ್ಲಿಕೇಶನ್, ಜೂನ್6–12, 2009, ಪು.70.

41. ಅಶೋಕ್ ವಿ, ಪೂರ್ವೋಕ್ತ, ಪು.2.

42. ಮಹಿಪಾಲ್, ಪೂರ್ವೋಕ್ತ, ಪು.70.

43. ಹಿರೇಮಠ ಎಸ್.ಜಿ, ಪೂರ್ವೋಕ್ತ, ಪು.101–102.

44. ಎಂ. ಚಂದ್ರ ಪೂಜಾರಿ, ಪೂರ್ವೋಕ್ತ, ಪು.6.

45. ನಿರ್ಮಲ ಬೂಚ್, "ರಿಝುರ್ವೇಶನ್ ಫಾರ್ ವುಮೆನ್ ಇನ್ ಪಂಚಾಯತ್: ಎ ಸಾಪ್ ಇನ್ ಡಿಸ್‌ಗೈಜ್?",ಇಕಾಮಿಕ್ಸ್ ಅಂಡ್ ಪೋಲಿಡಿಕಲ್ ವೀಕ್ಲಿ, ಮುಂಬೈ: ಎ ಸಮೀಕ್ಷ ಟ್ರಸ್ಟ್ ಪಬ್ಲಿಕೇಶನ್, ಅಕ್ಟೋಬರ್, 3–12, 2009, ಪು.9.

46. ಮಹಿಪಾಲ್, *ಪೂರ್ವೋಕ್ತ*, ಪು.70–71.

47. ಬಿ. ಎಸ್. ರಾಘವನ್, *"50% ರಿಜರ್ವೇಷನ್ ಫಾರ್ ವುಮೆನ್ ಇನ್ ಪಂಚಾಯತ್"*, ವಿಕಿಪಿಡಿಯಾ, ವೆಬ್ ಆರ್ಟಿಕಲ್, ಆಗಸ್ಟ್ 27, 2009.

48. ಅಶೋಕ್ ವಿ, *ಪೂರ್ವೋಕ್ತ*, ಪು.4.

49. ಚಾಮರಾಜ ಸವಡಿ, *"ಕರ್ನಾಟಕ ಏಕೀಕರಣ"*, ಜನಪದ, ಬೆಂಗಳೂರು: ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ, ನವಂಬರ್, 2010, ಪು.6.

50. ಎ. ಶ್ರೀಧರ, *ಪೂರ್ವೋಕ್ತ*, ಪು.3.

51. ಅಶೋಕ್.ವಿ, *ಪೂರ್ವೋಕ್ತ*, ಪು.4–5.

52. ಎಸ್.ವಿ.ಲಕ್ಷ್ಮೀನಾರಾಯಣ, *"ಕರ್ನಾಟಕ ಪಂಚಾಯತ್‌ರಾಜ್ ಸುಧಾರಣೆಯ ಮೈಲುಗಲ್ಲು"*, ಜನಪದ, ಬೆಂಗಳೂರು: ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ, ಜೂನ್, 2011, ಪು.12.

53. www.gramapanchayat.kar.nic pdf. file, time:11.30 am, date:15/6/2010.

54. ಚಂದ್ರ ಪೂಜಾರಿ. ಎಂ ಮತ್ತು ಚಂದ್ರಶೇಖರ ಟಿ.ಆರ್.(ಸಂ),*"ಮಹಿಳಾ ವಿಶ್ವವಿದ್ಯಾಲಯ ಒಂದು ಚರ್ಚೆ"*, *ಅಭಿವೃದ್ಧಿ ಅಧ್ಯಯನ, ಸಮಾಜ ವಿಜ್ಞಾನ ಪತ್ರಿಕೆ*, ಸಂಪುಟ–2, ಸಂಚಿಕೆ–2, ಜನವರಿ–ಜೂನ್ 2003, ಪುಟ.7.

55. ಜೆ. ಕೃಷ್ಣ, *ಮಾನವ ಅಭಿವೃದ್ಧಿಯ ಪ್ರಾದೇಶಿಕ ಆಯಾಮಗಳ ಅಧ್ಯಯನ*, ಹಂಪಿ: ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿ.ಎಚ್.ಡಿ ಮಹಾಪ್ರಬಂಧ, 2004, ಪು.8.

56 . ಅದೇ, ಪು.38.

57. ಸಚ್ಚಿದಾನಂದ ಸತ್ಪತಿ, *ಮಹಿಳಾ ಸಬಲೀಕರಣ ಮತ್ತು ಪಂಚಾಯತ್‌ರಾಜ್: ಒರಿಸ್ಸಾ ಒಂದು ಅಧ್ಯಯನ*, ಎಂ.ಫಿಲ್ ಪ್ರಬಂಧ, ವಿಕಿಪೀಡಿಯಾ: ಪಿ.ಡಿ.ಎಫ್ ಫೈಲ್, 2002. ಪು.1.

58. ಚಂದ್ರಶೇಖರ.ಟಿ.ಆರ್, *ಲಿಂಗಸಂಬಂಧಿ ಅಭಿವೃದ್ಧಿ ಅಧ್ಯಯನ ಪ್ರಬಂಧಗಳು, ಹಂಪಿ:* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಮಂಟಪಮಾಲೆ–160, 2008.

ಅಧ್ಯಾಯ ಮೂರು

ಕ್ಷೇತ್ರ ಅಧ್ಯಯನದ ಪರಿಚಯ

ಪ್ರಬಂಧದ ಮೊದಲ ಅಧ್ಯಾಯದಲ್ಲಿ ಸ್ವತಂತ್ರ ಭಾರತದಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಸರಿದೂಗಿಸುವಲ್ಲಿ ಮತ್ತು ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಕೈಗೊಂಡ ಪ್ರಯತ್ನಗಳನ್ನು ವಿವರಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನದ ಕ್ಷೇತ್ರ ಪರಿಚಯ ಮಾಡಿಕೊಡುವ ಉದ್ದೇಶವಿದೆ. ರಾಜ್ಯದ ಪೂರ್ವ ಭಾಗದಲ್ಲಿರುವ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳು ಮತ್ತು ರಾಜ್ಯದ ಪಶ್ಚಿಮ ಭಾಗದಲ್ಲಿರುವ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಕ್ಷೇತ್ರದ ಜಿಲ್ಲೆ, ತಾಲೂಕು ಮತ್ತು ಗ್ರಾಮಪಂಚಾಯಿತಿಗಳ ಚಾರಿತ್ರಿಕ, ಭೌಗೋಳಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ(ಪ್ರಾತಿನಿಧ್ಯ ಮತ್ತು ಸಬಲೀಕರಣ) ಸ್ಥಿತಿಗತಿಗಳ ವಿವರಣೆ ನೀಡಲಾಗಿದೆ. ತಾಲೂಕು ಮತ್ತು ಗ್ರಾಮಪಂಚಾಯಿತಿಗಳ ಆಯ್ಕೆಯ ನಮೂನೆಯನ್ನು ಅಂಕಿ ಅಂಶಗಳ ಮೂಲಕ ವಿವರಣೆ ನೀಡಲಾಗಿದೆ. ಪ್ರಸ್ತುತ ಅಧ್ಯಾಯವು ಅಧ್ಯಯನ ಕ್ಷೇತ್ರದ ಒಟ್ಟು ಚಿತ್ರಣವನ್ನು ನೀಡಲಾಗಿದೆ.

3.1 ಬಳ್ಳಾರಿ ಜಿಲ್ಲೆ

ಚಾರಿತ್ರಿಕ ಹಿನ್ನೆಲೆ: ಜಾಗತಿಕ ಮಾರುಕಟ್ಟೆಯಲ್ಲಿ ಖ್ಯಾತಿ ಪಡೆದಿರುವ ಬಳ್ಳಾರಿ ಜಿಲ್ಲೆ ರಾಜ್ಯದ ಪೂರ್ವ ಮಧ್ಯ ಭಾಗದಲ್ಲಿದೆ. ಬಳ್ಳಾರಿ ಜಿಲ್ಲೆಯ ಬಹುತೇಕ ಭಾಗವು ತುಂಗಾಭದ್ರ ನದಿ ತೀರದಲ್ಲಿ ಕಂಡುಬರುತ್ತದೆ. ಪ್ರಾಚೀನ ಕಾಲದಿಂದಲೂ ಇದು ಆರ್ಥಿಕವಾಗಿ ಸಮೃದ್ಧಿಯಾಗಿದ್ದ ಪ್ರದೇಶವಾಗಿದ್ದರಿಂದ ವ್ಯಾಪಾರ, ವಾಣಿಜ್ಯ ಮತ್ತು ಧಾರ್ಮಿಕ ಕೇಂದ್ರವಾಗಿತ್ತು ಎಂದು ಐತಿಹಾಸಿಕವಾಗಿ ಕಂಡುಬರುತ್ತದೆ. ಇಂತಹ ಸಮೃದ್ಧಿ ಹೊಂದಿದ ಪ್ರದೇಶವು ಮೌರ್ಯರು, ಕದಂಬರು, ಗಂಗರು, ಬಾದಮಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿತ್ತು. ನಂತರ ವಿಜಯನಗರದ ಅರಸರ ನೇರ ಆಡಳಿತಕ್ಕೆ ಒಳಪಟ್ಟ ಬಳ್ಳಾರಿ ಜಿಲ್ಲೆ ಆದಿಲ್‌ಶಾಹಿಗಳ, ಮೊಗಲರ, ಮರಾಠರ ಹಾಗೂ ಹಲವು ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತು. ಕ್ರಿ.ಶ. 1768ರಿಂದ 1799ರವರಗೆ ಮೈಸೂರಿನ ಹೈದರಾಲಿ ಮತ್ತು ಅವನ ಮಗ ಟಿಪ್ಪು ಸುಲ್ತಾನನ ವಶಕ್ಕೆ ಒಳಪಟ್ಟಿತ್ತು. ಬ್ರಿಟಿಷರ, ಮರಾಠರ ಹಾಗೂ ಹೈದ್ರಾಬಾದ್ ನಿಜಾಮನ ಸೈನ್ಯವು ಒಟ್ಟಾಗಿ 1799ರಲ್ಲಿ ಟಿಪ್ಪು ಸುಲ್ತಾನನ ಮೇಲೆ ಆಕ್ರಮಣ ಮಾಡಿದಾಗ, ಈ

ಯುದ್ಧದಲ್ಲಿ ಟಿಪ್ಪು ಹತನಾದನು. ಯುದ್ಧದ ಒಪ್ಪಂದದಂತೆ ಬಳ್ಳಾರಿ ಪ್ರದೇಶವು ನಿಜಾಮನ ವಶವಾಯಿತು. ಸಹಾಯುಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡ ನಿಜಾಮನು ಆಂಧ್ರಪದೇಶದ ಕೆಲವು ಜಿಲ್ಲೆಗಳನ್ನೊಳಗೊಂಡಂತೆ ಬಳ್ಳಾರಿ ಪ್ರದೇಶವನ್ನು ಬ್ರಿಟಿಷರಿಗೆ ಕಾಣಿಕೆಯಾಗಿ ನೀಡಿದನು. ಹೀಗೆ ಬಳ್ಳಾರಿ ಪ್ರದೇಶವು ಕ್ರಿ.ಶ.1800ರಲ್ಲಿ ಬ್ರಿಟಿಷರ ನೇರ ಆಡಳಿತಕ್ಕೆ ಒಳಗಾಯಿತು. ಬ್ರಿಟಿಷರು ಬಳ್ಳಾರಿ ಪ್ರದೇಶವನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿಕೊಂಡರು.[1] ವಿಜಯನಗರ ಆಳರಸರ ಕಾಲದಲ್ಲಿ ವಿಸ್ತಾರವಾದ ಭೂಪ್ರದೇಶವನ್ನು ಹೊಂದಿದ್ದ ಬಳ್ಳಾರಿ ಜಿಲ್ಲೆಯು, ಬ್ರಿಟಿಷರ ಆಳ್ವಿಕೆ ಕಾಲದಲ್ಲಿ ಮದ್ರಾಸ್ ಪ್ರಾಂತ್ಯದ ಬಹು ದೊಡ್ಡ ಜಿಲ್ಲೆಯಾಗಿತ್ತು. ಸ್ವಾತಂತ್ರ್ಯೋತ್ತರ ಭಾರತದಲ್ಲೂ 1953ರ ಮೊದಲು 12 ತಾಲೂಕುಗಳನ್ನೊಳಗೊಂಡ ಬಳ್ಳಾರಿ ದೊಡ್ಡ ಜಿಲ್ಲೆಯಾಗಿತ್ತು. ಭಾಷಾವಾರು ಆಧಾರದ ಮೇಲೆ ತೆಲಗು ಭಾಷೆ ಮಾತನಾಡುವ ಆಂಧ್ರ ಪ್ರದೇಶ ಅಕ್ಟೋಬರ್ 1, 1953ರಂದು ಪ್ರಥಮ ಭಾಷಾವಾರು ರಾಜ್ಯವಾಗಿ ಉದಯಗೊಂಡಿತು.[2] ಆ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿದ್ದ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲೂಕುಗಳನ್ನು ಆಂಧ್ರಪ್ರದೇಶಕ್ಕೆ ವರ್ಗಾಯಿಸಲಾಯಿತು. 1953ರಲ್ಲಿ ಬಳ್ಳಾರಿ ಜಿಲ್ಲೆಯನ್ನು ಮೈಸೂರು ಪ್ರಾಂತ್ಯಕ್ಕೆ ಸೇರಿಸಲಾಯಿತು.[3]

ಭಾರತದ ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಕರ್ನಾಟಕ ಏಕೀಕರಣ ಚಳುವಳಿಯು 1920ರ ನಾಗಪುರ ಕಾಂಗ್ರೆಸ್ ಅಧಿವೇಶನದ ಮುಖ್ಯ ವಿಷಯಗಳಾಗಿದ್ದವು. 1924ರಲ್ಲಿ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಚರ್ಚಿತವಾಗಿ ಕರ್ನಾಟಕ ಏಕೀಕರಣ ಸಭಾ ಅಸ್ತಿತ್ವಕ್ಕೆ ಬಂದಿತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ ಏಕೀಕರಣ ಚಳುವಳಿಯ ನೇತೃತ್ವ ವಹಿಸಿತು. ನಂತರದಲ್ಲೇ ಚಳುವಳಿ ತೀವ್ರರೂಪ ಪಡೆಯಿತು. ಏಕೀಕರಣದ ಚಳುವಳಿಯ ಫಲವಾಗಿ 1953ರಲ್ಲಿಯೇ ಕರ್ನಾಟಕ್ಕೆ ಸೇರ್ಪಡೆಗೊಂಡ ಮೊದಲ ಜಿಲ್ಲೆ ಬಳ್ಳಾರಿ ಎಂಬ ಕೀರ್ತಿಗೆ ಪಾತ್ರವಾಯಿತು.[4] 1956ರಲ್ಲಿ ರಾಜ್ಯಗಳ ಪುನರ್‌ರಚನಾ ಆಯೋಗ ವರದಿ ಶಿಫಾರಸ್ಸಿನ ಮೇರೆಗೆ ರಾಜ್ಯಗಳ ಪುನರ್‌ರಚನೆ ಮಾಡಲಾಯಿತು.[5] ಆಗ ಮೈಸೂರು ಪ್ರಾಂತ್ಯವನ್ನು ಮೈಸೂರು ರಾಜ್ಯವೆಂದು ಕರೆಯಲಾಯಿತು. 1956ರಲ್ಲಿ ಏಕೀಕರಣಗೊಂಡ ಕರ್ನಾಟಕದಲ್ಲಿ ಆಡಳಿತದ ಅನುಕೂಲಕ್ಕಾಗಿ ನಾಲ್ಕು ಕಂದಾಯ ವಿಭಾಗಗಳನ್ನು ರಚಿಸಲಾಯಿತು. ಪ್ರಾರಂಭದಲ್ಲಿ ಬಳ್ಳಾರಿ ಜಿಲ್ಲೆಯನ್ನು ಬೆಂಗಳೂರು ಕಂದಾಯ ವಿಭಾಗಕ್ಕೆ ಸೇರಿಸಲಾಯಿತು. ನಂತರ ಫೆಬ್ರುವರಿ 1, 1966ರಂದು ಗುಲಬರ್ಗಾ ಕಂದಾಯ ವಿಭಾಗಕ್ಕೆ ಸೇರಿಸಲಾಗಿದೆ.[6] 1997ರಲ್ಲಿ ರಾಜ್ಯದಲ್ಲಿ ಹೊಸ ಜಿಲ್ಲೆಗಳನ್ನು ರಚನೆ ಮಾಡಿದ ವೇಳೆಯಲ್ಲಿ ಜಿಲ್ಲೆಯಲ್ಲಿದ್ದ ಹರಪನಹಳ್ಳಿ ತಾಲೂಕನ್ನು ದಾವಣಗೆರೆ ಜಿಲ್ಲೆಗೆ ಸೇರಿಸಲಾಯಿತು. ಹೀಗಾಗಿ ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬಳ್ಳಾರಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಕೂಡ್ಲಿಗಿ, ಸಂಡೂರು, ಮತ್ತು ಶಿರುಗುಪ್ಪ ಎಂಬ ಏಳು ತಾಲೂಕುಗಳಿವೆ.

ಭೌಗೋಳಿಕ ಹಿನ್ನೆಲೆ: ರಾಜ್ಯದ ಪೂರ್ವ ಭಾಗದಲ್ಲಿರುವ ಬಳ್ಳಾರಿ ಜಿಲ್ಲೆಯು ನೈರುತ್ಯ ಈಶಾನ್ಯ ದಿಕ್ಕುಗಳ ಅಭಿಮುಖವಾಗಿ ಚಾಚಿಕೊಂಡಿದೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯು ಜಿಲ್ಲೆಯ ನೈರುತ್ಯ ದಿಕ್ಕಿನಲ್ಲಿರುವ ಹಗರಿಬೊಮ್ಮನಹಳ್ಳಿ ತಾಲೂಕಿನ ಕಲ್ಲಹಳ್ಳಿ ಗ್ರಾಮದಿಂದ ಈಶಾನ್ಯ ದಿಕ್ಕಿನಲ್ಲಿರುವ

ಶಿರುಗುಪ್ಪ ತಾಲೂಕಿನ ಸಲ್ಲಕುದಲೂರು(ಸಂತೆ ಕೂಡ್ಲೂರು) ಗ್ರಾಮದವರೆಗೆ ಒಟ್ಟು 187 ಕಿ.ಮೀ. ಉದ್ದವಾಗಿ, ಪೂರ್ವಪಶ್ಚಿಮವಾಗಿ ಬಳ್ಳಾರಿ ತಾಲೂಕಿನ ಕಾರೇಕಲ್ಲು ವೀರಾಪುರ ಗ್ರಾಮದಿಂದ ಹಡಗಲಿ ತಾಲೂಕಿನ ಹಿರೇಬನ್ನಹಟ್ಟಿ ಗ್ರಾಮದವರೆಗೆ 161 ಕಿ.ಮೀ. ಅಗಲ ವಿಸ್ತರಿಸಿದೆ.[7] ಜಿಲ್ಲೆಯ ಪೂರ್ವಕ್ಕೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಮತ್ತು ಕರ್ನೂಲ್ ಜಿಲ್ಲೆಯ ಆಲೂರು ತಾಲೂಕು, ಪಶ್ಚಿಮಕ್ಕೆ ಗದಗ ಮತ್ತು ಹಾವೇರಿ ಜಿಲ್ಲೆಗಳು, ಉತ್ತರಕ್ಕೆ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳು, ದಕ್ಷಿಣಕ್ಕೆ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಿಂದ ಸುತ್ತುವರೆಯಲ್ಪಟ್ಟಿವೆ. ರಾಜ್ಯದ 1,91,791 ಚ.ಕಿ.ಮೀ. ಭೂವಿಸ್ತೀರ್ಣದಲ್ಲಿ ಶೇ.4.40(8,450 ಚ.ಕಿ.ಮೀ.)ರಷ್ಟು ಭೂಭಾಗ ಹೊಂದಿರುವ ಬಳ್ಳಾರಿ ಜಿಲ್ಲೆ ರಾಜ್ಯದ ವಿಸ್ತೀರ್ಣದಲ್ಲಿ 8ನೇ ಸ್ಥಾನದಲ್ಲಿದೆ. ಜಿಲ್ಲೆಯ ಒಟ್ಟು 8,13,196 ಹೆಕ್ಟೇರ್ ಪ್ರದೇಶದಲ್ಲಿ 97,017 ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಜಿಲ್ಲೆಯು ಶುಷ್ಕ ವಾತಾವರಣದಿಂದ ಕೂಡಿದ್ದರಿಂದ ಮಳೆ ಬೀಳುವ ಪ್ರಮಾಣವು ಕಡಿಮೆ ಇದೆ. ವಾಡಿಕೆಯಂತೆ ಜಿಲ್ಲೆಯಲ್ಲಿ ವಾರ್ಷಿಕವಾಗಿ ಬಿದ್ದ ಮಳೆ ಸರಾಸರಿ ಪ್ರಮಾಣ 626.0 ಮಿಲಿ ಮೀಟರ್‌ಗಳಷ್ಟು ಇದೆ. ಜಿಲ್ಲೆಯಲ್ಲಿ ಇತ್ತೀಚಿನ ಹತ್ತು ವರ್ಷಗಳಲ್ಲಿ ಬಿದ್ದ ಮಳೆಯ ಪ್ರಮಾಣ ಶೇ.630.3 ಮಿ.ಮೀ.ರಷ್ಟಿದೆ.[8] ಜಿಲ್ಲೆಯಲ್ಲಿ 322 ಕಿ.ಮೀ ಉದ್ದ ಹರಿಯುವ ತುಂಗಾಭದ್ರ ನದಿಯು ಜಿಲ್ಲೆಯ ಪೂರ್ವ ತಾಲೂಕುಗಳಿಗೆ ವರಪ್ರಸಾದವಾಗಿದೆ. ಜಿಲ್ಲೆಯಲ್ಲಿ ಬಿತ್ತನೆಯಾಗುವ ಒಟ್ಟು 5,69,652 ಹೆಕ್ಟೇರ್ ಪ್ರದೇಶದಲ್ಲಿ 1,88,352(ಶೇ.33.06) ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆತಿದೆ(ನೋಡಿ ಕೋಷ್ಟಕ-3.1). ಇದರಲ್ಲಿ ತುಂಗಭದ್ರ ಜಲಾಶಯದಿಂದ 83,761(ಶೇ.14.70) ಹೆಕ್ಟೇರಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ದಕ್ಕಿದೆ.[9] 1952ರ ವೇಳೆಗೆ ತುಂಗಭದ್ರ ಆಣೆಕಟ್ಟಿನ ಕಾರ್ಯಯೋಜನೆಗಳು ಪೂರ್ಣಗೊಂಡಿದ್ದರ ಫಲವಾಗಿ ಬಳ್ಳಾರಿ ಜಿಲ್ಲೆ 50ರ ದಶಕದಲ್ಲೇ ನೀರಾವರಿ ಪ್ರದೇಶವಾಗಿತ್ತು. ಆ ವೇಳೆಗೆ ಜಿಲ್ಲೆಯಲ್ಲಿ ಶೇ.3.50ರಷ್ಟು ಪ್ರದೇಶ ಮಾತ್ರ ನೀರಾವರಿ ಸೌಲಭ್ಯ ಹೊಂದಿದ ಪ್ರದೇಶವಾಗಿತ್ತು. ಐದಾರು ದಶಕಗಳ ಅವಧಿಯಲ್ಲಿ ಪ್ರತಿ ಪಂಚವಾರ್ಷಿಕ ಯೋಜನೆಗಳ ಮೂಲಕ ಸಾಕಷ್ಟು ಪ್ರಮಾಣದಲ್ಲಿ ದೊಡ್ಡ ಮೊತ್ತವನ್ನು ನೀರಾವರಿ ಸುಧಾರಣೆಗಾಗಿ ವಿನಿಯೋಗಿಸಲಾಗಿದೆ. ಹೀಗಾಗಿ ಜಿಲ್ಲೆಯಲ್ಲಿ ಬಿತ್ತನೆಯಾಗುವ ಪ್ರದೇಶದಲ್ಲಿ ಶೇ.32.90ರಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ವಿಸ್ತರಿಸಲಾಗಿದೆ. ಸರಾಸರಿ ಶೇ.24.80ರಷ್ಟು ಹೆಚ್ಚುವರಿ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆದಂತಾಗಿದೆ. ರಾಜ್ಯಕ್ಕೆ ಹೋಲಿಸಿದರೆ, ಬಳ್ಳಾರಿ ಜಿಲ್ಲೆಯಲ್ಲಿ ಶೇ.8.10ರಷ್ಟು ಹೆಚ್ಚು ನೀರಾವರಿ ಸೌಲಭ್ಯ ಪಡೆದಿದೆ.[10] ಜಿಲ್ಲೆಯ ಬಹುತೇಕ ಭಾಗವು ಕಪ್ಪುಜೇಡಿಮಣ್ಣು, ಕೆಂಪುಮಣ್ಣು, ಮರಳು ಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದ ಸಮತಟ್ಟಾದ ಹಾಗೂ ಫಲವತ್ತಾದ ಭೂಪ್ರದೇಶವಾಗಿದೆ. ಇಲ್ಲಿಯ ಜನರ ಮುಖ್ಯ ಕಸುಬು ಕೃಷಿಯಾಗಿದೆ. ಭತ್ತ, ಜೋಳ, ಮುಸುಕಿನ ಜೋಳ, ಶೇಂಗಾ, ಸೂರ್ಯಕಾಂತಿ ಮುಖ್ಯ ಬೆಳೆಗಳಾದರೆ, ಕಬ್ಬು, ಬಾಳೆ, ಹತ್ತಿ, ರೇಷ್ಮೆ ಇತರ ಮುಖ್ಯ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತಿದೆ.[11]

ಜಿಲ್ಲೆಯು ಹವಮಾನ ದೃಷ್ಟಿಯಿಂದ ಉಷ್ಣವಲಯವಾಗಿದೆ. ಬಳ್ಳಾರಿಯು ಬಿಸಿಲು ಜಿಲ್ಲೆಯಾಗಿದೆ. ಬಿಸಿಲಿನ ಪ್ರಖರತೆಯನ್ನು ಕಂಡ ಸಾಹಿತಿ ಬೀಚಿಯವರು ಬಳ್ಳಾರಿಗೆ ಎರಡೇ ಕಾಲ ಎಂದು ಹೇಳಿದ್ದಾರೆ.

ಒಂದು, ಬೇಸಿಗೆ ಕಾಲ. ಎರಡು, ಕಡುಬೇಸಿಗೆ ಕಾಲ. ಆದರೆ ಇದು ಇತ್ತೀಚೇಗೆ ರಣಬಿಸಿಲು ಜಿಲ್ಲೆಯಾಗಿದೆ. ಪ್ರಕೃತಿ ನೀಡುತ್ತಿರುವ ತಾಪಮಾನ ಸಾಕಾಗುವುದಿಲ್ಲವೆಂದು ಜಿಲ್ಲೆಯಲ್ಲಿ ಎರಡು ಶಾಖೋತ್ಪನ್ನ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ಗಣಿಗಾರಿಕೆಯಿಂದಾಗಿ ಜಿಲ್ಲೆಯಲ್ಲಿ ಗಗನಸದೃಶ ಪ್ರಮಾಣದಲ್ಲಿ ನಡೆದಿರುವ ಸರಕು ಸಾರಿಗೆ ವ್ಯವಸ್ಥೆಯ ವಿಸ್ತರಣೆ ಮತ್ತು ಅದರಿಂದ ಉಲ್ಬಣಗೊಳ್ಳುತ್ತಿರುವ CO_2ನ ಆಸ್ಫೋಟ ಜಿಲ್ಲೆಯಲ್ಲಿನ ತಾಪಮಾನದ ಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತಿದೆ. ಇದು ಯಾವ ಗಂಭೀರ ಸ್ವರೂಪವನ್ನು ತಳೆದಿದೆ ಎಂದರೆ ಇಲ್ಲಿ ದ್ಯುತಿಸಂಶ್ಲೇಷಣಾ ಕ್ರಿಯೆಯೆಂಬ ಕ್ರಿಯೆಯೇ ನಡೆಯುವುದು ದುರ್ಲಭವಾಗುತ್ತಿದೆ. ಮರ-ಗಿಡ, ಹೂವು-ಹಣ್ಣು, ಖಗ-ಮೃಗ, ಜಾನುವಾರು, ಮೀನುಗಾರಿಕೆ ಯಾವುವೂ ಇಲ್ಲಿ ಉಳಿಯುವ ಸಾಧ್ಯತೆಯು ಕ್ಷೀಣಿಸುತ್ತಿದೆ.[12] ಇಲ್ಲಿಯ ಜನರಿಗೆ ಜಿಲ್ಲೆಯ ಪರಿಸರದ ಕಾಳಜಿಯ ಬಗ್ಗೆ ಕೊರತೆ ಇದೆ.

ಸಾಮಾಜಿಕ ಹಿನ್ನೆಲೆ: ರಾಜ್ಯದ ಭೌಗೋಳಿಕ ವಿಸ್ತೀರ್ಣದಲ್ಲಿ ಬಳ್ಳಾರಿ ಜಿಲ್ಲೆಯು ಶೇ.4.40 ರಷ್ಟು ಭೂಭಾಗವನ್ನು ಹೊಂದಿದೆ. 2011ರ ಜನಗಣತಿ ಪ್ರಕಾರ, ಜಿಲ್ಲೆಯಲ್ಲಿ 25,32,383 ಜನಸಂಖ್ಯೆ ಇದ್ದು, 12,80,402 ಪುರುಷರು ಹಾಗೂ 12,51,981 ಮಹಿಳೆಯರು ಇದ್ದಾರೆ. ರಾಜ್ಯದ ಜನಸಂಖ್ಯೆಯಲ್ಲಿ ಜಿಲ್ಲೆ ಶೇ.4.14ರಷ್ಟು ಪಾಲನ್ನು ಪಡೆದಿದೆ. ಬಳ್ಳಾರಿ ಜಿಲ್ಲೆಯಲ್ಲಿ ಲಿಂಗಾನುಪಾತವು ಪ್ರತಿ 1,000 ಪುರುಷರಿಗೆ 978 ಮಹಿಳೆಯರು ಇದ್ದಾರೆ.[13] ಈ ಪ್ರಮಾಣವನ್ನು ರಾಜ್ಯಕ್ಕೆ(973) ಹೋಲಿಸಿದರೆ ಶೇ.5ರಷ್ಟು ಹೆಚ್ಚಾಗಿದೆ. ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯ ಜನಸಂಖ್ಯೆ ಬೆಳವಣಿಗೆ ದರ ಶೇ.24.92ರಷ್ಟು ಇದ್ದು, ಕಳೆದ ದಶಕಕ್ಕೆ ಹೋಲಿಸಿದಾಗ ಶೇ.2.51ರಷ್ಟು ಹೆಚ್ಚಾಗಿದೆ. ರಾಜ್ಯದ ಜನಸಂಖ್ಯೆ ಬೆಳವಣಿಗೆ ದರದಲ್ಲಿ 2ನೇ ಸ್ಥಾನ ಹಾಗೂ ಒಟ್ಟು ಜನಸಂಖ್ಯೆಯಲ್ಲಿ 6ನೇ ಸ್ಥಾನದಲ್ಲಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರತಿ ಚ.ಕಿ.ಮೀ.ಗೆ 300ರಷ್ಟು ಜನಸಾಂದ್ರತೆ ಇದೆ. ಇದಕ್ಕೆ ಜಿಲ್ಲೆಯಲ್ಲಿ ನಡೆದ ಗಣಿಗಾರಿಕೆ ಚಟುವಟಿಕೆಗಳು ಕಾರಣವಾಗಿರಬಹುದು. 2011ರ ಜನಗಣತಿ ಪ್ರಕಾರ, ರಾಜ್ಯದ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯ ಮಹಿಳೆಯರ ಪಾಲು ಶೇ.2.04ರಷ್ಟಿದೆ. ರಾಜ್ಯದ ಶೇ.49.31ರಷ್ಟು ಮಹಿಳೆಯರಲ್ಲಿ ಜಿಲ್ಲೆಯ ಮಹಿಳೆಯರ ಪಾಲು ಶೇ.4.15ರಷ್ಟಿದೆ.(ನೋಡಿ ಕೋಷ್ಟಕ-3.2).

ಸಾಮಾಜಿಕವಾಗಿ ಬಳ್ಳಾರಿ ಜಿಲ್ಲೆಯು ವಿವಿಧ ಜಾತಿ, ಧರ್ಮ ಹಾಗೂ ವರ್ಗಗಳಿಂದ ಕೂಡಿದೆ. ಜಿಲ್ಲೆಯಲ್ಲಿ ಮುಖ್ಯವಾಗಿ ಲಿಂಗಾಯತ, ವಾಲ್ಮೀಕಿ(ನಾಯಕ), ಮುಸ್ಲಿಂ ಹಾಗೂ ಕುರುಬ ಈ ನಾಲ್ಕು ಸಮುದಾಯಗಳು ದೊಡ್ಡ ಸಂಖ್ಯೆಯಲ್ಲಿವೆ. ಪರಿಶಿಷ್ಟ ಜಾತಿ(ಎಸ್.ಸಿ) ಸಮುದಾಯವನ್ನು ಇಡಿಯಾಗಿ ಪರಿಗಣಿಸಿದಾಗ ಇದು ಈ ಮೇಲಿನ ಸಮುದಾಯಗಳಿಗೆ ಸಮ ಆಗುತ್ತದೆ. ಆದರೆ ಪರಿಶಿಷ್ಟ ಜಾತಿಯಲ್ಲಿ ಹಲವಾರು ಜಾತಿಗಳು ಸೇರಿರುವುದರಿಂದ ಇವುಗಳನ್ನು ಬಿಡಿಬಿಡಿಯಾಗಿ ನೋಡಿದಾಗ ಇದು ಬಲಿಷ್ಠ ಸಮುದಾಯವಾಗಿ ಕಂಡಬರುವುದಿಲ್ಲ. 2011ರ ತಾತ್ಪೂರ್ತಿಕ ಜನಗಣತಿಯಂತೆ, ರಾಜ್ಯದಲ್ಲಿ ಸಾಕ್ಷರತೆ ಪ್ರಮಾಣ ಶೇ.75.60ರಷ್ಟಿದ್ದು, ಇದರಲ್ಲಿ ಶೇ.82.85 ಪುರುಷ ಹಾಗೂ ಶೇ.68.13ರಷ್ಟು ಮಹಿಳಾ ಸಾಕ್ಷರತೆ ಪ್ರಮಾಣ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ಸಾಕ್ಷರತೆ ಪ್ರಮಾಣ ಶೇ.67.85ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇ.77.24ರಷ್ಟು ಪುರುಷ ಹಾಗೂ ಶೇ.58.28ರಷ್ಟು ಮಹಿಳಾ

ಸಾಕ್ಷರತೆ ಪ್ರಮಾಣವಿದೆ(ನೋಡಿ ಕೋಷ್ಟಕ-3.2). ರಾಜ್ಯದ ಸಾಕ್ಷರತೆ ಪ್ರಮಾಣಕ್ಕೆ ಹೋಲಿಸಿದರ ಜಿಲ್ಲೆಯಲ್ಲಿ ಶೇ.7.55ರಷ್ಟು ಕಡಿಮೆ ಹಾಗೂ ಪುರುಷರ ಮತ್ತು ಮಹಿಳಾ ಸಾಕ್ಷರತೆ ಪ್ರಮಾಣದಲ್ಲಿ ಕ್ರಮವಾಗಿ ಶೇ.5.61ರಷ್ಟು ಮತ್ತು ಶೇ.9.85ರಷ್ಟು ಕಡಿಮೆ ಇದೆ. ರಾಜ್ಯದ ಸಾಕ್ಷರತೆ ಬೆಳವಣಿಗೆಯಲ್ಲಿ ಬಳ್ಳಾರಿ ಜಿಲ್ಲೆ 24ನೇ ಸ್ಥಾನದಲ್ಲಿದೆ. ಹೀಗಾಗಿ ಸಾಕ್ಷರತೆ ಬೆಳವಣಿಗೆಯಲ್ಲಿ ಬಳ್ಳಾರಿ ಜಿಲ್ಲೆ ರಾಜ್ಯದಲ್ಲಿ ಒಂದು ಹಿಂದುಳಿದ ಜಿಲ್ಲೆಯಾಗಿದೆ.

ಆರ್ಥಿಕ ಹಿನ್ನೆಲೆ: ಬಳ್ಳಾರಿ ಜಿಲ್ಲೆಯನ್ನು ಪ್ರಾದೇಶಿಕವಾಗಿ ಪೂರ್ವ ಮತ್ತು ಪಶ್ಚಿಮ ತಾಲೂಕುಗಳೆಂದು ವಿಂಗಡಿಸಲಾಗಿದೆ. ಶಿರುಗುಪ್ಪ, ಬಳ್ಳಾರಿ, ಹೊಸಪೇಟೆ ಮತ್ತು ಸಂಡೂರು ಪೂರ್ವಭಾಗದ ತಾಲೂಕುಗಳಾದರೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಮತ್ತು ಹಡಗಲಿ ಪಶ್ಚಿಮ ಭಾಗದ ತಾಲೂಕುಗಳಾಗಿವೆ. ಜಿಲ್ಲೆಯ ಕೃಷಿಗೆ ತುಂಗಭದ್ರಾ ನದಿಯು ಪ್ರಮುಖ ನೀರಾವರಿ ಮೂಲವಾಗಿದೆ. ಆದರೆ ಈ ನದಿಯಿಂದ ಇಡೀ ಜಿಲ್ಲೆಗೆ ನೀರಾವರಿ ಸೌಲಭ್ಯ ದೊರೆತಿಲ್ಲ. ಜಿಲ್ಲೆಯ ಪೂರ್ವಭಾಗದ ತಾಲೂಕುಗಳ ಸೀಮಿತ ಪ್ರದೇಶಗಳಿಗೆ ಮಾತ್ರ ನೀರಾವರಿ ಸೌಲಭ್ಯ ದೊರೆತಿದೆ. ಪಶ್ಚಿಮ ಭಾಗದ ತಾಲೂಕುಗಳು ಸಂಪೂರ್ಣವಾಗಿ ಮಳೆ ಆಶ್ರಯ ಕೃಷಿಯನ್ನು ಅವಲಂಬಿಸಿವೆ. ಜಿಲ್ಲೆಯ ಬಹುತೇಕ ಜನರು ಕೃಷಿ ಅವಲಂಬಿತ ದುಡಿಯುವ ವರ್ಗದವರಾಗಿದ್ದಾರೆ. ವಲಯವಾರು ದುಡಿಮೆಯಲ್ಲಿ ಪಾಲ್ಗೊಳ್ಳುವಿಕೆಯ ಪ್ರಮಾಣವು ಆಯಾ ಪ್ರದೇಶದ ಅಭಿವೃದ್ಧಿಯನ್ನು ಸೂಚಿಸುವ ಮಾನದಂಡವಾಗಿರುತ್ತದೆ. 2001ರ ಗಣತಿ ಪ್ರಕಾರ, ಜಿಲ್ಲೆಯಲ್ಲಿ 9,20,821(ಶೇ.45.42)ರಷ್ಟು ದುಡಿಯುವ ವರ್ಗದವರಿದ್ದು, ಇದರಲ್ಲಿ 6,12,640(ಶೇ.66.53)ರಷ್ಟು ಪ್ರಾಥಮಿಕ ವಲಯ, 25,737(ಶೇ.2.80) ದ್ವಿತೀಯ ವಲಯ ಮತ್ತು 2,82,444(ಶೇ.30.67) ಸೇವಾ ವಲಯವನ್ನು ಅವಲಂಬಿಸಿದ್ದಾರೆ. ಜಿಲ್ಲೆಯಲ್ಲಿ ದುಡಿಯುವ ಜನರಲ್ಲಿ 3,58,498(ಶೇ.38.93)ರಷ್ಟು ಮಹಿಳೆಯರ ಪಾಲು ಇದೆ. ಇವರಲ್ಲಿ 2,90,824(ಶೇ.47.48)ರಷ್ಟು ಪ್ರಾಥಮಿಕ ವಲಯ, 12,537(ಶೇ.3.50) ದ್ವಿತೀಯ ವಲಯವನ್ನು ಹಾಗೂ 55,137(ಶೇ.19.52)ರಷ್ಟು ತೃತೀಯ ವಲಯವನ್ನು ಅವಲಂಬಿಸಿದ್ದಾರೆ(ನೋಡಿ ಕೋಷ್ಟಕ-3.3). ಈ ಹಿನ್ನೆಲೆಯಲ್ಲಿ ಬಳ್ಳಾರಿ ಹಿಂದುಳಿದ ಜಿಲ್ಲೆಯಾಗಿದೆ.

ನೈಸರ್ಗಿಕವಾಗಿ ಖನಿಜ ಸಂಪತ್ತು ಹೇರಳವಾಗಿ ಲಭ್ಯವಿರುವುದರಿಂದ ಬಳ್ಳಾರಿ ಜಿಲ್ಲೆ ರಾಜ್ಯ ಮತ್ತು ರಾಷ್ಟದ ಮಟ್ಟದಲ್ಲಿ ಶ್ರೀಮಂತ ಜಿಲ್ಲೆಯಾಗಿದೆ. ಜಿಲ್ಲೆಯ ಶ್ರೀಮಂತಿಕೆ ಕೇವಲ ಗಣಿ ಮಾಲೀಕರಿಗೆ ಹಾಗೂ ಗಣಿ ಉದ್ಯಮಿಗಳಿಗೆ ಸೀಮಿತವಾಗಿದೆಯೇ ಹೊರತು, ಜನಸಾಮಾನ್ಯರಿಗೆ ಕನ್ನಡಿಯೊಳಗಿನ ಗಂಟಾಗಿದೆ. ವಿಶ್ವದಲ್ಲೇ ಉತ್ಕೃಷ್ಟ ಗುಣಮಟ್ಟದ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜ ಅದಿರು ನಿಕ್ಷೇಪಗಳು ಜಿಲ್ಲೆಯಲ್ಲಿವೆ. ಪರಿಣಾಮವಾಗಿ ಜಿಲ್ಲೆಯಲ್ಲಿ ಬೃಹತ್ ಕಂಪನಿಗಳು ಕಬ್ಬಿಣ ಮತ್ತು ಉಕ್ಕು ಉದ್ದಿಮೆ ಮೇಲೆ ಬಂಡವಾಳ ಹೂಡಿವೆ. ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು 23 ಸಣ್ಣ ಮತ್ತು ಬೃಹತ್ ಪ್ರಮಾಣದ ಪ್ರಮುಖ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳು ಉತ್ಪಾದನೆಯಲ್ಲಿ ತೊಡಗಿವೆ. ಔದ್ಯೋಗಿಕವಾಗಿ ಜಿಲ್ಲೆ ರಾಜ್ಯದಲ್ಲಿ 9ನೇ ಸ್ಥಾನದಲ್ಲಿದೆ.[14] ಹೀಗಾಗಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಳ್ಳಾರಿ ಜಿಲ್ಲೆಗೆ ವಿಶಿಷ್ಟ ಸ್ಥಾನವಿದೆ. ಈ ಕಾರ್ಖಾನೆಗಳು ಜಿಲ್ಲೆಯ ಪೂರ್ವ ತಾಲೂಕುಗಳಲ್ಲಿ

ಮಾತ್ರ ಹೆಚ್ಚಾಗಿ ನೆಲೆಗೊಂಡಿವೆ. ಔದ್ಯೋಗಿಕವಾಗಿ ಪೂರ್ವ ತಾಲೂಕುಗಳು ಅಭಿವೃದ್ಧಿ ಹೊಂದಿದ ಹಾಗೂ ನೀರಾವರಿಯಿಂದ ಸಮೃದ್ಧಿ ತಾಲೂಕುಗಳಾದರೆ, ಪಶ್ಚಿಮ ತಾಲೂಕುಗಳು ಔದ್ಯೋಗಿಕವಾಗಿ ಮತ್ತು ನೀರಾವರಿಯಿಂದಲೂ ವಂಚಿತವಾದ ತಾಲೂಕುಗಳಾಗಿವೆ. ಜಿಲ್ಲೆಯ ಪೂರ್ವಭಾಗದ ತಾಲೂಕುಗಳನ್ನು ಅಭಿವೃದ್ಧಿ ಪ್ರದೇಶಗಳೆಂದು ಹಾಗೂ ಪಶ್ಚಿಮ ಭಾಗದ ತಾಲೂಕುಗಳನ್ನು ಹಿಂದುಳಿದ ಪ್ರದೇಶಗಳೆಂದು ಗುರುತಿಸಲಾಗಿದೆ. ಹೀಗಾಗಿ ಎರಡು ಭಾಗಗಳ ನಡುವೆ ಆರ್ಥಿಕ ಅಸಮಾನತೆ ಕಂಡುಬರುವುದರಿಂದ ಬಳ್ಳಾರಿ ಜಿಲ್ಲೆಯು ಹಿಂದುಳಿದ ಜಿಲ್ಲೆಯಾಗಿದೆ.

ರಾಜಕೀಯ ಹಿನ್ನೆಲೆ: ಬಳ್ಳಾರಿ ಜಿಲ್ಲೆಯು ಆಡಳಿತಾತ್ಮಕವಾಗಿ ಎರಡು ಉಪವಿಭಾಗಗಳನ್ನು ಹೊಂದಿದೆ. ಒಂದು, ಬಳ್ಳಾರಿ ವಿಭಾಗ. ಇದು ಮೂರು ತಾಲೂಕುಗಳನ್ನು ಹೊಂದಿದೆ. ಎರಡು, ಹೊಸಪೇಟೆ ವಿಭಾಗ. ಇದು ನಾಲ್ಕು ತಾಲೂಕುಗಳನ್ನು ಹೊಂದಿದೆ. ಬಳ್ಳಾರಿ ಜಿಲ್ಲೆ ಒಂದು ಲೋಕಸಭಾ ಕ್ಷೇತ್ರವನ್ನು ಹಾಗೂ ಒಂಭತ್ತು ವಿಧಾನಸಭಾ ಕ್ಷೇತ್ರವನ್ನು ಹೊಂದಿದೆ. 2008 ಫೆಬ್ರವರಿ ತಿಂಗಳಲ್ಲಿ ತಿದ್ದುಪಡಿಯೊಂದಿಗೆ ಜಾರಿಗೆ ಬಂದ 1962ರ ಡಿಲಿಮಿಟೇಷನ್ ಕಾಯಿದೆಯು ನೂತನವಾಗಿ ರಾಜ್ಯದ ರಾಜಕೀಯ ಭೂಪಟವನ್ನು ಬದಲಾಗಿಸಿದೆ. 2008ರ ಮೊದಲು ಜಿಲ್ಲೆಯ ಹೊಸಪೇಟೆ ತಾಲೂಕು ನೆರೆ ಜಿಲ್ಲೆ ಕೊಪ್ಪಳ ಲೋಕಸಭಾ ಕ್ಷೇತ್ರಕ್ಕೆ ಸೇರಿತ್ತು. ಇಂದು ಇದು ಬಳ್ಳಾರಿ ಲೋಕಸಭಾ ಕ್ಷೇತ್ರಕ್ಕೆ ಸೇರ್ಪಡೆಗೊಂಡಿದೆ. ಬಳ್ಳಾರಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟ ಶಿರುಗುಪ್ಪ ವಿಧಾನಸಭೆ ಕ್ಷೇತ್ರವು ಕೊಪ್ಪಳ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ.[15] ಇತ್ತೀಚಿನ ಕೆಲವು ವರ್ಷಗಳಿಂದ ಬಳ್ಳಾರಿ ಜಿಲ್ಲೆ ರಾಜ್ಯದ ರಾಜಕೀಯವನ್ನು ನಿರ್ಣಯಿಸುವ ಶಕ್ತಿಯೆನ್ನುವ ಚಿತ್ರಣ ಪಡೆದಿದೆ ಎನ್ನಲಾಗುತ್ತಿದೆ. ಕಳೆದೆರಡು ಲೋಕಸಭಾ ಚುಣಾವಣೆಯಲ್ಲಿ ಮತ್ತು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಒಂಭತ್ತು ವಿಧಾನಸಭಾ ಸ್ಥಾನಗಳಲ್ಲಿ ಒಂದನ್ನು ಹೊರತು ಪಡಿಸಿ, ಎಲ್ಲಾ ಎಂಟು ಸ್ಥಾನಗಳನ್ನು ಭಾರತೀಯ ಜನತಾ ಪಕ್ಷ ಗೆದ್ದುಕೊಂಡಿರುವುದು ಇದಕ್ಕೆ ಸಾಕ್ಷಿಯಾಗಿದೆ. ರಾಷ್ಟ್ರ ಮತ್ತು ರಾಜ್ಯ ರಾಜಕಾರಣದಲ್ಲಿ ಇಂದೊಂದು ಐತಿಹಾಸಿಕ ದಾಖಲೆಯಾಗಿದೆ. ಈ ಬದಲಾವಣೆಗೆ ಪ್ರಮುಖವಾಗಿ ಎರಡು ಕಾರಣಗಳನ್ನು ಗುರುತಿಸಲಾಗಿದೆ. ಒಂದು, ಸಂಸತ್ತು/ವಿಧಾನಸಭಾ ಕ್ಷೇತ್ರ ಮರುವಿಂಗಡನೆಯ ಪರಿಣಾಮವಾಗಿ ರಾಜ್ಯದ ರಾಜಕೀಯ ಸಮೀಕರಣ(ಇಕ್ವೇಶನ್) ಬದಲಾಗುವುದರಲ್ಲಿ ಮಹತ್ವದ ಪಾತ್ರ ವಹಿಸಿದೆ. ಬಳ್ಳಾರಿ ಜಿಲ್ಲೆಯ ಒಂಭತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಕೇವಲ ಎರಡನ್ನು ಬಿಟ್ಟು ಉಳಿದ ಏಳು ಕ್ಷೇತ್ರಗಳಲ್ಲಿ ಐದು ಪರಿಶಿಷ್ಟ ಪಂಗಡ ಮತ್ತು ಎರಡು ಪರಿಶಿಷ್ಟ ಜಾತಿಗಳ ಮೀಸಲಾತಿ ಕ್ಷೇತ್ರಗಳಾಗಿ ವಿಂಗಡನೆಗೊಂಡಿವೆ. ಕ್ಷೇತ್ರ ಮರುವಿಂಗಡನೆಯಿಂದಾಗಿ ಜಿಲ್ಲೆಯ ದೊಡ್ಡ ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯ ದೊರೆತಾಗಿದೆ. ಆದರೆ ಜನಸಾಮಾನ್ಯರಿಗೆ ರಾಜಕೀಯ ಪ್ರಾತಿನಿಧ್ಯ ಸಿಗದಂತಹ ಪರಿಸ್ಥಿತಿ ಜಿಲ್ಲೆಯಲ್ಲಿ ನಿರ್ಮಾಣವಾಗಿದೆ. ಎರಡು, ಜಿಲ್ಲೆಯ ಸಂಸತ್ತು/ವಿಧಾನಸಭಾ ಕ್ಷೇತ್ರಗಳಿಗೆ ಗಣಿ ಉದ್ಯಮಿಗಳ ನೇರ ಸ್ಪರ್ಧೆ. ಜಿಲ್ಲೆಯ ಲೋಕಸಭೆ/ವಿಧಾನಸಭಾ ಕ್ಷೇತ್ರಗಳಲ್ಲಿ ಗಣಿ ಉದ್ಯಮಿಗಳು ಅಥವಾ ಅವರ ಸಂಬಂಧಿಗಳು ಚುನಾವಣೆಯಲ್ಲಿ ನೇರವಾಗಿ ಸ್ಪರ್ಧಿಸಿದ್ದು, ಸಾಕಷ್ಟು ಪ್ರಮಾಣದಲ್ಲಿ ಹಣ ಖರ್ಚು ಮಾಡಿದ್ದರ ಪರಿಣಾಮವಾಗಿ ಜಿಲ್ಲೆಯ ದೊಡ್ಡ ಸಂಖ್ಯೆಯಲ್ಲಿರುವ ಸಮುದಾಯಗಳು ಪಕ್ಷ

ಬದಲಾಯಿಸಿರುವುದಕ್ಕೆ ಕಾರಣವಾಗಿದೆ. 2013ರ ಸಾರ್ವತ್ರಿಕ ಚುನಾವಣೆಯಲ್ಲಿ ಬಳ್ಳಾರಿ ಜಿಲ್ಲೆಯ ಒಂಭತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ನಾಲ್ಕು ಸ್ಥಾನಗಳನ್ನು, ಬಿ.ಎಸ್.ಆರ್ ಕಾಂಗ್ರೆಸ್ ಎರಡು ಸ್ಥಾನಗಳನ್ನು ಬಿ.ಜೆ.ಪಿ, ಜೆ.ಡಿ.ಎಸ್ ತಲಾ ಒಂದೊಂದು ಸ್ಥಾನಗಳನ್ನು ಮತ್ತು ಪಕ್ಷೇತರ ಒಂದು ಸ್ಥಾನವನ್ನು ಪಡೆದುಕೊಂಡಿವೆ.

ಜಿಲ್ಲಾಪಂಚಾಯಿತಿ: ಪ್ರಸ್ತುತ ಅಧ್ಯಯನವು ಗ್ರಾಮಪಂಚಾಯಿತಿಗಳ ಅಧ್ಯಯನವಾಗಿರುವುದರಿಂದ ಜಿಲ್ಲೆಯ ಪಂಚಾಯತ್‌ರಾಜ್ ವ್ಯವಸ್ಥೆ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. 1993ರ ಪಂಚಾಯತ್‌ರಾಜ್ ಕಾಯಿದೆ ಅನ್ವಯ, ರಾಜ್ಯದಲ್ಲಿ ಮೂರು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಯಲ್ಲಿದೆ. ಬಳ್ಳಾರಿ ಜಿಲ್ಲೆಯಲ್ಲಿ ಒಂದು ಜಿಲ್ಲಾಪಂಚಾಯಿತಿ, ಏಳು ತಾಲೂಕುಪಂಚಾಯಿತಿಗಳು ಹಾಗೂ 189 ಗ್ರಾಮಪಂಚಾಯಿತಿಗಳು ಅಸ್ತಿತ್ವದಲ್ಲಿವೆ.

2010 ಡಿಸೆಂಬರ್ ತಿಂಗಳಲ್ಲಿ ನಾಲ್ಕನೇ ಅವಧಿಗೆ ಜರುಗಿದ ಜಿಲ್ಲಾಪಂಚಾಯಿತಿ ಮತ್ತು ತಾಲೂಕುಪಂಚಾಯಿತಿಗಳ ಚುನಾವಣೆಯಲ್ಲಿ ಶೇ.50ರಷ್ಟು ಮಹಿಳಾ ಮೀಸಲಾತಿಯನ್ನು ನೀಡಲಾಗಿದೆ. ಬಳ್ಳಾರಿ ಜಿಲ್ಲಾಪಂಚಾಯಿತಿಗೆ ಜಿಲ್ಲೆಯ ಏಳು ತಾಲೂಕುಗಳಿಂದ 36 ಸದಸ್ಯರು ಪ್ರಾತಿನಿಧ್ಯ ಪಡೆದಿದ್ದಾರೆ. ತಾಲೂಕುವಾರು ಸದಸ್ಯರ ವಿವರಗಳನ್ನು ನೋಡಿದಾಗ ಶಿರುಗುಪ್ಪ 5(ಶೇ.14), ಬಳ್ಳಾರಿ 8(ಶೇ.22), ಹೊಸಪೇಟೆ 4(ಶೇ.11), ಸಂಡೂರು 5(ಶೇ.14), ಕೂಡ್ಲಿಗಿ 6(ಶೇ.17), ಹಗರಿಬೊಮ್ಮನಹಳ್ಳಿ 4(ಶೇ.11) ಮತ್ತು ಹಡಗಲಿ 4(ಶೇ.11) ಸದಸ್ಯರನ್ನು ಹೊಂದಿವೆ. ಲಿಂಗವಾರು ನೋಡಿದಾಗ ಪುರುಷ ಸದಸ್ಯರು 16(ಶೇ.44.44) ಮತ್ತು ಮಹಿಳಾ ಸದಸ್ಯರು 20(ಶೇ.55.56) ಪ್ರಾತಿನಿಧ್ಯ ಹೊಂದಿದ್ದಾರೆ. ಜಾತಿವಾರು ಪ್ರಾತಿನಿಧ್ಯ ನೋಡಿದಾಗ ಪರಿಶಿಷ್ಟ ಜಾತಿ 7(ಶೇ.19.44), ಪರಿಶಿಷ್ಟ ಪಂಗಡ 11,(ಶೇ.30.56) ಹಿಂದುಳಿದ ವರ್ಗ 18(ಶೇ.50) ಮತ್ತು ಸಾಮಾನ್ಯ ವರ್ಗಗಳಿಂದ 00(ಶೇ.00) ಚುನಾಯಿತರಾಗಿದ್ದಾರೆ(ನೋಡಿ ಕೋಷ್ಟಕ–3.4). ಪಕ್ಷವಾರು ನೋಡಿದಾಗ, ಬಿಜೆಪಿ 18, ಕಾಂಗ್ರೆಸ್ 17, ಹಾಗೂ ಜೆಡಿಎಸ್ 1 ಸದಸ್ಯರಿಂದ ಕೂಡಿದ ಜಿಲ್ಲಾಪಂಚಾಯಿತಿ 2010ರ ಚುನಾವಣೆಯಲ್ಲಿ ಅಸ್ತಿತ್ವಕ್ಕೆ ಬಂತು. ಬಿಜೆಪಿ ಬಹುಮತ ಪಡೆದರೂ ಸರ್ಕಾರ ರಚನೆಗೆಗಾಗಿ ಒಂದು ಸ್ಥಾನ ಅಗತ್ಯವಾಗಿ ಬೇಕಾಗಿತ್ತು. ಗಣಿ ಉದ್ಯಮಿಗಳ ಹಣದ ಭರಾಟೆಯಲ್ಲಿ ಆಪರೇಷನ್ ಕಮಲ ಮೂಲಕ ಜೆಡಿಎಸ್ ಅಭ್ಯರ್ಥಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಆದರೆ ಇಂದು ಅದು ಕಾಂಗ್ರೆಸ್‌ನ ಪಾಲಾಗಿದೆ. ಈ 36 ಜನ ಸದಸ್ಯರನ್ನು ಹೊರತುಪಡಿಸಿ ಏಳು ತಾಲೂಕುಪಂಚಾಯಿತಿಗಳ ಅಧ್ಯಕ್ಷರು, ಎರಡು ಲೋಕಸಭಾ ಸದಸ್ಯರು, ಎಂಟು ವಿಧಾನಸಭಾ ಸದಸ್ಯರು ಹಾಗೂ ಒಂದು ವಿಧಾನ ಪರಿಷತ್ ಸದಸ್ಯರು ಪದನಿಮಿತ್ತ ಜಿಲ್ಲಾಪಂಚಾಯಿತಿ ಸದಸ್ಯರಾಗಿರುತ್ತಾರೆ.

ತಾಲೂಕುಪಂಚಾಯಿತಿ: ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ತಾಲೂಕುಪಂಚಾಯಿತಿ ಮಧ್ಯಮ ಸ್ತರದ ಸ್ಥಳೀಯ ಸರ್ಕಾರವಾಗಿದೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯ 7 ತಾಲೂಕುಪಂಚಾಯಿತಿಯಲ್ಲಿ 135 ಜನ ಸದಸ್ಯರಿದ್ದಾರೆ. ತಾಲೂಕುವಾರು ಸದಸ್ಯರ ವಿವರಗಳನ್ನು ನೋಡಿದಾಗ ಶಿರುಗುಪ್ಪ 17(ಶೇ.12.5), ಬಳ್ಳಾರಿ 31(ಶೇ.23), ಹೊಸಪೇಟೆ 16(ಶೇ.12), ಸಂಡೂರು 17(ಶೇ.12.5), ಕೂಡ್ಲಿಗಿ 23(ಶೇ.17),

ಹಗರಿಬೊಮ್ಮನಹಳ್ಳಿ 16(ಶೇ.12) ಮತ್ತು ಹಡಗಲಿ 15(ಶೇ.11) ಸದಸ್ಯರನ್ನು ಹೊಂದಿವೆ. ಲಿಂಗವಾರು ನೋಡಿದಾಗ ಪುರುಷ ಸದಸ್ಯರು 60(ಶೇ.44.44) ಮತ್ತು ಮಹಿಳಾ ಸದಸ್ಯರು 75(ಶೇ.55.56) ಪ್ರಾತಿನಿಧ್ಯ ಹೊಂದಿದ್ದಾರೆ. ಜಾತಿವಾರು ಪ್ರಾತಿನಿಧ್ಯ ನೋಡಿದಾಗ ಪರಿಶಿಷ್ಟ ಜಾತಿ 30(ಶೇ.22.22), ಪರಿಶಿಷ್ಟ ಪಂಗಡ 36(ಶೇ.26.66) ಹಿಂದುಳಿದ ವರ್ಗ 25(ಶೇ.18.52) ಮತ್ತು ಸಾಮಾನ್ಯ ವರ್ಗಗಳಿಂದ 44(ಶೇ.32.60) ಚುನಾಯಿತರಾಗಿದ್ದಾರೆ(ನೋಡಿ ಕೋಷ್ಟಕ-3.5). ಈ 135 ಜನ ಸದಸ್ಯರನ್ನು ಹೊರತು ಪಡಿಸಿ ಆಯಾ ತಾಲೂಕುಗಳ ಸ್ಥಳೀಯ ಶಾಸಕರು ಮತ್ತು ಲೋಕಸಭಾ ಸದಸ್ಯರು ಪದನಿಮಿತ್ತ ಸದಸ್ಯರಾಗಿರುತ್ತಾರೆ. ಆಯಾ ತಾಲೂಕುಗಳಲ್ಲಿರುವ ಗ್ರಾಮಪಂಚಾಯಿತಿಗಳ ಅಧ್ಯಕ್ಷರಲ್ಲಿ ಪ್ರತಿ ವರ್ಷ ಐದನೇ ಒಂದು ಭಾಗದಷ್ಟು ಅಧ್ಯಕ್ಷರು ಆವರ್ತನ ನೀತಿಯ ಆಧಾರ ಮೇಲೆ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಹೀಗೆ ಜಿಲ್ಲೆಯಲ್ಲಿ ತಾಲೂಕುಪಂಚಾಯಿತಿಗಳ ಪ್ರಾತಿನಿಧ್ಯವಿದೆ.

ಗ್ರಾಮಪಂಚಾಯಿತಿ: ಬಳ್ಳಾರಿ ಜಿಲ್ಲೆಯಲ್ಲಿ ಮೇ 8, 2010ರಂದು ನಡೆದ ಗ್ರಾಮಪಂಚಾಯಿತಿಗಳ ಚುನಾವಣೆಯಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿಯನ್ನು ನೀಡಲಾಗಿದೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯಲ್ಲಿ 189 ಗ್ರಾಮಪಂಚಾಯಿತಿಗಳು ಕ್ರಮಬದ್ಧವಾಗಿ ರಚನೆಗೊಂಡಿವೆ. ತಾಲೂಕುವಾರು ನೋಡಿದಾಗ ಬಳ್ಳಾರಿ 40(ಶೇ.21), ಹಗರಿಬೊಮ್ಮನಹಳ್ಳಿ 22(ಶೇ.12), ಹಡಗಲಿ 24(ಶೇ.13), ಹೊಸಪೇಟೆ 23(ಶೇ.12), ಕೂಡ್ಲಿಗಿ 33(ಶೇ.17), ಸಂಡೂರು 21(ಶೇ.11), ಮತ್ತು ಶಿರುಗುಪ್ಪ 26(ಶೇ.14), ಗ್ರಾಮಪಂಚಾಯಿತಿಗಳು ರಚನೆಗೊಂಡಿವೆ. 2010ರಲ್ಲಿ ನಡೆದ ಚುನಾವಣೆಯಲ್ಲಿ ಜಿಲ್ಲೆಯ 189 ಗ್ರಾಮಪಂಚಾಯಿತಿಗಳಿಂದ ಒಟ್ಟು 3402 ಸದಸ್ಯರು ಆಯ್ಕೆಯಾಗಿದ್ದಾರೆ. ಇವರಲ್ಲಿ 2063(ಶೇ.60.65) ಪುರುಷ ಸದಸ್ಯರು ಮತ್ತು 1339(ಶೇ.39.35) ಮಹಿಳಾ ಸದಸ್ಯರು ಪ್ರಾತಿನಿಧ್ಯ ಪಡೆದಿದ್ದಾರೆ. ಮಹಿಳೆಯರ ಶೇ.33.33ರಷ್ಟು ಮೀಸಲಾತಿಗಿಂತ ಶೇ.6ರಷ್ಟು ಹೆಚ್ಚು ಪ್ರಾತಿನಿಧ್ಯ ಹೊಂದಿದ್ದಾರೆ. ಸದಸ್ಯರ ಜಾತಿವಾರು ಪ್ರಾತಿನಿಧ್ಯ ನೋಡಿದಾಗ, ಪರಿಶಿಷ್ಟ ಜಾತಿ 699(ಶೇ.20.55), ಪರಿಶಿಷ್ಟ ಪಂಗಡ 740(ಶೇ.21.75), ಹಿಂದುಳಿದ ವರ್ಗ 1117(ಶೇ.32.84) ಮತ್ತು ಸಾಮಾನ್ಯ ವರ್ಗ 846(ಶೇ.24.86)ರಷ್ಟು ಸದಸ್ಯರು ಪ್ರಾತಿನಿಧ್ಯ ಪಡೆದಿದ್ದಾರೆ(ನೋಡಿ ಕೋಷ್ಟಕ-3.6). ಜಿಲ್ಲೆಯ ಚುನಾಯಿತಿ ಪ್ರತಿನಿಧಿಗಳ ಲಿಂಗ ಮತ್ತು ಜಾತಿವಾರು ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಆಯಾ ಭಾಗಗಳಲ್ಲಿ ವಾಸಿಸುವ ಜನಸಂಖ್ಯೆಗೆ ಅನುಗುಣವಾಗಿ ಆಯ್ಕೆಯಾಗಿರುವುದು ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆ ನೈಸರ್ಗಿಕವಾಗಿ ಶ್ರೀಮಂತ ಜಿಲ್ಲೆಯಾಗಿದೆ. ಆದರೆ ಇಲ್ಲಿಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದಾಗ ಜಿಲ್ಲೆಯು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ರಾಜ್ಯದಲ್ಲಿ ಹಿಂದುಳಿದ ಜಿಲ್ಲೆಯಾಗಿದೆ. ಇಂತಹ ಜಿಲ್ಲೆಯ ಗ್ರಾಮೀಣ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಾತಿನಿಧ್ಯ ಮತ್ತು ಅವರ ಸಬಲೀಕರಣ ಕುರಿತು ಅಧ್ಯಯನ ಮಾಡಲು ಈ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

3.2 ಹೊಸಪೇಟೆ ತಾಲೂಕು

ಅಧ್ಯಯನ ಕ್ಷೇತ್ರದ ಜಿಲ್ಲೆಯ ನಂತರ ತಾಲೂಕಿನ ಪರಿಚಯವನ್ನು ಅಂಕಿ ಅಂಶಗಳೊಂದಿಗೆ ವಿವರಿಸಲಾಗಿದೆ. ಹೊಸಪೇಟೆ ಬಳ್ಳಾರಿ ಜಿಲ್ಲೆಯ ಉತ್ತರ ಭಾಗದಲ್ಲಿ ಬರುವ ತಾಲೂಕಾಗಿದೆ. ಜಿಲ್ಲೆಯ ಆಡಳಿತದ ಉಪವಿಭಾಗವೂ ಆಗಿದೆ. ಹೊಸಪೇಟೆ ತಾಲೂಕು ನೈಸರ್ಗಿಕ ಸಂಪತ್ತು, ಹೆಚ್ಚು ನೀರಾವರಿ ಸೌಲಭ್ಯ, ಫಲವತ್ತಾದ ಕೃಷಿಭೂಮಿ ಹೊಂದಿರುವ ಹಾಗೂ ಗಣಿಗಾರಿಕೆ, ಕಾರ್ಖಾನೆಗಳು, ವಾಣಿಜ್ಯ ಉದ್ದಿಮೆಗಳು, ಮಾರುಕಟ್ಟೆ, ಶಿಕ್ಷಣ, ವೈದ್ಯಕೀಯ, ಸಾರಿಗೆ–ಸಂಪರ್ಕ ಇತ್ಯಾದಿ ಸೌಲಭ್ಯಗಳನ್ನು ಅಧಿಕವಾಗಿ ಪಡೆದ ತಾಲೂಕಾಗಿದೆ. ಈ ಸೌಲಭ್ಯಗಳನ್ನು ಪಡೆದ ತಾಲೂಕುಗಳಿಗೆ ಹೋಲಿಸಿದರೆ ಹೊಸಪೇಟೆ ತಾಲೂಕು ಜಿಲ್ಲೆಯಲ್ಲಿ ಅಭಿವೃದ್ಧಿ ಹೊಂದಿದ ತಾಲೂಕು ಎಂದು ಗುರುತಿಸಬಹುದು. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಹೊಸಪೇಟೆ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಚಾರಿತ್ರಿಕ ಹಿನ್ನೆಲೆ: ಬಳ್ಳಾರಿ ಜಿಲ್ಲೆಯಲ್ಲೇ ಅಭಿವೃದ್ಧಿ ಹೊಂದುತ್ತಿರುವ ತಾಲೂಕಾದ ಹೊಸಪೇಟೆಗೆ ತನ್ನದೇ ಆದ ಇತಿಹಾಸವಿದೆ. ರಾಮಾಯಣ ಮತ್ತು ಮಹಾಭಾರತದ ಕಾವ್ಯಗಳಲ್ಲಿ ಹೊಸಪೇಟೆ ಪರಿಸರದ ಬಗ್ಗೆ ಉಲ್ಲೇಖವಿರುವುದು ಕಂಡುಬರುತ್ತದೆ. ಹಂಪಿ ಪರಿಸರದಲ್ಲಿ ಬರುವ ಕಿಷ್ಕಿಂದೆ, ಹೇಮಕೂಟ, ಮಾತಂಗ, ಮಾಲ್ಯವಂತ, ಋಷ್ಯಮೂಕ ಪರ್ವತಗಳ ಬಗ್ಗೆ ಈ ಕಾವ್ಯಗಳಲ್ಲಿ ಉಲ್ಲೇಖವಿದೆ. ಕಿಷ್ಕಿಂದೆಯನ್ನು ಹೊರತುಪಡಿಸಿ ಉಳಿದ ಈ ಪ್ರದೇಶಗಳು ಹೊಸಪೇಟೆ ತಾಲೂಕು ವ್ಯಾಪ್ತಿಗೆ ಒಳಪಟ್ಟಿವೆ. ರಾಮಾಯಣದಲ್ಲಿ ಬರುವ ವಾನರರು ಈ ಪರ್ವತಗಳಲ್ಲೇ ವಾಸವಾಗಿದ್ದರು ಎಂದು ಹೇಳಲಾಗುತ್ತಿದೆ. ಹನುಮನ ಜನ್ಮಸ್ಥಳ ಮೊದಲಾದವು ಇಲ್ಲೇ ಇವೆ.[16] ಹೊಸಪೇಟೆ ಪರಿಸರವು ಆದಿ ಹಳೆ ಶಿಲಾಯುಗದ ಕಾಲದಿಂದಲೂ ಮಾನವನ ಚಟುವಟಿಕೆಗಳಿಂದ ಕೂಡಿದ ಪ್ರದೇಶವಾಗಿದೆ ಎಂದು 1908ರ ಭಾರತದ ಇಂಪೀರಿಯಲ್ ಗೆಜೆಟರ್ ತಿಳಿಸುತ್ತದೆ.[17] ಹೊಸಪೇಟೆ ತಾಲೂಕಿನ ಗಾದಿಗನೂರಿನ ಕುರಿಕುಪ್ಪ ಬೆಟ್ಟ, ಬಸವನದುರ್ಗ(ಗುಡಿಓಬಳಾಪುರ) ಮತ್ತು ಕಾಲಘಟ್ಟ ವ್ಯಾಪ್ತಿಯಲ್ಲಿ ಬರುವ ಧರ್ಮದ ಗುಡ್ಡ, ಕಮಲಾಪುರ ದರೋಜಿ ಕರಡಿಧಾಮ ಮತ್ತು ಹಂಪಿ ಪರಿಸರದಲ್ಲಿ ಹಳೆ ಶಿಲಾಯುಗಕ್ಕೆ ಸಂಬಂಧಿಸಿದ ಶಿಲಾಯುಧಗಳು, ಅವಶೇಷಗಳು ಮತ್ತು ರೇಖಾಚಿತ್ರಗಳು ಕಂಡುಬರುತ್ತವೆ. ಇದರಿಂದ ಹೊಸಪೇಟೆ ಪ್ರದೇಶವು ಹಳೆ ಶಿಲಾಯುಗದ ಕಾಲದಿಂದಲೂ ಮಾನವನ ಅಸ್ತಿತ್ವವಿರುವುದು ಸುಸ್ಪಷ್ಟವಾಗುತ್ತದೆ. ಈ ತಾಲೂಕಿನಲ್ಲಿರುವ ಹಂಪೆ ಐತಿಹಾಸಿಕವಾಗಿ ವಿಶ್ವವಿಖ್ಯಾತಿ ಹೊಂದಿದೆ.

ಹೊಸಪೇಟೆ ತಾಲೂಕಿನ ಬಹುತೇಕ ಭಾಗವು ತುಂಗಭದ್ರಾ ನದಿಯ ಬಲದಂಡೆ ತೀರದಲ್ಲಿ ವಿಸ್ತರಿಸಿಕೊಂಡಿದ್ದು, ಕೃಷಿಯೋಗ್ಯವಾದ ಹಾಗೂ ಫಲವತ್ತಾದ ಪ್ರದೇಶವಾಗಿದೆ. ಆರ್ಥಿಕವಾಗಿ ಸಮೃದ್ಧಿ ಹೊಂದಿತ್ತೆಂದು ಹಾಗೂ ವಾಣಿಜ್ಯ–ವ್ಯಾಪಾರ ಮತ್ತು ಧಾರ್ಮಿಕ ಕೇಂದ್ರವಾಗಿತ್ತೆಂದು ಇತಿಹಾಸದಿಂದ ತಿಳಿದುಬರುತ್ತದೆ. ಇಂತಹ ಸಮೃದ್ಧಿ ಹೊಂದಿದ ಪ್ರದೇಶವು ಕದಂಬರ, ಪಲ್ಲವರ, ಪಾಂಡ್ಯರ, ಬಾದಮಿ ಚಾಲುಕ್ಯರ, ರಾಷ್ಟ್ರಕೂಟರ, ನೊಳಂಬರ, ಗಂಗರ, ಕಲ್ಯಾಣದ ಚಾಲುಕ್ಯರ, ಕಳಚೂರಿಗಳ ಮತ್ತು ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿದ್ದು ಕಂಡುಬರುತ್ತದೆ. ದಕ್ಷಿಣ ಭಾರತ ಮತ್ತು ಉತ್ತರ ಭಾರತದ ಆಳರಸರ ಆಡಳಿತಕ್ಕೆ ಒಳಪಟ್ಟ ಈ ಪ್ರದೇಶವು 14ನೇ ಶತಮಾನದಲ್ಲಿ ವಿಜಯನಗರ

ಅರಸರ ನೇರ ಆಡಳಿತಕ್ಕೆ ಒಳಪಟ್ಟಿತ್ತು. ವಿಜಯನಗರ ಸಾಮ್ರಾಜ್ಯ ಪತನವಾದ ಮೇಲೆ ಈ ಪ್ರದೇಶವನ್ನು ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತು. ಹರಪನಹಳ್ಳಿ ಪಾಳೇಗಾರ ಸೋಮಶೇಖರನಾಯಕನು ಹಲವಾರು ಗ್ರಾಮಗಳನ್ನು ಒಂದುಗೂಡಿಸಿ ಹೊಸಪೇಟೆ ನಗರವನ್ನು ಕಟ್ಟಿದನೆಂದು ಹೇಳಲಾಗುತ್ತದೆ. ಹೊಸಪೇಟೆಯು ಹರಪನಹಳ್ಳಿ ಪಾಳೇಗಾರರ ಉಪರಾಜಧಾನಿಯಾಗಿತ್ತು ಎಂದು ತಿಳಿದುಬರುತ್ತದೆ.[18] ನಂತರ ಈ ಪ್ರದೇಶವನ್ನು ಶಿವಾಜಿ, ಔರಂಗಜೇಬ, ಹೈದರಾಲಿ ಇವರ ಆಡಳಿತಕ್ಕೆ ಒಳಪಟ್ಟಿತು. ಕ್ರಿ.ಶ. 1799ರಲ್ಲಿ ನಡೆದ ನಾಲ್ಕನೇ ಮೈಸೂರು ಆಂಗ್ಲ ಯುದ್ಧದಲ್ಲಿ ಟಿಪ್ಪುಸುಲ್ತಾನ್ ಹತನಾದ ಮೇಲೆ ಈ ಪ್ರದೇಶವು ಬ್ರಿಟಿಷರ ಆಡಳಿತದ ಭಾಗವಾಗಿತ್ತು. 1857ರ ಸ್ವಾತಂತ್ರ್ಯ ಸಂಗ್ರಾಮದ ಫಲವಾಗಿ ಮತ್ತು ಕಮಲಾಪುರ ಮುಂಡರಗಿ ಭೀಮರಾಯರು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದಾಗ ಹೊಸಪೇಟೆಯ ಹಲವಾರು ಜನರು ಭಾಗವಹಿಸಿದ್ದರು ಮತ್ತು ಧನ ಸಹಾಯ ಮಾಡಿದ್ದರು. ಈ ಹೋರಾಟದಲ್ಲಿ ಬ್ರಿಟಿಷರು 150 ಜನರನ್ನು ಸೆರೆ ಹಿಡಿದರು ಹಾಗೂ 77 ಜನರನ್ನು ಗುಂಡಿಕ್ಕಿ ಕೊಂದರು. ಅವರಲ್ಲಿ 13 ಜನ ಬಳ್ಳಾರಿ ಹಾಗೂ 7 ಜನ ಹೊಸಪೇಟೆಯವರಾಗಿದ್ದರು. ಇದು ಸ್ವಾತಂತ್ರ್ಯ ಹೋರಾಟದಲ್ಲಿ ನೀಡಿದ ತಾಲೂಕಿನ ಪ್ರಥಮ ಕಾಣಿಕೆಯಾಗಿದೆ. ಇಷ್ಟಲ್ಲದೇ ಗಾಂಧೀಜಿಯವರ ಕರೆಯ ಮೇರೆಗೆ ಈ ಭಾಗದ ಪ್ರಗತಿಪರರು ಉಪ್ಪಿನ ಸತ್ಯಾಗ್ರಹ, ಮದ್ಯಪಾನ ನಿಷೇಧ ಚಳುವಳಿ, ಕರನಿರಾಕರಣೆ ಚಳುವಳಿ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿದ್ದಾರೆ ಹಾಗೂ ಶಿಕ್ಷೆಯನ್ನು ಅನುಭವಿಸಿದ್ದಾರೆ. 1932ರಲ್ಲಿ ಟಿ.ಬಿ.ಲಕ್ಷ್ಮಿಬಾಯಿ ಎಂಬ ಹೊಸಪೇಟೆಯ ಮಹಿಳೆ ಬ್ರಿಟಿಷ್ ಸರ್ಕಾರವನ್ನು ಖಂಡಿಸುವ ಅನಧಿಕೃತ ಸಾಹಿತ್ಯವನ್ನು ಹಂಚುವ ಚಳುವಳಿಯಲ್ಲಿ ಭಾಗವಹಿಸಿ, ಬಂಧನಕ್ಕೊಳಗಾಗಿದ್ದು ಕಂಡುಬರುತ್ತದೆ. ಭಾರತ ಸ್ವಾತಂತ್ರ್ಯ ಪಡೆದ ನಂತರ ಹೈದ್ರಾಬಾದ್ ನಿಜಾಮನು ಭಾರತದ ಒಕ್ಕೂಟ ಸೇರಲು ಹಿಂಜರಿದಾಗ, 1948 ಸೆಪ್ಟಂಬರ್ 13ರಿಂದ 17ರವರೆಗೆ ನಡೆದ ರಕ್ಷಣಾಕಾರ್ಯಾಚರಣೆಯಲ್ಲಿ ಹೊಸಪೇಟೆಯು ಮಹತ್ವಪೂರ್ಣ ಪಾತ್ರ ವಹಿಸಿತು.[19]

ಭೌಗೋಳಿಕ ಹಿನ್ನೆಲೆ: ಹೊಸಪೇಟೆ ತಾಲೂಕು ಬಳ್ಳಾರಿ ಜಿಲ್ಲೆಯ ಉತ್ತರ ಭಾಗದಲ್ಲಿದೆ. ಬಳ್ಳಾರಿ ಜಿಲ್ಲೆಯ(8,450 ಚ.ಕಿ.ಮೀ.) ಭೂವಿಸ್ತೀರ್ಣದಲ್ಲಿ ಹೊಸಪೇಟೆ ತಾಲೂಕಿನ ಪಾಲು ಶೇ.10.70ರಷ್ಟು(904 ಚ.ಕಿ.ಮೀ.)ಇದೆ. ಇದು ಜಿಲ್ಲೆಯಲ್ಲೇ ಸಣ್ಣ ತಾಲೂಕಾಗಿದೆ. ಹೊಸಪೇಟೆ ತಾಲೂಕು ಬೆಟ್ಟ-ಪರ್ವತ, ನದಿ-ಕಾಲುವೆ, ಕೆರೆ-ಬಾವಿಗಳಿಂದ ಕೂಡಿದ ಮತ್ತು ಸಮತಟ್ಟಾದ ಬಯಲು ಪ್ರದೇಶದಿಂದ ಕೂಡಿದೆ. ಹೊಸಪೇಟೆ ತಾಲೂಕು ತುಂಗಭದ್ರಾ ನದಿಯ ಬಲದಂಡೆಯ ಮೇಲ್ಭಾಗದಲ್ಲಿ ನೈರುತ್ಯ ಭಾಗದಿಂದ ಈಶಾನ್ಯ ಭಾಗಕ್ಕೆ ಚಾಚಿಕೊಂಡಿದೆ. ತುಂಗಭದ್ರಾ ಅಣೆಕಟ್ಟಿನ ಬಲಭಾಗದಲ್ಲಿರುವ ಬೆಟ್ಟ-ಪರ್ವತಗಳು ತಾಲೂಕನ್ನು ಈಶಾನ್ಯ ಭಾಗ ಮತ್ತು ನೈರುತ್ಯ ಭಾಗಗಳನ್ನಾಗಿ ವಿಭಾಗಿಸಿದೆ. ತಾಲೂಕಿನ ಈಶಾನ್ಯ ಭಾಗದ ಪೂರ್ವದಲ್ಲಿ ಬಳ್ಳಾರಿ, ಪಶ್ಚಿಮದಲ್ಲಿ ಹಗರಿಬೊಮ್ಮನಹಳ್ಳಿ, ಉತ್ತರಕ್ಕೆ ಗಂಗಾವತಿ, ದಕ್ಷಿಣಕ್ಕೆ ಸಂಡೂರು ತಾಲೂಕುಗಳಿದ್ದರೆ, ಈಶಾನ್ಯಕ್ಕೆ ಶಿರುಗುಪ್ಪ ತಾಲೂಕು, ವಾಯವ್ಯಕ್ಕೆ ತುಂಗಭದ್ರ ನದಿ ಮತ್ತು ಕೊಪ್ಪಳ ಜಿಲ್ಲೆಯ ಮುನಿರಾಬಾದ್(ಹುಲಿಗಿ) ಬರುತ್ತವೆ. ತಾಲೂಕಿನ ನೈರುತ್ಯ ಭಾಗದ ಪೂರ್ವದಲ್ಲಿ ಸಂಡೂರು, ಪಶ್ಚಿಮಕ್ಕೆ ಹಗರಿಬೊಮ್ಮನಹಳ್ಳಿ, ದಕ್ಷಿಣಕ್ಕೆ ಕೂಡ್ಲಿಗಿ ತಾಲೂಕುಗಳು ಇವೆ.

ತಾಲೂಕಿನ ಒಟ್ಟು 93,374 ಹೆಕ್ಟೇರ್ ಪ್ರದೇಶದಲ್ಲಿ 24,970 ಹೆಕ್ಟೇರ್(15.9%)ನಷ್ಟು ಪ್ರದೇಶವು ಅರಣ್ಯ ಪ್ರದೇಶವಾಗಿದೆ. ಬಿಸಿಲು ಜಿಲ್ಲೆಯ ತಾಲೂಕಾಗಿದ್ದರಿಂದ ಮಳೆ ಬೀಳುವ ಪ್ರಮಾಣವು ಕಡಿಮೆ ಇದೆ. ವಾಡಿಕೆಯಂತೆ ತಾಲೂಕಿನಲ್ಲಿ ವಾರ್ಷಿಕವಾಗಿ ಬಿದ್ದ ಮಳೆಯ ಪ್ರಮಾಣವು 604.1 ಮಿಲಿ ಮೀಟರ್‌ರಷ್ಟಿದೆ. ಜಿಲ್ಲೆಗೆ ಹೋಲಿಸಿದಾಗ ಬಿದ್ದ ಮಳೆಯ ಪ್ರಮಾಣ ಕಡಿಮೆ ಇದೆ. ಆದರೆ ತಾಲೂಕಿನಲ್ಲಿ ಇತ್ತೀಚಿನ ಹತ್ತು ವರ್ಷಗಳಲ್ಲಿ ಬಿದ್ದ ಮಳೆಯ ಪ್ರಮಾಣ 686.42 ಮಿಲಿ ಮೀಟರ್‌ನಷ್ಟಿದೆ(ನೋಡಿ ಕೋಷ್ಟಕ-3.1). ತುಂಗಭದ್ರಾ ನದಿ ಹೊಸಪೇಟೆ ತಾಲೂಕಿಗೆ ಪ್ರಮುಖ ನೀರಾವರಿ ಮೂಲವಾಗಿದೆ. ತುಂಗಭದ್ರ ಅಣೆಕಟ್ಟಿನಿಂದ ತಾಲೂಕಿಗೆ ಸಂಪೂರ್ಣವಾಗಿ ನೀರಾವರಿ ಸೌಲಭ್ಯ ದೊರೆತಿಲ್ಲ. ತಾಲೂಕಿನ ಉತ್ತರ ವಾಯವ್ಯ ಭಾಗದಿಂದ ಉತ್ತರ ಈಶಾನ್ಯ ಭಾಗದ ಪ್ರದೇಶಕ್ಕೆ ಮಾತ್ರ ನೀರಾವರಿ ಭಾಗ್ಯ ಲಭಿಸಿದೆ. ಅಂದರೆ ತುಂಗಭದ್ರಾ ನದಿಯ ಬಲದಂಡೆ ಮೇಲ್ಭಾಗದಲ್ಲಿ ಬರುವ ತಾಲೂಕಿನ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯ ದೊರೆತಿದೆ. ತಾಲೂಕಿನಲ್ಲಿ ಒಟ್ಟು ಬಿತ್ತನೆಯಾಗುವ ಪ್ರದೇಶಕ್ಕೆ ಹೋಲಿಸಿದಾಗ 18,300 ಹೆಕ್ಟೇರ್‌ಗೆ(ಶೇ.19.59ರಷ್ಟು) ಮಾತ್ರ ತುಂಗಭದ್ರಾ ಜಲಾಶಯದಿಂದ ನೀರಾವರಿ ಸೌಲಭ್ಯ ದೊರೆತಿದೆ. ಈ ಭಾಗವು ವರ್ಷದ 10ರಿಂದ 11 ತಿಂಗಳ ಕಾಲ ನೀರಾವರಿ ಸೌಲಭ್ಯ ಪಡೆದ ಸಮೃದ್ಧಿಯಾದ ಪ್ರದೇಶವಾಗಿದೆ. ಆದರೆ ತಾಲೂಕಿನ ಬಹುತೇಕ ಭಾಗವು ನೀರಾವರಿ ಸೌಲಭ್ಯದಿಂದ ವಂಚಿತವಾಗಿದೆ. ಈ ಭಾಗವು ಇಂದಿಗೂ ಕೃಷಿಗೆ ಮಳೆ, ಕೆರೆ, ಬಾವಿ, ಕೊಳವೆಬಾವಿಗಳನ್ನು ಅವಲಂಬಿಸಿದೆ. ಜಿಲ್ಲೆಯಲ್ಲಿ ತುಂಗಭದ್ರ ಜಲಾಶಯದಿಂದ ನೀರಾವರಿ ಸೌಲಭ್ಯ ಪಡೆದ ಇತರ ತಾಲೂಕುಗಳಿಗೆ ಹೋಲಿಸಿದಾಗ ಹೊಸಪೇಟೆ ನೀರಾವರಿ ಸೌಲಭ್ಯ ಪಡೆದ 25,855 ಹೆಕ್ಟೇರ್ ಪ್ರದೇಶದಲ್ಲಿ ಶೇ.70.77ರಷ್ಟು ಪ್ರದೇಶವು ತುಂಗಭದ್ರ ಆಣೆಕಟ್ಟಿನಿಂದ ನೀರಾವರಿ ಸೌಲಭ್ಯ ಹೊಂದಿದೆ.[20] ತಾಲೂಕಿನ ಬಹುತೇಕ ಭಾಗವು ಕೆಂಪು ಮಿಶ್ರಿತ ಕಪ್ಪುಮಣ್ಣಿನಿಂದ ಕೂಡಿದ ಫಲವತ್ತತೆಗೆ ಹೆಸರಾದ ಭೂಪ್ರದೇಶವಾಗಿದೆ. ಕೃಷಿ ಇಲ್ಲಿನ ಬಹುತೇಕ ಜನರ ಮುಖ್ಯ ಕಸುಬಾಗಿದೆ. ತುಂಗಭದ್ರಾ ಜಲಾಶಯದಿಂದ ನೀರಾವರಿ ಸೌಲಭ್ಯ ಪಡೆದ ಪ್ರದೇಶದಲ್ಲಿ ಕಬ್ಬು, ಭತ್ತ, ಬಾಳೆ ಮುಖ್ಯ ಬೆಳೆಗಳಾಗಿವೆ. ಇತರ ಪ್ರದೇಶದಲ್ಲಿ ಜೋಳ, ಮುಸುಕಿನ ಜೋಳ, ನವಣೆ, ಸಜ್ಜೆ, ಎಳ್ಳು, ಗುರೆಳ್ಳು, ಸೂರ್ಯಕಾಂತಿ, ಅಲಸಂದಿ, ತೊಗರಿ, ಹುರಳಿ, ಈರುಳ್ಳಿ, ಟೊಮೋಟೋ, ಮೆಣಸಿನಕಾಯಿ ಇತ್ಯಾದಿ ಆಹಾರ ಬೆಳೆಗಳು ಮತ್ತು ಮಲ್ಲಿಗೆ ಹಾಗೂ ಇತರೆ ಹೂ ಪ್ರಮುಖ ಬೆಳೆಗಳಾಗಿವೆ.[21]

ಹೊಸಪೇಟೆ ಉಷ್ಣವಲಯ ಪ್ರದೇಶವಾಗಿದೆ. ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಸೌಲಭ್ಯದಿಂದ ಕಣ್ಮನ ತಣಿಸುವ ಸಂಮೃದ್ಧಿ ಬೆಳೆಗಳು ಹಾಗೂ ಗಿಡಮರಗಳು ಬಿಸಿಲಿನ ತಾಪವನ್ನು ತಣಿಸುವಲ್ಲಿ ಸಾಧ್ಯವಾಗಿಲ್ಲ. ತಾಲೂಕಿನ ಶೇ.89.41ರಷ್ಟು ಪ್ರದೇಶವು ಮಳೆ ಆಶ್ರಯ ಪ್ರದೇಶವಾಗಿದೆ. ಸಾಲದಕ್ಕೆ ಕಲ್ಲುಬಂಡೆಗಳಿಂದ ಕೂಡಿದ ಬೃಹತ್ ಬೆಟ್ಟಗುಡ್ಡಗಳು ತಾಲೂಕನ್ನು ಸುತ್ತುವರೆದಿದ್ದರಿಂದ ಸಹಜವಾಗಿ ಬಿಸಿಲ ತಾಪ ಉಲ್ಬಣವಾಗುತ್ತದೆ. ತಾಲೂಕಿನ ಸುತ್ತಮುತ್ತಲ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಕಬ್ಬಿಣ ಹಾಗೂ ವಿವಿಧ ಕಾರ್ಖಾನೆಗಳು, ಶಾಖೋತ್ಪನ್ನ ಘಟಕಗಳು ಮತ್ತಷ್ಟು ಬಿಸಿಲು ಉಲ್ಬಣಗೊಳ್ಳುವಂತೆ ಮಾಡಿವೆ. ಇದರಿಂದಾಗಿ ತಾಲೂಕಿನ ವಾತಾವರಣವು ಕಲುಷಿತಗೊಂಡಿದೆ.

ಜನಜೀವನ, ಕೃಷಿ, ಪ್ರಾಣಿ ಪಕ್ಷಿಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇಲ್ಲಿ ಎಲ್ಲವೂ ಅಪಾಯದ ಅಂಚಿನಲ್ಲಿವೆ. ತಾಲ್ಲೂಕಿನ ಜನತೆಯಲ್ಲಿ ಪರಿಸರದ ಬಗ್ಗೆ ಕಾಳಜಿ ಇಲ್ಲದಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ.

ಸಾಮಾಜಿಕ ಹಿನ್ನೆಲೆ: 2011ರ ಜನಗಣತಿ ಪ್ರಕಾರ, ಹೊಸಪೇಟೆ ತಾಲ್ಲೂಕು 3,93,499 ಜನಸಂಖ್ಯೆಯನ್ನು ಹೊಂದಿದ್ದು, ಇದರಲ್ಲಿ ಶೇ.50.08(1,97,029)ರಷ್ಟು ಪುರುಷರು ಹಾಗೂ ಶೇ.49.92(1,96,470)ರಷ್ಟು ಮಹಿಳೆಯರು ಇದ್ದಾರೆ. ಜಿಲ್ಲೆಯ ಜನಸಂಖ್ಯೆಯಲ್ಲಿ ತಾಲ್ಲೂಕಿನ ಪಾಲು ಶೇ.15.53ರಷ್ಟಿದೆ. ಜಿಲ್ಲೆಯ ಮಹಿಳೆಯರಲ್ಲಿ ತಾಲ್ಲೂಕಿನ ಮಹಿಳೆಯರ ಪಾಲು ಶೇ.15.70ರಷ್ಟಿದೆ. ಜಿಲ್ಲೆಯ ಜನಸಂಖ್ಯೆಯಲ್ಲಿ ತಾಲ್ಲೂಕಿನ ಮಹಿಳೆಯರ ಪಾಲು ಶೇ.7.75ರಷ್ಟಿದೆ. ಹೊಸಪೇಟೆ ತಾಲ್ಲೂಕಿನಲ್ಲಿ ಪ್ರತಿ 1,000 ಪುರುಷರಿಗೆ 977ರಷ್ಟು ಮಹಿಳೆಯರು ಇದ್ದು, ಲಿಂಗಾನುಪಾತವು ಜಿಲ್ಲೆಗೆ ಹೋಲಿಸಿದರೆ ಶೇ.19ರಷ್ಟು ಹೆಚ್ಚಿದೆ. ತಾಲ್ಲೂಕಿನ ಜನಸಂಖ್ಯೆ ಬೆಳವಣಿಗೆ ದರ ಶೇ.19.83 ರಷ್ಟಿದೆ(ನೋಡಿ. ಕೋಷ್ಟಕ–3.2). ಕಳೆದ ದಶಕಕ್ಕೆ ಹೋಲಿಸಿದರೆ ಶೇ.1.35ರಷ್ಟು ಏರಿಕೆಯಾಗಿದೆ. ಜಿಲ್ಲೆಯ ಜನಸಂಖ್ಯೆ ಬೆಳವಣಿಗೆ ದರದಲ್ಲಿ 5ನೇ ಸ್ಥಾನ ಹಾಗೂ ಒಟ್ಟು ಜನಸಂಖ್ಯೆಯಲ್ಲಿ 2ನೇ ಸ್ಥಾನದಲ್ಲಿದೆ. ಇದಕ್ಕೆ ತಾಲ್ಲೂಕಿನಲ್ಲಿರುವ ನೀರಾವರಿ ಸೌಲಭ್ಯ ಹಾಗೂ ಗಣಿ ಚಟುವಟಿಕೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ಸೌಲಭ್ಯಗಳ ಲಭ್ಯತೆ ಕಾರಣವಾಗಿರಬಹುದು.

ಸಾಮಾಜಿಕವಾಗಿ ಹೊಸಪೇಟೆ ತಾಲ್ಲೂಕು ವಿವಿಧ ಜಾತಿ, ಧರ್ಮ ಹಾಗೂ ವರ್ಗಗಳಿಂದ ಕೂಡಿದೆ. ತಾಲ್ಲೂಕಿನಲ್ಲಿ ಮುಖ್ಯವಾಗಿ ಹರಿಜನರು, ಕುರುಬರು, ಲಿಂಗಾಯಿತರು, ಮುಸ್ಲಿಮರು ಮತ್ತು ಬೇಡ(ವಾಲ್ಮೀಕಿ)ನಾಯಕರು ದೊಡ್ಡ ಸಮುದಾಯಗಳಾಗಿವೆ. ಅಗಸ, ಬ್ರಾಹ್ಮಣ, ಗೌಳಿ, ಅಂಬಿಗ(ಕಬ್ಬೇರ), ಲಂಬಾಣಿ, ಮಾರವಾಡಿ, ಮೇದಾರ, ನೇಕಾರ, ಬೋವಿ ಸಮತಾ(ಕ್ಷೌರಿಕ), ಶೆಟ್ಟಿ(ವೈಶ್ಯ) ಇತ್ಯಾದಿ ಪ್ರಮುಖ ಸಮುದಾಯಗಳಾಗಿವೆ. ಆದರೆ ಇವು ಬಲಿಷ್ಠ ಸಮುದಾಯಗಳಾಗಿ ಕಂಡುಬರುವುದಿಲ್ಲ. ತಾಲ್ಲೂಕಿನ ಜನಸಂಖ್ಯೆಯಲ್ಲಿ ಶೇ.47.61(1,87,355)ರಷ್ಟು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಇವರಲ್ಲಿ ಶೇ.50.23(94,112)ರಷ್ಟು ಮಹಿಳೆಯರಾಗಿದ್ದಾರೆ. 2011ರ ಜನಗಣತಿ ಪ್ರಕಾರ, ತಾಲ್ಲೂಕಿನ ಸಾಕ್ಷರತೆ ಪ್ರಮಾಣವು ಶೇ.75.01(2,40,312)ರಷ್ಟಿದ್ದು, ಇವರಲ್ಲಿ ಪುರುಷ ಸಾಕ್ಷರತೆ ಪ್ರಮಾಣ ಶೇ.82.20(1,15,332)ರಷ್ಟು ಹಾಗೂ ಮಹಿಳಾ ಸಾಕ್ಷರತೆ ಪ್ರಮಾಣ ಶೇ.67.80(1,06,329)ರಷ್ಟಿದೆ. ಈ ಪ್ರಮಾಣವನ್ನು ಜಿಲ್ಲೆಯ ಸಾಕ್ಷರತೆ ಪ್ರಮಾಣಕ್ಕೆ ಹೋಲಿಸಿದರೆ ಸಾಕ್ಷರತೆಯಲ್ಲಿ ಶೇ.7.16ರಷ್ಟು, ಪುರುಷರ ಸಾಕ್ಷರತೆಯಲ್ಲಿ ಶೇ.4.96ರಷ್ಟು ಹಾಗೂ ಮಹಿಳಾ ಸಾಕ್ಷರತೆಯಲ್ಲಿ ಶೇ.9.52ರಷ್ಟು ಹೆಚ್ಚು ಇದೆ. ಹೊಸಪೇಟೆ ತಾಲ್ಲೂಕು ಜಿಲ್ಲೆಯ ಸಾಕ್ಷರತೆ ಬೆಳವಣಿಗೆಯಲ್ಲಿ ಮೊದಲನೆಯ ಸ್ಥಾನದಲ್ಲಿದೆ. ಹೀಗಾಗಿ ಜಿಲ್ಲೆಯಲ್ಲಿ ಸಾಕ್ಷರತೆ ಬೆಳವಣಿಗೆಯಲ್ಲಿ ಹೊಸಪೇಟೆ ಅಭಿವೃದ್ಧಿ ಹೊಂದಿದ ತಾಲ್ಲೂಕಾಗಿದೆ.

ಆರ್ಥಿಕ ಹಿನ್ನೆಲೆ: ಹೊಸಪೇಟೆ ತಾಲ್ಲೂಕನ್ನು ಭೌಗೋಳಿಕವಾಗಿ ನೈರುತ್ಯ ಮತ್ತು ಈಶಾನ್ಯ ಭಾಗಗಳೆಂದು ವಿಭಾಗಿಸಲಾಗಿದೆ. ನೈರುತ್ಯ ಭಾಗದಲ್ಲಿ ಮರಿಯಮ್ಮನಹಳ್ಳಿ ಹೋಬಳಿ ಬಂದರೆ, ಈಶಾನ್ಯ ಭಾಗದಲ್ಲಿ ಹೊಸಪೇಟೆ ಸೇರಿದಂತೆ ಕಮಲಾಪುರ ಮತ್ತು ಕಂಪ್ಲಿ ಹೋಬಳಿಗಳು ಬರುತ್ತವೆ.

ತಾಲೂಕಿನ ಉತ್ತರ ವಾಯವ್ಯದಿಂದ ಪೂರ್ವ ಈಶಾನ್ಯಕ್ಕೆ ಅಭಿಮುಖವಾಗಿ ತುಂಗಭದ್ರಾ ನದಿ ಹರಿಯುತ್ತಿದೆ. ತಾಲೂಕಿನ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಕಬ್ಬಿಣ ಅದಿರು ಒಡಲಲ್ಲಿ ತುಂಬಿಕೊಂಡ ಬೆಟ್ಟ-ಗುಡ್ಡಗಳಿವೆ. ಹಂಪಿ ಪರಸರದಲ್ಲಿ ಕಲ್ಲು ಬಂಡೆಗಳ ಬೆಟ್ಟ ಗುಡ್ಡಗಳಿವೆ. ತುಂಗಭದ್ರಾ ನದಿಯ ಬಲದಂಡೆ ಮೇಲೆ ಬರುವ ಹೊಸಪೇಟೆ, ಕಮಲಾಪುರ ಮತ್ತು ಕಂಪ್ಲಿ ಹೋಬಳಿಗಳ ಬಹುತೇಕ ಗ್ರಾಮಗಳು ತುಂಗಭದ್ರಾ ಜಲಾಶಯದಿಂದ ನೀರಾವರಿ ಸೌಲಭ್ಯ ಪಡೆದಿವೆ. ಈ ಹೋಬಳಿಗಳ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಬರುವ ಗ್ರಾಮಗಳು ನೀರಾವರಿ ಸೌಲಭ್ಯದಿಂದ ವಂಚಿತವಾಗಿವೆ. ಆದರೆ ಈ ಗ್ರಾಮಗಳು ಮುಖ್ಯವಾಗಿ ಗಣಿಗಾರಿಕೆಯ ಚಟುವಟಿಕೆಗಳ ಮೇಲೆ ಅವಲಂಬಿತವಾಗಿವೆ. ತಾಲೂಕಿನ ನೈರುತ್ಯ ಭಾಗದಲ್ಲಿ ಬರುವ ಮರಿಯಮ್ಮನಹಳ್ಳಿ ಹೋಬಳಿಯ ಎಲ್ಲಾ ಗ್ರಾಮಗಳು ಕೃಷಿಪ್ರಧಾನವಾದ ಗ್ರಾಮಗಳಾಗಿವೆ. ತುಂಗಭದ್ರ ಜಲಾಶಯದ ಹಿಂಭಾಗದಲ್ಲಿ ಬರುವ ಈ ಗ್ರಾಮಗಳು ತುಂಗಭದ್ರಾ ಅಣೆಕಟ್ಟಿನಿಂದ ಸಿಗುವ ನೀರಾವರಿ ಸೌಲಭ್ಯದಿಂದ ವಂಚಿತವಾಗಿವೆ. ಈ ಗ್ರಾಮಗಳ ಜನರು ಮಳೆ ಆಶ್ರಿತ ಹಾಗೂ ಪಂಪ್‌ಸೆಟ್ ಆಧಾರಿತ ಕೃಷಿಯನ್ನು ಅವಲಂಬಿಸಿದ್ದಾರೆ.

ಒಂದು ಪ್ರದೇಶದ ಅಭಿವೃದ್ಧಿಯು ಅಲ್ಲಿಯ ಜನರು ಅವಲಂಬಿಸಿರುವ ದುಡಿಮೆಯ ಮೇಲೆ ನಿರ್ಧರಿತವಾಗುತ್ತದೆ. ಆಯಾ ಪ್ರದೇಶದ ಜನರ ಶ್ರಮಶಕ್ತಿ ಮತ್ತು ದುಡಿಯುವ ವರ್ಗಗಳ ವಲಯವಾರು ವಿವರ ನೋಡಿದಾಗ ಅದು ಅಭಿವೃದ್ಧಿ ಹೊಂದಿದೆಯೋ ಅಥವಾ ಇಲ್ಲವೋ ಎಂಬುವುದು ಸ್ಪಷ್ಟವಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಮಾನವ ಶ್ರಮಶಕ್ತಿ ಅಥವಾ ದುಡಿಯುವ ವರ್ಗಗಳ ವಲಯವಾರು ಅಂಕಿ ಅಂಶಗಳನ್ನು ನೋಡಿದಾಗ ಜಿಲ್ಲೆ ಕೃಷಿಪ್ರಧಾನವಾದುದು ಎಂದು ತಿಳಿಯುತ್ತದೆ. ಹಾಗೆಯೇ ಜಿಲ್ಲೆಯಲ್ಲಿ ತಾಲೂಕುವಾರು ಶ್ರಮಶಕ್ತಿ ಮತ್ತು ದುಡಿಯುವ ವರ್ಗಗಳ ವಲಯವಾರು ವಿವರಣೆ ನೋಡಿದಾಗ ಹೊಸಪೇಟೆ ತಾಲೂಕು ಅಭಿವೃದ್ಧಿ ಹೊಂದಿದ ತಾಲೂಕು ಎಂಬುದು ಸ್ಪಷ್ಟವಾಗುತ್ತದೆ. ಹೊಸಪೇಟೆ ಕೃಷಿಪ್ರಧಾನವಾದ ತಾಲೂಕಾಗಿದ್ದರೂ, ನೀರಾವರಿ ಸೌಲಭ್ಯ ಹೊಂದಿರುವ ಹೆಚ್ಚು ಆದಾಯ ತರುವ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಪ್ರದೇಶವಾಗಿದೆ.

2001ರ ಗಣತಿ ಪ್ರಕಾರ, ತಾಲೂಕಿನಲ್ಲಿ 1,59,129(ಶೇ.42.44) ಜನರು ದುಡಿಯುವ ವರ್ಗದವರಾಗಿದ್ದು, ಇವರಲ್ಲಿ ಶೇ.34.87(55,493)ರಷ್ಟು ಮಹಿಳೆರಾಗಿದ್ದಾರೆ. ಇವರಲ್ಲಿ ಪ್ರಾಥಮಿಕ ವಲಯ ಅವಲಂಬಿಸಿದವರ ಸಂಖ್ಯೆ 84,055(ಶೇ.52.82)ರಷ್ಟಿದ್ದು, ಇದರಲ್ಲಿ ಮಹಿಳೆಯರ ಸಂಖ್ಯೆ 39,038(ಶೇ.46.44)ರಷ್ಟಿದೆ. ಜಿಲ್ಲೆಗೆ ಹೋಲಿಸಿದಾಗ ಹೊಸಪೇಟೆ ತಾಲೂಕಿನಲ್ಲಿ ಪ್ರಾಥಮಿಕ ವಲಯವನ್ನು ಅವಲಂಬಿಸಿದವರ ಪ್ರಮಾಣ ಶೇ.13.72ರಷ್ಟು ಮತ್ತು ಮಹಿಳೆಯರ ಪ್ರಮಾಣ ಶೇ.1.03ರಷ್ಟು ಕಡಿಮೆ ಇದೆ. ತಾಲೂಕಿನಲ್ಲಿ ದ್ವಿತೀಯ ವಲಯವನ್ನು ಅವಲಂಬಿಸಿದವರ ಸಂಖ್ಯೆ 4,576(ಶೇ.2.87)ರಷ್ಟಿದ್ದು, ಇದರಲ್ಲಿ ಮಹಿಳಾ ಪ್ರಮಾಣ 2,349(ಶೇ.51.34)ರಷ್ಟಿದೆ. ಈ ಪ್ರಮಾಣವನ್ನು ಜಿಲ್ಲೆಗೆ ಹೋಲಿಸಿದಾಗ ತಾಲೂಕಿನಲ್ಲಿ ದ್ವಿತೀಯ ವಲಯವನ್ನು ಅವಲಂಬಿಸಿದವರ ಪ್ರಮಾಣ ಶೇ.0.08ರಷ್ಟು ಮತ್ತು ಮಹಿಳಾ ಪ್ರಮಾಣದಲ್ಲಿ ಶೇ.0.74ರಷ್ಟು ಹೆಚ್ಚು ಇದೆ. ತಾಲೂಕಿನಲ್ಲಿ ಸೇವಾ ವಲಯದವರ ಸಂಖ್ಯೆ 70,494(ಶೇ.44.30)ರಷ್ಟಿದ್ದು, ಇವರಲ್ಲಿ ಮಹಿಳಾ ವರ್ಗದ ಸಂಖ್ಯೆ 14,106(ಶೇ.20.01)ರಷ್ಟಿದೆ.

ಸೇವಾ ವಲಯದಲ್ಲಿ ಹೊಸಪೇಟೆ ತಾಲೂಕು ಜಿಲ್ಲೆಯಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಆದರೆ ಸೇವಾ ವಲಯವನ್ನು ಅವಲಂಬಿಸಿದ ಮಹಿಳೆಯರ ಪ್ರಮಾಣ ಜಿಲ್ಲೆಗೆ ಹೋಲಿಸಿದಾಗ ಶೇ.0.49 ರಷ್ಟು ಹೆಚ್ಚಿದ್ದು, ಜಿಲ್ಲೆಯಲ್ಲಿ ಮೂರನೇ ಸ್ಥಾನದಲ್ಲಿದೆ(ನೋಡಿ ಕೋಷ್ಟಕ–3.3).

ತಾಲೂಕಿನಲ್ಲಿ ಉತ್ತಮ ಗುಣಮಟ್ಟದ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜ ಅದಿರು ನಿಕ್ಷೇಪಗಳಿದ್ದು, ಗಣಿಗಾರಿಕೆಯಲ್ಲಿ ಮುಂಚೂಣಿಯಲ್ಲಿದೆ. 2010ರ ಅಂಕಿ ಅಂಶಗಳ ಪ್ರಕಾರ, ತಾಲೂಕಿನಲ್ಲಿ 35 ವಾಣಿಜ್ಯ ಬ್ಯಾಂಕ್‌ಗಳು, 172 ಕ್ರೆಡಿಟ್ ಸಹಕಾರ ಸಂಘಗಳು, 275 ಸಣ್ಣ ಹಾಗೂ 20 ದೊಡ್ಡ ಪ್ರಮಾಣದ ಕಾರ್ಖಾನೆಗಳು, 650 ಸ್ವಸಹಾಯಕ ಸಂಘಗಳು ಮತ್ತು ಒಂದು ಕೃಷಿ ಉತ್ಪನ್ನ ಮಾರುಕಟ್ಟೆ ಇವೆ.[22] ತಾಲೂಕಿನಲ್ಲಿ ಗಣಿಗಾರಿಕೆ ಮತ್ತು ವಾಣಿಜ್ಯ ಬೆಳೆಗಳ ಚಟುವಟಿಕೆ ಅಧಿಕವಾಗಿರುವುದರಿಂದ ಬ್ಯಾಂಕ್ ಮತ್ತು ಮಾರುಕಟ್ಟೆ ವ್ಯವಹಾರಗಳು ನಿರೀಕ್ಷಿತ ಮಟ್ಟದಲ್ಲಿ ಹೆಚ್ಚಿದೆ.

ರಾಜಕೀಯ ಹಿನ್ನೆಲೆ: ಜಿಲ್ಲೆಯ ಆಡಳಿತ ಉಪವಿಭಾಗವಾದ ಹೊಸಪೇಟೆ ತಾಲೂಕು ಮೂರು ಹೋಬಳಿಗಳು ಸೇರಿದಂತೆ ಒಟ್ಟು 74 ಗ್ರಾಮಗಳನ್ನು ಹೊಂದಿದೆ.[23] ತಾಲೂಕಿನಲ್ಲಿ ಲಿಂಗಾಯಿತ, ನಾಯಕ, ಹರಿಜನ, ಮುಸ್ಲಿಂ ಮತ್ತು ಕುರುಬ ಪ್ರಮುಖ ಬಲಿಷ್ಠ ಸಮುದಾಯಗಳಾಗಿವೆ. ರಾಜ್ಯದಲ್ಲಿ ಬಿ.ಜೆ.ಪಿ ಪಕ್ಷ ಅಧಿಕಾರಕ್ಕೆ ಬರುವ ಮೊದಲು ಈ ಸಮುದಾಯಗಳು ಕಾಂಗ್ರೆಸ್ ಹಾಗೂ ಜೆ.ಡಿ.ಎಸ್ ಪಕ್ಷಗಳೊಂದಿಗೆ ಗುರುತಿಸಿಕೊಂಡಿದ್ದವು. ಕಳೆದ ಚುನಾವಣೆಯಲ್ಲಿ ಗಣಿ ಹಣದ ದೂಳಿನಲ್ಲಿ ಮುಸ್ಲಿಂ, ಹರಿಜನ ಮತ್ತು ಕುರುಬ ಸಮುದಾಯಗಳ ಮತಗಳು ಮೂರು ಪಕ್ಷಗಳ ನಡುವೆ ಹಂಚಿಹೋದರೆ, ನಾಯಕ ಸಮುದಾಯದ ಮತಗಳು ಸ್ಥಳೀಯವಾಗಿ ಬಿ.ಜೆ.ಪಿ ಪಕ್ಷದ ಅಭ್ಯರ್ಥಿ ಅಧಿಕಾರಕ್ಕೆ ಬರಲು ನಿರ್ಣಾಯಕವಾಗಿತ್ತು. ತಾಲೂಕಿನಲ್ಲಿ ಬಹುಸಂಖ್ಯಾತರಾಗಿರುವ ನಾಯಕರು ರಾಜಕೀಯ ಸ್ಥಿತಿಗತಿಯನ್ನು ನಿರ್ಧರಿಸುವ ಶಕ್ತಿ ಇವರಿಗಿದೆ.[24] ಇಂದು ಈ ಸಮುದಾಯಗಳು ಬಹುತೇಕವಾಗಿ ಬಿ.ಜೆ.ಪಿ ಪಕ್ಷದೊಂದಿಗೆ ಗುರುತಿಸಿಕೊಂಡಂತೆ ಕಂಡುಬರುತ್ತದೆ. ಇದಕ್ಕೆ ಸ್ಥಳೀಯ ಶಾಸಕರ ಸಾಮಾಜಿಕ ಪ್ರಾತಿನಿಧ್ಯವೇ ಕಾರಣವಾಗಿದೆ. ಇವರಿಗೆ ಪಕ್ಷಕ್ಕಿಂತ ವ್ಯಕ್ತಿಯೇ ಮುಖ್ಯವಾಗಿದ್ದಾರೆ. ಇದಕ್ಕೆ ಶಾಸಕರು ಹತ್ತು ಹಲವಾರು ಸಾಮಾಜಿಕ ಸೇವಾಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಕಾರಣವಾಗಿರಬಹುದು. ಇದರಿಂದಾಗಿ ತಾಲೂಕಿನ ಎಲ್ಲಾ ಹಿಂದುಳಿದ ಹಾಗೂ ಕೆಳವರ್ಗದ ಸಮುದಾಯಗಳು ಹೆಚ್ಚಾಗಿ ಇವರನ್ನು ಬೆಂಬಲಿಸುತ್ತಾರೆ.

ರಾಜಕೀಯವಾಗಿ ಹೊಸಪೇಟೆ ತಾಲೂಕನ್ನು ನೋಡುವುದಾದರೆ 2008ರ ಮೊದಲು ಒಂದು ವಿಧಾನಸಭಾ ಕ್ಷೇತ್ರವನ್ನು ಹೊಂದಿದ ತಾಲೂಕು ಹೊಸ ಡಿಲಿಮಿಟೇಷನ್ ಕಾಯ್ದೆ ಜಾರಿಗೆ ಬಂದ ಮೇಲೆ ಹೊಸದಾಗಿ ವಿಜಯನಗರ ಮತ್ತು ಕಂಪ್ಲಿ ಎಂಬ ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಕಂಪ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿ ಬಳ್ಳಾರಿ ತಾಲೂಕಿನ ಕೆಲವು ಭಾಗದವರಿಗೂ ವ್ಯಾಪಿಸಿದೆ. ಹೊಸಪೇಟೆ ವಿಜಯನಗರ ಕ್ಷೇತ್ರವು ಸಾಮಾನ್ಯ ಕ್ಷೇತ್ರವಾದರೆ, ಕಂಪ್ಲಿ ಪರಿಶಿಷ್ಟ ಪಂಗಡದ ಸಾಮಾನ್ಯ ಮೀಸಲು ಕ್ಷೇತ್ರವಾಗಿದೆ. 2008ರ ನಂತರ ನೆರೆ ಜಿಲ್ಲೆ ಕೊಪ್ಪಳ ಲೋಕಸಭಾಕ್ಷೇತ್ರದಿಂದ ಬೇರ್ಪಟ್ಟ ಹೊಸಪೇಟೆ ತಾಲೂಕು ಸ್ವಜಿಲ್ಲೆ ಬಳ್ಳಾರಿ ಲೋಕಸಭಾಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಹೊಸಪೇಟೆ ತಾಲೂಕು ನಗರಾಭಿವೃದ್ಧಿ ಪ್ರಾಧಿಕಾರ, ನಗರಸಭೆ ಮತ್ತು ಎರಡು ಪಟ್ಟಣ ಪಂಚಾಯಿತಿಗಳು

ಮತ್ತು ತಾಲೂಕುಪಂಚಾಯಿತಿ ಹೊಂದಿದೆ. ತಾಲೂಕಿನಲ್ಲಿ ಒಟ್ಟು 23 ಗ್ರಾಮಪಂಚಾಯಿತಿಗಳು ಇದ್ದು, ಇವು ವಿಜಯನಗರ, ಕಂಪ್ಲಿ ಮತ್ತು ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಗಳಲ್ಲಿ ಅನುಕ್ರಮವಾಗಿ 9, 8, ಮತ್ತು 6 ಗ್ರಾಮಪಂಚಾಯಿತಿಗಳು ಹಂಚಿಕೆಯಾಗಿವೆ.

2010ರಲ್ಲಿ ನಡೆದ ಗ್ರಾಮಪಂಚಾಯಿತಿ ಚುನಾವಣೆಯು ಶೇ.33.33ರಷ್ಟು ಮಹಿಳಾ ಮೀಸಲಾತಿ ನೀತಿಗೆ ಒಳಪಟ್ಟು ಜರುಗಿದೆ. ತಾಲೂಕಿನ 23 ಗ್ರಾಮಪಂಚಾಯಿತಿಗಳಲ್ಲಿ ಚುನಾಯಿತರಾದ 394 ಸದಸ್ಯರಲ್ಲಿ 238(ಶೇ.60.40)ರಷ್ಟು ಪುರುಷರು ಮತ್ತು 156(ಶೇ.39.60)ರಷ್ಟು ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ. ತಾಲೂಕಿನಲ್ಲಿ ಮಹಿಳಾ ಮೀಸಲಾತಿಗಿಂತ ಶೇ.6.27(25)ರಷ್ಟು ಮಹಿಳೆಯರು ಹೆಚ್ಚು ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ. ಈ ಶೇ.6.27ರಷ್ಟು ಹೆಚ್ಚಿನ ಮಹಿಳಾ ಪ್ರಾತಿನಿಧ್ಯ ಮಹಿಳಾ ಮೀಸಲು ಕ್ಷೇತ್ರ/ವಾರ್ಡ್‌ಗಳಿಂದ ಆಯ್ಕೆಯಾದವರೇ ಹೊರತು ಸಾಮಾನ್ಯ ಅಥವಾ ಮೀಸಲಾತಿ ಸಾಮಾನ್ಯ ಕ್ಷೇತ್ರಗಳಿಂದ ಆಯ್ಕೆಯಾದವರಲ್ಲ. ಇದು ಆಯಾ ಗ್ರಾಮಪಂಚಾಯಿತಿಗಳಲ್ಲಿ ಇರುವ ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ನೀಡಿದ್ದ ಮೀಸಲಾತಿ ಫಲವಾಗಿದೆ. ತಾಲೂಕಿನಲ್ಲಿ ಪ್ರಾತಿನಿಧ್ಯ ನೋಡಿದಾಗ ಪರಿಶಿಷ್ಟ ಜಾತಿಯಲ್ಲಿ 108(ಶೇ.27.41) ಸದಸ್ಯರು ಪ್ರಾತಿನಿಧ್ಯ ಪಡೆದಿದ್ದು, ಇವರಲ್ಲಿ 66(ಶೇ.61.11) ಪುರುಷರು ಮತ್ತು 42(ಶೇ.38.89)ಮಹಿಳೆಯರು ಚುನಾಯಿತರಾಗಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ 93 ಸದಸ್ಯರು ಪ್ರಾತಿನಿಧ್ಯ ಪಡೆದಿದ್ದು, ಇವರಲ್ಲಿ 59(ಶೇ.63.44) ಪುರುಷರು ಹಾಗೂ 34(ಶೇ.36.56) ಮಹಿಳೆಯರು ಆಯ್ಕೆಯಾಗಿದ್ದಾರೆ. ಹಿಂದುಳಿದ ವರ್ಗದವರಲ್ಲಿ 130(ಶೇ.32.99) ಸದಸ್ಯರು ಪ್ರಾತಿನಿಧ್ಯ ಪಡೆದಿದ್ದು, ಇವರಲ್ಲಿ 76(ಶೇ.58.46) ಪುರುಷರು ಮತ್ತು 54(41.54) ಮಹಿಳೆಯರು ಸದಸ್ಯರಾಗಿದ್ದಾರೆ. ಸಾಮಾನ್ಯ ವರ್ಗದಲ್ಲಿ 63(ಶೇ.15.98) ಸದಸ್ಯರು ಆಯ್ಕೆಯಾಗಿದ್ದು, ಇವರಲ್ಲಿ 37(ಶೇ.58.73) ಪುರುಷರು ಹಾಗೂ 26(ಶೇ.42.85) ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ(ನೋಡಿ ಕೋಷ್ಟಕ–3.6). ಪ್ರಸ್ತುತ ಅಧ್ಯಯನದಲ್ಲಿ ಹೋಸಪೇಟೆ ತಾಲೂಕಿನ ನಾಗೇನಹಳ್ಳಿ ಮತ್ತು ಹೊಸೂರು ಗ್ರಾಮಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಗ್ರಾಮಪಂಚಾಯಿತಿಗಳ ಬಗ್ಗೆ ಮುಂದೆ ಚರ್ಚಿಸಲಾಗಿದೆ.

3.3 ಅಧ್ಯಯನಕ್ಕೆ ಒಳಪಟ್ಟ ಗ್ರಾಮಪಂಚಾಯಿತಿಗಳು

ಪ್ರಸ್ತುತ ಅಧ್ಯಯನವು ತುಲನಾತ್ಮಕ ಮತ್ತು ಸೂಕ್ಷ್ಮ(Micro) ಅಧ್ಯಯನವಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಲೂಕಿನಲ್ಲಿ ಎರಡು ಗ್ರಾಮಪಂಚಾಯಿತಿಗಳಿಗೆ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಈ ಎರಡು ಗ್ರಾಮಪಂಚಾಯಿತಿಗಳನ್ನು ಅಧ್ಯಯನದಲ್ಲಿ ಒಂದು ಘಟಕವನ್ನಾಗಿ ಪರಿಗಣಿಸಲಾಗಿದೆ. ಹೊಸಪೇಟೆ ತಾಲೂಕಿನಲ್ಲಿ 23 ಗ್ರಾಮಪಂಚಾಯಿತಿಗಳು ಅಸ್ತಿತ್ವದಲ್ಲಿದ್ದು, ಇದರಲ್ಲಿ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದೆ. ಈ ಎರಡು ಗ್ರಾಮಪಂಚಾಯಿತಿಗಳು ತಾಲೂಕು ಕೇಂದ್ರಕ್ಕೆ ಹೊಂದಿಕೊಂಡಿವೆ. ಈ ಗ್ರಾಮಪಂಚಾಯಿತಿಗಳ ಕಾರ್ಯಾಲಯವು ತಾಲೂಕು ಕೇಂದ್ರದಿಂದ 5 ಕಿ.ಮೀ. ದೂರದಲ್ಲಿವೆ. ಇವು ಚಾರಿತ್ರಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಸಮಾನ ಅಂಶಗಳಿಂದ ಕೂಡಿವೆ.

ಈ ಮೊದಲು ಹೇಳಿದಂತೆ ಇದೊಂದು ತೌಲನಿಕ ಅಧ್ಯಯನವಾಗಿದ್ದರಿಂದ ಇದೇ ಮಾದರಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದೆ.

3.3.1 ನಾಗೇನಹಳ್ಳಿ ಗ್ರಾಮಪಂಚಾಯಿತಿ

ಚಾರಿತ್ರಿಕ ಹಿನ್ನೆಲೆ: ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿರುವ ನಾಗೇನಹಳ್ಳಿ ಗ್ರಾಮಪಂಚಾಯಿತಿಯು ವಿಜಯನಗರ ಆಳರಸರ ಆಡಳಿತಕ್ಕೆ ಒಳಪಟ್ಟ ಮತ್ತು ಅವರಿಂದಲೇ ಕಟ್ಟಲ್ಪಟ್ಟ ಗ್ರಾಮಗಳಿಂದ ಕೂಡಿದ ಪ್ರದೇಶವಾಗಿದೆ. ನಾಗೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಒಳಪಡುವ 6 ಗ್ರಾಮಗಳಲ್ಲಿ, ಬೆನಕಾಪುರ ಗ್ರಾಮವೊಂದನ್ನು ಹೊರತುಪಡಿಸಿ ನಾಗೇನಹಳ್ಳಿ, ಕಾಲಘಟ್ಟ, ಬಸವನದುರ್ಗ(ಗುಡಿಓಬಳಾಪುರ) ಬೆಳಗೋಡು ಮತ್ತು ಕಳ್ಳಿರಾಂಪುರ ಗ್ರಾಮಗಳು ವಿಜಯನಗರ ಆಳರಸರ ಕಾಲದಲ್ಲೇ ಅಸ್ತಿತ್ವದಲ್ಲಿದ್ದ ಗ್ರಾಮಗಳಾಗಿವೆ.[24] ವಿಜಯನಗರ ಅರಸ ಕೃಷ್ಣದೇವರಾಯ ತನ್ನ ತಾಯಿ ನಾಗಲಾಂಬಿಕೆಯ ಸವಿನೆನಪಿಗಾಗಿ ಕಟ್ಟಿದ ಈ ಊರು ನಾಗಲಾದೇವಿಪುರ ಎಂದು ಕರೆಯಲಾಗುತ್ತಿತ್ತು. ಮುಂದೆ ನಾಗೇನಹಳ್ಳಿ ಎಂಬ ಹೆಸರಿನಲ್ಲಿ ಪ್ರಚಲಿತದಲ್ಲಿದೆ ಎಂಬುದು ತಜ್ಞರ ಅಭಿಪ್ರಾಯವಾಗಿದೆ. ನಾಗೇನಹಳ್ಳಿಯ ನೈರುತ್ಯದಲ್ಲಿರುವ ಬೃಹತ್ ರಂಗನಾಥ ದೇವಾಲಯದಲ್ಲಿರುವ ಕ್ರಿ.ಶ.1516 ಶಾಸನವು ತಿಳಿಸುವಂತೆ, ಕೃಷ್ಣದೇವರಾಯನ ಪುರೋಹಿತನಾದ ರಂಗನಾಥ ದೀಕ್ಷಿತ್ ಎಂಬುವವನು ದೊರೆಯಿಂದ ಗ್ರಾಮವೊಂದನ್ನು ದಾನವಾಗಿ ಪಡೆದು, ನಾಗಲಾಂಬಿಕೆಗೆ ಪುಣ್ಯವಾಗಲೆಂದು ಆಕೆಯ ಹೆಸರಿನಲ್ಲಿ ನಾಗೇಂದ್ರಶಯನ ಎಂಬ ರಂಗನಾಥ(ವಿಷ್ಣು) ಆಲಯ, ಈಶಾನ್ಯ ಭಾಗದಲ್ಲಿರುವ ನಾಗೇಶ್ವರ ಶಿವಾಲಯ ಹಾಗೂ ನಾಗಸಮುದ್ರ ಎಂಬ ಕೆರೆಯನ್ನು ನಿರ್ಮಿಸುತ್ತಾನೆ. ಈ ಗ್ರಾಮವನ್ನೇ ನಾಗಲಾದೇವಿಪುರ ಎಂಬ ಹೆಸರಿನಲ್ಲಿ ಅಗ್ರಹಾರವನ್ನಾಗಿ ಮಾಡಿ ಹಲವು ವೃತ್ತಿಗಳನ್ನು ಬ್ರಾಹ್ಮಣರಿಗೆ ದತ್ತಿ ಬಿಡುತ್ತಾನೆ.[25] ಆದರೆ ಈ ಗ್ರಾಮದಲ್ಲಿ ಒಂದೇ ಒಂದು ಬ್ರಾಹ್ಮಣ ಕುಟುಂಬವಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಸವನದುರ್ಗ ಗ್ರಾಮದ ಪೂರ್ವ ದಿಕ್ಕಿನಲ್ಲಿರುವ ರಂಗನಾಥ ದೀಕ್ಷಿತ್ ನಿರ್ಮಿಸಿದ ಶಿವಾಲಯ ಹಾಗೂ ಧರ್ಮದ ಗುಡ್ಡದಲ್ಲಿ ಹೆಬ್ಬಂಡೆಗಳಿಂದ ಕೂಡಿದ ಗವಿಗಳಲ್ಲಿ ಚನ್ನಬಸವಣ್ಣ ಮತ್ತು ನಿಜಲಿಂಗಮ್ಮ ದೇವರುಗಳು ಇವೆ. ಈ ಧರ್ಮದ ಗುಡ್ಡದಲ್ಲಿ ಮಹಾನವಮಿ ದಿನದಂದು 'ದೇವರ ಬನ್ನಿ' ಎಂಬ ದೇವರ ಕಾರ್ಯ ಜರುಗುತ್ತದೆ. ಆ ದಿನಗಳಲ್ಲಿ ನವರಾತ್ರಿ ಪೂಜೆಗೆ ಕುಳಿತ ದೇವತೆಗಳಲ್ಲಿ ಬಹುತೇಕವಾಗಿ ನಾಯಕ ಸಮುದಾಯದವರು ಆರಾಧಿಸುವ ಹಾಗೂ ಪೂಜಿಸುವ ದೇವತೆಗಳು ಹೊಸಪೇಟೆ ಮತ್ತು ಕಮಲಾಪುರದಿಂದ ಈ ಧರ್ಮದಗುಡ್ಡಕ್ಕೆ 'ದೇವರ ಬನ್ನಿ'ಗೆ ಬರುತ್ತಾರೆ. ಈ ದಿನದಂದು ಜನಾಕರ್ಷಣೆಗೆ ಒಳಪಡುವುದನ್ನು ಬಿಟ್ಟರೆ ಬೇರೆ ದಿನಗಳಲ್ಲಿ ಧರ್ಮದ ಗುಡ್ಡದ ದೇವರುಗಳು ಸೇರಿದಂತೆ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಯಾವ ದೇವಸ್ಥಾನಗಳು ಜನಪ್ರಿಯತೆ ಪಡೆದಿಲ್ಲ. ಪ್ರವಾಸಿಗರು ನೋಡುವ ಸ್ಥಳಗಳಾಗಿದ್ದರೂ ಬೇಕಾದ ಪ್ರಚಾರ ಮತ್ತು ಸೌಲಭ್ಯದ ಕೊರತೆ ಹೆಚ್ಚಿದೆ. ಇದರಿಂದಾಗಿ ಕೆಲವು ಕುಟುಂಬಗಳು ಉದ್ಯೋಗ ಅಥವಾ ಆದಾಯಗಳ ಅವಕಾಶ ಕೈತಪ್ಪಿ ಹೋದಂತಾಗಿದೆ. ಹಾಗೆಯೇ ಬಸವನದುರ್ಗ(ಗುಡಿಓಬಳಾಪುರ) ಬೆಳಗೋಡು, ಕಳ್ಳಿರಾಂಪುರ ಮತ್ತು ನರಸಾಪುರ ಗ್ರಾಮಗಳಲ್ಲಿ

ವಿಜಯನಗರ ಅರಸರ ಆಡಳಿತ ಅವಧಿಯಲ್ಲಿ ಕಟ್ಟಲ್ಪಟ್ಟ ಹಲವಾರು ದೇವಾಲಯಗಳು, ಗುಡಿಗಳು, ಗ್ರಾಮ ರಕ್ಷಣೆಗೆ ಕಟ್ಟಿದ ಕೋಟೆಯ ಗೋಡೆ, ಉಡೇವು(ಬುರುಜು) ಇತರ ಅವಶೇಷಗಳು ಇರುವುದು ಅಲ್ಲಿಲ್ಲಿ ಕಂಡುಬರುತ್ತವೆ. ಇಂತಹ ಅವಶೇಷಗಳು ಇಲ್ಲಿಯ ಕೃಷಿ ಚಟುವಟಿಕೆಗಳಿಂದ ಬಹುತೇಕವಾಗಿ ಕಣ್ಮರೆಯಾಗುತ್ತಿವೆ.

ಭೌಗೋಳಿಕ ಹಿನ್ನೆಲೆ: ಹೊಸಪೇಟೆ ತಾಲೂಕು ಕೇಂದ್ರದಿಂದ 5 ಕಿ.ಮೀ. ದೂರದಲ್ಲಿರುವ ನಾಗೇನಹಳ್ಳಿ ಗ್ರಾಮಪಂಚಾಯಿತಿಯು ಜಿಲ್ಲಾ ಕೇಂದ್ರದಿಂದ 67 ಕಿ.ಮೀ. ದೂರದಲ್ಲಿದೆ. ನಾಗೇನಹಳ್ಳಿ ಗ್ರಾಮಪಂಚಾಯಿತಿಯು ಹೊಸಪೇಟೆ ನಗರದ ಉತ್ತರ ಈಶಾನ್ಯ ಭಾಗದಲ್ಲಿದೆ. ತುಂಗಭದ್ರಾ ನದಿಯ ಬಲದಂಡೆ ಮೇಲ್ಭಾಗದಿಂದ 3 ಕಿ.ಮೀ. ಅಂತರದಲ್ಲಿದೆ. ನಾಗೇನಹಳ್ಳಿ ಗ್ರಾಮಪಂಚಾಯಿತಿಯು 3,090.68 ಹೆಕ್ಟೇರ್ ಭೂಪ್ರದೇಶವನ್ನು ಹೊಂದಿದ್ದು, ಶೇ.30ರಷ್ಟು ಬೆಟ್ಟ ಗುಡ್ಡ ಮತ್ತು ಅರಣ್ಯದಿಂದ ಕೂಡಿದೆ. ನಾಗೇನಹಳ್ಳಿ ಗ್ರಾಮಪಂಚಾಯಿತಿಯು ಹೊಸಪೇಟೆಗೆ ಹತ್ತಿಕೊಂಡಿದ್ದರೂ, ತುಂಗಭದ್ರಾ ಜಲಾಶಯದಿಂದ ಹರಿಯುವ ಪವರ್ ಕಾಲುವೆ ಹಾಗೂ ರೈಲ್ವೆ ಹಳಿಯಿಂದ ಬೇರ್ಪಟ್ಟಿದೆ. ನಾಗೇನಹಳ್ಳಿ ಗ್ರಾಮಪಂಚಾಯಿತಿ ಪೂರ್ವದಲ್ಲಿ ಮಲಪನಗುಡಿ ಗ್ರಾಮಪಂಚಾಯಿತಿಯ ಮಲಪನಗುಡಿ ತಾಂಡ, ಪಶ್ಚಿಮದಲ್ಲಿ ಹೊಸೂರು ಗ್ರಾಮಪಂಚಾಯಿತಿ, ಉತ್ತರಕ್ಕೆ ತುಂಗಭದ್ರಾ ನದಿ ಹಾಗೂ ದಕ್ಷಿಣಕ್ಕೆ ಹೊಸಪೇಟೆ ನಗರದ ವಾರ್ಡ್‌ಗಳಾದ 88-ಮುದ್ಲಾಪುರ ಮತ್ತು ಅನಂತಶಯನಗುಡಿ ಬರುತ್ತವೆ. ನಾಗೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬೆಳಗೋಡು, ಬಸವನದುರ್ಗ, ಕಾಲಘಟ್ಟ, ಕಳ್ಳಿರಾಂಪುರ ನಾಗೇನಹಳ್ಳಿ ಮತ್ತು ಬೆನಕಾಪುರ ಗ್ರಾಮಗಳು ಬರುತ್ತವೆ. ಈ ಆರು ಕಂದಾಯ ಗ್ರಾಮಗಳು ಪಂಚಾಯಿತಿಯ ಕಾರ್ಯಾಲಯಕ್ಕೆ ತುಂಬಾ ಹತ್ತಿರದಲ್ಲಿವೆ. ಇದರಲ್ಲಿ ನಾಗೇನಹಳ್ಳಿ ಮತ್ತು ಬಸವನದುರ್ಗ ದೊಡ್ಡ ಗ್ರಾಮಗಳಾಗಿವೆ. ಈ ಆರು ಗ್ರಾಮಗಳು ತುಂಗಭದ್ರಾ ಜಲಾಶಯದಿಂದ ಸಂಪೂರ್ಣ ನೀರಾವರಿ ಪ್ರದೇಶಗಳಾಗಿವೆ. ಈ ಗ್ರಾಮಗಳಲ್ಲಿ ಶೇ.90ಕ್ಕಿಂತ ಹೆಚ್ಚು ಜನರು ಕೃಷಿಕರು ಮತ್ತು ಕೃಷಿ ಕಾರ್ಮಿಕರಾಗಿದ್ದಾರೆ. ಗ್ರಾಮಪಂಚಾಯಿತಿ ವ್ಯಾಪ್ತಿಯ ಸುತ್ತ ಮುತ್ತಲ ಹರಿಯುವ ಬಸವ, ರಾಯ, ಕೇಡು ಹಳ್ಳ(ನಗರದ ಡ್ರೈನೇಜ್ ವಾಟರ್) ಮತ್ತು ಕಾಲಘಟ್ಟ ಕಾಲುವೆಗಳು ವರ್ಷದಲ್ಲಿ 10ರಿಂದ 11 ತಿಂಗಳು ತುಂಬಿ ಹರಿಯುತ್ತಿದ್ದು, ಸಾವಿರಾರು ಎಕರೆಗಳ ಪ್ರದೇಶಕ್ಕೆ ನೀರುಣಿಸುತ್ತಿವೆ.

ಇಲ್ಲಿನ ಬಹುತೇಕ ಭೂಮಿಯು ಕಪ್ಪು ಮಣ್ಣು ಹಾಗೂ ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ ಫಲವತ್ತಾದ ಹಾಗೂ ಸಮತಟ್ಟಾದ ಪ್ರದೇಶವಾಗಿದೆ. ಇಲ್ಲಿನ ರೈತರು ಪ್ರಮುಖವಾಗಿ ಶೇ.90ರಷ್ಟು ಕಬ್ಬನ್ನು ಬೆಳೆಯುತ್ತಾರೆ. ಬಾಳೆ ಮತ್ತು ಭತ್ತ ಇಲ್ಲಿನ ಇತರ ಬೆಳೆಗಳಾಗಿವೆ. ಈ ಭಾಗದಲ್ಲಿ ಭತ್ತವನ್ನು ಬೆಳೆ ಬದಲಾವಣೆಗಾಗಿ ಹಾಗೂ ಭೂಮಿಯ ಫಲವತ್ತತೆಗಾಗಿ ಮೂರು-ನಾಲ್ಕು ವರ್ಷಗಳ ಅಂತರದಲ್ಲಿ ಬೆಳೆಯುತ್ತಾರೆ. ಜಿಲ್ಲೆಯ ಹವಮಾನದಂತೆ ಉಷ್ಣವಲಯವಾಗಿದೆ. ಸಂಪೂರ್ಣ ನೀರಾವರಿ ಪ್ರದೇಶವಾಗಿದ್ದರೂ, ಸಮೃದ್ಧವಾದ ಹಸಿರು ಬೆಳೆಗಳಿಂದ ಮತ್ತು ಗಿಡ ಮರಗಳಿಂದ ಕೂಡಿದ್ದರೂ ಇಲ್ಲಿ ಬಿಸಿಲಿನ ತಾಪ ಕಂಡುಬರುತ್ತದೆ. ನೈಸರ್ಗಿಕ ತಾಪಮಾನವನ್ನು ಈ ಪ್ರದೇಶದಲ್ಲಿನ ಕಲ್ಲು ಬಂಡೆಗಳಿಂದ ಕೂಡಿದ ಬೆಟ್ಟಗುಡ್ಡಗಳು ಹಿಡಿದಿಟ್ಟುಕೊಂಡು ತಾಪವನ್ನು ಪ್ರತಿಯಾಗಿ ಹೊರಸೂಚಿಸುವುದು ಕಾರಣವಾಗಿರಬಹುದು.

ಸಾಮಾಜಿಕ ಹಿನ್ನೆಲೆ: 2010ರ ಕೌಟುಂಬಿಕ ಜನಗಣತಿ ಪ್ರಕಾರ, ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 1,404 ಕುಟುಂಬಗಳು ಇವೆ. ಇದರಲ್ಲಿ ನಾಗೇನಹಳ್ಳಿ 728, ಬಸವನದುರ್ಗ 429, ಬೆನಕಾಪುರ 163, ಕಾಳಘಟ್ಟ 40, ಬೆಳಗೋಡು, 26 ಮತ್ತು ಕಳ್ಳಿರಾಂಪುರ 18 ಕುಟುಂಬಗಳು ಇವೆ.[26] ಅತಿ ಹೆಚ್ಚು ಕುಟುಂಬಗಳನ್ನು ಹೊಂದಿರುವ ಗ್ರಾಮ ನಾಗೇನಹಳ್ಳಿಯಾದರೆ, ಅತಿ ಕಡಿಮೆ ಕುಟುಂಬಗಳನ್ನು ಕಳ್ಳಿರಾಂಪುರ ಹೊಂದಿದೆ. ಬೆಳಗೋಡು ಮತ್ತು ಕಳ್ಳಿರಾಂಪುರ ಗ್ರಾಮಗಳು ಕಡಿಮೆ ಕುಟುಂಬಗಳನ್ನು ಹೊಂದಿದ್ದರೂ ಸಹ ಕಂದಾಯ ಗ್ರಾಮಗಳಾಗಿವೆ. ಈ ಗ್ರಾಮಗಳಲ್ಲಿ ಒಂದರೆಡು ಕುಟುಂಬಗಳನ್ನು ಹೊರತುಪಡಿಸಿ ಬಹುತೇಕ ಕುಟುಂಬಗಳು ಮೂಲತಃ ಹೊಸಪೇಟೆಯವರಾಗಿದ್ದಾರೆ.[27] ಈ ಗ್ರಾಮಗಳ ನಡುವೆ ಕಡಿಮೆ ಅಂತರವಿದ್ದು ಈ ಗ್ರಾಮಗಳು ಮುಖ್ಯರಸ್ತೆಯ ಪಕ್ಕದಲ್ಲೇ ಇದ್ದರೂ ಸಂಪೂರ್ಣವಾಗಿ ನೀರಾವರಿ ಕೃಷಿಭೂಮಿಯಿಂದ ಆವೃತವಾಗಿದೆ. ಕೃಷಿ ಚಟುವಟಿಕೆಗಳಿಂದ ಈ ಗ್ರಾಮ ಮತ್ತು ಕುಟುಂಬಗಳ ವಿಕಾಸಕ್ಕೆ ಅವಕಾಶ ಇಲ್ಲದಂತಾಗಿದೆ. ಇವು ಪಂಚಾಯಿತಿಯಿಂದ ಲಭಿಸುವ ಅಭಿವೃದ್ಧಿ ಸೌಲಭ್ಯಗಳನ್ನು ಪಡೆಯಲಾಗದ ಸ್ಥಿತಿಯಲ್ಲಿವೆ. 2011ರ ಜನಗಣತಿ ಪ್ರಕಾರ, ನಾಗೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ 7,623 ಜನಸಂಖ್ಯೆ ಇದ್ದು, ಇವರಲ್ಲಿ 3,799(ಶೇ.49.83)ಪುರುಷ, 3,823(ಶೇ.50.16)ಮಹಿಳೆ ಮತ್ತು 1(ಶೇ.0.01) ಇತರರು ಇದ್ದಾರೆ. ನಾಗೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿ 1,000 ಪುರುಷರಿಗೆ 1,006ರಷ್ಟು ಮಹಿಳೆಯರು ಇದ್ದು, ಲಿಂಗಾನುಪಾತವು ಜಿಲ್ಲೆ ಮತ್ತು ತಾಲೂಕಿಗಿಂತ ಕ್ರಮವಾಗಿ ಶೇ.9 ಮತ್ತು 28ರಷ್ಟು ಅಧಿಕವಾಗಿದೆ(ನೋಡಿ ಕೋಷ್ಟಕ–3.2).

ನಾಗೇನಹಳ್ಳಿ ಗ್ರಾಮಪಂಚಾಯಿತಿಯು ಸಾಮಾಜಿಕವಾಗಿ ವಿವಿಧ ಜಾತಿ, ಧರ್ಮ ಹಾಗೂ ವರ್ಗಗಳಿಂದ ಕೂಡಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಮುಖ್ಯವಾಗಿ ಲಿಂಗಾಯತ, ಕುರುಬ, ಮುಸ್ಲಿಂ, ಬೇಡನಾಯಕ, ಹರಿಜನ, ಲಂಬಾಣಿ ಮತ್ತು ತಮಿಳು ಬೋವಿ ಸಮುದಾಯಗಳ ಜನರು ಬಹುಸಂಖ್ಯಾತರಾಗಿದ್ದಾರೆ. ಕುಂಬಾರ, ಬಡಿಗ, ಅಗಸ, ಕ್ಷೌರಿಕ, ಮೇದಾರ, ಆಂಧ್ರರೆಡ್ಡಿ ಮೊದಲಾದವರು ಅಲ್ಪಸಂಖ್ಯಾತ ಜಾತಿ ಸಮುದಾಯದವರಾಗಿದ್ದಾರೆ. ಪಂಚಾಯಿತಿ ಪ್ರದೇಶದಲ್ಲಿ ರಾಜಕೀಯವಾಗಿ ಪರಿಶಿಷ್ಟ ಜಾತಿವರೇ(ಹರಿಜನ, ಲಂಬಾಣಿ ಮತ್ತು ತಮಿಳು ಬೋವಿ)ಬಹುಸಂಖ್ಯಾತ ಜಾತಿವರಾಗಿದ್ದಾರೆ. ನಂತರ ಮುಸ್ಲಿಂ, ಲಿಂಗಾಯತ, ಕುರುಬ ಮತ್ತು ಬೇಡನಾಯಕ ಜಾತಿಯವರು ಬರುತ್ತಾರೆ. ಒಟ್ಟಾರೆಯಾಗಿ ಜಾತಿವಾರು ಸಂಗತಿಗಳನ್ನು ನೋಡಿದಾಗ ಪಂಚಾಯಿತಿ ವ್ಯಾಪ್ತಿಯಲ್ಲಿ ಕೆಳಜಾತಿ ಮತ್ತು ಕೆಳವರ್ಗದವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅಧಿಕ ಸಂಖ್ಯೆಯಲ್ಲಿ ಪರಿಶಿಷ್ಟರಿದ್ದರೂ ರಾಜಕೀಯವಾಗಿ ಹೇಳಿಕೊಳ್ಳುವಂತಹ ಯಾವ ಪ್ರಭಾವ ಕಂಡುಬರುವುದಿಲ್ಲ.

2011ರ ಜನಗಣತಿ ಪ್ರಕಾರ, ನಾಗೇನಹಳ್ಳಿ ಪಂಚಾಯಿತಿ ಪ್ರದೇಶದಲ್ಲಿ ಸಾಕ್ಷರತೆ ಪ್ರಮಾಣ ಶೇ.69.67ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇ.78.54 ಮತ್ತು ಮಹಿಳೆಯರ ಸಾಕ್ಷರತೆ ಪ್ರಮಾಣ ಶೇ.60.84ರಷ್ಟಿದೆ. ಈ ಪ್ರಮಾಣವನ್ನು ತಾಲೂಕಿನ ಸಾಕ್ಷರತೆ ಪ್ರಮಾಣಕ್ಕೆ ಹೋಲಿಸಿದರೆ ಒಟ್ಟು ಸಾಕ್ಷರತೆ ಪ್ರಮಾಣದಲ್ಲಿ ಶೇ.5.34ರಷ್ಟು, ಪುರುಷರ ಸಾಕ್ಷರತೆಯಲ್ಲಿ ಪ್ರಮಾಣದಲ್ಲಿ ಶೇ.4.66 ಮತ್ತು ಮಹಿಳೆಯರ ಸಾಕ್ಷರತೆ ಪ್ರಮಾಣದಲ್ಲಿ ಶೇ.6.96ರಷ್ಟು ಕಡಿಮೆ ಇದೆ. ನೀರಾವರಿ ಪ್ರದೇಶವಾದ

ನಾಗೇನಹಳ್ಳಿ ಗ್ರಾಮಪಂಚಾಯಿತಿ ತಾಲೂಕಿನ ಸಾಕ್ಷರತೆ ಬೆಳವಣಿಗೆಯಲ್ಲಿ ಹಿಂದುಳಿದ ಪಂಚಾಯಿತಿಯಾಗಿದೆ(ನೋಡಿ ಕೋಷ್ಟಕ-3.2).

ಆರ್ಥಿಕ ಹಿನ್ನೆಲೆ: ನಾಗೇನಹಳ್ಳಿ ಗ್ರಾಮಪಂಚಾಯಿತಿ ಪ್ರದೇಶದಲ್ಲಿ ಶೇ.70ರಷ್ಟು ಕೃಷಿ ಪ್ರದೇಶವಾಗಿದ್ದು, ಶೇ.30ರಷ್ಟು ಬೆಟ್ಟ, ಬಂಡೆ ಹಾಗೂ ಅರಣ್ಯ ಪ್ರದೇಶವಾಗಿದೆ. ನಾಗೇನಹಳ್ಳಿ ಗ್ರಾಮಪಂಚಾಯಿತಿಗೆ ಒಳಪಡುವ ಆರು ಕಂದಾಯ ಗ್ರಾಮಗಳಲ್ಲಿ ಕಳ್ಳಿರಾಂಪುರ ಮತ್ತು ಬೆಳಗೋಡು ಶೇ.100ರಷ್ಟು ನೀರಾವರಿ ಪ್ರದೇಶವಾಗಿದೆ. ಬಸವನದುರ್ಗ(ಗುಡಿಓಬಳಾಪುರ) ಮತ್ತು ನಾಗೇನಹಳ್ಳಿ ಶೇ.90ರಷ್ಟು ಮತ್ತು ಕಾಲಘಟ್ಟ ಹಾಗೂ ಬೆನಕಾಪುರ ಶೇ.80ರಷ್ಟು ನೀರಾವರಿ ಪ್ರದೇಶವಾಗಿದೆ. ಈ ನೀರಾವರಿ ಭೂಮಿಯ ಬಹುಪಾಲು ಒಡೆತನ ಅನುಕ್ರಮವಾಗಿ ಲಿಂಗಾಯಿತ, ಕುರುಬ, ಮುಸ್ಲಿಂ ಹಾಗೂ ನಾಯಕರ ಒಡೆತನದಲ್ಲಿದೆ. ಈ ಭೂ ಒಡೆತನ ಹೊಂದಿದ ಬಹುತೇಕರು ಹೊಸಪೇಟೆಯಲ್ಲಿ ನೆಲೆಸಿದವರಾಗಿದ್ದಾರೆ. ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುವರಲ್ಲಿ ಲಿಂಗಾಯತರೇ ಅಧಿಕ ಭೂಮಿ ಉಳ್ಳವರಾಗಿದ್ದು, ಇವರು ಆರ್ಥಿಕವಾಗಿ ಸಬಲರಾಗಿದ್ದಾರೆ. ಭೂಮಿ ಹೊಂದಿರುವ ಪರಿಶಿಷ್ಟರ ಸಂಖ್ಯೆ ಇಲ್ಲವೇ ಇಲ್ಲ ಎನ್ನಬಹುದು. ಇವರು ಸಣ್ಣ ಪ್ರಮಾಣದಲ್ಲಿ(ಒಂದೆರಡು ಎಕರೆಗಳಷ್ಟು) ಭೂಮಿ ಹೊಂದಿದ ಒಂದೆರಡು ಕುಟುಂಬಗಳನ್ನು ಬಿಟ್ಟರೆ ಉಳಿದವರಿಗೆ ಭೂಮಿ ಇಲ್ಲವಾಗಿದೆ. ಇವರೆಲ್ಲರೂ ಕೃಷಿಕೂಲಿಯನ್ನು ಅವಲಂಬಿಸಿದವರಾಗಿದ್ದಾರೆ. ನೀರಾವರಿ ಪ್ರದೇಶವಾಗಿದ್ದರೂ ಕೃಷಿ ಕಾರ್ಮಿಕರ ಕೂಲಿ ರೂ.100 ದಾಟಿಲ್ಲ. ಇತ್ತೀಚೆಗೆ ಈ ಭಾಗದ ಕೆಳವರ್ಗದ ಕೃಷಿಕಾರ್ಮಿಕರಿಗೆ ಕೃಷಿಯೇ ಮುಖ್ಯ ಬದುಕಾಗಿ ಉಳಿದಿಲ್ಲ. ಇವರು ಪಕ್ಕದಲ್ಲಿರುವ ಹೊಸಪೇಟೆ ನಗರದಲ್ಲಿ ನಡೆಯುವ ಕಟ್ಟಡ ನಿರ್ಮಾಣ ಕಾರ್ಮಿಕರಾಗಿ ಹಾಗೂ ಗಣಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಆದರೆ ಇತ್ತೀಚೆಗೆ ಗಣಿಗಾರಿಕೆ ನಿಂತು ಹೋಗಿದೆ. ಶಾಲಾ-ಕಾಲೇಜು ಶಿಕ್ಷಣ ಪಡೆದ ಯುವಕರು ದ್ವಿತೀಯ ವಲಯ ಕೆಲಸಗಳನ್ನು ಆರಿಸಿಕೊಂಡು ಹೊಸಪೇಟೆ ನಗರಕ್ಕೆ ಹೋಗುತ್ತಿದ್ದಾರೆ. ಇಲ್ಲಿನ ಕೆಳವರ್ಗದ ಜನರು ಅನ್‌ಸೀಜನ್ ವೇಳೆ ಕೂಲಿಗಾಗಿ ವಲಸೆ ಹೋಗುವುದು ಸಹಜವಾಗಿದೆ. ಹೀಗಾಗಿ ಈ ಭಾಗದಲ್ಲಿ ಕೃಷಿ ಕಾರ್ಮಿಕರ ಕೊರತೆ ಕಂಡುಬರುತ್ತಿದೆ. ಬಸವನದುರ್ಗ ಗ್ರಾಮದಲ್ಲಿರುವ ತಮಿಳು ಬೋವಿಗಳು ತುಂಗಭದ್ರಾ ಅಣೆಕಟ್ಟು ಕಟ್ಟುವ ಸಂದರ್ಭದಲ್ಲಿ ಕಲ್ಲು ಒಡೆಯಲು ಬಂದ ಕುಟುಂಬಗಳಲ್ಲಿ ಪೈಕಿ ಒಂದೆರಡು ಕುಟುಂಬಗಳು ಖಾಯಂ ಆಗಿ ನೆಲೆಸಿವೆ. ನಂತರ ಹತ್ತಾರು ಕುಟುಂಬಗಳು ಬಂದು ನೆಲೆಸಿವೆ. ಮೂಲವಾಗಿ ಬಂದು ನೆಲೆಸಿದ ಕುಟುಂಬಗಳು ಅಲ್ಪಸ್ವಲ್ಪ ಭೂಮಿಯನ್ನು ಹೊಂದಿವೆ. ಇಂದು ಇವರು ಹೊಸಪೇಟೆ ಮತ್ತು ಸುತ್ತ ಮುತ್ತಲಿನ ಕಟ್ಟಡ ನಿರ್ಮಾಣಕಾರ್ಯಕ್ಕೆ ಬೇಕಾಗುವ ಕಲ್ಲು ಒಡೆದು ಪೂರೈಸುವ ಕೆಲಸದಲ್ಲಿ ತೊಡಗಿದ್ದಾರೆ. ಬಹುಸಂಖ್ಯಾತರಾದ ಪರಿಶಿಷ್ಟರು ಕೆಳಮಟ್ಟದಲ್ಲಿದ್ದಾರೆ.

ರಾಜಕೀಯ ಹಿನ್ನೆಲೆ: 1957ರಲ್ಲಿ ರಾಜ್ಯದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೆ ಬಂದಾಗ ನಾಗೇನಹಳ್ಳಿ ಗ್ರಾಮಪಂಚಾಯಿತಿ ಅಸ್ತಿತ್ವಕ್ಕೆ ಬಂದಿತು. ರಾಜ್ಯದಲ್ಲಿ ರಾಮಕೃಷ್ಣ ಹೆಗಡೆ ಮತ್ತು ನಜೀರ್‌ಸಾಬ್ ಇವರ ಪ್ರಯತ್ನದ ಫಲದಿಂದ 1983ರ ಪಂಚಾಯತ್‌ರಾಜ್ ಅಧಿನಿಯಮ ಜಾರಿಗೆ ಬಂದಾಗ ನಾಗೇನಹಳ್ಳಿ ಗ್ರಾಮಪಂಚಾಯಿತಿ ಹಾಗೂ ಇದರ ವ್ಯಾಪ್ತಿಗೆ ಸೇರಿದ ಎಲ್ಲಾ ಗ್ರಾಮಗಳು 1986 ರಿಂದ

1992ರವರೆಗೆ ಮಲಪನಗುಡಿ ಮಂಡಲಪಂಚಾಯಿತಿ ವ್ಯಾಪ್ತಿಗೆ ಸೇರಿದ್ದವು. ಸಂವಿಧಾನದ 73ನೇ ತಿದ್ದುಪಡಿ ಆಶಯಕ್ಕೆ ಅನುಗುಣವಾಗಿ ರಾಜ್ಯದಲ್ಲಿ 1993ರ ಪಂಚಾಯತ್‌ರಾಜ್ ಅಧಿನಿಯಮ ಜಾರಿಗೆ ಬಂದಾಗ ಮತ್ತೇ ನಾಗೇನಹಳ್ಳಿ ಗ್ರಾಮಪಂಚಾಯಿತಿ ಅಸ್ತಿತ್ವಕ್ಕೆ ಬಂದಿದೆ.

1993ರ ಅವಧಿಯಲ್ಲಿ ನಾಗೇನಹಳ್ಳಿ ಗ್ರಾಮಪಂಚಾಯಿತಿಯು ಬಸವನದುರ್ಗ, ಬೆನಕಾಪುರ, ಬೆಳಗೋಡು, ಕಳ್ಳಿರಾಂಪುರ, ಕಾಳಘಟ್ಟ, ನಾಗೇನಹಳ್ಳಿ ಮತ್ತು 88–ಮುದ್ಲಾಪುರ ಒಟ್ಟು ಏಳು ಕಂದಾಯ ಗ್ರಾಮಗಳನ್ನು ಒಳಗೊಂಡಿತ್ತು. ಆದರೆ ಇದೇ ಅವಧಿಯಲ್ಲಿ(1995–96ರಲ್ಲಿ) ಹೊಸಪೇಟೆ ರೈಲ್ವೇ ಸ್ಟೇಷನ್ ಪಕ್ಕದಲ್ಲಿರುವ 88–ಮುದ್ಲಾಪುರ ಗ್ರಾಮವು ನಾಗೇನಹಳ್ಳಿ ಗ್ರಾಮಪಂಚಾಯಿತಿಯಿಂದ ಬೇರ್ಪಟ್ಟು, ಹೊಸಪೇಟೆ ನಗರಸಭೆಯ ವಾರ್ಡಾಗಿ ಸೇರ್ಪಡೆಗೊಂಡಿದೆ. ಇಂದು ಆರು ಗ್ರಾಮಗಳನ್ನೊಳಗೊಂಡ ನಾಗೇನಹಳ್ಳಿ ಗ್ರಾಮಪಂಚಾಯಿತಿಯು ಅನುಷ್ಠಾನದಲ್ಲಿದೆ. 2010ರಲ್ಲಿ ಜರುಗಿದ ಗ್ರಾಮಪಂಚಾಯಿತಿ ಚುನಾವಣೆ ಶೇ.33.33ರಷು ಮೀಸಲಾತಿ ಮತ್ತು ಮೀಸಲಾತಿ ಆವರ್ತನ ನೀತಿಗೆ ಒಳಪಟ್ಟಿದೆ. ಪ್ರಸ್ತುತ ನಾಗೇನಹಳ್ಳಿ ಗ್ರಾಮಪಂಚಾಯಿತಿಯು 15 ಜನ ಸದಸ್ಯರನ್ನು ಒಳಗೊಂಡಿದೆ. ಈ ಸದಸ್ಯರ ಲಿಂಗವಾರು ವಿವರಣೆ ನೋಡಿದಾಗ ಶೇ.60 ಪುರುಷರು ಮತ್ತು ಶೇ.40 ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ. ಗ್ರಾಮವಾರು ನೋಡಿದಾಗ ನಾಗೇನಹಳ್ಳಿ ಮತ್ತು ಬೆನಕಾಪುರಗಳಿಂದ 10 ಪ್ರತಿನಿಧಿಗಳು, ಬಸವನದುರ್ಗದಿಂದ 4 ಪ್ರತಿನಿಧಿಗಳು ಮತ್ತು ಬೆಳಗೋಡು, ಕಳ್ಳಿರಾಂಪುರ ಮತ್ತು ಕಾಲಘಟ್ಟಗಳ ಗ್ರಾಮಗಳಿಂದ ಒಬ್ಬ ಪ್ರತಿನಿಧಿ ಆಯ್ಕೆಗೊಂಡಿದ್ದಾರೆ. ಇನ್ನೂ ಜಾತಿವಾರು ನೋಡಿದಾಗ, ಪರಿಶಿಷ್ಟ ಜಾತಿಯ ಶೇ.26.66 ಸದಸ್ಯರಲ್ಲಿ ಶೇ.50ರಷ್ಟು ಮಹಿಳಾ ಸದಸ್ಯರು, ಪರಿಶಿಷ್ಟ ಪಂಗಡದ ಶೇ.20 ಸದಸ್ಯರಲ್ಲಿ ಶೇ.33.33ರಷ್ಟು ಮಹಿಳಾ ಸದಸ್ಯರು, ಹಿಂದುಳಿದ ವರ್ಗದ ಶೇ.40 ಸದಸ್ಯರಲ್ಲಿ ಶೇ.50ರಷ್ಟು ಮಹಿಳೆಯರು ಮತ್ತು ಸಾಮಾನ್ಯ ವರ್ಗದ ಶೇ.13.33 ಸದಸ್ಯರಲ್ಲಿ ಶೇ.50ರಷ್ಟು ಮಹಿಳಾ ಸದಸ್ಯರು (ಪ.ಜಾತಿ) ಆಯ್ಕೆಗೊಂಡಿದ್ದಾರೆ(ನೋಡಿ ಕೋಷ್ಟಕ–3.11). ಗ್ರಾಮಪಂಚಾಯಿತಿಯಲ್ಲಿ ಪರಿಶಿಷ್ಟರು ಮತ್ತು ಹಿಂದುಳಿದ ವರ್ಗದ ಸದಸ್ಯರು ಅಧಿಕಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ವಿಶೇಷವಾಗಿ ಮಹಿಳಾ ಸದಸ್ಯರು ಮೇಲ್ವರ್ಗದ ಪುರುಷರ ಆಶಯಕ್ಕೆ ಮತ್ತು ಮರ್ಜಿಗೆ ಒಳಪಟ್ಟು ಆಯ್ಕೆಯಾಗಿದ್ದಾರೆ. ಗ್ರಾಮಪಂಚಾಯಿತಿ ಚುನಾವಣೆ ಪಕ್ಷರಹಿತ ಚುನಾವಣೆಯಾಗಿದ್ದರೂ, ಸ್ಥಳೀಯ ಶಾಸಕರ ಮರ್ಜಿಗೆ ಒಳಪಟ್ಟ ಬೆಂಬಲಿತ ಅಭ್ಯರ್ಥಿ ಅಧ್ಯಕ್ಷರಾಗಿ ಆಯ್ಕೆಯಾಗಿ ಅಧಿಕಾರ ಚುಕ್ಕಾಣಿ ಹಿಡಿದಿದ್ದಾರೆ.

ನಾಗೇನಹಳ್ಳಿ ಗ್ರಾಮಪಂಚಾಯಿತಿಯು ಹೊಸಪೇಟೆ ತಾಲೂಕುಪಂಚಾಯಿತಿಯ ಕ್ಷೇತ್ರವಾಗಿದೆ ಹಾಗೂ ಹಂಪಿ ಜಿಲ್ಲಾಪಂಚಾಯಿತಿ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ.

3.3.2 ಹೊಸೂರು ಗ್ರಾಮಪಂಚಾಯಿತಿ

ಚಾರಿತ್ರಿಕ ಹಿನ್ನೆಲೆ: ಪ್ರಸ್ತುತ ಅಧ್ಯಯನದ ಎರಡನೇ ಗ್ರಾಮಪಂಚಾಯಿತಿಯಾದ ಹೊಸೂರು, ವಿಜಯನಗರ ಆಳರಸರ ಆಡಳಿತಕ್ಕೆ ಒಳಪಟ್ಟ ಮತ್ತು ಅದೇ ಅವಧಿಯಲ್ಲೇ ಕಟ್ಟಲ್ಪಟ್ಟ ಹೊಸ ಊರು ಎಂದು ವಿಜಯನಗರ ಕಾಲದ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ತುಂಗಭದ್ರಾ ನದಿಯ ಬಲದಂಡೆಯ ಮೇಲೆ ಬರುವ ಹೊಸೂರು ಇಲ್ಲಿನ ಸ್ಥಳೀಯರು ಹೊನ್ನಿನ ಹೊಸೂರು ಎಂದು ತಿಳಿಸಿದ್ದಾರೆ.[28]

ಸಾಮಾನ್ಯವಾಗಿ ಹೊಸೂರು ಒಂದು ವ್ಯಾಪಾರಕೇಂದ್ರವಾಗಿರಬಹುದು. ಇಲ್ಲಿ ವಿಶೇಷವಾಗಿ ಹೊನ್ನು ಮಾರಾಟ ಮಾಡುತ್ತಿರಬಹುದೆಂದು ಗ್ರಹಿಸಲಾಗಿದೆ. ಹೀಗಾಗಿ ಈ ಊರನ್ನು ಹೊನ್ನಿನ ಹೊಸೂರು ಎಂದೂ, ಕಾಲಕ್ರಮೇಣವಾಗಿ ರೂಢಿಯಲ್ಲಿ ಹೊಸೂರು ಎಂದು ಪ್ರಚಲಿತದಲ್ಲಿ ಬಂದಿರುವ ಸಾಧ್ಯತೆ ಇದೆ.

ವಿಜಯನಗರ ಕಾಲದಲ್ಲಿ ಇದು ಒಂದು ಆಯಕಟ್ಟಿನ ಪ್ರದೇಶವಾಗಿತ್ತೆಂದು ಕಂಡುಬರುತ್ತದೆ. ತುಂಗಭದ್ರಾ ನದಿಯ ಎಡದಂಡೆ ಮೇಲೆ ಬಹಮನಿ ಸುಲ್ತಾನರ ರಾಜ್ಯವಿದ್ದು, ವೈರಿ ಸೈನ್ಯವು ಸುಲಭವಾಗಿ ಒಳನುಸುಳುವ ಅವಕಾಶವುಳ್ಳ ಸ್ಥಳವಾಗಿದೆ. ಬೀದಿಗಳ ಬದಿಯಲ್ಲಿ ಮುತ್ತುರತ್ನಗಳನ್ನು ಬಳ್ಳದಿಂದ ಮಾರಾಟ ಮಾಡುತ್ತಿದ್ದ ವಿಜಯನಗರ ಸಾಮ್ರಾಜ್ಯದಲ್ಲಿ ವ್ಯಾಪಾರಕ್ಕಾಗಿ ದೇಶ-ವಿದೇಶದಿಂದ ವ್ಯಾಪಾರಸ್ಥರು ಬಂದು ಹೋಗುತ್ತಿದ್ದುದು ಇತಿಹಾಸದಿಂದ ತಿಳಿದುಬರುತ್ತದೆ. ವಿಜಯನಗರ ಸಾಮ್ರಾಜ್ಯದ ಪಶ್ಚಿಮ ಕರಾವಳಿ ಪ್ರದೇಶ ತೀರದ ರೇವುಪಟ್ಟಣಕ್ಕೆ ತೆರಳಲು ವ್ಯಾಪಾರಸ್ಥರು ಹೊಸೂರು ಪ್ರದೇಶದ ಮೂಲಕವೇ ಹಾದು ಹೋಗಬೇಕಾಗಿತ್ತು. ವ್ಯಾಪಾರಕ್ಕಾಗಿ ಬಂದು ಹೋಗುವವರಿಗೆ ಮತ್ತು ನೆರೆ ಶತ್ರು ಸೈನ್ಯ ಒಳನುಸುಳದಂತೆ ರಕ್ಷಣೆಗೆ ವಿಜಯನಗರದ ಅರಸರು ಹೊಸೂರಿನಲ್ಲಿ ಕಾವಲುಪಡೆಯನ್ನು ಇಟ್ಟಿದ್ದರೆಂದು ಕ್ಷೇತ್ರ ಅಧ್ಯಯನದಿಂದ ತಿಳಿದುಬರುತ್ತದೆ. ಗೌರದಣ್ಣ ನಾಯಕನ ಮಗ ಬಸಪ್ಪ ಮತ್ತು ಮಾದಿನಾಯಕ ಇವರು ಈ ಕಾವಲುಪಡೆಯ ಅಥವಾ ಹೊಸೂರು ಗ್ರಾಮದ ಉಸ್ತುವಾರಿಯ ನಾಯಕರಾಗಿರಬಹದು. ಇವರ ಬಗ್ಗೆ ಹೊಸೂರು ಗ್ರಾಮದ ಈಶಾನ್ಯ ಭಾಗದಲ್ಲಿರುವ ಗ್ರಾಮದೇವತೆ ಹೊಸೂರಮ್ಮ ದೇವಾಲಯದಲ್ಲಿರುವ ಕ್ರಿ.ಶ. 1513ರ ಶಾಸನವು ಗೌರದಣ್ಣ ನಾಯಕನ ಮಗ ಬಸಪ್ಪನ ಬಗ್ಗೆ ಹೇಳಿದರೆ ಮತ್ತೊಂದು ಶಾಸನವು ಮಾದಿ ನಾಯಕನ ಬಗ್ಗೆ ತಿಳಿಸುತ್ತದೆ.[29] ಇವರು ಹೊಸೂರಮ್ಮ ದೇವಿಯ ಸೇವೆಗಾಗಿ ಅಗ್ರಹಾರವಾಗಿದ್ದ ಚಿತ್ತವಾಡ್ಗಿ ಬ್ರಾಹ್ಮಣರಿಗೆ ಈ ಪ್ರದೇಶದ ಕೆಲವು ಭೂಮಿಗಳನ್ನು ವೃತ್ತಿಗಾಗಿ ನೀಡಿದ ಬಗ್ಗೆ ಈ ಶಾಸನಗಳಲ್ಲಿ ಉಲ್ಲೇಖವಿದೆ. ಈಗಲೂ ಕೆಲವು ಬ್ರಾಹ್ಮಣ ಕುಟುಂಬದವರು ಹೊಸೂರು ಗ್ರಾಮದ ದೇವಾಯಲಗಳಿಗೆ ನೀಡಿದ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ತುಂಗಭದ್ರ ನದಿಗೆ ತಾಕಿಕೊಂಡಂತೆ ಹಳೆಯ ವಸತಿನೆಲೆ, ಪಾಳು ಬಿದ್ದ ದೇವಾಲಯಗಳು, ರಕ್ಷಣೆಗೋಡೆ(ಕೋಟೆ) ಕಾವಲುಗೋಪುರಗಳಾಗಿ ಬಳಸುತ್ತಿದ್ದ ಉಡೇವುಗಳು ಇತ್ಯಾದಿ ಅವಶೇಷಗಳು ಇಂದಿಗೂ ಕಂಡುಬರುತ್ತವೆ. ವಿಜಯನಗರ ಸ್ರಾಮಾಜ್ಯ ಪತನವಾದ ಮೇಲೆ ಈ ಗ್ರಾಮದಲ್ಲಿ ನೆಲೆಸಿದ್ದ ಜನರು ಶತ್ರುಸೈನ್ಯದ ದಾಳಿಯಿಂದ ಅಥವಾ ಸಾಂಕ್ರಾಮಿಕ ರೋಗಗಳಿಂದ ರಕ್ಷಣೆ ಪಡೆಯಲು ಹೊಸಪೇಟೆಗೆ ಬಂದು ನೆಲೆಸಿದರೆಂದು ತಿಳಿಸುತ್ತಾರೆ.[30] ವಿಜಯನಗರ ಕಾಲದಿಂದಲೂ ಹೊಸೂರು ಎಂದು ಕರೆಯಲ್ಪಡುವ ಈ ಗ್ರಾಮ ಮತ್ತು ಸುತ್ತಮುತ್ತಲಿನ ಪ್ರದೇಶವು ಕಾಲಾಂತರದಲ್ಲಿ ತುಂಗಭದ್ರಾ ಅಣೆಕಟ್ಟೆಯಿಂದ ನೀರಾವರಿ ಸೌಲಭ್ಯ ಪಡೆದ ಫಲವತ್ತಾದ ಕೃಷಿ ಪ್ರದೇಶವಾಗಿದೆ. ಕೃಷಿ ಚಟುವಟಿಕೆಯಲ್ಲಿ ತೊಡಗಿದ ಜನರು ಹೊಸಪೇಟೆಯಿಂದ ಬಂದು ಹೋಗಲು ಆಗುವ ಅನನುಕೂಲಗಳಿಂದ ಅಂದಿನ ಗ್ರಾಮದ ಮೂಲ ನೆಲೆಯಲ್ಲೇ ನೆಲೆಸಿದ್ದರಿಂದ ಹೊಸೂರು ಗ್ರಾಮ ಮರುಹುಟ್ಟು ಪಡೆದಿದೆ.

ಭೌಗೋಳಿಕ ಹಿನ್ನೆಲೆ: ಹೊಸಪೇಟೆ ತಾಲೂಕುಕೇಂದ್ರದಿಂದ 5 ಕಿ.ಮೀ ದೂರದಲ್ಲಿರುವ ಹೊಸೂರು ಗ್ರಾಮಪಂಚಾಯಿತಿಯು ಜಿಲ್ಲಾಕೇಂದ್ರಕ್ಕೆ 65 ಕಿ.ಮೀ ದೂರದಲ್ಲಿದೆ. ತಾಲೂಕು ಕೇಂದ್ರದ ವಾಯುವ್ಯ ದಿಕ್ಕಿನಲ್ಲಿರುವ ಹೊಸೂರು ಗ್ರಾಮಪಂಚಾಯಿತಿಯು ತುಂಗಭದ್ರಾ ಅಣೆಕಟ್ಟು ಮುಂಭಾಗದಲ್ಲಿ ಹಾಗೂ ನದಿಯ ಬಲದಂಡೆಗೆ ತಾಕಿಕೊಂಡಿದೆ. ಹೊಸೂರು ಗ್ರಾಮಪಂಚಾಯಿತಿಯು 2,264 ಹೆಕ್ಟೇರ್ ಭೂಪ್ರದೇಶವನ್ನು ಹೊಂದಿದೆ. ಅರಣ್ಯ, ಬೆಟ್ಟಗುಡ್ಡಗಳಿಲ್ಲದ ಸಂಪೂರ್ಣವಾಗಿ ನೀರಾವರಿ ಸೌಲಭ್ಯ ಪಡೆದ ಸಮತಟ್ಟಾದ ಫಲವತ್ತಾದ ಭೂಪ್ರದೇಶವಾಗಿದೆ. ನಾಗೇನಹಳ್ಳಿ ಗ್ರಾಮಪಂಚಾಯಿತಿಯಂತೆಯೇ ಹೊಸೂರು ಗ್ರಾಮಪಂಚಾಯಿತಿ ಹೊಸಪೇಟೆ(ಚಿತ್ತವಾಡ್ಗಿ) ನಗರಕ್ಕೆ ಹೊಂದಿಕೊಂಡಿದ್ದರೂ ತುಂಗಭದ್ರಾ ಜಲಾಶಯದಿಂದ ಹರಿಯುವ ಪವರ್(ಮಧ್ಯ) ಕಾಲುವೆಯಿಂದ ಬೇರ್ಪಟ್ಟಿದೆ.

ಹೊಸೂರು ಗ್ರಾಮಪಂಚಾಯಿತಿ ಪೂರ್ವದಲ್ಲಿ ನಾಗೇನಹಳ್ಳಿ ಗ್ರಾಮಪಂಚಾಯಿತಿಯ ಕಳ್ಳಿರಾಂಪುರ ಮತ್ತು ಬೆಳಗೋಡು ಗ್ರಾಮಗಳು, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ತುಂಗಭದ್ರಾ ನದಿ, ದಕ್ಷಿಣಕ್ಕೆ ಟಿ.ಬಿ. ಡ್ಯಾಂ ಕ್ಯಾಂಪ್, ಈಶಾನ್ಯಕ್ಕೆ ಹಂಪಿ ಗ್ರಾಮಪಂಚಾಯಿತಿಯ ನರಸಾಪುರ ಗ್ರಾಮ, ಆಗ್ನೇಯಕ್ಕೆ ಚಿತ್ತವಾಡ್ಗಿ, ನೈರುತ್ಯಕ್ಕೆ ತುಂಗಭದ್ರಾ ಅಣೆಕಟ್ಟು ಮತ್ತು ವಾಯವ್ಯಕ್ಕೆ ಕೊಪ್ಪಳ ಜಿಲ್ಲೆಯ ಮುನಿರಾಬಾದ್ (ಹುಲಗಿ) ಇದೆ. ಹೊಸೂರು ಗ್ರಾಮದ ಸುತ್ತ ಮುತ್ತಲಿನ ಕೃಷಿಭೂಮಿಗಳಿಗೆ ಹೋಗುವ ದಾರಿ ಮತ್ತು ಕಾಲುವೆ ದಂಡೆ ಮೇಲೆ ಅಲ್ಲಲ್ಲಿ ಕೃಷಿಕರು ನೆಲೆಸಿದ್ದಾರೆ. ಈ ಎಲ್ಲಾ ವಸತಿ ನೆಲೆಗಳನ್ನು ಒಂದುಗೂಡಿಸಿ, ಹೊಸೂರು 'ಬಿ' ಎಂದು ಸರ್ಕಾರಿ ದಾಖಲೆಗಳಲ್ಲಿ ಕರೆದು ಹೊಸೂರು ಗ್ರಾಮಕ್ಕೆ ಸೇರಿಸಲಾಗಿದೆ. ಸರ್ಕಾರಿ ದಾಖಲೆಗಳ ಪ್ರಕಾರ, ಹೊಸೂರು 'ಬಿ' ಗ್ರಾಮಕ್ಕೆ ಎರೇಬೈಲು, ಹಿಪ್ಪೇತೇರಿ, ಹಾನಗಲ್ ಗ್ರಾಮಗಳು ಮತ್ತು ಬಾಣದರ ನೆಟ್ಟು, ಬಾವಿಕಟ್ಟೆಯರ ನೆಟ್ಟು, ಕಿಚಿಡಿಯರ ನೆಟ್ಟು, ಕಲ್ಲುಡಿಯರ ನೆಟ್ಟು, ಪಂಪಾಪತಿ ನೆಟ್ಟು ಮತ್ತು ಸಣ್ಣಕ್ಕಿಯರ ನೆಟ್ಟು ಎಂಬ ವಸತಿ ನೆಲೆಗಳು ಸೇರಿವೆ. ಹೊಸೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಹೊಸೂರು ದೊಡ್ಡ ಗ್ರಾಮವಾಗಿದೆ. ಹೊಸೂರು 'ಬಿ' ಗ್ರಾಮಕ್ಕೆ ಸೇರ್ಪಟ್ಟಿರುವ ಬಹುತೇಕ ಗ್ರಾಮಗಳು/ವಸತಿ ನೆಲೆಗಳು ಹೊಸೂರು ಗ್ರಾಮದ ಪಶ್ಚಿಮ ನೈರುತ್ಯ ಭಾಗದಲ್ಲಿರುವ ತುಂಗಭದ್ರಾ ನದಿಯಲ್ಲೇ ಹುಟ್ಟಿ ಪೂರ್ವಾಭಿಮುಖವಾಗಿ ಹರಿಯುವ ಬೆಲ್ಲದ ಕಾಲುವೆ ಉದ್ದಕ್ಕೂ ಎಡ-ಬಲ ದಂಡೆಗಳ ಮೇಲೆ ಕಂಡುಬರುತ್ತದೆ. ತುಂಗಭದ್ರ ನದಿ ಹಾಗೂ ಜಲಾಶಯದಿಂದ ಹರಿಯುವ ಕಾಲುವೆಗಳಿಂದ ಸುತ್ತುವರಿಯಲ್ಪಟ್ಟ ಹೊಸೂರು ಗ್ರಾಮಪಂಚಾಯಿತಿಯು ಸಂಪೂರ್ಣವಾಗಿ ನೀರಾವರಿ ಪ್ರದೇಶವಾಗಿದೆ. ಇಲ್ಲಿಯ ಶೇ.98ಕ್ಕೂ ಹೆಚ್ಚು ಜನರು ಕೃಷಿಯನ್ನೇ ಅವಲಂಬಿಸಿದವರಾಗಿದ್ದಾರೆ. ಗ್ರಾಮದ ಪಶ್ಚಿಮ ನೈರುತ್ಯದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿಯುವ ಬೆಲ್ಲದ ಕಾಲುವೆ ಹಾಗೂ ಗ್ರಾಮದ ದಕ್ಷಿಣ ಭಾಗದಲ್ಲಿ ತುಂಗಭದ್ರಾ ಜಲಾಶಯದಿಂದ ಪೂರ್ವಾಭಿಮುಖವಾಗಿ ಹರಿಯುವ ರಾಯ ಕಾಲುವೆಗಳು ವರ್ಷದ 10-11 ತಿಂಗಳು ತುಂಬಿ ಹರಿಯುತ್ತವೆ. ಈ ಎರಡು ಕಾಲುವೆಗಳು ಹೊಸೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೃಷಿಭೂಮಿಗೆ ಸಂಪೂರ್ಣವಾಗಿ ನೀರುಣಿಸುತ್ತವೆ. ಇಲ್ಲಿಯ ಬಹುತೇಕ ಪ್ರದೇಶವು ಕಪ್ಪುಮಣ್ಣು ಹಾಗೂ ಮರಳು ಮಿಶ್ರಿತ ಕಪ್ಪುಮಣ್ಣಿನಿಂದ ಕೂಡಿದ ಫಲವತ್ತಾದ ಹಾಗೂ ಸಮತಟ್ಟಾದ

ಭೂಪ್ರದೇಶವಾಗಿದೆ. ಇಲ್ಲಿನ ರೈತರು ಮುಖ್ಯ ಬೆಳೆಯಾಗಿ ಶೇ.90ರಷ್ಟು ಕಬ್ಬನ್ನು ಬೆಳೆಯುತ್ತಾರೆ. ಉಳಿದಂತೆ ಬಾಳೆ ಮತ್ತು ಭತ್ತವನ್ನು ಬೆಳೆಯುತ್ತಾರೆ. ಭತ್ತವನ್ನು ಬೆಳೆ ಬದಲಾವಣೆ ಮಾಡಲು ಹಾಗೂ ಕುಟುಂಬದ ಆಹಾರ ಭದ್ರತೆಯಿಂದಲೂ ಬೆಳೆಯುತ್ತಾರೆ. ಸಂಪೂರ್ಣ ನೀರಾವರಿ ಪ್ರದೇಶವಾಗಿದ್ದರೂ, ಜಿಲ್ಲೆಯ ಹವಾಮಾನದಂತೆ ಬಿಸಿಲು ಹೆಚ್ಚು ಇದೆ.

ಸಾಮಾಜಿಕ ಹಿನ್ನೆಲೆ: 2010ರ ಕುಟುಂಬ ಗಣತಿ ಪ್ರಕಾರ ಹೊಸೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 860 ಕುಟುಂಬಗಳು ಇವೆ. ಈ ಪಂಚಾಯಿತಿಯಲ್ಲಿ ಹೊಸೂರು ದೊಡ್ಡ ಗ್ರಾಮವಾಗಿದ್ದು, ಒಟ್ಟು 361 ಕುಟುಂಬಗಳು ಇವೆ. ಹೊಸೂರು 'ಬಿ' ಗ್ರಾಮದ ವ್ಯಾಪ್ತಿಯಲ್ಲಿ ಎಲ್ಲಾ ವಸತಿ ನೆಲೆಗಳನ್ನು ಪ್ರಮುಖವಾಗಿ ಮೂರು ಗ್ರಾಮಗಳನ್ನಾಗಿ ವರ್ಗೀಕರಿಸಿ, ಗಣತಿ ಮಾಡಲಾಗಿದೆ. 2010ರ ಗಣತಿ ಪ್ರಕಾರ ಹಾನಗಲ್ಲು 139, ಇಪ್ಪೀತೇರಿ 264 ಹಾಗೂ ಎರೇಬೈಲು 96 ಕುಟುಂಬಗಳು ಬರುತ್ತವೆ.[31] ಹೊಸೂರು ಮತ್ತು ಹೊಸೂರು 'ಬಿ' ಗ್ರಾಮಗಳಲ್ಲಿ ವಾಸಿಸುವ ಬಹುತೇಕರು(ಶೇ.99ಕ್ಕಿಂತ ಹೆಚ್ಚು) ಕುಟುಂಬಗಳು ಮೂಲತಃ ಹೊಸಪೇಟೆಯವರೇ ಆಗಿದ್ದಾರೆ. ಇದರಲ್ಲಿ ಶೇ.75ಕ್ಕಿಂತ ಹೆಚ್ಚು ಕುಟುಂಬಗಳು ನಾಯಕ(ಪರಿಶಿಷ್ಟ ಪಂಗಡ) ಕುಟುಂಬಗಳು ಇವೆ. ಹೊಸೂರು 'ಬಿ' ಗ್ರಾಮದಲ್ಲಿ ಬರುವ ಕುಟುಂಬ ಅಥವಾ ಮನೆಗಳು ಬೆಲ್ಲದ ಕಾಲುವೆಯ ಉದ್ದಕ್ಕೂ ಎಡ-ಬಲ ದಂಡೆಯ ಮೇಲೆ, ಹೊಸಪೇಟೆಯಿಂದ ಇಪ್ಪೀತೇರಿ ಗ್ರಾಮಕ್ಕೆ ಸಂಪರ್ಕ ರಸ್ತೆಯ ಅಕ್ಕ ಪಕ್ಕ ಮತ್ತು ಕೆಲವರು ಅವರವರ ಗದ್ದೆಯ ಹಾಸುಪಾಸಿನಲ್ಲಿ ಕಂಡುಬರುತ್ತವೆ. ಹೊಸೂರು 'ಬಿ' ಗ್ರಾಮದಲ್ಲಿ ಬರುವ ವಸತಿ ನೆಲೆಗಳು/ಗ್ರಾಮಗಳನ್ನು ಸ್ಥಳೀಯರು ಜನಪ್ರಿಯವಾಗಿ 'ಮಾಗಾಣಿ' ಎಂದೇ ಕರೆಯುತ್ತಾರೆ. ಈ ಗ್ರಾಮದಲ್ಲಿ ಕಾಲುವೆ ದಂಡೆ ಮೇಲೆ ಹಾಗೂ ರಸ್ತೆಯ ಅಕ್ಕ ಪಕ್ಕದಲ್ಲಿ ಜನರು ಕಟ್ಟಿಕೊಂಡಿರುವ ಮನೆಗಳು ಅನಧಿಕೃತವಾಗಿವೆ. ಇಲ್ಲಿ ವಾಸಿಸುವ ಬಹುತೇಕ ಕುಟುಂಬಗಳು ಹೊಸಪೇಟೆಯಲ್ಲಿ ವಸತಿ ಕಟ್ಟಡಗಳನ್ನು ಹೊಂದಿವೆ. ಕುಟುಂಬದಲ್ಲಿ ಹೆಚ್ಚಾದ ಜನಸಂಖ್ಯೆ ಅಥವಾ ನಿರಂತರ ಕೃಷಿ ಚಟುವಟಿಕೆಗಳ ಅನುಕೂಲತೆಗಾಗಿ ಕುಟುಂಬದ ಕೆಲವು ಸದಸ್ಯರು ಇಲ್ಲೇ ಶಾಶ್ವತವಾಗಿ ನೆಲೆಸಿದ್ದಾರೆ. ಸಂಪೂರ್ಣ ನೀರಾವರಿ ಪ್ರದೇಶವಾಗಿದ್ದು ಕೃಷಿ ಚಟುವಟಿಕೆ ವಿಸ್ತಿರಿಸಿದ್ದರಿಂದ ಇಲ್ಲಿ ನೆಲೆಸಿದವರಿಗೆ ವಸತಿ ಕಟ್ಟಡಗಳಿಗಾಗಿ ನಿರ್ದಿಷ್ಟ ಹಾಗೂ ಸುವ್ಯವಸ್ಥಿತ ಪ್ರದೇಶ ಸಿಗದಂತಾಗಿದೆ. ಆದ್ದರಿಂದ ಇಲ್ಲಿನ ಜನರು ಮೂಲಭೂತ ಸೌಲಭ್ಯಗಳ ಕೊರತೆಗಳನ್ನು ಎದುರಿಸುವ ಹಾಗೂ ಪಂಚಾಯಿತಿಯಿಂದ ಲಭಿಸುವ ಕೆಲವು ಸೌಲಭ್ಯಗಳನ್ನು ಪಡೆಯಲಾರದ ಸ್ಥಿತಿಯಲ್ಲಿದ್ದಾರೆ.

2011ರ ಜನಗಣತಿ ಪ್ರಕಾರ, ಹೊಸೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ 4,391 ಜನಸಂಖ್ಯೆ ಇದ್ದು, ಇದರಲ್ಲಿ 2,173(ಶೇ.49.49) ಪುರುಷ, 2,217(ಶೇ.50.49) ಮಹಿಳೆಯರು ಮತ್ತು 1(ಶೇ.0.02) ಇತರರು ಇದ್ದಾರೆ. ಹೊಸೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿ 1,000 ಪುರುಷರಿಗೆ 1020ರಷ್ಟು ಮಹಿಳೆಯರು ಇದ್ದು, ಲಿಂಗಾನುಪಾತವು ಜಿಲ್ಲೆ ಮತ್ತು ತಾಲೂಕಿಗಿಂತ ಕ್ರಮವಾಗಿ ಶೇ.42 ಮತ್ತು ಶೇ.23ರಷ್ಟು ಅಧಿಕವಾಗಿದೆ(ನೋಡಿ ಕೋಷ್ಟಕ-3.2). ಹೊಸೂರು ಗ್ರಾಮಪಂಚಾಯಿತಿಯನ್ನು ಸಾಮಾಜಿಕವಾಗಿ ನೋಡಿದಾಗ ಶೇ.75ಕ್ಕಿಂತ ಹೆಚ್ಚು ವಾಲ್ಮೀಕಿ(ನಾಯಕ) ಜಾತಿಯವರಾಗಿದ್ದು,

ಉಳಿದವರಲ್ಲಿ ಕ್ರಮವಾಗಿ ಹರಿಜನ, ಮುಸ್ಲಿಂ, ಲಿಂಗಾಯತ, ಶೆಟ್ಟಿ ಮತ್ತು ಬ್ರಾಹ್ಮಣ ಜಾತಿ ಜನಾಂಗದವರು ಮುಖ್ಯವಾಗಿ ಕಂಡುಬರುತ್ತಾರೆ. ಶೆಟ್ಟಿ ಮತ್ತು ಬ್ರಾಹ್ಮಣ ಜಾತಿಯ ಒಂದೆರಡು ಕುಟುಂಬಗಳು ಮಾತ್ರ ಇವೆ. ಬಹುಸಂಖ್ಯಾತರಾದ ನಾಯಕ ಸಮುದಾಯವು ರಾಜಕೀಯ ನಾಯಕತ್ವದ ಕೊರತೆಯನ್ನು ಎದುರಿಸುತ್ತಿದೆ.

2011ರ ಜನಗಣತಿ ಪ್ರಕಾರ, ಹೊಸೂರು ಗ್ರಾಮಪಂಚಾಯಿತಿ ಪ್ರದೇಶದಲ್ಲಿ ಸಾಕ್ಷರತೆ ಪ್ರಮಾಣವು ಶೇ.61.07ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣದಲ್ಲಿ ಶೇ.69.67ರಷ್ಟು ಮತ್ತು ಮಹಿಳಾ ಸಾಕ್ಷರತೆ ಪ್ರಮಾಣದಲ್ಲಿ ಶೇ.53.27ರಷ್ಟಿದೆ. ತಾಲೂಕಿನ ಸಾಕ್ಷರತೆ ಪ್ರಮಾಣಕ್ಕೆ ಹೋಲಿಸಿದರೆ ಒಟ್ಟು ಸಾಕ್ಷರತೆ ಪ್ರಮಾಣದಲ್ಲಿ ಶೇ.13.94ರಷ್ಟು, ಪುರುಷರ ಸಾಕ್ಷರತೆ ಪ್ರಮಾಣದಲ್ಲಿ ಶೇ.13.18ರಷ್ಟು ಮತ್ತು ಮಹಿಳಾ ಸಾಕ್ಷರತೆ ಪ್ರಮಾಣದಲ್ಲಿ ಶೇ.14.53ರಷ್ಟು ಕಡಿಮೆ ಇದೆ. ಸಾಕ್ಷರತೆಯ ಬೆಳವಣಿಗೆಯಲ್ಲಿ ತಾಲೂಕಿನಲ್ಲೇ ಹೊಸೂರು ಅತ್ಯಂತ ಹಿಂದುಳಿದ ಗ್ರಾಮಪಂಚಾಯಿತಿಯಾಗಿದೆ.

ಆರ್ಥಿಕ ಹಿನ್ನೆಲೆ: ಹೊಸೂರು ಗ್ರಾಮಪಂಚಾಯಿತಿ ಶೇ.100ರಷ್ಟು ಸಮತಟ್ಟಾದ, ಫಲವತ್ತಾದ ಮತ್ತು ಸಂಪೂರ್ಣ ನೀರಾವರಿ ಕೃಷಿಪ್ರದೇಶವಾಗಿದೆ. ಇಲ್ಲಿ ನೆಲೆಸಿರುವ ಬಹುತೇಕ ಕುಟುಂಬಗಳಿಗೆ ಅಲ್ಪ ಸ್ವಲ್ಪ ಜಮೀನು ಇದೆ. ಹೆಚ್ಚು ಭೂಮಿ ಹೊಂದಿರುವ ಹಾಗೂ ಆರ್ಥಿಕವಾಗಿ ಮೇಲ್ಮಟ್ಟದಲ್ಲಿರುವ ಹತ್ತಾರು ಕುಟುಂಬಗಳು ನಾಯಕ, ಲಿಂಗಾಯತ ಮತ್ತು ಮುಸ್ಲಿಂ ಸಮುದಾಯದಲ್ಲಿವೆ. ಇಲ್ಲಿನ ಬಹುತೇಕ ಜನರು ಕೃಷಿಜೀವನವನ್ನೇ ಅವಲಂಬಿಸಿದ್ದಾರೆ. ಇಲ್ಲಿ ಮುಖ್ಯವಾಗಿ ವಾಣಿಜ್ಯ ಬೆಳೆಯಾದ ಕಬ್ಬನ್ನು ಬೆಳೆಯುತ್ತಾರೆ. ಆರ್ಥಿಕ ವಹಿವಾಟು ಉತ್ತಮವಾಗಿದೆ. ಆದರೆ ಪರಿಶಿಷ್ಟರು ಆರ್ಥಿಕವಾಗಿ ಕೆಳಮಟ್ಟದಲ್ಲಿದ್ದಾರೆ. ಇತ್ತೀಚೆಗೆ ಶಾಲಾ ಕಾಲೇಜು ಶಿಕ್ಷಣ ಪಡೆದ ಯುವಕರು ದ್ವಿತೀಯ ವಲಯ ಕೆಲಸಗಳನ್ನು ಅರಸಿಕೊಂಡು ಹೊಸಪೇಟೆ ನಗರಕ್ಕೆ ಹೋಗುತ್ತಿದ್ದಾರೆ.

ರಾಜಕೀಯ ಹಿನ್ನೆಲೆ: ರಾಜ್ಯದಲ್ಲಿ 1993ರ ಪಂಚಾಯತ್‌ರಾಜ್ ಅಧಿನಿಯಮ ಜಾರಿಗೆ ಬರುವ ಮೊದಲು ಹೊಸೂರು ಹೊಸಪೇಟೆ ಅಮರಾವತಿ ಪಟ್ಟಣ ಪಂಚಾಯಿತಿಗೆ ಸೇರಿತ್ತು. 74ನೇ ತಿದ್ದುಪಡಿ ಪ್ರಕಾರ, ಹೊಸೂರು ಅಮರಾವತಿ ಪಟ್ಟಣ ಪಂಚಾಯಿತಿಯಿಂದ ಬೇರ್ಪಟ್ಟು, ಸ್ವತಂತ್ರ ಗ್ರಾಮಪಂಚಾಯಿತಿಯಾಗಿ ತಡವಾಗಿ ಅಸ್ತಿತ್ವಕ್ಕೆ ಬಂತು. 1993ರ ಪಂಚಾಯತ್‌ರಾಜ್ ಅಧಿನಿಯಮದ ಅನ್ವಯ, ಹೊಸೂರು ಗ್ರಾಮಪಂಚಾಯಿತಿ ಮೊದಲ ಬಾರಿ ಅಸ್ತಿತ್ವಕ್ಕೆ ಬಂದಿದೆ. ತಾಲೂಕಿನ ಆಡಳಿತಾಧಿಕಾರಿಗಳು ಹೊಸೂರು ಗ್ರಾಮದ ಜಾತಿ ಮತ್ತು ರಾಜಕೀಯ ಮುಖಂಡರೊಡನೆ ಸಮಾಲೋಚಿಸಿ, ಚುನಾವಣೆ ನಡೆಸದೇ 7 ಜನ ಸದಸ್ಯರನ್ನು ಆಯ್ಕೆ ಮಾಡುವುದರ ಮೂಲಕ ಗ್ರಾಮಪಂಚಾಯಿತಿಯನ್ನು ರಚನೆ ಮಾಡಲಾಗಿದೆ.

2010ರಲ್ಲಿ ನಡೆದ ಗ್ರಾಮಪಂಚಾಯಿತಿ ಚುನಾವಣೆಯು ಮಹಿಳೆಯರಿಗೆ ನೀಡಿದ 33.33ರಷ್ಟು ಮೀಸಲಾತಿ ನೀತಿಗೆ ಒಳಪಟ್ಟು ಜರುಗಿದೆ. ಪ್ರಸ್ತುತ ಹೊಸೂರು ಗ್ರಾಮಪಂಚಾಯಿತಿ 10 ಸದಸ್ಯರನ್ನು ಒಳಗೊಂಡಿದೆ. ಈ ಸದಸ್ಯರ ಲಿಂಗವಾರು ವಿವರಣೆ ನೋಡಿದಾಗ ಪುರುಷರು ಮತ್ತು ಮಹಿಳೆಯರು ಕ್ರಮವಾಗಿ ಶೇ.50ರಷ್ಟು ಸಮಾನ ಪ್ರಾತಿನಿಧ್ಯ ಹೊಂದಿದ್ದಾರೆ. ಗ್ರಾಮಪಂಚಾಯಿತಿ ಪ್ರಾತಿನಿಧ್ಯವನ್ನು

ಗ್ರಾಮವಾರು ನೋಡಿದಾಗ 4 ಸದಸ್ಯರು ಹೊಸೂರಿನಿಂದ, 2 ಸದಸ್ಯರು ಎರೇಬೈಲುನಿಂದ, 3 ಸದಸ್ಯರು ಇಪ್ಪಿತೇರಿಯಿಂದ ಮತ್ತು ಒಬ್ಬ ಸದಸ್ಯರು ಹಾನಗಲ್ಲುನಿಂದ ಚುನಾಯಿತರಾಗಿದ್ದಾರೆ. ಜಾತಿವಾರು ಪ್ರಾತಿನಿಧ್ಯ ನೋಡಿದಾಗ, ಪರಿಶಿಷ್ಟ ಜಾತಿಯಲ್ಲಿ ಶೇ.10ರಷ್ಟು ಮಹಿಳೆಯರು, ಪರಿಶಿಷ್ಟ ಪಂಗಡದ ಶೇ.80 ಸದಸ್ಯರಲ್ಲಿ ಶೇ.62.5ರಷ್ಟು ಪುರುಷ ಮತ್ತು ಶೇ.37.5 ಮಹಿಳೆಯರು ಹಾಗೂ ಹಿಂದುಳಿದ ವರ್ಗದಲ್ಲಿ ಶೇ.10 ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ(ನೋಡಿ ಕೋಷ್ಟಕ–3.11). ಪರಿಶಿಷ್ಟ ಪಂಗಡದವರೇ ಹೆಚ್ಚು ಇರುವ ಈ ಪಂಚಾಯಿತಿಯಲ್ಲಿ ಮಹಿಳೆಯರು ಪುರುಷರು ಅಥವಾ ಗ್ರಾಮದ ಮುಖಂಡರ ಒತ್ತಾಯಕ್ಕೆ ಅಥವಾ ಓಲೈಕೆಗೆ ಮಣಿದು ಪ್ರತಿನಿಧಿಸಿದ್ದಾರೆಯೇ ಹೊರತು ಸ್ವಇಚ್ಛೆಯಿಂದಲ್ಲ ಎಂಬುದು ಕಂಡುಬರುತ್ತದೆ. ಈ ಪಂಚಾಯಿತಿಯ ಸದಸ್ಯರು ಸ್ಥಳೀಯ ಶಾಸಕರ ಮರ್ಜಿಗೆ ಒಳಪಟ್ಟಿರುವುದು ಕಂಡುಬರುತ್ತದೆ.

ಹೊಸೂರು ಗ್ರಾಮಪಂಚಾಯಿತಿಯು ಮತದಾರರು ತಾಲೂಕುಪಂಚಾಯಿತಿ ಕ್ಷೇತ್ರವಾದ ನಾಗೇನಹಳ್ಳಿ ಕ್ಷೇತ್ರಕ್ಕೆ ಹಾಗೂ ಹಂಪಿ ಜಿಲ್ಲಾಪಂಚಾಯಿತಿ ಕ್ಷೇತ್ರಕ್ಕೆ ಸ್ಪರ್ಧಿಸುವ ಮತ್ತು ಚುನಾಯಿಸುವ ಹಕ್ಕು ಪಡೆದಿದ್ದಾರೆ.

3.4 ಉತ್ತರ ಕನ್ನಡ ಜಿಲ್ಲೆ

ಚಾರಿತ್ರಿಕ ಹಿನ್ನೆಲೆ: ಕರ್ನಾಟಕದ ಮೊದಲ ಸಾಮ್ರಾಜ್ಯವೆಂದೇ ಪ್ರಖ್ಯಾತಿ ಪಡೆದ ಕದಂಬ ಅರಸರ ಕಾಲದಿಂದಲೂ ಹೆಸರುವಾಸಿಯಾಗಿರುವ ಉತ್ತರ ಕನ್ನಡ ಜಿಲ್ಲೆ ರಾಜ್ಯದ ಪಶ್ಚಿಮ ಭಾಗದಲ್ಲಿದೆ. ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಪ್ರದೇಶವು ಪಶ್ಚಿಮ ಕಡಲ ತೀರದಲ್ಲಿ ಹಾಗೂ ಸಹ್ಯಾದ್ರಿ ಬೆಟ್ಟಗಳ ಶ್ರೇಣಿಗಳಲ್ಲಿ ವಿಸ್ತರಿಸಿಕೊಂಡಿದೆ. ಸಮೃದ್ಧವಾದ ನೈಸರ್ಗಿಕ ಸಂಪನ್ಮೂಲಗಳನ್ನು ಹಾಗೂ ಜಲಪಾತಗಳನ್ನು ತನ್ನೊಡಲಲ್ಲಿಟ್ಟುಕೊಂಡಿರುವ ಉತ್ತರ ಕನ್ನಡ ಜಿಲ್ಲೆ ಪ್ರಾಚೀನ ಕಾಲದಿಂದಲೂ ಧಾರ್ಮಿಕ ಮತ್ತು ವಾಣಿಜ್ಯ ಬಂದರುಗಳ ಪ್ರದೇಶವಾಗಿತ್ತೆಂದು ಐತಿಹಾಸಿಕವಾಗಿ ಕಂಡುಬರುತ್ತದೆ. ಇಂತಹ ಸಂಪದ್ಭರಿತವಾದ ಬಂದರು ಪ್ರದೇಶವನ್ನು ರಾಜ್ಯದ ರಕ್ಷಣೆ, ವ್ಯಾಪಾರ ಮತ್ತು ಆರ್ಥಿಕ ಅಭಿವೃದ್ಧಿಯ ಉದ್ದೇಶದಿಂದ ಶಾತವಾಹನರು, ಪಲ್ಲವರು, ಕದಂಬರು, ಬಾದಾಮಿ ಚಾಳುಕ್ಯರು, ಹೊಯ್ಸಳರು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ನಂತರ ವಿಜಯನಗರ ಅರಸರ ನೇರ ಆಡಳಿತಕ್ಕೆ ಒಳಪಟ್ಟ ಉತ್ತರ ಕನ್ನಡ ಜಿಲ್ಲಾ ಪ್ರದೇಶವು 1565ರಲ್ಲಿ ಈ ಸಾಮ್ರಾಜ್ಯ ಪತನವಾದ ಮೇಲೆ ವಿಜಾಪುರ ಮತ್ತು ಬಹಮನಿ ಸುಲ್ತಾನರು, ಪೋರ್ಚುಗೀಸರು ಮತ್ತು ಮರಾಠರು ಪೈಪೋಟಿ ಮೇಲೆ ಆಕ್ರಮಣ ಮಾಡಿ ಈ ಪ್ರದೇಶವನ್ನು ವಶದಲ್ಲಿಟ್ಟುಕೊಂಡಿದ್ದರು. ಇವರ ಮಧ್ಯೆ ಸ್ಥಳೀಯವಾಗಿ ಹಾಡುವಳ್ಳಿ ಸಾಳುವರು, ಕೆಳದಿ ಅರಸರು, ಸೋಂದೆ ಅರಸರು, ಬೀಳಗಿ ಅರಸರು ಮತ್ತು ಇಕ್ಕೇರಿಯ ಅರಸರು ಈ ಪ್ರದೇಶದ ಮೇಲಿನ ಅಧಿಕಾರಕ್ಕಾಗಿ ಹೋರಾಟ ಮಾಡಿದರು.[32] ಇಕ್ಕೇರಿಯ ಅರಸನನ್ನು ಸೋಲಿಸಿ ಭಟ್ಕಳವನ್ನು ನಂತರ ಕಾರವಾರವನ್ನು ವಶಪಡಿಸಿಕೊಂಡ ಹೈದರಾಲಿ ಮತ್ತು ಈತನ ಮಗ ಟಿಪ್ಪುಸುಲ್ತಾನನು 1762ರಿಂದ 1799ರವರೆಗೆ ಉತ್ತರ ಕನ್ನಡ ಜಿಲ್ಲೆಯನ್ನು ನೇರವಾಗಿ ತಮ್ಮ ಆಡಳಿತದ ವಶಕ್ಕೆ ತೆಗೆದುಕೊಂಡರು. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪುಸುಲ್ತಾನ್ ಸೋತು ಹತನಾದ

ಮೇಲೆ ಉತ್ತರ ಕನ್ನಡ ಜಿಲ್ಲೆ ಬ್ರಿಟಿಷರ ವಶವಾಯಿತು. 1799ರಲ್ಲಿ ಬ್ರಿಟಿಷರ ವಶವಾದ ಉತ್ತರ ಕನ್ನಡ ಜಿಲ್ಲೆ ಅಖಂಡ ಕೆನರಾ ಜಿಲ್ಲೆಯ ಭಾಗವಾಗಿ ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟಿತು.[33] ವಿಸ್ತಾರವಾದ ಕಡಲುತೀರವನ್ನು ಹೊಂದಿದ ಕೆನರಾ ಜಿಲ್ಲೆಯು ಬ್ರಿಟಿಷರ ಆಡಳಿತಾವಧಿಯಲ್ಲಿ ಅವರು ತಮ್ಮ ತಾಯ್ನಾಡಿನ ಜೊತೆಗೆ ವ್ಯಾಪಾರ ವಹಿವಾಟು ಮಾಡುವ ಮುಖ್ಯ ಬಂದರು ಪ್ರದೇಶವಾಗಿತ್ತು. 1862ರಲ್ಲಿ ಬ್ರಿಟಿಷರು ತಮ್ಮ ಆಡಳಿತದ ಅನುಕೂಲತೆಗಾಗಿ ಅಖಂಡ ಕೆನರಾ ಜಿಲ್ಲೆಯನ್ನು ಉತ್ತರ ಕೆನರಾ ಮತ್ತು ದಕ್ಷಿಣ ಕೆನರಾ ಜಿಲ್ಲೆಗಳನ್ನಾಗಿ ವಿಭಾಗಿಸಿದರು. ಉತ್ತರ ಕೆನರಾವನ್ನು ಮುಂಬೈ ಪ್ರಾಂತ್ಯಕ್ಕೂ ಹಾಗೂ ದಕ್ಷಿಣ ಕೆನರಾವನ್ನು ಮದ್ರಾಸ್ ಪ್ರಾಂತ್ಯಕ್ಕೂ ಸೇರಿಸಲಾಯಿತು.[34] ಉತ್ತರ ಕನ್ನಡ ಜಿಲ್ಲೆಯ ಜನರು ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಈ ಜಿಲ್ಲೆಯಲ್ಲಿ ಮೊದಲು ರಾಜಕೀಯ ಸಮ್ಮೇಳನವು 1920ರಲ್ಲಿ ಕಾರವಾರದಲ್ಲಿ ನಡೆಯಿತು. 1930ರಲ್ಲಿ ಕಾರವಾರದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಬಂಧಿತರಾದವರಲ್ಲಿ ಸುಬ್ಬರಾವ್ ಹಳದೀಪುರಕರ್ ಮತ್ತು ಜಿ.ಎನ್ ಗಾಯತೊಂಡೆ ಮೊದಲಿಗರು. 1934ರಲ್ಲಿ ಗಾಂಧೀ ಕಾರವಾರಕ್ಕೆ ಬಂದಾಗ ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿದ್ದ ಹಳದೀಪುರಕರ್ ಬಂಧುಗಳ ಮನೆಯಲ್ಲಿ ಉಳಿದುಕೊಂಡು, ಪ್ರಾರ್ಥನಾಸಭೆ ನಡೆಸಿದ್ದರು.[35] ಈ ಸಂದರ್ಭದಲ್ಲಿ ಹರಿಜನರ ಕಲ್ಯಾಣಕ್ಕಾಗಿ ಸಂಗ್ರಹಿಸಿದ್ದ ನಿಧಿಯನ್ನು ಜಿಲ್ಲೆಯ ಹೋರಾಟಗಾರರು ಗಾಂಧಿಯವರಿಗೆ ಅರ್ಪಿಸಿದರು. 1921ರ ಸ್ವದೇಶಿ ಚಳುವಳಿ, 1930ರ ಅಸಹಕಾರ ಚಳುವಳಿ, 1942ರ ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ಉತ್ತರ ಕನ್ನಡ ಜಿಲ್ಲೆ ಜನರು ಸಕ್ರಿಯವಾಗಿ ಭಾಗವಹಿಸಿದ್ದರು ಹಾಗೂ ಬಂಧನಕ್ಕೂ ಒಳಗಾಗಿದ್ದರು.

ಭಾರತ ಸ್ವಾತಂತ್ರ್ಯ ಪಡೆದು, 1950ರಲ್ಲಿ ಒಕ್ಕೂಟ ವ್ಯವಸ್ಥೆ ಜಾರಿಗೆ ತಂದಾಗ ಉತ್ತರ ಕನ್ನಡ ಜಿಲ್ಲೆಯನ್ನು ಮುಂಬೈ ರಾಜ್ಯಕ್ಕೆ ಸೇರಿಸಲಾಗಿತ್ತು. 1956ರಲ್ಲಿ ರಾಜ್ಯ ಪುನರ್‌ರಚನಾ ಆಯೋಗದ ವರದಿಯ ಶಿಫಾರಸ್ಸಿನ ಮೇರೆಗೆ ಉತ್ತರ ಕನ್ನಡ ಜಿಲ್ಲೆಯನ್ನು ಮುಂಬೈ ರಾಜ್ಯದಿಂದ ಬೇರ್ಪಡಿಸಿ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಏಕೀಕರಣಗೊಂಡ ಕರ್ನಾಟಕದಲ್ಲಿ ಆಡಳಿತದ ಅನುಕೂಲಕ್ಕಾಗಿ ನಾಲ್ಕು ಕಂದಾಯ ವಿಭಾಗಗಳನ್ನು ರಚನೆ ಮಾಡಿದಾಗ ಉತ್ತರ ಕನ್ನಡ ಜಿಲ್ಲೆಯನ್ನು ಬೆಳಗಾವಿ ವಿಭಾಗಕ್ಕೆ ಸೇರಿಸಿತು. ಪ್ರಸ್ತುತವಾಗಿ ಅಂಕೋಲ, ಭಟ್ಕಳ, ಹೊನ್ನಾವರ, ಹಳಿಯಾಳ, ಜೋಯಿಡಾ(ಸೂಪಾ), ಕಾರವಾರ, ಕುಮುಟಾ, ಮುಂಡಗೋಡ, ಸಿದ್ದಾಪುರ, ಶಿರಿಸಿ ಮತ್ತು ಯಲ್ಲಾಪುರ ಎಂಬ ಹನ್ನೊಂದು ತಾಲೂಕುಗಳನ್ನು ಒಳಗೊಂಡ ಉತ್ತರ ಕನ್ನಡ ಜಿಲ್ಲೆ ರಚನೆಗೊಂಡಿದೆ. ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಬ್ರಾಹ್ಮಣೇತರ ಚಳವಳಿಗಳು ಹುಟ್ಟಿಕೊಂಡವು. ಉತ್ತರ ಕನ್ನಡ ಜಿಲ್ಲೆಗೆ ನೆರೆ ಜಿಲ್ಲೆಯಲ್ಲಿ ಲೋಹಿಯಾ ಮತ್ತು ಶಾಂತವೇರಿ ಗೋಪಾಲಗೌಡರ ನೇತೃತ್ವದಲ್ಲಿ ನಡೆದ ಕಾಗೋಡು ಚಳವಳಿಯ ಇತಿಹಾಸದ ಸಂಬಂಧವಿದೆ. ದಿನಕರ ದೇಸಾಯಿ ಹುಟ್ಟು ಹಾಕಿದ ಪ್ರಜಾಸೋಶಿಯಲಿಸ್ಟ್ ಪಕ್ಷದ ಪ್ರಭಾವವೂ ಇದೆ. ದಿನಕರ ದೇಸಾಯಿಯವರ ನೇತೃತ್ವದಲ್ಲೇ ಉತ್ತರ ಕನ್ನಡ ಜಿಲ್ಲೆಯಲ್ಲಿ ರೈತ ಚಳವಳಿಗಳು ಆರಂಭವಾದವು ಮತ್ತು ರೈತ ಸಂಘಗಳು ಅಸ್ತಿತ್ವಕ್ಕೆ ಬಂದವು. ಆದರೆ ಈ ಚಳವಳಿಗಳು ಹಿಂದೂ ಧರ್ಮದ ಸಾಂಸ್ಥಿಕ ಅಸಮಾನತೆಯನ್ನು ಮತ್ತು ಲಿಂಗಭೇದವನ್ನು ಪ್ರಶ್ನಿಸುವುದಕ್ಕೆ ವಿಶೇಷ ಒತ್ತು ನೀಡಲಿಲ್ಲ. ಸ್ಥಳೀಯ ಸರ್ಕಾರ, ಉದ್ಯೋಗ

ಹಾಗೂ ಶಿಕ್ಷಣಗಳಲ್ಲಿ ಮೀಸಲಾತಿ ಪಡೆಯುವುದಕ್ಕೆ ಈ ಚಳವಳಿಗಳು ತಮ್ಮ ಹೋರಾಟವನ್ನು ಸೀಮಿತಗೊಳಿಸಿದವು. ಈ ಚಳವಳಿಗಳು ಅಸಮಾನತೆಯನ್ನು ಪ್ರಶ್ನಿಸುವ ಬದಲಾಗಿ ಜಾತಿ ಪದ್ಧತಿ ಮತ್ತು ಲಿಂಗ ತಾರತಮ್ಯವನ್ನು ಜೀವಂತ ಇರಿಸುವಲ್ಲಿ ಪ್ರಮುಖ ಪಾತ್ರವಹಿಸಿದವು.[36]

ಭೌಗೋಳಿಕ ಹಿನ್ನೆಲೆ: ರಾಜ್ಯದ ಪಶ್ಚಿಮ ಭಾಗದಲ್ಲಿರುವ ಉತ್ತರ ಕನ್ನಡ ಜಿಲ್ಲೆಯು ಉತ್ತರ ದಕ್ಷಿಣಾಭಿಮುಖವಾಗಿ ವಿಸ್ತರಿಸಿದೆ. ಪ್ರಸ್ತುತ ಜಿಲ್ಲೆಯ ಉತ್ತರ ದಿಕ್ಕಿನಲ್ಲಿ ಜೋಯಿಡಾ(ಸೂಪಾ) ತಾಲೂಕಿನ ಅನ್ಮೋಡ್ ಗ್ರಾಮದಿಂದ ದಕ್ಷಿಣ ದಿಕ್ಕಿನಲ್ಲಿರುವ ಭಟ್ಕಳ ಬೆಳಕಿ ಗ್ರಾಮದವರೆಗೆ 180 ಕಿ.ಮೀ. ಉದ್ದ ಹಾಗೂ ಪೂರ್ವ ದಿಕ್ಕಿನಲ್ಲಿರುವ ಮುಂಡಗೋಡು ತಾಲೂಕಿನ ಪಾಳ-ಕಾಟೂರುದಿಂದ ಪಶ್ಚಿಮ ದಿಕ್ಕಿನಲ್ಲಿರುವ ಕಾರವಾರ ತಾಲೂಕಿನ ಚಿತಕುಲ ಗ್ರಾಮದವರಗೆ 105 ಕಿ.ಮೀ. ಅಗಲ ವಿಸ್ತರಿಸಿದೆ.[37] ಜಿಲ್ಲೆಯ ಉತ್ತರಕ್ಕೆ ಗೋವಾ ರಾಜ್ಯ ಮತ್ತು ಬೆಳಗಾವಿ ಜಿಲ್ಲೆ, ದಕ್ಷಿಣಕ್ಕೆ ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳು, ಪೂರ್ವಕ್ಕೆ ಧಾರವಾಡ ಮತು ಹಾವೇರಿ ಜಿಲ್ಲೆಗಳು ಮತ್ತು ಪಶ್ಚಿಮಕ್ಕೆ 140 ಕಿ.ಮೀ. ಉದ್ದದ ಅರಬ್ಬೀ ಸಮುದ್ರದಿಂದ ಸುತ್ತವರಿಯಲ್ಪಟ್ಟಿದೆ.[38] ಉತ್ತರ ಕನ್ನಡ ಜಿಲ್ಲೆಯು 22 ಕಡಲ ತೀರಗಳನ್ನು ಹೊಂದಿದೆ.[39] ಉತ್ತರ ಕನ್ನಡ ಜಿಲ್ಲೆ 10,24,679 ಹೆಕ್ಟೇರ್ ಭೂವಿಸ್ತೀರ್ಣವನ್ನು ಹೊಂದಿದೆ. ರಾಜ್ಯದ ಭೂವಿಸ್ತೀರ್ಣದಲ್ಲಿ ಶೇ.5.3ರಷ್ಟು ಪಾಲನ್ನು ಹೊಂದಿದ್ದು, ರಾಜ್ಯದ ವಿಸ್ತೀರ್ಣದಲ್ಲಿ 5ನೇ ಸ್ಥಾನದಲ್ಲಿದೆ. ಜಿಲ್ಲೆಯ ಒಟ್ಟು ಭೂವಿಸ್ತೀರ್ಣದಲ್ಲಿ 8,13,595 ಹೆಕ್ಟೇರ್(ಶೇ.79.40)ರಷ್ಟು ಅರಣ್ಯ ಪ್ರದೇಶವಿದೆ. ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ 30,70,330 ಹೆಕ್ಟೇರ್(ಶೇ.16.11)ರಷ್ಟು ಅರಣ್ಯ ಪ್ರದೇಶವಿದ್ದು, ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯ ಪಾಲು ಶೇ.26.46ರಷ್ಟಿದೆ. ರಾಜ್ಯದ ಒಟ್ಟು ಭೂವಿಸ್ತೀರ್ಣದಲ್ಲಿ ಶೇ.4.27ರಷ್ಟು ಅರಣ್ಯ ಪ್ರದೇಶ ಹೊಂದಿರುವ ಉತ್ತರ ಕನ್ನಡ ಜಿಲ್ಲೆ ರಾಜ್ಯದಲ್ಲೇ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ಜಿಲ್ಲೆಗಳಲ್ಲಿ ಮೊದಲನೆಯ ಸ್ಥಾನದಲ್ಲಿದೆ.[40] ಉತ್ತರ ಕನ್ನಡ ಜಿಲ್ಲೆಯು ಸಮಶೀತೋಷ್ಣ ಹವಾಮಾನದಿಂದ ಕೂಡಿದೆ ಹಾಗೂ ಮಳೆ ಬೀಳುವ ಪ್ರಮಾಣ ಸಾಮಾನ್ಯವಾಗಿ ಹೆಚ್ಚು ಇದೆ. ಇದಕ್ಕೆ ಪಶ್ಚಿಮ ತೀರದ ಕರಾವಳಿ ಪ್ರದೇಶ ಹಾಗೂ ಸಹ್ಯಾದ್ರಿ ಬೆಟ್ಟಗಳು ಕಾರಣವಾಗಿವೆ. ವಾಡಿಕೆಯಂತೆ ಜಿಲ್ಲೆಯಲ್ಲಿ ವಾರ್ಷಿಕವಾಗಿ ಮಳೆ ಬಿದ್ದ ಸರಾಸರಿ ಪ್ರಮಾಣವು 2,835.5 ಮಿಲಿ ಮೀಟರ್‌ಗಳಷ್ಟು ಇದೆ(ನೋಡಿ ಕೋಷ್ಟಕ-3.1). ಜಿಲ್ಲೆಯಲ್ಲಿ ಇತ್ತೀಚಿನ ಐದು ವರ್ಷಗಳಲ್ಲಿ ಬಿದ್ದ ಮಳೆಯ ಸರಾಸರಿ ಪ್ರಮಾಣ ಶೇ.2,726ರಷ್ಟು ಇದೆ.

ಜಿಲ್ಲೆಯಲ್ಲಿ ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ, ಬೇಡ್ತಿ, ವೆಂಕಟಾಪುರ ಮತ್ತು ವರದಾ ನದಿಗಳು ಹರಿಯುತ್ತಿವೆ. ಆದರೆ ಈ ನದಿಗಳಿಂದ ಜಿಲ್ಲೆಯ ಕೃಷಿ ಚಟುವಟಿಕೆಗಳಿಗೆ ನೀರಾವರಿ ಸೌಲಭ್ಯ ಪಡೆಯುವಲ್ಲಿ ಸಫಲಗೊಂಡಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ಈ ನದಿಗಳಲ್ಲಿ ಹರಿಯುವ ನೀರಿನ ಒಳವ್ಯಾಪ್ತಿ 9ರಿಂದ 10 ಮೀ. ಅಗಲ ಹಾಗೂ ನದಿಯ ಮೇಲ್ದಂಡೆಯ ಎತ್ತರ 12ರಿಂದ 15 ಮೀ. ಹೊಂದಿರುವುದಾಗಿರುತ್ತದೆ.[41] ಹೀಗಾಗಿ ಜಿಲ್ಲೆಯಲ್ಲಿ ಹರಿಯುವ ನದಿಗಳು ಕೃಷಿಕರಿಗೆ ಜೀವನದಿಗಳಾಗಿ ಕಂಡುಬರಲಿಲ್ಲ. ಕೃಷಿ ಸಂಪೂರ್ಣವಾಗಿ ಮಳೆಯನ್ನೇ ಅವಲಂಬಿಸಬೇಕಾಗಿದೆ. ಜಿಲ್ಲೆಯಲ್ಲಿ ಬಿತ್ತನೆಯಾಗುವ 1,24,750 ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿಯಾದ 25,437 ಹೆಕ್ಟೇರ್

ಪ್ರದೇಶದಲ್ಲಿ ಕೆರೆ, ಬಾವಿ ಮತ್ತು ಕೊಳವೆ ಬಾವಿಗಳೇ ನೀರಾವರಿ ಪ್ರಮುಖ ಮೂಲಗಳಾಗಿವೆ.[42] ಸ್ವಾತಂತ್ರ್ಯ ಬಂದು ಆರು ದಶಕಗಳೇ ಕಳೆದುಹೋದರೂ ಈ ಜಿಲ್ಲೆಯಲ್ಲಿ ನದಿ ನೀರನ್ನು ಕೃಷಿಗೆ ಬಳಿಸಿಕೊಳ್ಳುವ ಯಾವುದೇ (ಪಂಚವಾರ್ಷಿಕ) ಯೋಜನೆಗಳಲ್ಲಿ ನಿರ್ಧಾರ ಕೈಗೊಂಡಿರುವುದು ಕಂಡು ಬರುವುದಿಲ್ಲ. 50ರ ದಶಕದಲ್ಲಿ ಜಿಲ್ಲೆಯಲ್ಲಿ ಶೇ.22.62ರಷ್ಟು ನೀರಾವರಿ ಸೌಲಭ್ಯ ಹೊಂದಿದ್ದು, 2001ರ ವೇಳೆಗೆ ಶೇ.0.52ರಷ್ಟು ನೀರಾವರಿ ಸೌಲಭ್ಯ ಕುಂಠಿತವಾಗಿರುವುದು ಕಂಡುಬರುತ್ತದೆ.[43] ರಾಜ್ಯಕ್ಕೆ ಹೋಲಿಸಿದರೆ ಉತ್ತರ ಕನ್ನಡ ಜಿಲ್ಲೆ ಶೇ.10.38ರಷ್ಟು ಕಡಿಮೆ ನೀರಾವರಿ ಸೌಲಭ್ಯ ಹೊಂದಿದೆ.

ಉತ್ತರ ಕನ್ನಡ ಜಿಲ್ಲೆಯು ಸಮತಟ್ಟಾದ ಪ್ರದೇಶವಲ್ಲ. ಬೆಟ್ಟ ಗುಡ್ಡಗಳು, ಗಿರಿ ಕಂದಕಗಳು, ಉಬ್ಬುತಗ್ಗುಗಳು, ಹಳ್ಳಕೊಳ್ಳಗಳಿಂದ ಕೂಡಿದ ಪ್ರದೇಶವಾಗಿದೆ. ಸಹ್ಯಾದ್ರಿ ಶ್ರೇಣಿಯ ಪ್ರದೇಶದಲ್ಲಿ ಪದರು ಪದರಾಗಿ ಬೆಣಚುಕಲ್ಲಿನಿಂದ ಕೂಡಿದ ಹಗುರಾದ ಸಸ್ಯ ಪೋಷಕಾಂಶ ಕಡಿಮೆ ಇರುವ ಕೆಂಪುಮಣ್ಣಿನಿಂದ ಕೂಡಿದೆ.[44] ಆದರೆ ಕರಾವಳಿ ತೀರಪ್ರದೇಶದಲ್ಲಿ ಮರಳುಮಿಶ್ರಿತ ಬೂದಿಬಣ್ಣದ ಮಣ್ಣು ಕಂಡುಬರುತ್ತದೆ.[45] ಕೃಷಿ ಇಲ್ಲಿಯ ಜನರ ಮುಖ್ಯ ಬದುಕಾಗಿದೆ. ಭತ್ತ, ಅಡಿಕೆ, ತೆಂಗು ಮುಖ್ಯ ಬೆಳೆಗಳಾದರೆ, ಬಾಳೆ, ಕಬ್ಬು, ಶೇಂಗಾ ಮುಸುಕಿನ ಜೋಳ, ಏಲಕ್ಕಿ, ಮೆಣಸು ಗೋಡಂಬಿ, ಅನಾನಸ್ ಹಾಗೂ ದ್ವಿದಳ ಧ್ಯಾನ್ಯಗಳು ಇತರ ಬೆಳೆಗಳಾಗಿವೆ. ಕಡಲ ತೀರದ ಬಹುತೇಕ ಹಿಂದುಳಿದ ಜಾತಿ ಮತ್ತು ವರ್ಗದ ಜನರಿಗೆ ಮೀನುಗಾರಿಕೆ ಮುಖ್ಯ ಕಸುಬಾಗಿದೆ.

ಉತ್ತರ ಕನ್ನಡ ಜಿಲ್ಲೆಯು ದಟ್ಟವಾದ ಅರಣ್ಯ ಪ್ರದೇಶದಿಂದ ಕೂಡಿದ್ದು, ಇಲ್ಲಿ ಶ್ರೀಗಂಧ, ಬೀಟೆ, ತೇಗ,. ಹೊನ್ನೆ, ಮತ್ತಿ, ಭರಣಿ, ನಂದಿ ಜಂಬೆ, ಫಣಗಿ, ಬೆತ್ತ, ಬಿದರು ಮುಂತಾದ ಅಮೂಲ್ಯವಾದ ಮತ್ತು ಬೆಲೆ ಬಾಳುವ ಗಿಡ ಮರಗಳು, ಔಷಧೋಪಯುಕ್ತವಾದ ಗಿಡಮೂಲಿಕೆಗಳು ಮತ್ತು ಗೋಡಂಬಿ, ನೆರಳೆ, ಹಲಸು, ಮಾವು, ಶೀಗೆಕಾಯಿ, ಅಳಲೇಕಾಯಿ, ಜೇನುತುಪ್ಪ, ಧೂಪ ಮುಂತಾದ ಕಾಡು ಉತ್ಪನ್ನಗಳು ಲಭ್ಯವಿವೆ. ಹುಲಿ, ಚಿರತೆ, ಆನೆ, ಕರಡಿ, ಕಾಡೆಮ್ಮೆ–ಕಾಡುಕೋಣ, ಕಾಡು ಹಂದಿ, ಜಿಂಕೆ, ಸಾರಂಗ, ಕೋತಿ, ಮೊಲ, ನವಿಲು, ಕಾಡು ಕೋಳಿ ಮುಂತಾದ ಕಾಡು ಪ್ರಾಣಿ ಪಕ್ಷಿಗಳು ಈ ಕಾಡಿನಲ್ಲಿವೆ.[46] ಸೂಪಾ, ಕಾದ್ರಾ, ಕೊಡಸಳ್ಳಿ ಮತ್ತು ಗೇರುಸೊಪ್ಪ ಆಣೆಕಟ್ಟುಗಳು ಹಾಗೂ ಜಲ ವಿದ್ಯುತ್ ಸ್ಥಾವರಗಳು, ಕೈಗಾ ಅಣು ವಿದ್ಯುತ್ ಸ್ಥಾವರ ಹಾಗೂ ಏಷ್ಯದಲ್ಲೇ ಅತಿದೊಡ್ಡದಾದ 'ಕದಂಬ' ನೌಕಾನೆಲೆ(ಸೀಬರ್ಡ್) ಈ ಜಿಲ್ಲೆಯ ಪ್ರಮುಖ ಅಭಿವೃದ್ಧಿ ಯೋಜನೆಗಳಾಗಿವೆ. ಆದರೆ ಜಿಲ್ಲೆಯ ಪರಿಸರವಾದಿಗಳು ಇಂತಹ ಅಭಿವೃದ್ಧಿ ಯೋಜನೆಗಳನ್ನು ಕೈಬಿಡುವಂತೆ ಹಾಗೂ ಸ್ಥಗಿತಗೊಳಿಸುವಂತೆ ಹೋರಾಟ ಮಾಡುತ್ತಿದ್ದಾರೆ. ಇವು ಇಲ್ಲಿನ ಅರಣ್ಯ ಪರಿಸರ ಮೇಲೆ, ಖಗ–ಮೃಗ–ಪಕ್ಷಿಗಳ ಮೇಲೆ ಹಾಗೂ ಜನಜೀವನದ ಮೇಲೆ ದುಷ್ಪರಿಣಾಮ ಬೀರುತ್ತವೆ ಎನ್ನುವುದು ಇವರ ಹೋರಾಟದ ಉದ್ದೇಶವಾಗಿದೆ.

ಸಾಮಾಜಿಕ ಹಿನ್ನೆಲೆ: 2011ರ ಜನಗಣತಿ ಪ್ರಕಾರ, ಕನ್ನಡ ಜಿಲ್ಲೆಯಲ್ಲಿ 14,36,847 ಜನಸಂಖ್ಯೆಯನ್ನು ಹೊಂದಿದ್ದು, ಇದರಲ್ಲಿ 7,27,424(ಶೇ.50.63) ಪುರುಷರು ಮತ್ತು 7,09,423(ಶೇ.49.37) ಮಹಿಳೆಯರು ಇದ್ದಾರೆ. ರಾಜ್ಯದ ಜನಸಂಖ್ಯೆಯಲ್ಲಿ ಶೇ.2.35ರಷ್ಟು ಪಾಲನ್ನು ಈ ಜಿಲ್ಲೆ ಪಡೆದಿದೆ.

ರಾಜ್ಯದ ಜನಸಂಖ್ಯೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಮಹಿಳೆಯರ ಪಾಲು ಶೇ.1.16ರಷ್ಟು ಇದ್ದು, ಈ ಪ್ರಮಾಣವನ್ನು ರಾಜ್ಯದ ಮಹಿಳೆಯರಿಗೆ ಹೋಲಿಸಿದರೆ ಈ ಜಿಲ್ಲೆಯ ಮಹಿಳೆಯರ ಪಾಲು ಶೇ.2.35ರಷ್ಟಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಲಿಂಗಾನುಪಾತವು ಪ್ರತಿ 1,000 ಪುರುಷರಿಗೆ 975ರಷ್ಟು ಇದ್ದು, ಇದನ್ನು ರಾಜ್ಯಕ್ಕೆ(968) ಹೋಲಿಸಿದರೆ ಶೇ.7ರಷ್ಟು ಹೆಚ್ಚು ಇದೆ. ಜಿಲ್ಲೆಯಲ್ಲಿ ಜನಸಂಖ್ಯೆ ಬೆಳವಣಿಗೆ ದರ 6.15ರಷ್ಟು ಇದ್ದು, ಕಳೆದ ದಶಕಕ್ಕೆ ಹೋಲಿಸಿದರೆ ಶೇ.4.78ರಷ್ಟು ಕುಸಿತ ಕಂಡಿದೆ. ಈ ಜಿಲ್ಲೆ ರಾಜ್ಯದ ಜನಸಂಖ್ಯೆಯಲ್ಲಿ 20ನೇ ಸ್ಥಾನ ಮತ್ತು ಜನಸಂಖ್ಯೆ ಬೆಳವಣಿಗೆ ದರದಲ್ಲಿ 21ನೇ ಸ್ಥಾನದಲ್ಲಿದೆ. ಈ ಜಿಲ್ಲೆಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ 140ರಷ್ಟಿದೆ(ನೋಡಿ ಕೋಷ್ಟಕ–3.2). ಇದಕ್ಕೆ ಜಿಲ್ಲೆಯ ಜನರು ಕಾಡಿನ ಮಧ್ಯೆ ಅಲ್ಲಲ್ಲಿ ತೋಟದ ಮನೆಯಲ್ಲೆ ವಾಸಿಸುವುದು ಮತ್ತು ಮುಂದುವರೆದ ಜಾತಿ ಜನಾಂಗದ ಬಹುತೇಕ ವಿದ್ಯಾವಂತ ಯುವಕ ಯುವತಿಯರು ಉದ್ಯೋಗ ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗುವುದು ಕಾರಣವಾಗಿರಬಹುದು.

ಉತ್ತರ ಕನ್ನಡ ಜಿಲ್ಲೆಯನ್ನು ಸಾಮಾಜಿಕವಾಗಿ ನೋಡುವುದಾದರೆ ವಿವಿಧ ಜಾತಿ, ಧರ್ಮ ಮತ್ತು ವರ್ಗಗಳಿಂದ ಕೂಡಿದೆ. ಹವ್ಯಕ ಬ್ರಾಹ್ಮಣರು, ನಾಮಧಾರಿಗಳು(ಈಡಿಗ), ಸಾರಸ್ವತರು, ಗೌಡ ಸಾರಸ್ವತರು, ಬಂಟರು, ಕೊಂಕಣಿಗಳು, ಲಿಂಗಾಯತರು, ಒಕ್ಕಲಿಗರು, ನಾಡವರು, ಮರಾಠಿಗಳು, ನಾಮಪಂಥರು, ಕುಮಾರ ಪಂಥರು, ವಾಣಿ(ವೈಶ್ಯರು), ಅಕ್ಕಸಾಲಿಗರು, ಗುಡಿಗಾರರು, ಶೇರುಗಾರರು, ಮೊಗೇರರು, ಮೀನುಗಾರರು, ಲಂಬಾಣಿ, ಮುಂತಾದ ವಿವಿಧ ಜಾತಿಯವರು, ಸಿದ್ದಿ, ಕುಣಬಿ, ಗೊಂಡ, ಗೌಳಿ ಮತ್ತು ಹಾಲಕ್ಕಿ ಮುಂತಾದ ಪ್ರಮುಖ ಬುಡಕಟ್ಟು ಜನಸಮುದಾಯಗಳು ಮತ್ತು ಕ್ರಿಶ್ಚಿಯನ್, ಮುಸ್ಲಿಂ ಮತ್ತು ಟಿಬೆಟಿಯನ್ನರು ಇದ್ದಾರೆ.[47] ಜಿಲ್ಲೆಯಲ್ಲಿ ಮುಖ್ಯವಾಗಿ ನಾಮಧಾರಿಗಳು ಬಲಿಷ್ಠ ಸಮುದಾಯವಾಗಿ ಕಂಡುಬರುತ್ತದೆ. ಆದರೆ ಹವ್ಯಕ ಬ್ರಾಹ್ಮಣರು, ಸಾರಸ್ವತರು, ಬಂಟರು ಇತ್ಯಾದಿ ಮುಂದುವರೆದ ಜಾತಿ ಜನಾಂಗದವರು ಒಗ್ಗೂಡಿದಾಗ, ಇವರೇ ಬಲಿಷ್ಠ ಸಮುದಾಯದವರಾಗಿ ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಇವರು ಮೇಲ್ಮಟ್ಟದ ರಾಜಕಾರಣದಲ್ಲಿ ಬಿಗಿ ಹಿಡಿತ ಸಾಧಿಸಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಜಿಲ್ಲೆಯಲ್ಲಿ ಇದ್ದರೂ ಇವರ ಸಂಖ್ಯೆ ತೀರ ಕಡಿಮೆ ಇದೆ. 2011ರ ಜನಗಣತಿ ಪ್ರಕಾರ, ಉತ್ತರ ಕನ್ನಡ ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ.84.03ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ಶೇ.89.72 ಹಾಗೂ ಮಹಿಳಾ ಸಾಕ್ಷರತಾ ಪ್ರಮಾಣ ಶೇ.78.21ರಷ್ಟಿದೆ. ರಾಜ್ಯದ ಸಾಕ್ಷರತಾ ಪ್ರಮಾಣಕ್ಕೆ ಹೋಲಿಸಿದರೆ ಉತ್ತರ ಕನ್ನಡ ಜಿಲ್ಲೆಯ ಒಟ್ಟು ಸಾಕ್ಷರತೆಯ ಪ್ರಮಾಣದಲ್ಲಿ ಶೇ.8.63ರಷ್ಟು, ಪುರುಷರ ಸಾಕ್ಷರತಾ ಪ್ರಮಾಣದಲ್ಲಿ ಶೇ.6.87ರಷ್ಟು ಹಾಗೂ ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಶೇ.10.08ರಷ್ಟು ಹೆಚ್ಚು ಇದೆ(ನೋಡಿ ಕೋಷ್ಟಕ–3.2). ಹೀಗಾಗಿ ರಾಜ್ಯದಲ್ಲಿ ಸಾಕ್ಷರತಾ ಬೆಳವಣಿಗೆಯಲ್ಲಿ ಉತ್ತರ ಕನ್ನಡ ಜಿಲ್ಲೆ ಮುಂದುವರೆದ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆ ಕಡಿಮೆ ಇರುವುದು ಈ ಬೆಳವಣಿಗೆಗೆ ಪೂರಕವಾಗಿರಬಹುದು ಎಂದು ಗ್ರಹಿಸಲಾಗಿದೆ.

ಆರ್ಥಿಕ ಹಿನ್ನೆಲೆ: ಉತ್ತರ ಕನ್ನಡ ಜಿಲ್ಲೆಯನ್ನು ಪ್ರಾದೇಶಿಕವಾಗಿ ಕರಾವಳಿ ಪ್ರದೇಶ, ಮಲೆನಾಡು ಪ್ರದೇಶ ಮತ್ತು ಬಯಲು ಪ್ರದೇಶ ತಾಲೂಕುಗಳೆಂದು ವಿಭಾಗಿಸಲಾಗಿದೆ. ಕರಾವಳಿ ಪ್ರದೇಶವು ಕಾರವಾರ, ಅಂಕೋಲ, ಕುಮುಟಾ, ಹೊನ್ನಾವರ ಮತ್ತು ಭಟ್ಕಳ ತಾಲೂಕುಗಳನ್ನು, ಮಲೆನಾಡು ಪ್ರದೇಶವು ಸಿದ್ದಾಪುರ, ಶಿರಿಸಿ, ಯಲ್ಲಾಪುರ ಮತ್ತು ಜೋಯಿಡಾ ತಾಲೂಕುಗಳನ್ನು ಒಳಗೊಂಡಿದ್ದರೆ, ಬಯಲು ಪ್ರದೇಶವು ಹಳಿಯಾಳ ಮತ್ತು ಮುಂಡಗೋಡ ತಾಲೂಕುಗಳನ್ನು ಒಳಗೊಂಡಿದೆ.[48] ಇಲ್ಲಿಯ ಜನರು ಕರಾವಳಿ ಪ್ರದೇಶದ ತಾಲೂಕುಗಳನ್ನು ಘಟ್ಟದ ಕೆಳಗಿನ ತಾಲೂಕುಗಳೆಂದು ಮತ್ತು ಇತರ ತಾಲೂಕುಗಳನ್ನು ಘಟ್ಟದ ಮೇಲಿನ ತಾಲೂಕುಗಳೆಂದು ಕರೆಯುತ್ತಾರೆ. ಜಿಲ್ಲೆಯ 9 ತಾಲೂಕುಗಳಲ್ಲಿ ಕಾಳಿ, ಗಂಗಾವಳಿ, ಅಘನಾಶಿನಿ, ಬೇಡ್ತಿ, ಶರಾವತಿ, ವೆಂಕಟಾಪುರ ಮತ್ತು ವರದಾ ನದಿಗಳು ಹರಿಯುತ್ತಿದ್ದರೂ, ಕೃಷಿ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆತಿಲ್ಲ. ಜಿಲ್ಲೆಯ ಕೃಷಿ ಸಂಪೂರ್ಣವಾಗಿ ಮಳೆಯನ್ನೇ ಅವಲಂಬಿಸಬೇಕಾಗಿದೆ. ಜಿಲ್ಲೆಯ ಘಟ್ಟದ ಮೇಲಿನ ತಾಲೂಕುಗಳ ಬಹುತೇಕ ಜನರ ಬದುಕು ಕೃಷಿಯಾಗಿದೆ. ಘಟ್ಟದ ಕೆಳಗಿನ ತಾಲೂಕುಗಳ ಬಹುತೇಕ ಜನರು ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಸಿಕೊಂಡವರಾಗಿದ್ದಾರೆ. 2001ರ ಜನಗಣತಿ ಪ್ರಕಾರ, ಉತ್ತರ ಕನ್ನಡ ಜಿಲ್ಲೆಯಲ್ಲಿ 5,81,278 ದುಡಿಯುವ ವರ್ಗವಿದ್ದು, ಇದರಲ್ಲಿ 2,27,940(ಶೇ.39.21)ರಷ್ಟು ಪ್ರಾಥಮಿಕ ವಲಯ, 13,048(ಶೇ.2.24)ರಷ್ಟು ದ್ವಿತೀಯ ವಲಯ ಮತ್ತು 3,40,290(ಶೇ.58.55)ರಷ್ಟು ತೃತೀಯ ವಲಯವನ್ನು ಅವಲಂಬಿಸಿದವರಾಗಿದ್ದಾರೆ. ಜಿಲ್ಲೆಯಲ್ಲಿ ದುಡಿಯುವ ಜನರಲ್ಲಿ 1,85,409(ಶೇ.31.89)ರಷ್ಟು ಮಹಿಳೆಯರ ಪಾಲು ಇದೆ. ಇವರಲ್ಲಿ 95,795(ಶೇ.42.02)ರಷ್ಟು ಪ್ರಾಥಮಿಕ ವಲಯ, 3,922(ಶೇ.30.05) ದ್ವಿತೀಯ ವಲಯ ಹಾಗೂ 85,692(ಶೇ.25.28)ರಷ್ಟು ತೃತೀಯ ವಲಯವನ್ನು ಅವಲಂಬಿಸಿದ್ದಾರೆ(ನೋಡಿ ಕೋಷ್ಟಕ–3.3). ಆಯಾ ವಲಯವಾರು ದುಡಿಮೆಗಳಲ್ಲಿ ಪಾಲ್ಗೊಳ್ಳುವಿಕೆ ಪ್ರಮಾಣವು ಆ ಪ್ರದೇಶದ ಅಭಿವೃದ್ಧಿ ಮಟ್ಟವನ್ನು ಗುರುತಿಸುವ ಸೂಚಿಯಾಗಿರುತ್ತದೆ. ಈ ಅಂಕಿ ಸಂಖ್ಯೆಗಳ ಪ್ರಕಾರ, ಉತ್ತರ ಕನ್ನಡ ಆರ್ಥಿಕವಾಗಿ ಮುಂದುವರೆದ ಜಿಲ್ಲೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ನೈಸರ್ಗಿಕವಾಗಿ ಅರಣ್ಯ ಸಂಪತ್ತು ಹಾಗೂ ಕಡಲು ಸಂಪತ್ತು ಹೇರಳವಾಗಿ ಲಭ್ಯವಿರುವುದರಿಂದ ರಾಜ್ಯದಲ್ಲೇ ಇದನ್ನು ಶ್ರೀಮಂತ ಜಿಲ್ಲೆ ಎನ್ನಬಹುದು. ಜಿಲ್ಲೆಯ ಶ್ರೀಮಂತಿಕೆ ಕೆಲವೇ ಕೆಲವು ಉದ್ಯಮಿಗಳಿಗೆ ಮತ್ತು ವ್ಯಾಪಾರಸ್ಥರಿಗೆ ದೊರುಕಿರುವುದರಿಂದ ಜನಸಾಮಾನ್ಯರು ಬಡತನದಲ್ಲಿದ್ದಾರೆ. ಉತ್ತರ ಕನ್ನಡ ಜಿಲ್ಲೆ 140 ಕಿ.ಮೀ. ಉದ್ದದ ಕರಾವಳಿ ಪ್ರದೇಶವನ್ನು ಹೊಂದಿದ್ದು, ಮೀನುಗಾರಿಕೆ ಪ್ರಮುಖ ಉದ್ಯಮವಾಗಿದೆ. ಸೀಗಡಿ, ಬಂಗಡೆ, ತೋರಿ, ಕಿಂಗ್‌ಫಿಶ್, ಪಾಂಪ್ಲೇಟ್ ಇತ್ಯಾದಿ ಮೀನುಗಳು ಹೇರಳವಾಗಿ ದೊರೆಯುತ್ತವೆ. ಪ್ರತಿವರ್ಷ 47,800 ಮೆಟ್ರಿಕ್ ಟನ್ ಮೀನು ಉತ್ಪನ್ನವಾಗಿದೆ.[49] ಜಿಲ್ಲೆಯು ಶೇ.79.40ರಷ್ಟು ಭೂಭಾಗ ಅರಣ್ಯ ಪ್ರದೇಶ ಹೊಂದಿದ್ದು, ಉತ್ತಮ ಗುಣಮಟ್ಟದ ಶ್ರೀಗಂಧ, ಬೀಟೆ, ತೇಗ, ಹೊನ್ನೆ, ಮತ್ತಿ, ಮುಂತಾದ ಬೆಲೆಬಾಳುವ ಮರಗಳು ಮತ್ತು ಇತರ ಕಾಡು ಉತ್ಪನ್ನಗಳು ಲಭ್ಯ ಇವೆ. ಮ್ಯಾಂಗನೀಸ್ ಅದಿರು, ಲೈಮ್‌ಶೆಲ್ ಮತ್ತು ಮೌಲ್ಡಿಂಗ್ ಸ್ಯಾಂಡ್ ಜಿಲ್ಲೆಯಲ್ಲಿ ದೊರೆಯುವ ಖನಿಜ ಸಂಪತ್ತುಗಳಾಗಿವೆ. ಆದರೆ ಉತ್ತರ

ಕನ್ನಡ ಜಿಲ್ಲೆಯಲ್ಲಿ ಉತ್ತಮ ಗುಣಮಟ್ಟದ ಮ್ಯಾಂಗನೀಸ್ ಅದಿರು ನಿಕ್ಷೇಪವಿಲ್ಲ. ಜಿಲ್ಲೆಯಲ್ಲಿ 4000ಕ್ಕೂ ಹೆಚ್ಚು ಗುಡಿ ಹಾಗೂ ಸಣ್ಣ ಪ್ರಮಾಣದ ವಿವಿಧ ಬಗೆಯ ಕೈಗಾರಿಕೆಗಳು ಇದ್ದು, ಮಧ್ಯಮ ಮತ್ತು ದೊಡ್ಡ ಪ್ರಮಾಣದ ಕಾರ್ಖಾನೆಗಳು ಒಂದೆರಡು ಕಂಡುಬರುತ್ತವೆ. ದಾಂಡೇಲಿಯ ವೆಸ್ಟ್‌ಕೋಸ್ಟ್ ಪೇಪರ್ ಮಿಲ್, ಕಾರವಾರದ ಸೋಲಾರಿಸ್ ಕೆಮಿಕಲ್ಸ್, ಹಳಿಯಾಳದ ಜಿ.ಎಂ.ಆರ್ ಸಕ್ಕರೆ ಕಾರ್ಖಾನೆ, ಭಟ್ಕಳ ಮತ್ತು ಹೊನ್ನಾವರದಲ್ಲಿ ಕೆಂಪು ಹೆಂಚಿನ ಕಾರ್ಖಾನೆಗಳು, ಬೈತ್‌ಕೋಲ್ ಫಿಶ್‌ಮಿಲ್ ಮುಂತಾದ ಪ್ರಮುಖ ಉದ್ಯಮಗಳಾಗಿವೆ. ಜಲಪಾತಗಳ ಬೀಡು, ವಿದ್ಯುತ್ ನಾಡು ಎಂದು ಬೀಗುವ ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಲ್ಕು ವಿದ್ಯುತ್ ಉತ್ಪಾದನಾ ಘಟಕಗಳಿವೆ. ಗಣೇಶಗುಡಿಯಲ್ಲಿ 100 ಮೆ.ವಾಟ್, ನಾಗಝರಿಯಲ್ಲಿ 405 ಮೆ.ವಾಟ್, ಕೊಡಸಳ್ಳಿ 550 ಮೆ.ವಾಟ್ ಮತ್ತು ಕದ್ರಾದಲ್ಲಿ 120 ಮೆ.ವಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಜೊತೆಗೆ ಕೈಗಾ ಪರಮಾಣು ವಿದ್ಯುತ್ ಸ್ಥಾವರವು 660 ಮೆ.ವಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನೆ ಮಾಡುತ್ತಿದೆ.[50] ಈ ಜಿಲ್ಲೆಯು ನೈಸರ್ಗಿಕ ಬಂದರು ಪ್ರದೇಶಗಳನ್ನು ಹೊಂದಿದ್ದು, ದೇಶ ವಿದೇಶಗಳ ನಡುವೆ ಆಮದು ರಫ್ತು ಮತ್ತು ವ್ಯಾಪಾರ ವಹಿವಾಟುಗಳು ನಿರಂತರವಾಗಿ ನಡೆಯುತ್ತಿವೆ. ಈ ಬಂದರು ಪ್ರದೇಶಗಳಲ್ಲಿ ನಡೆಯುವ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳು ಕರಾವಳಿ ತಾಲೂಕುಗಳಿಗೆ ಸೀಮಿತಗೊಂಡಿದ್ದು, ಘಟ್ಟದ ಮೇಲಿನ ತಾಲೂಕುಗಳು ಇದರಿಂದ ವಂಚಿತವಾಗಿವೆ. ಹೀಗಾಗಿ ಜಿಲ್ಲೆಯ ಕರಾವಳಿ ಪ್ರದೇಶದ ತಾಲೂಕುಗಳನ್ನು ಅಭಿವೃದ್ಧಿ ಹೊಂದಿದ ತಾಲೂಕುಗಳೆಂದು ಮತ್ತು ಘಟ್ಟದ ಮೇಲಿನ ತಾಲೂಕುಗಳನ್ನು ಹಿಂದುಳಿದ ತಾಲೂಕುಗಳೆಂದು ಗುರುತಿಸಲಾಗಿದೆ. ಹೀಗಾಗಿ ಜಿಲ್ಲೆಯ ಎರಡು ಭಾಗಗಳಲ್ಲಿ ಆರ್ಥಿಕ ಅಸಮಾನತೆ ಕಂಡುಬರುವುದರಿಂದ ಇದೊಂದು ಆರ್ಥಿಕವಾಗಿ ಹಿಂದುಳಿದ ಜಿಲ್ಲೆಯಾಗಿದೆ ಎನ್ನಬಹುದು. ಜಿಲ್ಲೆಯ ಸಮಗ್ರ ಅಭಿವೃದ್ಧಿಯಲ್ಲಿ ಆರ್ಥಿಕ ಚಟುವಟಿಕೆಗಳ ಪಾತ್ರ ನಿರ್ಣಾಯಕವಾಗಿರುತ್ತದೆ.

ರಾಜಕೀಯ ಹಿನ್ನೆಲೆ: ಉತ್ತರ ಕನ್ನಡ ಜಿಲ್ಲೆಯನ್ನು ಆಡಳಿತದ ದೃಷ್ಟಿಯಿಂದ ನಾಲ್ಕು ಉಪವಿಭಾಗಗಳನ್ನಾಗಿ ವಿಭಾಗಿಸಲಾಗಿದೆ. ಭಟ್ಕಳ ವಿಭಾಗವು ಭಟ್ಕಳ ಮತ್ತು ಹೊನ್ನಾವರ ತಾಲೂಕುಗಳನ್ನು, ಕಾರವಾರ ವಿಭಾಗವು ಕಾರವಾರ, ಹಳಿಯಾಳ ಮತ್ತು ಜೋಯಿಡಾ ತಾಲೂಕುಗಳನ್ನು, ಕುಮುಟಾ ವಿಭಾಗವು ಕುಮುಟಾ ಮತ್ತು ಅಂಕೋಲ ತಾಲೂಕುಗಳನ್ನು ಶಿರಸಿ ವಿಭಾಗವು ಶಿರಸಿ, ಸಿದ್ದಾಪುರ, ಯಲ್ಲಾಪುರ ಮತ್ತು ಮುಂಡಗೋಡ ತಾಲೂಕುಗಳನ್ನು ಹೊಂದಿವೆ. ಉತ್ತರ ಕನ್ನಡ ಜಿಲ್ಲೆಯು ಒಂದು ಲೋಕಸಭಾ ಮತ್ತು ಆರು ವಿಧಾನಸಭಾ ಕ್ಷೇತಗಳನ್ನು ಒಳಗೊಂಡಿದೆ. 2008ರಲ್ಲಿ ಜಾರಿಗೆ ಬಂದ 1962ರ ಡಿಲಿಮಿಟೇಷನ್ ಕಾಯ್ದೆಯು ರಾಜ್ಯದ ರಾಜಕೀಯ ಭೂಪಟವನ್ನು ಬದಲಾಯಿಸುವುದರ ಜೊತೆಗೆ ಜಿಲ್ಲೆಯ ರಾಜಕೀಯ ಚಿತ್ರಣವನ್ನು ಬದಲಾಯಿಸಿದೆ. 2008ರ ಮೊದಲು ಜಿಲ್ಲೆಯ 22-ಕೆನರಾ ಲೋಕಸಭಾ ಕ್ಷೇತ್ರವೆಂದು ಇದ್ದುದನ್ನು ಇಂದು ಉತ್ತರ ಕನ್ನಡ ಲೋಕಸಭಾ ಕ್ಷೇತ್ರವೆಂದು ಬದಲಾಯಿಸಲಾಗಿದೆ. ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಎಂಟು ವಿಧಾನಸಭಾ ಕ್ಷೇತ್ರಗಳು ಒಳಗೊಂಡಿದ್ದು, ಇದರಲ್ಲಿ ಖಾನಾಪುರ ಮತ್ತು ಕಿತ್ತೂರು ಕ್ಷೇತ್ರಗಳು ನೆರೆ ಜಿಲ್ಲೆ ಬೆಳಗಾವಿಗೆ ಸೇರಿದ ತಾಲೂಕುಗಳಾಗಿವೆ. 2008ರ ಮೊದಲು ಭಟ್ಕಳ, ಕುಮುಟಾ,

ಕಾರವಾರ, ಅಂಕೋಲ, ಶಿರಿಸಿ ಮತ್ತು ಹಳಿಯಾಳ ವಿಧಾನಸಭಾ ಕ್ಷೇತ್ರಗಳು ಒಳಗೊಂಡ ಉತ್ತರ ಕನ್ನಡ ಜಿಲ್ಲೆ ಇಂದು ಸಹ ಆರು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಆದರೆ ಅಂಕೋಲ ವಿಧಾನಸಭಾ ಕ್ಷೇತ್ರದ ಬದಲಾಗಿ ಯಲ್ಲಾಪುರ ಕ್ಷೇತ್ರ ಅಸ್ತಿತ್ವಕ್ಕೆ ಬಂದಿದೆ. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ಶಿರಿಸಿ ವಿಧಾನಸಭಾ ಕ್ಷೇತ್ರವು ಇಂದು ಸಾಮಾನ್ಯ ಕ್ಷೇತ್ರವಾಗಿ ಬದಲಾಗಿದೆ. ಈ ಬದಲಾವಣೆಯಿಂದ ಈ ಕ್ಷೇತ್ರದ ಬಹುಸಂಖ್ಯಾತರಿಗೆ ನ್ಯಾಯ ದೊರೆದಂತಾಗಿದೆ. ಆದರೆ ಈ ಜಿಲ್ಲೆಯಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಇಲ್ಲದಿರುವುದು ಕಂಡುಬರುತ್ತದೆ. ಈ ಜಿಲ್ಲೆಯಲ್ಲಿ ನಾಮಧಾರಿ ಸಮುದಾಯವು ದೊಡ್ಡ ಸಮುದಾಯವಾಗಿದ್ದರೂ ಅವರು ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಸೂಕ್ತ ಪ್ರಾತಿನಿಧ್ಯ ಪಡೆಯುವಲ್ಲಿ ಸಾಧ್ಯವಾಗುತ್ತಿಲ್ಲ. ಈ ಸಮುದಾಯದಲ್ಲಿ ನಾಯಕತ್ವದ ಕೊರತೆ ಎದ್ದು ಕಾಣುತ್ತಿದೆ. ಕಾಗೋಡು ತಿಮ್ಮಪ್ಪನವರು ಸಮುದಾಯದ ನಾಯಕರು ಎನಿಸಿಕೊಂಡಿದ್ದರೂ ಇವರು ನೆರೆ ಜಿಲ್ಲೆ ಶಿವಮೊಗ್ಗಕ್ಕೆ ಸೇರಿದವರಾಗಿದ್ದಾರೆ. ಜೊತೆಗೆ ಈ ಸಮುದಾಯದಲ್ಲಿ ಬಹುತೇಕರು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಅಲ್ಪಸಂಖ್ಯಾತರಾದ ಮೇಲ್ವರ್ಗದ ಸಮುದಾಯಗಳ ನಾಯಕರು ರಾಜ್ಯ ಶಾಸಕಾಂಗದಲ್ಲಿ ಸೂಕ್ತ ಪ್ರಾತಿನಿಧ್ಯ ಪಡೆಯುತ್ತಿರುವುದು ಈ ಜಿಲ್ಲೆಯ ವಿಶೇಷವಾಗಿದೆ. ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮೂರು ಸ್ಥಾನಗಳನ್ನು, ಬಿ.ಜೆ.ಪಿ ಒಂದು ಸ್ಥಾನವನ್ನು ಮತ್ತು ಪಕ್ಷೇತರ ಎರಡು ಸ್ಥಾನಗಳನ್ನು ಪಡೆದಿವೆ.

ಜಿಲ್ಲಾಪಂಚಾಯಿತಿ: ಪ್ರಸ್ತುತ ಅಧ್ಯಯನವು ಗ್ರಾಮಪಂಚಾಯಿತಿಗಳ ಅಧ್ಯಯನವಾಗಿರುವುದರಿಂದ ಜಿಲ್ಲೆಯ ಪಂಚಾಯತ್‌ರಾಜ್ ಸಂಸ್ಥೆಗಳ ಬಗ್ಗೆ ಚರ್ಚಿಸುವುದು ಸೂಕ್ತವಾಗಿದೆ. 1993ರ ಪಂಚಾಯತ್‌ರಾಜ್ ಕಾಯ್ದೆ ಅನ್ವಯ, ರಾಜ್ಯದಲ್ಲಿ ಮೂರು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಯಲ್ಲಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಪಂಚಾಯಿತಿ, 11 ತಾಲೂಕುಪಂಚಾಯಿತಿಗಳು ಮತ್ತು 206 ಗ್ರಾಮಪಂಚಾಯಿತಿಗಳು ಅಸ್ತಿತ್ವದಲ್ಲಿವೆ. ಜೊತೆಗೆ ನಗರ ಸ್ಥಳೀಯ ಸರ್ಕಾರದಲ್ಲಿ 3 ನಗರಸಭೆ, 2 ಪುರಸಭೆ ಹಾಗೂ 6 ಪಟ್ಟಣ ಪಂಚಾಯಿತಿಗಳು ಅಸ್ತಿತ್ವದಲ್ಲಿವೆ. 2010ರಲ್ಲಿ ಜರುಗಿದ ಜಿಲ್ಲಾಪಂಚಾಯಿತಿ ಮತ್ತು ತಾಲೂಕುಪಂಚಾಯಿತಿ ಚುನಾವಣೆಗಳು ಶೇ.50ರಷ್ಟು ಮಹಿಳಾ ಮೀಸಲಾತಿಗೆ ಒಳಪಟ್ಟು ಜರುಗಿದೆ. ಪ್ರಸ್ತುತ ಉತ್ತರ ಕನ್ನಡ ಜಿಲ್ಲಾಪಂಚಾಯಿತಿಯು 36 ಸದಸ್ಯರನ್ನು ಹೊಂದಿದೆ. ತಾಲೂಕುವಾರು ಸದಸ್ಯರ ವಿವರ ನೋಡಿದಾಗ ಅಂಕೋಲ 3(ಶೇ.8.33), ಭಟ್ಕಳ 4(ಶೇ.11.11), ಹಳಿಯಾಳ 3(ಶೇ.8.33), ಹೊನ್ನಾವರ 5(ಶೇ.13.90), ಜೋಯಿಡಾ(ಸೂಪಾ) 2(ಶೇ.5.56), ಕಾರವಾರ 3(ಶೇ.8.33), ಕುಮುಟಾ 4(ಶೇ.11.11), ಮುಂಡಗೋಡು 3(ಶೇ.8.33), ಸಿದ್ದಾಪುರ 3(ಶೇ.8.33), ಶಿರಿಸಿ 4(ಶೇ.11.11), ಮತ್ತು ಯಲ್ಲಾಪುರ 2(ಶೇ.5.56) ಸದಸ್ಯರು ಪ್ರಾತಿನಿಧ್ಯ ಪಡೆದಿದ್ದಾರೆ. ಲಿಂಗವಾರು ಪ್ರಾತಿನಿಧ್ಯ ನೋಡಿದಾಗ, 17(ಶೇ.47.23) ಪುರುಷ ಸದಸ್ಯರು ಮತ್ತು 19(ಶೇ.52.77) ಮಹಿಳಾ ಸದಸ್ಯರು ಆಯ್ಕೆಯಾಗಿದ್ದಾರೆ. ಇನ್ನು ಜಾತಿವಾರು ಪ್ರಾತಿನಿಧ್ಯ ನೋಡಿದಾಗ, ಪರಿಶಿಷ್ಟ ಜಾತಿಯಿಂದ 3(ಶೇ.8.33), ಪರಿಶಿಷ್ಟ ಪಂಗಡದಿಂದ 1(ಶೇ.2.78), ಹಿಂದುಳಿದ ವರ್ಗಗಳಿಂದ 12(ಶೇ.33.33) ಮತ್ತು ಸಾಮಾನ್ಯ ವರ್ಗಗಳಿಂದ 20(ಶೇ.55.56) ಸದಸ್ಯರು ಚುನಾಯಿತರಾಗಿದ್ದಾರೆ(ನೋಡಿ ಕೋಷ್ಟಕ–

3.7). ಜಿಲ್ಲಾಪಂಚಾಯಿತಿಯ 36 ಸದಸ್ಯರನ್ನು ಹೊರತುಪಡಿಸಿ, 11 ತಾಲೂಕುಪಂಚಾಯಿತಿಗಳ ಅಧ್ಯಕ್ಷರು, 6 ವಿಧಾನಸಭಾ ಸದಸ್ಯರು ಮತ್ತು ಲೋಕಸಭಾ ಸದಸ್ಯರು ಪದನಿಮಿತ್ತ ಸದಸ್ಯರಾಗಿರುತ್ತಾರೆ.

ತಾಲೂಕುಪಂಚಾಯಿತಿ: ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ತಾಲೂಕುಪಂಚಾಯಿತಿ ಮಧ್ಯಮ ಹಂತದ ಸರ್ಕಾರವಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 11 ತಾಲೂಕುಪಂಚಾಯಿತಿಗಳಿದ್ದು, ಇವುಗಳಲ್ಲಿ 128 ಸದಸ್ಯರಿದ್ದಾರೆ. ತಾಲೂಕುವಾರು ಸದಸ್ಯರ ವಿವರ ನೋಡಿದಾಗ ಅಂಕೋಲ 11(ಶೇ.8.59), ಭಟ್ಕಳ 12(ಶೇ.9.38), ಹೊನ್ನಾವರ 15(ಶೇ.11.73), ಹಳಿಯಾಳ 11(ಶೇ.8.59), ಕಾರವಾರ 11(ಶೇ.8.59), ಕುಮುಟಾ 12(ಶೇ.9.38), ಜೋಯಿಡಾ 11(ಶೇ.8.59), ಮುಂಡಗೋಡ 11(ಶೇ.8.59), ಸಿದ್ದಾಪುರ 11(ಶೇ.8.59), ಶಿರಿಸಿ 12(ಶೇ.9.38) ಮತ್ತು ಯಲ್ಲಾಪುರ 11(ಶೇ.8.59) ಸದಸ್ಯರನ್ನು ಒಳಗೊಂಡಿವೆ. ಲಿಂಗವಾರು ಪ್ರಾತಿನಿಧ್ಯದಲ್ಲಿ 50(ಶೇ.39.06) ಪುರುಷರು ಮತ್ತು 78(ಶೇ.60.94) ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ. ಜಾತಿವಾರು ಪ್ರಾತಿನಿಧ್ಯ ನೋಡಿದಾಗ ಪರಿಶಿಷ್ಟ ಜಾತಿ 12(ಶೇ.9.38), ಪರಿಶಿಷ್ಟ ಪಂಗಡ 11(ಶೇ.8.59), ಹಿಂದುಳಿದ ವರ್ಗ 37(ಶೇ.28.91) ಮತ್ತು ಸಾಮಾನ್ಯ ವರ್ಗ 68(ಶೇ.53.12) ಸದಸ್ಯರು ಆಯ್ಕೆಗೊಂಡಿದ್ದಾರೆ(ನೋಡಿ ಕೋಷ್ಟಕ–3.8). ಆಯಾ ತಾಲೂಕುಗಳ ಸ್ಥಳೀಯ ಶಾಸಕರು, ಲೋಕಸಭಾ ಸದಸ್ಯರು ಮತ್ತು ತಾಲೂಕು ವ್ಯಾಪ್ತಿಯಲ್ಲಿ ಬರುವ ಗ್ರಾಮಪಂಚಾಯಿತಿಗಳ ಅಧ್ಯಕ್ಷರಲ್ಲಿ ಐದನೇ ಒಂದು ಭಾಗದಷ್ಟು ಅಧ್ಯಕ್ಷರು ಆವರ್ತನ ನೀತಿಯ ಆಧಾರದ ಮೇಲೆ ಪದನಿಮಿತ್ತ ತಾಲೂಕುಪಂಚಾಯಿತಿ ಸದಸ್ಯರಾಗಿರುತ್ತಾರೆ. ಇದು ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಲೂಕುಪಂಚಾಯಿತಿಯ ಪ್ರಾತಿನಿಧ್ಯವಾಗಿದೆ.

ಗ್ರಾಮಪಂಚಾಯಿತಿ: ಉತ್ತರ ಕನ್ನಡ ಜಿಲ್ಲೆಯಲ್ಲಿ ಮೇ 12, 2010ರಂದು ನಾಲ್ಕನೇ ಅವಧಿಗೆ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಶೇ.33.33ರಷ್ಟು ಮಹಿಳಾ ಮೀಸಲಾತಿ ನೀಡಲಾಗಿದೆ. ಪ್ರಸ್ತುತ ಜಿಲ್ಲೆಯಲ್ಲಿ 206 ಗ್ರಾಮಪಂಚಾಯಿತಿಗಳು ಕ್ರಮಬದ್ಧವಾಗಿ ರಚನೆಗೊಂಡಿವೆ. ತಾಲೂಕುವಾರು ಗ್ರಾಮಪಂಚಾಯಿತಿಗಳ ವಿವರ ನೋಡಿದಾಗ, ಅಂಕೋಲ 19, ಭಟ್ಕಳ 16, ಹಳಿಯಾಳ 20, ಹೊನ್ನಾವರ 24, ಜೋಯಿಡಾ 15, ಕಾರವಾರ 17, ಕುಮುಟಾ 20, ಮುಂಡಗೋಡ 13, ಸಿದ್ದಾಪುರ 21, ಶಿರಿಸಿ 27 ಮತ್ತು ಯಲ್ಲಾಪುರ 14 ಗ್ರಾಮಪಂಚಾಯಿತಿಗಳು ಅಸ್ತಿತ್ವದಲ್ಲಿವೆ. ಜಿಲ್ಲೆಯಲ್ಲಿ 206 ಗ್ರಾಮಪಂಚಾಯಿತಿಗಳಿಗೆ 2,622 ಸದಸ್ಯರು ಆಯ್ಕೆಯಾಗಿದ್ದಾರೆ. ಇವರಲ್ಲಿ 1,363(ಶೇ.51.98) ಪುರುಷರು ಮತ್ತು 1,259(ಶೇ.48.02) ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ. ಮಹಿಳೆಯರು ಶೇ.33.33ರಷ್ಟು ಮೀಸಲಾತಿಗಿಂತ ಶೇ.14.69ರಷ್ಟು ಹೆಚ್ಚು ಪ್ರಾತಿನಿಧ್ಯ ಪಡೆದಿದ್ದಾರೆ. ಸದಸ್ಯರ ಜಾತಿವಾರು ವಿವರ ನೋಡಿದಾಗ ಪರಿಶಿಷ್ಟ ಜಾತಿ 279(ಶೇ.10.30), ಪರಿಶಿಷ್ಟ ಪಂಗಡ 218(ಶೇ.8.32), ಹಿಂದುಳಿದ ವರ್ಗ 875(ಶೇ.33.37) ಮತ್ತು ಸಾಮಾನ್ಯ ವರ್ಗ 1,259(ಶೇ.48.01) ಸದಸ್ಯರು ಪ್ರಾತಿನಿಧ್ಯ ಪಡೆದಿದ್ದಾರೆ(ನೋಡಿ ಕೋಷ್ಟಕ–3.9). ಜಿಲ್ಲೆಯ ಚುನಾಯಿತ ಪ್ರತಿನಿಧಿಗಳ ಲಿಂಗ ಮತ್ತು ಜಾತಿವಾರು ಅಂಕಿ ಅಂಶಗಳ ವಿವರಣೆ ನೋಡಿದಾಗ ಆಯಾ ಭಾಗಗಳಲ್ಲಿ ವಾಸಿಸುವ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ಇರುವುದು ಕಂಡುಬರುತ್ತದೆ.

ಉತ್ತರ ಕನ್ನಡ ಜಿಲ್ಲೆ ನೈಸರ್ಗಿಕವಾಗಿ ಶ್ರೀಮಂತ ಜಿಲ್ಲೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳನ್ನು ಗಮನಿಸಿ, ಸಾಮಾಜಿಕವಾಗಿ ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದಾಗ ಈ ಜಿಲ್ಲೆಯಲ್ಲಿ ಪರಿಶಿಷ್ಟರ ಕುಟುಂಬಗಳು ಹಾಗೂ ಜನಸಂಖ್ಯೆ ತೀರಾ ಕಡಿಮೆ ಎನ್ನಬಹುದು. ಇತರ ಜಿಲ್ಲೆಗಳಂತೆ ಪರಿಶಿಷ್ಟರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ ಆದರೆ ಇವರ ಸಂಖ್ಯೆ ಕಡಿಮೆ ಇರುವುದರಿಂದ ಇತರ ಜಿಲ್ಲೆಗಳಲ್ಲಿ ಬೀರಿದಂತಹ ಪ್ರತಿಕೂಲ ಪರಿಣಾಮ ಈ ಜಿಲ್ಲೆಯಲ್ಲಿ ಕಂಡುಬರುವುದಿಲ್ಲ. ಹೀಗಾಗಿ ಉತ್ತರ ಕನ್ನಡ ಜಿಲ್ಲೆ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದುವರೆದ ಜಿಲ್ಲೆಯಾಗಿದೆ. ಇಂತಹ ಹಿನ್ನೆಲೆಯುಳ್ಳ ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಾತಿನಿಧ್ಯ ಹಾಗೂ ಆ ಮೂಲಕ ಅವರ ಸಬಲೀಕರಣ ಕುರಿತು ಅಧ್ಯಯನ ಮಾಡಲು ಈ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

3.5 ಸಿದ್ದಾಪುರ ತಾಲೂಕು

ಅಧ್ಯಯನ ಕ್ಷೇತ್ರದ ಜಿಲ್ಲೆಯ ನಂತರ ತಾಲೂಕಿನ ಪರಿಚಯವನ್ನು ಅಂಕಿ ಅಂಶಗಳೊಂದಿಗೆ ವಿಶ್ಲೇಷಿಸಲಾಗಿದೆ. ಸಿದ್ದಾಪುರ ತಾಲೂಕು ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಆಗ್ನೇಯ ಭಾಗದಲ್ಲಿರುವ ತಾಲೂಕಾಗಿದೆ. ಇದು ಜಿಲ್ಲೆಯ ಆಡಳಿತ ಉಪವಿಭಾಗವಾದ ಶಿರಸಿ ವಿಭಾಗಕ್ಕೆ ಸೇರಿದೆ. ಜಿಲ್ಲಾ ಕೇಂದ್ರದಿಂದ 145ಕಿ.ಮೀ ದೂರದಲ್ಲಿರುವ ಸಿದ್ದಾಪುರ ತಾಲೂಕು ಜಿಲ್ಲೆಯಲ್ಲೇ ಅತ್ಯಂತ ದೂರದಲ್ಲಿರುವ ತಾಲೂಕಾಗಿದೆ. ನೈಸರ್ಗಿಕವಾಗಿ ಸಮೃದ್ಧಿವಾಗಿದ್ದರೂ ಅಗತ್ಯ ಸೌಲಭ್ಯಗಳಿಂದ ವಂಚಿತ ತಾಲೂಕಾಗಿದೆ. ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದಾಗ ಸಿದ್ದಾಪುರ ತಾಲೂಕು ಶಿಕ್ಷಣ, ವೈದ್ಯಕೀಯ, ನೀರಾವರಿ, ಉದ್ಯೋಗ, ಮಾರುಕಟ್ಟೆ, ವಾಣಿಜ್ಯ, ಉದ್ದಿಮೆ, ಕಾರ್ಖಾನೆ, ಸಾರಿಗೆ-ಸಂಪರ್ಕ ಇತ್ಯಾದಿ ಪ್ರಮುಖ ಸೌಲಭ್ಯಗಳನ್ನು ಸಾಧಾರಣ ಪ್ರಮಾಣದಲ್ಲಿ ಪಡೆದ ತಾಲೂಕಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಸೌಲಭ್ಯಗಳನ್ನು ಹೊಂದಿರುವ ತಾಲೂಕುಗಳಿಗೆ ಹೋಲಿಸಿದಾಗ ಮಧ್ಯಮ ಕ್ರಮಾಂಕದಲ್ಲಿ ಬರುವ ತಾಲೂಕಾಗಿದೆ. ಹೀಗಾಗಿ ಸಿದ್ದಾಪುರ ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದಾಗ ಹಿಂದುಳಿದ ತಾಲೂಕು ಎಂದು ಗುರುತಿಸಲಾಗಿದೆ. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಜಿಲ್ಲೆಯಲ್ಲಿ ಹಿಂದುಳಿದ ತಾಲೂಕು ಎಂದು ಗುರುತಿಸಲ್ಪಟ್ಟ ಸಿದ್ದಾಪುರ ತಾಲೂಕನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಚಾರಿತ್ರಿಕ ಹಿನ್ನೆಲೆ: ಕರ್ನಾಟಕದ ಬಾರ್ಡೋಲಿ ಎಂದೇ ಪ್ರಖ್ಯಾತಿ ಪಡೆದ ಸಿದ್ದಾಪುರ ತಾಲೂಕು ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯೋತ್ತರ ಚಳವಳಿಗಳಲ್ಲಿ ಮುಂಚೂಣಿಯಲ್ಲಿದ್ದ ತಾಲೂಕು ಎಂದು ಹೆಸರು ಪಡೆದಿದೆ. ಬಿಳಿಗಿ(ಶ್ವೇತಪುರ) ಅರಸರ ಆಡಳಿತದಿಂದ ಪ್ರಾರಂಭವಾದ ಸಿದ್ದಾಪುರ ತಾಲೂಕು ಏಳೆಂಟು ಶತಮಾನಗಳ ಐತಿಹಾಸಿಕ ಹಿನ್ನೆಲೆಯುಳ್ಳ ಪ್ರದೇಶವಾಗಿದೆ. ಈ ಪ್ರದೇಶದ(ಉತ್ತರ ಕನ್ನಡ ಜಿಲ್ಲೆ) ವ್ಯಾಪ್ತಿಯಲ್ಲಿ ಆಳ್ವಿಕೆ ಮಾಡಿದ ಬಿಳಿಗಿ, ಸೋಂದೆ ಮತ್ತು ಕೆಳದಿ ಅರಸರು ಸಮಕಾಲೀನರಾಗಿದ್ದರು[51] ಎಂಬುದು ಇತಿಹಾಸದಿಂದ ಕಂಡುಬರುತ್ತದೆ.

ಸಿದ್ದಾಪುರ ತಾಲೂಕಿನ ಬಹುತೇಕ ಪ್ರದೇಶವು ಬೆಟ್ಟ ಗುಡ್ಡಗಳಿಂದ ಕೂಡಿದ ಅರಣ್ಯ ಪ್ರದೇಶದಿಂದ ಆವೃತ್ತವಾಗಿದೆ. ಮಲೆನಾಡು ಪ್ರದೇಶವಾದ ಸಿದ್ದಾಪುರ ತಾಲೂಕು ನಿತ್ಯಹರಿದ್ವರ್ಣ ಕಾಡು ಹಾಗೂ ಅಲ್ಲಿಲ್ಲಿ ಹರಿಯುವ ಝುರಿ ತೊರೆಗಳಿಂದ ಕೂಡಿದೆ. ಇಂತಹ ಕಣಿವೆ, ಇಳಿಜಾರು, ತಗ್ಗು ಮತ್ತು ಸಮತಟ್ಟಾದ ಪ್ರದೇಶಗಳಲ್ಲಿ ಇಂದು ಬಯಲು ಗದ್ದೆ ಮತ್ತು ಅಡಿಕೆ ತೋಟಗಳಿಂದ ಕೂಡಿದೆ. ಸಿದ್ದಾಪುರ ತಾಲೂಕು ಪ್ರದೇಶವು ಒಳನಾಡ ಅರಸರ ರಾಜ್ಯಗಳಿಗೂ ಮತ್ತು ಭಟ್ಕಳ, ಹೊನ್ನಾವರ, ಕಾರವಾರ, ಕುಮುಟಾ ಇತ್ಯಾದಿ ಪಶ್ಚಿಮ ಕರಾವಳಿ ಬಂದರು ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ಮಾರ್ಗವಾಗಿತ್ತು ಎಂಬುದು ಇತಿಹಾಸದಿಂದ ಕಂಡುಬರುತ್ತದೆ. ದೇಶ-ವಿದೇಶದ ವ್ಯಾಪಾರಸ್ಥರು ಒಳನಾಡು ಅರಸರಿಗೆ ಸೈನ್ಯಕ್ಕೆ ಬೇಕಾದ ಆನೆ, ಒಂಟೆ, ಕುದುರೆ ಹಾಗೂ ಇತರ ಅಗತ್ಯ ಸಾಮಗ್ರಿಗಳನ್ನು ತಲುಪಿಸುವ ಹಾಗೂ ಮುತ್ತು, ರತ್ನ, ವಜ್ರ, ವೈಡೂರ್ಯ ಮತ್ತು ಸಾಂಬಾರು ಪದಾರ್ಥಗಳ ವ್ಯಾಪಾರಕ್ಕೆ ಬರುವ ವಿದೇಶಿ ವರ್ತಕರು ಸಿದ್ದಾಪುರದ ಮೂಲಕ ಬಂದರು ಪ್ರದೇಶಗಳಿಗೆ ಬಂದು ಹೋಗುವ ಮಾರ್ಗವಾಗಿತ್ತು. ರಾಜ್ಯದ ಒಳನಾಡ ಅರಸರ ವ್ಯಾಪಾರ, ಅಭಿವೃದ್ಧಿ ಮತ್ತು ರಕ್ಷಣೆಯ ಹಿತದೃಷ್ಟಿಯಿಂದ ಆಯಕಟ್ಟಿನ ಪ್ರದೇಶವಾಗಿದ್ದ ಸಿದ್ದಾಪುರ ಪ್ರದೇಶವನ್ನು ಶಾತವಾಹನ, ಪಲ್ಲವ, ಕದಂಬ, ಹೊಯ್ಸಳ ಮತ್ತು ವಿಜಯನಗರ ಅರಸರ ನೇರ ಆಡಳಿತಕ್ಕೆ ಒಳಪಟ್ಟಿರುವುದು ಇತಿಹಾಸದಿಂದ ಕಂಡು ಬರುತ್ತದೆ. ಈ ಪ್ರದೇಶವು 10ನೇ ಶತಮಾನದಿಂದ 13ನೇ ಶತಮಾನದವರಗೆ ಬನವಾಸಿ ಕದಂಬರ ಆಡಳಿತಕ್ಕೆ ಒಳಪಟ್ಟಿದ್ದು ಶಾಸನಾಧರಗಳಿಂದ ತಿಳಿದುಬರುತ್ತದೆ.[52] 14ನೇ ಶತಮಾನದ ವೇಳೆಗೆ ಪೂರ್ವ ಕರ್ನಾಟಕದಲ್ಲಿ ಬಲಿಷ್ಠ ಸಾಮ್ರಾಜ್ಯವಾಗಿ ತಲೆ ಎತ್ತಿನಿಂತ ವಿಜಯನಗರ ಅರಸರ ನೇರ ಆಡಳಿತಕ್ಕೆ ಒಳಪಟ್ಟಿರುವುದು ಕಂಡುಬರುತ್ತದೆ. ಇವರ ಅವಧಿಯಲ್ಲಿ ಸಿದ್ದಾಪುರದ ಹಣಜೀಬೈಲು ಗ್ರಾಮವು 'ಚಿಕ್ಕ ಮಲ್ಲಿಗೆ ನಾಡು' ಎಂದೇ ಪರಿಚಿತವಾಗಿತ್ತು.[53] ರಸ್ತೆಯ ಎರಡು ಬದಿಗಳಲ್ಲಿ ಮುಕ್ತವಾಗಿ ಮುತ್ತು, ರತ್ನ, ವಜ್ರ, ವೈಡೂರ್ಯಗಳನ್ನು ಬಳ್ಳದಿಂದ ಆಳೆದು ಮಾರುತ್ತಿದ್ದ ಸಾಮ್ರಾಜ್ಯವೆಂದೇ ವಿಶ್ವವಿಖ್ಯಾತಿ ಪಡೆದ ವಿಜಯನಗರ ಅರಸರ ಜೊತೆ ವ್ಯಾಪಾರ ವಹಿವಾಟು ಸಂಬಂಧವಾಗಿ ಬಂದು ಹೋಗುವ ವಿದೇಶಿ ವ್ಯಾಪಾರಸ್ಥರು ಸಮುದ್ರ ಮಾರ್ಗವನ್ನು ಅವಲಂಬಿಸಿದ್ದರು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಇವರು ಬಂದರು ಪ್ರದೇಶ ಅಥವಾ ಸಮುದ್ರ ತೀರದಿಂದ ಒಳನಾಡು ತಲುಪಲು ದಟ್ಟವಾದ ಅರಣ್ಯ ಮಾರ್ಗವನ್ನು ಬಳಸಿ ಬರಬೇಕಾಗಿತ್ತು. ಸೈನ್ಯಕ್ಕೆ ಬರುವ ಕುದುರೆ, ಆನೆ, ಒಂಟೆ ಇತರ ಅಗತ್ಯ ಸಾಮಗ್ರಿಗಳ ಮತ್ತು ವ್ಯಾಪಾರಸ್ಥರ ಜೀವ ಮತ್ತು ಸಂಪತ್ತಿನ ರಕ್ಷಣೆಯ ದೃಷ್ಟಿಯಿಂದ ವಿಜಯನಗರ ಅರಸರು ಬೇಡರ/ನಾಯಕರ ಕಾವಲುಪಡೆಯನ್ನು ಇಟ್ಟಿದ್ದರು. ಇಂತಹ ಕಾವಲು ಪಡೆಗಳುಳ್ಳ ಪ್ರದೇಶವನ್ನು ಮಂಡಲ ಪ್ರದೇಶವನ್ನಾಗಿಸಿ ಇದರ ಉಸ್ತುವಾರಿಯನ್ನು ನೋಡಿಕೊಳ್ಳಲು ಮಾಂಡಲಿಕರನ್ನು ನೇಮಕ ಮಾಡುತ್ತಿದ್ದರು. ಸಿದ್ದಾಪುರ ತಾಲೂಕಿನಲ್ಲಿ ಬರುವ ಬಿಳಿಗಿಯನ್ನು ಮಾಂಡಲಿಕ ಪ್ರದೇಶವನ್ನಾಗಿಸಿ, ಆಂಡಣ್ಣ ಭೂಪಾಲನನ್ನು ನೇಮಕ ಮಾಡಿದರು. ಸರಿಸುಮಾರು ಕ್ರಿ.ಶ. 1400 ರಿಂದ 1450ರ ಅವಧಿಯಲ್ಲಿ ವಿಜಯನಗರ ಮಾಂಡಲಿಕನಾದ ಆಂಡಣ್ಣ ಭೂಪಾಲನು ಐಸೂರನ್ನು ರಾಜಧಾನಿ ಮಾಡಿಕೊಂಡು ಸಿದ್ದಾಪುರ ತಾಲೂಕಿನ ಬಹುತೇಕ ಭಾಗವನ್ನು

ಹಾಗೂ ಸಾಗರ ತಾಲೂಕಿನ ಕೆಲಭಾಗವನ್ನು ಆಳುತ್ತಿದ್ದನು[54] ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಐಸೂರು ಸಿದ್ದಾಪುರದಿಂದ ಪಶ್ಚಿಮಕ್ಕೆ 24 ಕಿ.ಮೀ. ದೂರದಲ್ಲಿದ್ದು, ಇದನ್ನು ಮೊದಲು ಐಶ್ವರ್ಯಪುರ ಎಂದು ಕರೆಯುತ್ತಿದ್ದರು. ಆದರೆ ಆಂಡಣ್ಣನ ಮೊಮ್ಮಗ ಒಂದನೇ ಮುಂಡಣ್ಣ, ಈತನ ಮೊಮ್ಮಗನಾದ ಒಂದನೇ ಘಂಟೆ(ಘಂಟೇಂದ್ರ) ಒಡೆಯನು ಸುಮಾರು 1490ರಲ್ಲಿ ಐಸೂರಿನಿಂದ ಬಿಳಿಗಿಗೆ ರಾಜಧಾನಿಯನ್ನು ವರ್ಗಾಯಿಸಿಕೊಂಡು, ಬೇಡ್ಕಣಿ, ಕುಣಜಿ, ಕೊಂಡ್ಲಿಗಳಲ್ಲಿದ್ದ ಕೋಟೆಗಳನ್ನು, ಅಲ್ಲಿಯ ಬೇಡರ ಕಾವಲು ಪಡೆಗಳನ್ನು ಮತ್ತು ಮುಗದೂರನಲ್ಲಿದ್ದ ಬೇಡರ ಪಾಳೆಯವನ್ನು ಅಂಕಿತಕ್ಕೆ ತಂದುಕೊಂಡನೆಂದು ತಿಳಿದುಬರುತ್ತದೆ[55] ಮೂಲತಃ ಜೈನಧರ್ಮದ ಅನುಯಾಯಿಗಳಾಗಿದ್ದ ಬಿಳಿಗಿ ಅರಸರು ಕ್ರಿ.ಶ. 1600ರ ವೇಳೆಗೆ ವೀರಶೈವ ಧರ್ಮವನ್ನು ಸ್ವೀಕರಿಸಿದರೆಂದು ತಿಳಿಯಲಾಗಿದೆ. ನಾಲ್ಕನೇ ಘಂಟೇಂದ್ರನು ಅಧಿಕಾರ ವಹಿಸಿಕೊಂಡಾಗ ಈತನಿಗೆ ಕಲ್ಯಾಣವಾಗಲೆಂದು ಈತನ ತಾಯಿ ಜಯಾಂಬ ರಾಣಿ 1651ರ ಅವಧಿಯಲ್ಲಿ ಬಿಳಿಗಿಯ ಪೂರ್ವದಿಕ್ಕಿನಲ್ಲಿ 13 ಕಿ.ಮೀ. ದೂರದಲ್ಲಿ ಸಿದ್ಧಿವಿನಾಯಕ ದೇವಾಲಯವನ್ನು ಹಾಗೂ ಹಲವು ಧರ್ಮಶಾಲೆಗಳನ್ನು ಕಟ್ಟಿಸಿದಳೆಂದು ತಿಳಿದುಬರುತ್ತದೆ. ಬಿಳಿಗಿ ಅರಸರು ಸಿದ್ಧಿವಿನಾಯಕ ದೇವಾಲಯ ಕಟ್ಟಿಸಿದ ಈ ಪ್ರದೇಶಕ್ಕೆ ಸಿದ್ದಾಪುರ ಎಂದು ಹೆಸರು ಬಂದಿತೆಂದೂ ಹೇಳಲಾಗುತ್ತಿದೆ. ಬಿಳಿಗಿಯ ಸಿದ್ದಮ್ಮ ರಾಣಿಯ ಹೆಸರಿನ ಮೇಲೆ ಈ ಊರಿಗೆ ಸಿದ್ದಾಪುರ ಎಂದು ಹೆಸರು ಬಂತೆಂದು ಪ್ರತೀತಿ ಇದೆ. ಆದರೆ ಇಲ್ಲಿ ನಾಲ್ಕನೇ ಘಂಟೇಂದ್ರನ ತಾಯಿ ಜಯಾಂಬ ರಾಣಿಯೇ ಸಿದ್ದಮ್ಮ ರಾಣಿ ಇರಬಹುದೆಂದು ಗ್ರಹಿಸಲಾಗಿದೆ. 1643ರ ದಾಖಲೆಯೊಂದರ ಪ್ರಕಾರ, ನಾಲ್ಕನೇ ಘಂಟೇಂದ್ರ ಒಡೆಯನು ಸಿದ್ದಾಪುರ ವೀರಶೈವ ಮಠಕ್ಕೆ ದತ್ತಿ ಕೊಟ್ಟಿದ್ದರ ಬಗ್ಗೆ ಶಾಸನವೊಂದು ತಿಳಿಸುತ್ತದೆ.[56] ನಂತರ ಎರಡನೇ ಸೋಮಶೇಖರನ ಕಾಲದಲ್ಲಿ ಈ ಪ್ರದೇಶವು ಮರಾಠರ ಮೊದಲನೆಯ ಪೇಶ್ವೆ ಬಾಜಿರಾಯನ ನಿಯಂತ್ರಣಕ್ಕೆ ಒಳಪಟ್ಟಿತು. 1764ರಲ್ಲಿ ಹೈದರಾಲಿಯು ಈ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡನು. 1969ರ ದಾಖಲೆ ಪ್ರಕಾರ, ಹೈದರಾಲಿ ಮತ್ತು ಟಿಪ್ಪುಸುಲ್ತಾನನ ಆಳ್ವಿಕೆ ಇರುವರೆಗೂ ಅವರ ಅಧೀನಕ್ಕೆ ಒಳಪಟ್ಟು ಬಿಳಿಗಿಯ ಅರಸನಾದ ಮೂರನೇ ಸೋಮಶೇಖರನು ಆಡಳಿತ ನಡೆಸಿದನು ಎಂದು ತಿಳಿದುಬರುತ್ತದೆ. 1799ರಲ್ಲಿ ಟಿಪ್ಪುಸುಲ್ತಾನ್ ಆಂಗ್ಲರಿಗೆ ಸೋತು ಹತನಾದ ಮೇಲೆ ಮೂರನೇ ಸೋಮಶೇಖರನು ಬ್ರಿಟಿಷರ ವಿರುದ್ಧ ದಂಗೆ ಎದ್ದನು. ಆದರೆ 1800 ಸೆಪ್ಟಂಬರ್ ತಿಂಗಳಿನಲ್ಲಿ ಈತನು ಕೊಲ್ಲಲ್ಪಟ್ಟನು ಎಂದು ತಿಳಿಯುತ್ತದೆ. ನಂತರ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಬಿಳಿಗಿ ತಾಲೂಕಾಗಿ ಪರಿವರ್ತನೆಯಾಗಿತು. ಸ್ವತಂತ್ರ ತಾಲೂಕಾದ ಬಿಳಿಗಿ ಪ್ರದೇಶವು 1859ರಲ್ಲಿ ಸೋಂದೆ(ಈಗಿನ ಶಿರಸಿ) ತಾಲೂಕಿಗೆ ಸೇರಿಸಲಾಯಿತು. ಬ್ರಿಟಿಷರು ಆಡಳಿತ ದೃಷ್ಟಿಯಿಂದ 1862ರಲ್ಲಿ ಅಖಂಡ ಕೆನರಾ ಪ್ರದೇಶವನ್ನು ವಿಭಜಿಸಿ ನಾರ್ಥ್ ಕೆನರಾ ಮತ್ತು ಸೌತ್ ಕೆನರಾ ಎಂದು ರಚನೆ ಮಾಡಿದರು. ನಾರ್ಥ್ ಕೆನರಾ ಜಿಲ್ಲೆ ಅಸ್ತಿತ್ವಕ್ಕೆ ಬಂದ ಮೇಲೂ ಸೋಂದೆ ತಾಲೂಕಿಗೆ ಸೇರಿದ್ದ ಸಿದ್ದಾಪುರ ಪ್ರದೇಶವು 1880ರಲ್ಲಿ ಸ್ವತಂತ್ರ ತಾಲೂಕಾಗಿ ಅಸ್ತಿತ್ವಕ್ಕೆ ಬಂದಿತು. ಒಳನಾಡು ಅರಸರಿಗೆ ವ್ಯಾಪಾರ, ರಕ್ಷಣೆ ಮತ್ತು ಅಭಿವೃದ್ಧಿಯ ಹಿತದೃಷ್ಟಿಯಿಂದ ಸಿದ್ದಾಪುರ ಆಯಕಟ್ಟಿನ ಪ್ರದೇಶವಾಗಿತ್ತೇ ಹೊರತು ಆದಾಯ ತರುವ

ಪ್ರದೇಶವಾಗಿರಲಿಲ್ಲ. ಹೀಗಾಗಿ ಮುಂಬೈ ಪ್ರಾಂತದ ಒಂದು ಮೂಲೆಯಲ್ಲಿದ್ದ ಸಿದ್ದಾಪುರ ತಾಲೂಕು ಬ್ರಿಟಿಷರ ಆಡಳಿತ ಕಾಲದಲ್ಲೇ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿತು. ನಾಗರಿಕ ಸೌಲಭ್ಯಗಳಿಂದಲೂ ವಂಚಿತವಾಗಿತು.

ಸ್ವಾತಂತ್ರ್ಯ ಚಳವಳಿಗೆ ಸಿದ್ದಾಪುರ ತಾಲೂಕಿನ ಜನರು 1917ರಿಂದ 1947ರವರೆಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಸಿದ್ದಾಪುರ ತಾಲೂಕಿನಲ್ಲಿ 1917ರಲ್ಲಿ ದೊಡ್ಮನೆ ನಾರಾಯಣ ಗಣೇಶ ಹೆಗಡೆ ಮತ್ತು ತಿಮ್ಮಪ್ಪ ನಾಯಕ ಮಾಸ್ತರ್ ನೇತೃತ್ವದಲ್ಲಿ ನಡೆದ ಹೋಂ ರೂಲ್ ಚಳವಳಿ ಮೂಲಕ ಸ್ವಾತಂತ್ರ್ಯ ಚಳವಳಿ ಪ್ರಾರಂಭವಾಗಿತು. ಗಾಂಧೀಜಿಯ ಕಟ್ಟಾ ಅನುಯಾಯಿ ಹಾಗೂ ಜಲಿಯಾನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಗಾಯಗೊಂಡಿದ್ದ ಹಬೀಬುಲ್ ಖಾನ್ 1921ರಲ್ಲಿ ಸಿದ್ದಾಪುರಕ್ಕೆ ಬಂದಾಗ, ಇವರ ನೇತೃತ್ವದಲ್ಲಿ ತಾಲೂಕು ಕಛೇರಿ ಎದುರಿನಲ್ಲೇ ವಿದೇಶಿ ವಸ್ತುಗಳನ್ನು ದಹನ ಮಾಡಲಾಗಿತು. ಗಾಂಧೀಜಿ ಕರೆಯ ಮೇರೆಗೆ ಅಸಹಕಾರ ಚಳವಳಿಯಲ್ಲಿ ತೊಡಗಿದ್ದ ತಾಲೂಕಿನ ಜನರು 1923ರ ನಾಗಪುರ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲೇ ಪ್ರಥಮ ಬಾರಿಗೆ ಬ್ರಿಟಿಷರಿಂದ ಬಂಧಿತನಾದ ಸಿದ್ದಾಪುರ ತಾಲೂಕಿನ ಬೇಡ್ಕಣಿಯ ಚೌಡನಾಯ್ಕನು ಶಿಕ್ಷೆಗೆ ಗುರಿಯಾದನು. 1932ರಲ್ಲಿ ಸತ್ಯಾಗ್ರಹಿಗಳ ಮನೆಗಳನ್ನು ಜಪ್ತಿ ಮಾಡಿ ತಂದ ವಸ್ತುಗಳನ್ನು ಹರಾಜು ಹಾಕದಂತೆ ತಡೆಯಲು ಸರ್ದಾರ್ ವೆಂಕಟರಾಮಯ್ಯನವರ ಧರ್ಮಪತ್ನಿ ಗೌರಮ್ಮನ ನೇತೃತ್ವದಲ್ಲಿ ಅನೇಕ ಮಹಿಳೆಯರು ಹೋರಾಟ ಮಾಡಿದರು. ಇದೇ ವೇಳೆಗೆ ಬ್ರಿಟಿಷರಿಂದ ದಬ್ಬಾಳಿಕೆ ಮತ್ತು ಅನ್ಯಾಯಕ್ಕೆ ಒಳಗಾದ ರೈತ ಸಂಘಟನೆಗಳ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ದುಮುಕಿದರು. ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ 'ಉಳುವವನೇ ಒಡೆಯ' ಎಂಬ ರೈತ ಚಳವಳಿಯು ದಿನಕರ ದೇಸಾಯಿ ನೇತೃತ್ವದಲ್ಲಿ ಪ್ರಾರಂಭವಾಗಿತು. 1947ರಿಂದ 1968ರವರೆಗೆ ನಡೆದ ಸರಣಿ ಹೋರಾಟದಲ್ಲಿ ಸಿದ್ದಾಪುರ ತಾಲೂಕಿನ ರೈತರು ಸಕ್ರಿಯವಾಗಿ ಭಾಗವಹಿಸಿದರು. ರೈತ ಸಂಘಟನೆಗಳು ಮತ್ತು ರೈತ ಹೋರಾಟಗಳು ಭೂಮಿಯ ಒಡೆತನಕ್ಕೆ ಸೀಮಿತವಾಗಿತ್ತೇ ಹೊರತು ಸಾಮಾಜಿಕ ಅಸಮಾನತೆಯನ್ನು ಮತ್ತು ಲಿಂಗಭೇದವನ್ನು ಪ್ರಶ್ನಿಸುವುದಕ್ಕೆ ಆದ್ಯತೆ ನೀಡಲಿಲ್ಲ. ಬದಲಾಗಿ ಜಾತಿಪದ್ಧತಿ ಮತ್ತು ಲಿಂಗತಾರತಮ್ಯವನ್ನು ಜೀವಂತವಾಗಿ ಇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು.[57]

ಸಿದ್ದಾಪುರ, ರಾಜ್ಯ ಮತ್ತು ರಾಷ್ಟ್ರಮಟ್ಟದ ಮುತ್ಸದ್ದಿ ರಾಜಕಾರಣಿಯೆಂದೇ ಜನಪ್ರಿಯರಾದ ರಾಮಕೃಷ್ಣ ಹೆಗಡೆ ಅವರಿಗೆ ಜನ್ಮ ನೀಡಿದ ತಾಲೂಕಾಗಿದೆ. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ, ಸೆರೆಮನೆ ಶಿಕ್ಷೆ ಅನುಭವಿಸಿದ ರಾಮಕೃಷ್ಣ ಹೆಗಡೆ ಮುಂದೆ ನಿಜಲಿಂಗಪ್ಪ ಮತ್ತು ವೀರೇಂದ್ರ ಪಾಟೀಲ್ ಇವರ ಮಂತ್ರಿಮಂಡಲದಲ್ಲಿ ಮಂತ್ರಿಯಾದರು. 1983ರಲ್ಲಿ ರಾಜ್ಯದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರದ ಮುಖ್ಯಮಂತ್ರಿಯಾದ ಇವರು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ.25ರಷ್ಟು ಮೀಸಲಾತಿ ನೀಡುವುದರ ಜನತಂತ್ರ ವಿಕೇಂದ್ರೀಕರಣಕ್ಕೆ ಉತ್ತಮ ಅಡಿಪಾಯ ಹಾಕಿಕೊಟ್ಟರು. ಸಂವಿಧಾನದ 73ನೇ ತಿದ್ದುಪಡಿಗೆ ಪ್ರೇರಣೆಗೆ ಕಾರಣೀಭೂತರಾದರು.

ಕೇಂದ್ರದಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಮತ್ತು ವಾಣಿಜ್ಯ ಸಚಿವರಾಗಿ ರಾಷ್ಟ್ರ ರಾಜಕಾರಣಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಭೌಗೋಳಿಕ ಹಿನ್ನೆಲೆ: ಉತ್ತರ ಕನ್ನಡ ಜಿಲ್ಲೆಯ ಪೂರ್ವ ಆಗ್ನೇಯ ಭಾಗದಲ್ಲಿ ಬರುವ ಸಿದ್ದಾಪುರ ತಾಲೂಕು ಪಶ್ಚಿಮಘಟ್ಟದ ದಕ್ಷಿಣ ಭಾಗದಲ್ಲಿ ಕಣಿವೆ ಪ್ರದೇಶದಲ್ಲಿ ವಿಸ್ತರಿಸಿಕೊಂಡಿದೆ. ಇದು ಸಮತಟ್ಟಾದ ಬಯಲು ಪ್ರದೇಶವಲ್ಲ. ಬೆಟ್ಟ-ಗುಡ್ಡ, ಕಾಡು-ಮೇಡು, ಹಳ್ಳ-ಕೊಳ್ಳ, ಝರಿ-ನದಿಗಳಿಂದ ಕೂಡಿದ ಏರು-ಇಳಿಜಾರು ಪ್ರದೇಶವಾಗಿದೆ. ಸಿದ್ದಾಪುರ ತಾಲೂಕು ಶಿವಮೊಗ್ಗ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಬೇರ್ಪಡಿಸಿ ಹರಿಯುವ ಶರಾವತಿ ನದಿಗೆ ಹತ್ತಿಕೊಂಡಿದೆ. ಈ ನದಿ ಸಾಗರ ತಾಲೂಕು ಮತ್ತು ಸಿದ್ದಾಪುರ ತಾಲೂಕುಗಳ ಗಡಿಯಾಗಿದೆ. ಸಿದ್ದಾಪುರ ತಾಲೂಕಿನ ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ ಮತ್ತು ಸಾಗರ ತಾಲೂಕುಗಳು ಇದ್ದರೆ, ಉತ್ತರಕ್ಕೆ ಶಿರಸಿ ಮತ್ತು ಪಶ್ಚಿಮಕ್ಕೆ ಕುಮುಟಾ ಹಾಗೂ ಹೊನ್ನಾವರ ತಾಲೂಕುಗಳು ಇವೆ.[58]

ಸಿದ್ದಾಪುರ ತಾಲೂಕಿನ ಒಟ್ಟು 85,928 ಹೆಕ್ಟೇರ್ ಪ್ರದೇಶದಲ್ಲಿ 68,130(ಶೇ.79.28) ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶವಿದೆ. ಮಲೆನಾಡು ಪ್ರದೇಶವಾದ ಸಿದ್ದಾಪುರ ತಾಲೂಕು ಪ್ರದೇಶದಲ್ಲಿ ಮಳೆ ಬೀಳುವ ಪ್ರಮಾಣ ಹೆಚ್ಚು ಇದೆ. ತಾಲೂಕಿನಲ್ಲಿ ವಾಡಿಕೆಯಂತೆ ವಾರ್ಷಿಕವಾಗಿ ಮಳೆ ಬಿದ್ದ ಪ್ರಮಾಣ 2,982.5 ಮಿ.ಮೀ.ನಷ್ಟಿದೆ. ಈ ಪ್ರಮಾಣವನ್ನು ಜಿಲ್ಲೆಗೆ ಹೋಲಿಸಿ ನೋಡಿದಾಗ 147 ಮಿ.ಮೀ.ನಷ್ಟು ಹೆಚ್ಚು ಇದೆ. ಇತ್ತೀಚೆಗೆ ಐದು ವರ್ಷಗಳಲ್ಲಿ ಬಿದ್ದ ಮಳೆಯ ಸರಾಸರಿ ಪ್ರಮಾಣವು 2754.7 ಮಿ.ಮೀ.ನಷ್ಟಿದೆ (ನೋಡಿ ಕೋಷ್ಟಕ-3.1). ತಾಲೂಕಿನಲ್ಲಿ ವಾಡಿಕೆಯಂತೆ ಜೂನ್ ಮೊದಲ ವಾರದಿಂದ ಪ್ರಾರಂಭವಾಗುವ ಮಳೆ ಸೆಪ್ಟಂಬರ್ ತಿಂಗಳವರೆಗೆ ಸರಿಸುಮಾರು 100ರಿಂದ 110 ದಿನಗಳ ಕಾಲ ಮಳೆ ಬೀಳುತ್ತದೆ. ಜಿಲ್ಲೆಯ ಕರಾವಳಿ ತಾಲೂಕುಗಳಿಗೆ ಹೋಲಿಸಿದಾಗ ಅಲ್ಲಿರುವಷ್ಟು ಬಿಸಿಲು, ಸಕೆ ಸಿದ್ದಾಪುರ ತಾಲೂಕಿನಲ್ಲಿ ಇರುವುದಿಲ್ಲ. ಬೇಸಿಗೆಯಲ್ಲೂ ಹಿತಕರ ಹವಾಮಾನದಿಂದ ಕೂಡಿರುತ್ತದೆ. ಸಿದ್ದಾಪುರ ತಾಲೂಕು ಕೃಷಿ ಪ್ರಧಾನವಾದ ತಾಲೂಕಾಗಿದೆ. ಕೃಷಿ ಇಲ್ಲಿನ ಜನರ ಮುಖ್ಯ ಬದುಕಾಗಿದೆ. ಇಲ್ಲಿನ ಕೃಷಿ ಚಟುವಟಿಕೆಗಳು ಸಂಪೂರ್ಣವಾಗಿ ಮಳೆಯನ್ನೇ ಅವಲಂಬಿಸಿದೆ. ತಾಲೂಕಿನಲ್ಲಿ ಅಘನಾಶಿನಿ ನದಿ ಹರಿಯುತ್ತಿದ್ದರೂ ಇಲ್ಲಿನ ಕೃಷಿಕರಿಗೆ ವರಪ್ರಸಾದವಾಗಿಲ್ಲ. ತಾಲೂಕಿನಲ್ಲಿ ಒಟ್ಟು ಭೂಪ್ರದೇಶದಲ್ಲಿ 11,846(ಶೇ.13.78) ಮಾತ್ರ ಬಿತ್ತನೆಯಾಗುತ್ತದೆ. ಬಿತ್ತನೆಯಾದ ಒಟ್ಟು ಪ್ರದೇಶದಲ್ಲಿ ಕೆರೆ, ಬಾವಿ, ಕೊಳವೆಬಾವಿ ಮತ್ತು ಝರಿ-ತೊರೆಗಳಿಂದ ಒಟ್ಟು 1,041(ಶೇ.8.78) ಹೆಕ್ಟೇರ್‌ನಷ್ಟು ಮಾತ್ರ ನೀರಾವರಿ ಸೌಲಭ್ಯ ಹೊಂದಿದೆ. ತಾಲೂಕಿನಲ್ಲಿ ನೀರಾವರಿಯಾದ ಪ್ರಮಾಣವನ್ನು ಜಿಲ್ಲೆಗೆ ಹೋಲಿಸಿದಾಗ ಶೇ.4.01 ಹೆಕ್ಟೇರ್‌ನಷ್ಟು ಮಾತ್ರ ನೀರಾವರಿ ಸೌಲಭ್ಯ ಹೊಂದಿದೆ. ತಾಲೂಕಿನ ಬಹುತೇಕ ಭೂಭಾಗವು ಹಗುರಾದ ಮತ್ತು ಲಘು ಪೋಷಕಾಂಶವುಳ್ಳ ಬೆಣಚುಕಲ್ಲು ಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದೆ. ಮಳೆ ಆಶ್ರಯಿಸಿ ಬೆಳೆಯುವ ಭತ್ತ ಮತ್ತು ಅಡಿಕೆ ಇಲ್ಲಿನ ಮುಖ್ಯ ಬೆಳೆಗಳಾಗಿವೆ. ತೆಂಗು, ಬಾಳೆ, ನಿಂಬೆ, ಕೋಕಂ, ಮೆಣಸು, ಏಲಕ್ಕಿ ಇತರ ಮುಖ್ಯ ಬೆಳೆಗಳಾಗಿವೆ. ಸಿದ್ದಾಪುರ ತಾಲೂಕಿನ 68,130 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಶ್ರೀಗಂಧ, ಬೀಟೆ, ಹೊನ್ನೆ, ಮತ್ತಿ, ನಂದಿ ಮುಂತಾದ ಬೆಲೆ ಬಾಳುವ

ಮತ್ತು ಅಮೂಲ್ಯವಾದ ಗಿಡ ಮರಗಳು, ಔಷಧಿ ಸಸ್ಯಗಳು ಹಾಗೂ ಗೋಡಂಬಿ, ನೇರಳೆ, ಮಾವು, ಹಲಸು, ಜೇನು, ಶೀಗೆಕಾಯಿ, ಅಳಲೇಕಾಯಿ, ಹಾಲುಮಡ್ಡಿ, ಉಪ್ಪಾಗೆಹುಳಿ ಮುಂತಾದ ಅರಣ್ಯ ಉತ್ಪನ್ನಗಳು ಲಭ್ಯವಿದೆ. ಕರಡಿ, ಕಾಡೆಮ್ಮೆ-ಕಾಡುಕೋಣ, ಕಾಡು ಹಂದಿ, ಮೊಲ, ನವಿಲು, ಕಾಡು ಕೋಳಿ ಮುಂತಾದ ಮೃಗ, ಖಗ ಪಕ್ಷಿಗಳು ಇಲ್ಲಿನ ಅರಣ್ಯದಲ್ಲಿ ಕಂಡುಬರುತ್ತವೆ.

ಸಾಮಾಜಿಕ ಹಿನ್ನೆಲೆ: 2011ರ ಜನಗಣತಿ ಪ್ರಕಾರ, ಸಿದ್ದಾಪುರ ತಾಲೂಕು 97,450 ಜನಸಂಖ್ಯೆಯನ್ನು ಹೊಂದಿದ್ದು, ಇದರಲ್ಲಿ 48,405(ಶೇ.49.68) ಪುರುಷರು ಮತ್ತು 49,045(ಶೇ.50.32) ಮಹಿಳೆಯರು ಇದ್ದಾರೆ. ಜಿಲ್ಲೆಯ ಜನಸಂಖ್ಯೆಯಲ್ಲಿ ತಾಲೂಕಿನ ಪಾಲು ಶೇ.6.78ರಷ್ಟಿದೆ. ಜಿಲ್ಲೆಯ ಜನಸಂಖ್ಯೆಯಲ್ಲಿ ಸಿದ್ದಾಪುರ ತಾಲೂಕಿನ ಮಹಿಳೆಯರ ಪಾಲು ಶೇ.3.42ರಷ್ಟು ಇದ್ದು, ಈ ಪ್ರಮಾಣವನ್ನು ಜಿಲ್ಲೆಯ ಮಹಿಳೆಯರಿಗೆ ಹೋಲಿಸಿದರೆ ಈ ತಾಲೂಕಿನ ಮಹಿಳೆಯರ ಪಾಲು ಶೇ.6.92ರಷ್ಟಿದೆ. ಉತ್ತರ ಸಿದ್ದಾಪುರ ತಾಲೂಕಿನಲ್ಲಿ ಲಿಂಗಾನುಪಾತವು ಪ್ರತಿ 1,000 ಪುರುಷರಿಗೆ 1,013ರಷ್ಟು ಇದ್ದು, ಇದನ್ನು ಜಿಲ್ಲೆಗೆ(975) ಹೋಲಿಸಿದರೆ 38ರಷ್ಟು ಹೆಚ್ಚು ಇದೆ. ಈ ಜಿಲ್ಲೆಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ 115ರಷ್ಟಿದೆ(ನೋಡಿ ಕೋಷ್ಟಕ-3.2). ಈ ತಾಲೂಕಿನಲ್ಲಿ ಉದ್ಯೋಗ ಅವಕಾಶಗಳು ಕಡಿಮೆ ಇದ್ದು, ಮೇಲ್ವರ್ಗ ಹಾಗೂ ವಿದ್ಯಾವಂತ ಯುವಕರು ಮತ್ತು ಯುವತಿಯರು ಉದ್ಯೋಗ ಹುಡುಕಿಕೊಂಡು ವಲಸೆ ಹೋಗುವುದು ಇದಕ್ಕೆ ಮುಖ್ಯ ಕಾರಣವಾಗಿ ಕಂಡುಬರುತ್ತಿದೆ.

ಸಾಮಾಜಿಕವಾಗಿ ಸಿದ್ದಾಪುರ ವಿವಿಧ ಜಾತಿ, ಧರ್ಮ ಹಾಗೂ ವರ್ಗಗಳಿಂದ ಕೂಡಿದ ತಾಲೂಕಾಗಿದೆ. ತಾಲೂಕಿನಲ್ಲಿ ಮುಖ್ಯವಾಗಿ ನಾಮಧಾರಿ(ಈಡಿಗ) ಸಮುದಾಯ ದೊಡ್ಡ ಸಮುದಾಯವಾಗಿ ಕಂಡುಬರುತ್ತದೆ. ಎರಡನೇ ದೊಡ್ಡ ಸಮುದಾಯವರಾಗಿ ಬ್ರಾಹ್ಮಣರು ಬರುತ್ತಾರೆ. ಇವರ ಜೊತೆಗೆ ಮುಂದುವರೆದ ಇತರ ಜಾತಿಗಳಾದ ಸಾರಸ್ವತ, ಗೌಡಸಾರಸ್ವತ, ಒಕ್ಕಲಿಗರು ನಂತರ ಸ್ಥಾನದಲ್ಲಿ ಬರುತ್ತಾರೆ. ಲಿಂಗಾಯತರು, ಬಂಟರು, ಅಂಬಿಗರು, ಮಡಿವಾಳರು, ಆಚಾರಿ(ಬಡಿಗ), ಮರಾಠಿಗಳೂ ಇತರ ಮೇಲ್ಜಾತಿಯರು ಅಲ್ಪಸಂಖ್ಯಾತರಾಗಿದಾರೆ. ಪರಿಶಿಷ್ಟ ಜಾತಿಯವರು ಕಡಿಮೆ ಎನ್ನಬಹುದು. ಪರಿಶಿಷ್ಟ ಪಂಗಡದವರ ಸಂಖ್ಯೆ ಇಲ್ಲವೆನ್ನುವಷ್ಟರ ಮಟ್ಟಿಗೆ ಅಲ್ಲೊಂದು ಇಲ್ಲೊಂದು ಕುಟುಂಬಗಳು ಕಂಡುಬರುತ್ತವೆ. ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮದವರು ಇದ್ದರೂ ಅವರ ಸಂಖ್ಯೆ ತೀರ ಕಡಿಮೆ ಇದೆ. ಒಟ್ಟಾರೆಯಾಗಿ ಈ ತಾಲೂಕಿನಲ್ಲಿ ಪರಿಶಿಷ್ಟರ ಮತ್ತು ಅಲ್ಪಸಂಖ್ಯಾತರ ಸಂಖ್ಯೆ ಕಡಿಮೆ ಇದೆ. ಹೀಗಾಗಿ ಸಿದ್ದಾಪುರ ಸಾಕ್ಷರತೆಯಲ್ಲಿ ಮುಂದುವರೆದ ತಾಲೂಕುಗಳಲ್ಲಿ ಒಂದಾಗಿದೆ.

2011ರ ಜನಗಣತಿ ಪ್ರಕಾರ, ಸಿದ್ದಾಪುರ ತಾಲೂಕಿನ ಜನಸಂಖ್ಯೆಯಲ್ಲಿ ಶೇ.85.41ರಷ್ಟು(832,37) ಜನರು ಗ್ರಾಮೀಣ ಪ್ರದೇಶದಲ್ಲಿ ಇದ್ದಾರೆ. ಇವರಲ್ಲಿ ಶೇ.50.33(41,894)ರಷ್ಟು ಮಹಿಳೆಯರಾಗಿದ್ದಾರೆ. ಸಿದ್ದಾಪುರ ತಾಲೂಕಿನ ಸಾಕ್ಷರತೆ ಪ್ರಮಾಣ ಶೇ.86.38(84,176)ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇ.91.92(44,496)ರಷ್ಟು ಮತ್ತು ಮಹಿಳಾ ಸಾಕ್ಷರತಾ ಪ್ರಮಾಣ ಶೇ.80.90(39,680)ರಷ್ಟಿದೆ. ಜಿಲ್ಲೆಯ ಸಾಕ್ಷರತೆ ಪ್ರಮಾಣಕ್ಕೆ ಹೋಲಿಸಿದರೆ ಒಟ್ಟು ಸಾಕ್ಷರತೆಯಲ್ಲಿ ಶೇ.2.35ರಷ್ಟು, ಪುರುಷ ಸಾಕ್ಷರತೆಯಲ್ಲಿ ಶೇ.2.20 ಮತ್ತು ಮಹಿಳಾ ಸಾಕ್ಷರತೆಯಲ್ಲಿ ಶೇ.2.69ರಷ್ಟು

ಹೆಚ್ಚು ಇರುವುದು ಕಂಡುಬರುತ್ತದೆ. ಜಿಲ್ಲೆಯ ಸಾಕ್ಷರತೆ ಬೆಳವಣಿಗೆಯಲ್ಲಿ ಸಿದ್ದಾಪುರ ತಾಲೂಕು ಮುಂದುವರೆದ ತಾಲೂಕಾಗಿದೆ.

ಆರ್ಥಿಕ ಹಿನ್ನೆಲೆ: ಸಿದ್ದಾಪುರ ತಾಲೂಕು ಭೌಗೋಳಿಕವಾಗಿ ಘಟ್ಟದ ಮೇಲಿನ ಮಲೆನಾಡಿನ ಪ್ರದೇಶವಾಗಿದ್ದು, ಬೆಟ್ಟ-ಗುಟ್ಟ, ಹಳ್ಳ-ಕೊಳ್ಳಗಳಿಂದ ಕೂಡಿದ ಅರಣ್ಯ ಪ್ರದೇಶವಾಗಿದೆ. ಮುಖ್ಯವಾಗಿ ತಾಲೂಕಿನ ಪಶ್ಚಿಮ ಭಾಗವು ಬೆಟ್ಟಗಳಿಂದ ಕೂಡಿದ ಅರಣ್ಯ ಪ್ರದೇಶವಾಗಿದ್ದರೆ, ಪಶ್ಚಿಮ ಭಾಗವು ದಟ್ಟ ಕಾಡುಗಳಿಂದ ಕೂಡಿದೆ. ಪೂರ್ವ ಭಾಗವು ಕೆಲವೆಡೆ ಬೋಳುನೆಲ(ಬಯಲು ಪ್ರದೇಶ)ದಿಂದ ಕೂಡಿದ್ದರೆ, ಉತ್ತರ ಭಾಗವು ಬೆಟ್ಟ, ಕಣಿವೆ ಪ್ರದೇಶವಾಗಿದ್ದು, ಅಲ್ಲಿಲ್ಲಿ ತೋಟಗಳಿಂದ ತುಂಬಿದೆ. ಮಧ್ಯಭಾಗವು ಸಣ್ಣ ಬೆಟ್ಟ-ಗುಡ್ಡಗಳಿಂದ ಕೂಡಿದ್ದು, ಸದಾ ಹರಿಯುವ ಝುರಿಗಳಿಂದ ಕೂಡಿರುತ್ತದೆ.[59] ಸಿದ್ದಾಪುರ ಮಳೆ ಆಶ್ರಿತ ಕೃಷಿಪ್ರಧಾನವಾದ ತಾಲೂಕಾಗಿದೆ.

2001ರ ಜನಗಣತಿ ಪ್ರಕಾರ, ತಾಲೂಕಿನಲ್ಲಿ 57,278(ಶೇ.56.78) ಜನರು ದುಡಿಯುವ ವರ್ಗದವರಾಗಿದ್ದು, ಇವರಲ್ಲಿ ಶೇ.40.69(23,307)ರಷ್ಟು ಮಹಿಳೆರಾಗಿದ್ದಾರೆ. ದುಡಿಯುವ ವರ್ಗದಲ್ಲಿ ಪ್ರಾಥಮಿಕ ವಲಯ ಅವಲಂಬಿಸಿದವರ ಸಂಖ್ಯೆ 20,494(ಶೇ.35.77)ರಷ್ಟಿದ್ದು, ಇದರಲ್ಲಿ ಮಹಿಳೆಯರ ಸಂಖ್ಯೆ 9,678(ಶೇ.47.22)ರಷ್ಟಿದೆ. ಜಿಲ್ಲೆಗೆ ಹೋಲಿಸಿದಾಗ ಸಿದ್ದಾಪುರ ತಾಲೂಕಿನಲ್ಲಿ ಪ್ರಾಥಮಿಕ ವಲಯವನ್ನು ಅವಲಂಬಿಸಿದವರ ಪ್ರಮಾಣ ಶೇ.3.44ರಷ್ಟು ಕಡಿಮೆ ಮತ್ತು ಮಹಿಳೆಯರ ಪ್ರಮಾಣದಲ್ಲಿ ಶೇ.5.20ರಷ್ಟು ಹೆಚ್ಚು ಇದೆ. ತಾಲೂಕಿನಲ್ಲಿ ದ್ವಿತೀಯ ವಲಯವನ್ನು ಅವಲಂಬಿಸಿದವರ ಸಂಖ್ಯೆ 644(ಶೇ.1.12)ರಷ್ಟಿದ್ದು, ಇದರಲ್ಲಿ ಮಹಿಳಾ ಪ್ರಮಾಣ 283(ಶೇ.43.94)ರಷ್ಟಿದೆ. ಈ ಪ್ರಮಾಣವನ್ನು ಜಿಲ್ಲೆಗೆ ಹೋಲಿಸಿದಾಗ ತಾಲೂಕಿನಲ್ಲಿ ದ್ವಿತೀಯ ವಲಯವನ್ನು ಅವಲಂಬಿಸಿದವರ ಪ್ರಮಾಣ ಶೇ.1.12ರಷ್ಟು ಕಡಿಮೆ ಮತ್ತು ಮಹಿಳಾ ಪ್ರಮಾಣದಲ್ಲಿ ಶೇ.13.89ರಷ್ಟು ಹೆಚ್ಚು ಇದೆ. ತಾಲೂಕಿನಲ್ಲಿ ಸೇವಾ ವಲಯದವರ ಸಂಖ್ಯೆ 36,140(ಶೇ.63.09)ರಷ್ಟಿದ್ದು, ಇವರಲ್ಲಿ ಮಹಿಳಾ ವರ್ಗದ ಸಂಖ್ಯೆ 13,346(ಶೇ.36.92)ರಷ್ಟಿದೆ. ಸೇವಾ ವಲಯದಲ್ಲಿ ಸಿದ್ದಾಪುರ ತಾಲೂಕು ಜಿಲ್ಲೆಯಲ್ಲಿ ಆರನೇ ಸ್ಥಾನದಲ್ಲಿದೆ. ಆದರೆ ಸೇವಾ ವಲಯವನ್ನು ಅವಲಂಬಿಸಿದ ಮಹಿಳೆಯರ ಪ್ರಮಾಣ ಜಿಲ್ಲೆಗೆ ಹೋಲಿಸಿದಾಗ ಶೇ.11.64ರಷ್ಟು ಹೆಚ್ಚಿದ್ದು, ಜಿಲ್ಲೆಯಲ್ಲಿ ಎರಡನೇ ಸ್ಥಾನದಲ್ಲಿದೆ(ನೋಡಿ ಕೋಷ್ಟಕ-3.3). ಜಿಲ್ಲೆಯಲ್ಲಿ ತಾಲೂಕುವಾರು ಶ್ರಮಶಕ್ತಿ ಅಥವಾ ವಲಯವಾರು ದುಡಿಯುವ ವರ್ಗಗಳ ವಿವರಣೆ ನೋಡಿದಾಗ ಸಿದ್ದಾಪುರ ಮುಂದುವರೆದ ತಾಲೂಕು ಎಂಬುದು ಕಂಡುಬರುತ್ತದೆ. ಆದರೆ ತಾಲೂಕಿನಲ್ಲಿ ವ್ಯಾಪಾರ, ವಾಣಿಜ್ಯ, ಮಾರುಕಟ್ಟೆಯಂತಹ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳ ಬೆಳವಣಿಗೆ ತುಂಬಾ ಕಡಿಮೆ ಇದೆ. ಜನರಲ್ಲಿ ದಿನ ನಿತ್ಯದ ಬದುಕಿಗೆ ಬೇಕಾದ ಅಗತ್ಯ ವಸ್ತುಗಳನ್ನು ಕೊಳ್ಳುವ ಸಾಮರ್ಥ್ಯ ಸಹ ಕಡಿಮೆ ಇರುವುದು ಕಂಡುಬರುತ್ತದೆ. ಅಲ್ಲದೇ ತಾಲೂಕಿನಲ್ಲಿ ಪ್ರಾಥಮಿಕ ಮತ್ತು ದ್ವಿತೀಯ ವಲಯವನ್ನು ಅವಲಂಬಿಸಿದ ವರ್ಗ ಶೇ.41.81ರಷ್ಟು ಇದೆ. ತಾಲೂಕಿನ ಒಟ್ಟು ಭೂಪ್ರದೇಶದಲ್ಲಿ ಶೆ. 13.78ಹೆಕ್ಟೇರಿನಷ್ಟು ಮಾತ್ರ ಬಿತ್ತನೆ ಪ್ರದೇಶವಾಗಿದೆ. ಬಿತ್ತನೆಯಾದ ಪ್ರದೇಶವು ಸಂಪೂರ್ಣವಾಗಿ ಮಳೆ ಆಶ್ರಿತವಾಗಿದೆ. ಈ ಪ್ರದೇಶದಲ್ಲಿ ಮುಖ್ಯವಾಗಿ ವಾಣಿಜ್ಯ ಬೆಳೆಯಾದ ಅಡಿಕೆಯನ್ನು ಬೆಳೆಯಲಾಗುತ್ತಿದೆ. ಒಟ್ಟು

ಬಿತ್ತನೆಯಾಗುವ ಪ್ರದೇಶದಲ್ಲಿ ಶೇ.(50)ರಷ್ಟು ಮಾತ್ರ ಅಡಿಕೆಯನ್ನು ಬೆಳೆಯಲಾಗುತ್ತದೆ. ಇದರ ಇಳುವರಿ ಪ್ರಮಾಣವು ಮಳೆ ಆಧಾರಿತವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ಏರುಪೇರಾಗುತ್ತದೆ. ಬೆಲೆ ಮಾರುಕಟ್ಟೆಯನ್ನು ಅವಲಂಬಿಸಿರುವುದರಿಂದ ಆದಾಯದಲ್ಲಿ ಸಹ ವ್ಯತ್ಯಾಸ ಕಂಡುಬರುತ್ತದೆ. ಹೀಗಾಗಿ ಸಿದ್ದಾಪುರ ಆರ್ಥಿಕವಾಗಿ ಹಿಂದುಳಿದ ತಾಲೂಕಾಗಿದೆ.

ಈ ತಾಲೂಕಿನಲ್ಲಿ ಆರ್ಥಿಕವಾಗಿ ಲಾಭ ತರುವ ಯಾವುದೇ ಖನಿಜ ಸಂಪತ್ತು ದೊರೆಯುವುದಿಲ್ಲ. ತಾಲೂಕು ದಟ್ಟವಾದ ಅರಣ್ಯ ಪ್ರದೇಶವನ್ನು ಹೊಂದಿದ್ದರೂ, ಅದು ಇಲ್ಲಿನ ಜನತೆಗೆ ಆದಾಯದ ಮೂಲವಾಗಿಲ್ಲ. 2001ರ ಅಂಕಿ ಅಂಶಗಳ ಪ್ರಕಾರ, ಸಿದ್ದಾಪುರ ತಾಲೂಕಿನ ವ್ಯಾಪ್ತಿಯಲ್ಲಿ 7 ವಾಣಿಜ್ಯ ಮತ್ತು 3 ಗ್ರಾಮೀಣ ಬ್ಯಾಂಕ್‌ಗಳು, 4 ಕೃಷಿ ಸಹಕಾರಿ ಪತ್ತಿನ ಬ್ಯಾಂಕ್‌ಗಳು, ಕೃಷಿ ಉತ್ಪನ್ನ ಮಾರುಕಟ್ಟೆ, 469 ಸಣ್ಣ ಪ್ರಮಾಣದ ಕಾರ್ಖಾನೆಗಳು ಇದ್ದು, ದೊಡ್ಡ ಪ್ರಮಾಣದ ಕಾರ್ಖಾನೆಗಳು ಕಂಡುಬರುವುದಿಲ್ಲ. ತಾಲೂಕಿನಲ್ಲಿ ಅಡಿಕೆ ಮುಖ್ಯ ವಾಣಿಜ್ಯ ಬೆಳೆಯಾಗಿದ್ದರಿಂದ ಇಲ್ಲಿ ಕಾರ್ಖಾನೆಗಳು, ಉದ್ಯಮಗಳು, ವಾಣಿಜ್ಯ-ವ್ಯಾಪಾರ ಮಾರುಕಟ್ಟೆಗಳು, ಬ್ಯಾಂಕ್‌ಗಳು ಇತ್ಯಾದಿಗಳು ನಿರೀಕ್ಷಿತ ಪ್ರಮಾಣದಲ್ಲಿ ಕಂಡುಬರುತ್ತಿಲ್ಲ. ಇವುಗಳ ಸಂಖ್ಯೆ ಕಡಿಮೆ ಇದ್ದು, ಸಣ್ಣಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಆರ್ಥಿಕ ವಹಿವಾಟುಗಳು ನಿರೀಕ್ಷಿತ ಮಟ್ಟದಲ್ಲಿ ಕಂಡುಬರುತ್ತಿಲ್ಲ. ಸಿದ್ದಾಪುರ ತಾಲೂಕು ಪ್ರಗತಿ ಪಥದಲ್ಲಿದೆ. ಆದರೆ ಸಾಕಷ್ಟು ನಾಗರಿಕ ಸೌಲಭ್ಯಗಳ ಕೊರತೆಯನ್ನು ಅನುಭವಿಸುತ್ತಿರುವ ತಾಲೂಕಾಗಿ ಕಂಡುಬರುತ್ತದೆ. ಇಲ್ಲಿನ ಜನರ ಸಾಮಾಜಿಕ, ಆರ್ಥಿಕ ಸಾಮರ್ಥ್ಯವನ್ನು ವರ್ಧಿಸುವ ಅಭಿವೃದ್ಧಿ ಚಟುವಟಿಕೆಗಳು, ಕೈಗಾರಿಕೆಗಳು ಮತ್ತು ಅಗತ್ಯ ನಾಗರಿಕ ಸೌಲಭ್ಯಗಳು ಹೆಚ್ಚಾಗಬೇಕಾದ ಅಗತ್ಯತೆ ಕಂಡುಬರುತ್ತದೆ. ಇದರಿಂದಾಗಿ ಇಲ್ಲಿಯ ಜನರ ಧಾರಣಸಾಮರ್ಥ್ಯ ಅಥವಾ ಕೊಳ್ಳುವ ಸಾಮರ್ಥ್ಯ ಹೆಚ್ಚಾಗಬಹುದೆಂದು ಗ್ರಹಿಸಲಾಗಿದೆ.

ರಾಜಕೀಯ ಹಿನ್ನೆಲೆ: ಉತ್ತರ ಕನ್ನಡ ಜಿಲ್ಲೆಯ ಆಡಳಿತದ ಉಪವಿಭಾಗವಾದ ಶಿರಿಸಿ ವಿಭಾಗಕ್ಕೆ ಸೇರಿರುವ ಸಿದ್ದಾಪುರ ತಾಲೂಕು ಕೊಂಡ್ಲಿ, ಕೋಡ್ಕಣಿ ಮತ್ತು ಉಂಬಳೆಮನೆ ಎಂಬ 3 ಹೋಬಳಿಗಳನ್ನು ಮತ್ತು 197 ಗ್ರಾಮಗಳನ್ನು ಹೊಂದಿದೆ.[60] ತಾಲೂಕಿನಲ್ಲಿ ನಾಮಧಾರಿ(ಈಡಿಗ) ಸಮುದಾಯವು ಬಲಿಷ್ಠ ಸಮುದಾಯವಾಗಿದ್ದು, ಇವರು ಬಹುತೇಕವಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವವರಾಗಿದ್ದಾರೆ. ಈ ಸಮುದಾಯದಲ್ಲಿನ ರಾಜ್ಯ ಮತ್ತು ರಾಷ್ಟಮಟ್ಟದ ರಾಜಕೀಯ ನಾಯಕರ ಪ್ರಭಾವವು ಕಾರಣವಾಗಿರಬಹುದು. ಅದರೆ ಇವರು ಸ್ಥಳೀಯವಾಗಿ ನಾಯಕತ್ವದ ಕೊರತೆಯನ್ನು ಅನುಭವಿಸುವುದು ಕಂಡುಬರುತ್ತದೆ. ಇನ್ನೂ ತಾಲೂಕಿನಲ್ಲಿ ಎರಡನೇ ಬಲಿಷ್ಠ ಸಮುದಾಯವೆಂದರೆ ಬ್ರಾಹ್ಮಣ ಸಮುದಾಯವಾಗಿದೆ. ಇವರ ಜೊತೆಗೆ ಸಾರಸ್ವತ, ಗೌಡಸಾರಸ್ವತ, ಗೌಡಲಿಂಗಾಯಿತ ಹಾಗೂ ಇತರ ಮುಂದುವರೆದ ಜಾತಿ ಸಮುದಾಯಗಳು ಒಂದುಗೂಡಿದರೆ ಬಲಿಷ್ಠ ಸಮುದಾಯವಾಗಿ ಕಂಡುಬರುತ್ತದೆ. ಇವರು ಸಾಮಾನ್ಯವಾಗಿ ಬಿಜೆಪಿ ಪಕ್ಷವನ್ನು ಬೆಂಬಲಿಸುವರಾಗಿ ಕಂಡುಬರುತ್ತಾರೆ. ಜೊತೆಗೆ ಇತರ ಹಿಂದುಳಿದ ಮತ್ತು ಅಲ್ಪಸಂಖ್ಯಾತರು ಸ್ಥಳೀಯವಾಗಿ ಶಾಸಕರು ಆಯ್ಕೆಯಾದ ಪಕ್ಷವನ್ನು ಬೆಂಬಲಿಸುವುದು ಕಂಡುಬರುತ್ತದೆ. ರಾಜಕೀಯವಾಗಿ ಸಿದ್ದಾಪುರ ತಾಲೂಕನ್ನು

ನೋಡುವುದಾದರೆ, 1962ರ ಡಿಲಿಮಿಟೇಷನ್ ಕಾಯ್ದೆಯು ತಿದ್ದುಪಡಿಯೊಂದಿಗೆ 2008ರಲ್ಲಿ ಜಾರಿಗೆ ಬರುವ ಮೊದಲು ಮತ್ತು ನಂತರ ಸಿದ್ದಾಪುರ ಶಿರಿಸಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಸಿದ್ದಾಪುರ ತಾಲೂಕಿಗೆ ಸ್ವತಂತ್ರ ವಿಧಾನಸಭಾ ಕ್ಷೇತ್ರ ಇಲ್ಲವಾಗಿದೆ. ಈ ತಾಲೂಕು ಕೆಲವು ಅಗತ್ಯ ನಾಗರಿಕ ಸೌಲಭ್ಯಗಳ ಕೊರತೆಗಳನ್ನು ಅನುಭವಿಸುತ್ತಿರುವುದಕ್ಕೆ ಸ್ವತಂತ್ರ ವಿಧಾನಸಭಾ ಕ್ಷೇತ್ರ ಇಲ್ಲದಿರುವುದೇ ಪ್ರಮುಖ ಕಾರಣವಾಗಿದೆ. 2008ರಲ್ಲಿ ಜಾರಿಗೆ ಬಂದ ಡಿಲಿಮಿಟೇಷನ್ ಕಾಯ್ದೆಯು ಸೇರಿದಂತೆ ತಾಲೂಕಿನ ರಾಜಕೀಯ ಚಿತ್ರಣವನ್ನು ಬದಲಾಯಿಸಿದೆ. ಶಿರಿಸಿ ಮತ್ತು ಸಿದ್ದಾಪುರ ತಾಲೂಕುಗಳಿಗೆ ಸೇರಿದ ಶಿರಿಸಿ ವಿಧಾನಸಭಾ ಕ್ಷೇತ್ರವು ಈ ಮೊದಲು ಪರಿಶಿಷ್ಟ ಜಾತಿಗೆ ಮೀಸಲಾಗಿದ್ದು, 2008ರ ನಂತರ ಇದು ಸಾಮಾನ್ಯ ಕ್ಷೇತ್ರವಾಗಿ ಬದಲಾಗಿದೆ. ಪರಿಶಿಷ್ಟರು ಅಲ್ಪಸಂಖ್ಯಾತರಾಗಿದ್ದ ಈ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ವಿಧಾನಸಭಾ ಕ್ಷೇತ್ರವು ಸಾಮಾನ್ಯ ಕ್ಷೇತ್ರವಾಗಿ ಬದಲಾಗಿದ್ದುದು ಇಲ್ಲಿನ ಬಹುಸಂಖ್ಯಾತರಿಗೆ ರಾಜಕೀಯವಾಗಿ ನ್ಯಾಯ ದೊರೆತಂತಾಗಿದೆ.

ಸಿದ್ದಾಪುರ ತಾಲೂಕು ಒಂದು ಪಟ್ಟಣ ಪಂಚಾಯಿತಿ, ತಾಲೂಕುಪಂಚಾಯಿತಿ ಹಾಗೂ 21 ಗ್ರಾಮಪಂಚಾಯಿತಿಗಳನ್ನು ಒಳಗೊಂಡಿದೆ. ರಾಜಕೀಯ ಪಕ್ಷಗಳ ಚಿಹ್ನೆಗಳ ಮೇಲೆ ರಚನೆಯಾಗುವ ಪಟ್ಟಣ ಮತ್ತು ತಾಲೂಕುಪಂಚಾಯಿತಿಗಳಲ್ಲಿ ಬಿಜೆಪಿ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದುಕೊಂಡಿದೆ. 2010 ಮೇ, 12ರಂದು ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಶೇ.33.33ರಷ್ಟು ಮಹಿಳಾ ಮೀಸಲಾತಿಯನ್ನು ನೀಡಲಾಗಿದೆ. ಸಿದ್ದಾಪುರ ತಾಲೂಕಿನ 21 ಗ್ರಾಮಪಂಚಾಯಿತಿಗಳಿಂದ 227 ಜನಪ್ರತಿನಿಧಿಗಳು ಆಯ್ಕೆಯಾಗಿದ್ದು, ಇವರಲ್ಲಿ 107(ಶೇ.47.13) ಪುರುಷರು ಮತ್ತು 120(ಶೇ.52.87) ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ. ತಾಲೂಕಿನ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯವು ಮೀಸಲಾತಿ ಪ್ರಮಾಣಕ್ಕಿಂತ ಶೇ.19.54ರಷ್ಟು ಹೆಚ್ಚು ಇದೆ. ಈ ಮೀಸಲಾತಿ ಪ್ರಮಾಣಕ್ಕಿಂತ ಹೆಚ್ಚು ಮಹಿಳೆಯರು ಪ್ರಾತಿನಿಧ್ಯ ಪಡೆದಿರುವುದು ಮಹಿಳಾ ಮೀಸಲು ಕ್ಷೇತ್ರಗಳಿಂದ ಆಯ್ಕೆಯಾದವರೇ ಹೊರತು ಸಾಮಾನ್ಯ ಕ್ಷೇತ್ರಗಳಿಂದ ಆಯ್ಕೆಯಾದವರಲ್ಲ. ಇದು ಆಯಾ ಪ್ರದೇಶದಲ್ಲಿ ವಾಸಿಸುವ ಜನರ ಜಾತಿ, ಧರ್ಮ, ಲಿಂಗಗಳ ಸಂಖ್ಯೆಗೆ ಅನುಗುಣವಾಗಿ ನೀಡಿರುವ ಮೀಸಲಾತಿ ನಿಯಮಕ್ಕೆ ಅನುಗುಣವಾಗಿಯೇ ಶೇ.52.87ರಷ್ಟು ಮಹಿಳೆಯರು ಆಯ್ಕೆಯಾಗಿರುವುದಕ್ಕೆ ಕಾರಣವಾಗಿದೆ. ತಾಲೂಕಿನಲ್ಲಿ ಜಾತಿವಾರು ಪ್ರಾತಿನಿಧ್ಯ ನೋಡಿದಾಗ, ಪರಿಶಿಷ್ಟ ಜಾತಿಯಿಂದ 21(ಶೇ.9.25) ಮತ್ತು ಪರಿಶಿಷ್ಟ ಪಂಗಡದಿಂದ 21(ಶೇ.9.25) ಸದಸ್ಯರು ಪ್ರಾತಿನಿಧ್ಯ ಪಡೆದಿದ್ದು, ಇವರಲ್ಲಿ ಶೇ.100ರಷ್ಟು ಮಹಿಳೆಯರೇ ಪ್ರಾತಿನಿಧ್ಯ ಪಡೆದಿದ್ದಾರೆ. ಹಿಂದುಳಿದ ವರ್ಗದಿಂದ 77(ಶೇ.33.92) ಸದಸ್ಯರು ಚುನಾಯಿತರಾಗಿದ್ದು, ಇವರಲ್ಲಿ ಶೇ.58.45(45) ಪುರುಷರು ಮತ್ತು ಶೇ.41.55(32) ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ. ಸಾಮಾನ್ಯ ವರ್ಗದಿಂದ 108(ಶೇ.47.57) ಸದಸ್ಯರು ಪ್ರಾತಿನಿಧ್ಯ ಪಡೆದಿದ್ದು, ಇವರಲ್ಲಿ ಶೇ.57.40(62) ಪುರುಷರು ಮತ್ತು ಶೇ.42.60(46) ಮಹಿಳೆಯರು ಚುನಾಯಿತರಾಗಿದ್ದಾರೆ(ನೋಡಿ ಕೋಷ್ಟಕ–3.9). ಸಿದ್ದಾಪುರ ತಾಲೂಕಿನ 21 ಗ್ರಾಮಪಂಚಾಯಿತಿಗಳಲ್ಲಿ ಒಟ್ಟು 21 ಸ್ಥಾನಗಳನ್ನು ಪರಿಶಿಷ್ಟ ಪಂಗಡ ಮಹಿಳೆಯರಿಗೆ ಮೀಸಲಿಟ್ಟಿದ್ದರೂ, ಇವರಲ್ಲಿ 4 ಮಹಿಳೆಯರು

ಮಾತ್ರ ಪ್ರಾತಿನಿಧ್ಯ ಪಡೆದಿದ್ದಾರೆ. ಉಳಿದ 17 ಸ್ಥಾನಗಳಿಗೆ ಪರಿಶಿಷ್ಟ ಜಾತಿಯ ಮಹಿಳೆಯರು ಪ್ರತಿನಿಧಿಸಿರುವುದು ಕಂಡುಬರುತ್ತದೆ.[61] ಈ ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಜನಸಂಖ್ಯೆ ಕಡಿಮೆ ಇದೆ. ಪ್ರತಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಗ್ರಾಮಪಂಚಾಯಿತಿಗಳಲ್ಲಿ ಕನಿಷ್ಠ ಒಂದೆರಡು ಪರಿಶಿಷ್ಟ ಪಂಗಡದ ಕುಟುಂಬಗಳು ಕಂಡುಬರುತ್ತವೆ. ಆದರೆ ಇವರು ಚುನಾವಣೆಯಲ್ಲಿ ಸ್ಪರ್ಧಿಸಲಾರದಷ್ಟು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಇವರಿಗೆ ಅವರ ಹಕ್ಕುಗಳ ಬಗ್ಗೆ ಅರಿವು ಇಲ್ಲವೋ ಅಥವಾ ಸಾಮಾಜಿಕವಾಗಿ ಕಡೆಗಣಿಸಲಾಗಿತ್ತೋ ಎಂಬ ಅನುಮಾನ ಉಂಟಾಗುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಂಡಿದ್ದು, ಮುಂದೆ ಚರ್ಚಿಸಲಾಗಿದೆ.

3.6 ಅಧ್ಯಯನಕ್ಕೆ ಒಳಪಟ್ಟ ಗ್ರಾಮಪಂಚಾಯಿತಿಗಳು

ಉತ್ತರ ಕನ್ನಡ ಜಿಲ್ಲೆಯ (ಪಶ್ಚಿಮ)ಘಟ್ಟದ ಮೇಲಿನ ಮತ್ತು ಹೆಚ್ಚು ಮಳೆ ಬೀಳುವ ಸಿದ್ದಾಪುರ ತಾಲೂಕು ಶೈಕ್ಷಣಿಕ ಮತ್ತು ವಲಯವಾರು ದುಡಿಯುವ ದುಡಿಯುವ ವರ್ಗಗಳ ವಿವರಣೆ ನೋಡಿದಾಗ ಒಂದು ಅಭಿವೃದ್ಧಿ ಹೊಂದಿದ ತಾಲೂಕಾಗಿ ಕಂಡುಬರುತ್ತದೆ. ಆದರೆ ಜನಸಾಮಾನ್ಯರ ಧಾರಣ(ಕೊಳ್ಳುವ) ಸಾಮರ್ಥ್ಯ ಕಡಿಮೆ ಇರುವುದು, ಉದ್ಯೋಗ, ವ್ಯಾಪಾರಗಳ ಅವಕಾಶ ಕಡಿಮೆ ಇರುವುದು ಮತ್ತು ಕೆಲವು ಅಗತ್ಯ ನಾಗರಿಕ ಸೌಲಭ್ಯಗಳ ಕೊರತೆ ಅನುಭವಿಸುವ ಹಿನ್ನೆಲೆಗಳಿಂದ ಹಿಂದುಳಿದ ತಾಲೂಕಾಗಿರುವುದು ಕಂಡುಬರುತ್ತದೆ. ಸಿದ್ದಾಪುರ ತಾಲೂಕು 21 ಗ್ರಾಮಪಂಚಾಯಿತಿಗಳನ್ನು ಹೊಂದಿದ್ದು, ಇದರಲ್ಲಿ ಬೇಡ್ಕಣಿ ಮತ್ತು ಕೋಲಸಿರ್ಸಿ ಎಂಬ ಈ ಎರಡು ಗ್ರಾಮಪಂಚಾಯಿತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಸಿದ್ದಾಪುರ ತಾಲೂಕಿನ ಈ ಎರಡು ಗ್ರಾಮಪಂಚಾಯಿತಿಗಳು ಚಾರಿತ್ರಿಕ, ಭೌಗೋಳಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಸಮಾನ ಅಂಶಗಳಿಂದ ಕೂಡಿವೆ. ಈ ಎರಡು ಗ್ರಾಮಪಂಚಾಯಿತಿಗಳು ತಾಲೂಕು ಕೇಂದ್ರ ಪ್ರದೇಶಕ್ಕೆ ಹೊಂದಿಕೊಂಡಿವೆ. ಇವು ಮಳೆ ಆಶ್ರಿತ ಕೃಷಿಪ್ರಧಾನ ಗ್ರಾಮಪಂಚಾಯಿತಿಗಳಾಗಿವೆ. ಪ್ರಸ್ತುತ ಅಧ್ಯಯನವು ಸೂಕ್ಷ್ಮ(Micro) ಅಧ್ಯಯನವಾಗಿರುವುದರಿಂದ ಸಿದ್ದಾಪುರ ತಾಲೂಕಿನ ಎರಡು ಗ್ರಾಮಪಂಚಾಯಿತಿಗಳಿಗೆ ಸೀಮಿತಗೊಳಿಸಲಾಗಿದೆ. ಇದೊಂದು ತುಲನಾತ್ಮಕ ಅಧ್ಯಯನವಾಗಿರುವುದರಿಂದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಮತ್ತು ಹೊಸೂರು ಗ್ರಾಮಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಅನುಸರಿಸಿದ ಕ್ರಮದಂತೆ ಸಿದ್ದಾಪುರ ತಾಲೂಕಿನಲ್ಲಿ ಸಮಾನ ಅಂಶಗಳಿಂದ ಕೂಡಿದ ಈ ಎರಡು ಗ್ರಾಮಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಅನುಸರಿಸಲಾಗಿದೆ.

3.6.1 ಬೇಡ್ಕಣಿ ಗ್ರಾಮಪಂಚಾಯಿತಿ

ಚಾರಿತ್ರಿಕ ಹಿನ್ನೆಲೆ: ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿರುವ ಬೇಡ್ಕಣಿ ಗ್ರಾಮಪಂಚಾಯಿತಿಯು ವಿಜಯನಗರ ಆಳರಸರ ಆಡಳಿತಕ್ಕೆ ಒಳಪಟ್ಟ ಮಾಂಡಲಿಕ ಪ್ರದೇಶವಾಗಿದೆ. ದೇಶ-ವಿದೇಶದಿಂದ ಒಳನಾಡು ಅರಸರಿಗೆ ಮತ್ತು ಒಳನಾಡು ಅರಸರಿಂದ ಹೊರದೇಶಗಳಿಗೆ ರೇವುಪಟ್ಟಣಗಳ ಮೂಲಕ ಆಮದು ಮತ್ತು ರಫ್ತು ಆಗುವ ಸರಕು ಸಂಪತ್ತುಗಳ ರಕ್ಷಣೆಗಾಗಿ ಈ ಅರಣ್ಯ ಪ್ರದೇಶದ ಮಾರ್ಗದಲ್ಲಿ ಕೋಟೆಗಳನ್ನು ನಿರ್ಮಿಸಿ, ಕಾವಲುಪಡೆಗಳನ್ನು ಇಡುತ್ತಿದ್ದರು. ಇಂತಹ ಕಾವಲುಪಡೆಯುಳ್ಳ ಕೋಟೆ ಪ್ರದೇಶಗಳನ್ನು ಮಾಂಡಲಿಕ ಅರಸರ ಸುಪರ್ದಿಕ್ಕೆ ಒಳಪಡಿಸುತ್ತಿದ್ದರು. ಇಂತಹ ಕೋಟೆ ಮತ್ತು ಕಾವಲುಪಡೆಯುಳ್ಳ ಪ್ರದೇಶಗಳಲ್ಲಿ ಬೇಡ್ಕಣಿ ಗ್ರಾಮಪಂಚಾಯಿತಿಯು ಒಂದಾಗಿದೆ. ದೇಶ ವಿದೇಶಗಳೊಂದಿಗೆ ವ್ಯಾಪಾರ ವಹಿವಾಟು ನಿಮಿತ್ತ, ಬಂದರು ಪ್ರದೇಶದಿಂದ ಒಳನಾಡು ಪ್ರದೇಶಕ್ಕೆ ಮತ್ತು ಒಳನಾಡು ಪ್ರದೇಶದಿಂದ ಬಂದರು ಪ್ರದೇಶಕ್ಕೆ ಸರಕು ಸಂಪತ್ತು ಸಾಗಿಸುವ ಮಾರ್ಗವಾಗಿರಬಹುದಾದ ಬೇಡ್ಕಣಿ ಗ್ರಾಮಪಂಚಾಯಿತಿ ಪ್ರದೇಶವು ದಟ್ಟವಾದ ಅರಣ್ಯದಿಂದ ಕೂಡಿದ ಮತ್ತು ಹೆಚ್ಚು ಮಳೆ ಬೀಳುವ ಪ್ರದೇಶವಾಗಿದೆ. ವಿಶೇಷವಾಗಿ ಮಳೆಗಾಲದಲ್ಲಿ ಸರಕು ಸಂಪತ್ತು ಸಾಗಿಸಲು ತೊಂದರೆಯುಂಟಾದಗ, ತಂದ ಸರಕು ಸಂಪತ್ತಿನ ತಾತ್ಕಾಲಿಕ ಸಂಗ್ರಹಣೆ ಮಾಡಿ ರಕ್ಷಿಸಲು ಕೋಟೆಗಳನ್ನು ನಿರ್ಮಿಸಿರಬಹುದು. ಇಂತಹ ಕೋಟೆಗಳ ರಕ್ಷಣೆಗಾಗಿ ಕಾಡಿನಲ್ಲಿ ವಾಸವಿದ್ದ, ಕಾಡುಪ್ರಾಣಿಗಳನ್ನು ಬೇಟೆಯಾಡಿ ಬದುಕುತ್ತಿದ್ದ ಬೇಡರ ಪಡೆಯನ್ನು ನೇಮಕ ಮಾಡಿಕೊಳ್ಳುತ್ತಿದ್ದರು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ವಿಜಯನಗರ ಮಾಂಡಲಿಕರಾದ ಒಂದನೇ ಘಂಟೇಂದ್ರನು, 1490ರಲ್ಲಿ ತನ್ನ ರಾಜಧಾನಿಯನ್ನು ಐಸೂರಿನಿಂದ ಬಿಳಿಗಿಗೆ ವರ್ಗಾಯಿಸಿಕೊಂಡು, ಬೇಡ್ಕಣಿ, ಕುಣಿಜಿ ಮತ್ತು ಕೊಂಡಲಿ ಕೋಟೆಗಳನ್ನು ವಶಪಡಿಸಿಕೊಂಡನು ಎಂಬುದು ತಿಳಿದುಬರುತ್ತದೆ. ಕಣಿವೆ ಪ್ರದೇಶದಲ್ಲಿ ಕೋಟೆ ಇದ್ದು, ಇದರ ರಕ್ಷಣೆಗಾಗಿ ಬೇಡರಪಡೆ ಇಲ್ಲಿ ವಾಸವಾಗಿದ್ದರಿಂದ ಈ ಊರಿಗೆ ಬೇಡರಕಣಿವೆಯೆಂದೂ, ಬಲಿಷ್ಠ ಬೇಡರ ರಕ್ಷಣೆಗೆ ಒಳಪಟ್ಟ ಕೋಟೆಯು ಕಣಿವೆ ಪ್ರದೇಶದಲ್ಲಿದ್ದರಿಂದ ಬೇಡರಕಣಿವೆ ಪ್ರದೇಶವೆಂದು ಅಥವಾ ಬೇಡರ ಕಣ್ಗಾವಲಿಗೆ ಒಳಪಟ್ಟ ಪ್ರದೇಶವಾಗಿದ್ದರಿಂದ ಈ ಪ್ರದೇಶವನ್ನು ಕಾಲಕ್ರಮೇಣವಾಗಿ ಜನಪದರ ಮಾತಿನಿಂದ ಬೇಡ್ಕಣಿ ಎಂದು ಈ ಊರಿಗೆ ಹೆಸರು ಬಂದಿರಬಹುದು. ಗ್ರಾಮಪಂಚಾಯಿತಿ ಕೇಂದ್ರಸ್ಥಳವಾದ ಬೇಡ್ಕಣಿಯಲ್ಲಿ ಕೋಟೆಯ ಅವಶೇಷಗಳಿವೆ. ಕೋಟೆ ಇದ್ದ ಪ್ರದೇಶದಲ್ಲಿ ಈಗ ಜನವಸತಿ ಇದೆ. ಕೋಟೆಯ ಮುಂಭಾಗದಲ್ಲಿರುವ ಮಾರುತಿ ದೇವಲಾಯದ ಮುಂದೆ ಅನೇಕ ನಾಗರ ಕಲ್ಲುಗಳು, ಶಿಲಾಶಾಸನಗಳು ಇವೆ.[62] ಈ ಮಾರುತಿ ದೇವಾಲಯವನ್ನು ಕೋಟೆಮಾರುತಿ ದೇವಾಲಯವೆಂದೇ ಸ್ಥಳೀಯರು ಕರೆಯುತ್ತಾರೆ. ಇದಲ್ಲದೇ ಇಲ್ಲಿ ಕುಮಾರರಾಮ, ಈಶ್ವರ ಮತ್ತು ಶನೇಶ್ವರ ದೇವಾಲಯಗಳು ಇವೆ. ಪ್ರತಿ ವರ್ಷ ಇಲ್ಲಿ ನಡೆಯುವ ಶನೇಶ್ವರ ಜಾತ್ರೆಯು ಸಿದ್ದಾಪುರ ತಾಲೂಕಿಗೆ ದೊಡ್ಡ ಜಾತ್ರೆಯಾಗಿದೆ. ಇಲ್ಲಿರುವ ಜೈನ ಬಸದಿ ಮುಂದೆ ವೀರಗಲ್ಲುಗಳಿವೆ. ಇದರಲ್ಲಿ ಸಿಂಧರ ಬೊಮ್ಮಯ್ಯ ನಾಯಕನು ಹೋರಾಡಿ ಮಡಿದ ಬಗ್ಗೆ ಉಲ್ಲೇಖವಿದೆ. ಬೇಡ್ಕಣಿ ಗ್ರಾಮವು ಸರ್ವಧರ್ಮ ತಾಣವಾಗಿದೆ ಎನ್ನುವುದಕ್ಕೆ ಇಲ್ಲಿ ಒಂದು ಮಸೀದಿಯೂ ಇದೆ.

ಭೌಗೋಳಿಕ ಹಿನ್ನೆಲೆ: ಸಿದ್ದಾಪುರ ತಾಲೂಕು ಕೇಂದ್ರದಿಂದ 6.5 ಕಿ.ಮೀ. ದೂರದಲ್ಲಿರುವ ಬೇಡ್ಕಣಿ ಗ್ರಾಮಪಂಚಾಯಿತಿಯು ಜಿಲ್ಲಾ ಕೇಂದ್ರಸ್ಥಾನವಾದ ಕಾರವಾರದಿಂದ 151.5 ಕಿ.ಮೀ. ದೂರದಲ್ಲಿದೆ.[63] ಸಿದ್ದಾಪುರ ತಾಲೂಕು ಕೇಂದ್ರಸ್ಥಾನದ ಪಶ್ಚಿಮ ಭಾಗದದಲ್ಲಿರುವ ಬೇಡ್ಕಣಿ ಗ್ರಾಮಪಂಚಾಯಿತಿಯು 5,876 ಹೆಕ್ಟೇರ್ ಭೂಪ್ರದೇಶವನ್ನು ಹೊಂದಿದ್ದು, ಇದರಲ್ಲಿ 4,402 ಹೆಕ್ಟೇರ್‌ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ.[64] ಅರಣ್ಯ, ಬೆಟ್ಟ, ಗುಡ್ಡ, ಹಳ್ಳ, ಕೊಳ್ಳ, ಕೆರೆ, ಕಣಿವೆಗಳಿಂದ ಕೂಡಿದ ಏರು–ಇಳಿಜಾರು ಪ್ರದೇಶವಾಗಿದೆ. ಬೇಡ್ಕಣಿ ಗ್ರಾಮಪಂಚಾಯಿತಿಯು ತಾಲೂಕುಕೇಂದ್ರವಾದ ಸಿದ್ದಾಪುರ ಪಟ್ಟಣಕ್ಕೆ ಹೊಂದಿಕೊಂಡೇ ಪ್ರಾರಂಭವಾಗುತ್ತದೆ.

ಬೇಡ್ಕಣಿ ಗ್ರಾಮಪಂಚಾಯಿತಿಯ ಪೂರ್ವದಲ್ಲಿ ಹಣಜಿಬೈಲು ಗ್ರಾಮಪಂಚಾಯಿತಿಯ ಗುಡ್ಡೆಗುಪ್ಪ ಗ್ರಾಮ, ಪಶ್ಚಿಮದಲ್ಲಿ ಬಿಳಿಗಿ ಗ್ರಾಮಪಂಚಾಯಿತಿಯ ಕುರುವಂತಿ ಗ್ರಾಮ, ಉತ್ತರದಲ್ಲಿ ಬಿದರಖಾನ್ ಗ್ರಾಮಪಂಚಾಯಿತಿಯ ಕೊಡಗಿಬೈಲು ಮತ್ತು ಮಗೆಗಾರ ಗ್ರಾಮಗಳು ಮತ್ತು ದಕ್ಷಿಣದಲ್ಲಿ ಹಲಗೇರಿ ಗ್ರಾಮಪಂಚಾಯಿತಿಯ ಅಳಗೋಡು ಮತ್ತು ನಾಗರಭಾವಿ ಗ್ರಾಮಗಳು ಬರುತ್ತವೆ.[65] ಬೇಡ್ಕಣಿ ಗ್ರಾಮಪಂಚಾಯಿತಿಯು ಬೇಡ್ಕಣಿ, ತ್ಯಾರ್ಸಿ, ಭಾನ್ಕುಳಿ ಮತ್ತು ಮುತ್ತಿಗೆ ಎಂಬ ನಾಲ್ಕು ಕಂದಾಯ ಗ್ರಾಮಗಳನ್ನು ಹೊಂದಿದ್ದು, ಪ್ರತಿಯೊಂದು ಗ್ರಾಮದ ವ್ಯಾಪ್ತಿಗೆ ಹಲವು ಮಜಿರೆ(ವಸತಿನೆಲೆ)ಗಳು ಬರುತ್ತದೆ. ಬೇಡ್ಕಣಿ ಗ್ರಾಮವು ಹಳೇ ಬೇಡ್ಕಣಿ ಮತ್ತು ಹೊಸ ಬೇಡ್ಕಣಿ ಎಂಬ ಎರಡು ಭಾಗಗಳಿಂದ ಕೂಡಿದೆ. ಕಲ್ಕಣಿ, ದೊಡ್ಡಬೇಣ, ಮಾದ್ಲಮನೆ, ಪುಟ್ಟನಕೇರಿ, ಹಕ್ಕಲಗೇರಿ, ರಾಣೇಗೇರಿ, ಮುದ್ದಿನಗೇರಿ, ಹೆಗಡೆಮನೆ, ಹೊಳೆಹಕ್ಕಲು, ಕಲ್ಲಿಮಠ, ಶಾಂತನಕೇರಿ, ಕುದುರೆಗಂಡಿ ಮತ್ತು ಸಲ್ಗಿಮಕ್ಕಿ ಎಂಬ ಈ 13 ಮಜಿರೆಗಳು ಬೇಡ್ಕಣಿ ಗ್ರಾಮದ ವ್ಯಾಪ್ತಿಯಲ್ಲಿ ಬರುತ್ತವೆ. ತ್ಯಾರ್ಸಿ ಗ್ರಾಮಕ್ಕೆ ನಾಗರಭಾವಿ, ಕಡಕೇರಿ ಮತ್ತು ಕಾನಳ್ಳಿ ಎಂಬ 3 ಮಜಿರೆಗಳು ಒಳಪಡುತ್ತವೆ. ಭಾನ್ಕುಳಿ ಗ್ರಾಮಕ್ಕೆ ಕಲ್ಲಕೈ, ಹೊಸಗದ್ದೆ, ಕೆಳಗಿನಕೇರಿ, ಹುಲಿಮನೆ, ಸಂಕೆಸರ ಮತ್ತು ಕರ್ಮನೆ ಎಂಬ 6 ಮಜಿರೆಗಳು ಬರುತ್ತದೆ. ಮುತ್ತಿಗೆ ಗ್ರಾಮದ ವ್ಯಾಪ್ತಿಗೆ ಬಿಲೆಗಾರ, ಕೊಸಳ್ಳಿ, ಕಳ್ಳೂರು, ದೇವಗಿರಿ, ಕಾಣಿಗದ್ದೆ, ಡೊಂಬೆಕೈ, ಅಸವಳ್ಳಿ, ಭುವನಗಿರಿ, ಕುಂಬ್ರಿಗದ್ದೆ, ಎದ್ದಿನಗದ್ದೆ, ಬಿಳಸೆ, ಅಳ್ಳಿಸರ, ಗೀಜಗಾರ(ನೆಂಜ್ಲಮಕ್ಕಿ) ಮತ್ತು ಜೇಡುಕುಳಿ ಎಂಬ 14 ಮಜಿರೆಗಳು ಸೇರುತ್ತವೆ.[66] ಈ ನಾಲ್ಕು ಗ್ರಾಮಗಳಲ್ಲಿ ಬೇಡ್ಕಣಿ ಮತ್ತು ತ್ಯಾರ್ಸಿ ದೊಡ್ಡ ಗ್ರಾಮಗಳಾಗಿದ್ದು, ಎಲ್ಲಾ ಗ್ರಾಮಗಳು ಪಂಚಾಯಿತಿ ಕಾರ್ಯಾಲಯಕ್ಕೆ ಹತ್ತಿರವಾಗಿವೆ.

ಬೇಡ್ಕಣಿ ಗ್ರಾಮಪಂಚಾಯಿತಿಯು ಮುಖ್ಯವಾಗಿ ಕೃಷಿಪ್ರಧಾನವಾಗಿದೆ. ಇಲ್ಲಿನ ಬಹುತೇಕ (ಶೇ.90ಕ್ಕಿಂತ ಹೆಚ್ಚು) ಜನರು ಕೃಷಿ ಜೀವನವನ್ನು ಅವಲಂಬಿಸಿದವರಾಗಿದ್ದಾರೆ. ಇಲ್ಲಿನ ಬಹುತೇಕ ಭೂಪ್ರದೇಶವು ಸಣ್ಣ ಸಣ್ಣ ಹರಳು ಕಲ್ಲುಗಳ ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದ ಮತ್ತು ಲಘು ಪೋಷಕಾಂಶಗಳಿಂದ ಕೂಡಿದ್ದು ಅಷ್ಟೇನೂ ಫಲವತ್ತತೆಯಲ್ಲದ ಪ್ರದೇಶವಾಗಿದೆ. ಇಲ್ಲಿಯ ಕೃಷಿ ಸಂಪೂರ್ಣವಾಗಿ ಮಳೆ ಆಶ್ರಿತವಾಗಿದೆ. ಮಲೆನಾಡಿನ ಪ್ರದೇಶವಾದ ಈ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಜೂನ್‌ನಿಂದ ಸೆಪ್ಟಂಬರ್ ತಿಂಗಳವರೆಗೆ ಸರಿಸುಮಾರು 100ರಿಂದ 110 ದಿನಗಳ ಕಾಲ ಮಳೆ ಬೀಳುತ್ತದೆ. ಭತ್ತ, ಅಡಿಕೆ ಇಲ್ಲಿಯ ಜನರ ಮುಖ್ಯ ಬೆಳೆಯಾಗಿದ್ದು, ಅಡಿಕೆ ವಾಣಿಜ್ಯ ಬೆಳೆಯಾಗಿದೆ.

ತೆಂಗು, ಬಾಳೆ, ಏಲಕ್ಕಿ, ಕಾಳುಮೆಣಸು, ಶುಂಠಿ, ಕಬ್ಬು, ಕೋಕೋಗಳಂತಹ ಉಪಬೆಳೆಗಳನ್ನು ಬೆಳೆಯಲಾಗುತ್ತದೆ. ಬೇಡ್ಕಣಿ ಗ್ರಾಮಪಂಚಾಯಿತಿಯು ಶೇ.70ಕ್ಕಿಂತ ಹೆಚ್ಚು ಪ್ರದೇಶವು ಅರಣ್ಯ ಪ್ರದೇಶದಿಂದ ಕೂಡಿದೆ. ನಿತ್ಯಹರಿದ್ವರ್ಣ ಕಾಡಿನಲ್ಲಿ ಶ್ರೀಗಂಧ, ಬೀಟೆ, ತೇಗ, ಮತ್ತಿ, ಹೊನ್ನೆ, ನಂದಿ, ಫಣಗಿ, ಬಿದುರು ಮುಂತಾದ ಗಿಡಮರಗಳು, ಗೋಡಂಬಿ(ಗೇರು), ಹಲಸು, ಮಾವು, ಸೀಗೆಕಾಯಿ, ಅಳಲೆಕಾಯಿ, ಜೇನುತುಪ್ಪ ಮುಂತಾದ ಕಾಡು ಉತ್ಪನ್ನಗಳು ಹಾಗೂ ಔಷಧಿ ಗಿಡಮೂಲಿಕೆಗಳು ಲಭ್ಯವಿದೆ. ಈ ಅರಣ್ಯ ಪ್ರದೇಶದಲ್ಲಿ ಹುಲಿ, ಕಾಡುಕೋಣ, ಕಾಡುಹಂದಿ, ಮೊಲ, ನವಿಲು, ಕಾಡುಕೋಳಿ, ಕಾಡುಕುರಿ, ಕಾಡುಬೆಕ್ಕು, ಕಾಡುಪಾಪ ಮುಂತಾದ ಪ್ರಾಣಿ ಪಕ್ಷಿಗಳು ಕಂಡುಬರುತ್ತವೆ. ಬೇಡ್ಕಣಿ ಗ್ರಾಮಪಂಚಾಯಿತಿಯು ನಿತ್ಯಹರಿದ್ವರ್ಣ ಕಾಡುಗಳಿಂದ ಕೂಡಿದ ಪ್ರದೇಶವಾಗಿದ್ದರಿಂದ ಮಳೆಗಾಲದಲ್ಲಿ ಹೆಚ್ಚು ಜಡಿಮಳೆ, ಚಳಿಗಾಲದಲ್ಲಿ ತುಂಬಾ ಚಳಿ ಮತ್ತು ಬಿಸಿಲುಗಾಲದಲ್ಲಿ ಹೆಚ್ಚು ಬಿಸಿಲು ಕಂಡುಬಂದರೂ, ಸೆಕೆ ಇಲ್ಲದ ಹವಾಮಾನದಿಂದ ಕೂಡಿದ ಸಮಶೀತೋಷ್ಣ ವಲಯವಾಗಿದೆ.

ಸಾಮಾಜಿಕ ಹಿನ್ನೆಲೆ: ಬೇಡ್ಕಣಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬೇಡ್ಕಣಿ, ಭಾನ್ಕುಳಿ, ತ್ಯಾರ್ಸಿ ಮತ್ತು ಮುತ್ತಿಗೆ ಈ ನಾಲ್ಕು ಕಂದಾಯ ಗ್ರಾಮಗಳಿದ್ದು, ಪ್ರತಿಯೊಂದು ಕಂದಾಯ ಗ್ರಾಮವು ಕೆಲವು ಮಜಿರೆ(ವಸತಿನೆಲೆ)ಗಳನ್ನು ಹೊಂದಿವೆ. 2010ರ ಕುಟುಂಬ ಗಣತಿ ಪ್ರಕಾರ, ಬೇಡ್ಕಣಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 1139 ಕುಟುಂಬಗಳಿದ್ದು, ಬೇಡ್ಕಣಿಯಲ್ಲಿ 409, ಭಾನ್ಕುಳಿಯಲ್ಲಿ 84, ಮುತ್ತಿಗೆಯಲ್ಲಿ 247 ಮತ್ತು ತ್ಯಾರ್ಸಿಯಲ್ಲಿ 399 ಕುಟುಂಬಗಳಿವೆ.[67] ಈ ಗ್ರಾಮಪಂಚಾಯಿತಿಯಲ್ಲಿ ಅತಿ ಹೆಚ್ಚು ಕುಟುಂಬಗಳನ್ನು ಹೊಂದಿದ ಗ್ರಾಮ ಬೇಡ್ಕಣಿಯಾದರೆ, ಅತಿ ಕಡಿಮೆ ಕುಟುಂಬಗಳನ್ನು ಹೊಂದಿದ ಗ್ರಾಮ ಭಾನ್ಕುಳಿಯಾಗಿದೆ. ಇಲ್ಲಿನ ಬಹುತೇಕ ವಸತಿಗಳು ಕೆಂಪು ಹೆಂಚಿನ ಮನೆಗಳಾಗಿವೆ ಹಾಗೂ ಮಜಿರೆಗಳು ತೋಟ–ಗದ್ದೆಗಳ ನಡುವೆ ಅಥವಾ ಹಾಸುಪಾಸುನಲ್ಲಿ ಕಂಡುಬರುತ್ತವೆ. 2011ರ ಜನಗಣತಿ ಪ್ರಕಾರ, ಬೇಡ್ಕಣಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 4,388 ಜನಸಂಖ್ಯೆ ಇದ್ದು, ಇದರಲ್ಲಿ, 2,171(ಶೇ.49.47) ಪುರುಷರು ಮತ್ತು 2,217(ಶೇ.50.53) ಮಹಿಳೆಯರು ಇದ್ದಾರೆ. ಬೇಡ್ಕಣಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿ 1,000 ಪುರುಷರಿಗೆ 1,021ರಷ್ಟು ಮಹಿಳೆಯರು ಇದ್ದು, ಲಿಂಗಾನುಪಾತವು ಜಿಲ್ಲೆ ಮತ್ತು ತಾಲೂಕಿಗಿಂತ ಕ್ರಮವಾಗಿ ಶೇ.46 ಮತ್ತು 8ರಷ್ಟು ಅಧಿಕವಾಗಿದೆ. ಈ ಗ್ರಾಮಪಂಚಾಯಿತಿಯಲ್ಲಿ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ 182ರಷ್ಟಿದೆ(ನೋಡಿ ಕೋಷ್ಟಕ–3.2).

ಬೇಡ್ಕಣಿ ಗ್ರಾಮಪಂಚಾಯಿತಿಯು ಸಾಮಾಜಿಕವಾಗಿ ವಿವಿಧ ಜಾತಿ, ಧರ್ಮ ಹಾಗೂ ವರ್ಗಗಳಿಂದ ಕೂಡಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಮುಖ್ಯವಾಗಿ ನಾಮಧಾರಿ(ಈಡಿಗ/ನಾಯ್ಕ) ಜನಾಂಗವು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ, ಹರಿಜನ, ಬ್ರಾಹ್ಮಣ, ಮಡಿವಾಳ, ಗೌಡರ್(ಲಿಂಗಾಯತ), ಶೆಟ್ಟಿ, ಬಡಗಿ, ಒಕ್ಕಲಿಗ ಮೊದಲಾದ ಅಲ್ಪಸಂಖ್ಯಾತ ಜಾತಿಗಳಾಗಿವೆ. ಬಹುಸಂಖ್ಯಾತರಾದ ನಾಮಧಾರಿಗಳು ಪಂಚಾಯಿತಿ ವ್ಯಾಪ್ತಿಯಲ್ಲಿ ರಾಜಕೀಯವಾಗಿ ತಮ್ಮ ಹಿಡಿತವನ್ನು ಹೊಂದಿದ್ದಾರೆ. ಆದರೆ ಪ್ರಾದೇಶಿಕ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಈ ಜನಾಂಗದ ಪ್ರಭಾವ/ನಾಯಕತ್ವ ಕಂಡುಬರುವುದಿಲ್ಲ. ಬೇಡ್ಕಣಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಶಿಷ್ಟರ ಸಂಖ್ಯೆ ಇದ್ದರೂ, ಇಲ್ಲದಂತಹ ಪ್ರಮಾಣ ಮತ್ತು ಸ್ಥಿತಿಯಿದೆ.

2011ರ ಜನಗಣತಿ ಪ್ರಕಾರ, ಬೇಡ್ಕಣಿ ಗ್ರಾಮಪಂಚಾಯಿತಿ ಪ್ರದೇಶದಲ್ಲಿ ಸಾಕ್ಷರತೆ ಪ್ರಮಾಣ ಶೇ.84.75(3,341)ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇ.92.30(1,805)ರಷ್ಟು ಮತ್ತು ಮಹಿಳಾ ಸಾಕ್ಷರತೆ ಪ್ರಮಾಣ ಶೇ.77.53(1,536)ರಷ್ಟಿದೆ. ಸಿದ್ಧಾಪುರ ತಾಲೂಕಿನಲ್ಲಿ ಸಾಕ್ಷರತೆ ಪ್ರಮಾಣಕ್ಕೆ ಹೋಲಿಸಿದರೆ ಒಟ್ಟು ಸಾಕ್ಷರತೆ ಪ್ರಮಾಣದಲ್ಲಿ ಶೇ.1.63ರಷ್ಟು ಕಡಿಮೆ, ಪುರುಷ ಸಾಕ್ಷರತೆ ಪ್ರಮಾಣದಲ್ಲಿ ಶೇ.0.38ರಷ್ಟು ಹೆಚ್ಚು ಮತ್ತು ಮಹಿಳಾ ಸಾಕ್ಷರತೆಯ ಪ್ರಮಾಣದಲ್ಲಿ ಶೇ.3.37ರಷ್ಟು ಕಡಿಮೆ ಇದೆ(ನೋಡಿ ಕೋಷ್ಟಕ–3.2). ಒಟ್ಟಾರೆಯಾಗಿ ತಾಲೂಕಿನ ಸಾಕ್ಷರತೆ ಬೆಳವಣಿಗೆಯಲ್ಲಿ ಬೇಡ್ಕಣಿ ಗ್ರಾಮಪಂಚಾಯಿತಿಯು ಹತ್ತಿರವಿದೆ ಎಂದು ಹೇಳಬಹುದು. ಇದಕ್ಕೆ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಶಿಷ್ಟರ ಸಂಖ್ಯೆ ಕಡಿಮೆ ಇರುವುದೇ ಪ್ರಮುಖ ಅಂಶವಾಗಿರುತ್ತದೆ.

ಆರ್ಥಿಕ ಹಿನ್ನೆಲೆ: ಬೇಡ್ಕಣಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಭೂಪ್ರದೇಶದಲ್ಲಿ ಶೇ.74.92ರಷ್ಟು ಬೆಟ್ಟ, ಗುಡ್ಡ, ಹಳ್ಳ, ಕೊಳ್ಳ, ಕಣಿವೆಗಳಿಂದ ಕೂಡಿದ ಅರಣ್ಯ ಪ್ರದೇಶವಾಗಿದೆ. ಶೇ.25.08ರಷ್ಟು ಕೃಷಿಭೂಮಿ ಮತ್ತು ಜನವಸತಿ ಪ್ರದೇಶವಾಗಿದೆ.[68] ಈ ಪಂಚಾಯಿತಿಯ ನಾಲ್ಕು ಕಂದಾಯ ಗ್ರಾಮಗಳು ಮತ್ತು ಮಜಿರೆಗಳು ಸಂಪೂರ್ಣವಾಗಿ ಮಳೆ ಆಶ್ರಿತ ಕೃಷಿಯನ್ನು ಅವಲಂಬಿಸಿವೆ. ಇಲ್ಲಿರುವ ಕೆಲವು ಮುಸ್ಲಿಂ ಕುಟುಂಬಗಳು ಸಣ್ಣ ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿವೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಹೆಚ್ಚು ಕೃಷಿ ಭೂಮಿ ಹೊಂದಿರುವ ಮತ್ತು ಆರ್ಥಿಕವಾಗಿ ಮೇಲ್ಮಟ್ಟದಲ್ಲಿರುವವರಲ್ಲಿ ಮೊದಲಿಗರು ಲಿಂಗಾಯಿತರು, ಬ್ರಾಹ್ಮಣರು ನಂತರ ನಾಮಧಾರಿಗಳು ಬರುತ್ತಾರೆ. ಹೆಚ್ಚು ಭೂಮಿ ಹೊಂದಿದ ಕೆಲವು ಕುಟುಂಬಗಳನ್ನು ಬಿಟ್ಟರೆ ಕೆಲವರಿಗೆ ಭೂಮಿ ಇದ್ದರೂ, ಇಲ್ಲದಷ್ಟು ಕಡಿಮೆ ಇದೆ. ಪರಿಶಿಷ್ಟರಿಗೆ ಭೂಮಿ ಇಲ್ಲವಾಗಿದೆ. ಇವರು ಆರ್ಥಿಕವಾಗಿ ದುಸ್ಥಿತಿಯಲ್ಲಿದ್ದಾರೆ. ಇವರೆಲ್ಲರೂ ಕೃಷಿಕೂಲಿಯನ್ನು ಅವಲಂಬಿಸಿದವರಾಗಿದ್ದಾರೆ. ಕೃಷಿ ಕಾರ್ಮಿಕರ ಕೂಲಿ ರೂ. 100 ದಾಟಿಲ್ಲ. ಇತ್ತೀಚೆಗೆ ಈ ಭಾಗದ ಕೆಳವರ್ಗದ ಕೃಷಿಕಾರ್ಮಿಕರಿಗೆ ಕೃಷಿಯೇ ಮುಖ್ಯ ಬದುಕಾಗಿ ಉಳಿದಿಲ್ಲ. ಇವರು ಪಕ್ಕದಲ್ಲಿರುವ ನಗರದಲ್ಲಿ ನಡೆಯುವ ಕಟ್ಟಡ ನಿರ್ಮಾಣ ಹಾಗೂ ಇತರೆ ಕೆಲಸಗಳಿಗೆ ಹೋಗುತ್ತಿದ್ದಾರೆ. ಶಾಲಾ–ಕಾಲೇಜು ಶಿಕ್ಷಣ ಪಡೆದ ಯುವಕರು ದ್ವಿತೀಯ ವಲಯ ಕೆಲಸಗಳನ್ನು ಹುಡಿಕಿಕೊಂಡು ನಗರಗಳಿಗೆ ಹೋಗುತ್ತಿದ್ದಾರೆ. ಹೀಗಾಗಿ ಈ ಭಾಗದಲ್ಲಿ ಕೃಷಿ ಕಾರ್ಮಿಕರ ಕೊರತೆ ಕಂಡುಬರುತ್ತಿದೆ. ಎಲ್ಲಾ ಜಾತಿ, ಧರ್ಮಗಳಲ್ಲಿ ಬಡವರು ಇದ್ದರೂ, ಪರಿಶಿಷ್ಟರಲ್ಲಿ ಹೆಚ್ಚು ಬಡವರು ಇರುವುದು ಕಂಡುಬರುತ್ತದೆ.

ರಾಜಕೀಯ ಹಿನ್ನೆಲೆ: ಪ್ರಸ್ತುತ ಅಧ್ಯಯನಕ್ಕೆ ಒಳಪಟ್ಟಿರುವ ಬೇಡ್ಕಣಿ ಗ್ರಾಮಪಂಚಾಯಿತಿಯು 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ ಜಾರಿಗೆ ಬಂದಾಗ ಪ್ರಥಮ ಬಾರಿಗೆ ಅಸ್ತಿತ್ವಕ್ಕೆ ಬಂದಿದೆ. ರಾಜ್ಯದಲ್ಲಿ 1983ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ ಜಾರಿಗೆ ಬಂದಾಗ, ಇಂದಿನ ಬೇಡ್ಕಣಿ ಗ್ರಾಮಪಂಚಾಯಿತಿಯ ಬೇಡ್ಕಣಿ, ಭಾನ್ಕುಳಿ ಮತ್ತು ತ್ಯಾರ್ಸಿ ಗ್ರಾಮಗಳು ಹಲಗೇರಿ ಮಂಡಲಪಂಚಾಯಿತಿಗೆ ಮತ್ತು ಮುತ್ತಿಗೆ ಗ್ರಾಮ ಇಟಗಿ ಮಂಡಲಪಂಚಾಯಿತಿಗೆ ಸೇರಿಸಲಾಯಿತು. ಪ್ರಥಮ ಬಾರಿಗೆ ಅಸ್ತಿತ್ವಕ್ಕೆ ಬಂದ ಬೇಡ್ಕಣಿ ಗ್ರಾಮಪಂಚಾಯಿತಿಯು ನಾಲ್ಕನೇ ಅವಧಿಗೆ ರಚನೆಗೊಂಡಿದೆ.

2010, ಮೇ ತಿಂಗಳಿನಲ್ಲಿ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯು ಶೇ.33.33ರಷ್ಟು ಮಹಿಳಾ ಮೀಸಲಾತಿ ಹಾಗೂ ಮೀಸಲಾತಿ ಆವರ್ತನ ನೀತಿಗೆ ಒಳಪಟ್ಟಿದೆ.

2010ರಲ್ಲಿ ಜರುಗಿದ ಗ್ರಾಮಪಂಚಾಯಿತಿಯಲ್ಲಿ ಬೇಡ್ಕಣಿ ಗ್ರಾಮಪಂಚಾಯಿತಿಗೆ 11 ಸದಸ್ಯರು ಚುನಾಯಿತರಾಗಿದ್ದಾರೆ. ಈ ಸದಸ್ಯರ ಲಿಂಗವಾರು ವಿವರಣೆ ನೋಡಿದಾಗ ಶೇ.45.45ರಷ್ಟು ಪುರುಷರು ಮತ್ತು ಶೇ. 54.55ರಷ್ಟು ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ. ಗ್ರಾಮವಾರು ವಿವರಣೆ ನೋಡಿದಾಗ, ಬೇಡ್ಕಣಿಯಿಂದ 5 ಸದಸ್ಯರು, ತ್ಯಾರ್ಸಿಯಿಂದ 4 ಸದಸ್ಯರು, ಭಾನ್ಕುಳಿ ಮತ್ತು ಮುತ್ತಿಗೆಯಿಂದ ತಲಾ 1 ಸದಸ್ಯರು ಪ್ರಾತಿನಿಧ್ಯ ಪಡೆದಿದ್ದಾರೆ. ಲಿಂಗವಾರು ವಿವರಣೆ ನೋಡಿದಾಗ ಶೇ.45.45 ಪುರುಷರು ಮತ್ತು ಶೇ.54.55)ಮಹಿಳೆಯರು ಪ್ರತಿನಿಧಿಸಿದ್ದಾರೆ. ಜಾತಿವಾರು ವಿವರಣೆ ಪರಿಶೀಲಿಸಿದಾಗ, ಪರಿಶಿಷ್ಟ ಜಾತಿಯಿಂದ ಶೇ.18 ಮಹಿಳಾ ಸದಸ್ಯರು, ಹಿಂದುಳಿದ ವರ್ಗದಿಂದ ಆಯ್ಕೆಯಾದ ಶೇ.36.36 ಸದಸ್ಯರಲ್ಲಿ ಶೇ.50 ಮಹಿಳಾ ಸದಸ್ಯರು ಮತ್ತು ಸಾಮಾನ್ಯ ವರ್ಗದಿಂದ ಚುನಾಯಿತರಾದ ಶೇ.45.45 ಸದಸ್ಯರಲ್ಲಿ ಶೇ.40 ಮಹಿಳಾ ಸದಸ್ಯರು ಪ್ರಾತಿನಿಧ್ಯ ಪಡೆದಿದ್ದಾರೆ(ನೋಡಿ ಕೋಷ್ಟಕ–3.11). ಈ ಪಂಚಾಯಿತಿಯ ಪರಿಶಿಷ್ಟ ಪಂಗಡದ ಒಂದು ಮಹಿಳಾ ಮೀಸಲು ಸ್ಥಾನಕ್ಕೆ ಯಾವೊಬ್ಬ ಪರಿಶಿಷ್ಟ ಪಂಗಡದ ಮಹಿಳೆ ಸ್ಪರ್ಧಿಸದ ಕಾರಣ ಪರಿಶಿಷ್ಟ ಜಾತಿ ಮಹಿಳೆ ಅವಿರೋಧ ಆಯ್ಕೆಯಾಗಿದ್ದಾರೆ. ಒಟ್ಟಾರೆಯಾಗಿ ಪಂಚಾಯಿತಿಗೆ ಪ್ರಾತಿನಿಧ್ಯ ಪಡೆದ 6 ಮಹಿಳಾ ಸದಸ್ಯರು ಸ್ವಇಚ್ಚೆಯಿಂದ ಸ್ಪರ್ಧಿಸದೇ ಪುರುಷರ ಒತ್ತಡಕ್ಕೆ ಅಥವಾ ಓಲೈಕೆಗೆ ಸ್ಪರ್ಧಿಸಿರುವುದು ಕಂಡುಬರುತ್ತದೆ.

ಬೇಡ್ಕಣಿ ಗ್ರಾಮಪಂಚಾಯಿತಿಯ ಮತದಾರರು ಬಿಳಿಗಿ ತಾಲೂಕುಪಂಚಾಯಿತಿ ಕ್ಷೇತ್ರಕ್ಕೆ ಮತ್ತು ದೊಡ್ಮನೆ ಜಿಲ್ಲಾಪಂಚಾಯಿತಿ ಕ್ಷೇತ್ರಕ್ಕೆ ಸ್ಪರ್ಧಿಸುವ ಮತ್ತು ಮತ ಚಲಾಯಿಸುವ ಪ್ರಾತಿನಿಧ್ಯವನ್ನು ಪಡೆದಿರುತ್ತಾರೆ.

3.6.2 ಕೋಲಸಿರ್ಸಿ ಗ್ರಾಮಪಂಚಾಯಿತಿ

ಚಾರಿತ್ರಿಕ ಹಿನ್ನೆಲೆ: ಪ್ರಸ್ತುತ ಅಧ್ಯಯನಕ್ಕೆ ಒಳಪಟ್ಟಿರುವ ಕೋಲಸಿರ್ಸಿ ಗ್ರಾಮಪಂಚಾಯಿತಿಯು ವಿಜಯನಗರ ಅರಸರ ಮಾಂಡಲಿಕರಾದ ಬಿಳಿಗಿ ಅರಸರ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿತ್ತು. ಬಿಳಿಗಿಯಿಂದ ಶಿರಸಿಗೆ ಹೋಗುವ ಮಾರ್ಗದಲ್ಲಿ ಕೋಲಸಿರ್ಸಿ ಗ್ರಾಮಪಂಚಾಯಿತಿ ಬರುತ್ತದೆ. ಈ ಪ್ರದೇಶದಲ್ಲಿ ಬಿಳಿಗಿ ಅರಸರ ಕಾಲದಲ್ಲಿ ಕೋಲುವಿದ್ಯೆಯಲ್ಲಿ ಪರಿಣತಿ ಪಡೆದ ದೊಡ್ಡ ಗುಂಪೊಂದನ್ನು ರಕ್ಷಣೆಗಾಗಿ ನಿಯೋಜಿಸಲಾಗಿತ್ತು. ಆದ್ದರಿಂದ ಈ ಪ್ರದೇಶಕ್ಕೆ ಕೋಲಸಿರ್ಸಿ ಎಂದು ಹೆಸರು ಬಂದಿದೆ ಎಂಬುದು ಅಲ್ಲಿನ ಜನಪದರ ಅಭಿಪ್ರಾಯವಾಗಿದೆ.[69] ಬಂದರು ಪ್ರದೇಶದಿಂದ ಒಳನಾಡಿಗೆ ಮತ್ತು ಒಳನಾಡಿನಿಂದ ಬಂದರು ಪ್ರದೇಶಕ್ಕೆ ಸರಕು ಸಂಪತ್ತನ್ನು ಸಾಗಿಸುವ ಮುಖ್ಯ ಮಾರ್ಗವಾಗಿ ಕೋಲಸಿರ್ಸಿ ಆಯಕಟ್ಟಿನ ಪ್ರದೇಶವಾಗಿರಬಹುದು. ದಟ್ಟಾರಣ್ಯದಿಂದ ಕೂಡಿದ್ದ ಮತ್ತು ಹೆಚ್ಚು ಮಳೆ ಬೀಳುವ ಈ ಪ್ರದೇಶದ ಮಾರ್ಗವಾಗಿ ಸರಕು ಸಂಪತ್ತು ಸಾಗಿಸುವ ವ್ಯಾಪಾರಸ್ಥರನ್ನು ಮತ್ತು ಪ್ರಯಾಣಿಕರನ್ನು ದರೋಡೆಕೋರರಿಂದ ಮತ್ತು ಕಳ್ಳಕಾಕರಿಂದ ರಕ್ಷಣೆ ಮಾಡಲು ವಿಜಯನಗರ ಅರಸರ ಮಾಂಡಲಿಕರಾದ ಬಿಳಿಗಿ ಅರಸರು ಕೋಲುಪಡೆಯನ್ನು ನಿಯೋಜಿಸಿರಬಹುದೆಂದು ಗ್ರಹಿಸಲಾಗಿದೆ. ಆದರೆ ಇಂದು ಕೋಲಸಿರ್ಸಿ ಪ್ರದೇಶದಲ್ಲಿ ಕೋಲುವಿದ್ಯೆ ಬಗ್ಗೆ ಯಾವುದೇ ಸುಳಿವು ಮತ್ತು ವಾಸನೆ ಕಂಡುಬರುವುದಿಲ್ಲ.

ಕೋಲಸಿರ್ಸಿ ಪ್ರದೇಶದಲ್ಲಿ ಕೋಟೆ-ಕೊತ್ತಲುಗಳಾಗಲಿ, ಐತಿಹಾಸಿಕ ದೇವಾಲಯಗಳಾಗಲಿ ಕಂಡುಬರುವುದಿಲ್ಲ. ಆದರೆ ಶೈಕ್ಷಣಿಕ ಕೇಂದ್ರವಾಗಿ ಕಂಡುಬರುತ್ತದೆ. 1911ರಲ್ಲಿ ಪ್ರಾರಂಭವಾದ ಸರ್ಕಾರಿ ಪ್ರಾಥಮಿಕ ಶಾಲೆ ನವೆಂಬರ್, 2011ರಲ್ಲಿ ಶತಮಾನೋತ್ಸವವನ್ನು ಆಚರಿಸಿಕೊಂಡಿದೆ. ಗ್ರಾಮಪಂಚಾಯಿತಿ ಕೇಂದ್ರಸ್ಥಾನವಾದ ಕೋಲಸಿರ್ಸಿಯಲ್ಲಿ ಪ್ರಾಥಮಿಕಶಾಲೆ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿವೆ. ಕೋಲಸಿರ್ಸಿ ಗ್ರಾಮಪಂಚಾಯಿತಿಯು ತಾಲೂಕು ಕೇಂದ್ರವಾದ ಸಿದ್ದಾಪುರ ಪಟ್ಟಣಕ್ಕೆ ತಾಕಿಕೊಂಡು ಆರಂಭವಾಗುತ್ತದೆ. ಪಟ್ಟಣಕ್ಕೆ ಸೀಮಿತವಾಗಿದ್ದ ಪದವಿಪೂರ್ವ, ಪದವಿ ಮತ್ತು ಆರ್ಯುರ್ವೇದಿಕ್ ಕಾಲೇಜುಗಳು ಕೋಲಸಿರ್ಸಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಒಳಪಡುತ್ತವೆ. ಐದು ವರ್ಷಗಳಿಗೊಮ್ಮೆ ಏಳುದಿನಗಳ ಕಾಲ ನಡೆಯುವ ಗ್ರಾಮದೇವತೆ ಶ್ರೀಮಾರಿಕಾಂಬಾ ಜಾತ್ರೆ ಈ ಭಾಗದ ಜನತೆಯ ವಿಶೇಷ ಹಬ್ಬವಾಗಿದೆ.

ಭೌಗೋಳಿಕ ಹಿನ್ನೆಲೆ: ಸಿದ್ದಾಪುರ ತಾಲೂಕು ಕೇಂದ್ರದಿಂದ 6 ಕಿ.ಮೀ. ದೂರದಲ್ಲಿರುವ ಕೋಲಸಿರ್ಸಿ ಗ್ರಾಮಪಂಚಾಯಿತಿಯು ಜಿಲ್ಲಾ ಕೇಂದ್ರದಿಂದ 145 ಕಿ.ಮೀ. ದೂರದಲ್ಲಿದೆ. ಕೋಲಸಿರ್ಸಿ ಗ್ರಾಮಪಂಚಾತಿಯು ತಾಲೂಕು ಕೇಂದ್ರವಾದ ಸಿದ್ದಾಪುರ ಪಟ್ಟಣದ ವಾಯವ್ಯ ದಿಕ್ಕಿನಲ್ಲಿ ಬರುತ್ತದೆ. ತಾಲೂಕು ಕೇಂದ್ರವಾದ ಸಿದ್ದಾಪುರ ಪಟ್ಟಣಕ್ಕೆ ಹೊಂದಿಕೊಂಡೇ ಈ ಪಂಚಾಯಿತಿ ಪ್ರಾರಂಭವಾಗುತ್ತದೆ. ಕೋಲಸಿರ್ಸಿ ಗ್ರಾಮಪಂಚಾಯಿತಿಯು 3,223 ಹೆಕ್ಟೇರ್ ಭೌಗೋಳಿಕ ಪ್ರದೇಶ ಹೊಂದಿದ್ದು, 1,410ರಷ್ಟು ಅರಣ್ಯ ಪ್ರದೇಶವಾಗಿದೆ(ನೋಡಿ ಕೋಷ್ಟಕ-3.1). ಅರಣ್ಯ ಪ್ರದೇಶದಲ್ಲಿ ವಿಸ್ತರಿಸಿಕೊಂಡಿರುವ ಕೋಲಸಿರ್ಸಿ ಗ್ರಾಮಪಂಚಾಯಿತಿಯು ಬೆಟ್ಟ, ಕಣಿವೆ, ಹಳ್ಳ, ಕೊಳ್ಳ ಕೆರೆ, ಬಾವಿಗಳಿಂದ ಕೂಡಿದ ಏರು-ಇಳಿಜಾರಿನ ಮತ್ತು ಅಲ್ಲಿಲ್ಲಿ ಸಮತಟ್ಟಾದ ಪ್ರದೇಶವಾಗಿದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ ಪೂರ್ವದಲ್ಲಿ ಕಾನಗೋಡ ಗ್ರಾಮಪಂಚಾಯಿತಿಯ ಬಳ್ಳಟ್ಟಿ ಗ್ರಾಮ, ಪಶ್ಚಿಮದಲ್ಲಿ ಬಿದ್ರಕಾನ ಗ್ರಾಮಪಂಚಾಯಿತಿ, ಉತ್ತರದಲ್ಲಿ ಹಾರ್ಸಿಕಟ್ಟ ಗ್ರಾಮಪಂಚಾಯಿತಿಯ ಸಂಪಗೋಡ ಮತ್ತು ಕಾನಗೋಡ ಗ್ರಾಮಪಂಚಾಯಿತಿಯ ನಿಡಗೋಡ ಗ್ರಾಮಗಳು ಮತ್ತು ದಕ್ಷಿಣಕ್ಕೆ ಬೇಡ್ಕಣಿ ಗ್ರಾಮಪಂಚಾಯಿತಿಯ ತ್ಯಾರ್ಸಿ ಗ್ರಾಮ ಮತ್ತು ಸಿದ್ದಾಪುರ ಪಟ್ಟಣಗಳು ಬರುತ್ತವೆ.[70] ಕೋಲಸಿರ್ಸಿ ಗ್ರಾಮಪಂಚಾಯಿತಿ 11 ಕಂದಾಯ ಗ್ರಾಮಗಳನ್ನು ಹೊಂದಿದೆ. ಈ 11 ಗ್ರಾಮಗಳ ವ್ಯಾಪ್ತಿಗೆ ಸುಮಾರು 20 ಮಜಿರೆ(ವಸತಿ ನೆಲೆಗಳು) ಬರುತ್ತದೆ. ಒಂದು, ಕೋಲಸಿರ್ಸಿ ಗ್ರಾಮದ ವ್ಯಾಪ್ತಿಗೆ ಗುಡ್ಡೆಕೇರಿ, ಮಾರುತಿ ನಗರ, ಲಕ್ಷ್ಮಿ ನಗರ, ಬ್ಯಾಡಿಗಾರ, ಗುಟ್ನೆಕೈ ಮತ್ತು ವಿದ್ಯಾನಗರ ಎಂಬ ಮಜಿರೆಗಳು ಬರುತ್ತದೆ. ಎರಡು, ಅವರಗುಪ್ಪ ಗ್ರಾಮಕ್ಕೆ ಅಪ್ಪಿನಬೈಲು, ಶಿರಗಳ್ಳೆ ಮತ್ತು ಮಳವತ್ತಿ ಮಜಿರೆಗಳು, ಮೂರು, ಬಳುಗುಳಿ ಗ್ರಾಮಕ್ಕೆ ಚೆನ್ಮಾಂವು ಮತ್ತು ಹಿತ್ತಲಕೈ ಎಂಬ ಮಜಿರೆಗಳು, ನಾಲ್ಕು, ಹಲಗಡಿ ಕೊಪ್ಪ ಗ್ರಾಮಕ್ಕೆ, ಚಾಡಾಣೆ ಮತ್ತು ಜೂರಿಮನೆ ಮಜಿರೆಗಳು, ಐದು, ಕಸ್ತೂರ ಗ್ರಾಮಕ್ಕೆ ಕಲಕೊಪ್ಪ ಮಜಿರೆ, ಆರು, ಕುಣಿಜಿ ಗ್ರಾಮಕ್ಕೆ ಗುಡ್ಡೇಕೇರಿ ಮತ್ತು ಡಂಕಣಿ ಮಜಿರೆಗಳು, ಏಳು, ಬಂದಿಸರ ಗ್ರಾಮಕ್ಕೆ ಹಂದಿಮನೆ, ಎಂಟು, ಹೆಗ್ಗೋಡುಮನೆ ಗ್ರಾಮಕ್ಕೆ ಗುಂಡಲ್, ಕಲ್‌ಸರ ಮತ್ತು ಕೋನಕಟ್ಟೆ ಮಜಿರೆಗಳು ಬರುತ್ತವೆ. ಒಂಬತ್ತು, ಮಂಡ್ಲಿಕೊಪ್ಪ, ಹತ್ತು, ಹೆಗ್ಗದ್ದೆ ಮತ್ತು ಹನ್ನೊಂದು

ತುಂಬ್ರಗೋಡ ಗ್ರಾಮಕ್ಕೆ ಮಜಿರೆಗಳು ಇರುವುದಿಲ್ಲ.[71] ಕೋಲಸಿರ್ಸಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಕೋಲಸಿರ್ಸಿ ದೊಡ್ಡ ಗ್ರಾಮವಾದರೆ, ಹೆಗ್ಗದ್ದೆ ಸಣ್ಣ ಗ್ರಾಮವಾಗಿದೆ. ಪಂಚಾಯಿತಿಯ ಉತ್ತರಕ್ಕೆ ಇರುವ ತುಂಬರಗೋಡು ಮತ್ತು ಹೆಗ್ಗೋಡು ಮನೆ ಗ್ರಾಮಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಗ್ರಾಮಗಳು ಪಂಚಾಯಿತಿ ಕಾರ್ಯಾಲಯಕ್ಕೆ ಹತ್ತಿರ ಇವೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ ಪ್ರದೇಶವು, ಸಣ್ಣ ಸಣ್ಣ ಹರಳುಕಲ್ಲು ಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದ ಹಾಗೂ ಲಘು ಸಸ್ಯಪೋಷಕಾಂಶವುಳ್ಳ ಪ್ರದೇಶವಾಗಿದೆ. ಈ ಪಂಚಾಯಿತಿಯು ಮುಖ್ಯವಾಗಿ ಕೃಷಿಪ್ರಧಾನ ಪ್ರದೇಶವಾಗಿದೆ. ಪಂಚಾಯಿತಿಯ ಒಟ್ಟು ಭೂವಿಸ್ತೀರ್ಣದಲ್ಲಿ 1,355 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗುತ್ತದೆ(ನೋಡಿ ಕೋಷ್ಟಕ–3.1). ಇಲ್ಲಿನ ಬಹುತೇಕ ಜನರು ಕೃಷಿಕರಾಗಿದ್ದಾರೆ. ಇಲ್ಲಿನ ಕೃಷಿ ಸಂಪೂರ್ಣವಾಗಿ ಮಳೆ ಅವಲಂಬಿತವಾಗಿದೆ. ಮಲೆನಾಡು ಪ್ರದೇಶವಾದ ಕೋಲಸಿರ್ಸಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಜೂನ್ ಮೊದಲ ವಾರದಿಂದ ಪ್ರಾರಂಭವಾಗಿ ಸೆಪ್ಟೆಂಬರ್ ತಿಂಗಳವರೆಗೆ ಸುಮಾರು 110 ದಿನಗಳ ಕಾಲ ಮಳೆ ಬರುತ್ತದೆ. ಭತ್ತ ಪ್ರಧಾನ ಬೆಳೆಯಾಗಿದ್ದು, ಅಡಿಕೆ ವಾಣಿಜ್ಯ ಬೆಳೆಯಾಗಿದೆ. ಇಲ್ಲಿನ ಹವಮಾನದ ಅನುಕೂಲತೆ ಮತ್ತು ಅಗತ್ಯತೆಗೆ ಅನುಗುಣವಾಗಿ ಕೆಲವು ಉಪಬೆಳೆಗಳನ್ನು ಬೆಳೆಯುತ್ತಾರೆ. ತೆಂಗು, ಬಾಳೆ, ವೀಳ್ಯದೆಲೆ, ಕರಿಮೆಣಸು, ಏಲಕ್ಕಿ, ನಿಂಬೆ, ಶುಂಠಿ, ಅರಿಶಿಣ, ಕಬ್ಬು, ಪರಂಗಿ, ಮಾವು, ವೆನಿಲಾ, ಕೋಕೋ ಮುಂತಾದ ಉಪಬೆಳೆಗಳಾಗಿವೆ.

ಕೋಲಸಿರ್ಸಿ ಗ್ರಾಮಪಂಚಾಯಿತಿಯು ಶೇ.43.75ರಷ್ಟು ನಿತ್ಯಹರಿದ್ವರ್ಣ ಅರಣ್ಯ ಪ್ರದೇಶವನ್ನು ಹೊಂದಿದ್ದು, ಇದರಲ್ಲಿ ಶ್ರೀಗಂಧ, ಬೀಟೆ, ತೇಗ, ಮತ್ತಿ, ಹೊನ್ನೆ, ನಂದಿ, ಫಣಗಿ, ಬಿದರು ಮುಂತಾದ ಬೆಲೆ ಬಾಳುವ ಗಿಡ ಮರಗಳು, ಗೋಡಂಬಿ, ಹಲಸು, ಮಾವು, ಸೀಗೆಕಾಯಿ, ಅಲಳೆಕಾಯಿ, ಜೇನು, ಮುಂತಾದ ಕಾಡು ಉತ್ಪನ್ನಗಳು ಮತ್ತು ಔಷಧಿ ಗಿಡಮೂಲಿಕೆಗಳು ಲಭ್ಯವಾಗುತ್ತವೆ. ಹುಲಿ, ಕಾಡುಕೋಣ, ಕಾಡುಹಂದಿ, ಮುಳ್ಳುಹಂದಿ, ಕಾಡುಕುರಿ, ಕಾಡುಪಾಪ, ಕಾಡುಬೆಕ್ಕು, ಕಾಡುಕೋಳಿ, ನರಿ, ನವಿಲು, ಮೊಲ ಮುಂತಾದ ಕಾಡು ಪ್ರಾಣಿ–ಪಕ್ಷಿಗಳು ಕಂಡುಬರುತ್ತವೆ. ಈ ಪ್ರದೇಶವು ಮಳೆಗಾಲದಲ್ಲಿ ಹೆಚ್ಚು ಮಳೆ ಬೀಳುವ, ಚಳಿಗಾಲದಲ್ಲಿ ಹೆಚ್ಚು ಚಳಿ ಇರುವ ಮತ್ತು ಬಿಸಿಲುಗಾಲದಲ್ಲಿ ಕಡಿಮೆ ಸೆಕೆ ಇರುವ ಸಮಶೀತೋಷ್ಣವಲಯವಾಗಿದೆ.

ಸಾಮಾಜಿಕ ಹಿನ್ನೆಲೆ: ಕೋಲಸಿರ್ಸಿ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ 11 ಕಂದಾಯ ಗ್ರಾಮಗಳು ಮತ್ತು 20 ಮಜಿರೆಗಳು ಬರುತ್ತವೆ. 2010ರ ಕುಟುಂಬಗಣತಿ ಪ್ರಕಾರ, ಕೋಲಸಿರ್ಸಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಂದಾಯ ಗ್ರಾಮಗಳ ಮತ್ತು ಮಜಿರೆಗಳಲ್ಲಿ ಒಟ್ಟು 1,343 ಕುಟುಂಬಗಳು ಬರುತ್ತವೆ. ಗ್ರಾಮವಾರು ವಿವರಣೆ ನೋಡಿದಾಗ, ಕೋಲಸಿರ್ಸಿಯಲ್ಲಿ 414, ಅವರಗುಪ್ಪ ಗ್ರಾಮದಲ್ಲಿ 367, ಬಳುಗುಳಿ ಗ್ರಾಮದಲ್ಲಿ 72, ಹಲಗಡಿಕೊಪ್ಪ ಗ್ರಾಮದಲ್ಲಿ 60, ಕಸ್ತೂರ ಗ್ರಾಮದಲ್ಲಿ 74, ಕುಣೆಜಿ ಗ್ರಾಮದಲ್ಲಿ 95, ಬಂದಿಸರ ಗ್ರಾಮದಲ್ಲಿ 18, ಹೆಗ್ಗೋಡುಮನೆ ಗ್ರಾಮದಲ್ಲಿ 82, ಮಂಡ್ಲಿಕೊಪ್ಪ ಗ್ರಾಮದಲ್ಲಿ 82, ತುಂಬ್ರಗೋಡ ಗ್ರಾಮದಲ್ಲಿ 08 ಮತ್ತು ಹೆಗ್ಗದ್ದೆ ಗ್ರಾಮದಲ್ಲಿ 04 ಕುಟುಂಬಗಳು ಬರುತ್ತವೆ.[72] ಈ ಪಂಚಾಯಿತಿಯುಲ್ಲಿ ಅತಿಹೆಚ್ಚು ಕುಟುಂಬಗಳನ್ನು ಹೊಂದಿದ ಗ್ರಾಮ

ಕೋಲಸಿರ್ಸಿಯಾದರೆ, ಹೆಗ್ಗದ್ದೆ ಅತಿಕಡಿಮೆ ಕುಟುಂಬಗಳನ್ನು ಹೊಂದಿದ ಗ್ರಾಮವಾಗಿದೆ. ಇಲ್ಲಿನ ಬಹುತೇಕ ವಸತಿಗಳು ಕೆಂಪು ಹೆಂಚಿನ ಮನೆಗಳಾಗಿವೆ ಹಾಗೂ ಮಜಿರೆಗಳು ತೋಟ-ಗದ್ದೆಗಳ ನಡುವೆ ಅಥವಾ ಹಾಸುಪಾಸಿನಲ್ಲಿ ಕಂಡುಬರುತ್ತವೆ. 2011ರ ಜನಗಣತಿ ಪ್ರಕಾರ, ಕೋಲಸಿರ್ಸಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ 5,256 ಜನಸಂಖ್ಯೆ ಇದ್ದು, ಇದರಲ್ಲಿ, 2,566(ಶೇ.48.83) ಪುರುಷರು ಮತ್ತು 2,690(ಶೇ.51.17) ಮಹಿಳೆಯರು ಇದ್ದಾರೆ. ಈ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿ 1,000 ಪುರುಷರಿಗೆ 1,048ರಷ್ಟು ಮಹಿಳೆಯರು ಇದ್ದು, ಲಿಂಗಾನುಪಾತವು ಜಿಲ್ಲೆ ಮತ್ತು ತಾಲೂಕಿಗಿಂತ ಕ್ರಮವಾಗಿ ಶೇ.73 ಮತ್ತು 35ರಷ್ಟು ಅಧಿಕವಾಗಿದೆ. ಈ ಗ್ರಾಮಪಂಚಾಯಿತಿಯಲ್ಲಿ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ 182ರಷ್ಟಿದೆ(ನೋಡಿ ಕೋಷ್ಟಕ-3.2).

ಕೋಲಸಿರ್ಸಿ ಗ್ರಾಮಪಂಚಾಯಿತಿ ಸಾಮಾಜಿಕವಾಗಿ ವಿವಿಧ ಧರ್ಮ, ಜಾತಿ ಜನಾಂಗಗಳಿಂದ ಕೂಡಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಮುಖ್ಯವಾಗಿ ನಾಮಧಾರಿ(ಈಡಿಗ), ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ, ಹರಿಜನ, ಮುಸ್ಲಿಂ, ಮಡಿವಾಳ, ಆಚಾರಿ(ಬಡಿಗ) ಸಮುದಾಯಗಳು ಕಂಡುಬರುತ್ತವೆ. ಈ ಪಂಚಾಯಿತಿಯಲ್ಲಿ ನಾಮಧಾರಿಗಳು(ನಾಯ್ಕ) ಜನಸಂಖ್ಯೆಯಲ್ಲಿ ದೊಡ್ಡ ಸಮುದಾಯವಾಗಿದೆ. ಇವರು ಪಂಚಾಯಿತಿಯ ಅಧಿಕಾರ ಚುಕ್ಕಾಣಿ ಹಿಡಿಯುವಲ್ಲಿ ಮುಂಚೂಣಿಯಲ್ಲಿದ್ದಾರೆ. ಈ ಸಮುದಾಯದ ನಾಯಕರು ಪ್ರಾದೇಶಿಕ, ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಭಾವಿ ರಾಜಕಾರಣಿಗಳಾಗಿ ಅಥವಾ ನಾಯಕರಾಗಿ ಹೊರಹೊಮ್ಮಲು ಆಗುತ್ತಿಲ್ಲ. ಇದಕ್ಕೆ ಕಾರಣ ಈ ಸಮುದಾಯದಲ್ಲಿ ಬಹುತೇಕರು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಸಾಮಾನ್ಯವಾಗಿ ಬಹುಸಂಖ್ಯಾತ ಸಮುದಾಯದಲ್ಲಿ ಕಂಡುಬರುವಂತೆ ಐಕ್ಯತೆ ಮತ್ತು ನಾಯಕತ್ವದ ಕೊರತೆ ಕಂಡುಬರುತ್ತದೆ. ಪರಿಶಿಷ್ಟ ಜಾತಿಯವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದಾರೆ. ಪರಿಶಿಷ್ಟ ಪಂಗಡದವರು ಇದ್ದರೂ ಇಲ್ಲದಂಥ ಸಂಖ್ಯೆಯಲ್ಲಿದ್ದಾರೆ.

2011ರ ಜನಗಣತಿ ಪ್ರಕಾರ, ಕೋಲಸಿರ್ಸಿ ಗ್ರಾಮಪಂಚಾಯಿತಿ ಪ್ರದೇಶದಲ್ಲಿ ಸಾಕ್ಷರತೆ ಪ್ರಮಾಣ ಶೇ.82.72(3,862)ರಷ್ಟಿದ್ದು, ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇ.89.78(2,043)ರಷ್ಟು ಮತ್ತು ಮಹಿಳಾ ಸಾಕ್ಷರತೆ ಪ್ರಮಾಣ ಶೇ.75.98(1,819)ರಷ್ಟಿದೆ. ಸಿದ್ದಾಪುರ ತಾಲೂಕಿನಲ್ಲಿ ಸಾಕ್ಷರತೆ ಪ್ರಮಾಣಕ್ಕೆ ಹೋಲಿಸಿದರೆ ಒಟ್ಟು ಸಾಕ್ಷರತೆ ಪ್ರಮಾಣದಲ್ಲಿ ಶೇ.3.66ರಷ್ಟು, ಪುರುಷ ಸಾಕ್ಷರತೆ ಪ್ರಮಾಣದಲ್ಲಿ ಶೇ.2.14ರಷ್ಟು ಹೆಚ್ಚು ಮತ್ತು ಮಹಿಳಾ ಸಾಕ್ಷರತೆಯ ಪ್ರಮಾಣದಲ್ಲಿ ಶೇ.4.92ರಷ್ಟು ಕಡಿಮೆ ಇದೆ(ನೋಡಿ ಕೋಷ್ಟಕ-3.2). ಒಟ್ಟಾರೆಯಾಗಿ, ತಾಲೂಕಿನ ಸಾಕ್ಷರತೆ ಬೆಳವಣಿಗೆಯಲ್ಲಿ ಕೋಲಸಿರ್ಸಿ ಗ್ರಾಮಪಂಚಾಯಿತಿಯು ಸ್ವಲ್ಪಮಟ್ಟಿಗೆ ಹಿಂದುಳಿದಿದೆ ಎಂದು ಹೇಳಬಹುದು. ಇದಕ್ಕೆ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಪರಿಶಿಷ್ಟರು ಇರುವುದು ಪ್ರಮುಖ ಅಂಶವೆಂದು ಗ್ರಹಿಸಲಾಗಿದೆ. ಶೈಕ್ಷಣಿಕವಾಗಿ ಕೋಲಸಿರ್ಸಿ ಸಿದ್ದಾಪುರ ತಾಲೂಕಿನಲ್ಲಿ ಒಂದು ಮುಂದುವರೆದ ಗ್ರಾಮಪಂಚಾಯಿತಿಯಾಗಿದೆ. ಈ ಪಂಚಾಯಿತಿಯಲ್ಲಿ ಶತಮಾನೋತ್ಸವ ಆಚರಿಸಿಕೊಂಡ ಸರ್ಕಾರಿ ಹಿರಿಯ ಪ್ರಾಥಮಿಕಶಾಲೆ ಜೊತೆಗೆ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿವೆ. ಅಲ್ಲದೇ

ತಾಲೂಕು ಕೇಂದ್ರಕ್ಕೆ ಹತ್ತಿರವಿರುವುದರಿಂದ ಅಲ್ಲಿನ ಶಿಕ್ಷಣಸಂಸ್ಥೆಗಳ ಲಾಭವನ್ನು ಈ ಪಂಚಾಯಿತಿ ಜನರು ಪಡೆದುಕೊಳ್ಳುತ್ತಿದ್ದಾರೆ.

ಆರ್ಥಿಕ ಹಿನ್ನೆಲೆ: ಕೋಲಸಿರ್ಸಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಭೂಪ್ರದೇಶವು ಶೇ.43.75ರಷ್ಟು ಅರಣ್ಯ ಪ್ರದೇಶ, ಶೇ.42.05ರಷ್ಟು ಕೃಷಿ ಕ್ಷೇತ್ರ ಮತ್ತು ಶೇ.14.20ರಷ್ಟು ಜನವಸತಿ ಪ್ರದೇಶದಿಂದ ಕೂಡಿದೆ.[73] ಕೋಲಸಿರ್ಸಿ ವ್ಯಾಪ್ತಿಯಲ್ಲಿ ಬರುವ 11 ಗ್ರಾಮಗಳು ಮತ್ತು ಇವುಗಳಿಗೆ ಸಂಬಂಧಿಸಿದ ಮಜಿರೆಗಳ ಜನರು ಸಂಪೂರ್ಣವಾಗಿ ಮಳೆ ಆಶ್ರಿತ ಕೃಷಿಯನ್ನು ಅವಲಂಬಿಸಿದರಾಗಿದ್ದಾರೆ. ಕೃಷಿಭೂಮಿ ಇಲ್ಲದ ಕೆಲವು ಕುಟುಂಬಗಳು ಸಣ್ಣ-ಪುಟ್ಟ ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುವುದು ಕಂಡುಬರುತ್ತದೆ. ಇಲ್ಲಿನ ಬಹುತೇಕ ಜನರು ಕೃಷಿಕರು ಮತ್ತು ಕೃಷಿ ಕಾರ್ಮಿಕರಾಗಿರುತ್ತಾರೆ. ಅಧಿಕ ಕೃಷಿಭೂಮಿ ಹೊಂದಿರುವ ಮತ್ತು ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರಲ್ಲಿ ಸಾಮಾನ್ಯ ವರ್ಗದವರು ಮೊದಲಿಗರಾದರೆ, ಈಡಿಗರು ನಂತರದ ಸ್ಥಾನದಲ್ಲಿದ್ದಾರೆ. ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ನಾಮಧಾರಿ(ನಾಯ್ಕ) ಕುಟುಂಬಗಳ ಸಂಖ್ಯೆ ತೀರ ಕಡಿಮೆ ಎನ್ನಬಹುದು. ಪರಿಶಿಷ್ಟರು ಮತ್ತು ಇತರೆ ಜಾತಿ ವರ್ಗಗಳ ಬಹುತೇಕ ಕಟುಂಬಗಳಿಗೆ ಭೂಮಿ ಇಲ್ಲವಾಗಿದೆ. ಇವರು ಆರ್ಥಿಕವಾಗಿ ದುಸ್ಥಿತಿಯಲ್ಲಿದ್ದಾರೆ. ಇವರೆಲ್ಲರೂ ಕೃಷಿಕೂಲಿಯನ್ನು ಅವಲಂಬಿಸಿದವರಾಗಿದ್ದಾರೆ. ಕೃಷಿ ಕಾರ್ಮಿಕರ ಕೂಲಿ ರೂ. 100 ದಾಟಿಲ್ಲ. ಇತ್ತೀಚೆಗೆ ಈ ಭಾಗದ ಕೆಳವರ್ಗದ ಕೃಷಿಕಾರ್ಮಿಕರಿಗೆ ಕೃಷಿಯೇ ಮುಖ್ಯ ಬದುಕಾಗಿ ಉಳಿದಿಲ್ಲ. ಇವರು ಪಕ್ಕದಲ್ಲಿರುವ ನಗರದಲ್ಲಿ ನಡೆಯುವ ಕಟ್ಟಡ ನಿರ್ಮಾಣ ಹಾಗೂ ಇತರೆ ಕೆಲಸಗಳಿಗೆ ಹೋಗುತ್ತಿದ್ದಾರೆ. ಶಾಲಾ-ಕಾಲೇಜು ಶಿಕ್ಷಣ ಪಡೆದ ಯುವಕರು ದ್ವಿತೀಯ ವಲಯ ಕೆಲಸಗಳನ್ನು ಆರಿಸಿಕೊಂಡು ನಗರಗಳಿಗೆ ಹೋಗುತ್ತಿದ್ದಾರೆ. ಎಲ್ಲಾ ಜಾತಿ, ಧರ್ಮಗಳಲ್ಲಿ ಬಡವರು ಇದ್ದರೂ, ಪರಿಶಿಷ್ಟರಲ್ಲಿ ಹೆಚ್ಚು ಬಡವರು ಇರುವುದು ಕಂಡುಬರುತ್ತದೆ.

ರಾಜಕೀಯ ಹಿನ್ನೆಲೆ: ರಾಜ್ಯದಲ್ಲಿ 1957ರ ಪಂಚಾಯತ್‌ರಾಜ್ ಅಧಿನಿಯಮ ಜಾರಿಗೆ ಬಂದಾಗ ಕೋಲಸಿರ್ಸಿ ಗ್ರಾಮಪಂಚಾಯಿತಿಯು ಅಸ್ತಿತ್ವಕ್ಕೆ ಬಂದಿದೆ. ರಾಜ್ಯದಲ್ಲಿ ಜಾರಿಗೆ ಬಂದ 1983ರ ಪಂಚಾಯತ್‌ರಾಜ್ ಅಧಿನಿಯಮಕ್ಕೆ ಅನುಗುಣವಾಗಿ ಕೋಲಸಿರ್ಸಿ ಮಂಡಲಪಂಚಾಯಿತಿಯಾಗಿ ರಚನೆಗೊಂಡಿತು. ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿಯ 73ನೇ ತಿದ್ದುಪಡಿಗೆ ಪೂರಕವಾಗಿ ರಾಜ್ಯದಲ್ಲಿ 1993ರ ಪಂಚಾಯತ್‌ರಾಜ್ ಕಾಯ್ದೆ ಜಾರಿಗೆ ಬಂದಾಗ ಕೋಲಸಿರ್ಸಿ ಮತ್ತೇ ಗ್ರಾಮಪಂಚಾಯಿತಿಯಾಗಿ ಕಾರ್ಯ ನಿರ್ವಹಿಸುತ್ತಿದೆ. 1994ರಲ್ಲಿ ಅಸ್ತಿತ್ವಕ್ಕೆ ಬಂದ ಕೋಲಸಿರ್ಸಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ 11 ಗ್ರಾಮಗಳು ಮತ್ತು 20 ಮಜಿರೆಗಳು ಬರುತ್ತವೆ. ಈ 11 ಕಂದಾಯ ಗ್ರಾಮಗಳನ್ನು ಕೋಲಸಿರ್ಸಿ ಪಂಚಾಯಿತಿಯ 4 ಚುನಾವಣಾ ವಾರ್ಡ್/ ಕೇತ್ರಗಳನ್ನಾಗಿ ವಿಂಗಡಿಸಲಾಗಿದೆ. ಕೋಲಸಿರ್ಸಿ, ಬಳುಗುಳಿ ಮತ್ತು ಹೆಗ್ಗದ್ದೆ ಗ್ರಾಮಗಳನ್ನು ಸೇರಿಸಿ, ಕೋಲಸಿರ್ಸಿಯನ್ನು ಒಂದನೇ ವಾರ್ಡಾಗಿ, ಅವರಗುಪ್ಪ ಎರಡನೇ ವಾರ್ಡನ್ನಾಗಿ, ಕುಣಿಜಿ, ಕಸ್ತೂರ, ಬಂದಿಸರ ಮತ್ತು ಹಲಗಡಿಕೊಪ್ಪ ಸೇರಿಸಿ, ಮೂರನೇ ವಾರ್ಡಾಗಿ ಕುಣಿಜಿಯನ್ನು ಮತ್ತು ಮಂಡ್ಲಿಕೊಪ್ಪ, ತುಂಬರಗೋಡು ಮತ್ತು ಹೆಗ್ಗೋಡು ಮನೆ ಸೇರಿಸಿ. ಮಂಡ್ಲಿಕೊಪ್ಪವನ್ನು ನಾಲ್ಕನೇ ವಾರ್ಡನ್ನಾಗಿ ರಚನೆ ಮಾಡಲಾಗಿದೆ.

2010ರ ಮೇ ತಿಂಗಳಲ್ಲಿ ನಡೆದ ನಾಲ್ಕನೇ ಅವಧಿಯ ಗ್ರಾಮಪಂಚಾಯಿತಿ ಚುನಾವಣೆಯು ಶೇ.33.33ರಷ್ಟು ಮಹಿಳಾ ಮೀಸಲಾತಿ ಮತ್ತು ಮೀಸಲಾತಿ ಆವರ್ತನ ನೀತಿಗೆ ಒಳಪಟ್ಟು ಜರುಗಿದೆ. ಪ್ರಸ್ತುತ ಕೋಲಸಿರ್ಸಿ ಗ್ರಾಮಪಂಚಾಯಿತಿಯು 13 ಸದಸ್ಯರನ್ನು ಒಳಗೊಂಡಿದೆ. ಈ ಸದಸ್ಯರ ಲಿಂಗವಾರು ವಿವರಣೆ ನೋಡಿದಾಗ ಶೇ.46.15 ಪುರುಷರು ಮತ್ತು ಶೇ.53.85 ಮಹಿಳೆಯರು ಪ್ರಾತಿನಿಧ್ಯ ಪಡೆದಿದ್ದಾರೆ. ಗ್ರಾಮ ಮತ್ತು ವಾರ್ಡ್‌ವಾರು ಸದಸ್ಯರ ಪ್ರಾತಿನಿಧ್ಯ ನೋಡಿದಾಗ, ಒಂದನೇ ವಾರ್ಡ್ ಕೋಲಸಿರ್ಸಿಯಿಂದ 5 ಸದಸ್ಯರು, ಎರಡನೇ ವಾರ್ಡ್ ಅವರಗುಪ್ಪದಿಂದ 4 ಸದಸ್ಯರು, ಮೂರನೇ ವಾರ್ಡ್ ಕುಣಿಜಿಯಿಂದ ಮತ್ತು ನಾಲ್ಕನೇ ವಾರ್ಡ್ ಮಂಡ್ಲಿಕೊಪ್ಪದಿಂದ ತಲಾ 2 ಸದಸ್ಯರು ಪ್ರತಿನಿಧಿಸಿರುತ್ತಾರೆ(ನೋಡಿ ಕೋಷ್ಟಕ–3.11). ಜಾತಿವಾರು ವಿವರಣೆಯನ್ನು ಪರಿಶೀಲಿಸಿದಾಗ, ಪರಿಶಿಷ್ಟ ಜಾತಿಯಿಂದ ಶೇ.7.69ರಷ್ಟು ಮಹಿಳೆಯರು, ಪರಿಶಿಷ್ಟ ಪಂಗಡದಿಂದ ಶೇ.7.69 ಮಹಿಳೆಯರು, ಹಿಂದುಳಿದ ವರ್ಗದ ಶೇ.30.77 ಸದಸ್ಯರಲ್ಲಿ, ಶೇ.50ರಷ್ಟು ಮಹಿಳಾ ಸದಸ್ಯರು ಆಯ್ಕೆಯಾಗಿರುತ್ತಾರೆ. ಸಾಮಾನ್ಯ ವರ್ಗದ ಶೇ.53.85 ಸದಸ್ಯರಲ್ಲಿ, ಶೇ.50ರಷ್ಟು ಮಹಿಳಾ ಸದಸ್ಯರು ಚುನಾಯಿತರಾಗಿದ್ದಾರೆ. ಈ ಪಂಚಾಯಿತಿಯಲ್ಲಿ ಪರಿಶಿಷ್ಟ ಪಂಗಡದ ಮಹಿಳಾ ಸ್ಥಾನಕ್ಕೆ ಯಾರೂ ಸ್ಪರ್ಧಿಸದ ಕಾರಣ ಪರಿಶಿಷ್ಟ ಜಾತಿ ಮಹಿಳೆ ಸ್ಪರ್ಧಿಸಿ ಆಯ್ಕೆಯಾಗಿರುತ್ತಾಳೆ. ಈ ಪಂಚಾಯಿತಿಯಲ್ಲಿ ಶೇ.53.85ರಷ್ಟು ಮಹಿಳಾ ಪ್ರಾತಿನಿಧ್ಯವಿದೆ. ಹೀಗೆ ಜನತೆಯಿಂದ ಚುನಾಯಿತರಾದ ಮಹಿಳೆಯರು ಆಯಾ ಜಾತಿ ಮತ್ತು ವರ್ಗಗಳಿಗೆ ಮೀಸಲು ಸ್ಥಾನಗಳಿಗೆ ಸ್ಪರ್ಧಿಸಿ ಆಯ್ಕೆಯಾದವರೇ ಹೊರತು ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿ ಚುನಾಯಿತರಾದವರಲ್ಲ. ಈ ಪಂಚಾಯಿತಿಗೆ ಜನಪ್ರತಿನಿಧಿಗಳಾಗಿ ಪ್ರಾತಿನಿಧ್ಯ ಪಡೆದ ಬಹುತೇಕ ಮಹಿಳೆಯರು ಸ್ವಇಚ್ಛೆಯಿಂದ ಸ್ಪರ್ಧಿಸದೇ ಪುರುಷರ ಮರ್ಜಿಗೆ ಒಳಪಟ್ಟು ಸ್ಪರ್ಧಿಸಿರುವುದು ಕ್ಷೇತ್ರ ಅಧ್ಯಯನದಿಂದ ಸಾಬೀತಾಗಿದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿಯು ತಾಲೂಕುಪಂಚಾಯಿತಿಯ ಒಂದು ಚುನಾವಣಾ ಕ್ಷೇತ್ರವಾಗಿದೆ ಮತ್ತು ದೊಡ್ಮನೆ ಜಿಲ್ಲಾಪಂಚಾಯಿತಿ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ.

ಕೊನೆ ಟಿಪ್ಪಣಿಗಳು

1. ಜೆ.ಕೃಷ್ಣ, *ಮಾನವಮುಖಿ ಅಭಿವೃದ್ಧಿ ಪ್ರಾದೇಶಿಕ ಆಯಾಮಗಳ ಅಧ್ಯಯನ*, ಹಂಪಿ: ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, 2000, ಪು.80.
2. ಕೆ. ಚನ್ನಪ್ಪ, *ಭಾರತದ ಸಂವಿಧಾನ ಮತ್ತು ಸರಕಾರ*, ಹೊಸಪೇಟೆ: ಶ್ರೀ ಹರ್ಷವರ್ಧನ ಪ್ರಕಾಶನ, 2003, ಪು.156.
3. ಜೆ.ಕೃಷ್ಣ, *ಪೂರ್ವೋಕ್ತ*, ಪು.81.
4. ಜೈದೇವಪ್ಪ ಜೈನಕೇರಿ, "*ಕರ್ನಾಟಕ ಏಕೀಕರಣದಲ್ಲಿ–ಕರ್ನಾಟಕ ಸಂಘಗಳ ಪಾತ್ರ*", ನಲ್ನುಡಿ, ಬೆಂಗಳೂರು: ಕರವೇ, ಸಂಪುಟ 1, ಸಂಚಿಕೆ 10, ಫೆಬ್ರುವರಿ, 2011, ಪು.67–69.
5. ಕೆ. ಚನ್ನಪ್ಪ, *ಪೂರ್ವೋಕ್ತ*, ಪು.157.

6. ಜೆ.ಕೃಷ್ಣ, *ಪೂರ್ವೋಕ್ತ*, ಪು.76–77.
7. ಯರಿಸ್ವಾಮಿ.ಎಂ, *ಗ್ರಾಮಪಂಚಾಯಿತಿ ಮತ್ತು ಸಬಲೀಕರಣ*, ಹಂಪಿ: ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, 2002, ಪು.42.
8. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ, ಬಳ್ಳಾರಿ: ಜಿಲ್ಲಾಸಾಂಖ್ಯಿಕ ಅಧಿಕಾರಿಗಳ ಕಛೇರಿ, 2009–10, ಪು.25–26.
9. ಅದೇ... ಪು. 36 & 112.
10. ಎಂ.ಚಂದ್ರ ಪೂಜಾರಿ, *ಕರ್ನಾಟಕದ ಪಂಚವಾರ್ಷಿಕ ಯೋಜನೆಗಳು*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2010, ಪು.42–43.
11. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, *ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ, ಪೂರ್ವೋಕ್ತ.*
12. ಟಿ.ಆರ್.ಚಂದ್ರಶೇಖರ, *ಧರೆ ಹತ್ತಿ ಉರಿದರೆ: ಪ್ರಚಲಿತ ಕರ್ನಾಟಕ ಕುರಿತ ಬರಹಗಳು*, ಚನ್ನಪಟ್ಟಣ: ಪಲ್ಲವ ಪ್ರಕಾಶನ, 2010, ಪು.138.
13. www. Census of India, Government of India: Directorate of Census Operations, Karnataka, 2011, date: 11/08/2011, time: 20:35.
14. www.Bellary District: A profile, date: 24/12/2011, time: 23:11.
15. ವಿಜಯ ಕರ್ನಾಟಕ, ಹುಬ್ಬಳ್ಳಿ: ಫೆಬ್ರವರಿ 15, 2008.
16. ಸಿ.ಮಹದೇವ ಮತ್ತು ಇತರರು, *ಹೊಸಪೇಟೆ ತಾಲೂಕು ದರ್ಶನ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2002, ಪು.11.
17. ಅದೇ., ಪು.6.
18. ಅದೇ., ಪು.56.
19. ಅದೇ., ಪು.60.
20. ಅದೇ., ಪು.348–351.
21. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ, ಪೂರ್ವೋಕ್ತ, ಪು. 49, 50 ಮತ್ತು 72.
22. Directorate of Census Operation's Karnatka, *Village analysis*, 2011.
23. ಸಿ.ಮಹದೇವ ಮತ್ತು ಇತರರು, *ಪೂರ್ವೋಕ್ತ*, ಪು.237.
24. ಬಸವನದುರ್ಗ ಗ್ರಾಮದ ಹಿಂದಿನ ಹೆಸರು ಗುಡಿಓಬಳಾಪುರ. ಇಂದು ಗುಡಿಓಬಳಾಪುರವೆಂದೇ ಕಂದಾಯ ಇಲಾಖೆಯ ದಾಖಲಾತಿಯಲ್ಲಿದೆ. ವಿಜಯನಗರ ಸಾಮ್ರಾಜ್ಯ ಪತನವಾದ ಮೇಲೆ ಅಥವಾ ಪ್ಲೇಗ್ ಎಂಬ ಸಾಂಕ್ರಾಮಿಕ ರೋಗಗಳಿಂದ ರಕ್ಷಣೆ ಪಡೆಯಲು ಈ ಗ್ರಾಮವನ್ನು ಬಿಟ್ಟು ಜನ ವಲಸೆ ಹೋಗಿದ್ದಾರೆ. ನಂತರ ಮೂಲ ನೆಲೆಯನ್ನು ಬಿಟ್ಟು ಬೇರೆ ಕಡೆ ಬೆಳೆದ ಗ್ರಾಮವನ್ನು ಬಸವನದುರ್ಗ ಎಂದು ಕರೆಯಲಾಗುತ್ತಿದೆ.
25. ಸಿ.ಮಹದೇವ ಮತ್ತು ಇತರರು, *ಪೂರ್ವೋಕ್ತ*, ಪು. 133.

26. ಮುಖ್ಯೋಪಾಧ್ಯಾಯರು, *2010ರ ಕುಟುಂಬ ಗಣತಿ*, ನಾಗೇನಹಳ್ಳಿ, ಬಸವನದುರ್ಗ, ಬೆನಕಾಪುರ, ಮತ್ತು ಕಾಳಘಟ್ಟ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು, ಮೇ, 2011.

27. ಯರಿಸ್ವಾಮಿ, *ಪೂರ್ವೋಕ್ತ*, ಪು.55

28. ಸಿ.ಮಹದೇವ ಮತ್ತು ಇತರರು, *ಪೂರ್ವೋಕ್ತ*, ಪು. 84.

29. ಅದೇ., ಪು.100.

30. ಅದೇ., ಪು.84.

31. ಮುಖ್ಯೋಪಾಧ್ಯಾಯರು, *2010ರ ಕುಟುಂಬ ಗಣತಿ*, ಹೊಸೂರು ಮತ್ತು ಇಪ್ಪಿತೇರಿ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು, ಮೇ, 2011.

32. ಸೈಯದ್ ಜಮೀರುಲ್ಲಾ ಷರೀಫ್, *ಕಾರವಾರ ತಾಲೂಕು ದರ್ಶನ* ಮತ್ತು ಭಟ್ಕಳ ತಾಲೂಕು ದರ್ಶನ, ಬೆಂಗಳೂರು: ಐ.ಬಿ.ಎಚ್ ಪ್ರಕಾಶನ, 1986, ಪು. 9–13 ಮತ್ತು ಪು. 7–11.

33. ಸೈಯದ್ ಜಮೀರುಲ್ಲಾ ಷರೀಫ್, ಕಾರವಾರ ತಾಲೂಕು ದರ್ಶನ, ಪು. 13.

34. ಸಂಗೀತ ಗಾಂವಕರ್, *ಹಾಲಕ್ಕಿ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿವರ್ತನೆ ನೆಲೆಗಳು*, ಹಂಪಿ: ಕನ್ನಡ ವಿಶ್ವವಿದ್ಯಾಲಯ, ಅಭಿವೃದ್ಧಿ ಅಧ್ಯಯನಕ್ಕೆ ಮಂಡಿಸಿದ ಪ್ರಬಂಧ, 2010, ಪು.56. 35. ಮತ್ತು ಸೈಯದ್ ಜಮೀರುಲ್ಲಾ ಷರೀಫ್, *ಪೂರ್ವೋಕ್ತ*, ಪು. 14–15.

36. ಎಂ.ಚಂದ್ರ ಪೂಜಾರಿ, *ಕರ್ನಾಟಕದ ಪಂಚವಾರ್ಷಿಕ ಯೋಜನೆಗಳು*, ಪು.34.

37. ಮೂಲ: *ಕರ್ನಾಟಕ ರಾಜಕೀಯ ನಕ್ಷೆ*, ಶಿವಕಾಶಿ: ಅರಳಮನಿ ಪಬ್ಲಿಕೇಷನ್, 2010.

38. www.Uttara Kannada District Profile, Date:24/11/2011. Time: 23:53.

39. ಸಂಗೀತಾ ಗಾಂವಕರ್, *ಪೂರ್ವೋಕ್ತ*, ಪು.61.

40. ಅದೇ., ಪು.61–62.

41. www.Uttara Kannada District Profile, Date:24/11/2011. Time: 23:53.

42. ಸಂಗೀತಾ ಗಾಂವಕರ್, ಪೂರ್ವೋಕ್ತ, ಪು.65.

43. ಎಂ.ಚಂದ್ರ ಪೂಜಾರಿ, *ಕರ್ನಾಟಕದ ಪಂಚವಾರ್ಷಿಕ ಯೋಜನೆಗಳು*, ಪು.84–85.

44. ಉತ್ತರ ಕನ್ನಡ ಜಿಲ್ಲೆಯ *ಅಂಕಿ ಅಂಶಗಳ ನೋಟ*, 2006–07, ಪು. 71.

45. ಸೈಯದ್ ಜಮೀರುಲ್ಲಾ ಷರೀಫ್, *ಭಟ್ಕಳ ತಾಲೂಕು ದರ್ಶನ*, ಪು.4.

46. ಟಿ.ಎಂ. ಸುಬ್ಬರಾಯ, *ಶಿರಸಿ ತಾಲೂಕು ದರ್ಶನ*, ಬೆಂಗಳೂರು: ಐ.ಬಿ.ಎಚ್ ಪ್ರಕಾಶನ, ಪು.8.

47. www.Uttara Kannada District Profile, Date:24/11/2011. Time: 23:53 ಮತ್ತು ಸಂಗೀತಾ ಗಾಂವಕರ್, *ಪೂರ್ವೋಕ್ತ*., ಪು.68.

48. ಉತ್ತರ ಕನ್ನಡ *ಜಿಲ್ಲೆಯ ಅಂಕಿ ಅಂಶಗಳ ನೋಟ*, ಪೂರ್ವೋಕ್ತ, 2006, ಪು.70.

49. ನಾಗೇಂದ್ರ ಖಾರ್ವೆ, *"ಕರ್ನಾಟಕ ದರ್ಶನ, ಉತ್ತರ ಕನ್ನಡ ಜಿಲ್ಲೆ ದರ್ಶನ"*, ಪ್ರಜಾವಾಣಿ, ದಿನಾಂಕ: 25/2/2010.

50. ಅದೇ.,

51. ಟಿ.ಕೆ.ಮಹಮೂದ್, *ಸಿದ್ದಾಪುರ ತಾಲೂಕು ದರ್ಶನ*, ಬೆಂಗಳೂರು: ಐಬಿಎಚ್ ಪ್ರಕಾಶನ, 1987, ಪು.9

52. ಅದೇ.,

53. ಅದೇ.,

54. ಅದೇ., ಪು.10.

55. ಅದೇ., ಪು.11.

56. ಅದೇ., ಪು.12.

57. ಎಂ.ಚಂದ್ರ ಪೂಜಾರಿ, *ಕರ್ನಾಟಕ ಪಂಚವಾರ್ಷಿಕ ಯೋಜನೆಗಳು*, ಪು.31–32.

58. ಮೂಲ: www.Uttara Kannada District Profile & Map, Date: 24/11/2011.Time: 23:53.

59. ಟಿ.ಕೆ. ಮಹಮೂದ್, ಪೂರ್ವೋಕ್ತ, ಪು.7.

60. ಅದೇ., ಪು.6.

61. ಚುನಾವಣಾಧಿಕಾರಿ, *ಗ್ರಾಮಪಂಚಾಯಿತಿ ಸ್ಥಾನಗಳ ಮೀಸಲಾತಿ ವಿವರ ಮತ್ತು ಚುನಾಯಿತ ಸದಸ್ಯರ ನಮೂನೆ–4*, ಸಿದ್ದಾಪುರ: ಚುನಾವಣೆ ವಿಭಾಗ, ತಹಶೀಲ್ದಾರ್ ಕಛೇರಿ, 2010.

62. ಮಹಮೂದ್, ಪೂರ್ವೋಕ್ತ, ಪು.12.

63. ಉತ್ತರ ಕನ್ನಡ ಜಿಲ್ಲಾ ಅಂಕಿ ಅಂಶಗಳ ನೋಟ, 2009–10.

64. www. panchatantra.com, Bedkani Gramapanchayat, 1-1-2012. time: 22.35pm.

65. www. Taluku Profile, Siddapur: Taluku Map, date: 23/11/2011, time: 23:53pm.

66. ಅಭಿವೃದ್ಧಿ ಅಧಿಕಾರಿಗಳು, *ಸಾಮಾನ್ಯ ಅಂಕಿ ಅಂಶಗಳ ಸಮಗ್ರ ಮಾಹಿತಿ ಪುಸ್ತಕ*, ಬೇಡ್ಕಣಿ: ಗ್ರಾಮಪಂಚಾಯಿತಿ ಕಾರ್ಯಾಲಯ, 2010–11.

67. ಮುಖ್ಯಾಧ್ಯಾಪಕರು, *2010ರ ಕುಟುಂಬ ಗಣತಿ*, ಬೇಡ್ಕಣಿ, ಭಾನ್ಕುಳಿ, ತ್ಯಾರ್ಸಿ, ಮುತ್ತಿಗೆ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಮೇ, 2011.

68. ಅಭಿವೃದ್ಧಿ ಅಧಿಕಾರಿಗಳು, ಪೂರ್ವೋಕ್ತ,

69. ಶಾಲಾ ಅಭಿವೃದ್ಧಿ ಸಮಿತಿ, *ಶತಮಾನೋತ್ಸವ ಆಚರಣೆ ಸ್ಮರಣ ಸಂಚಿಕೆ*, ಸಿದ್ದಾಪುರ: ಕೋಲಸಿರ್ಸಿ ಸ.ಹಿ.ಪ್ರಾ.ಶಾಲೆ, ನವೆಂಬರ್, 2011.

70. www.Taluku profile, Siddapur: Taluku Map, date 23/11/11, time 23:53.

71. ಅಭಿವೃದ್ಧಿ ಅಧಿಕಾರಿಗಳು, *ಸಾಮಾನ್ಯ ಅಂಕಿ ಅಂಶಗಳ ಸಮಗ್ರ ಮಾಹಿತಿ ಪುಸ್ತಕ*, ಕೋಲಸಿರ್ಸಿ: ಗ್ರಾಮಪಂಚಾಯಿತಿ ಕಾರ್ಯಾಲಯ, 2010–11

72. ಮುಖ್ಯಾಧ್ಯಾಪಕರು, *2010ರ ಕುಟುಂಬ ಗಣತಿ*, ಕೋಲಸಿರ್ಸಿ, ಚನ್ಮಾಂವು, ಹಲಗಡಿಕೊಪ್ಪ, ಕಾವಲುಕೊಪ್ಪ, ಹೆಗ್ಗೋಡಮನೆ, ಅವರಗುಪ್ಪ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೇ 2011.

73. www. panchatantra.com, Kolsirsi Gramapanchayati, date:1-1-2012. time: 22.35pm.

ಕೋಷ್ಟಕ–3.1

ರಾಜ್ಯ, ಜಿಲ್ಲೆ, ತಾಲೂಕು ಮತ್ತು ಗ್ರಾಮಪಂಚಾಯಿತಿಗಳ ಭೌಗೋಳಿಕ ಲಕ್ಷಣಗಳ ಸಾಮಾನ್ಯ ಅಂಕಿ ಅಂಶಗಳು 2011

		ರಾಜ್ಯ	ಜಿಲ್ಲೆ	ತಾಲೂಕು	ಗ್ರಾಮಪಂಚಾಯಿತಿಗಳು		ಜಿಲ್ಲೆ	ತಾಲೂಕು	ಗ್ರಾಮಪಂಚಾಯಿತಿಗಳು	
ಕ್ರ.ಸಂ.	ವಿವರಗಳು	ಕರ್ನಾಟಕ	ಬಳ್ಳಾರಿ	ಹೊಸಪೇಟೆ	ಹೊಸೂರು	ನಾಗೇನಹಳ್ಳಿ	ಉತ್ತರ ಕನ್ನಡ	ಸಿದ್ದಾಪುರ	ಬೇಡ್ಕಣಿ	ಕೋಲಸಿರ್ಸಿ
1.	ಭೌಗೋಳಿಕ ಪ್ರದೇಶ(ಹೆಕ್ಟೇರ್)	1,90,49,836	8,13,196	93,374	2,264	3,090.68	10,24,679	85,928	5,876	3,223
2.	ಅರಣ್ಯ ಪ್ರದೇಶ(ಹೆಕ್ಟೇರ್)	30,70,330	97,017	24,970	000	927.18	8,13,695	68,130	4,402	1,410
3.	ಮಳೆ ಬಿದ್ದ ಪ್ರಮಾಣ(ಮಿ.ಮೀ.)	819.0	626.0	604.1	604.1	604.1	2,835.5	2,982.5	2,982.5	2,982.5
4.	ಬಿತ್ತನೆಯಾದ ಪ್ರದೇಶ(ಹೆಕ್ಟೇರ್)	98,37,620	5,69,652	46,060	2,040.56	---	1,24,750	11,846	1,474	1,355
5.	ನೀರಾವರಿ ಪ್ರದೇಶ(ಹೆಕ್ಟೇರ್)	24,50,427	1,88,352	25,855	2,040.56	---	25,437	1,041	0000	0000

ಮೂಲ: ಬಳ್ಳಾರಿ ಜಿಲ್ಲೆಯ ಅಂಕಿ ಅಂಶಗಳ ನೋಟ, 2009–10 ಮತ್ತು ಉತ್ತರ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, 2006–07
www. District & Taluku Profile, Uttara Kannada, Siddapur: Taluku Map date: 23/11/11, time: 23:53,
www. Bellary District:A profile, Bellary & Hosapete date: 24/12/2011, time: 23:11.
www. panchatantra.com, Hosuru, Nagenahalli, Bedkani & Kolsirsi Gramapanchayats, date:1/1/2012. time: 22.35pm.

ಕೋಷ್ಟಕ–3.2

ರಾಜ್ಯ, ಜಿಲ್ಲೆ, ತಾಲೂಕು ಮತ್ತು ಗ್ರಾಮಪಂಚಾಯಿತಿಗಳ ಸಾಮಾಜಿಕ ವಿವರಗಳ ಅಂಕಿ ಅಂಶಗಳ 2011

ಕ್ರ.ಸಂ.	ವಿವರಗಳು	ರಾಜ್ಯ ಕರ್ನಾಟಕ	ಜಿಲ್ಲೆ ಬಳ್ಳಾರಿ	ತಾಲೂಕು ಹೊಸಪೇಟೆ	ಗ್ರಾಮಪಂಚಾಯಿತಿಗಳು ಹೊಸೂರು	ನಾಗೇನಹಳ್ಳಿ	ಜಿಲ್ಲೆ ಉತ್ತರ ಕನ್ನಡ	ತಾಲೂಕು ಸಿದ್ದಾಪುರ	ಗ್ರಾಮಪಂಚಾಯಿತಿಗಳು ಬೇಡ್ಕಣಿ	ಕೋಲಸಿರ್ಸಿ
1	ಜನಸಂಖ್ಯೆ	6,10,95,297	25,32,383	3,93,499	4,391	7,622	14,36,847	97,450	4,388	5,256
2	ಪುರುಷರು	3,09,65,657	12,80,402	1,97,029	2,173	3,799	7,27,424	48,405	2,171	2,566
3	ಮಹಿಳೆಯರು	3,01,29,640	12,51,981	1,96,470	2,217	3,823	7,09,423	49,045	2,217	2,690
4	ಜನಸಾಂದ್ರತೆ(ಚ.ಕಿ.ಮೀ)	319	301	421	---	---	140	115	182	182
5	ಲಿಂಗಾನುಪಾತ(1,000ಕ್ಕೆ)	973	978	997	1,020	1,006	975	1,013	1,021	1,048
6	ಜನಸಂಖ್ಯೆ ಬೆಳವಣಿಗೆ ದರ	15.60	24.92	19.83	---	---	6.15	---	---	---
7	ಸಾಕ್ಷರತೆ	4,10,29,323	14,86,230	2,40,312	2,682	5,311	10,84,277	84,176	3341	3862
		(75.40%)	(67.85%)	(75.01%)	(61.07%)	(69.67%)	(84.03%)	(86.38%)	(84.75%)	(82.72%)
8	ಪುರುಷ ಸಾಕ್ಷರತೆ	2,28,08,468	8,53,834	1,33,968	1,500	2,984	5,85,127	44,496	1805	2043
		(82.85%)	(77.24%)	(82.20%)	(69.02%)	(78.54%)	(89.72%)	(91.92%)	(92.3%)	(89.78%)
9	ಮಹಿಳಾ ಸಾಕ್ಷರತೆ	1,82,20,855	6,32,396	1,06,329	1,181	2,326	4,99,150	39,680	1536	1819
		(68.13%)	(58.28%)	(67.80%)	(53.27%)	(60.84%)	(78.21%)	(80.90%)	(77.53%)	(75.98%)

ಮೂಲ: www. Census of India, Government of India: Directorate of Census Operations, Karnataka, 2011, date: 11/08/2011, time: 20:35. ಸಾಂಖ್ಯಿಕಾಧಿಕಾರಿಗಳು, *ಸಾಮಾನ್ಯ ಅಂಕಿ ಅಂಶಗಳ ಸಮಗ್ರ ಮಾಹಿತಿ ಪುಸ್ತಕ*, ಹೊಸಪೇಟೆ ಮತ್ತು ಸಿದ್ದಾಪುರ: ತಾಲೂಕು ಕಛೇರಿ, ನಗರಸಭೆ, ಪಟ್ಟಣ ಪಂಚಾಯಿತಿಗಳು. ಮತ್ತು ಕಂದಾಯ ಇಲಾಖೆಗಳು.

ಕೋಷ್ಟಕ–3.3

ಜಿಲ್ಲೆ ಮತ್ತು ತಾಲೂಕುಗಳ ಆರ್ಥಿಕ ಅಂಕಿ ಅಂಶಗಳ ವಿವರಗಳು–2001

ಕ್ರ.ಸಂ	ವಿವರಗಳು	ಜಿಲ್ಲೆ ಬಳ್ಳಾರಿ	ತಾಲೂಕು ಹೊಸಪೇಟೆ	ಜಿಲ್ಲೆ ಉತ್ತರ ಕನ್ನಡ	ತಾಲೂಕು ಸಿದ್ದಾಪುರ
1	ದುಡಿಯುವ ವರ್ಗ	9,20,821	1,59,129	5,81,278	57,278
		(45.42%)	(42.44%)	42.94%)	(56.78%)
2	ಮಹಿಳಾ ವರ್ಗ	3,58,498	55,493	1,85,409	23,307
		(38.93%)	(29.95%)	(31.89%)	(40.69%)
3	ಪ್ರಾಥಮಿಕ ವಲಯ	6,12,640	84,055	2,27,940	20,494
		(66.53%)	(52.82%)	(39.21%)	(35.77%)
4	ಮಹಿಳಾ ವರ್ಗ	2,90,824	39,038	95,795	9,678
		(47.48%)	(46.44%)	(42.02%)	(47.22%)
5	ದ್ವಿತೀಯ ವಲಯ	25,737	4,576	13,048	644
		(2.80%)	(2.88%)	(2.24%)	(1.12%)
6	ಮಹಿಳಾ ವರ್ಗ	12,537	2,349	3,922	283
		(48.71%)	(51.33%)	(30.05%)	(43.94%)
7	ಸೇವಾ ವಲಯ	2,82,444	70,494	3,40,290	36,140
		(30.67%)	(44.30%)	(58.54%)	(63.09%)
8	ಮಹಿಳಾ ವರ್ಗ	55,137	14,106	85,692	13,346
		(19.52%)	(20.01%)	(25.28%)	(36.92%)

ಮೂಲ: ಬಳ್ಳಾರಿ ಅಂಕಿ ಅಂಶಗಳ ನೋಟ, 2008–09 ಮತ್ತು ಉತ್ತರ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, 2006–07.

ಕೋಷ್ಟಕ–3.4

ಬಳ್ಳಾರಿ ಜಿಲ್ಲೆಯ ತಾಲೂಕುವಾರು ಜಿಲ್ಲಾಪಂಚಾಯಿತಿ ಸದಸ್ಯರ ಜಾತಿವಾರು ಮತ್ತು ಲಿಂಗವಾರು ವಿವರ

ಕ್ರಸಂ.	ತಾಲೂಕುಗಳು	ಸದಸ್ಯರ	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಹಿಂದುಳಿದ ವರ್ಗ			ಸಾಮಾನ್ಯ ವರ್ಗ			ಒಟ್ಟು ಸಂಖ್ಯೆ		
		ಸಂಖ್ಯೆ	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಬಳ್ಳಾರಿ	8	1	0	1	2	0	2	2	3	5	0	0	0	5	3	8
2	ಹಡಗಲಿ	4	1	0	1	1	0	1	0	2	2	0	0	0	2	2	4
3	ಹ.ಬೊ.ಹಳ್ಳಿ	4	0	1	1	1	0	1	0	2	2	0	0	0	1	3	4
4	ಹೊಸಪೇಟೆ	4	0	1	1	0	1	1	1	1	2	0	0	0	1	3	4
5	ಕೂಡ್ಲಿಗಿ	6	0	1	1	0	2	2	2	1	3	0	0	0	2	4	6
6	ಸಂಡೂರು	5	1	0	1	1	1	2	1	1	2	0	0	0	3	2	5
7	ಶಿರುಗುಪ್ಪ	5	0	1	1	0	2	2	2	0	2	0	0	0	2	3	5
	ಒಟ್ಟು	**36**	**3**	**4**	**7**	**5**	**6**	**11**	**08**	**10**	**18**	**0**	**0**	**0**	**16**	**20**	**36**

ಮೂಲ: ಆಯುಕ್ತರು, *ಜಿಲ್ಲಾಪಂಚಾಯಿತಿ ಸದಸ್ಯರ ಚುನಾಯಿತ ಪಟ್ಟಿ–2010*, ಬಳ್ಳಾರಿ: ಜಿಲ್ಲಾಪಂಚಾಯಿತಿ ಕಾರ್ಯಾಲಯ, 2011.

ಕೋಷ್ಟಕ-3.5

ಬಳ್ಳಾರಿ ಜಿಲ್ಲೆಯ ತಾಲೂಕುವಾರು ತಾಲೂಕುಪಂಚಾಯಿತಿ ಸದಸ್ಯರ ಜಾತಿವಾರು ಮತ್ತು ಲಿಂಗವಾರು ವಿವರ

ಕ್ರ.ಸಂ.	ತಾಲೂಕುಗಳು	ಸದಸ್ಯರ ಸಂಖ್ಯೆ	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಹಿಂದುಳಿದ ವರ್ಗ			ಸಾಮಾನ್ಯ ವರ್ಗ			ಒಟ್ಟು ಸಂಖ್ಯೆ		
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಬಳ್ಳಾರಿ	31	2	4	6	4	5	9	6	5	11	3	2	5	15	16	31
2	ಹಡಗಲಿ	15	2	2	4	3	1	4	1	2	3	2	2	4	08	07	15
3	ಹ.ಬೊ.ಹಳ್ಳಿ	16	0	3	3	1	2	3	1	3	4	4	2	6	06	10	16
4	ಹೊಸಪೇಟೆ	16	2	3	5	1	2	3	0	1	1	4	3	7	07	09	16
5	ಕೂಡ್ಲಿಗಿ	23	2	3	5	3	4	7	0	0	0	5	6	11	10	13	23
6	ಸಂಡೂರು	17	1	3	4	2	4	6	0	0	0	4	3	7	07	10	17
7	ಶಿರುಗುಪ್ಪ	17	1	2	3	2	2	4	2	4	6	2	2	4	07	10	17
	ಒಟ್ಟು	**135**	**10**	**20**	**30**	**16**	**20**	**36**	**10**	**15**	**25**	**24**	**20**	**44**	**60**	**75**	**135**

ಮೂಲ: ಕಾರ್ಯನಿರ್ವಾಹಕ ಅಧಿಕಾರಿಗಳು, *ತಾಲೂಕುಪಂಚಾಯಿತಿ ಚುನಾಯಿತ ಸದಸ್ಯರ ಪಟ್ಟಿ-2010*, ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಸಂಡೂರು ಮತ್ತು ಶಿರುಗುಪ್ಪ: ತಾಲೂಕುಪಂಚಾಯಿತಿ ಕಾರ್ಯಾಲಯಗಳು, 2011.

ಕೋಷ್ಟಕ–3.6

ಬಳ್ಳಾರಿ ಜಿಲ್ಲೆಯ ತಾಲೂಕುವಾರು ಗ್ರಾಮಪಂಚಾಯಿತಿ ಸದಸ್ಯರ ಜಾತಿವಾರು ಮತ್ತು ಲಿಂಗವಾರು ವಿವರ

ಕ್ರ.ಸಂ.	ತಾಲೂಕುಗಳು	ಸದಸ್ಯರ	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಹಿಂದುಳಿದ ವರ್ಗ			ಸಾಮಾನ್ಯ ವರ್ಗ			ಒಟ್ಟು ಸಂಖ್ಯೆ		
		ಸಂಖ್ಯೆ	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಬಳ್ಳಾರಿ	40	87	59	146	112	79	191	164	98	262	113	74	187	476	310	786
2	ಹಡಗಲಿ	24	53	40	093	12	23	035	78	49	127	69	49	118	212	161	373
3	ಹ.ಬೊ.ಹಳ್ಳಿ	22	45	34	079	29	27	056	82	52	134	89	52	141	245	165	410
4	ಹೊಸಪೇಟೆ	23	63	42	105	48	33	081	79	48	127	52	30	082	242	153	395
5	ಕೂಡ್ಲಿಗಿ	33	68	49	117	100	70	170	120	65	185	67	45	112	355	229	584
6	ಸಂಡೂರು	21	42	31	073	75	48	123	87	52	139	50	36	086	254	167	421
7	ಶಿರುಗುಪ್ಪ	26	55	31	086	52	32	084	92	51	143	80	40	120	279	154	433
	ಒಟ್ಟು	**189**	**413**	**286**	**699**	**428**	**312**	**740**	**702**	**415**	**1117**	**520**	**326**	**846**	**2063**	**1339**	**3402**

ಮೂಲ: www.panchatantra.com, date: 15/11/2011, time: 23:11.

ಸಾಂಖ್ಯಿಕಾಧಿಕಾರಿಗಳು, ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ, ಬಳ್ಳಾರಿ: ಜಿಲ್ಲಾಸಾಂಖ್ಯಿಕ ಅಧಿಕಾರಿಗಳ ಕಛೇರಿ, 2009–10, ಪು.98.

ಕೋಷ್ಟಕ–3.7

ಉತ್ತರ ಕನ್ನಡ ಜಿಲ್ಲೆಯ ತಾಲೂಕುವಾರು ಜಿಲ್ಲಾಪಂಚಾಯಿತಿ ಸದಸ್ಯರ ಜಾತಿವಾರು ಮತ್ತು ಲಿಂಗವಾರು ವಿವರ

ಕ್ರ.ಸಂ.	ತಾಲೂಕುಗಳು	ಸದಸ್ಯರ	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಹಿಂದುಳಿದ ವರ್ಗ			ಸಾಮಾನ್ಯ ವರ್ಗ			ಒಟ್ಟು ಸಂಖ್ಯೆ		
		ಸಂಖ್ಯೆ	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಅಂಕೋಲ	3	0	0	0	0	0	0	1	0	1	1	1	2	2	1	3
2	ಭಟ್ಕಳ	4	0	1	1	0	1	1	1	0	1	1	0	1	2	2	4
3	ಹಳಿಯಾಳ	3	0	0	0	0	0	0	0	0	0	2	1	3	2	1	3
4	ಹೊನ್ನವರ	5	0	0	0	0	0	0	1	1	2	2	1	3	3	2	5
5	ಜೋಯಿಡಾ	2	0	0	0	0	0	0	0	1	1	0	1	1	0	2	2
6	ಕಾರವಾರ	3	0	0	0	0	0	0	1	1	2	0	1	1	1	2	3
7	ಕುಮುಟಾ	4	0	0	0	0	0	0	0	1	1	1	2	3	1	3	4
8	ಮುಂಡಗೋಡ	3	0	1	1	0	0	0	1	0	1	0	1	1	1	2	3
9	ಸಿದ್ದಾಪುರ	3	0	0	0	0	0	0	0	1	1	1	1	2	1	2	3
10	ಶಿರಿಸಿ	4	1	0	1	0	0	0	0	1	1	1	1	2	2	2	4
11	ಯಲ್ಲಾಪುರ	2	0	0	0	0	0	0	1	0	1	1	0	1	2	0	2
	ಒಟ್ಟು	**36**	**1**	**2**	**3**	**0**	**1**	**1**	**6**	**6**	**12**	**10**	**10**	**20**	**17**	**19**	**36**

ಮೂಲ: ಕಾರ್ಯನಿರ್ವಾಹಕ ಅಧಿಕಾರಿಗಳು, *ತಾಲೂಕುಪಂಚಾಯಿತಿ ಚುನಾಯಿತ ಸದಸ್ಯರ ಪಟ್ಟಿ–2010,* ತಾಲೂಕುಪಂಚಾಯಿತಿ ಅಂಕೋಲ, ಭಟ್ಕಳ, ಹಳಿಯಾಳ, ಹೊನ್ನಾವರ, ಜೋಯಿಡಾ, ಕಾರವಾರ, ಕುಮುಟಾ, ಮುಂಡಗೋಡ, ಸಿದ್ದಾಪುರ, ಶಿರಿಸಿ ಮತ್ತು ಯಲ್ಲಾಪುರು: ತಾಲೂಕುಪಂಚಾಯಿತಿ ಕಾರ್ಯಾಲಯ, 2011.

ಕೋಷ್ಟಕ–3.8

ಉತ್ತರ ಕನ್ನಡ ಜಿಲ್ಲೆಯ ತಾಲೂಕುವಾರು ತಾಲೂಕುಪಂಚಾಯಿತಿ ಸದಸ್ಯರ ಜಾತಿವಾರು ಮತ್ತು ಲಿಂಗವಾರು ವಿವರ

ಕ್ರ.ಸಂ.	ತಾಲೂಕುಗಳು	ಸದಸ್ಯರ	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಹಿಂದುಳಿದ ವರ್ಗ			ಸಾಮಾನ್ಯ ವರ್ಗ			ಒಟ್ಟು ಸಂಖ್ಯೆ		
		ಸಂಖ್ಯೆ	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಅಂಕೋಲ	11	0	1	1	0	1	1	1	2	3	3	3	6	4	7	11
2	ಭಟ್ಕಳ	12	0	1	1	0	1	1	2	2	4	3	3	6	5	7	12
3	ಹಳಿಯಾಳ	11	0	1	1	0	1	1	1	2	3	3	3	6	4	7	11
4	ಹೊನ್ನಾವರ	15	0	1	1	0	1	1	2	3	5	4	4	8	6	9	15
5	ಜೋಯಿಡಾ	11	0	1	1	0	1	1	1	2	3	3	3	6	4	7	11
6	ಕಾರವಾರ	11	0	1	1	0	1	1	1	2	3	3	3	6	4	7	11
7	ಕುಮುಟಾ	12	0	1	1	0	1	1	2	2	4	3	3	6	5	7	12
8	ಮುಂಡಗೋಡ	11	1	1	2	0	1	1	1	1	2	3	3	6	5	6	11
9	ಸಿದ್ದಾಪುರ	11	0	1	1	0	1	1	1	2	3	3	3	6	4	7	11
10	ಶಿರಿಸಿ	12	0	1	1	0	1	1	2	2	4	3	3	6	5	7	12
11	ಯಲ್ಲಾಪುರ	11	0	1	1	0	1	1	1	2	3	3	3	6	4	7	11
	ಒಟ್ಟು	**128**	**1**	**11**	**12**	**0**	**11**	**11**	**15**	**22**	**37**	**34**	**34**	**68**	**50**	**78**	**128**

ಮೂಲ: ಕಾರ್ಯನಿರ್ವಾಹಕ ಅಧಿಕಾರಿಗಳು, *ತಾಲೂಕುಪಂಚಾಯಿತಿ ಚುನಾಯಿತ ಸದಸ್ಯರ ಪಟ್ಟಿ–2010,* ಅಂಕೋಲ, ಭಟ್ಕಳ, ಹಳಿಯಾಳ, ಹೊನ್ನಾವರ, ಜೋಯಿಡಾ, ಕಾರವಾರ, ಕುಮುಟಾ, ಮುಂಡಗೋಡ, ಸಿದ್ದಾಪುರ, ಶಿರಿಸಿ ಮತ್ತು ಯಲ್ಲಾಪುರು: ತಾಲೂಕುಪಂಚಾಯಿತಿ ಕಾರ್ಯಾಲಯ, 2011.

ಕೋಷ್ಟಕ–3.9

ಉತ್ತರ ಕನ್ನಡ ಜಿಲ್ಲೆಯ ತಾಲೂಕುವಾರು ಗ್ರಾಮಪಂಚಾಯಿತಿ ಸದಸ್ಯರ ಜಾತಿವಾರು ಮತ್ತು ಲಿಂಗವಾರು ವಿವರ

ಕ್ರ.ಸಂ.	ತಾಲೂಕುಗಳು	ಗ್ರಾ.ಪಂ.ಗಳ	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಹಿಂದುಳಿದ ವರ್ಗ			ಸಾಮಾನ್ಯ ವರ್ಗ			ಒಟ್ಟು ಸಂಖ್ಯೆ		
		ಸಂಖ್ಯೆ	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಅಂಕೋಲ	19	3	19	22	0	19	19	45	31	76	69	42	111	117	111	228
2	ಭಟ್ಕಳ	16	17	20	37	8	17	25	61	39	100	89	50	139	175	126	301
3	ಹಳಿಯಾಳ	20	1	20	21	0	20	20	43	31	74	66	41	107	110	112	222
4	ಹೊನ್ನಾವರ	24	6	24	30	0	24	24	73	49	122	121	74	195	200	171	371
5	ಜೋಯಿಡಾ	15	2	15	17	0	15	15	26	18	44	29	24	53	57	72	129
6	ಕಾರವಾರ	18	0	17	17	0	17	17	44	29	73	69	42	111	113	105	218
7	ಕುಮುಟಾ	20	4	21	25	0	21	21	61	40	101	98	60	158	163	142	305
8	ಮುಂಡಗೋಡ	13	16	13	29	2	13	15	33	23	56	43	26	69	94	75	169
9	ಸಿದ್ದಾಪುರ	21	0	21	21	0	21	21	45	32	77	62	46	108	107	120	227
10	ಶಿರಿಸಿ	27	9	28	37	0	27	27	63	40	103	85	54	139	157	149	306
11	ಯಲ್ಲಾಪುರ	14	0	14	14	0	14	14	28	21	49	42	27	69	070	076	146
	ಒಟ್ಟು	**207**	**58**	**212**	**270**	**10**	**208**	**218**	**522**	**353**	**875**	**773**	**486**	**1259**	**1363**	**1259**	**2622**

ಮೂಲ: ಕಾರ್ಯನಿರ್ವಾಹಕ ಅಧಿಕಾರಿಗಳು, *ತಾಲೂಕುಪಂಚಾಯಿತಿ ಚುನಾಯಿತ ಸದಸ್ಯರ ಪಟ್ಟಿ–2010*, ಅಂಕೋಲ, ಭಟ್ಕಳ, ಹಳಿಯಾಳ, ಹೊನ್ನಾವರ, ಜೋಯಿಡಾ, ಕಾರವಾರ, ಕುಮುಟಾ, ಮುಂಡಗೋಡ, ಸಿದ್ದಾಪುರ, ಶಿರಿಸಿ ಮತ್ತು ಯಲ್ಲಾಪುರ: ತಾಲೂಕುಪಂಚಾಯಿತಿ ಕಾರ್ಯಾಲಯ, 2011.

ಕೋಷ್ಟಕ–3.10

2010ರ ಅವಧಿಗೆ ಚುನಾಯಿತರಾದ ಹೊಸಪೇಟೆ ತಾಲೂಕಿನ 23 ಗ್ರಾಮಪಂಚಾಯಿತಿಗಳ ಸದಸ್ಯರ ಜಾತಿವಾರು ಮತ್ತು ಲಿಂಗವಾರು ವಿವರ

ಕ್ರ.ಸಂ.	ಲಿಂಗ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ	ಸಾಮಾನ್ಯ ವರ್ಗ	ಒಟ್ಟು ಸಂಖ್ಯೆ
1	ಗಂಡು	63	48	79	52	242
2	ಹೆಣ್ಣು	42	33	48	30	153
	ಒಟ್ಟು	**105**	**081**	**127**	**82**	**395**

2010ರ ಸಾಲಿನಲ್ಲಿ ಚುನಾಯಿತರಾದ ಸಿದ್ದಾಪುರ ತಾಲೂಕಿನ 21 ಗ್ರಾಮಪಂಚಾಯಿತಿಗಳ ಸದಸ್ಯರ ಜಾತಿವಾರು ಮತ್ತು ಲಿಂಗವಾರು ವಿವರ

ಕ್ರ.ಸಂ.	ಲಿಂಗ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ	ಸಾಮಾನ್ಯ ವರ್ಗ	ಒಟ್ಟು ಸಂಖ್ಯೆ
1	ಗಂಡು	0	0	45	62	107
2	ಹೆಣ್ಣು	21	21	32	46	120
	ಒಟ್ಟು	**21**	**21**	**77**	**108**	**227**

ಮೂಲ: ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮಪಂಚಾಯಿತಿ ಚುನಾಯಿತ ಸದಸ್ಯರ ಪಟ್ಟಿ–2010, ಹೊಸಪೇಟೆ ಮತ್ತು ಸಿದ್ದಾಪುರ: ತಾಲೂಕುಪಂಚಾಯಿತಿ ಕಾರ್ಯಾಲಯಗಳು, 2010, www. panchatantra.com, Hosuru, Nagenahalli, Bedkani & Kolsirsi Gramapanchayats, date:1/1/2012. time: 22.35pm.

ಕೋಷ್ಟಕ–3.11

ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಹಾಗೂ ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಿಗೆ 2010ರಅವಧಿಗೆ ವಾರ್ಡ್‌ವಾರು, ಜಾತಿವಾರು ಮತ್ತು ಲಿಂಗವಾರು ಹಂಚಿಕೆಯಾದ ಸ್ಥಾನಗಳ ವಿವರ

ಕ್ರ. ಸಂ.	ಗ್ರಾಮಪಂಚಾಯಿತಿ	ವಾರ್ಡ್/ಗ್ರಾಮಗಳ ವಿವರ	ಹಂಚಿಕೆ ಸ್ಥಾನಗಳು	ಪರಿಶಿಷ್ಟ ಜಾತಿ ಸಾಮಾನ್ಯ	ಪರಿಶಿಷ್ಟ ಜಾತಿ ಮಹಿಳೆ	ಪರಿಶಿಷ್ಟ ಪಂಗಡ ಸಾಮಾನ್ಯ	ಪರಿಶಿಷ್ಟ ಪಂಗಡ ಮಹಿಳೆ	ಹಿಂದುಳಿದ ವರ್ಗ ಸಾಮಾನ್ಯ	ಹಿಂದುಳಿದ ವರ್ಗ ಮಹಿಳೆ	ಸಾಮಾನ್ಯ ವರ್ಗ ಸಾಮಾನ್ಯ	ಸಾಮಾನ್ಯ ವರ್ಗ ಮಹಿಳೆ	ಒಟ್ಟು ಸಂಖ್ಯೆ ಸಾಮಾನ್ಯ	ಒಟ್ಟು ಸಂಖ್ಯೆ ಮಹಿಳೆ	ಒಟ್ಟು
	ಹೊಸೂರು													
1		ಹೊಸೂರು	4	0	0	2	2	0	0	0	0	2	2	4
2		ಇಪ್ಪಿತೇರಿ	3	0	0	2	0	0	1	0	0	2	1	3
3		ಎರೇಬೈಲು & ಹಾನಗಲ್	3	0	1	1	1	0	0	0	0	1	2	3
		ಒಟ್ಟು	**10**	**0**	**1**	**5**	**3**	**0**	**1**	**0**	**0**	**5**	**5**	**10**
	ನಾಗೇನಹಳ್ಳಿ													
1		ನಾಗೇನಹಳ್ಳಿ–1	4	0	1	1	0	1	1	0	0	2	2	4
2		ನಾಗೇನಹಳ್ಳಿ–2	6	0	1	1	0	1	1	1	1	3	3	6
3		ಬಸವನದುರ್ಗ	4	1	0	0	1	1	0	0	1	3	1	4
4		ಬೆಳಗೋಡು	1	1	0	0	0	0	0	0	0	1	0	1
		ಒಟ್ಟು	**15**	**2**	**2**	**2**	**1**	**3**	**2**	**1**	**2**	**9**	**6**	**15**

ಕ್ರ. ಸಂ.	ಗ್ರಾಮಪಂಚಾಯಿತಿ ವಿವರ	ವಾರ್ಡ್/ಗ್ರಾಮಗಳ ವಿವರ	ಹಂಚಿಕೆ ಸ್ಥಾನಗಳು	ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಹಿಂದುಳಿದ ವರ್ಗ		ಸಾಮಾನ್ಯ ವರ್ಗ		ಒಟ್ಟು ಸಂಖ್ಯೆ		
				ಸಾಮಾನ್ಯ	ಮಹಿಳೆ	ಸಾಮಾನ್ಯ	ಮಹಿಳೆ	ಸಾಮಾನ್ಯ	ಮಹಿಳೆ	ಸಾಮಾನ್ಯ	ಮಹಿಳೆ	ಸಾಮಾನ್ಯ	ಮಹಿಳೆ	ಒಟ್ಟು
	ಬೇಡ್ಕಣಿ													
1		ಬೇಡ್ಕಣಿ	5	0	0	0	1	1	0	1	2	2	3	5
2		ತ್ಯಾರ್ಸಿ	4	0	1	0	0	0	2	1	0	1	3	4
3		ಭಾನ್ಕುಳಿ	1	0	0	0	0	0	0	1	0	1	0	1
4		ಮುತ್ತಿಗೆ	1	0	0	0	0	1	0	0	0	1	0	1
		ಒಟ್ಟು	**11**	**0**	**1**	**0**	**1**	**2**	**2**	**3**	**2**	**5**	**6**	**11**
	ಕೋಲಸಿರ್ಸಿ													
1		ಕೋಲಸಿರ್ಸಿ	5	0	0	0	0	1	1	1	2	2	3	5
2		ಅವರಗುಪ್ಪ	4	0	1	0	0	0	1	2	0	2	2	4
3		ಕುಣಿಜಿ	2	0	0	0	0	0	0	1	1	1	1	2
4		ಮಂಡ್ಲಿಕೊಪ್ಪ	2	0	0	0	1	1	0	0	0	1	1	2
		ಒಟ್ಟು	**13**	**0**	**1**	**0**	**1**	**2**	**2**	**4**	**3**	**6**	**7**	**13**

ಮೂಲ: ಚುನಾವಣಾಧಿಕಾರಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ಗ್ರಾಮಪಂಚಾಯಿತಿ ಚುನಾವಣೆಯ ವಿವರ ಪತ್ರಿಕೆ, ಪ್ರಪತ್ರ–36, ಹೊಸಪೇಟೆ ಮತ್ತು ಸಿದ್ದಾಪುರ: ಚುನಾವಣಾ ವಿಭಾಗ, ತಹಶೀಲ್ದಾರ ಕಛೇರಿ, ಮೇ 17, 2010.

ಅಧ್ಯಾಯ ನಾಲ್ಕು

ಮತದಾನ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ

ಪ್ರಸ್ತಾವನೆ

ಗ್ರಾಮಪಂಚಾಯಿತಿ ಮಟ್ಟದಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಮಾಪನ ಮಾಡುವುದು ಈ ಮಹಾಪ್ರಬಂಧ ಉದ್ದೇಶವಾಗಿದೆ. ಅಂದರೆ ಗ್ರಾಮಪಂಚಾಯಿತಿಯ ಚುನಾವಣೆಯಲ್ಲಿ ಮಹಿಳೆ ಭಾಗವಹಿಸುವ ಮತ್ತು ಮತದಾನದ ನಿರ್ಧಾರ ಕೈಗೊಳ್ಳುವ ಮಟ್ಟವನ್ನು ಕೂಲಂಕಷವಾಗಿ ಪರೀಕ್ಷಿಸುವ ಉದ್ದೇಶವಾಗಿದೆ. ಈ ಪ್ರಬಂಧದಲ್ಲಿ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮಹಿಳಾ ಸಂಖ್ಯೆಯನ್ನು ಮಹಿಳಾ ಪ್ರಾತಿನಿಧ್ಯವೆಂದು ಹಾಗೂ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ ಸ್ವನಿರ್ಧಾರದಂತೆ ಮತ ಚಲಾಯಿಸುವ ಮಹಿಳಾ ಪ್ರಮಾಣವನ್ನು ಮಹಿಳಾ ಸಬಲೀಕರಣವೆಂದು ಪರಿಭಾವಿಸಿಕೊಂಡು ತನ್ಮೂಲಕ ಮಹಿಳಾ ಪ್ರಾತಿನಿಧ್ಯವನ್ನು ಹಾಗೂ ಮಹಿಳಾ ಸಬಲೀಕರಣವನ್ನು ಅಳೆಯುವ ಪ್ರಯತ್ನ ಮಾಡಲಾಗಿದೆ. ಗ್ರಾಮಪಂಚಾಯಿತಿ ರಚನೆ, ಬೆಳವಣಿಗೆ ಮತ್ತು ಗ್ರಾಮಪಂಚಾಯತಿಯಲ್ಲಿ ಪ್ರಾತಿನಿಧ್ಯದ ಬೆಳವಣಿಗೆಯ ಹಿನ್ನೆಲೆಯನ್ನು ಒಂದನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಗತ್ಯವಿದ್ದಲ್ಲಿ ಈ ಬಗ್ಗೆ ಸಂಕ್ಷಿಪ್ತವಾಗಿ ಪುನರುಚ್ಚರಿಸಿ, ಮುಂದುವರೆಸಲಾಗಿದೆ. ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ತಳಮಟ್ಟದ ಪ್ರಜಾಪ್ರಭುತ್ವವಾದ ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರ ಪ್ರಾತಿನಿಧ್ಯಕ್ಕೆ ಚುನಾವಣೆಯೇ ಪ್ರಮುಖ ಸಾಧನವಾಗಿದೆ.[1] ಚುನಾವಣೆಯಲ್ಲಿ ಮಹಿಳೆಯರು ಮತದಾನ, ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಮಟ್ಟ ಮತ್ತು ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಅಥವಾ ಪ್ರಾತಿನಿಧ್ಯ ಯಾವ ಪ್ರಮಾಣದಲ್ಲಿದೆ ಎಂಬುದನ್ನು ಅಂಕಿ ಅಂಶಗಳ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

ಪ್ರಜಾಪ್ರಭುತ್ವವೆಂಬ ಯಂತ್ರದ ಚಾಲನೆಗೆ ಚುನಾವಣೆಯೇ ಇಂಧನವಾಗಿದೆ. ಭಾರತದ ಪ್ರಜಾಪ್ರಭುತ್ವದ ಯಶಸ್ಸಿಗೆ ಚುನಾವಣೆ ಒಂದು ಪ್ರಮುಖ ಘಟ್ಟವಾಗಿದೆ. ಚುನಾವಣೆಯು ಜನರಿಗೆ ಮತದಾನದ ಮೂಲಕ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಿದೆ. ಮತದಾನ ಜನಸಾಮಾನ್ಯರ ರಾಜಕೀಯ ಪ್ರಾತಿನಿಧ್ಯವಾಗಿದೆ. ಇದು ಜನರ ಮತ್ತು ಜನಪ್ರತಿನಿಧಿಗಳ ನಡುವೆ ಪರಸ್ಪರ ಸಂಬಂಧ ಮತ್ತು ಜವಾಬ್ದಾರಿಯನ್ನು ಏರ್ಪಡಿಸುತ್ತದೆ. ಇಂತಹ ಸಂಬಂಧ ಮತ್ತು ಜವಾಬ್ದಾರಿಯ ಕೊಂಡಿಯಾಗಿರುವ ಮತದಾನ ವಿಶೇಷವಾಗಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಹೇಗೆ ಬಿಂಬಿಸುತ್ತದೆ ಎಂಬುವುದನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ.

ಗ್ರಾಮಪಂಚಾಯಿತಿಯಲ್ಲಿ ಜನಸಾಮಾನ್ಯರ ಭಾಗವಹಿಸುವಿಕೆ ಇಲ್ಲದಿರುವುದನ್ನು ಅರಿತ ಸರ್ಕಾರಗಳು 90ರ ದಶಕದೀಚೆಗೆ ಜನತಂತ್ರ ವಿಕೇಂದ್ರೀಕರಣಕ್ಕೆ ಹೆಚ್ಚು ಮಹತ್ವ ನೀಡಿರುತ್ತವೆ. ಗ್ರಾಮಪಂಚಾಯಿತಿಯಲ್ಲಿ ಜನಸಾಮಾನ್ಯರ ಮತ್ತು ಮಹಿಳೆಯರ ಪ್ರಾತಿನಿಧ್ಯವನ್ನು ಮೀಸಲಾತಿ ಮೂಲಕ ಹೆಚ್ಚಿಸುವುದಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಆದ್ದರಿಂದ ಇಂದು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳಾ ಮೀಸಲಾತಿ ಪ್ರಮಾಣವನ್ನು ಶೇ.33ರಿಂದ ಶೇ.50ಕ್ಕೆ ಏರಿಸಲಾಗಿದೆ. ಈ ಮೀಸಲಾತಿ ನಿಯಮವು ಮಹಿಳೆಯರನ್ನು ಮತದಾನ ಪ್ರಕ್ರಿಯೆಯಲ್ಲಿ ಸಕ್ರಿಯಾವಾಗಿ ಭಾಗವಹಿಸುವಂತೆ ಹೆಚ್ಚು ಪ್ರಭಾವಿಸಿದೆ. ಆದ್ದರಿಂದ ಇಂದು ಗ್ರಾಮಪಂಚಾಯಿತಿಯ ಮತದಾನದ ಪ್ರಕ್ರಿಯಲ್ಲಿ ಭಾಗವಹಿಸುವ ಮಹಿಳೆಯರ ಸಂಖ್ಯೆ ಉತ್ತಮವಾಗಿದೆ. ಆದರೆ ಮಹಿಳೆಯರು ಮತದಾನದ ಪ್ರಕ್ರಿಯೆಯಲ್ಲಿ ಪುರುಷರ ನಿಯಂತ್ರಣಕ್ಕೆ ಒಳಪಡದೇ ಸ್ವತಂತ್ರವಾಗಿ, ಸ್ವನಿರ್ಧಾರದಂತೆ ಭಾಗವಹಿಸಿ ಮತ ನೀಡುವ ಅಗತ್ಯ ಮತ್ತು ಅನಿವಾರ್ಯತೆ ಇದೆ. ಇದನ್ನೇ ಮಹಿಳಾ ಸಬಲೀಕರಣವೆಂದು ಪರಿಭಾವಿಸಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಚುನಾವಣೆಯಲ್ಲಿ ಭಾಗವಹಿಸಿದ ಮಹಿಳೆಯರು ಸ್ವನಿರ್ಧಾರದಂತೆ ಮತ ನೀಡುತ್ತಾರೊ ಅಥವಾ ಪುರಷರ ನಿರ್ಧಾರದಂತೆ ಮತ ನೀಡುತ್ತಾರೊ ಎಂಬುದನ್ನು ಈ ಅಧ್ಯಾಯದಲ್ಲಿ ಪರೀಕ್ಷಿಸಿದೆ.

ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಯಲುಸೀಮೆಯ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಹಾಗೂ ಮಲೆನಾಡಿನ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಪಂಚಾಯಿತಿಗಳಲ್ಲಿ ಮತದಾನ ಪ್ರಕ್ರಿಯೆಯಲ್ಲಿ ಮಹಿಳಾ ಪ್ರಾತಿನಿಧ್ಯ ಹೇಗಿದೆ ಎಂಬುದನ್ನು ತೌಲನಿಕವಾಗಿ ಚರ್ಚಿಸಲಾಗಿದೆ. ಮತದಾನ ಪ್ರಕ್ರಿಯೆಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಮಾಪನ ಮಾಡಲು ಈ ಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಿಗೆ ಚುನಾಯಿತರಾದ ಜನಪ್ರತಿಗಳು ಮತ್ತು ಚುನಾವಣೆಗೆ ಸ್ಪರ್ಧಿಸಿದ್ದ, ಉಮೇದುವಾರಿಕೆ ವಾಪಾಸು ಪಡೆದ ಅಭ್ಯರ್ಥಿಗಳನ್ನು ಹಾಗೂ ಅಗತ್ಯವಿದ್ದಲ್ಲಿ ಹಿಂದಿನ ಅವಧಿಗಳಲ್ಲಿ ಚುನಾಯಿತ ಮತ್ತು ಸ್ಪರ್ಧಿಸಿದ್ದ ರಾಜಕೀಯ ಹಾಗೂ ಅಂಗನವಾಡಿ/ಆಶಾ ಕಾರ್ಯಕರ್ತರನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಮಾಹಿತಿ ನೀಡಿದ ಗ್ರಾಮಪಂಚಾಯಿತಿಗಳ ಮಹಿಳಾ ಮತ್ತು ಪುರುಷರ ಅಭ್ಯರ್ಥಿಗಳ ಅಭಿಪ್ರಾಯವನ್ನು ಪರಸ್ಪರ ಹೋಲಿಕೆಮಾಡಿ ಮತದಾನ ಪ್ರಕ್ರಿಯೆಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಮತ್ತು ಮಹಿಳಾ ಸಬಲೀಕರಣವನ್ನು ತೌಲನಿಕವಾಗಿ ವಿಶ್ಲೇಷಣೆ ಮಾಡಲಾಗಿದೆ. ಸಾಮಾಜೋ–ಆರ್ಥಿಕ ಅಂಶಗಳಾದ ಲಿಂಗ, ವಯಸ್ಸು, ಜಾತಿ, ಶಿಕ್ಷಣ ಮತ್ತು ಆದಾಯಗಳ ಆಧಾರದ ಮೇಲೆ ಈ ಪಂಚಾಯಿತಿಗಳಲ್ಲಿ ಮಾಹಿತಿ ನೀಡಿದ ಅಭ್ಯರ್ಥಿಗಳ/ಮಾಹಿತಿದಾರರ ಅಭಿಪ್ರಾಯಗಳನ್ನು ವರ್ಗೀಕರಿಸಿಕೊಂಡು ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಗುರುತಿಸಲಾಗಿದೆ. ಆದ್ದರಿಂದ ಈ ಮಹಾಪ್ರಬಂಧದಲ್ಲಿ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮಹಿಳೆಯರ ಸಂಖ್ಯೆಯಷ್ಟೇ ಪ್ರಾಮುಖ್ಯತೆಯನ್ನು ಅವರು ಸ್ವತಂತ್ರವಾಗಿ ಸ್ವನಿರ್ಧಾರಕ್ಕೆ ಬದ್ಧವಾಗಿ ಭಾಗವಹಿಸಿ, ಮತ ನೀಡುವುದಕ್ಕೂ ನೀಡಲಾಗಿದೆ.

4.1 ರಾಜಕೀಯ ಪ್ರಾತಿನಿಧ್ಯ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ

ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರದ ಭಾರತದಲ್ಲಿದ್ದ ಪ್ರಾತಿನಿಧ್ಯದ ಪರಿಕಲ್ಪನೆ ಮತ್ತು ವ್ಯಾಖ್ಯಾಯನ ಇಂದು ಬದಲಾಗಿದೆ ಎಂದು ಹೇಳಬಹುದು. ಸ್ವತಂತ್ರ ಭಾರತವು ಒಕ್ಕೂಟ ಮತ್ತು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಗೆ ಹೆಚ್ಚು ಇಂಬು ನೀಡಿದೆ. ಜನತಾ ಪರಮಾಧಿಕಾರ ಮತ್ತು ಜನತಂತ್ರ ವಿಕೇಂದ್ರೀಕರಣಕ್ಕೆ ಅವಕಾಶ ನೀಡಿದ ಭಾರತದಲ್ಲಿ ಜನರು ಸಾರ್ವತ್ರಿಕ ವಯಸ್ಕ ಮತದಾನ ಮತ್ತು ಜನಪ್ರತಿನಿಧಿ ಕಾಯ್ದೆ ಮೂಲಕ ರಾಜಕೀಯ ಹಕ್ಕು ಮತ್ತು ಅಧಿಕಾರಗಳನ್ನು ಪಡೆದಿರುವರು. ಜನರು ಮತದಾನವೆಂಬ ಪರಮಾಧಿಕಾರವನ್ನು ಚಲಾಯಿಸಲು ಚುನಾವಣೆಯೇ ಮುಖ್ಯ ಸಾಧನವಾಗಿದೆ. ಒಬ್ಬ ಪ್ರಜೆ ಮತ ಚಲಾಯಿಸುವುದರ ಮೂಲಕ ತನ್ನ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವ ಮತ್ತು ಒಬ್ಬ ಪ್ರಜೆ ಮತದಾರರಿಂದ ಆಯ್ಕೆಗೊಂಡು ಸಮುದಾಯದ ಪರವಾಗಿ ಪ್ರತಿನಿಧಿಸಿ, ನೀತಿ–ನಿರ್ಣಯಗಳನ್ನು ರೂಪಿಸುವ ಪ್ರಕ್ರಿಯೆ(ಶಾಸನ ಸಭೆ)ಗಳಲ್ಲಿ ಭಾಗವಹಿಸಲು ಚುನಾವಣೆ ಮುಖ್ಯ ವೇದಿಕೆಯಾಗಿದೆ. ಅಂದರೆ, ಭಾರತದ ಪ್ರತಿಯೊಬ್ಬ ಪ್ರಜೆಯು ಚುನಾವಣೆಯಲ್ಲಿ ಭಾಗವಹಿಸಿ ಮತ ನೀಡುವ, ಉಮೇದುದಾರನಾಗಿ ಸ್ಪರ್ಧಿಸುವ ಮತ್ತು ಜನಪ್ರತಿನಿಧಿಯಾಗಿ ಆಯ್ಕೆಗೊಂಡು ಶಾಸನಸಭೆಯಲ್ಲಿ ನೀತಿ–ನಿರ್ಣಯಗಳನ್ನು ರೂಪಿಸುವ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ರಾಜಕೀಯ ಅಧಿಕಾರ, ಹಕ್ಕು, ಸ್ವಾತಂತ್ರ್ಯಗಳನ್ನು ಸಂವಿಧಾನಬದ್ಧವಾಗಿಯೇ ಪಡೆದಿರುವನು. ಜನತಂತ್ರ ವಿಕೇಂದ್ರೀಕರಣ ತತ್ವಕ್ಕೆ ಬದ್ಧವಾದ ಭಾರತವು ಸಂವಿಧಾನದ 40ನೇ ವಿಧಿಯ ಅನ್ವಯ, ತಳಮಟ್ಟದ ಆಡಳಿತದಲ್ಲಿ ಜನರು ನೇರವಾಗಿ ಪಾಲ್ಗೊಳ್ಳುವಂತೆ ಗ್ರಾಮಪಂಚಾಯಿತಿಗಳ ಸ್ಥಾಪನೆಗೆ ಅವಕಾಶ ನೀಡಿದೆ. ಆದರೆ ಸ್ಥಳೀಯ ಹಂತದ ಆಡಳಿತ ವ್ಯವಸ್ಥೆಯಾದ ಗ್ರಾಮಪಂಚಾಯಿತಿಯ ಕಾರ್ಯವಾಹಿಯು 90ರ ದಶಕದವರೆಗೆ ನಿಷ್ಕ್ರಿಯೆ ಮತ್ತು ನಿರ್ಲಿಪ್ತವಾಗಿರುವುದು ಕಂಡುಬರುತ್ತದೆ.[2]

ಭಾರತ ಸ್ವಾತಂತ್ರ್ಯ ಪಡೆದ ಪ್ರಾರಂಭದ ದಶಕಗಳಲ್ಲಿ ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಕಂಡುಬರಲಿಲ್ಲ. ಸ್ವತಂತ್ರ ಭಾರತದಲ್ಲಿ ಗ್ರಾಮೀಣ ಸಮುದಾಯದ ಪರಿಶಿಷ್ಟರ, ಹಿಂದುಳಿದ ವರ್ಗಗಳ ಮತ್ತು ಮಹಿಳೆಯರ ಪ್ರಾತಿನಿಧ್ಯ ಮತ್ತು ಕಲ್ಯಾಣಕ್ಕಾಗಿ ಪಂಚವಾರ್ಷಿಕ ಯೋಜನೆಯ ಜೊತೆ ಜೊತೆಗೆ ಸಮುದಾಯದ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಯೋಜನೆಗಳ ಮುಖ್ಯ ಉದ್ದೇಶ ಗ್ರಾಮೀಣ ಸಮುದಾಯದ ಪರಿಶಿಷ್ಟರ, ಹಿಂದುಳಿದವರ ಮತ್ತು ಮಹಿಳೆಯರ ವೈಯಕ್ತಿಕ ಮತ್ತು ಸಮುದಾಯದ ಬದುಕಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಮೇಲ್ಮಟ್ಟದ ಸರ್ಕಾರಗಳಲ್ಲಿ ರೂಪಗೊಂಡ ನೀತಿ–ನಿರ್ಣಯಗಳನ್ನು ಮತ್ತು ಯೋಜನೆಗಳನ್ನು ಜಾರಿಗೆ ತರುವ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದಾಗಿತ್ತು. ಆದರೆ ಈ ಯೋಜನೆಗಳು ನಿರೀಕ್ಷಿತ ಫಲ ನೀಡಲಿಲ್ಲ. ಈ ಯೋಜನೆಗಳ ಯಶಸ್ಸಿಗೆ ಸಲಹೆ ನೀಡಲು ನೇಮಕಗೊಂಡ ಬಲವಂತರಾಯ್ ಮೆಹತಾ ಸಮಿತಿ, ಈ ಯೋಜನೆಗಳ ಯಶಸ್ಸಿಗೆ ತೀರಾ ಅಗತ್ಯವಾಗಿದ್ದ ಜನಸಾಮಾನ್ಯರ ಸಹಭಾಗಿತ್ವ ಪಡೆಯುವಲ್ಲಿ ವಿಫಲವಾಗಿದೆ. ಮೇಲ್ಮಟ್ಟದ ಸರ್ಕಾರಗಳಲ್ಲಿ ರೂಪುಗೊಳ್ಳುವ ಅಭಿವೃದ್ಧಿ ಸವಲತ್ತುಗಳು ಸ್ಥಳೀಯ ಮೇಲ್ವರ್ಗದ(ಪುರುಷರ) ಮೂಲಕ ಹಾದು ಜನಸಾಮಾನ್ಯರಿಗೆ

ತಲುಪಬೇಕಾಗಿದೆ. ಇದರಿಂದಾಗಿ ಅಭಿವೃದ್ಧಿ ಲಾಭಗಳು ಜನಸಾಮಾನ್ಯರಿಗೆ(ಮಹಿಳೆಯರಿಗೆ) ತಲುಪುತ್ತಿಲ್ಲ. ಆದ್ದರಿಂದ ಗ್ರಾಮಮಟ್ಟದಲ್ಲಿ ಜನರಿಂದ ಆಯ್ಕೆಗೊಂಡ ಗ್ರಾಮಪಂಚಾಯಿತಿಗಳು ಇರಬೇಕೆಂದು ಶಿಫಾರಸ್ಸು ಮಾಡಿತು.[3] ಇಂತಹ ಪಂಚಾಯಿತಿಗಳಿಗೆ ಇಬ್ಬರು ಮಹಿಳೆಯರನ್ನು ಸಹ ಆಯ್ಕೆ ಮಾಡಬೇಕೆಂದು ತನ್ನ ಅಭಿಪ್ರಾಯ ತಿಳಿಸಿತು.[4] ಈ ವಾದವನ್ನೇ 1978ರಲ್ಲಿ ಅಶೋಕ ಮಹತಾ ಸಮಿತಿ ಎತ್ತಿ ಹಿಡಿದರೂ, ಮಹಿಳೆಯರಿಗಾಗಿ ಕೆಲವೊಂದು ಪ್ರದೇಶಗಳನ್ನು ಮೀಸಲು ಕ್ಷೇತ್ರಗಳೆಂದು ಘೋಷಿಸಬೇಕೆಂದು ತಿಳಿಸಿತು.[5] ಈ ಸಮಿತಿಗಳು ತಳಮಟ್ಟದ ಆಡಳಿತದಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ನಾಮನಿರ್ದೇಶನ ನೀತಿಯೇ ಸೂಕ್ತ ಎಂಬ ಅಭಿಪ್ರಾಯವನ್ನು ತಿಳಿಸಿದವು. ಅಶೋಕ ಮೆಹತಾ ಸಮಿತಿ ಶಿಫಾರಸ್ಸನ್ನು ಚರ್ಚೆಗೆ ಒಳಪಡಿಸಿದ ಆಂಧ್ರಪ್ರದೇಶ ಸರ್ಕಾರವು 1979ರಲ್ಲಿ ಮಹಿಳಾ ಮತದಾರರು ಹೆಚ್ಚಿರುವ ಪ್ರತಿ ಬ್ಲಾಕ್ ಮಟ್ಟದಲ್ಲಿ ಶೇ.5ರಷ್ಟು ಸರಪಂಚರ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲು ನಿರ್ಧರಿಸಿತು. 1985ರಲ್ಲಿ ಕರ್ನಾಟಕ ಸರ್ಕಾರವು 1983ರ ಜಿಲ್ಲಾಪರಿಷತ್ ಮತ್ತು ತಾಲೂಕುಪಂಚಾಯತ್ ಸಮಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯಪಂಚಾಯಿತಿ ಅಧಿನಿಯಮವನ್ನು ಜಾರಿಗೆ ತರುವುದರ ಮೂಲಕ ಮಹಿಳೆಯರಿಗೆ ಶೇ.25ರಷ್ಟು ಮೀಸಲಾತಿ ನೀಡಿತು. 1983ರಲ್ಲಿ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಮಹಿಳಾ ಅಭಿವೃದ್ಧಿ ಯೋಜನೆಯು ಮಹಿಳಾ ಪ್ರಾತಿನಿಧ್ಯಕ್ಕಾಗಿ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಸ್ಥಾನ ಮತ್ತು ಹುದ್ದೆಗಳಲ್ಲಿ ಶೇ.30ರಷ್ಟು ಮೀಸಲಾತಿ ನೀಡಲು ಶಿಫಾರಸ್ಸು ಮಾಡಿತು. ಕೆಲವು ಕ್ಷೇತ್ರ/ವಾರ್ಡ್‌ಗಳನ್ನು ಮಹಿಳಾ ಮೀಸಲು ಕ್ಷೇತ್ರಗಳೆಂದು ಗೊತ್ತುಪಡಿಸಬೇಕೆಂದು ತಿಳಿಸುತ್ತಾ, ಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕಾಗಿ ಉತ್ತಮ ಅಡಿಪಾಯ ಹಾಕಿಕೊಟ್ಟಿತು. ಈ ದಶಕಗಳ ಅವಧಿಯಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಮೀಸಲಾತಿಯೇ ಸೂಕ್ತ ಸಾಧನ ಎಂಬ ಅಭಿಪ್ರಾಯಕ್ಕೆ ಬರಲಾಯಿತು. ಇದನ್ನು ಅರಿತುಕೊಂಡ ಕೇಂದ್ರ ಸರ್ಕಾರವು 1992ರಲ್ಲಿ ಸಂವಿಧಾನಕ್ಕೆ 73ನೇ ತಿದ್ದುಪಡಿ ಮಾಡುವುದರ ಮೂಲಕ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಆಯಾ ಪ್ರದೇಶದ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಇತರೆ ವರ್ಗಗಳನ್ನು ಒಳಗೊಂಡಂತೆ ಮಹಿಳೆಯರಿಗೆ ಸ್ಥಾನ ಮತ್ತು ಹುದ್ದೆಗಳಲ್ಲಿ ಶೇ.33ರಷ್ಟು ಕಡಿಮೆ ಇಲ್ಲದಷ್ಟು ಮೀಸಲಾತಿ ನೀಡಿತು. ಈ ತಿದ್ದುಪಡಿ ಮೂಲಕವೇ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಸಂವಿಧಾನಾತ್ಮಕ ಮಾನ್ಯತೆ ಲಭಿಸಿತು. ಜೊತೆಗೆ ಮಹಿಳೆಯರಿಗೆ ಮೀಸಲಾತಿ ಮೂಲಕ ಸೂಕ್ತ ಪ್ರಾತಿನಿಧ್ಯ ನೀಡಲಾಯಿತು. ಇಂದು ಜನತಂತ್ರ ವಿಕೇಂದ್ರೀಕರಣ ವ್ಯವಸ್ಥೆಗೆ ನ್ಯಾಯ ನೀಡುವಂತೆ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಶೇ.50ರಷ್ಟು ಮಹಿಳೆಯರಿಗೆ ಮೀಸಲಾತಿ ನೀಡಿದೆ. ತಳಮಟ್ಟದ ಪ್ರಜಾಪ್ರಭುತ್ವ ಆಡಳಿತದಲ್ಲಿ ಪುರುಷರಿಗೆ ಸಮನಾಗಿ ಮಹಿಳೆಯರಿಗೆ ಪ್ರಾತಿನಿಧ್ಯ ಲಭಿಸಿರುವುದು ನ್ಯಾಯಸಮ್ಮತವಾಗಿದೆ.

ಇಂದು ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ನಾಮನಿರ್ದೇಶಿತ(co-opt) ಒಂದೆರಡು ಸ್ಥಾನಗಳಿಂದ ಶೇ.50ರಷ್ಟು ಮೀಸಲಾತಿ ಮೂಲಕ ಸಮಾನ ಪ್ರಾತಿನಿಧ್ಯವನ್ನು ನೀಡಲಾಗಿದೆ. ಸ್ವತಂತ್ರ ಭಾರತದಲ್ಲಿದ್ದ ಪ್ರಾತಿನಿಧ್ಯದ ಪರಿಕಲ್ಪನೆ ಇಂದು ಬದಲಾಗಿದೆ. ಅಂದು ಮೇಲ್ಮಟ್ಟದ ಸರ್ಕಾರಗಳಲ್ಲಿ ರೂಪುಗೊಳ್ಳುವ ನೀತಿ ನಿರ್ಣಯಗಳನ್ನು ಮತ್ತು ಸಂಪನ್ಮೂಲಗಳನ್ನು ಕೆಳಹಂತದ ಸರ್ಕಾರಗಳಿಗೆ ತಲುಪಿಸುವ

ಪ್ರಕ್ರಿಯೆಗಳಲ್ಲಿ ಜನರ ಭಾಗವಹಿಸುವಿಕೆಯನ್ನು ಪ್ರಾತಿನಿಧ್ಯವೆಂದು ಹೇಳಲಾಗುತ್ತಿತ್ತು. ಆದರೆ ಇಂದು ಕೆಳಹಂತದ ಸರ್ಕಾರಗಳಲ್ಲಿ ನೀತಿ ನಿರ್ಣಯಗಳನ್ನು ರೂಪಿಸುವ ಮತ್ತು ಕ್ರೋಢೀಕರಣಗೊಂಡ ಸಂಪನ್ಮೂಲವನ್ನು ಜನರಿಗೆ ತಲುಪಿಸುವ ಪ್ರಕ್ರಿಯೆಗಳಲ್ಲಿ ಸ್ಥಳೀಯ ಜನರ ನೇರ ಭಾಗವಹಿಸುವವಿಕೆಯನ್ನು ಪ್ರಾತಿನಿಧ್ಯವೆಂದು ಹೇಳಲಾಗುತ್ತಿದೆ. ಅಂದರೆ, ಕೆಳಹಂತದ ಸರ್ಕಾರಗಳಿಗೆ ಅಗತ್ಯವಾದ ನೀತಿ ನಿರ್ಣಯಗಳು ಮತ್ತು ಅಭಿವೃದ್ಧಿ ಯೋಜನೆಗಳು ಕೆಳಹಂತದಲ್ಲೇ ರೂಪುಗೊಳ್ಳುತ್ತಿವೆ. ಮೇಲ್ಮಟ್ಟದ ಸರ್ಕಾರಗಳಲ್ಲಿಲ್ಲ. ಕೆಳಹಂತದಲ್ಲಿ ರೂಪುಗೊಳ್ಳುವ ನೀತಿ ನಿರ್ಣಯಗಳನ್ನು ಕೈಗೊಳ್ಳುವ ಪ್ರಕ್ರಿಯೆಗಳಲ್ಲಿ ಸ್ಥಳೀಯ ಜನರ ನೇರ ಭಾಗವಹಿಸುವಿಕೆಯೇ ಪ್ರಾತಿನಿಧ್ಯವಾಗಿದೆ. ಹೀಗೆ ಜನತಂತ್ರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯ ಪರಿಕಲ್ಪನೆ ವಿಸ್ತಾರಗೊಂಡಿದೆ. ಹೀಗೆ ವಿಸ್ತಾರಗೊಂಡ ಪ್ರಾತಿನಿಧ್ಯದಲ್ಲಿ ಮಹಿಳೆಯರು ಮೀಸಲಾತಿ ಆಧಾರದ ಮೇಲೆ ಪ್ರಾತಿನಿಧ್ಯ ಪಡೆಯುವಂತಾಗಿದೆ. ಮೀಸಲಾತಿ ಮೂಲಕ ಮಹಿಳಾ ಪ್ರಾತಿನಿಧ್ಯ ನೀಡಿರುವುದಕ್ಕೆ ಮೂಲಭೂತವಾಗಿ ಎರಡು ಪ್ರಮುಖ ಕಾರಣಗಳು ಇರಬಹುದೆಂದು ಗ್ರಹಿಸಲಾಗಿದೆ. ಒಂದು, ಊಳಿಗಮಾನ್ಯ ಮತ್ತು ಶ್ರೇಣೀಕೃತ ಪುರುಷ ಸಮಾಜದಲ್ಲಿ ಮಹಿಳೆ ಸ್ವತಂತ್ರವಾಗಿ ಸ್ಪರ್ಧಿಸಿ ಪ್ರಾತಿನಿಧ್ಯ ಪಡೆಯಲು ಸುಲಭವಲ್ಲ. ಆದ್ದರಿಂದ ಜನತಂತ್ರ ವಿಕೇಂದ್ರೀಕರಣದ ಯಶಸ್ಸಿಗೆ ಮಹಿಳಾ ಮೀಸಲಾತಿಯೇ ಯಶಸ್ವಿ ಸೂತ್ರವಾಗಿದೆ. ಎರಡು, ನಮ್ಮ ಜನತಂತ್ರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಪಂಚಾಯಿತಿಗಳು ಜನಾಧಿಕಾರದ ಮೇಲೆ ರಚನೆಗೊಳ್ಳುವ ಅಧಿಕೃತ ಪಂಚಾಯಿತಿಗಳಾಗಿವೆ. ಇವು ಸ್ಪರ್ಧೆಗೆ ಅವಕಾಶ ನೀಡಿವೆ. ಆದ್ದರಿಂದ ಮೀಸಲಾತಿ ಒಂದೇ ಮಹಿಳೆಗೆ ಪ್ರಾತಿನಿಧ್ಯ ಪಡೆಯಲು ಅಂತಿಮ ವೇದಿಕೆವಾಗಿದೆ. ಈ ಮೀಸಲಾತಿ ನೀತಿಯ ಮೂಲಕವೇ ಸ್ಥಳೀಯ ರಾಜಕಾರಣದಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಸಂಚಯನಗೊಳಿಸಲು ಸಾಧ್ಯವಾಗಿದೆ. ಇದರ ಫಲವಾಗಿ ಇಂದು ಮಹಿಳೆಯರು ಪಂಚಾಯಿತಿ ಮತ್ತು ಸಮುದಾಯ ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಾತಿನಿಧ್ಯ ಪಡೆದಿದ್ದಾರೆ. ಪಾಲುದಾರರಾಗಿದ್ದಾರೆ.

ಸಂವಿಧಾನದ 73ನೇ ತಿದ್ದುಪಡಿಯ ಫಲವಾಗಿ ಇಂದು ಗ್ರಾಮಪಂಚಾಯಿತಿಗಳು ಪ್ರಾತಿನಿಧಿಕ ಸಂಸ್ಥೆಗಳಾಗಿವೆ. ಈ ತಿದ್ದುಪಡಿಗೆ ಅನುಗುಣವಾಗಿಯೇ ಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಜಾರಿಗೆ ತರಲಾಗಿದೆ. ಇಂದು ಸಮಾಜದ ಅಂಚಿನಲ್ಲಿರುವ, ವಂಚನೆ ಮತ್ತು ತಾರತಮ್ಯಕ್ಕೆ ಒಳಗಾದ ಎಲ್ಲಾ ಜಾತಿ, ಜನಾಂಗಗಳ ಮಹಿಳೆಯರಿಗೆ ಮೀಸಲಾತಿ ಮೂಲಕ ಪಂಚಾಯಿತಿಗಳ ಸ್ಥಾನ ಮತ್ತು ಹುದ್ದೆಗಳಲ್ಲಿ ಪ್ರಾತಿನಿಧ್ಯ ನೀಡಲಾಗಿದೆ. ಈ 73ನೇ ತಿದ್ದುಪಡಿ ಜಾರಿಗೆ ಬಂದ ಅವಧಿಯಿಂದ ಇಲ್ಲಿಯವರೆಗೆ ಗ್ರಾಮಪಂಚಾಯಿತಿಗಳಿಗೆ ನಾಲ್ಕನೇ ಅವಧಿಗೆ ಚುನಾವಣೆ ಜರುಗಿದೆ. ಮುಂದಿನ ಐದನೇ ಅವಧಿಗೆ ಶೇ.50ರಷ್ಟು ಮಹಿಳಾ ಮೀಸಲಾತಿಯೊಂದಿಗೆ ಚುನಾವಣೆ ಜರುಗುವುದು. ಈ ಪ್ರಾತಿನಿಧ್ಯವು ಜನತಂತ್ರ ವಿಕೇಂದ್ರೀಕರಣದ ಮೂಲ ಆಶಯಕ್ಕೆ ಅನುಗುಣವಾಗಿಯೇ ಇದೆ. ಆದರೆ ಇಲ್ಲಿಯವರೆಗೆ ಬಲಾಢ್ಯ ಜಾತಿಗಳು ಮತ್ತು ಪುರುಷರು ತಮ್ಮ ಹಿಡಿತದಲ್ಲಿಟ್ಟುಕೊಂಡ ಅಧಿಕಾರವನ್ನು ಸುಲಭವಾಗಿ ಬಿಟ್ಟು ಕೊಟ್ಟಿರುವರೇ? ಮಹಿಳೆಯರು ಗ್ರಾಮಪಂಚಾಯಿತಿಯ ಚುನಾವಣೆಯಲ್ಲಿ ಮತ ನೀಡಲು ಸ್ವತಂತ್ರವಾಗಿ ಭಾಗವಹಿಸುವರೇ? ಸ್ವಇಚ್ಛೆಯಿಂದ ನಿರ್ಧಾರ ಕೈಗೊಳ್ಳುವರೇ? ಇದಕ್ಕೆ

ಏನಾದರೂ ಅಡೆ ತಡೆಗಳು ಇದ್ದಾವೆಯೇ? ಮತದಾನದಲ್ಲಿ ಮಹಿಳಾ ಪ್ರಾತಿನಿಧ್ಯವು ಅವರ ಭೌತಿಕ ಸಂಖ್ಯೆಗೆ ಸೀಮಿತವಾಗಿದೇಯೋ? ಅಥವಾ ಅವರ ಸ್ವನಿರ್ಧಾರಕ್ಕೆ ಅನುಗುಣವಾಗಿದೇಯೋ? ಎಂಬುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಮತಾಧಿಕಾರವನ್ನು ವಿಶ್ಲೇಷಿಸಿ, ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ.

4.2 ಮತದಾನ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ

ಸಂವಿಧಾನದ 15ನೇ ಭಾಗದಲ್ಲಿರುವ 326ನೇ ವಿಧಿಯು ಸಾರ್ವತ್ರಿಕ ವಯಸ್ಕ ಮತದಾನಕ್ಕೆ ಅವಕಾಶ ನೀಡಿದೆ. ಲೋಕಸಭೆ, ರಾಜ್ಯ ವಿಧಾನಸಭೆಗಳ ಮತ್ತು ಎಲ್ಲಾ ಹಂತದ ಸ್ಥಳೀಯ ಸರ್ಕಾರಗಳಿಗೆ ನಡೆಯುವ ಚುನಾವಣೆಗಳಲ್ಲಿ 18 ವರ್ಷ ಮೀರಿದ ಭಾರತದ ಪ್ರತಿಯೊಬ್ಬ ಪ್ರಜೆಯು ಮತದಾನ ಮಾಡುವ ಹಕ್ಕು, ಸ್ವಾತಂತ್ರ್ಯ ಪಡೆದಿದ್ದಾನೆ. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯಲ್ಲಿ ಜಾತಿ, ಧರ್ಮ, ಲಿಂಗ, ವರ್ಗ, ವರ್ಣ ಇತ್ಯಾದಿ ಭೇದಭಾವಗಳಿಲ್ಲದೇ ಎಲ್ಲರೂ ಸಮಾನವಾಗಿ ಮತದಾನ ಮಾಡುವ ಹಕ್ಕು-ಸ್ವಾತಂತ್ರ್ಯವಿದೆ. ಇದು ಪ್ರಜೆಗಳ ಪರಮಾಧಿಕಾರದ(Popular Sovereignty) ಸಂಕೇತವಾಗಿದೆ. ಇದರಿಂದಾಗಿ, ಸಮಾಜದ ವಿವಿಧ ಜಾತಿ, ಧರ್ಮ, ವರ್ಗಗಳ ಮಹಿಳೆಯರು ಪುರುಷರಿಗೆ ಸಮಾನವಾಗಿ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಪ್ರಾತಿನಿಧ್ಯ ಲಭಿಸಿದೆ.

ಇಂದಿನ ಮತದಾನದ ಪ್ರಾತಿನಿಧ್ಯವು ಎರಡು ಸ್ವರೂಪಗಳಿಂದ ಕೂಡಿದೆ. ಒಂದು ಜಾತಿ, ಧರ್ಮ ಮತ್ತು ವರ್ಗ ಆಧಾರಿತ ಮತದಾನ ಪ್ರಾತಿನಿಧ್ಯ. ಎರಡು, ಲಿಂಗ ಆಧಾರಿತ ಮತದಾನ ಪ್ರಾತಿನಿಧ್ಯ. ಕರ್ನಾಟಕದ ಮಟ್ಟಿಗೆ ಜಾತಿ, ಧರ್ಮ ಮತ್ತು ವರ್ಗ ಆಧಾರಿತ ಮತದಾನ ಪ್ರಾತಿನಿಧ್ಯ ತುಂಬಾ ವ್ಯಾಪಕವಾಗಿ ಮತ್ತು ಪರಿಣಾಮಕಾರಿಯಾಗಿ ಕಂಡುಬರುತ್ತದೆ. ಇದು ನೈಜ ಮತದಾನದ ದಿಕ್ಕನ್ನೇ ಬದಲಾಯಿಸುತ್ತಿದೆ. ಆದರೆ, ಲಿಂಗ ಆಧಾರಿತ ಮತದಾನ ಪ್ರಾತಿನಿಧ್ಯವು ಜಾತಿ, ಧರ್ಮ ಮತ್ತು ವರ್ಗ ಆಧಾರಿತ ಮತದಾನಕ್ಕಿಂತ ಭಿನ್ನವಾದ ಸ್ವರೂಪವಾಗಿದೆ. ಇದು ಸಾರ್ವತ್ರಿಕವಾಗಿ ಪುರುಷರ ರಾಜಕೀಯ ಬದುಕನ್ನು ಪರಿಮಿತಗೊಳಿಸುತ್ತಿದೆ. ಇದು ಮತದಾರರಲ್ಲೇ ನಿಯಂತ್ರಣ, ಜಾಗೃತಿ ಮತ್ತು ಹೋರಾಟದ ಸ್ಥಿತಿಯಾಗಿದೆ. ಅಂದರೆ ಇದು ಮಹಿಳೆಯರನ್ನು ನಿಯಂತ್ರಣಕ್ಕೆ ಒಳಪಡಿಸುವ ಅಥವಾ ಜಾಗೃತಗೊಳಿಸುವ ಒಂದು ಹೋರಾಟದ ಸ್ಥಿತಿಯಾಗಿ ಕಂಡುಬರುತ್ತಿದೆ. ಹೆಚ್ಚು ಕಡಿಮೆ ಪುರುಷರಿಗೆ ಸಮಾನ ಸಂಖ್ಯೆಯಲ್ಲಿರುವ ಮಹಿಳೆಯರು ಉತ್ತಮ ಮತಬ್ಯಾಂಕ್‌ಗಳಾಗಿದ್ದಾರೆ. ಇವರನ್ನು ಬಿಗಿ ಹಿಡಿತದಲ್ಲಿ ಹಿಡಿದಿಟ್ಟುಕೊಳ್ಳುವ ಪ್ರಯತ್ನವನ್ನು ಪುರುಷ ಮೊದಲಿಂದಲೂ ಮಾಡುತ್ತಾ ಬಂದಿದ್ದಾನೆ. ಜಾತಿ, ಧರ್ಮ, ವರ್ಗ ಪ್ರಾತಿನಿಧ್ಯದ ಯಶಸ್ಸಿಗೆ ಲಿಂಗ ಆಧಾರಿತ ಮತದಾನ ಪ್ರಾತಿನಿಧ್ಯ ಅನಿವಾರ್ಯವಾಗಿದೆ. ಆದರೆ ಇಂದು ಮಹಿಳೆ ಶಿಕ್ಷಣ, ಸಂಘಟನೆ ಮತ್ತು ಮೀಸಲಾತಿ ಮೂಲಕ ಜಾಗೃತಗೊಳ್ಳುತ್ತಿದ್ದಾಳೆ. ಪುರುಷನ ಬಿಗಿ ಹಿಡಿತದಿಂದ ಸಡಿಲಗೊಂಡು ಸಾರ್ವಜನಿಕ ಬದುಕನ್ನು ಪ್ರವೇಶ ಮಾಡುತ್ತಿದ್ದಾಳೆ. ಇದು ತುಂಬಾ ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಜನತಂತ್ರ ವಿಕೇಂದ್ರೀಕರಣವನ್ನು ಇನ್ನಷ್ಟು ಅರ್ಥಪೂರ್ಣಗೊಳ್ಳಬೇಕಾದರೆ ಮಹಿಳೆಯರ ಮತದಾನದ

ಪ್ರಾತಿನಿಧ್ಯವು ಅವರು ಮತ ನೀಡುವ ನಿರ್ಧಾರ ಕೈಗೊಳ್ಳುವ ಮತ್ತು ಅನುಷ್ಠಾನಗೊಳಿಸುವ ಸ್ವಾತಂತ್ರ್ಯದ ಅರಿವಿನ ಮಟ್ಟ ಹೆಚ್ಚಾಗಬೇಕಾಗಿದೆ.

ವಾಸ್ತವ ರಾಜಕಾರಣದಲ್ಲಿ ಜಾತಿ, ಧರ್ಮ, ವರ್ಗ, ಲಿಂಗ ಆಧಾರಿತ ಮತದಾನ ನಡೆಯುವುದು ಕಂಡುಬರುತ್ತದೆ.[6] ಇದು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಹಳ್ಳಕ್ಕೆ ತಳ್ಳುತ್ತಿದೆ. ಚುನಾವಣೆಯಲ್ಲಿ ಹಣಬಲ ಮತ್ತು ತೋಳ್ಬಲಗಳ ಪ್ರಭಾವ ಹೆಚ್ಚಾಗಿದೆ. ಇವು ಮತದಾನದ ಹಳಿಯನ್ನು ತಪ್ಪಿಸುತ್ತಿದೆ ಎಂಬ ಅಭಿಪ್ರಾಯಗಳು ವ್ಯಾಪಕವಾಗಿ ಕೇಳಿಬರುತ್ತಿವೆ. ಇತ್ತೀಚಿನ ದಿನಗಳಲ್ಲಿ ಚುನಾವಣೆ ನೀತಿಗಳು ಹಣಬಲ ಮತ್ತು ತೋಳ್ಬಲ ನಿಯಂತ್ರಿಸುವಲ್ಲಿ ಯಶಸ್ಸು ಕಾಣುತ್ತಿವೆ. ಆದರೆ ಪುರುಷರ(ಲಿಂಗ, ಜಾತಿ, ಧರ್ಮ, ವರ್ಗ ಮತ್ತು ಪಕ್ಷ ತಾರತಮ್ಯ/ಹೆಸರಿನಲ್ಲಿ) ಬಿಗಿಹಿಡಿತದಲ್ಲಿರುವ ಮಹಿಳೆಯರನ್ನು ಸಡಿಲುಗೊಳಿಸುವ ಪ್ರಯತ್ನ ಮಾಡುತ್ತಿಲ್ಲ. ಗ್ರಾಮೀಣ ಮಹಿಳೆಯರ ರಾಜಕೀಯ ಪ್ರಾತಿನಿಧ್ಯವನ್ನು ಗುರುತಿಸಲು ಮತದಾನ ಒಂದು ಪ್ರಮುಖ ಸಾಧನವಾಗಿದೆ. 18 ವರ್ಷ ತುಂಬಿದ ಮತ್ತು ಮತದಾರರ ಪಟ್ಟಿಯಲ್ಲಿರುವ ಎಲ್ಲಾ ಮಹಿಳೆಯರು ಮತದಾರರಾಗುತ್ತಾರೆ. ನಮ್ಮ ಜನತಂತ್ರ ವ್ಯವಸ್ಥೆಯಲ್ಲಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಕಂಡುಬರುವ ಮಹಿಳಾ ಪ್ರಾತಿನಿಧ್ಯ ಬೇರ್‍ಯಾವ ಚುನಾವಣೆಯಲ್ಲಿ ಕಂಡುಬರುವುದಿಲ್ಲ. ಆದ್ದರಿಂದ ಮಹಿಳಾ ಪ್ರಾತಿನಿಧ್ಯಕ್ಕೆ ಗ್ರಾಮಪಂಚಾಯಿತಿ ಚುನಾವಣೆ ಮುಖ್ಯ ವೇದಿಕೆಯಾಗಿದೆ. ಮಹಿಳೆ ಮತದಾನದಲ್ಲಿ ಭಾಗವಹಿಸುವುದು ಎಷ್ಟು ಮುಖ್ಯವೋ ಸ್ವನಿರ್ಧಾರದಂತೆ ಮತ ನೀಡುವುದು ಅಷ್ಟೇ ಮುಖ್ಯ. ಚುನಾವಣೆಯಲ್ಲಿ ಮತದಾನ ಮಾಡುವುದು ಪ್ರಾತಿನಿಧ್ಯವಾದರೆ, ಸ್ವನಿರ್ಧಾರದಂತೆ ಮತ ನೀಡುವುದು ಸಬಲೀಕರಣವಾಗುತ್ತದೆ. ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ಮಹಿಳೆ ತಾನು ಇಚ್ಚಿಸಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವ ಹಕ್ಕು, ಸ್ವಾತಂತ್ರ್ಯ ಪಡೆದಿದ್ದಾಳೆ. ಆದರೆ ಮಹಿಳೆಯರು ಮತದಾನ ಪ್ರಕ್ರಿಯೆಯಲ್ಲಿ ತಾವು ಇಚ್ಚಿಸಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವರೋ ಅಥವಾ ಪುರುಷಸಂಬಂಧಿಗಳು ಹೇಳಿದ ಅಭ್ಯರ್ಥಿಗಳಿಗೆ ಮತ ನೀಡುವರೋ ಎಂಬುದನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ. ಚುನಾವಣೆಯಲ್ಲಿ ಪುರುಷರ ನಿರ್ಧಾರದಂತೆ ಮತದಾನ ಮಾಡುವ ಮಹಿಳೆಯರ ಪ್ರಮಾಣ ಮತ್ತು ಸ್ವನಿರ್ಧಾರದಂತೆ ಮತದಾನ ಮಾಡುವ ಮಹಿಳೆಯರ ಪ್ರಮಾಣದ ನಡುವಿನ ಸಂಬಂಧದ ಆಧಾರ ಮೇಲೆ ಮಹಿಳಾ ಸಬಲೀಕರಣವನ್ನು ಚರ್ಚಿಸುವುದು ಅಧ್ಯಯನದ ಉದ್ದೇಶವಾಗಿದೆ. ಇದಕ್ಕೆ ಪೂರಕವಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರು ಹೇಗೆ ಮತ ಚಲಾಯಿಸುವರು ಎಂಬುದನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ.

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಬಯಲು ಸೀಮೆಯ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಪಂಚಾಯಿತಿಗಳನ್ನು ಒಂದು ಘಟಕವಾಗಿ ಮತ್ತು ಮಲೆನಾಡಿನ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳನ್ನು ಒಂದು ಘಟಕವಾಗಿ ಮಾಡಿಕೊಂಡು ತೌಲನಿಕವಾಗಿ ವಿಶ್ಲೇಷಣೆ ಮಾಡಲಾಗಿದೆ. ಸ್ವತಂತ್ರವಾಗಿ ಸ್ವನಿರ್ಧಾರದಂತೆ ಮತ ನೀಡುವ ಮಹಿಳೆಯನ್ನು ಸಬಲಳು ಎಂದು ಮತ್ತು ಯಾವ ಪಂಚಾಯಿತಿಗಳಲ್ಲಿ ಸ್ವನಿರ್ಧಾರದಂತೆ ಮತದಾನ ಮಾಡುವ ಮಹಿಳೆಯರ ಪ್ರಮಾಣ

ಹೆಚ್ಚು ಇರುತ್ತದೆಯೋ ಅಂತಹ ಪಂಚಾಯಿತಿಗಳಲ್ಲಿ ಮಹಿಳೆಯರು ಸಬಲೀಕರಣಗೊಂಡವರು ಎಂದು ಈ ಅಧ್ಯಾಯದಲ್ಲಿ ಬಳಸಿಕೊಂಡ ಸರಳ ಸೂಚ್ಯಂಕಗಳ ಮೇರೆಗೆ ನಿರ್ಧರಿಸಲಾಗಿದೆ.

2005 ಮತ್ತು 2010 ಈ ಎರಡು ಅವಧಿಗೆ ನಡೆದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಬಯಲುಸೀಮೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಪಂಚಾಯಿತಿಗಳಾದ ಹೊಸೂರು ಗ್ರಾಮಪಂಚಾಯಿತಿಗೆ ಪ್ರತಿ ಅವಧಿಗೆ 10 ಸದಸ್ಯರಂತೆ, ಎರಡು ಅವಧಿಗೆ ಒಟ್ಟು 20 ಸದಸ್ಯರು ಆಯ್ಕೆಯಾಗಿದ್ದು, ಇವರಲ್ಲಿ 10(ಶೇ.50) ಮಹಿಳಾ ಸದಸ್ಯರು ಇದ್ದಾರೆ. ಆದರೆ ಹೊಸೂರು ಗ್ರಾಮಪಂಚಾಯಿತಿಯಲ್ಲಿ ಒಬ್ಬ ಸದಸ್ಯ ಮರು ಆಯ್ಕೆಯಾಗಿದ್ದರೆ, ಮತ್ತೊಬ್ಬ ಸದಸ್ಯ ಮರಣ ಹೊಂದಿದ್ದಾರೆ. ಹೀಗಾಗಿ ಸಂದರ್ಶನ ಮಾಡಿದ 18 ಸದಸ್ಯರಲ್ಲಿ ಶೇ.55.55 ಮಹಿಳಾ ಸದಸ್ಯರಿದ್ದಾರೆ. ಅಲ್ಲದೇ ಈ ಎರಡು ಅವಧಿ ಚುನಾವಣೆಗಳಲ್ಲಿ ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ(ಅಗತ್ಯವಿದ್ದಲ್ಲಿ ರಾಜಕೀಯ/ಅಂಗನವಾಡಿ/ಆಶಾ ಕಾರ್ಯಕರ್ತರನ್ನು ಒಳಗೊಂಡಂತೆ) 50 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆಮಾಡಿಕೊಂಡಿದ್ದು, ಇವರಲ್ಲಿ ಶೇ.50ರಷ್ಟು ಮಹಿಳಾ ಅಭ್ಯರ್ಥಿಗಳು ಒಳಗೊಂಡಿದ್ದಾರೆ. ಒಟ್ಟಾರೆಯಾಗಿ ಈ ಗ್ರಾಮಪಂಚಾಯಿಂದ ಸಂದರ್ಶನ ಮಾಡಿದ 68(18 ಜನಪ್ರತಿನಿಧಿಗಳು ಮತ್ತು 50 ಚುನಾವಣಾ ಅಭ್ಯರ್ಥಿಗಳು) ಮಾಹಿತಿದಾರಲ್ಲಿ ಶೇ.51(35) ಮಹಿಳಾ ಮಾಹಿತಿದಾರರು ಇದ್ದಾರೆ. ಹಾಗೆಯೇ ನಾಗೇನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಪ್ರತಿ ಅವಧಿಗೆ 15 ಸದಸ್ಯರಂತೆ, ಎರಡು ಅವಧಿಗೆ 30 ಸದಸ್ಯರು ಚುನಾಯಿತರಾಗಿದ್ದು, ಇವರಲ್ಲಿ 13(ಶೇ.43) ಮಹಿಳಾ ಸದಸ್ಯರು ಇದ್ದಾರೆ. ಆದರೆ ಈ ಗ್ರಾಮಪಂಚಾಯಿತಿಯಲ್ಲಿ ಒಬ್ಬ ಮರು ಆಯ್ಕೆಯಾಗಿದ್ದರಿಂದ ಸಂದರ್ಶನ ಮಾಡಿದ 29 ಸದಸ್ಯರಲ್ಲಿ ಶೇ.45 ಮಹಿಳಾ ಸದಸ್ಯರಿದ್ದಾರೆ. ಸಂದರ್ಶನ ಮಾಡಲಾಗಿದೆ. ಅಲ್ಲದೇ ಈ ಎರಡು ಅವಧಿ ಚುನಾವಣೆಗಳಲ್ಲಿ ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ(ಅಗತ್ಯವಿದ್ದಲ್ಲಿ ರಾಜಕೀಯ/ಅಂಗನವಾಡಿ/ಆಶಾ ಕಾರ್ಯಕರ್ತರನ್ನು ಒಳಗೊಂಡಂತೆ) 50 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆಮಾಡಿಕೊಂಡಿದ್ದು, ಇವರಲ್ಲಿ ಶೇ.50ರಷ್ಟು ಮಹಿಳಾ ಅಭ್ಯರ್ಥಿಗಳು ಒಳಗೊಂಡಿದ್ದಾರೆ. ಒಟ್ಟಾರೆಯಾಗಿ ಈ ಗ್ರಾಮಪಂಚಾಯಿಂದ ಸಂದರ್ಶನ ಮಾಡಿದ 79(29 ಜನಪ್ರತಿನಿಧಿಗಳು ಮತ್ತು 50 ಚುನಾವಣಾ ಅಭ್ಯರ್ಥಿಗಳು) ಮಾಹಿತಿದಾರಲ್ಲಿ ಶೇ.48(38) ಮಹಿಳಾ ಮಾಹಿತಿದಾರರು ಇದ್ದಾರೆ.

ಈ ಮಾದರಿಯಲ್ಲೇ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಪಂಚಾಯಿತಿಗಳಾದ ಬೇಡ್ಕಣಿ ಗ್ರಾಮಪಂಚಾಯಿತಿಗೆ ಪ್ರತಿ ಅವಧಿಗೆ 11 ಸದಸ್ಯರಂತೆ ಎರಡು ಅವಧಿಗೆ ಆಯ್ಕೆಯಾದ 22 ಸದಸ್ಯರನ್ನು ಸಂದರ್ಶನ ಮಾಡಲಾಗಿದ್ದು, ಇವರಲ್ಲಿ 12(ಶೇ.55) ಮಹಿಳಾ ಸದಸ್ಯರು ಇದ್ದಾರೆ. ಅಲ್ಲದೇ ಈ ಎರಡು ಅವಧಿ ಚುನಾವಣೆಗಳಲ್ಲಿ ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ(ಅಗತ್ಯವಿದ್ದಲ್ಲಿ ರಾಜಕೀಯ/ಅಂಗನವಾಡಿ/ಆಶಾ ಕಾರ್ಯಕರ್ತರನ್ನು ಒಳಗೊಂಡಂತೆ) 50 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆಮಾಡಿಕೊಂಡಿದ್ದು, ಇವರಲ್ಲಿ ಶೇ.50ರಷ್ಟು ಮಹಿಳಾ ಅಭ್ಯರ್ಥಿಗಳು ಒಳಗೊಂಡಿದ್ದಾರೆ. ಒಟ್ಟಾರೆಯಾಗಿ ಈ ಗ್ರಾಮಪಂಚಾಯಿಂದ ಸಂದರ್ಶನ ಮಾಡಿದ 72(22

ಜನಪ್ರತಿನಿಧಿಗಳು ಮತ್ತು 50 ಚುನಾವಣಾ ಅಭ್ಯರ್ಥಿಗಳು) ಮಾಹಿತಿದಾರಲ್ಲಿ ಶೇ.51(37) ಮಹಿಳಾ ಮಾಹಿತಿದಾರರು ಇದ್ದಾರೆ. ಹಾಗೆಯೇ ಕೋಲಸಿರ್ಸಿ ಗ್ರಾಮಪಂಚಾಯಿತಿಗೆ ಪ್ರತಿ ಅವಧಿಗೆ 13 ಸದಸ್ಯರಂತೆ, ಎರಡು ಅವಧಿಗೆ ಆಯ್ಕೆಯಾದ 26 ಸದಸ್ಯರನ್ನು ಸಂದರ್ಶನ ಮಾಡಲಾಗಿದ್ದು, ಇವರಲ್ಲಿ 14(ಶೇ.54) ಮಹಿಳಾ ಸದಸ್ಯರು ಒಳಗೊಂಡಿದ್ದಾರೆ. ಅಲ್ಲದೇ ಈ ಎರಡು ಅವಧಿ ಚುನಾವಣೆಗಳಲ್ಲಿ ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ(ಅಗತ್ಯವಿದ್ದಲ್ಲಿ ರಾಜಕೀಯ/ ಅಂಗನವಾಡಿ/ಆಶಾ ಕಾರ್ಯಕರ್ತರನ್ನು ಒಳಗೊಂಡಂತೆ) 50 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆಮಾಡಿಕೊಂಡಿದ್ದು, ಇವರಲ್ಲಿ ಶೇ.50ರಷ್ಟು ಮಹಿಳಾ ಅಭ್ಯರ್ಥಿಗಳು ಒಳಗೊಂಡಿದ್ದಾರೆ. ಒಟ್ಟಾರೆಯಾಗಿ ಈ ಗ್ರಾಮಪಂಚಾಯಿಂದ ಸಂದರ್ಶನ ಮಾಡಿದ 76(26 ಜನಪ್ರತಿನಿಧಿಗಳು ಮತ್ತು 50 ಚುನಾವಣಾ ಅಭ್ಯರ್ಥಿಗಳು) ಮಾಹಿತಿದಾರಲ್ಲಿ ಶೇ.51(39) ಮಹಿಳಾ ಮಾಹಿತಿದಾರರು ಇದ್ದಾರೆ. ಈ ಮೇಲಿನ ನಾಲ್ಕು ಗ್ರಾಮಪಂಚಾಯಿತಿಗಳಿಂದ ಒಟ್ಟು 295 ಮಾಹಿತಿದಾರರನ್ನು(98 ಜನಪ್ರತಿನಿಧಿಗಳಲ್ಲಿ ಶೇ.50ರಷ್ಟು ಮಹಿಳೆಯರು ಮತ್ತು 200 ಚುನಾವಣಾ ಅಭ್ಯರ್ಥಿಗಳಲ್ಲಿ ಶೇ.50ರಷ್ಟು ಮಹಿಳೆಯರು) ಸಂದರ್ಶಿಸಲಾಗಿದ್ದು, ಇವರಲ್ಲಿ 149(ಶೇ.50.50) ಮಹಿಳಾ ಸದಸ್ಯರು ಒಳಗೊಂಡಿದ್ದಾರೆ(ನೋಡಿ ಕೋಷ್ಟಕ 4.1).

ಈ ಮೇಲಿನ ನಾಲ್ಕು ಗ್ರಾಮಪಂಚಾಯಿತಿಗಳಿಂದ ಸಂದರ್ಶಿಸಿದ ಮಾಹಿತಿದಾರರಲ್ಲಿ ಚುನಾವಣೆ ವೇಳೆ ಮಹಿಳಾ ಮತದಾರರು ಯಾರ ನಿರ್ಧಾರದಂತೆ ಮತದಾನ ಮಾಡುತ್ತಾರೆ ಎಂಬ ಪ್ರಶ್ನೆಯನ್ನು ನಿರ್ದಿಷ್ಟ ಪ್ರಶ್ನಾವಳಿಯ ಮೂಲಕ ಕೇಳಿ ಮಾಹಿತಿಯನ್ನು ಪಡೆಯಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ಮಾಹಿತಿದಾರರ ಸಾಮಾಜೋ-ಆರ್ಥಿಕ ಸಂಗತಿಗಳಾದ ಲಿಂಗ, ವಯಸ್ಸು, ಜಾತಿ, ಶಿಕ್ಷಣ ಮತ್ತು ಆದಾಯಗಳ ಆಧಾರದ ಮೇಲೆ ವರ್ಗೀಕರಿಸಿಕೊಂಡು ಮಹಿಳಾ ಮತದಾನ ಪ್ರಾತಿನಿಧ್ಯದ ನಿರ್ಧಾರ ಯಾರಲ್ಲಿ ಇದೆ. ಇದ್ದರೆ ಅದು ಎಷ್ಟು ಪ್ರಮಾಣದಲ್ಲಿದೆ ಎಂಬುದನ್ನು ವಿಶ್ಲೇಷಣೆ ಮಾಡುವುದರ ಮೂಲಕ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ.

4.3 ಲಿಂಗಾಧರಿತ ಪ್ರಾತಿನಿಧ್ಯ: ಮಹಿಳಾ ಮತದಾನ ಮತ್ತು ಮಹಿಳಾ ಸಬಲೀಕರಣ

ಮತದಾನ ಅಥವಾ ಚುನಾವಣೆ ಲಿಂಗಾತೀತವಾಗಿದೆ ಎಂದು ಸಂವಿಧಾನ ಮತ್ತು ಶಾಸನಗಳಿಂದ ತಿಳಿದು ಬರುತ್ತದೆ. ಇದಕ್ಕೆ ಸಾಕ್ಷಿಯಂತೆ ಸಾರ್ವತ್ರಿಕ ವಯಸ್ಕ ಮತದಾನ ಮತ್ತು ಜನಾಪ್ರತಿನಿಧಿ ಕಾಯಿದೆ ಜಾರಿಯಲ್ಲಿದೆ. ಆದರೆ ಈ ಪುರುಷ ಆಸಕ್ತಿ ರಾಜಕಾರಣದಲ್ಲಿ ಲಿಂಗಾತೀತ ಮತದಾನ ಎಷ್ಟರಮಟ್ಟಿಗೆ ಸಾಧ್ಯತೆಯಾಗಿದೆ ಎಂಬುದನ್ನು ಈ ಅಧ್ಯಾಯದಲ್ಲಿ ನೋಡುವ ಪ್ರಯತ್ನ ಮಾಡಲಾಗಿದೆ. ಪುರುಷರ ಸಂಖ್ಯೆಗೆ ಹೆಚ್ಚು ಕಡಿಮೆ ಸಮಾನ ಸಂಖ್ಯೆಯಲ್ಲಿರುವ ಮಹಿಳೆಯರು ಚುನಾವಣೆಯಲ್ಲಿ ಮತದಾರರಾಗಿ ಭಾಗವಹಿಸುವ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ. ಅದರಲ್ಲೂ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಮತದಾರರಾಗಿ ಭಾಗವಹಿಸುವ ಮಹಿಳೆಯರ ಪ್ರಮಾಣ ಬೇರ್‍ಯಾವ ಚುನಾವಣೆಯಲ್ಲೂ ಕಂಡುಬರುವುದಿಲ್ಲ. ಉದಾರಣೆಗೆ: ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ವ್ಯಾಪ್ತಿಯಲ್ಲಿ ಜರುಗಿದ ವಿವಿಧ ಸಾರ್ವತ್ರಿಕ ಚುನಾವಣೆಯಲ್ಲಿ ಭಾಗವಹಿಸಿ, ಮತ ಚಲಾಯಿಸಿದ ಮಹಿಳಾ ಮತದಾರರ

ಪ್ರಮಾಣವನ್ನು ಹೋಲಿಕೆ ಮಾಡಬಹುದು. 2009 ಏಪ್ರಿಲ್ ತಿಂಗಳಲ್ಲಿ ಸಂಸತ್ತಿಗೆ ಜರುಗಿದ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾರರ ಪಟ್ಟಿಯಲ್ಲಿರುವ ತಾಲೂಕಿನ 34,854 ಮಹಿಳಾ ಮತದಾರಲ್ಲಿ ಶೇ.64.19(22,374)ರಷ್ಟು ಮಹಿಳೆಯರು ಮತದಾನ ಮಾಡಿದ್ದಾರೆ. 2010 ಡಿಸೆಂಬರ್ ತಿಂಗಳಲ್ಲಿ ಜರುಗಿದ ಜಿಲ್ಲಾಪಂಚಾಯಿತಿ ಮತ್ತು ತಾಲೂಕುಪಂಚಾಯಿತಿಗಳ ಚುನಾವಣೆಗಳಲ್ಲಿ ಮತದಾರರ ಪಟ್ಟಿಯಲ್ಲಿರುವ 30,072 ಮಹಿಳಾ ಮತದಾರರಲ್ಲಿ ಶೇ.65.72(19,766)ರಷ್ಟು ಮಹಿಳೆಯರು ಮತದಾನ ಮಾಡಿದ್ದಾರೆ. ಆದರೆ, 2010 ಮೇ ತಿಂಗಳಲ್ಲಿ ಜರುಗಿದ ಗ್ರಾಮಪಂಚಾಯಿತಿಗಳ ಚುನಾವಣೆಯಲ್ಲಿ ಮತದಾರರ ಪಟ್ಟಿಯಲ್ಲಿರುವ 29,438 ಮಹಿಳಾ ಮತದಾರರಲ್ಲಿ ಶೇ.80.38(23,664)ರಷ್ಟು ಮಹಿಳಾ ಮತದಾರರು ಭಾಗವಹಿಸಿ, ಮತ ನೀಡಿರುತ್ತಾರೆ.[7] ಮಹಿಳಾ ಮತದಾರರ ಪ್ರಮಾಣದ ಹೆಚ್ಚಳಕ್ಕೆ ಪ್ರಮುಖವಾಗಿ ಮೂರು ಕಾರಣಗಳನ್ನು ಗುರುತಿಸಲಾಗಿದೆ. ಒಂದು, ಮೀಸಲಾತಿ ನೀತಿಯಿಂದ ಹೆಚ್ಚಾಗಿರುವ ಮಹಿಳಾ ಉಮೇದುವಾರಿಕೆಯ ಪ್ರಮಾಣ. ಎರಡು, ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಉಮೇದುವಾರರ ನಡುವೆ ಕಂಡುಬರುವ ನೇರಸ್ಪರ್ಧೆ. ಮೂರು, ಗ್ರಾಮಪಂಚಾಯಿತಿ ಚುನಾವಣಾ ಕ್ಷೇತ್ರಗಳ ವ್ಯಾಪ್ತಿ ಚಿಕ್ಕದಾಗಿರುವುದು. ಈ ಮೂರು ಕಾರಣಗಳು ಚುನಾವಣಾ ಪ್ರಕ್ರಿಯೆಯಲ್ಲಿ ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಸಾಧ್ಯವಾಗಿದೆ ಎಂದು ಗುರುತಿಸಲಾಗಿದೆ.

ಇಂದಿನ ಚುನಾವಣೆಗಳು ಮಹಿಳಾ ಮತದಾನ ಅಪೇಕ್ಷಿತ ಚುನಾವಣೆಗಳಾಗಿವೆ. ಸ್ವಾತಂತ್ರ್ಯಪೂರ್ವ ಮತ್ತು ನಂತರದ ಭಾರತದಲ್ಲಿ ಚುನಾವಣೆಗಳಲ್ಲಿ ಮಹಿಳಾ ಭಾಗವಹಿಸುವಿಕೆಯನ್ನು ಆಕ್ಷೇಪಿಸುವ ಮತ್ತು ಪರಿಮಿತಗೊಳಿಸುವ ಊಳಿಗಮಾನ್ಯ, ಪುರುಷಪ್ರಧಾನ ಹಾಗೂ ವೈದಿಕ ಪರಂಪರೆಗಳು ಕಂಡುಬರುತ್ತವೆ. ಅಂದು ಮಹಿಳೆಯರು ಚುನಾವಣೆಯಲ್ಲಿ ಭಾಗವಹಿಸುವ ಮತ್ತು ಮತದಾನ ಮಾಡುವ ನಿರ್ಧಾರ ಹೆಚ್ಚು ಕಡಿಮೆ ಪುರುಷರ ನಿಯಂತ್ರಣದಲ್ಲಿತ್ತೆಂಬುದು ಕಂಡುಬರುತ್ತದೆ. ಆದರೆ ಇಂದು ಸಾರ್ವತ್ರಿಕ ಚುನಾವಣೆಗಳಲ್ಲಿ ಮಹಿಳೆ ಭಾಗವಹಿಸುದನ್ನು ಆಪೇಕ್ಷಿಸುವುದು ಕಂಡುಬರುತ್ತದೆ. ಇದಕ್ಕೆ ಜನತಂತ್ರ ನೀತಿಗಳ ಮತ್ತು ರಾಜಕೀಯ ಹಿತಾಸಕ್ತಿ ಪುರುಷರ ಉತ್ತೇಜನ, ಪ್ರೇರಣೆ ಇರುವುದು ಕಂಡುಬರುತ್ತದೆ. ಇಂದಿನ ಚುನಾವಣೆಗಳಲ್ಲಿ ಮಹಿಳೆಯರು ಉತ್ತಮ ಮತಬ್ಯಾಂಕ್‌ಗಳಾಗಿದ್ದಾರೆ. ಇವರ ಮತಗಳು ಚುನಾವಣೆ ಫಲಿತಾಂಶಗಳನ್ನು ನೀಡುವಂತಾಗಿವೆ. ಹೀಗಾಗಿ, ಇಂದು ಮತದಾನದ ನಿರ್ಧಾರ ಹಕ್ಕು ಹೆಚ್ಚು ಕಡಿಮೆ ಪುರುಷರ ಕೈಯಲ್ಲಿದೆ ಎಂಬುದು ಕಂಡುಬರುತ್ತದೆ. ಮತದಾನದಲ್ಲಿ ಮಹಿಳಾ ಪ್ರಾತಿನಿಧ್ಯದ ಪ್ರಮಾಣ ಹೆಚ್ಚಾಗಿರುವುದು ಅವರ ಸಬಲೀಕರಣವಾಗಿದೆ ಎಂಬ ನಂಬಿಕೆ ಕಂಡುಬರುತ್ತದೆ. ಅದು ಅವರ ನೈಜ ಸಬಲೀಕರಣವಲ್ಲ. ಅವರ ಸಬಲೀಕರಣ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಂಖ್ಯೆಗೆ ಸೀಮಿತವಾಗಿಲ್ಲ. ಚುನಾವಣೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸುವ ಮತ್ತು ಇಚ್ಛಿಸಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವ ನಿರ್ಧಾರದ ಮೇಲೆ ಅವರ ಸಬಲೀಕರಣ ನಿರ್ಧಾರವಾಗುತ್ತದೆ. ಇಂದಿನ ರಾಜಕಾರಣದಲ್ಲಿ ಅಥವಾ ರಾಜಕೀಯ ನಿರ್ಧಾರದಲ್ಲಿ ಗ್ರಾಮೀಣ ಮಹಿಳೆ ಸರ್ವ ಸ್ವತಂತ್ರಳಲ್ಲ ಎಂಬದು ಗ್ರಾಮೀಣ ಪರಿಸರದಲ್ಲಿರುವುದು ಕಂಡುಬರುತ್ತದೆ. ಆದರೆ ಆಧುನಿಕ ಶಿಕ್ಷಣ ಹಾಗೂ ಇತರ ಸೌಲಭ್ಯಗಳು ಗ್ರಾಮೀಣ ಪರಿಸರದಲ್ಲಿ ಜನತಂತ್ರ ಮತ್ತು

ವೈಯಕ್ತಿಕ ಮೌಲ್ಯಗಳನ್ನು ಜಾಗೃತಗೊಳಿಸುವಲ್ಲಿ ಸಹಾಯಕವಾಗಿವೆ ಎಂಬ ಗ್ರಹಿಕೆ ಕಂಡುಬರುತ್ತದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಪಂಚಾಯಿತಿಗಳಲ್ಲಿ ಆಧುನಿಕ ಶಿಕ್ಷಣ ಹಾಗೂ ಇತರ ಸೌಲಭ್ಯ ಮತ್ತು ಸವಲತ್ತುಗಳು ಮಹಿಳೆಯರ ಮತ ನೀಡುವ ನಿರ್ಧಾರದ ಮೇಲೆ ಎಷ್ಟರಮಟ್ಟಿಗೆ ಪ್ರಭಾವ ಬೀರಿವೆ. ಮಹಿಳೆಯರು ತಮ್ಮ ಬೇಕು ಬೇಡಗಳಿಗೆ ಅನುಗುಣವಾಗಿ ಚುನಾವಣೆಯಲ್ಲಿ ಭಾಗವಹಿಸುವ ಮತ್ತು ಮತ ನೀಡುವ ಪ್ರಮಾಣ ಎಷ್ಟರಮಟ್ಟಿಗೆ ಸಾಧ್ಯತೆಯಾಗಿದೆ ಎಂಬುದನ್ನು ಪರೀಕ್ಷಿಸಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಪಂಚಾಯಿತಿಗಳಲ್ಲಿ 2005 ಮತ್ತು 2010ರ ಅವಧಿಯ ಚುನಾವಣಾ ಪ್ರಾತಿನಿಧ್ಯ ಪಡೆದ ಪುರುಷ ಮತ್ತು ಮಹಿಳಾ ಸದಸ್ಯರು/ಅಭ್ಯರ್ಥಿಗಳಿಂದ ಸಂಗ್ರಹಿಸಿದ ಪ್ರಾಥಮಿಕ ಮಾಹಿತಿ ಆಧಾರದ ಮೇಲೆ ಮಹಿಳೆಯರ ಮತ ನೀಡುವ ನಿರ್ಧಾರ ಯಾರ ಕೈಯಲ್ಲಿದೆ ಎಂಬುದು ಪರಿಶೀಲಿಸಲಾಗಿದೆ. ಪ್ರಾಥಮಿಕ ಮೂಲದಿಂದ ಪಡೆದ ಮಾಹಿತಿಯನ್ನು ಅಂಕಿ ಅಂಶಗಳ ರೂಪದಲ್ಲಿ ಸಂಗ್ರಹಿಸಿ ಕೋಷ್ಟಕವನ್ನು ತಯಾರಿಸಲಾಗಿದೆ(ನೋಡಿ ಕೋಷ್ಟಕ–4.2).

ಬಯಲುಸೀಮೆ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಹೊಸೂರು ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶನ ಮಾಡಿದ 68 ಮಾಹಿತಿದಾರರಲ್ಲಿ ಶೇ.51(35) ಮಹಿಳೆಯರು ಇದ್ದಾರೆ. ಇವರ ಪ್ರಕಾರ ಮಹಿಳೆಯರ ಮತ ನೀಡುವ ನಿರ್ಧಾರವನ್ನು ಪರಿಶೀಲಿಸಿದಾಗ, ಸಂದರ್ಶಿಸಿದ 33 ಪುರುಷ ಮಾಹಿತಿದಾರರ ಪ್ರಕಾರ, ಶೇ.100 ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ಹಾಗೆಯೇ ಸಂದರ್ಶನ ಮಾಡಿದ 35 ಮಹಿಳಾ ಮಾಹಿತಿದಾರರಲ್ಲಿ ಶೇ.80(28) ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತದಾನ ಮಾಡುವುದಾಗಿ ತಿಳಿಸಿದ್ದಾರೆ(ನೋಡಿ ಕೋಷ್ಟಕ–13).

ನಾಗೇನಹಳ್ಳಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶನ ಮಾಡಿದ 79 ಮಾಹಿತಿದಾರರಲ್ಲಿ 38(ಶೇ.48) ಮಹಿಳೆಯರು ಇದ್ದಾರೆ. ಇವರ ಪ್ರಕಾರ ಮಹಿಳೆಯರ ಮತ ನೀಡುವ ನಿರ್ಧಾರವನ್ನು ಪರಿಶೀಲಿಸಿದಾಗ, ಮಾಹಿತಿ ನೀಡಿದ 41 ಪುರುಷ ಮಾಹಿತಿದಾರರಲ್ಲಿ ಶೇ.76(31) ಪುರುಷರ ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಹಾಗೂ ಶೇ.24(10) ಪುರುಷ ಮಾಹಿತಿದಾರರ ಪ್ರಕಾರ, ಮಹಿಳೆಯರು ಅವರ ಸ್ವನಿರ್ಧಾರದಂತೆ ಮತ ಚಲಾಯಿಸುತ್ತಾರೆಂದು ತಿಳಿಸಿದ್ದಾರೆ. ಹಾಗೇಯೇ, ಮಾಹಿತಿ ನೀಡಿದ 38 ಮಹಿಳಾ ಮಾಹಿತಿದಾರರಲ್ಲಿ ಶೇ.63(24) ಮಹಿಳೆಯರು ಪುರುಷರ ನಿರ್ಧಾರದಂತೆ ಹಾಗೂ ಶೇ.37ರಷ್ಟು ಮಹಿಳೆಯರು ಸ್ವನಿರ್ಧಾರದಂತೆ ಮತ ಚಲಾಯಿಸುವುದಾಗಿ ಹೇಳಿದ್ದಾರೆ(ನೋಡಿ ಕೋಷ್ಟಕ–4.2).

ಈ ಮೇಲಿನ ಅಂಕಿ ಅಂಶಗಳನ್ನು ವಿಶ್ಲೇಷಣೆ ಮಾಡಿದಾಗ ಹೊಸೂರು ಗ್ರಾಮಪಂಚಾಯಿತಿಯಲ್ಲಿ ಶೇ.90ರಷ್ಟು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಶೇ.70ರಷ್ಟು ಮಹಿಳೆಯರು ಪುರುಷರ ನಿಯಂತ್ರಣ ಒಳಪಟ್ಟು ಮತ ನೀಡುವುದು ಕಂಡುಬರುತ್ತದೆ. ಬಯಲುಸೀಮೆಯ ಎರಡು

ಗ್ರಾಮಪಂಚಾಯಿತಿಗಳಲ್ಲಿ ಮತದಾನ ಪ್ರಕ್ರಿಯೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಹಿಳಾ ಪ್ರಾತಿನಿಧ್ಯ ಇದೆ. ಆದರೆ ಮತ ನೀಡುವ ನಿರ್ಧಾರದಲ್ಲಿ ಶೇ.79ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ಆದ್ದರಿಂದ ಈ ಎರಡು ಗ್ರಾಮಪಂಚಾಯಿತಿಗಳಲ್ಲಿ ಮಹಿಳೆ ಸಬಲೀಕರಣಗೊಂಡಿಲ್ಲ ಎಂಬ ಅಂಶ ಬೆಳಕಿಗೆ ಬಂದಿದೆ.

ಮಲೆನಾಡು ಗ್ರಾಮಪಂಚಾಯಿತಿಗಳು

ಬೇಡ್ಕಣಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 72 ಮಾಹಿತಿದಾರರಲ್ಲಿ ಶೇ.51(37)ರಷ್ಟು ಮಹಿಳೆಯರು ಇದ್ದಾರೆ. ಇವರ ಪ್ರಕಾರ ಮಹಿಳೆಯರ ಮತದಾನ ನಿರ್ಧಾರದ ಪ್ರಾತಿನಿಧ್ಯವನ್ನು ಪರಿಶೀಲಿಸಿದಾಗ, ಸಂದರ್ಶಿಸಿದ 35 ಪುರುಷ ಮಾಹಿತಿದಾರರಲ್ಲಿ ಶೇ.49(17) ಪುರುಷರ ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಹಾಗೂ ಶೇ.51(18) ಪುರುಷರ ಪ್ರಕಾರ, ಮಹಿಳೆಯರು ಅವರ ಸ್ವನಿರ್ಧಾರದಂತೆ ಮತ ನೀಡುತ್ತಾರೆಂದು ತಿಳಿಸಿದ್ದಾರೆ. ಆದರೆ ಸಂದರ್ಶಿಸಿದ 37 ಮಹಿಳಾ ಮಾಹಿತಿದಾರರಲ್ಲಿ ಶೇ.57(21) ಮಹಿಳೆಯರು ಪುರುಷರ ನಿರ್ಧಾರದಂತೆ ಹಾಗೂ ಶೇ.43(16)ರಷ್ಟು ಮಹಿಳೆಯರು ಸ್ವನಿರ್ಧಾರದಂತೆ ಮತ ಚಲಾಯಿಸುವುದಾಗಿ ಹೇಳಿದ್ದಾರೆ(ನೋಡಿ ಕೋಷ್ಟಕ–4.2).

ಕೋಲಸಿರ್ಸಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 76 ಮಾಹಿತಿದಾರರಲ್ಲಿ ಶೇ.51(39) ಮಹಿಳೆಯರಿದ್ದಾರೆ. ಇವರ ಪ್ರಕಾರ ಮಹಿಳೆಯರ ಮತ ನೀಡುವ ನಿರ್ಧಾರ ಹಕ್ಕನ್ನು ಪರಿಶೀಲಿಸಿದಾಗ, ಸಂದರ್ಶಿಸಿದ 37 ಪುರುಷ ಮಾಹಿತಿದಾರರಲ್ಲಿ ಶೇ.8(3)ರಷ್ಟು ಪುರುಷರ ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಹಾಗೂ ಶೇ.92(34) ಪುರುಷರ ಪ್ರಕಾರ, ಮಹಿಳೆಯರು ಅವರ ಸ್ವನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ಆದರೆ ಸಂದರ್ಶಿಸಿದ 39 ಮಹಿಳಾ ಮಾಹಿತಿದಾರರಲ್ಲಿ ಶೇ.28(11) ಮಹಿಳೆಯರು ಪುರುಷರ ನಿರ್ಧಾರದಂತೆ ಹಾಗೂ ಶೇ.72(28)ರಷ್ಟು ಮಹಿಳೆಯರು ಸ್ವನಿರ್ಧಾರದಂತೆ ಮತ ಚಲಾಯಿಸುವುದಾಗಿ ಹೇಳಿದ್ದಾರೆ(ನೋಡಿ ಕೋಷ್ಟಕ–4.2).

ಈ ಮೇಲಿನ ಅಂಕಿ ಅಂಶಗಳ ವಿಶ್ಲೇಷಣೆ ನೋಡಿದಾಗ, ಬೇಡ್ಕಣಿ ಗ್ರಾಮಪಂಚಾಯಿತಿಯಲ್ಲಿ ಶೇ.53ರಷ್ಟು ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಯಲ್ಲಿ ಶೇ.18ರಷ್ಟು ಮಹಿಳೆಯರ ಮತ ನೀಡುವ ನಿರ್ಧಾರ ಇಂದಿಗೂ ಪುರುಷರ ಕೈಯಲ್ಲಿರುವು ಕಂಡುಬರುತ್ತದೆ. ಮಲೆನಾಡಿನ ಎರಡು ಗ್ರಾಮಪಂಚಾಯಿತಿಗಳಲ್ಲಿ ಮತದಾನ ಪ್ರಕ್ರಿಯೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಸಾಕಷ್ಟು ಪ್ರಮಾಣದಲ್ಲಿದೆ. ಆದರೆ ಮತ ನೀಡುವ ನಿರ್ಧಾರದಲ್ಲಿ ಶೇ.36ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ಆದ್ದರಿಂದ ಈ ಎರಡು ಗ್ರಾಮಪಂಚಾಯಿತಿಗಳಲ್ಲಿ ನಿರ್ಧಾರದ ಪ್ರಕ್ರಿಯೆಯಲ್ಲಿ ಮಹಿಳೆ ಸಬಲೀಕರಣಗೊಂಡಿಲ್ಲ ಎಂಬ ಅಂಶ ಬೆಳಕಿಗೆ ಬಂದಿದೆ.

ತೌಲನಿಕ ಅಧ್ಯಯನ

ಬಯಲುಸೀಮೆ ಮತ್ತು ಮಲೆನಾಡು ಗ್ರಾಮಪಂಚಾಯಿತಿಗಳಲ್ಲಿ ಮತದಾನ ಪ್ರಕ್ರಿಯೆಯಲ್ಲಿ ಮಹಿಳೆಯರು ನಿರೀಕ್ಷಿತ ಪ್ರಮಾಣದಲ್ಲಿ ಪ್ರಾತಿನಿಧ್ಯ ಇರುವುದು ಕಂಡುಬರುತ್ತದೆ. ಆದರೆ ಮಹಿಳೆಯರ ಮತದಾನದ ನಿರ್ಧಾರದಲ್ಲಿ ಬಯಲುಸೀಮೆ ಪಂಚಾಯಿತಿಗಳಿಗೆ ಹೋಲಿಸಿದರೆ ಮಲೆನಾಡು ಪಂಚಾಯಿತಿಗಳಲ್ಲಿ ಸುಧಾರಣೆ ಕಂಡುಬರುತ್ತದೆ. ಬಯಲುಸೀಮೆಯ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಲ್ಲಿ 147 ಮಾಹಿತಿದಾರರನ್ನು ಸಂದರ್ಶನ ಮಾಡಿದೆ. ಇವರಲ್ಲಿ 74 ಪುರುಷ ಮತ್ತು 73 ಮಹಿಳೆಯರು ಇದ್ದಾರೆ. ಈ 147 ಮಾಹಿತಿದಾರರಲ್ಲಿ ಶೇ.79ರಷ್ಟು ಮಾಹಿತಿದಾರರ ಪ್ರಕಾರ ಮಹಿಳೆಯರು ಪುರುಷರ ನಿರ್ಧಾರದಂತೆ ಹಾಗೂ ಶೇ.21ರಷ್ಟು ಮಾಹಿತಿದಾರರ ಪ್ರಕಾರ ಮಹಿಳೆಯರು ಸ್ವನಿರ್ಧಾರದಂತೆ ಮತ ನೀಡುವುದಾಗಿ ಹೇಳಿದ್ದಾರೆ. ಮಲೆನಾಡಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಲ್ಲಿ 148 ಮಾಹಿತಿದಾರರನ್ನು ಸಂದರ್ಶನ ಮಾಡಿದೆ. ಇವರಲ್ಲಿ 72 ಪುರುಷ ಮತ್ತು 76 ಮಹಿಳೆಯರು ಇದ್ದಾರೆ. ಈ 148 ಮಾಹಿತಿದಾರರಲ್ಲಿ ಶೇ.35ರಷ್ಟು ಮಾಹಿತಿದಾರರ ಪ್ರಕಾರ ಮಹಿಳೆಯರು ಪುರುಷ ನಿರ್ಧಾರದಂತೆ ಹಾಗೂ ಶೇ.65ರಷ್ಟು ಮಾಹಿತಿದಾರರ ಪ್ರಕಾರ ಮಹಿಳೆಯರು ಸ್ವನಿರ್ಧಾರದಂತೆ ಮತ ನೀಡುವುದಾಗಿ ಹೇಳಿದ್ದಾರೆ. ಈ ಪ್ರಮಾಣವನ್ನು ಮಲೆನಾಡಿನ ಎರಡು ಗ್ರಾಮಪಂಚಾಯಿತಿಗಳಿಗೆ ಹೋಲಿಸಿದರೆ, ಬಯಲುಸೀಮೆಯ ಪಂಚಾಯಿತಿಗಳಲ್ಲಿ ಶೇ.44ರಷ್ಟು ಹೆಚ್ಚು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ಹಾಗೆಯೇ ಬಯಲುಸೀಮೆಗಿಂತ ಮಲೆನಾಡು ಪಂಚಾಯಿತಿಗಳಲ್ಲಿ ಶೇ.44ರಷ್ಟು ಹೆಚ್ಚು ಮಹಿಳೆಯರು ಸ್ವನಿರ್ಧಾರದಂತೆ ಮತಾಧಿಕಾರ ಚಲಾಯಿಸುವುದು ಕಂಡುಬರುತ್ತದೆ. ಆದ್ದರಿಂದ ಬಯಲುಸೀಮೆ ಪಂಚಾಯಿತಿಗಳ ಮಹಿಳೆಯರಿಗಿಂತ ಮಲೆನಾಡು ಪಂಚಾಯಿತಿಗಳ ಮಹಿಳೆಯರು ಶೇ.44ರಷ್ಟು ಸಬಲೀಕರಣಗೊಂಡಿರುವರೆಂದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಬಯಲುಸೀಮೆ ಮತ್ತು ಮಲೆನಾಡು ಪ್ರದೇಶಗಳ ಈ ನಾಲ್ಕು ಗ್ರಾಮಪಂಚಾಯಿತಿಗಳ 295 ಮಾಹಿತಿದಾರರಲ್ಲಿ 146(ಶೇ.49) ಪುರುಷರು ಮತ್ತು 149(ಶೇ.51) ಮಹಿಳಾ ಮಾಹಿತಿದಾರರು ಇದ್ದಾರೆ. ಸಂದರ್ಶಿಸಿದ ಎಲ್ಲಾ 295 ಮಾಹಿತಿದಾರರಲ್ಲಿ ಶೇ.57(168) ಸದಸ್ಯರು ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುತ್ತಾರೆಂದು ಹೇಳಿದ್ದಾರೆ. ಇವರಲ್ಲಿ ಕ್ರಮವಾಗಿ ಶೇ.50ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರಿದ್ದಾರೆ. ಹಾಗಯೇ ಶೇ.43(127) ಮಾಹಿತಿದಾರರ ಪ್ರಕಾರ, ಮಹಿಳೆಯರು ಸ್ವಇಚ್ಚೆಯಂತೆ ಮತ ನೀಡುತ್ತಾರೆಂದು ಹೇಳಿದ್ದಾರೆ. ಇವರಲ್ಲಿ ಶೇ.49 ಪುರುಷ ಮತ್ತು ಶೇ.51 ಮಹಿಳಾ ಮಾಹಿತಿದಾರರಿದ್ದಾರೆ. ಹಾಗೇ ಸಂದರ್ಶಿಸಿದ 149 ಮಹಿಳಾ ಮಾಹಿತಿದಾರರಲ್ಲಿ ಶೇ.56(84)ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವುದಾಗಿ ಮತ್ತು ಶೇ.44.(65) ಮಹಿಳಾ ಮಾಹಿತಿದಾರರು ಸ್ವನಿರ್ಧಾರದಂತೆ ಮತ ನೀಡುವುದಾಗಿ ತಿಳಿಸಿದ್ದಾರೆ. ಈ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದಾಗ, ಶೇ.57ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತದಾನ ಮಾಡಿದಂತಾಗುತ್ತದೆ. ಅಲ್ಲದೇ ಮಹಿಳೆಯರಲ್ಲೇ ಶೇ.56ರಷ್ಟು ಮಹಿಳೆಯರಿಗೆ ಮತ

ನೀಡುವ ಸ್ವನಿರ್ಧಾರ ಇಲ್ಲವಾಗಿದೆ. ಇವರು ಪುರುಷರ ನಿರ್ಧಾರದಂತೆ ಮತದಾನ ಮಾಡುವುದಾಗಿ ಕಂಡುಬರುತ್ತದೆ. ಆದ್ದರಿಂದ ರಾಜ್ಯದ ಶೇ.57ರಷ್ಟು ಗ್ರಾಮೀಣ ಮಹಿಳೆಯರು ರಾಜಕೀಯವಾಗಿ ಸಬಲೀಕರಣಗೊಂಡಿಲ್ಲ.

4.4 ವಯಸ್ಸು: ಮಹಿಳಾ ಮತದಾನ ಮತ್ತು ಮಹಿಳಾ ಸಬಲೀಕರಣ

ವಯಸ್ಸಿನ ಆಧಾರದ ಮೇಲೆ ವ್ಯಕ್ತಿ ತನ್ನ ಬದುಕಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಪ್ರತಿನಿಧಿಸುವ, ನಿರ್ಧಾರ ಕೈಗೊಳ್ಳುವ ಮತ್ತು ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಹಕ್ಕು ಮತ್ತು ಸ್ವಾತಂತ್ರ್ಯಗಳು ಇರುತ್ತವೆ. ಅಂದರೆ ವಯಸ್ಕರು ನಾಗರಿಕರಾಗಿ, ಮತದಾರರಾಗಿ, ಜನಪ್ರತಿನಿಧಿಗಳಾಗಿ ತಮ್ಮ ಇಚ್ಚೆ ವ್ಯಕ್ತಪಡಿಸುವ ಮತ್ತು ನಿರ್ಧಾರ ಕೈಗೊಳ್ಳುವ ಪ್ರಾತಿನಿಧ್ಯದ ಹಕ್ಕು ಮತ್ತು ಸ್ವಾತಂತ್ರ್ಯಗಳು ಇರುತ್ತವೆ. ಜನತಂತ್ರ ವಿಕೇಂದ್ರೀಕರಣವನ್ನು ಒಪ್ಪಿಕೊಂಡ ರಾಷ್ಟ್ರದಲ್ಲಿ ಸಾರ್ವಜನಿಕವಾಗಿ ಸ್ತ್ರೀ-ಪುರುಷರಿಗೆ ಸಮಾನ ಪ್ರಾತಿನಿಧ್ಯವಿರುತ್ತದೆ. ಶಾಸನಾತ್ಮಕವಾಗಿ 18 ವರ್ಷ ತುಂಬಿದ ಸ್ತ್ರೀ-ಪುರುಷರಿಗೆ ಸಮಾನವಾಗಿ ಮತದಾನದ ಹಕ್ಕು ಲಭಿಸುತ್ತದೆ. ಹಾಗೆಯೇ, ಮತದಾನದಲ್ಲಿ ಭಾಗವಹಿಸುವ ಮತ್ತು ಇಚ್ಛಿಸಿದ ಅಭ್ಯರ್ಥಿಗೆ ಅಥವಾ ಪಕ್ಷಕ್ಕೆ ಮತ ನೀಡುವ ನಿರ್ಧಾರವನ್ನು ತೆಗೆದುಕೊಳ್ಳುವ ಹಕ್ಕು, ಸ್ವಾತಂತ್ರ್ಯ ಸ್ತ್ರೀ-ಪುರುಷರಿಬ್ಬರಿಗೂ ಸಮಾನವಾಗಿ ಇರುತ್ತದೆ.

ಭಾರತದಲ್ಲಿ ಜನತಂತ್ರ ವ್ಯವಸ್ಥೆ ವಿಕೇಂದ್ರೀಕರಣಮುಖಿಯಾಗಿ ಸಾಗುತ್ತಿದೆ. ಆದರೆ ರಾಜಕಾರಣ, ಮತದಾನ ಮತ್ತು ಉಮೇದುವಾರಿಕೆಗಳು ಪುರುಷಶಾಹಿಮುಖಿಯಾಗಿ ಬೆಳೆದುಬಂದಿವೆ. ನಮ್ಮ ಜನತಂತ್ರ ವ್ಯವಸ್ಥೆಗೆ ಅಡಿಪಾಯವಾದ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಶಾಸನಾತ್ಮಕವಾಗಿ ಮಹಿಳಾ ಪ್ರಾತಿನಿಧ್ಯಕ್ಕೆ ಮೀಸಲಾತಿ ನೀಡಲಾಗಿದೆ. ಜನತಂತ್ರ ವಿಕೇಂದ್ರೀಕರಣದ ಅನಿವಾರ್ಯತೆಯಿಂದಾಗಿ ಪುರುಷರು ಒಲ್ಲದ ಮನಸ್ಸಿನಿಂದ ಮಹಿಳಾ ಪ್ರಾತಿನಿಧ್ಯವನ್ನು ಒಪ್ಪಿಕೊಂಡಿದ್ದಾರೆ. ಅಲ್ಲದೇ ರಾಜಕೀಯ ಸಂಸ್ಥೆಯಲ್ಲಿ ಮಹಿಳಾ ಸಹಭಾಗಿತ್ವ ಮತ್ತು ಪ್ರಾತಿನಿಧ್ಯವನ್ನು ಪರೋಕ್ಷವಾಗಿ ನಿಯಂತ್ರಿಸುವ ಅಥವಾ ಕಿತ್ತುಕೊಳ್ಳುವ ಪ್ರಯತ್ನವನ್ನು ಪುರುಷ ನಿರಂತರವಾಗಿ ಮಾಡುತ್ತಿದ್ದಾನೆ. ಮಹಿಳೆಯನ್ನು ಸಂತಾನೋತ್ಪತ್ತಿ ಮತ್ತು ಸಂಗೋಪನಾ ದುಡಿಮೆಗೆ ಸೀಮಿತಗೊಳಿಸಿ, ಅವರ ರಾಜಕೀಯ ಪ್ರಾತಿನಿಧ್ಯವನ್ನು ಭೌತಿಕ ಪ್ರಾತಿನಿಧ್ಯಕ್ಕೆ ಅಷ್ಟೇ ಸೀಮಿತಗೊಳಿಸಿದ್ದಾನೆ. ಶಾಸನಾತ್ಮಕವಾಗಿ ಮಹಿಳೆ ಪ್ರಜೆಯಾಗಿ, ಮತದಾರಳಾಗಿ, ಜನಪ್ರತಿನಿಧಿಯಾಗಿ ಪ್ರಾತಿನಿಧ್ಯ ಪಡೆಯುವ ಅರ್ಹತೆಯುಳ್ಳವಳಾಗಿದ್ದಾಳೆ. ಮಹಿಳೆ ಪ್ರಜೆಯಾಗಿ ತನ್ನ ವೈಯಕ್ತಿಕ ಬದುಕಿಗೆ, ಮತದಾರಳಾಗಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಬಗ್ಗೆ ಮತ್ತು ಜನಪ್ರತಿನಿಧಿಯಾಗಿ ಸಮುದಾಯದ ಬದುಕಿನ ಬಗ್ಗೆ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯ, ಶಕ್ತಿ ಸಾಮರ್ಥ್ಯ ಇದೆ. ಆದರೆ ಮಹಿಳೆ ಲಿಂಗ ಅಸಮಾನತೆಯನ್ನು ಮೀರಿ ವಯಸ್ಸಿನ ಆಧಾರದ ಮೇಲೆ ಸ್ವತಂತ್ರವಾಗಿ ಮತದಾನ ಮಾಡುವ ನಿರ್ಧಾರ ತೆಗೆದುಕೊಳ್ಳುತ್ತಾಳೆಯೇ ಎಂದು ಪರೀಕ್ಷಿಸುವುದೇ ಈ ಅಧ್ಯಾಯದ ಉದ್ದೇಶವಾಗಿದೆ. ಮಹಿಳಾ ನಿರ್ಧಾರದ ಸ್ವಾತಂತ್ರ್ಯ ಅಥವಾ ಧಾರಣ ಸಾಮರ್ಥ್ಯವನ್ನೇ ಮಹಿಳಾ ಸಬಲೀಕರಣವೆಂದು ಪರಿಭಾವಿಸಿಕೊಳ್ಳಲಾಗಿದೆ.

ಮತದಾನದ ಪ್ರಾತಿನಿಧ್ಯ ಪಡೆಯಲು ವಯಸ್ಸು ಪ್ರಮುಖ ಘಟ್ಟವಾಗಿದೆ. 18 ವರ್ಷ ತುಂಬಿದ ಮಹಿಳೆಯರು ಸಮಾನವಾಗಿ ಮತದಾನದ ಹಕ್ಕು ಪಡೆಯುತ್ತಾರೆ. ಇವರು ಸ್ವನಿರ್ಧಾರಕ್ಕೆ ಬದ್ಧವಾಗಿ ಮತ ನೀಡುವ ಸ್ವಾತಂತ್ರ್ಯವೂ ಇವರಿಗೆ ಇರುತ್ತದೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನಾತ್ಮಕ ಆಡಳಿತವನ್ನು ಗೊತ್ತಿದ್ದು ಅಥವಾ ಗೊತ್ತಿಲ್ಲದೆಯೋ ಇದನ್ನು ಒಪ್ಪಿಕೊಂಡ ಗ್ರಾಮೀಣ ಸಮಾಜವು ಮಹಿಳೆಯರಿಗೆ ಮತದಾನ ಪ್ರಕ್ರಿಯೆಯಲ್ಲಿ ಪ್ರಾತಿನಿಧ್ಯ ನೀಡಿದೆ. ಆದರೆ ಮತ ನೀಡುವ ನಿರ್ಧಾರದಲ್ಲಿ ಪ್ರಾತಿನಿಧ್ಯ ನೀಡಿದೆಯೇ ಎಂದು ಪರಿಶೀಲಿಸಲಾಗಿದೆ. ಇದನ್ನು ಪರೀಕ್ಷಿಸಲು ವಯಸ್ಸನ್ನು ಒಂದು ಸೂಚ್ಯಂಕವಾಗಿ ಬಳಸಿಕೊಳ್ಳಲಾಗಿದೆ. ಈ ಬಗ್ಗೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳ ಚುನಾವಣೆಗಳಲ್ಲಿ ಆಯ್ಕೆಯಾದ ಜನಪ್ರತಿನಿಧಿಗಳನ್ನು ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ ಅಭ್ಯರ್ಥಿಗಳನ್ನು ಮಾಹಿತಿದಾರರನ್ನಾಗಿ ಆಯ್ಕೆಮಾಡಿಕೊಂಡು, ಅವರ ವಯಸ್ಸನ್ನು ಮೂರು ಹಂತಗಳನ್ನಾಗಿ ವರ್ಗೀಕರಿಸಲಾಗಿದೆ. ಒಂದು, 18ರಿಂದ 35 ವರ್ಷ, ಎರಡು, 36ರಿಂದ 50 ವರ್ಷ ಮತ್ತು ಮೂರು, 51 ವರ್ಷ ಮೇಲ್ಪಟ್ಟವರು. ಈ ಮೂರು ಹಂತಗಳ ವಯಸ್ಸಿನವರನ್ನು ಕ್ರಮವಾಗಿ ಯುವಕರು, ಮಧ್ಯಮ ವಯಸ್ಕರು ಮತ್ತು ಹಿರಿಯ ನಾಗರಿಕರು ಎಂದು ವಿಂಗಡಿಸಲಾಗಿದೆ. ವಯಸ್ಕರು ಹೊಸ(ಆಧುನಿಕ) ಪೀಳಿಗೆಯವರಾದರೆ, ಹಿರಿಯ ನಾಗರಿಕರು ಹಳೆಯ(ಸಂಪ್ರದಾಯ) ತಲೆಮಾರಿನವರಾಗಿದ್ದಾರೆ. ಮಧ್ಯಮ ವಯಸ್ಕರು ಈ ಎರಡು ತಲೆಮಾರಿನ ಮಧ್ಯದ ಕೊಂಡಿಯಾಗಿರುವರು ಎಂದು ಪರಿಭಾವಿಸಿಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿ ಮಾಹಿತಿದಾರರಿಂದ ಸಂಗ್ರಹಿಸಿದ ಪ್ರಾಥಮಿಕ ಮಾಹಿತಿ ಆಧಾರದ ಮೇರೆಗೆ ಮಹಿಳಾ ಮತದಾನದ ನಿರ್ಧಾರವನ್ನು ಪರೀಕ್ಷಿಸಲಾಗಿದೆ.

ಈ ಅಧ್ಯಾಯದ ಹಿಂದಿನ ಭಾಗದಲ್ಲಿ ಲಿಂಗ ಸೂಚ್ಯಂಕದ ಮೇರೆಗೆ ಸದಸ್ಯರ ಮತ ನೀಡುವ ನಿರ್ಧಾರವನ್ನು ಪರಿಶೀಲಿಸಲಾಗಿದೆ. ಆದರೆ ಈ ಭಾಗದಲ್ಲಿ ವಯಸ್ಸಿನ ಸೂಚ್ಯಂಕದ ಮೇರೆಗೆ ಮಹಿಳಾ ಮತ ನೀಡುವ ನಿರ್ಧಾರವನ್ನು ಮಾಪನ ಮಾಡಲಾಗಿದೆ. ಗ್ರಾಮೀಣ ಸಮುದಾಯದಲ್ಲಿ ವಯಸ್ಸಿನ ಆಧಾರದ ಮೇಲೆ ಮತದಾನದ ನಿರ್ಧಾರ ಮಹಿಳೆಯರಲ್ಲಿ ಇದೆಯೇ ಅಥವಾ ಪುರುಷರಲ್ಲಿ ಇದೆಯೇ ಎಂದು ನೋಡುವುದು ಈ ಅಧ್ಯಯನದ ಉದ್ದೇಶವಾಗಿದೆ. ಯಾವ ಹಂತದ ವಯಸ್ಸಿನ ಪುರುಷರು ಮಹಿಳೆಯರಿಗೆ ಅವರ ಸ್ವಇಚ್ಛೆಯಂತೆ ಮತ ನೀಡುವ ಅಧಿಕಾರ ನೀಡಿದ್ದಾರೆ ಮತ್ತು ಯಾವ ವಯಸ್ಸಿನ ಮಹಿಳೆಯರು ಸ್ವನಿರ್ಧಾರದಂತೆ ಮತದಾನ ಮಾಡುತ್ತಾರೆ. ಅದು ಯಾವ ಪ್ರಮಾಣದಲ್ಲಿದೆ ಎಂಬುದನ್ನು ನೋಡಲಾಗಿದೆ. ಮಹಿಳಾ ಮತದಾನದ ನಿರ್ಧಾರದ ಬಗ್ಗೆ ಸ್ತ್ರೀ–ಪುರುಷ ಮಾಹಿತಿದಾರರು ನೀಡಿರುವ ಮಾಹಿತಿಯನ್ನು ವಯಸ್ಸಿನ ಆಧಾರದ ಮೇಲೆ ವರ್ಗೀಕರಿಸಿಕೊಂಡು ಪ್ರತ್ಯೇಕವಾಗಿ ಮತ್ತು ಪರಸ್ಪರ ಹೋಲಿಕೆ ಮಾಡಿ ಸಾಮಾನ್ಯೀಕರಣಗೊಳಿಸಲಾಗಿದೆ (ನೋಡಿ ಕೋಷ್ಟಕ–4.3). ಇದರ ಆಧಾರದ ಮೇಲೆ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ.

ಬಯಲುಸೀಮೆ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಚುನಾವಣಾ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 68 ಮಾಹಿತಿದಾರರಲ್ಲಿ ಶೇ.51(35)ರಷ್ಟು ಮಹಿಳಾ ಮಾಹಿತಿದಾರರಾಗಿದ್ದಾರೆ. ಸಂದರ್ಶಿಸಲಾದ 33 ಪುರುಷ ಮಾಹಿತಿದಾರರಲ್ಲಿ ಶೇ.24(8)ರಷ್ಟು 18ರಿಂದ 35 ವರ್ಷ, ಶೇ.52(17)ರಷ್ಟು 36ರಿಂದ 50 ವರ್ಷ ಮತ್ತು ಶೇ.24(8)ರಷ್ಟು 51ವರ್ಷ ಮೇಲ್ಪಟ್ಟವರಾಗಿದ್ದಾರೆ. ಈ ಎಲ್ಲಾ 33 ಪುರುಷ ಮಾಹಿತಿದಾರರ ಪ್ರಕಾರ, ಮಹಿಳೆಯರು ಚುನಾವಣೆಯಲ್ಲಿ ಪುರುಷರ ನಿಯಂತ್ರಣಕ್ಕೆ ಒಳಪಟ್ಟು, ಅವರು ಸೂಚಿಸಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುತ್ತಾರೆ ಎಂದು ತಿಳಿಸಿದ್ದಾರೆ. ಒಟ್ಟಾರೆಯಾಗಿ, ಈ ಗ್ರಾಮಪಂಚಾಯಿತಿಯ ಪುರುಷರ ಪ್ರಕಾರ ಶೇ.100ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಹಾಗೆಯೇ ಸಂದರ್ಶಿಸಲಾದ 35 ಮಹಿಳಾ ಮಾಹಿತಿದಾರರಲ್ಲಿ ಶೇ.60(21)ರಷ್ಟು 18ರಿಂದ 35 ವಯಸ್ಸಿನವರಾಗಿದ್ದು, ಇವರಲ್ಲಿ ಶೇ.81ರಷ್ಟು ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತ ಚಲಾಯಿಸುವುದಾಗಿ ತಿಳಿಸಿದ್ದಾರೆ. 36ರಿಂದ 50 ವರ್ಷದ ಶೇ.20(7)ರಷ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.57ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುವುದಾಗಿ ತಿಳಿಸಿದ್ದಾರೆ. 51ವರ್ಷ ಮೇಲ್ಪಟ್ಟ ಶೇ.20(7)ರಷ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.100ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದಾಗಿ ಹೇಳಿದ್ದಾರೆ. ಒಟ್ಟು 35 ಮಹಿಳಾ ಮಾಹಿತಿದಾರರಲ್ಲಿ ಶೇ.80 ಮಹಿಳೆಯರು ಪುರುಷರ ನಿರ್ಧಾರದಂತೆ ಹಾಗೂ ಶೇ.20 ಮಹಿಳೆಯರು ಸ್ವನಿರ್ಧಾರದಂತೆ ಮತ ಚಲಾಯಿಸುವುದಾಗಿ ಹೇಳಿದ್ದಾರೆ(ನೋಡಿ ಕೋಷ್ಟಕ–4.3). ಒಟ್ಟಾರೆಯಾಗಿ ಹೊಸೂರು ಗ್ರಾಮಪಂಚಾಯಿತಿಯಲ್ಲಿ ಶೇ.90ರಷ್ಟು ಮಹಿಳೆಯರ ಮತ ನೀಡುವ ನಿರ್ಧಾರ ಪುರುಷರಲ್ಲೇ ಇರುವುದು ಕಂಡುಬರುತ್ತದೆ. ಸ್ವನಿರ್ಧಾರದಂತೆ ಮತದಾನ ಮಾಡುವುದಾಗಿ ಹೇಳಲಾದ ಶೇ.10(7)ರಷ್ಟು ಮಹಿಳೆಯರಲ್ಲಿ 18ರಿಂದ 35 ವರ್ಷದ 4 ಮಹಿಳೆಯರು ಮತ್ತು 36ರಿಂದ 50 ವರ್ಷದ 3 ಮಹಿಳೆಯರಾಗಿದ್ದಾರೆ. ಈ ಪಂಚಾಯಿತಿಯಲ್ಲಿ ಪುರುಷಪ್ರಧಾನ ಸಂಪ್ರದಾಯಗಳು ಗಟ್ಟಿಯಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಈ ಪಂಚಾಯಿತಿಯಲ್ಲಿ ಪರಿಶಿಷ್ಟರು ಬಹುಸಂಖ್ಯಾತರಾಗಿದ್ದು, ಇವರು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಆದ್ದರಿಂದ ಮತದಾನ ಪ್ರಕ್ರಿಯೆಯಲ್ಲಿ ಕಂಡುಬರುವ ಮಹಿಳಾ ಪ್ರಾತಿನಿಧ್ಯ ಮತ ನೀಡುವ ನಿರ್ಧಾರದಲ್ಲಿ ಇಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗಾಗಿ ಈ ಪಂಚಾಯಿತಿಯ ಮಹಿಳೆಯರು ಸಬಲೀಕರಣಗೊಂಡಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ನಾಗೇನಹಳ್ಳಿ ಗ್ರಾಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಚುನಾವಣಾ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 79 ಮಾಹಿತಿದಾರರಲ್ಲಿ ಶೇ.48(38)ರಷ್ಟು ಮಹಿಳಾ ಮಾಹಿತಿದಾರರಾಗಿದ್ದಾರೆ. ಸಂದರ್ಶಿಸಿದ 41 ಪುರುಷ ಮಾಹಿತಿದಾರರಲ್ಲಿ ಶೇ.37(15) ಸದಸ್ಯರು 18ರಿಂದ 35 ವರ್ಷದವರಾಗಿದ್ದು, ಇವರ ಪ್ರಕಾರ, ಶೇ.100ರಷ್ಟು ಮಹಿಳೆಯರು

ಪುರುಷ ನಿರ್ಧಾರದಂತೆ ಮತ ನೀಡುತ್ತಾರೆಂದು ತಿಳಿಸಿದ್ದಾರೆ. 36ರಿಂದ 50 ವರ್ಷದ ಶೇ.44(18) ಮಾಹಿತಿದಾರರಿದ್ದು ಇವರ ಪ್ರಕಾರ, ಶೇ.72ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ ಮತ ನೀಡುತ್ತಾರೆಂದು ಹೇಳಿದ್ದಾರೆ. 51 ವರ್ಷ ಮೇಲ್ಪಟ್ಟ ಶೇ.19(8) ಮಾಹಿತಿದಾರರಿದ್ದು ಇವರ ಪ್ರಕಾರ, ಶೇ.38ರಷ್ಟು ಮಹಿಳೆಯರು ಕುಟುಂಬದ ಯಜಮಾನ ಹೇಳಿದಂತೆ ಮತ ನೀಡುತ್ತಾರೆಂದು ತಿಳಿಸಿದ್ದಾರೆ. ಈ ವಯೋಮಾನದವರ ಪ್ರಕಾರ, ಶೇ 62ರಷ್ಟು ಮಹಿಳೆಯರು ಸ್ವಇಚ್ಚೆಯಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ಇದಕ್ಕೆ ಈ ದಿನಗಳಲ್ಲಿ ಈ ವಯೋಮಾನದ ಮಹಿಳೆಯರ ಮೇಲೆ ಪುರುಷರ ಹಿಡಿತ ತಪ್ಪಿರಬಹದು ಅಥವಾ ಕೌಟುಂಬಿಕ ಮತ್ತು ಸಾಮಾಜಿಕ ಸಂಬಂಧ ಹಾಗೂ ಅನುಭವಗಳಿಂದ ಹಿನ್ನೆಲೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಮತ ಚಲಾಯಿಸಲು ಕಾರಣಗಳಿರಬಹುದೆಂದು ಗ್ರಹಿಸಲಾಗಿದೆ. ಆದರೆ ಈ ಪಂಚಾಯಿತಿಯ ಪುರಷರ ಪ್ರಕಾರ ಶೇ.76ರಷ್ಟು ಮಹಿಳೆಯರ ಮತ ಚಲಾಯಿಸುವ ಹಕ್ಕು ಪುರುಷ ನಿರ್ಧಾರದಲ್ಲಿರುವುದು ಕಂಡುಬರುತ್ತದೆ. ಅಲ್ಲದೇ ಈ ಪಂಚಾಯಿತಿಯಲ್ಲಿ ಮೇಲ್ಜಾತಿ, ಮೇಲ್ವರ್ಗದ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಮಹಿಳಾ ನಿರ್ಧಾರ ಪ್ರಕ್ರಿಯೆಯಲ್ಲಿ ಹೊಸೂರು ಗ್ರಾಮಪಂಚಾಯಿತಿಗಿಂತ ಸ್ವಲ್ಪ ಪ್ರಮಾಣದಲ್ಲಿ ಸುಧಾರಣೆ ಕಂಡುಬರುವುದನ್ನು ಗುರುತಿಸಲಾಗಿದೆ. ಹಾಗೆಯೇ ಸಂದರ್ಶಿಸಿದ 38 ಮಹಿಳಾ ಮಾಹಿತಿದಾರರಲ್ಲಿ ಶೇ.37(14) 18ರಿಂದ 35 ವರ್ಷದವರಾಗಿದ್ದು, ಇವರಲ್ಲಿ ಶೇ.43ರಷ್ಟು ಮಹಿಳೆಯರು ಪುರುಷರು ನಿರ್ಧಾರದಂತೆ ಮತ ನೀಡುವುದಾಗಿ ಹೇಳಿದ್ದಾರೆ. 36ರಿಂದ 50 ವರ್ಷದ ಶೇ.47(18)ರಷ್ಟಿರುವ ಮಹಿಳಾ ಮಾಹಿತಿದಾರಲ್ಲಿ ಶೇ.67ರಷ್ಟು ಮಹಿಳೆಯರು ಕುಟುಂಬದ ಪುರುಷರು ಹೇಳಿದಂತೆ ಮತದಾನ ಮಾಡುವುದಾಗಿ ತಿಳಿಸಿದ್ದಾರೆ. 51 ವರ್ಷದ ಮೇಲ್ಪಟ್ಟ ಶೇ.16(6)ರಷ್ಟಿರುವ ಮಹಿಳಾ ಮಾಹಿತಿದಾರರು ಶೇ.100 ಮಹಿಳೆಯರು ಕುಟುಂಬದ ಯಜಮಾನ ಹೇಳಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ಕೊಡುವುದಾಗಿ ಹೇಳಿದ್ದಾರೆ. ಈ ಪಂಚಾಯಿತಿಯಲ್ಲಿ 18ರಿಂದ 35 ವಯೋಮಾನದ ಶೇ.57ರಷ್ಟು ಮಹಿಳೆಯರ ಮತದಾನದಲ್ಲಿ ಸ್ವನಿರ್ಧಾರ ಇರುವುದು ಕಂಡುಬರುತ್ತದೆ. ಈ ಬೆಳವಣಿಗೆ ಮಹಿಳಾ ಸಬಲೀಕರಣಕ್ಕೆ ಪೂರಕವಾಗಿದೆ. ಇದಕ್ಕೆ ಆಧುನಿಕ ಶಿಕ್ಷಣ, ಮಹಿಳಾ ಸಂಘಟನಾ ಚಟುವಟಿಕೆಗಳಿಂದ ಜಾಗೃತರಾದ, ಹಕ್ಕು ಸ್ವಾತಂತ್ರ್ಯಗಳ ಬಗ್ಗೆ ಅರಿವುಳ್ಳ ಮಹಿಳೆಯರಿಂದಲೂ ಮತ್ತು ಇಂತಹ ಬೆಳವಣಿಗೆಗಳನ್ನು ಅರಿತ ಶಿಕ್ಷಿತ ಹಾಗೂ ಪ್ರಗತಿಪರ ವಿಚಾರವುಳ್ಳ ಪುರುಷರ ಸಹಕಾರದಿಂದಲೂ ಇದು ಸಾಧ್ಯವಾಗಿರಬಹುದೆಂದು ಗ್ರಹಿಸಲಾಗಿದೆ.

ಮಲೆನಾಡು ಗ್ರಾಮಪಂಚಾಯಿತಿಗಳು

ಬೇಡ್ಕಣಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಚುನಾವಣಾ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 72 ಮಾಹಿತಿದಾರರಲ್ಲಿ ಶೇ.51(37)ರಷ್ಟು ಮಹಿಳಾ ಮಾಹಿತಿದಾರರಾಗಿದ್ದಾರೆ. ಸಂದರ್ಶಿಸಿದ 35 ಪುರುಷ ಮಾಹಿತಿದಾರರಲ್ಲಿ ಶೇ.31(11) ಸದಸ್ಯರು 18ರಿಂದ 35 ವರ್ಷದವರಾಗಿದ್ದು, ಇವರ ಪ್ರಕಾರ, ಶೇ.31ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತ ನೀಡುತ್ತಾರೆಂದು ತಿಳಿಸಿದ್ದಾರೆ. 36ರಿಂದ 50 ವರ್ಷದ ಶೇ.40(14)

ಮಾಹಿತಿದಾರರಿದ್ದು, ಇವರ ಪ್ರಕಾರ, ಶೇ.50ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ ಮತ ನೀಡುತ್ತಾರೆಂದು ಹೇಳಿದ್ದಾರೆ. 51 ವರ್ಷ ಮೇಲ್ಪಟ್ಟ ಶೇ.29(10) ಮಾಹಿತಿದಾರರಿದ್ದು ಇವರ ಪ್ರಕಾರ, ಶೇ.70ರಷ್ಟು ಮಹಿಳೆಯರು ಕುಟುಂಬದ ಯಜಮಾನ ಹೇಳಿದಂತೆ ಮತ ನೀಡುತ್ತಾರೆಂದು ತಿಳಿಸಿದ್ದಾರೆ. ಒಟ್ಟಾರೆಯಾಗಿ, ಬೇಡ್ಕಣಿ ಗ್ರಾಮಪಂಚಾಯಿತಿಯ ಪುರುಷರ ಪ್ರಕಾರ ಶೇ.51ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಈ ಮೂರು ವರ್ಗದ ವಯೋಮಾನದವರಲ್ಲಿ 18ರಿಂದ 35ರ ವರ್ಷದೊಳಗಿನ ಯುವಕರು ಪ್ರಕಾರ ಶೇ.64ರಷ್ಟು ಮಹಿಳೆಯರು ಸ್ವನಿರ್ಧಾದಂತೆ ಮತ ಚಲಾಯಿಸುತ್ತಿರುವುದು ಮಹಿಳಾ ಸಬಲೀಕರಣಕ್ಕೆ ಅತ್ಯಂತ ಪೂರಕವಾದ ಸಂಗತಿಯಾಗಿದೆ. ಹಾಗೆಯೇ ಈ ಪಂಚಾಯಿತಿಯ ಚುನಾವಣಾ ಪ್ರಾತಿನಿಧ್ಯ ಹೊಂದಿದ 37 ಮಹಿಳಾ ಅಭ್ಯರ್ಥಿಗಳಲ್ಲಿ ಶೇ.40(15)ರಷ್ಟು 18ರಿಂದ 35 ವಯಸ್ಸಿನವರಿದ್ದು, ಇವರಲ್ಲಿ ಶೇ.55ರಷ್ಟು ಮಹಿಳೆಯರು ಪುರುಷರು ನಿರ್ಧಾರದಂತೆ ಮತ ನೀಡುವುದಾಗಿ ಹೇಳಿರುತ್ತಾರೆ. 36ರಿಂದ 50 ವಯಸ್ಸಿನ ಶೇ.49(18)ರಷ್ಟು ಮಹಿಳಾ ಅಭ್ಯರ್ಥಿಗಳಲ್ಲಿ ಶೇ.27ರಷ್ಟು ಮಹಿಳೆಯರು ಕುಟುಂಬದ ಪುರುಷರು ಹೇಳಿದಂತೆ ಮತದಾನ ಮಾಡುವುದಾಗಿ ತಿಳಿಸಿದ್ದಾರೆ. 51 ವರ್ಷ ಮೇಲ್ಪಟ್ಟ ಶೇ.11(4)ರಷ್ಟು ಮಹಿಳಾ ಮಾಹಿತಿದಾರಲ್ಲಿ ಶೇ.100ರಷ್ಟು ಮಹಿಳೆಯರು ಕುಟುಂಬದ ಯಜಮಾನ ಹೇಳಿದ ಅಭ್ಯರ್ಥಿಗೆ/ ಪಕ್ಷಕ್ಕೆ ಮತನೀಡುತ್ತಾರೆಂದು ಹೇಳಿದ್ದಾರೆ(ನೋಡಿ ಕೋಷ್ಟಕ–4.3). ಈ ಪಂಚಾಯಿತಿಯ ಮಹಿಳಾ ಮಾಹಿತಿದಾರರ ಪ್ರಕಾರ, ಶೇ.59ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವುದು ಕಂಡುಬರುತ್ತದೆ. 51 ವರ್ಷ ಮೇಲ್ಪಟ್ಟ ವಯಸ್ಸಿನ ಮಹಿಳೆಯರಲ್ಲಿ ಸ್ವನಿರ್ಧಾರದ ಪ್ರಾತಿನಿಧ್ಯ ಇಲ್ಲದಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ, ಈ ಪಂಚಾಯಿತಿಯಲ್ಲಿ ಶೇ.56ರಷ್ಟು ಮಹಿಳೆಯರು ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ಈ ಪಂಚಾಯಿತಿಯ 36ರಿಂದ 50 ವಯೋಮಾನದ ಮಹಿಳೆಯರಲ್ಲಿ ಸ್ವನಿರ್ಧಾರದಂತೆ ಮತ ನೀಡುವ ಪ್ರಮಾಣವು ಹೆಚ್ಚಿರುವುದು ಕಂಡುಬರುತ್ತದೆ. ಉಳಿದಂತೆ ಯುವತಿಯರಲ್ಲಿ ಮತ್ತು ವಯಸ್ಸಾದ ಮಹಿಳೆಯರಲ್ಲಿ ಸ್ವನಿರ್ಧಾರದ ಪ್ರಮಾಣ ತುಂಬಾ ಕಡಿಮೆ ಇದೆ. ಇದಕ್ಕೆ ಇಲ್ಲಿಯ ವೈದಿಕ ಮತ್ತು ಪುರುಷಪ್ರಧಾನ ಸಮಾಜದ ಸಂಪ್ರದಾಯಗಳಿಂದ ಮಹಿಳೆ ಹೊರಬಂದಂತೆ ಕಾಣುತ್ತಿಲ್ಲ. ಈ ಪ್ರಮಾಣವನ್ನು ಪುರುಷ ಮತ್ತು ಮಹಿಳೆಯರಿಗೆ ಪರಸ್ಪರ ಹೋಲಿಸಿದಾಗ ಮಹಿಳೆಯರಲ್ಲಿ ಸ್ವನಿರ್ಧಾರದಂತೆ ಮತದಾನ ಮಾಡುವ ಪ್ರಮಾಣ ಶೇ.8ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಈ ಪಂಚಾಯಿತಿಯಲ್ಲಿ ಪರಿಶಿಷ್ಟರು ತೀರ ಕಡಿಮೆಯಿದ್ದು, ಇತರೆ ಹಿಂದುಳಿದ ಮತ್ತು ಸಾಮಾನ್ಯ ವರ್ಗದ ಜನರು ಹೆಚ್ಚು ಇರುವ ಈ ಪಂಚಾಯಿತಿಯಲ್ಲಿ ಸಾಕ್ಷರತೆ ಪ್ರಮಾಣವು ಹೆಚ್ಚು ಇದೆ. ಆದ್ದರಿಂದ ಮಹಿಳೆಯರು ಅವರ ಹಕ್ಕು ಸ್ವಾತಂತ್ರ್ಯಗಳ ಪಡೆದುಕೊಳ್ಳುವುದಕ್ಕೆ ಸಾಧ್ಯಯನ್ನು ಹಾಗೂ ಪುರುಷರು ಕಾಲಕ್ಕೆ ತಕ್ಕಂತೆ ಬದಲಾಗುವ, ಮಹಿಳಾ ಸ್ವಾತಂತ್ರ್ಯ ಮತ್ತು ಲಿಂಗ ಸಮಾನತೆಯನ್ನು ಒಪ್ಪಿಕೊಳ್ಳುವ ಗುಣಗಳು ಕಾರಣವಾಗಿರಬಹುದೆಂದು ಗುರುತಿಸಲಾಗಿದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಚುನಾವಣಾ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 76 ಮಾಹಿತಿದಾರರಲ್ಲಿ ಶೇ.51(39)ರಷ್ಟು ಮಹಿಳಾ ಮಾಹಿತಿದಾರರಾಗಿದ್ದಾರೆ. ಸಂದರ್ಶಿಸಿದ 37 ಪುರುಷ ಮಾಹಿತಿದಾರರಲ್ಲಿ ಶೇ.32(12) ಸದಸ್ಯರು 18ರಿಂದ 35 ವರ್ಷದವರಾಗಿದ್ದು, ಇವರ ಪ್ರಕಾರ, ಶೇ.25ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತ ನೀಡುತ್ತಾರೆಂದು ತಿಳಿಸಿದ್ದಾರೆ. 36ರಿಂದ 50ರ ವಯೋಮಾನದ ಶೇ.43(16) ಮತ್ತು 51 ವರ್ಷ ಮೇಲ್ಪಟ್ಟ ಶೇ.25(9) ಪುರುಷ ಮಾಹಿತಿದಾರರ, ಪ್ರಕಾರ ಶೇ.100ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಮತದಾನ ಮಾಡುವರೆಂದು ಹೇಳಿದ್ದಾರೆ. ಒಟ್ಟಾರೆಯಾಗಿ ಕೋಲಸಿರ್ಸಿ ಗ್ರಾಮಪಂಚಾಯಿತಿಯ ಪುರುಷರ ಪ್ರಕಾರ, ಶೇ.92ರಷ್ಟು ಮಹಿಳೆಯರು ಅವರ ಇಷ್ಟದಂತೆ ಬೇಕಾದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವುದುಕಂಡುಬರುತ್ತದೆ. ಹಾಗೆಯೇ ಈ ಪಂಚಾಯಿತಿಯ ಚುನಾವಣಾ ಪ್ರಾತಿನಿಧ್ಯ ಹೊಂದಿದ 39 ಮಹಿಳಾ ಅಭ್ಯರ್ಥಿಗಳಲ್ಲಿ ಶೇ.44(17)ರಷ್ಟು 18ರಿಂದ 35 ವಯಸ್ಸಿನವರಿದ್ದು, ಇವರಲ್ಲಿ ಶೇ.35ರಷ್ಟು ಮಹಿಳೆಯರು ಪುರುಷರು ನಿರ್ಧಾರದಂತೆ ಮತ ನೀಡುವುದಾಗಿ ಹೇಳಿರುತ್ತಾರೆ. 36ರಿಂದ 50 ವಯಸ್ಸಿನ ಶೇ.56(22)ರಷ್ಟು ಮಹಿಳಾ ಅಭ್ಯರ್ಥಿಗಳಲ್ಲಿ ಶೇ.27ರಷ್ಟು ಮಹಿಳೆಯರು ಕುಟುಂಬದ ಪುರುಷರು ಹೇಳಿದಂತೆ ಮತದಾನ ಮಾಡುವುದಾಗಿ ತಿಳಿಸಿದ್ದಾರೆ. ಆದರೆ 51 ವರ್ಷ ಮೇಲ್ಪಟ್ಟ ಮಹಿಳೆಯರು ಈ ಪಂಚಾಯಿತಿಗೆ ಪ್ರಾತಿನಿಧ್ಯ ಪಡೆದಿರುವುದಿಲ್ಲ(ನೋಡಿ ಕೋಷ್ಟಕ-4.3). ಈ ಪಂಚಾಯಿತಿಗೆ ಯುವ ಮತ್ತು ಮಧ್ಯಮ ವಯಸ್ಸಿನ ಮಹಿಳೆಯರು ಚುನಾವಣಾ ಪ್ರಾತಿನಿಧ್ಯ ಪಡೆದಿರುವುದು ರಾಜಕೀಯವಾಗಿ ಮಹಿಳಾ ಸಬಲೀಕರಣಕ್ಕೆ ಪೂರಕವಾದ ಬೆಳವಣಿಗೆಯಾಗಿದೆ. ಒಟ್ಟಾರೆಯಾಗಿ ಈ ಪಂಚಾಯಿತಿಯ ಶೇ.31ರಷ್ಟು ಮಹಿಳೆಯರು ಕುಟುಂಬದ ಪುರುಷರು ಹೇಳಿದಂತೆ ಮತ ನೀಡಿದರೆ, ಶೇ.69ರಷ್ಟು ಮಹಿಳೆಯರು ಸ್ವನಿರ್ಧಾರದಂತೆ ಮತ ಚಲಾಯಿಸುವುದಾಗಿ ಕಂಡುಬರುತ್ತದೆ. ಈ ಪಂಚಾಯಿತಿಯಲ್ಲಿ ಸ್ವತಂತ್ರವಾಗಿ ಅಥವಾ ಸ್ವಇಚ್ಛೆಯಂತೆ ಮತ ಚಲಾಯಿಸುವ ಮಹಿಳೆಯರ ಪ್ರಮಾಣ ಹೆಚ್ಚು ಇರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಗ್ರಾಮಪಂಚಾಯಿತಿಯಲ್ಲಿ ಶೇ.69ರಷ್ಟು ಮಹಿಳೆಯರಿಗೆ ಸ್ವನಿರ್ಧಾರದಂತೆ ಮತದಾನದ ಪ್ರಾತಿನಿಧ್ಯ ಇರುವುದು ಕಂಡುಬರುತ್ತದೆ. ಇದಕ್ಕೆ ಈ ಪಂಚಾಯಿತಿಯಲ್ಲಿರುವ ಶೈಕ್ಷಣಿಕ ಸೌಲಭ್ಯ, ಸ್ತ್ರೀ-ಪುರುಷರಲ್ಲಿರುವ ಸಾಕ್ಷರತಾ ಪ್ರಮಾಣ ಮತ್ತು ಪರಿಶಿಷ್ಟರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಇತರ ವರ್ಗದ ಜನರು, ಇವರಲ್ಲಿ ಕಂಡುಬರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವೈಚಾರಿಕತೆ ಮತ್ತು ಜಾಗೃತಿ ಇತ್ಯಾದಿ ಪ್ರಮುಖ ಅಂಶಗಳು ಕಾರಣಗಳಾಗಿವೆ. ಆದ್ದರಿಂದ ಮಹಿಳೆಯರ ಭೌತಿಕ ಪ್ರಾತಿನಿಧ್ಯದಷ್ಟೇ ಅವರ ಬೌದ್ಧಿಕ ಪ್ರಾತಿನಿಧ್ಯಕ್ಕೆ ಪ್ರಾಮುಖ್ಯತೆ ನೀಡಿರಬಹುದೆಂದು ಗ್ರಹಿಸಲಾಗಿದೆ.

ತೌಲನಿಕ ಅಧ್ಯಯನ

ಬಯಲುಸೀಮೆ ಎರಡು ಗ್ರಾಮಪಂಚಾಯಿತಿಗಳಲ್ಲಿ 2005 ಮತ್ತು 2010ರ ಚುನಾವಣೆಗಳಲ್ಲಿ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 147 ಮಾಹಿತಿದಾರರಲ್ಲಿ ಕ್ರಮವಾಗಿ ಶೇ.50ರಷ್ಟು ಪುರುಷರ(74) ಮತ್ತು ಮಹಿಳಾ(73) ಮಾಹಿತಿದಾರರು ಇದ್ದಾರೆ. ಸಂದರ್ಶಿಸಿದ 74 ಪುರುಷ ಮಾಹಿತಿದಾರರಲ್ಲಿ

ಶೇ.31(23) ಪುರುಷರು 18ರಿಂದ 35 ವರ್ಷದವರಾಗಿದ್ದು, ಇವರ ಪ್ರಕಾರ, ಶೇ.100ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. 36ರಿಂದ 50 ವರ್ಷದ ಶೇ.47(35) ಪುರುಷ ಮಾಹಿತಿದಾರರಲ್ಲಿ, ಶೇ.86ರಷ್ಟು ಪುರುಷರ ಪ್ರಕಾರ, ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. 51 ವರ್ಷ ಮೇಲ್ಪಟ್ಟ ಶೇ.22(16) ಪುರುಷ ಮಾಹಿತಿದಾರಲ್ಲಿ, ಶೇ.69ರಷ್ಟು ಪುರುಷರ ಪ್ರಕಾರ, ಮಹಿಳೆಯರು ಕುಟುಂಬದ ಯಜಮಾನ ಹೇಳಿದಂತೆ ಮತ ನೀಡುವುದು ಕಂಡುಬರುತ್ತದೆ. ಹಾಗೆಯೇ ಸಂದರ್ಶಿಸಿದ 73 ಮಹಿಳಾ ಮಾಹಿತಿದಾರರಲ್ಲಿ ಶೇ.71(52) ಮಹಿಳೆಯರು ಕುಟುಂಬದ ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಹಾಗೂ ಶೇ.29(21) ಮಹಿಳೆಯರು ಅವರ ಸ್ವನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ಈ 76 ಮಹಿಳಾ ಮಾಹಿತಿದಾರರಲ್ಲಿ ಶೇ.48(35) ಮಹಿಳೆಯರು 18ರಿಂದ 35ರ ವಯೋಮಾನದವರಿದ್ದು, ಇವರಲ್ಲಿ ಶೇ.66ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ್ತು ಶೇ.34ರಷ್ಟು ಮಹಿಳೆಯರು ಸ್ವನಿರ್ಧಾರದಂತೆ ಮತ ನೀಡುವುದಾಗಿ ಹೇಳಿದ್ದಾರೆ. 36ರಿಂದ 50ರ ವಯೋಮಾನದ ಶೇ.34(25) ಮಹಿಳಾ ಮಾಹಿತಿದಾರರಲ್ಲಿ ಶೇ.64ರಷ್ಟು ಮಹಿಳೆಯರು ಪುರುಷರು ತೆಗೆದುಕೊಂಡ ನಿರ್ಧಾರದಂತೆ ಹಾಗೂ ಶೇ.36ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಮತ ಚಲಾಯಿಸುವುದಾಗಿ ತಿಳಿಸಿದ್ದಾರೆ. 51ರ ವಯೋಮಾನ ಮೀರಿದ ಶೇ.18(13) ಮಹಿಳಾ ಮಾಹಿತಿದಾರರಲ್ಲಿ ಎಲ್ಲಾ(ಶೇ.100) ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದಾಗಿ ಹೇಳಿದ್ದಾರೆ(ನೋಡಿ ಕೋಷ್ಟಕ–4.3). ಬಯಲುಸೀಮೆ ಪಂಚಾಯಿತಿಗಳಲ್ಲಿ ಸ್ವನಿರ್ಧಾರದಂತೆ ಮತದಾನ ಮಾಡುವ ಪ್ರಮಾಣದಲ್ಲಿ ಮಧ್ಯಮ(36ರಿಂದ 50) ವಯಸ್ಸಿನ ಮಹಿಳೆಯರ ಪ್ರಮಾಣ ಹೆಚ್ಚು ಇರುವುದು ಕಂಡುಬರುತ್ತದೆ. ಸಾರ್ವತ್ರಿಕ ಚುನಾವಣೆಯಲ್ಲಿ ಭಾಗವಹಿಸುವ ಮಹಿಳಾ ಮತದಾರರಲ್ಲಿ ಶೇ.79ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತದಾನ ಮಾಡುವ ನಾಮಮಾತ್ರ ಪ್ರಾತಿನಿಧ್ಯ ಕಂಡುಬರುತ್ತದೆ. ಆದ್ದರಿಂದ ಬಯಲುಸೀಮೆ ಪಂಚಾಯಿತಿಗಳಲ್ಲಿ ಮಹಿಳೆಯರ ಸಬಲೀಕರಣ ಕಂಡುಬರುವುದಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಮಲೆನಾಡಿನ ಎರಡು ಗ್ರಾಮಪಂಚಾಯಿತಿಗಳಲ್ಲಿ 2005 ಮತ್ತು 2010ರ ಚುನಾವಣೆಗಳಲ್ಲಿ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 148 ಮಾಹಿತಿದಾರರಲ್ಲಿ ಕ್ರಮವಾಗಿ ಶೇ.49ರಷ್ಟು ಪುರುಷರ(72) ಮತ್ತು ಶೇ.51ರಷ್ಟು ಮಹಿಳಾ(76) ಮಾಹಿತಿದಾರರು ಇದ್ದಾರೆ. ಸಂದರ್ಶಿಸಿದ 72 ಪುರುಷ ಮಾಹಿತಿದಾರರಲ್ಲಿ ಶೇ.32(23) ಪುರುಷರು 18ರಿಂದ 35 ವರ್ಷದವರಾಗಿದ್ದು, ಇವರ ಪ್ರಕಾರ, ಶೇ.30ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. 36ರಿಂದ 50 ವರ್ಷದ ಶೇ.42(30) ಪುರುಷ ಮಾಹಿತಿದಾರರಲ್ಲಿ, ಶೇ.23ರಷ್ಟು ಪುರುಷರ ಪ್ರಕಾರ, ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. 51 ವರ್ಷ ಮೇಲ್ಪಟ್ಟ ಶೇ.22(19) ಪುರುಷ ಮಾಹಿತಿದಾರಲ್ಲಿ, ಶೇ.37ರಷ್ಟು ಪುರುಷರ ಪ್ರಕಾರ, ಮಹಿಳೆಯರು ಕುಟುಂಬದ ಯಜಮಾನ ಹೇಳಿದ ಪಕ್ಷಕ್ಕೆ/ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. ಮಲೆನಾಡಿನ

ಈ ಗ್ರಾಮಪಂಚಾಯಿತಿಗಳ ಒಟ್ಟು 76 ಮಹಿಳಾ ಮಾಹಿತಿದಾರರಲ್ಲಿ ಶೇ.55(42) ಮಹಿಳೆಯರು ಕುಟುಂಬದ ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಹಾಗೂ ಶೇ.45(34) ಮಹಿಳೆಯರು ಅವರ ಸ್ವನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ಈ 76 ಮಹಿಳಾ ಮಾಹಿತಿದಾರರಲ್ಲಿ ಶೇ.42(32) ಮಹಿಳೆಯರು 18ರಿಂದ 35ರ ವಯೋಮಾನದವರಿದ್ದು, ಇವರಲ್ಲಿ ಶೇ.56ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ್ತು ಶೇ.44ರಷ್ಟು ಮಹಿಳೆಯರು ಸ್ವನಿರ್ಧಾರದಂತೆ ಮತ ನೀಡುವುದಾಗಿ ಹೇಳಿದ್ದಾರೆ. 36ರಿಂದ 50ರ ವಯೋಮಾನದ ಶೇ.53(40) ಮಹಿಳಾ ಮಾಹಿತಿದಾರರಲ್ಲಿ ಶೇ.30ರಷ್ಟು ಮಹಿಳೆಯರು ಪುರುಷರು ತೆಗೆದುಕೊಂಡ ನಿರ್ಧಾರದಂತೆ ಹಾಗೂ ಶೇ.70ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಮತ ಚಲಾಯಿಸುವುದಾಗಿ ತಿಳಿಸಿದ್ದಾರೆ. 51ರ ವಯೋಮಾನ ಮೀರಿದ ಶೇ.5(4) ಮಹಿಳಾ ಮಾಹಿತಿದಾರರಲ್ಲಿ ಎಲ್ಲಾ(ಶೇ.100) ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದಾಗಿ ಹೇಳಿದ್ದಾರೆ(ನೋಡಿ ಕೋಷ್ಟಕ–4.3). ಮಲೆನಾಡು ಪಂಚಾಯಿತಿಗಳಲ್ಲಿ ಸ್ವನಿರ್ಧಾರದಂತೆ ಮತದಾನ ಮಾಡುವ ಪ್ರಮಾಣದಲ್ಲಿ ಮಧ್ಯಮ(36ರಿಂದ 50) ವಯಸ್ಸಿನ ಮಹಿಳೆಯರ ಪ್ರಮಾಣ ಹೆಚ್ಚು ಇರುವುದು ಕಂಡುಬರುತ್ತದೆ. ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳೆಯರು ಮತದಾರರಾಗಿ ಭಾಗವಹಿಸಿದರು, ಶೇ.37ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುವ ನಾಮಮಾತ್ರ ಪ್ರಾತಿನಿಧ್ಯ ಕಂಡುಬರುತ್ತದೆ. ಆದ್ದರಿಂದ ಮಲೆನಾಡು ಪಂಚಾಯಿತಿಗಳಲ್ಲಿ ಮಹಿಳೆಯರು ಸಬಲೀಕರಣ ಕಂಡುಬರುವುದಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ. ಆದರೆ ಈ ಪ್ರಮಾಣವನ್ನು ಬಯಲುಸೀಮೆ ಗ್ರಾಮಪಂಚಾಯಿತಿಗಳಿಗೆ ಹೋಲಿಸಿದಾಗ ಮಲೆನಾಡು ಗ್ರಾಮಪಂಚಾಯಿತಿಯ ಮಹಿಳೆಯರಿಗೆ ಸ್ವನಿರ್ಧಾರದಂತೆ ಮತದಾನ ಮಾಡುವ ಪ್ರಾತಿನಿಧ್ಯ ಹೆಚ್ಚಿರುವುದು ಸಾಬೀತಾಗುತ್ತದೆ. ಆದ್ದರಿಂದ ಮಲೆನಾಡಿನ ಮಹಿಳೆಯರು ಬಯಲುಸೀಮೆಯ ಮಹಿಳೆಯರಿಗಿಂತ ಸಬಲೀಕರಣಗೊಂಡವರಾಗಿ ಕಂಡುಬರುತ್ತಾರೆ.

ಒಟ್ಟಾರೆಯಾಗಿ ಬಯಲುಸೀಮೆ ಪಂಚಾಯಿತಿಗಳಲ್ಲಿ ಮೂರು ಹಂತದ ವಯಸ್ಸಿನವರ ಪ್ರಕಾರ, ಸರಾಸರಿ ಶೇ.79ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ಹಾಗೆಯೇ ಮಲೆನಾಡು ಪಂಚಾಯಿತಿಗಳಲ್ಲಿ ಮೂರು ಹಂತದ ವಯಸ್ಸಿನವರ ಪ್ರಕಾರ, ಸರಾಸರಿ ಶೇ.37ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ಈ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದಾಗ, 18ರಿಂದ 35ರ ವಯೋಮಾನದವರ ಪ್ರಕಾರ, ಶೇ.63ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. 36ರಿಂದ 50ರ ವಯೋಮಾನದವರ ಪ್ರಕಾರ, ಶೇ.50ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. 51 ವರ್ಷ ಮೇಲ್ಪಟ್ಟ ವಯೋಮಾನದವರ ಪ್ರಕಾರ, ಶೇ.67ರಷ್ಟು ಮಹಿಳೆಯರು ಕುಟುಂಬದ ಯಜಮಾನ ಹೇಳಿದಂತೆ ಮತ ನೀಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಮೂರು ಹಂತದ ವಯಸ್ಸಿನವರ ಪ್ರಕಾರ, ಸರಾಸರಿ ಶೇ.58ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ರಾಜ್ಯದಲ್ಲಿ ಮಹಿಳೆಯರು ಪುರುಷರ ನಿಯಂತ್ರಣಕ್ಕೆ

ಒಳಪಡುವ ಸಾಂಪ್ರದಾಯಿಕ ಪುರುಷ ಯಜಮಾನಿಕೆಯ ಲಕ್ಷಣಗಳು ಕಂಡುಬರುತ್ತವೆ. ಆದ್ದರಿಂದ ರಾಜ್ಯದಲ್ಲಿ ಮಹಿಳೆಯರ ಮತದಾನದಲ್ಲಿ ನಾಮಮಾತ್ರ ಪ್ರಾತಿನಿಧ್ಯ ಕಂಡುಬರುವುದರಿಂದ ಗ್ರಾಮೀಣ ಮಹಿಳೆಯರು ಸಬಲೀಕರಣಗೊಂಡಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

4.5 ಜಾತಿ ಪ್ರಾತಿನಿಧ್ಯ: ಮಹಿಳಾ ಮತದಾನ ಮತ್ತು ಮಹಿಳಾ ಸಬಲೀಕರಣ

ವಿವಿಧ ಜಾತಿ, ಜನಾಂಗಗಳಿಂದ ಕೂಡಿರುವ ಗ್ರಾಮೀಣ ಭಾರತವು ವೈವಿಧ್ಯಮಯ ರಾಷ್ಟ್ರವಾಗಿದೆ. ವೈದಿಕ ಪರಂಪರೆಯ ನೆರಳಿನಲ್ಲಿ ಬೆಳೆದು ಬಂದ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ, ಧರ್ಮ, ಲಿಂಗ, ವರ್ಗ ಇತ್ಯಾದಿ ಅಸಮಾನತೆಗಳಿಂದ ಕೂಡಿದೆ. ಸಮಾಜದ ಅಂಚಿನಲ್ಲಿರುವ ಮಹಿಳೆಯರು ಲಿಂಗ ಮತ್ತು ಜಾತಿತಾರತಮ್ಯಗಳಿಂದ ಸಾಮಾಜಿಕವಾಗಿ ಸಾಕಷ್ಟು ಪ್ರಮಾಣದಲ್ಲಿ ಅಸಮಾನತೆಗಳನ್ನು ಅನುಭವಿಸುತ್ತಾ ಬರುತ್ತಿದ್ದಾರೆ. ಈ ಜಾತಿ ಅಸಮಾನತೆಯನ್ನು ನಿವಾರಿಸುವ ಸದುದ್ದೇಶದಿಂದಲೇ ಭಾರತವನ್ನು ಜಾತ್ಯತೀತ ರಾಷ್ಟ್ರವೆಂದು ಘೋಷಿಸಲಾಗಿದೆ. ಸಂವಿಧಾನದಲ್ಲೂ ಜಾತಿ ಅಸಮಾನತೆ ನಿವಾರಣೆಗೆ ನಿರ್ದಿಷ್ಟ ಹಾಗೂ ಖಚಿತವಾದ ಹಕ್ಕು, ಸ್ವಾತಂತ್ರ್ಯ ಮತ್ತು ರಕ್ಷಣೆಗಳನ್ನು ಕೊಡಮಾಡಲ್ಪಟ್ಟಿದೆ. ರಾಜಕೀಯ ಸಮಾನತೆಯನ್ನು ನೀಡಿದಲ್ಲಿ, ಅದು ಎಲ್ಲಾ ಬಗೆಯ ಅಸಮಾನತೆಗಳನ್ನು ನಿರ್ಮೂಲನೆ ಮಾಡಬಹುದು ಎಂಬುದು ತಜ್ಞರ ಮತ್ತು ವಿಚಾರವಾದಿಗಳ ಅಭಿಪ್ರಾಯವಾಗಿದೆ. ಇದರ ಫಲವಾಗಿ ಇಂದು ಆಚರಣೆಯಲ್ಲಿರುವ ಜಾತಿಪದ್ಧತಿ ನಿವಾರಣೆಗೆ ಹಲವಾರು ಶಾಸನಾತ್ಮಕ ರಕ್ಷಣೆ ಮತ್ತು ಸಾಮಾಜಿಕ ಭದ್ರತೆಗಳು ಜಾರಿಯಲ್ಲಿವೆ. ಪ್ರತಿಯೊಬ್ಬ ಪ್ರಜೆ ರಾಜಕೀಯ ಪ್ರಾತಿನಿಧ್ಯ ವಹಿಸಲು ಸಾರ್ವತ್ರಿಕ ವಯಸ್ಕ ಮತದಾನ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ. ಆದರೆ ಭಾರತದಲ್ಲಿ ಜರುಗುವ ಸಾರ್ವತ್ರಿಕ ಚುನಾವಣೆಗಳು ಜಾತಿಯ ಆಧಾರದ ಮೇಲೆ ಜರುಗುತ್ತವೆ ಎಂಬ ಸ್ಪಷ್ಟ ಅಭಿಪ್ರಾಯ ಮತ್ತು ಚಿತ್ರಣಗಳು ಕಂಡುಬರುತ್ತವೆ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಮತ ಚಲಾಯಿಸುವುದರ ಮೂಲಕ ಅವರಿಗೆ ರಾಜಕೀಯ ಪ್ರಾತಿನಿಧ್ಯ ದೊರೆಯುತ್ತದೆ. ಪ್ರಜೆಗಳು ನೀಡಿದ ಬಹುಮತದ ಆಧಾರದ ಮೇಲೆ ರಾಜಕೀಯ ಅಧಿಕಾರ ಸಂರಚನೆಗೊಳ್ಳುತ್ತದೆ. ಗುಣಮಟ್ಟದ ರಾಜಕೀಯ ಅಧಿಕಾರದ ಸಂರಚನೆಗೆ ಪ್ರಜೆ ವ್ಯಕ್ತಿಗತ ನೆಲೆಯಲ್ಲಿ ಮತ ನೀಡುವ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಜಾತಿ, ಧರ್ಮಗಳ ತಾರತಮ್ಯ ಭಾವನೆಗಳಿಂದ, ಹಣ, ಹೆಂಡ ಇತ್ಯಾದಿ ಆಶೆ–ಆಮಿಷಗಳಿಂದ ಮತ್ತು ದೌರ್ಜನ್ಯ ಹಾಗೂ ತೋಳ್ಬಲಗಳ ಬೆದರಿಕೆಗಳಿಂದ ಮುಕ್ತವಾದ ಚುನಾವಣೆಯಲ್ಲಿ ಪ್ರಜೆಗಳು ನೀಡಿದ ಬಹುಮತದಿಂದ ರೂಪುಗೊಳ್ಳುವ ರಾಜಕೀಯ ಅಧಿಕಾರದ ಅಗತ್ಯವಿದೆ. ಇದಕ್ಕಾಗಿ ಲಿಂಗ ಮತ್ತು ಜಾತಿ ಆಧಾರಿತ ತಾರತಮ್ಯಗಳಿಂದ ಮುಕ್ತವಾಗಿ ನಡೆಯುವ ಚುನಾವಣೆಗಳ ಅಗತ್ಯವಿದೆ. ಜಾತಿ ಮತ್ತು ಲಿಂಗ ಅಸಮಾನತೆಗಳಿಂದ ಮುಕ್ತವಾದ ಚುನಾವಣೆಗಳು ಜರುಗಬೇಕಾದರೆ ಮಹಿಳೆಯರಿಗೆ ಸ್ವನಿರ್ಧಾರದಂತೆ ಮತ ನೀಡುವ ಸ್ವಾತಂತ್ರ್ಯ ದೊರೆತಾಗ ಮಾತ್ರ ಅವರಿಗೆ ರಾಜಕೀಯ ಸಮಗ್ರ ಪ್ರಾತಿನಿಧ್ಯ ದೊರೆಯಲು ಸಾಧ್ಯವಾಗಬಹುದು. ಇಂದು ಲಿಂಗ, ಜಾತಿ ಆಧಾರಗಳ ಮೇಲೆ ಚುನಾವಣೆಗಳು ನಡೆಯುವುದರಿಂದ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಮತದಾರರಾಗಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಮತ ನೀಡುವ

ನಿರ್ಧಾರವು ಅವರ ಕೈತಪ್ಪಿ ಹೋಗಿರುವುದು ಕಂಡುಬರುತ್ತದೆ. ಆದ್ದರಿಂದ ಮಹಿಳೆಯರಿಗೆ ಮತದಾನದಲ್ಲಿ ಸಮಗ್ರ ಪ್ರಾತಿನಿಧ್ಯ ದೊರೆಯುವುದು ಕಷ್ಟವಾಗಿದೆ. ಇಲ್ಲಿ ಮಹಿಳೆಯರು ಲಿಂಗ ಮತ್ತು ಜಾತಿ ತಾರತಮ್ಯಕ್ಕೆ ಒಳಗಾಗದೇ ಚುನಾವಣೆಯಲ್ಲಿ ಅವರಿಗೆ ಬೇಕಾದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವ ನಿರ್ಧಾರವನ್ನೇ ಸಮಗ್ರ ಮತದಾನವೆಂದು ಪರಿಭಾವಿಸಿಕೊಳ್ಳಲಾಗಿದೆ. ಮಹಿಳೆಯರ ಸಮಗ್ರ ಮತದಾನವನ್ನೇ ಮಹಿಳೆಯರ ಸಬಲೀಕರಣವೆಂದು ಅರ್ಥೈಸಿಕೊಳ್ಳಲಾಗಿದೆ.

ಇಂದು ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಭಾಗವಹಿಸುತ್ತಾರೆ. ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳೆಯರ ಮತದಾನದ ಪ್ರಾತಿನಿಧ್ಯ ಹೆಚ್ಚಾಗಿದೆಯೇ ಹೊರತು ಮತ ನೀಡುವ ನಿರ್ಧಾರದಲ್ಲಿ ಕಂಡುಬರುತ್ತಿಲ್ಲ. ಇದಕ್ಕೆ ಮುಖ್ಯವಾಗಿ ಗ್ರಾಮೀಣ ಸಮುದಾಯದಲ್ಲಿ ಆಚರಣೆಯಲ್ಲಿರುವ ಲಿಂಗ ಅಸಮಾನತೆ ಮತ್ತು ಜಾತಿ ತಾರತಮ್ಯಗಳು ಕಾರಣಗಳಾಗಿವೆ. ಇಂದಿಗೂ ಗ್ರಾಮೀಣ ಸಮುದಾಯಗಳಲ್ಲಿ ಮಹಿಳೆಯರನ್ನು ಜಾತಿ ಆಧಾರದ ಮೇಲೆ ನಿರ್ಲಕ್ಷ್ಯ ಮತ್ತು ನಿಯಂತ್ರಣ ಮಾಡುವುದು ಕಂಡುಬರುತ್ತದೆ. ಅಂದರೆ, ಗ್ರಾಮೀಣ ಸಮಾಜವು ಜಾತಿ ಕಾರಣಕ್ಕೋ ಅಥವಾ ಮಹಿಳೆ ಎಂಬ ಕಾರಣಕ್ಕೋ ಮಹಿಳೆಯರನ್ನು ಪ್ರಾತಿನಿಧಿಕ(ನಾಮಮಾತ್ರ) ಮತದಾರಳನ್ನಾಗಿ ಮಾಡಿದೆ. ಪುರುಷರನ್ನು ಪಾಲುದಾರಿಕೆ ಮತದಾರರನ್ನಾಗಿ ಮಾಡಿರುವುದು ಕಂಡುಬರುತ್ತದೆ. ಪ್ರಾತಿನಿಧಿಕ ಮತದಾನವೆಂದರೆ, ಸಾರ್ವತ್ರಿಕ ಚುನಾವಣೆಯಲ್ಲಿ ಹೆಸರಿಗೆ ಮಾತ್ರ ಮತದಾರರಾಗಿ ಭಾಗವಹಿಸುವ ಭೌತಿಕ ಸಂಖ್ಯೆ(ಸ್ಥಿತಿ)ಯಾಗಿರುತ್ತದೆ. ಪಾಲುದಾರಿಕೆ ಮತದಾನವೆಂದರೆ ಮತ ನೀಡುವ ನಿರ್ಧಾರ ಕೈಗೊಳ್ಳುವ ಜವಾಬ್ದಾರಿಯುತ ಮತ್ತು ಎಚ್ಚರದ ಸ್ಥಿತಿಯಾಗಿದೆ.

ಇಂದು ಪಂಚಾಯತ್‌ರಾಜ್ ಸಂಸ್ಥೆಗಳು ಗ್ರಾಮೀಣ ಮಹಿಳೆಯರಿಗೆ ಸಮಗ್ರ ರಾಜಕೀಯ ಪ್ರಾತಿನಿಧ್ಯ ನೀಡುವುದರ ಮೂಲಕ ಅವರನ್ನು ಸಬಲೀಕರಣಗೋಳಿಸುವ ನಿಟ್ಟಿನಲ್ಲಿ ನಿರ್ಣಾಯಕ ಪ್ರಾತ ವಹಿಸುತ್ತಿವೆ. ಅಂದರೆ, ಮಹಿಳೆಯರು ಸ್ವತಂತ್ರವಾಗಿ ಸ್ವನಿರ್ಧಾರದಂತೆ ಮತ ಚಲಾಯಿಸುವ ಪ್ರಾತಿನಿಧ್ಯದ ಪ್ರಮಾಣದಲ್ಲಿ ಸರಿಸಮಾನ ಪ್ರಾತಿನಿಧ್ಯ ದೊರೆತಾಗ ಮಾತ್ರ ಅವರಿಗೆ ಸಮಗ್ರ ರಾಜಕೀಯ ಪ್ರಾತಿನಿಧ್ಯ ದೊರೆದಂತಾಗುತ್ತದೆ. ಅದುವೇ ಅವರ ಸಬಲೀಕರಣವಾಗುತ್ತದೆ. ಆದರೆ ಗ್ರಾಮೀಣ ಸಮಾಜದಲ್ಲಿ ಎಲ್ಲಾ ಜಾತಿ ಜನಾಂಗಗಳಲ್ಲಿ ಮಹಿಳೆಯರನ್ನು ಸಂತಾನೋತ್ಪತ್ತಿ, ಗೃಹವಾರ್ತೆ ಮತ್ತು ಸಂಗೋಪನಾ ದುಡಿಮೆಗಳಿಗೆ ಸೀಮಿತಗೊಳಿಸಿ, ಅವರನ್ನು ಪ್ರಾತಿನಿಧಿಕ ಮತದಾರರನ್ನಾಗಿ ನೋಡುವ ಪುರುಷ ಹಿತಾಸಕ್ತಿ ರಾಜಕಾರಣ ಕಂಡುಬರುತ್ತದೆಯೇ ವಿನಾ ಪಾಲುದಾರಿಕೆ ಮತದಾರಳನ್ನಾಗಿ ನೋಡುವುದು ಕಂಡುಬರುತ್ತಿಲ್ಲ. ಆದರೆ ಇಂದು ಸಮಾಜದ ಅಂಚಿನಲ್ಲಿರುವ ಶೋಷಿತ ಮತ್ತು ಅಸಮಾನತೆಗೆ ಒಳಗಾದ ಮಹಿಳೆಯರಿಗೆ ಮೀಸಲಾತಿ ಮೂಲಕ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಸಮಾನ ಪ್ರಾತಿನಿಧ್ಯ ಸಿಕ್ಕಿದೆ. ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ಮತದಾರಳಾಗಿ ಭಾಗವಹಿಸುವ ಮಹಿಳೆಯರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಚುನಾವಣೆಯಲ್ಲಿ ಮತದಾರಳಾಗಿ ಭಾಗವಹಿಸುವ ಮಹಿಳೆ ಸ್ವತಂತ್ರವಾಗಿ ಮತ್ತು ಸ್ವನಿರ್ಧಾರದಂತೆ ಮತ ನೀಡುವಳೋ ಅಥವಾ ಜಾತಿ ತಾರತಮ್ಯಕ್ಕೆ ಒಳಗಾಗಿ ಪುರುಷರು ಹೇಳಿದಂತೆ ಮತ ನೀಡುವಳೋ ಎಂದು ನೋಡುವುದು ಈ ಅಧ್ಯಾಯದ

ಮುಖ್ಯ ಉದ್ದೇಶವಾಗಿದೆ. ಇದರ ಜೊತೆಗೆ ಪುರುಷ ಹೇಳಿದಂತೆ ಅಥವಾ ಸ್ವಇಚ್ಛೆಯಂತೆ ಮತ ಚಲಾಯಿಸುವ ಮಹಿಳೆಯರ ಪ್ರಮಾಣ ಯಾವ ಜಾತಿಯಲ್ಲಿ ಯಾವ ಪ್ರಮಾಣದಲ್ಲಿದೆ ಎಂಬುದನ್ನು ನೋಡುವುದು ಕೂಡಾ ಆಗಿರುತ್ತದೆ.

ಈ ಅಧ್ಯಾಯದ ಹಿಂದಿನ ಭಾಗದಲ್ಲಿ ವಯಸ್ಸಿನ ಸೂಚ್ಯಂಕದ ಮೇರೆಗೆ ಸದಸ್ಯರ ಮತ ನೀಡುವ ನಿರ್ಧಾರವನ್ನು ಪರಿಶೀಲಿಸಲಾಗಿದೆ. ಆಪರೆ ಈ ಭಾಗದಲ್ಲಿ ಜಾತಿ ಸೂಚ್ಯಂಕದ ಮೇರೆಗೆ ಮಹಿಳಾ ಮತ ನೀಡುವ ನಿರ್ಧಾರವನ್ನು ಮಾಪನ ಮಾಡಲಾಗಿದೆ. ಈ ಭಾಗದಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶನದಲ್ಲಿ ಮಾಹಿತಿ ನೀಡಿದ ಸ್ತ್ರೀ-ಪುರುಷರ ಮಾಹಿತಿಯನ್ನು ಪ್ರತ್ಯೇಕವಾಗಿ ಮತ್ತು ಪರಸ್ಪರ ಹೋಲಿಕೆ ಮಾಡಿ ಸಾಮಾನ್ಯೀಕರಣಗೊಳಿಸಲಾಗಿದೆ. ಪುರುಷರ ನಿರ್ಧಾರದಂತೆ ಮತದಾನ ಮಾಡುವ ಮಹಿಳೆಯರ ಪ್ರಮಾಣ ಯಾವ ಜಾತಿ-ವರ್ಗಗಳಲ್ಲಿ ಹೆಚ್ಚು ಅಥವಾ ಕಡಿಮೆ ಇದೆಯೆಂದು ನೋಡಲಾಗಿದೆ. ಇದರ ಆಧಾರದ ಮೇಲೆ ಮಹಿಳಾ ಸಬಲೀಕರಣವನ್ನು ಗುರುತಿಸಲಾಗಿದೆ. ಜಾತಿಗೂ ಮತ್ತು ಮತ ನೀಡುವ ನಿರ್ಧಾರದ ಪ್ರಾತಿನಿಧ್ಯಕ್ಕೂ ಸಂಬಂಧವಿದೆಯೇ ಎಂದು ನೋಡಲಾಗಿದೆ. ಮಹಿಳೆಯರು ಸ್ವನಿರ್ಧಾರದಂತೆ ಮತ ಚಲಾಯಿಸುವುದಕ್ಕೆ ಜಾತಿ ಒಂದು ಸಾಧನವಾಗಿದೆಯೇ ಅಥವಾ ಅಡ್ಡಿಯಾಗಿದೆಯೇ ಎಂದು ನೋಡುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶಕ್ಕಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ಗ್ರಾಮಪಂಚಾಯಿತಿಗಳ ಸದಸ್ಯರ ಜಾತಿ ಮತ್ತು ಮಹಿಳಾ ಮತಾಧಿಕಾರದ ಬಗ್ಗೆ ಕ್ಷೇತ್ರ ಅಧ್ಯಯನದಲ್ಲಿ ಪಡೆದ ಪ್ರಾಥಮಿಕ ಮಾಹಿತಿಯ ಆಧಾರದ ಮೇಲೆ ಕೋಷ್ಠಕವನ್ನು ತಯಾರಿಸಿ, ವಿಶ್ಲೇಷಣೆ ಮಾಡಲಾಗಿದೆ(ನೋಡಿ ಕೋಷ್ಟಕ-4.4).

ಬಯಲುಸೀಮೆ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಚುನಾವಣೆಗಳಲ್ಲಿ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 68 ಮಾಹಿತಿದಾರರಲ್ಲಿ ಕ್ರಮವಾಗಿ ಶೇ.49ರಷ್ಟು ಪುರುಷರ(33) ಮತ್ತು ಶೇ.51ರಷ್ಟು ಮಹಿಳಾ(35) ಮಾಹಿತಿದಾರರು ಇದ್ದಾರೆ. ಸಂದರ್ಶಿಸಿದ 33 ಪುರುಷ ಮಾಹಿತಿದಾರರಲ್ಲಿ ಶೇ.12ರಷ್ಟು ಪರಿಶಿಷ್ಟ ಜಾತಿ, ಶೇ.76ರಷ್ಟು ಪರಿಶಿಷ್ಟ ಪಂಗಡ ಮತ್ತು ಶೇ.12ರಷ್ಟು ಇತರೆ/ಸಾಮಾನ್ಯ ವರ್ಗದವರಾಗಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ಮಹಿಳೆಯರಿಗೆ ಮನೆ, ಗದ್ದೆ ಕೆಲಸಗಳು ಜಾಸ್ತಿ ಇರುತ್ತವೆ. ಊರಿನ ಅಥವಾ ಸಾರ್ವಜನಿಕ ವಿಷಯಗಳ ಬೆಳವಣಿಗೆಯ ಬಗ್ಗೆ ಅವರಿಗೆ ಗೊತ್ತಾಗುವುದಿಲ್ಲ. ಹೀಗಾಗಿ ಚುನಾವಣೆಯಲ್ಲಿ ಯಾವ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡಬೇಕೆಂದು ಮಹಿಳೆಯರಿಗೆ ತಿಳುವಳಿಕೆ ಇರುವುದಿಲ್ಲ. ಆದ್ದರಿಂದ ಪುರುಷರು ಮಹಿಳೆಯರ ಮತಾಧಿಕಾರದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ಪುರುಷ ಮಾಹಿತಿದಾರರಿಂದ ತಿಳಿದುಬಂದ ಸಾಮಾನ್ಯ ಸಂಗತಿಯಾಗಿದೆ. ಹಾಗೆಯೇ ಸಂದರ್ಶಿಸಲ್ಪಟ್ಟ 35 ಮಹಿಳಾ ಮಾಹಿತಿದಾರರಲ್ಲಿ ಪರಿಶಿಷ್ಟ ಜಾತಿಯ ಶೇ.20(7) ಮಹಿಳೆಯರಿದ್ದು, ಇವರಲ್ಲಿ ಶೇ.100ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ/

ಪಕ್ಷಕ್ಕೆ ಮತ ನೀಡುವುದಾಗಿ ತಿಳಿಸಿದ್ದಾರೆ. ಸಂದರ್ಶಿಸಿದ ಮಹಿಳಾ ಮಾಹಿತದಾರರಲ್ಲಿ ಪರಿಶಿಷ್ಟ ಪಂಗಡದ ಶೇ.60(21) ಮಹಿಳೆಯರಿದ್ದು, ಇವರಲ್ಲಿ ಶೇ.67ರಷ್ಟು ಮಹಿಳೆಯರು ಪುರುಷರು ಬೆಂಬಲಿದ ಅಭ್ಯರ್ಥಿಗೆ ಮತ ನೀಡುವುದಾಗಿ ಹೇಳಿದ್ದಾರೆ. ಇತರೆ/ಸಾಮಾನ್ಯವರ್ಗದ ಶೇ.20(7) ಮಹಿಳೆಯರಿದ್ದು, ಇವರಲ್ಲಿ ಶೇ.100ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತೇವೆಂದು ಮಾಹಿತಿ ನೀಡಿದ್ದಾರೆ. ಒಟ್ಟಾರೆಯಾಗಿ ಪರಿಶಿಷ್ಟ ಜಾತಿಯಲ್ಲಿ ಶೇ.100ರಷ್ಟು ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ಶೇ.85.72ರಷ್ಟು ಮಹಿಳೆಯರು ಮತ್ತು ಇತರೆ/ಸಾಮಾನ್ಯ ವರ್ಗದಲ್ಲಿ ಶೇ.100ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ಚಲಾಯಿಸುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಪಂಚಾಯಿತಿಯಲ್ಲಿ ಶೇ. 10ರಷ್ಟು ಮಹಿಳೆಯರು ಮತ್ತು ಮಹಿಳೆಯರಲ್ಲಿ ಶೇ.20ರಷ್ಟು ಮಹಿಳೆಯರು ಮಾತ್ರ ಅವರ ಸ್ವನಿರ್ಧಾರಂತೆ ಮತದಾನ ಮಾಡುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-4.4). ಹೀಗಾಗಿ ಈ ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರನ್ನು ಪ್ರಾತಿನಿಧಿಕ ಮತದಾರಳನ್ನಾಗಿ ನೋಡಲಾಗುತ್ತಿದೆಯೇ ವಿನಾ ಪಾಲುದಾರಿಕೆ ಮತದಾರಳನ್ನಾಗಿ ನೋಡುವುದು ಕಂಡುಬರುವುದಿಲ್ಲ ಎಂಬ ಸಂಗತಿ ಕಂಡುಬರುತ್ತಿದೆ.

ನಾಗೇನಹಳ್ಳಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಚುನಾವಣೆಗಳಲ್ಲಿ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 79 ಮಾಹಿತಿದಾರರಲ್ಲಿ ಕ್ರಮವಾಗಿ ಶೇ.52ರಷ್ಟು ಪುರುಷರ(41) ಮತ್ತು ಶೇ.48ರಷ್ಟು ಮಹಿಳಾ(38) ಮಾಹಿತಿದಾರರು ಇದ್ದಾರೆ. ಸಂದರ್ಶಿಸಿದ 41 ಪುರುಷ ಮಾಹಿತಿದಾರರಲ್ಲಿ, ಪರಿಶಿಷ್ಟ ಜಾತಿಯ ಶೇ.24(10) ಪುರಷರಿದ್ದು, ಇವರ ಪ್ರಕಾರ ಶೇ.80ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ ಚುನಾವಣೆಯಲ್ಲಿ ಮತ ನೀಡುತ್ತಾರೆಂದು ತಿಳಿಸಿದ್ದಾರೆ. ಪರಿಶಿಷ್ಟ ಪಂಗಡದ ಶೇ.20(8) ಮಾಹಿತಿದಾರರಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ಇತರೆ/ಸಾಮಾನ್ಯ ವರ್ಗದ ಶೇ.56(23) ಮಾಹಿತಿದಾರರಿದ್ದು, ಇವರ ಪ್ರಕಾರ ಶೇ.65ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತ ನೀಡುತ್ತಾರೆಂದು ಮಾಹಿತಿ ನೀಡಿದ್ದಾರೆ. ಹಾಗೆಯೇ ಮಾಹಿತಿ ನೀಡಿದ 38 ಮಹಿಳಾ ಮಾಹಿತಿದಾರರಲ್ಲಿ, ಪರಿಶಿಷ್ಟ ಜಾತಿಯ ಶೇ.31(12) ಮಾಹಿತಿದಾರರಿದ್ದು, ಇವರಲ್ಲಿ ಶೇ.50ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಚುನಾವಣೆಯಲ್ಲಿ ಮತ ನೀಡುವುದಾಗಿ ತಿಳಿಸಿರುತ್ತಾರೆ. ಪರಿಶಿಷ್ಟ ಪಂಗಡದ ಶೇ.24(9) ಮಾಹಿತಿದಾರರಿದ್ದು, ಇವರಲ್ಲಿ ಶೇ.33ರಷ್ಟು ಮಹಿಳೆಯರು ಪುರುಷರು ತೆಗೆದುಕೊಂಡ ನಿರ್ಧಾರದಂತೆ ಮಹಿಳೆಯರು ಮತದಾನ ಮಾಡುವುದಾಗಿ ಹೇಳಿದ್ದಾರೆ. ಇತರೆ/ಸಾಮಾನ್ಯ ವರ್ಗದ ಶೇ.45(17) ಮಾಹಿತಿದಾರರಿದ್ದು, ಇವರಲ್ಲಿ ಶೇ.88ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತ ನೀಡುವೆವು ಎಂದು ತಿಳಿಸಿದ್ದಾರೆ. ಒಟ್ಟಾರೆಯಾಗಿ ಪರಿಶಿಷ್ಟ ಜಾತಿಯಲ್ಲಿ ಶೇ.64ರಷ್ಟು ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ಶೇ.65ರಷ್ಟು ಮಹಿಳೆಯರು ಮತ್ತು ಇತರೆ/ಸಾಮಾನ್ಯ ವರ್ಗದಲ್ಲಿ ಶೇ.75ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ಚಲಾಯಿಸುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಪಂಚಾಯಿತಿಯಲ್ಲಿ ಶೇ. 32ರಷ್ಟು ಮಹಿಳೆಯರು

ಮತ್ತು ಮಹಿಳೆಯರಲ್ಲಿ ಶೇ.37ರಷ್ಟು ಮಹಿಳೆಯರು ಮಾತ್ರ ಅವರ ಸ್ವನಿರ್ಧಾರಂತೆ ಮತದಾನ ಮಾಡುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–4.4). ಈ ಮೇಲಿನ ಅಂಕಿಅಂಶಗಳ ವಿಶ್ಲೇಷಣೆಯ ಪ್ರಕಾರ, ಈ ಪಂಚಾಯಿತಿಯಲ್ಲಿ ಮಹಿಳೆ ಪ್ರಾತಿನಿಧಿಕ ಮತದಾರಳಾದ್ದಾಳೆ ವಿನಹ ಪಾಲುದಾರಿಕೆ ಮತದಾರಳಾಗಿಲ್ಲ ಎಂಬ ಅಂಶ ಸ್ಪಷ್ಟವಾಗಿ ಕಂಡುಬರುತ್ತದೆ.

ಮಲೆನಾಡು ಗ್ರಾಮಪಂಚಾಯಿತಿಗಳು

ಬೇಡ್ಕಣಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 72 ಮಾಹಿತಿದಾರಲ್ಲಿ ಶೇ.49(35) ಪುರುಷ ಮತ್ತು ಶೇ.51(37) ಮಹಿಳಾ ಮಾಹಿತಿದಾರರಿದ್ದಾರೆ. ಕ್ಷೇತ್ರಾಧ್ಯಯನದಲ್ಲಿ ಮಾಹಿತಿ ನೀಡಿದ 35 ಪುರುಷರಲ್ಲಿ, ಪರಿಶಿಷ್ಟ ಜಾತಿಯ ಶೇ.34(12) ಪುರುಷರಿದ್ದು, ಇವರ ಪ್ರಕಾರ, ಶೇ.50ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ಚಲಾಯಿಸುತ್ತಾರೆಂದು ಹೇಳಿದ್ದಾರೆ. ಪರಿಶಿಷ್ಟ ಪಂಗಡದ ಈ ಪುರುಷರು ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದಿರುವುದಿಲ್ಲ(ನೋಡಿ ಕೋಷ್ಟಕ–3.11). ಇತರೆ/ಸಾಮಾನ್ಯ ವರ್ಗದ ಶೇ.66(23) ಪುರುಷರಿದ್ದು, ಇವರ ಪ್ರಕಾರ ಶೇ.48ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತ ನೀಡುತ್ತಾರೆಂದು ಮಾಹಿತಿ ನೀಡಿದ್ದಾರೆ. ಹಾಗೆಯೇ ಮಾಹಿತಿ ನೀಡಿದ 37 ಮಹಿಳಾ ಮಾಹಿತಿದಾರರಲ್ಲಿ ಪರಿಶಿಷ್ಟ ಜಾತಿಯ ಶೇ.32(12) ಮಹಿಳೆಯರಿದ್ದಾರೆ. ಇವರಲ್ಲಿ ಶೇ.75ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತ ನೀಡುವುದಾಗಿ ತಿಳಿಸಿದ್ದಾರೆ. ಈ ಪಂಚಾಯಿತಿಗೆ ಪರಿಶಿಷ್ಟ ಪಂಗಡದ ಮಹಿಳೆಯರು ಆಯ್ಕೆಯಾಗಿರುವುದಿಲ್ಲ(ಪರಿಶಿಷ್ಟ ಪಂಗಡದ ವಲಸೆ ಬಂದ ಒಂದೆರಡು ಕುಟುಂಬಗಳು ಕಂಡುಬಂದರೂ ಅವರು ಚುನಾವಣೆಯಲ್ಲಿ ಸ್ಪರ್ಧಿಸುವುಕ್ಕೆ ಮುಂದೆ ಬರುತ್ತಿಲ್ಲ. ಹೀಗಾಗಿ ಪರಿಶಿಷ್ಟ ಪಂಗಡಕ್ಕೆ ಹಂಚಿಕೆಯಾದ ಮೀಸಲಾತಿ ಸ್ಥಾನಗಳಿಗೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಸ್ಪರ್ಧಿಸುವುದು ಕಂಡುಬರುತ್ತದೆ). ಇತರೆ/ಸಾಮಾನ್ಯ ವರ್ಗದ ಶೇ.68(25) ಮಹಿಳಾ ಮಾಹಿತಿದಾರರಿದ್ದು, ಇವರಲ್ಲಿ ಶೇ.52ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತ ನೀಡುವುದಾಗಿ ತಿಳಿಸಿದ್ದಾರೆ. ಒಟ್ಟಾರೆಯಾಗಿ ಪರಿಶಿಷ್ಟ ಜಾತಿಯಲ್ಲಿ ಶೇ.63ರಷ್ಟು ಮಹಿಳೆಯರು ಮತ್ತು ಇತರೆ/ಸಾಮಾನ್ಯ ವರ್ಗದಲ್ಲಿ ಶೇ.50ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ಚಲಾಯಿಸುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಪಂಚಾಯಿತಿಯಲ್ಲಿ ಶೇ.46ರಷ್ಟು ಮಹಿಳೆಯರು ಮತ್ತು ಮಹಿಳೆಯರಲ್ಲೇ ಶೇ.41ರಷ್ಟು ಮಹಿಳೆಯರು ಸ್ವಇಚ್ಛೆಯಂತೆ ಮತದಾನ ಮಾಡುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–4.4). ಈ ಮೇಲಿನ ಅಂಕಿಅಂಶಗಳ ವಿಶ್ಲೇಷಣೆಯ ಪ್ರಕಾರ, ಈ ಪಂಚಾಯಿತಿಯಲ್ಲಿ ಮಹಿಳೆಯನ್ನು ಪ್ರಾತಿನಿಧಿಕ ಮತದಾರಳಾಗಿದ್ದಾಳೆ ವಿನಹ ಪಾಲುದಾರಿಕೆ ಮತದಾರಳಾಗಿಲ್ಲ ಎಂಬ ಅಂಶ ಸ್ಪಷ್ಟವಾಗಿ ಕಂಡುಬರುತ್ತದೆ.

ಕೋಲಸಿರ್ಸಿ ಗ್ರಾಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶನ ಮಾಡಿದ 76 ಮಾಹಿತಿದಾರರಲ್ಲಿ ಶೇ.49(37) ಪುರುಷ ಮತ್ತು ಶೇ.51(39) ಮಹಿಳೆಯರು ಇದ್ದಾರೆ. ಕ್ಷೇತ್ರ ಅಧ್ಯಯನದಲ್ಲಿ ಮಾಹಿತಿ ನೀಡಿದ 37

ಪುರುಷರ ಜಾತಿವಾರು ಮಾಹಿತಿಯನ್ನು ಪರಿಶೀಲಿಸಿದಾಗ ಪರಿಶಿಷ್ಟ ಜಾತಿಯ ಶೇ.38(14) ಪುರುಷರಿದ್ದು, ಇವರಲ್ಲಿ ಶೇ.21ರಷ್ಟು ಪುರಷರ ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಮತ ಚಲಾಯಿಸುತ್ತಾರೆಂದು ತಿಳಿಸದಿದ್ದಾರೆ. ಪರಿಶಿಷ್ಟ ಪಂಗಡದ ಪುರುಷರು ಈ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದಿರುವುದಿಲ್ಲ(ನೋಡಿ ಕೋಷ್ಟಕ–3.11). ಇತರೆ/ಸಾಮಾನ್ಯ ವರ್ಗದ ಶೇ.62(23) ಪುರುಷ ಮಾಹಿತಿದಾರರಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಚುನಾವಣೆಯಲ್ಲಿ ಮತ ನೀಡುತ್ತಾರೆಂದು ಮಾಹಿತಿ ನೀಡಿದ್ದಾರೆ. ಹಾಗೆಯೇ ಕ್ಷೇತ್ರಾಧ್ಯಯನದಲ್ಲಿ ಮಾಹಿತಿ ನೀಡಿದ 39 ಮಹಿಳಾ ಮಾಹಿತಿದಾರರಲ್ಲಿ, ಪರಿಶಿಷ್ಟ ಜಾತಿಯ ಶೇ.36(14) ಮಹಿಳೆಯರಿದ್ದು, ಇವರಲ್ಲಿ ಶೇ.43ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತ ನೀಡುವುದಾಗಿ ತಿಳಿಸಿದ್ದಾರೆ. ಈ ಪಂಚಾಯಿತಿಗೆ ಪರಿಶಿಷ್ಟ ಪಂಗಡದ ಮಹಿಳೆಯರು ಆಯ್ಕೆಯಾಗಿರುವುದಿಲ್ಲ(ಪರಿಶಿಷ್ಟ ಪಂಗಡದ ವಲಸೆ ಬಂದ ಒಂದೆರಡು ಕುಟುಂಬಗಳು ಕಂಡುಬಂದರೂ ಅವರು ಚುನಾವಣೆಯಲ್ಲಿ ಸ್ಪರ್ಧಿಸುವುಕ್ಕೆ ಮುಂದೆ ಬರುತ್ತಿಲ್ಲ. ಹೀಗಾಗಿ ಪರಿಶಿಷ್ಟ ಪಂಗಡಕ್ಕೆ ಹಂಚಿಕೆಯಾದ ಮೀಸಲಾತಿ ಸ್ಥಾನಗಳಿಗೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಸ್ಪರ್ಧಿಸುವುದು ಕಂಡುಬರುತ್ತದೆ). ಇತರೆ/ಸಾಮಾನ್ಯ ವರ್ಗದ ಶೇ.64(25) ಮಹಿಳಾ ಮಾಹಿತಿದಾರರಿದ್ದು, ಇವರಲ್ಲಿ ಶೇ.24ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತ ನೀಡುತ್ತೇವೆಂದು ತಿಳಿಸಿದ್ದಾರೆ. ಒಟ್ಟಾರೆಯಾಗಿ ಪರಿಶಿಷ್ಟ ಜಾತಿಯಲ್ಲಿ ಶೇ.32ರಷ್ಟು ಮಹಿಳೆಯರು ಮತ್ತು ಇತರೆ/ಸಾಮಾನ್ಯ ವರ್ಗದಲ್ಲಿ ಶೇ.13ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ಚಲಾಯಿಸುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–4.4). ಒಟ್ಟಾರೆಯಾಗಿ ಈ ಪಂಚಾಯಿತಿಯಲ್ಲಿ ಶೇ.80ರಷ್ಟು ಮಹಿಳೆಯರು ಮತ್ತು ಮಹಿಳೆಯರಲ್ಲೇ ಶೇ.69 ಮಹಿಳೆಯರು ಅವರ ಸ್ವನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಈ ಮೇಲಿನ ಅಂಕಿಅಂಶಗಳ ವಿಶ್ಲೇಷಣೆಯ ಪ್ರಕಾರ ಈ ಪಂಚಾಯಿತಿಯಲ್ಲಿ ಮಹಿಳೆಯರ ಮತದಾನ ಪ್ರಾತಿನಿಧ್ಯದಲ್ಲಿ ಸ್ವನಿರ್ಧಾರದ ಪ್ರಮಾಣ ಉತ್ತಮವಾಗಿದೆ ಎಂದು ಕಂಡುಬಂದರೂ, ಅದು ಸಮಗ್ರವಾಗಿಲ್ಲ. ಆದರಿಂದ ಇಲ್ಲಿ ಸಹ ಮಹಿಳೆ ಪ್ರಾತಿನಿಧಿಕ ಮತದಾರಳಾಗಿದ್ದಾಳೆ ವಿನಹ ಪಾಲುದಾರಿಕೆ ಮತದಾರಳಾಗಿಲ್ಲ ಎಂಬ ಅಂಶ ಸ್ಪಷ್ಟವಾಗಿ ಕಂಡುಬರುತ್ತದೆ.

ತೌಲನಿಕ ಅಧ್ಯಯನ

ಬಯಲುಸೀಮೆ ಮತ್ತು ಮಲೆನಾಡು ಪ್ರದೇಶಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ಗ್ರಾಮಪಂಚಾಯಿತಿಗಳಲ್ಲಿ ಜಾತಿ ಮತ್ತು ವರ್ಗವಾರು ಮಹಿಳೆಯರ ಮತಾಧಿಕಾರ ಯಾರ ಕೈಯಲ್ಲಿದೆ ಎಂದು ಪರಸ್ಪರ ಹೋಲಿಕೆ ಮಾಡಿ ನೋಡಲಾಗಿದೆ. ಹೊಸಪೇಟೆ ತಾಲೂಕಿನ ಎರಡು ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಜಾತಿವಾರು ಚುನಾವಣಾ ಪ್ರಾತಿನಿಧ್ಯ ಪಡೆದ 147 ಸ್ತ್ರೀ–ಪುರುಷರು ನೀಡಿದ ಮಾಹಿತಿಯ ಪ್ರಮಾಣವನ್ನು ತಾಲೂಕು ಅಥವಾ ಜಿಲ್ಲೆಗೆ ಹೋಲಿಸಿದಾಗ, ಹೊಸಪೇಟೆ ತಾಲೂಕು ಅಥವಾ ಬಳ್ಳಾರಿ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿಯವರಲ್ಲಿ ಶೇ.76ರಷ್ಟು ಮಹಿಳೆಯರು, ಪರಿಶಿಷ್ಟ ಪಂಗಡದವರಲ್ಲಿ ಶೇ.79ರಷ್ಟು

ಮಹಿಳೆಯರು ಮತ್ತು ಇತರೆ/ಸಾಮಾನ್ಯ ವರ್ಗದಲ್ಲಿ ಶೇ.80ರಷ್ಟು ಮಹಿಳೆಯರು ಪುರುಷರು ಹೇಳಿದ ಪಕ್ಷ/ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ, ಜಿಲ್ಲೆಯಲ್ಲಿ 78ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತ ಚಲಾಯಿಸುವುದು ಕಂಡುಬರುತ್ತದೆ.

ಸಿದ್ದಾಪುರ ತಾಲೂಕಿನ ಎರಡು ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಜಾತಿವಾರು ಚುನಾವಣಾ ಪ್ರಾತಿನಿಧ್ಯ ಪಡೆದ 148 ಸ್ತ್ರೀ–ಪುರುಷರು ನೀಡಿದ ಮಾಹಿತಿಯ ಪ್ರಮಾಣವನ್ನು ತಾಲೂಕು ಅಥವಾ ಜಿಲ್ಲೆಗೆ ಹೋಲಿಸಿದಾಗ, ಸಿದ್ದಾಪುರ ತಾಲೂಕು/ಉತ್ತರ ಕನ್ನಡ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿ/ಪಂಗಡದ ಸಮುದಾಯದಲ್ಲಿ ಶೇ.35ರಷ್ಟು ಮಹಿಳೆಯರು ಮತ್ತು ಇತರೆ/ಸಾಮಾನ್ಯ ವರ್ಗದ ಸಮುದಾಯದಲ್ಲಿ ಶೇ.31ರಷ್ಟು ಮಹಿಳೆಯರು ಪುರುಷರು ಹೇಳಿದ ಪಕ್ಷ/ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ, ಜಿಲ್ಲೆಯಲ್ಲಿ 36ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತ ಚಲಾಯಿಸುವುದು ಕಂಡುಬರುತ್ತದೆ.

ಬಯಲುಸೀಮೆ ಬಳ್ಳಾರಿ ಜಿಲ್ಲೆಯಲ್ಲಿ ಮಹಿಳೆಯರು ಮತಾಧಿಕಾರದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಆದರೆ ಮಲೆನಾಡಿನ ಉತ್ತರ ಕನ್ನಡ ಜಿಲ್ಲೆಯ ಮಹಿಳೆಯರಲ್ಲಿ ಸ್ವನಿರ್ಧಾರದಂತೆ ಮತದಾನ ಮಾಡುವ ಪ್ರಮಾಣ ಉತ್ತಮವಾಗಿ ಕಂಡುಬರುತ್ತದೆ. ಇದಕ್ಕೆ ಕೆಲವು ಕಾರಣಗಳನ್ನು ನೀಡಬಹುದು. ಬಳ್ಳಾರಿ ಹಿಂದುಳಿದ ಮತ್ತು ಹೆಚ್ಚು ಪರಿಶಿಷ್ಟರು ಇರುವ ಜಿಲ್ಲೆಯಾಗಿದೆ. ಉತ್ತರ ಕನ್ನಡ ಜಿಲ್ಲೆ ಅಭಿವೃದ್ಧಿ ಪಥದಲ್ಲಿರುವ ಮತ್ತು ಹೆಚ್ಚು ಇತರೆ/ಸಾಮಾನ್ಯ ಮೇಲ್ವರ್ಗದವರು ಇರುವ ಜಿಲ್ಲೆಯಾಗಿದೆ. ಸಾಕ್ಷರತೆ ಪ್ರಮಾಣವು ಬಳ್ಳಾರಿ ಜಿಲ್ಲೆಗಿಂತ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಇದೆ. ಈ ಜಿಲ್ಲೆಗಳ ಗ್ರಾಮಪಂಚಾಯಿತಿಗಳ ಜನರು ಮುಖ್ಯವಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಕೃಷಿ ಕೆಲಸ, ಉದ್ಯೋಗ ಅವಕಾಶಗಳು ಮತ್ತು ಹಣಕಾಸಿನ ವಹಿವಾಟು ಮಲೆನಾಡಿನ ಪಂಚಾಯಿತಿಗಳಿಂತ ಬಯಲುಸೀಮೆಯ ಪಂಚಾಯಿತಿಗಳಲ್ಲಿ ಉತ್ತಮವಾಗಿದೆ. ಆದರೆ ಲಿಂಗ ಸಮಾನತೆಯ ಪ್ರಜ್ಞೆ ಮತ್ತು ಪಂಚಾಯಿತಿ ಚಟುವಟಿಕೆಗಳಲ್ಲಿ ಭಾಗವಹಿಸುವ ಅರಿವು ಬಯಲುಸೀಮೆ ಪಂಚಾಯಿತಿಗಳಿಗಿಂತ ಮಲೆನಾಡು ಪಂಚಾಯಿತಿಗಳಲ್ಲಿ ಹೆಚ್ಚು ಇರುವುದು ಕಂಡುಬರುತ್ತದೆ. ಈ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದಾಗ, ಪರಿಶಿಷ್ಟ ಜಾತಿಯಲ್ಲಿ ಶೇ.58ರಷ್ಟು ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ಶೇ.83ರಷ್ಟು ಮಹಿಳೆಯರು ಮತ್ತು ಇತರೆ/ಸಾಮಾನ್ಯ ವರ್ಗದವರಲ್ಲಿ ಶೇ.48ರಷ್ಟು ಮಹಿಳೆಯರು ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ರಾಜ್ಯದಲ್ಲಿ 58ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತ ಚಲಾಯಿಸುವುದು ಕಂಡುಬರುತ್ತದೆ.

4.6 ಶಿಕ್ಷಣ: ಮಹಿಳಾ ಮತದಾನ ಮತ್ತು ಮಹಿಳಾ ಸಬಲೀಕರಣ

ಶಿಕ್ಷಣ ಸಮಾಜದ ಪರಿಸರವನ್ನು ಬದಲಾಯಿಸುವ ಸೂಚಿಯಾಗಿದೆ. ಮಾನವನ ಅಭಿವೃದ್ಧಿ ಸೂಚ್ಯಂಕದಲ್ಲಿ ಶಿಕ್ಷಣಕ್ಕೆ ಎರಡನೇ ಸ್ಥಾನವಿದೆ. ಒಂದು ಪ್ರದೇಶದ ಮಹಿಳಾ ಸಬಲೀಕರಣವನ್ನು ನಿರ್ಧರಿಸುವಲ್ಲಿ ಆರೋಗ್ಯದ ನಂತರ ಶಿಕ್ಷಣದ ಪಾತ್ರ ಕಂಡುಬರುತ್ತದೆ. ಮಹಿಳಾ ಸಬಲೀಕರಣಕ್ಕೆ

ಅಗತ್ಯವಾಗಿರುವ ಶಿಕ್ಷಣವು ಗ್ರಾಮೀಣ ಸಮಾಜವನ್ನು ಒಳಗೊಂಡಂತೆ ಮಹಿಳೆಯರಿಗೆ ಸಮಾನವಾಗಿ ನೀಡಿದ್ದರೂ ಅದು ಸಮಾನವಾಗಿ ಸಿಗುತ್ತಿಲ್ಲ. ಲಿಂಗಸಂಬಂಧಿ ಅಸಮಾನತೆಯಿಂದಾಗಿ ಮಹಿಳೆ ಶಿಕ್ಷಣದಿಂದ ವಂಚಿತಳಾಗುತ್ತಿದ್ದಾಳೆ. ಲಿಂಗ ಅಸಮಾನತೆಯನ್ನು ಹೋಗಲಾಡಿಸಲು ಮಹಿಳೆಯರಿಗೆ ಸಮಾನವಾಗಿ ಶಿಕ್ಷಣ ಸಿಗಬೇಕು. ಈ ನಿಟ್ಟಿನಲ್ಲಿ ಪ್ರಯತ್ನಗಳು ನಡೆದಾಗ ಮಹಿಳಾ ಸಬಲೀಕರಣ ಸಾಧ್ಯವೆನಿಸಬಹುದು.

ಶಿಕ್ಷಣ ಮಾನವನ ಮೂಲಭೂತ ಹಕ್ಕು. ಇದು ಮಾನವನ ಮೂಲಭೂತ ಅಗತ್ಯಗಳಲ್ಲಿ ಒಂದು. ಶಿಕ್ಷಣ ಸಮಾಜದಲ್ಲಿ ಗೌರವ, ಪ್ರತಿಷ್ಠೆಯ ಸ್ಥಾನವನ್ನು ನೀಡುತ್ತದೆ. ಇದು ಜನರ ಸ್ವಾತಂತ್ರ್ಯದ ಮತ್ತು ಸ್ವಾವಲಂಬನೆಯ ಸಂಕೇತವಾಗಿದೆ. ಶಿಕ್ಷಣ ವೈಯಕ್ತಿಕ ಮತ್ತು ಸಾಮಾಜಿಕ ಬದುಕಿಗೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಸಾಮರ್ಥ್ಯವನ್ನು ಜನತೆಗೆ ನೀಡುತ್ತದೆ. ಜನರು ತಮ್ಮ ಬದುಕುಗಳನ್ನು ಉತ್ತಮಪಡಿಸಿಕೊಳ್ಳಲು ಇರುವ ಅವಕಾಶಗಳಲ್ಲಿ ತಮಗೆ ಬೇಕಾದುದನ್ನು ಪ್ರತಿನಿಧಿಸುವ ಸ್ವಾತಂತ್ರ್ಯವನ್ನು ಶಿಕ್ಷಣ ನೀಡುತ್ತದೆ. ಇಲ್ಲಿ ಶಿಕ್ಷಣವೆಂದರೆ ಸಬಲೀಕರಣವೆಂದು ಪರಿಭಾವಿಸಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಶಿಕ್ಷಣ ಸಮಾಜದ ಅಥವಾ ಸಮುದಾಯದ ಕನ್ನಡಿಯಾಗಿರುತ್ತದೆ.

ಶಿಕ್ಷಣ ಸಮಾಜದಲ್ಲಿರುವ ಅಸಮಾನತೆಯನ್ನು ಕಡಿಮೆ ಮಾಡುತ್ತದೆ ಎಂಬ ಗ್ರಹಿಕೆ ಇದೆ. ಶಿಕ್ಷಣ, ವಿಶೇಷವಾಗಿ ಮಹಿಳಾ ಶಿಕ್ಷಣ ಸಮಾಜದಲ್ಲಿರುವ ಲಿಂಗಾಧಾರಿತ ಅಸಮಾನತೆಯನ್ನು ನಿವಾರಿಸುವಲ್ಲಿ ಸಹಕಾರಿಯಾಗುತ್ತದೆ. ಶಿಕ್ಷಣ ವ್ಯಕ್ತಿಗತವಾಗಿ ಸಬಲೀಕರಣದ ಸಾಧನವೂ ಹೌದು, ಸಾಮಾಜಿಕವಾಗಿ ಅಭಿವೃದ್ಧಿ ಸೂಚಿಯೂ ಹೌದು. ಶಿಕ್ಷಣವನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಸಹಭಾಗಿತ್ವದ ನೆಲೆಯಲ್ಲಿ ಭಾಗವಹಿಸುವ ಸಾಧನವಾಗಿ ಮತ್ತು ಪ್ರಾತಿನಿಧ್ಯದ ನೆಲೆಯಲ್ಲಿ ನೀತಿಗಳನ್ನು ರೂಪಿಸಿ, ಅನುಷ್ಠಾನಗೊಳಿಸುವ ಪ್ರಕ್ರಿಯೆಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಶಕ್ತಿ-ಸಾಮರ್ಥ್ಯವಾಗಿ ಸಬಲೀಕರಣದ ನೆಲೆಯಲ್ಲಿ ನೋಡಲಾಗುತ್ತದೆ.

ಆಧುನಿಕ ಶಿಕ್ಷಣವು ಸಾಂಪ್ರದಾಯಿಕ ಹಾಗೂ ವೈದಿಕ ಶಿಕ್ಷಣದಲ್ಲಿ ಕಂಡುಬರುವ ಲಿಂಗ ಅಸಮಾನತೆಯನ್ನು ನಿಯಂತ್ರಿಸುವಲ್ಲಿ ಉಪಯೋಗಕಾರಿಯಾಗುತ್ತಿದೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಕಂಡುಬರುವ ಲಿಂಗ ತಾರತಮ್ಯವನ್ನು ನಿವಾರಿಸುವಲ್ಲಿ ಮತ್ತು ಮಹಿಳೆಯರಿಗೆ ಪ್ರಾತಿನಿಧ್ಯ ದೊರಕಿಸಿಕೊಡುವಲ್ಲಿ ಯಶಸ್ವಿಯಾಗುತ್ತಿದೆ. ಸಾಂಪ್ರದಾಯಿಕ ಶಿಕ್ಷಣದ ವ್ಯವಸ್ಥೆಯಲ್ಲಿ ಮಹಿಳೆಯರನ್ನು ನಿರ್ಬಂಧಿಸುತ್ತಿದ್ದ ಅಸಮಾನತೆ ಮತ್ತು ಅಸಮರ್ಥತೆ ಇಲ್ಲವಾಗಿಸುವಲ್ಲಿ ಆಧುನಿಕ ಶಿಕ್ಷಣದ ಪ್ರಾಮುಖ್ಯತೆ ಕಂಡುಬರುತ್ತಿದೆ. ಆಧುನಿಕ ಶಿಕ್ಷಣವು ಮಹಿಳೆಯರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ನಿರ್ಧಾರ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವ ಮುಕ್ತ ಅವಕಾಶ ನೀಡುತ್ತಿದೆ. ರಾಜಕೀಯವಾಗಿ ನೋಡುವುದಾದರೆ, ಶಿಕ್ಷಣವು ಪಕ್ಷದ/ವ್ಯಕ್ತಿಯ ತತ್ವ ಸಿದ್ಧಾಂತಗಳು ಮತ್ತು ಪ್ರಣಾಳಿಕೆಗಳೇನು ಎಂಬುದನ್ನು ತಿಳಿಸುತ್ತದೆ. ಚುನಾವಣೆ ವೇಳೆ ಯಾವ ಪಕ್ಷ/ಅಭ್ಯರ್ಥಿಯನ್ನು ಬೆಂಬಲಿಸಬೇಕು ಅಥವಾ ಬೆಂಬಲಿಸಬಾರದು ಎಂಬ ಅರಿವನ್ನು ಮೂಡಿಸುತ್ತದೆ. ಹಿಂದಿನ ಮತ್ತು

ಇಂದಿನ ರಾಜಕೀಯ ವಿದ್ಯಮಾನಗಳನ್ನು ಮತ್ತು ರಾಜಕೀಯ ಸಂರಚನೆಗಳನ್ನು ವಿಶ್ಲೇಷಿಸುವಲ್ಲಿ, ಸರಿ–ತಪ್ಪುಗಳನ್ನು ನಿರ್ಣಯಿಸುವಲ್ಲಿ ತಿಳುವಳಿಕೆಯನ್ನು ಹೆಚ್ಚಿಸುತ್ತದೆ. ಅಶಿಕ್ಷಿತರಿಗಿಂತ ಶಿಕ್ಷಿತರಲ್ಲಿ ರಾಜಕೀಯ ಪ್ರಾತಿನಿಧ್ಯ ವಹಿಸುವ ಪ್ರಜ್ಞೆ ಅಧಿಕವಾಗಿರುತ್ತದೆ ಎಂಬ ನಂಬಿಕೆ ಇದೆ. ಆದರೂ ಅವಕಾಶಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಮಹಿಳೆ ಮತ್ತೊಂದು ರೂಪದಲ್ಲಿ ಲಿಂಗ ಅಸಮಾನತೆಗೆ ಒಳಗಾಗುವುದು ಕಂಡುಬರುತ್ತದೆ.

ಸ್ವತಂತ್ರ ಭಾರತದಲ್ಲಿ ಸಂವಿಧಾನಾತ್ಮಕ ರಾಜಕೀಯ ವ್ಯವಸ್ಥೆ ಜಾರಿಗೆ ಬಂದಾಗಿನಿಂದಲೂ ನಾಗರಿಕರಿಗೆ ಮತದಾರರಾಗಿ ಅಥವಾ ಜನಪ್ರತಿನಿಧಿಗಳಾಗಿ ಪ್ರಾತಿನಿಧ್ಯ ವಹಿಸಲು ಶಿಕ್ಷಣ ಒಂದು ಅರ್ಹತೆಯ ಸಂಗತಿಯಾಗಿಲ್ಲ. ಸಂವಿಧಾನವು ಎಲ್ಲಾ ಜಾತಿ, ವರ್ಗಗಳ ಸ್ತ್ರೀ–ಪುರುಷರಿಗೂ ರಾಜಕೀಯ ಅಥವಾ ಮತದಾನದ ಪ್ರಾತಿನಿಧ್ಯ ವಹಿಸಲು ಸಮಾನ ಅವಕಾಶವನ್ನು ನೀಡಿದೆ. ಸಂವಿಧಾನದ 326ನೇ ವಿಧಿಯು ಲಿಂಗ, ಜಾತಿ, ವರ್ಗ, ವರ್ಣ, ಶಿಕ್ಷಣ ಇತ್ಯಾದಿಗಳ ತಾರತಮ್ಯಗಳನ್ನು ಮಾಡದೇ ಎಲ್ಲರಿಗೆ ಸಮಾನವಾಗಿ ಮತದಾನದ ಪ್ರಾತಿನಿಧ್ಯವನ್ನು ನೀಡಿದೆ. ಆದರೆ 1993ರ ನಂತರ ಮಹಿಳೆಯರಿಗೆ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳಾಗಿ ಪ್ರಾತಿನಿಧ್ಯ ಪಡೆಯಲು ಮೀಸಲಾತಿ ಮೂಲಕ ಅವಕಾಶ ನೀಡಲಾಗಿದೆ. ಆದರೆ ರಾಜಕೀಯ ಪ್ರಕ್ರಿಯೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಲು ಮತ್ತು ಸೂಕ್ತ ನಿರ್ಧಾರ ಕೈಗೊಳ್ಳಲು ಶಿಕ್ಷಣದ ಪ್ರಾಮುಖ್ಯತೆ ಕಂಡುಬರುತ್ತದೆ. ಇಂದು ಅನಕ್ಷರಸ್ಥ ಮತ್ತು ಪ್ರಾಥಮಿಕ ಶಿಕ್ಷಣ ಪಡೆದ ಚುನಾಯಿತ ಮಹಿಳೆಯರು ಪಂಚಾಯಿತಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಶಿಕ್ಷಣದ ಬೇಡಿಕೆಯನ್ನು ಮತ್ತು ತಮ್ಮ ಮನೆಯ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅಗತ್ಯತೆಯನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ.[8] ಈ ನಿಟ್ಟಿನಲ್ಲಿ ಶಿಕ್ಷಣ ಉಪಯೋಗಕಾರಿ ಸಾಧನವಾಗಿದೆ. ಪುರುಷರಿಗೆ ಸಮಾನವಾಗಿ ಶಿಕ್ಷಿತ ಮತ್ತು ಅಶಿಕ್ಷಿತ ಮಹಿಳೆಯರು ಚುನಾವಣೆಯಲ್ಲಿ ಮತದಾರರಾಗಿ ಭಾಗವಹಿಸುತ್ತಾರೆ. ಆದರೆ ಯಾವ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡಬೇಕೆಂಬ ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರು ಸೋಲುತ್ತಿದ್ದಾರೆ. ಕಾರಣ ಮಹಿಳೆಯರು ಮತಾಧಿಕಾರವನ್ನು ಚಲಾಯಿಸುವಲ್ಲಿ ಪುರುಷರ ನಿಯಂತ್ರಣಕ್ಕೆ ಒಳಪಟ್ಟು, ಅವರು ತೆಗೆದುಕೊಂಡ ನಿರ್ಧಾರಕ್ಕೆ ಬದ್ಧರಾಗಿ ಮತ ನೀಡುವುದು ಕಂಡುಬರುತ್ತದೆ. ಅಂದರೆ ಮಹಿಳೆ ಮತ ನೀಡುವ ನಿರ್ಧಾರದ ಪ್ರಕ್ರಿಯೆಯಲ್ಲಿ ತಿರಸ್ಕಾರಕ್ಕೆ ಒಳಗಾಗುವುದು ಕಂಡುಬರುತ್ತದೆ. ಸಮಾಜದಲ್ಲಿ ಮಹಿಳೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸಮಾನತೆಗೆ ಅಥವಾ ನಿರ್ಲಕ್ಷಕ್ಕೆ ಒಳಗಾಗಿದ್ದಾಳೆಂಬುದರ ಪ್ರತಿಬಿಂಬವಾಗಿ ಶೈಕ್ಷಣಿಕ ಅಸಮಾನತೆ ಕಂಡುಬರುತ್ತದೆಂಬ ನಂಬಿಕೆಯಿದೆ. ಆದರೆ ಮಹಿಳೆ ಮತ ನೀಡುವ ನಿರ್ಧಾರದ ಪ್ರಕ್ರಿಯೆಯಲ್ಲಿ ಅಸಮಾನತೆಗೆ ಅಥವಾ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾಳೆಂಬುದರ ಪ್ರತಿಬಿಂಬವಾಗಿ ಶೈಕ್ಷಣಿಕ ಅಸಮಾನತೆ ಕಂಡುಬರುತ್ತಿಲ್ಲ. ಕಾರಣ ಮತಾಧಿಕಾರ ಮಹಿಳೆಯರ ಭೌತಿಕ ಮತ್ತು ಬೌದ್ಧಿಕ ಸ್ವರೂಪದ ಫಲವಲ್ಲ. ಅದು ಲಿಂಗ ಅಸಮಾನತೆಯ ಫಲವಾಗಿ ರಾಜಕೀಯ ಹಿತಾಸಕ್ತಿ ಪುರುಷ ಸಮಾಜವು ವಿಧಿಸಿರುವ ಕಟ್ಟಳೆಯಾಗಿದೆ. ಇಂತಹ ಸನ್ನಿವೇಶದಲ್ಲಿ ಶಿಕ್ಷಣ ಗೌಣವಾಗುತ್ತದೆ

ಶಿಕ್ಷಣವನ್ನು ಸಮಗ್ರವಾಗಿ ನೋಡಲಾಗುತ್ತಿದೆ. ಶಿಕ್ಷಣದಲ್ಲಿ ಮಹಿಳೆಯರ ಸಮಾನ ಪ್ರಾತಿನಿಧ್ಯವು ಸಮಾಜದಲ್ಲಿ ಅವರ ಸ್ಥಾನಮಾನವನ್ನು ಪ್ರತಿನಿಧಿಸುತ್ತದೆ. ಶಿಕ್ಷಣದಲ್ಲಿ ಮಹಿಳೆಯರ ಸಮಾನ ಪ್ರಾತಿನಿಧ್ಯವು ಉತ್ತಮವಾಗಿ ಕಂಡುಬಂದರೂ ನಿರ್ಧಾರದ ಪ್ರಕ್ರಿಯೆಯಲ್ಲಿ ಪುರುಷನ ನಿಯಂತ್ರಣಕ್ಕೆ ಒಳಪಡುವುದು ಕಂಡುಬರುತ್ತದೆ. ಈ ಏಣಿ–ಶ್ರೇಣಿಯ ಸಮಾಜದಲ್ಲಿ ಎಲ್ಲಾ ಜಾತಿ ವರ್ಗಗಳ ಶಿಕ್ಷಿತ ಮತ್ತು ಅಶಿಕ್ಷಿತ ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಪುರುಷನ ನಿಯಂತ್ರಣಕ್ಕೆ ಒಳಪಡುವುದು ಸಹಜ ಸಂಗತಿಯಾಗಿದೆ. ಇದು ಮಹಿಳೆಯರ ವೈಯಕ್ತಿಕ ಮತ್ತು ಸಮುದಾಯದ ಬದುಕಿಗೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವುದರ ಮೇಲೆ ಅಡ್ಡ ಪರಿಣಾಮ ಬೀರುತ್ತದೆಂದು ಗ್ರಹಿಸಲಾಗಿದೆ.

ಶಿಕ್ಷಣ ಮಹಿಳೆಯರನ್ನು ಸಮುದಾಯದ ಬದುಕಿನಲ್ಲಿ ಪ್ರಾತಿನಿಧ್ಯ ವಹಿಸುವುದರ ಮೂಲಕ ಅವರನ್ನು ಸಬಲೀಕರಣಗೊಳಿಸುವ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಹಾಗೆಯೇ ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳೆ ಮತದಾರಳಾಗಿ ಭಾಗವಹಿಸುವುದಕ್ಕೂ ಮತ್ತು ಸರಿಕಂಡ ಅಭ್ಯರ್ಥಿಗೆ/ ಪಕ್ಷಕ್ಕೆ ಮತ ನೀಡುವ ನಿರ್ಧಾರ ತೆಗೆದುಕೊಳ್ಳುವುದಕ್ಕೂ ಶಿಕ್ಷಣದ ಪಾತ್ರ ಅಷ್ಟೇ ಮುಖ್ಯವಾಗಿದೆಯೆಂದು ಪರಿಭಾವಿಸಿಕೊಳ್ಳಲಾಗಿದೆ. ಇಂದು ಗ್ರಾಮಪಂಚಾಯಿತಿ ಚುನಾವಣೆಗಳು ಗ್ರಾಮೀಣ ಮಹಿಳೆಯರಿಗೆ ಸಮಗ್ರ ರಾಜಕೀಯ ಪ್ರಾತಿನಿಧ್ಯ ನೀಡುವುದರ ಮೂಲಕ ಅವರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ನಿರ್ಣಾಯಕ ಪಾತ್ರವಹಿಸುವುದು ಕಂಡುಬರುತ್ತಿದೆ. ಅಂದರೆ ಮಹಿಳೆ ಮತದಾರಳಾಗಿ ಭಾಗವಹಿಸುವ ಪ್ರಮಾಣ ಅಧಿಕವಾಗಿ ಕಂಡುಬರುತ್ತದೆ. ಆದರೆ ಪುರುಷ ಹಿಡಿತದಿಂದ ಸಡಿಲಗೊಂಡು ಸ್ವತಂತ್ರವಾಗಿ ಸ್ವನಿರ್ಧಾರದಂತೆ ಮತ ಚಲಾಯಿಸುವ ಮಹಿಳೆಯರ ಸಂಖ್ಯೆ ಅಧಿಕ ಪ್ರಮಾಣದಲ್ಲಿ ಕಂಡುಬಂದಾಗ ಅವರಿಗೆ ಸಮಗ್ರ ರಾಜಕೀಯ ಪ್ರಾತಿನಿಧ್ಯ ದೊರೆತಂತಾಗುತ್ತದೆ. ಆಗ ಅವರು ಸಬಲೀಕರಣ ಗೊಂಡಂತಾಗುತ್ತದೆ. ಆದರೆ ಗ್ರಾಮೀಣ ಸಮಾಜದಲ್ಲಿ ಎಲ್ಲಾ ಜಾತಿ ಜನಾಂಗಗಳಲ್ಲಿ ಶಿಕ್ಷಿತ ಮತ್ತು ಅಶಿಕ್ಷಿತ ಮಹಿಳೆಯರನ್ನು ಸಂತಾನೋತ್ಪತ್ತಿ, ಮನೆಕೆಲಸ ಮತ್ತು ಸಂಗೋಪನಾ ದುಡಿಮೆಗಳಿಗೆ ಸೀಮಿತಗೊಳಿಸಿ, ಅವರನ್ನು ಪ್ರಾತಿನಿಧಿಕ ಮತದಾರರನ್ನಾಗಿ ನೋಡುವ ಪುರುಷಹಿತಾಸಕ್ತಿ ಸಮಾಜ ಕಂಡುಬರುತ್ತದೆ ವಿನಾ ಪಾಲುದಾರಿಕೆ ಮತದಾರಳನ್ನಾಗಿ ನೋಡುವುದು ಕಂಡುಬರುತ್ತಿಲ್ಲ. ಆದರೆ ಮಹಿಳೆಯರಿಗೆ ಸಾರ್ವತ್ರಿಕ ಚುನಾವಣೆಯಲ್ಲಿ ಸಮಾನ ಪ್ರಾತಿನಿಧ್ಯ ಸಿಕ್ಕಿದೆ. ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ಮತದಾರಳಾಗಿ ಭಾಗವಹಿಸುವ ಮಹಿಳೆಯರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಅಕ್ಷರಸ್ಥ ಮತ್ತು ಅನಕ್ಷರಸ್ಥ ಮಹಿಳೆಯರಲ್ಲಿ ಯಾರು ಚುನಾವಣೆಯಲ್ಲಿ ಸ್ವತಂತ್ರವಾಗಿ ಮತ್ತು ಸ್ವನಿರ್ಧಾರದಂತೆ ಮತ ನೀಡುವರೋ ಅಥವಾ ಪುರುಷರು ಹೇಳಿದಂತೆ ಮತ ನೀಡುವರೋ ಎಂದು ನೋಡುವುದಾಗಿದೆ. ಜೊತೆಗೆ ಶಿಕ್ಷಿತ ಮತ್ತು ಅಶಿಕ್ಷಿತ ಪುರುಷರಲ್ಲಿ ಯಾರು ಮಹಿಳೆಯರಿಗೆ ಅವರ ಸ್ವನಿರ್ಧಾರದಂತೆ ಮತ ಚಲಾಯಿಸುವುದಕ್ಕೆ ಅವಕಾಶ ನೀಡುತ್ತಾರೋ ಎಂದು ನೋಡುವುದು ಈ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ. ಇದರ ಜೊತೆಗೆ ಪುರುಷ ಹೇಳಿದಂತೆ ಅಥವಾ ಸ್ವಇಚ್ಛೆಯಂತೆ ಮತ ಚಲಾಯಿಸುವ ಮಹಿಳೆಯರ ಪ್ರಮಾಣ ಯಾವ ಹಂತದ ಶಿಕ್ಷಣ ಪಡೆದ ಮಹಿಳೆಯರಲ್ಲಿ ಯಾವ ಪ್ರಮಾಣದಲ್ಲಿದೆ ಎಂಬುದನ್ನು ನೋಡುವುದು ಕೂಡ ಆಗಿರುತ್ತದೆ.

ಈ ಅಧ್ಯಾಯದ ಹಿಂದಿನ ಭಾಗದಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ ಜನಪ್ರತಿನಿಧಿಗಳ/ಅಭ್ಯರ್ಥಿಗಳ ಜಾತಿ ಮತ್ತು ವರ್ಗಗಳ ಆಧಾರದ ಮೇಲೆ ಮಹಿಳೆಯರ ಮತಾಧಿಕಾರದ ಪ್ರಾತಿನಿಧ್ಯವನ್ನು ಪರಿಶೀಲನೆ ಮಾಡಲಾಗಿದೆ. ಹಾಗೆಯೇ ಈ ಭಾಗದಲ್ಲಿ ಇದೇ ಮಾದರಿಯಲ್ಲಿ ಮಾಹಿತಿದಾರರ ಶಿಕ್ಷಣದ ಆಧಾರ ಮೇಲೆ ಮಹಿಳೆಯರ ಮತ ನೀಡುವ ನಿರ್ಧಾರವನ್ನು ಪರಿಶೀಲಿಸಲಾಗಿದೆ. ಪ್ರಾಥಮಿಕ ಮಾಹಿತಿಯಿಂದ ಪಡೆದ ಸದಸ್ಯರ ಶೈಕ್ಷಣಿಕ ವಿವರವನ್ನು ವಿವರವಾಗಿ ಕೋಷ್ಟಕ–4.5ರಲ್ಲಿ ನೀಡಲಾಗಿದೆ. ಆದರೆ ವಿಶ್ಲೇಷಣೆಯ ದೃಷ್ಟಿಯಿಂದ ಸದಸ್ಯರ ಶೈಕ್ಷಣಿಕ ವಿವರವನ್ನು ಅನಕ್ಷರಸ್ಥರು, 1ರಿಂದ 8ನೇ ತರಗತಿವರಗೆ ಪ್ರಾಥಮಿಕ ಹಂತ, 9ರಿಂದ 12ನೇ ತರಗತಿವರಗೆ ಪ್ರೌಢ ಹಂತ ಮತ್ತು ನಂತರ ಶೈಕ್ಷಣಿಕ ಮಟ್ಟವನ್ನು ಪದವಿ ಹಂತವೆಂದು ಪರಿಭಾವಿಸಿಕೊಂಡು ವಿವರಿಸಲಾಗಿದೆ. ಸ್ವತಂತ್ರವಾಗಿ, ಸ್ವನಿರ್ಧಾರದಂತೆ ಮತ ನೀಡುವ ಮತ್ತು ಇದ್ದ ಹಕ್ಕನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯ ಯಾವ ಹಂತದ ಶಿಕ್ಷಣ ಪಡೆದ ಮಹಿಳೆಯರಲ್ಲಿ ಹೆಚ್ಚು ಇದೆ ಎಂದು ನೋಡಲಾಗಿದೆ. ಸಾಮಾನ್ಯವಾಗಿ ಅನಕ್ಷರಸ್ಥ ಮಹಿಳೆಯರಿಗಿಂತ ಅಕ್ಷರಸ್ಥ ಮಹಿಳೆಯರು ಸ್ವನಿರ್ಧಾರದಂತೆ ಮತದಾನ ಮಾಡುವ ಪ್ರಮಾಣ ಹೆಚ್ಚು ಇರಬಹುದೆಂದು ಗ್ರಹಿಸಲಾಗಿದೆ. ಆದರೆ ಅನಕ್ಷರಸ್ಥ ಮಹಿಳೆಯರಷ್ಟೇ ಅಲ್ಲ, ಅಕ್ಷರಸ್ಥ ಮಹಿಳೆಯರು ಸಹ ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆ ಎಂಬ ಅಭಿಪ್ರಾಯವಿದೆ. ಕಾರಣ ಗ್ರಾಮೀಣ ಸಮಾಜದಲ್ಲಿ ಪುರುಷ ಯಜಮಾನಿಕೆ ಅನೂಚಾನುವಾಗಿ ಮುಂದುವರೆದುಕೊಂಡು ಬಂದಿದೆ. ಅಕ್ಷರಸ್ಥ ಮಹಿಳೆಯರು ಪುರುಷರ ಹಿಡಿತದಿಂದ ತಪ್ಪಿಸಿಕಕೊಳ್ಳಲಾರದಂತಹ ಸಾಮಾಜಿಕ ಕಟ್ಟಳೆಗಳ ನಡುವೆ ಬದುಕುತ್ತಿದ್ದಾರೆ. ಈ ಕಾರಣಗಳಿಂದ ಯಾವ ಹಂತದ ಶಿಕ್ಷಣ ಪಡೆದ ಪುರುಷರು ಮಹಿಳೆಯರಿಗೆ ಅವರ ಸ್ವನಿರ್ಧಾರದಂತೆ ಮತ ನೀಡುವ ಅವಕಾಶವನ್ನು ಬಿಟ್ಟು ಕೊಟ್ಟಿರುವರು ಮತ್ತು ಯಾವ ಹಂತದ ಶಿಕ್ಷಣ ಪಡೆದ ಮಹಿಳೆಯರು ಅವರ ಸ್ವಇಚ್ಚೆಯಂತೆ ಮತ ನೀಡುವರು ಎಂದು ನೋಡಲಾಗಿದೆ. ಶಿಕ್ಷಣಕ್ಕೂ ಮತ್ತು ಮತ ನೀಡುವ ನಿರ್ಧಾರಕ್ಕೂ ಸಂಬಂಧವಿದೆಯೇ ಎಂದು ನೋಡಲಾಗಿದೆ. ಮಹಿಳೆಯರಿಗೆ ಸ್ವನಿರ್ಧಾರದಂತೆ ಮತ ಚಲಾಯಿಸುವುದಕ್ಕೆ ಶಿಕ್ಷಣ ಒಂದು ಸಾಧನವಾಗಿದೆಯೇ ಎಂದು ನೋಡುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಇದರ ಆಧಾರದ ಮೇಲೆ ಮಹಿಳಾ ಸಬಲೀಕರಣವನ್ನು ಗುರುತಿಸಲಾಗಿದೆ. ಈ ಉದ್ದೇಶಕ್ಕಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ ಜನಪ್ರತಿನಿಧಿಗಳ/ಅಭ್ಯರ್ಥಿಗಳ ಶಿಕ್ಷಣ ಮತ್ತು ಮಹಿಳಾ ಮತಾಧಿಕಾರದ ಬಗ್ಗೆ ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿಯ ಆಧಾರದ ಮೇಲೆ ವಿಶ್ಲೇಷಣೆ ಮಾಡಲಾಗಿದೆ(ನೋಡಿ ಕೋಷ್ಟಕ–4.5).

ಬಯಲುಸೀಮೆ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2012ರ ಅವಧಿಗಳಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ 68 ಮಾಹಿತಿದಾರರನ್ನು ಸಂದರ್ಶಿಸಲಾಗಿದ್ದು, ಅವರ ಶೈಕ್ಷಣಿಕ ಮಾಹಿತಿ ಮತ್ತು ಮಹಿಳಾ ಮತಾಧಿಕಾರದ ಮಾಹಿತಿಯನ್ನು ವಿವರಿಸಲಾಗಿದೆ. ಇವರಲ್ಲಿ ಶೇ.49(33) ಪುರುಷ ಮತ್ತು ಶೇ.51(35) ಮಹಿಳಾ ಮಾಹಿತಿನಾರರು ಇದ್ದಾರೆ. ಸಂದರ್ಶಿಸಿದ 33 ಪುರುಷ ಮಾಹಿತಿದಾರರಲ್ಲಿ ಶೇ.36ರಷ್ಟು ಅನಕ್ಷರಸ್ಥರು, ಶೇ.52ರಷ್ಟು ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆದವರು ಮತ್ತು ಶೇ.12ರಷ್ಟು ಪ್ರೌಢ ಹಂತದ ಶಿಕ್ಷಣ ಪಡೆದವರಾಗಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಚುನಾವಣೆಯಲ್ಲಿ ಪುರುಷರ ನಿರ್ಧಾರದಂತೆ ಮತದಾನ ಚಲಾಯಿಸುತ್ತಾರೆಂದು ತಿಳಿಸಿದ್ದಾರೆ. ಹಾಗೆಯೇ ಸಂದರ್ಶಿಸಿದ 35 ಮಹಿಳಾ ಮಾಹಿತಿದಾರರ ಶೈಕ್ಷಣಿಕ ವಿವರ ನೋಡಿದಾಗ, ಶೇ.40ರಷ್ಟು ಅನಕ್ಷಸ್ಥರಾಗಿದ್ದು, ಇವರಲ್ಲಿ ಶೇ.71ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವುದಾಗಿ ತಿಳಿಸಿದ್ದಾರೆ. ಪ್ರಾಥಮಿಕ ಹಂತದ ಶಿಕ್ಷಣ ಪಡೆದ ಶೇ.37ರಷ್ಟು ಮಹಿಳಾ ಮಾಹಿತಿದಾರರಿದ್ದು, ಇವರಲ್ಲಿ 80ರಷ್ಟು ಮಹಿಳೆಯರು ಪುರುಷರು ಬೆಂಬಲಿಸಿದ ಅಭ್ಯರ್ಥಿಗೆ ಮತ ನೀಡುವುದಾಗಿ ಹೇಳಿದ್ದಾರೆ. ಹೊಸೂರು ಗ್ರಾಮಪಂಚಾಯಿತಿಗೆ ಮೇಲಿನ ಸಾಲಿನಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಯಾರು ಪದವಿಧರರು ಇಲ್ಲ. ಹೆಚ್ಚಾಗಿ ಅನಕ್ಷರಸ್ಥ ಮತ್ತು ಪ್ರಾಥಮಿಕ ಶಿಕ್ಷಣ ಪಡೆದವರಾಗಿದ್ದಾರೆ. ಒಟ್ಟಾರೆಯಾಗಿ ಈ ಪಂಚಾಯಿತಿಯಲ್ಲಿ 38ರಷ್ಟು ಅನಕ್ಷರಸ್ಥರಿದ್ದು, ಇವರ ಪ್ರಕಾರ ಶೇ.85ರಷ್ಟು ಮಹಿಳೆಯರು, ಪ್ರಾಥಮಿಕ ಹಂತದ ಶಿಕ್ಷಣ ಪಡೆದ ಶೇ.44ರಷ್ಟು ನಾಗರಿಕರಿದ್ದು, ಇವರ ಪ್ರಕಾರ ಶೇ.90ರಷ್ಟು ಮಹಿಳೆಯರು ಮತ್ತು ಪ್ರೌಢ ಹಂತದ ಶಿಕ್ಷಣ ಪಡೆದ ಶೇ.18ರಷ್ಟು ನಾಗರಿಕರಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ಚಲಾಯಿಸುವುದು ಕಂಡುಬರುತ್ತದೆ. ಈ ಪಂಚಾಯಿತಿಯ ಮಹಿಳೆಯರ ಪ್ರಕಾರ ಶೇ.20ರಷ್ಟು ಮಹಿಳೆಯರು ಅವರ ಸ್ವನಿರ್ಧಾರಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಅನಕ್ಷರಸ್ಥ ಮತ್ತು ಪ್ರಾಥಮಿಕ ಶಿಕ್ಷಣ ಪಡೆದ ಮಹಿಳೆಯರು ಮಾತ್ರ ಅವರ ಸ್ವನಿರ್ಧಾರದಂತೆ ಮತ ಚಲಾಯಿಸುವು ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಪಂಚಾಯಿತಿಯಲ್ಲಿರುವ ನಾಗರಿಕರ ಪ್ರಕಾರ ಶೇ.10 ಮಹಿಳೆಯರು ಮಾತ್ರ ಸ್ವಇಚ್ಚೆಯಂತೆ ಮತದಾನ ಮಾಡುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-4.5). ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜನಾಂಗದವರೇ ಹೆಚ್ಚು ಇದ್ದು, ಇವರು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಅಲ್ಲದೇ ಸಮುದಾಯದಲ್ಲಿ ಪುರುಷ ಯಜಮಾನಿಕೆಯ ಗುರುತು ಇನ್ನೂ ಸ್ಪಷ್ಟವಾಗಿರುವುದೇ ಪ್ರಮುಖ ಕಾರಣವಾಗಿದೆ.

ನಾಗೇನಹಳ್ಳಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ 79 ಮಾಹಿತಿದಾರರನ್ನು ಸಂದರ್ಶಿಸಲಾಗಿದ್ದು, ಅವರ ಶೈಕ್ಷಣಿಕ ಮಾಹಿತಿ ಮತ್ತು ಮಹಿಳಾ ಮತಾಧಿಕಾರದ ಮಾಹಿತಿಯನ್ನು ವಿವರಿಸಲಾಗಿದೆ. ಇವರಲ್ಲಿ ಶೇ.52(41) ಪುರುಷ ಮತ್ತು ಶೇ.48(38) ಮಹಿಳಾ ಮಾಹಿತಿದಾರರು ಇದ್ದಾರೆ. ಸಂದರ್ಶಿಸಿದ 41 ಪುರುಷ ಮಾಹಿತಿದಾರರಲ್ಲಿ ಶೇ.12ರಷ್ಟು ಅನಕ್ಷರಸ್ಥರಾಗಿದ್ದು,

ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮಹಿಳೆಯರು ಮತ ನೀಡುತ್ತಾರೆಂದು ಹೇಳಿರುತ್ತಾರೆ. ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆದ ಶೇ.39ರಷ್ಟು ಪುರುಷ ಸದಸ್ಯರಿದ್ದು, ಇವರ ಪ್ರಕಾರ ಶೇ.81ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ಹೇಳಿದ್ದಾರೆ. ಪ್ರೌಢ ಹಂತದ ಶಿಕ್ಷಣ ಪಡೆದ ಶೇ.34ರಷ್ಟು ಪುರುಷ ಸದಸ್ಯರಿದ್ದು, ಇವರ ಪ್ರಕಾರ ಶೇ.71ರಷ್ಟು ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ಪದವಿ ಶಿಕ್ಷಣ ಪಡೆದ ಶೇ.15 ಪುರುಷ ಸದಸ್ಯರಿದ್ದು, ಇವರ ಪ್ರಕಾರ ಶೇ.50ರಷ್ಟು ಮಹಿಳೆಯರು ಪುರುಷ ತೆಗೆದುಕೊಂಡ ನಿರ್ಧಾರದಂತೆ ಚುನಾವಣೆಯಲ್ಲಿ ಮತದಾನ ಮಾಡುವುದಾಗಿ ಹೇಳಿದ್ದಾರೆ. ಹಾಗೆಯೇ ಸಂದರ್ಶಿಸಿದ 38 ಮಹಿಳಾ ಮಾಹಿತಿದಾರರ ಶೈಕ್ಷಣಿಕ ವಿವರ ನೋಡಿದಾಗ, ಶೇ.32ರಷ್ಟು ಅನಕ್ಷಸ್ಥರಾಗಿದ್ದು, ಇವರಲ್ಲಿ ಶೇ.50ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವುದಾಗಿ ತಿಳಿಸಿದ್ದಾರೆ. ಪ್ರಾಥಮಿಕ ಹಂತದ ಶಿಕ್ಷಣ ಪಡೆದ ಶೇ.60ರಷ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.61ರಷ್ಟು ಮಹಿಳೆಯರು ಪುರುಷರು ಬೆಂಬಲಿಸಿದ ಅಭ್ಯರ್ಥಿಗೆ ಮತ ನೀಡುವರೆಂದು ಹೇಳಿದ್ದಾರೆ. ಪ್ರೌಢ ಹಂತದ ಶಿಕ್ಷಣ ಪಡೆದ ಶೇ.8ರಷ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.100ರಷ್ಟು ಮಹಿಳೆಯರು ಕುಟುಂಬದ ಪುರುಷರು ಹೇಳಿದ ಅಭ್ಯರ್ಥಿಗೆ ಮತ ನೀಡುವುದಾಗಿ ತಿಳಿಸಿದ್ದಾರೆ. ನಾಗೇನಹಳ್ಳಿ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ ಮಹಿಳೆಯರಲ್ಲಿ ಯಾರೂ ಪದವಿ ಶಿಕ್ಷಣ ಪಡೆದಿಲ್ಲ. ಹೆಚ್ಚಾಗಿ ಅನಕ್ಷರಸ್ಥ ಮತ್ತು ಪ್ರಾಥಮಿಕ ಶಿಕ್ಷಣ ಪಡೆದವರಾಗಿದ್ದಾರೆ. ಒಟ್ಟಾರೆಯಾಗಿ ಈ ಪಂಚಾಯಿತಿಯಲ್ಲಿ 21ರಷ್ಟು ನಾಗರಿಕರು ಅನಕ್ಷರಸ್ಥರಿದ್ದು, ಇವರ ಪ್ರಕಾರ ಶೇ.65ರಷ್ಟು ಮಹಿಳೆಯರು, ಪ್ರಾಥಮಿಕ ಹಂತದ ಶಿಕ್ಷಣ ಪಡೆದ ಶೇ.50ರಷ್ಟು ನಾಗರಿಕರಿದ್ದು, ಇವರ ಪ್ರಕಾರ ಶೇ.69ರಷ್ಟು ಮಹಿಳೆಯರು, ಪ್ರೌಢ ಹಂತದ ಶಿಕ್ಷಣ ಪಡೆದ ಶೇ.21ರಷ್ಟು ನಾಗರಿಕರಿದ್ದು, ಇವರ ಪ್ರಕಾರ ಶೇ.76ರಷ್ಟು ಮಹಿಳೆಯರು ಮತ್ತು ಪದವಿ ಹಂತದ ಶಿಕ್ಷಣ ಪಡೆದ ಶೇ.8ರಷ್ಟು ನಾಗರಿಕರಿದ್ದು, ಇವರ ಪ್ರಕಾರ ಶೇ.50ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತ ಚಲಾಯಿಸುವುದು ಕಂಡುಬರುತ್ತದೆ. ಈ ಪಂಚಾಯಿತಿಯ ಮಹಿಳೆಯರ ಪ್ರಕಾರ, ಶೇ.39ರಷ್ಟು ಮಹಿಳೆಯರು ಅವರ ಸ್ವನಿರ್ಧಾರಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಅನಕ್ಷರಸ್ಥ ಮತ್ತು ಪ್ರಾಥಮಿಕ ಶಿಕ್ಷಣ ಪಡೆದ ಮಹಿಳೆಯರು ಮಾತ್ರ ಅವರ ಸ್ವನಿರ್ಧಾರದಂತೆ ಮತ ಚಲಾಯಿಸುವುದಾಗಿ ತಿಳಿಸಿರುತ್ತಾರೆ(ನೋಡಿ ಕೋಷ್ಟಕ–4.5). ಒಟ್ಟಾರೆಯಾಗಿ ಈ ಪಂಚಾಯಿತಿಯ ನಾಗರಿಕರ ಪ್ರಕಾರ ಶೇ.32 ಮಹಿಳೆಯರು ಮಾತ್ರ ಸ್ವಇಚ್ಛೆಯಂತೆ ಮತದಾನ ಮಾಡುವುದು ಕಂಡುಬರುತ್ತದೆ. ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜನಾಂಗದವರು ಹೆಚ್ಚು ಇದ್ದು, ಇವರು ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಅಲ್ಲದೇ ಊಳಿಗಮಾನ್ಯ, ಮೇಲ್ವರ್ಗ/ಮೇಲ್ಜಾತಿ ಪುರುಷ ಯಜಮಾನಿಕೆಯ ಗಟ್ಟಿಕೊಂಡಿರುವುದು ಕಂಡುಬರುತ್ತದೆ.

ಮಲೆನಾಡು ಗ್ರಾಮಪಂಚಾಯಿತಿಗಳು

ಬೇಡ್ಕಣಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ 72 ಮಾಹಿತಿದಾರರನ್ನು ಸಂದರ್ಶಿಸಲಾಗಿದ್ದು, ಅವರ ಶೈಕ್ಷಣಿಕ ಮಾಹಿತಿ ಮತ್ತು ಮಹಿಳಾ ಮತಾಧಿಕಾರದ ಮಾಹಿತಿಯನ್ನು ವಿವರಿಸಲಾಗಿದೆ. ಇವರಲ್ಲಿ ಶೇ.49(35) ಪುರುಷ ಮತ್ತು ಶೇ.51(37) ಮಹಿಳಾ ಮಾಹಿತಿದಾರರೆಲ್ಲರು ಅಕ್ಷರಸ್ಥರಾಗಿದ್ದಾರೆ. ಪ್ರಾಥಮಿಕ ಮಾಹಿತಿ ನೀಡಿದ 35 ಪುರುಷ ಮಾಹಿತಿದಾರರಲ್ಲಿ ಶೇ.37ರಷ್ಟು ಪುರುಷರು ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆದವರಾಗಿದ್ದು, ಇವರ ಪ್ರಕಾರ ಶೇ.77ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ಪ್ರೌಢ ಹಂತದ ಶಿಕ್ಷಣ ಪಡೆದ ಶೇ.29ರಷ್ಟು ಪುರುಷ ಮಾಹಿತಿದರರಿದ್ದು, ಇವರ ಪ್ರಕಾರ ಶೇ.70ರಷ್ಟು ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ಪದವಿ ಶಿಕ್ಷಣ ಪಡೆದ ಶೇ.34ರಷ್ಟು ಪುರುಷ ಮಾಹಿತಿದಾರರಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಚುನಾವಣೆಯಲ್ಲಿ ಮತದಾನ ಮಾಡುತ್ತಾರೆಂದು ಹೇಳಿದ್ದಾರೆ. ಹಾಗೇಯೇ ಸಂದರ್ಶಿಸಿದ 37 ಮಹಿಳಾ ಮಾಹಿತಿದಾರರ ಶೈಕ್ಷಣಿಕ ವಿವರ ನೋಡಿದಾಗ, ಪ್ರಾಥಮಿಕ ಹಂತದ ಶಿಕ್ಷಣ ಪಡೆದ ಶೇ.68ರಷ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.52ರಷ್ಟು ಮಹಿಳೆಯರು ಪುರುಷರು ಬೆಂಬಲಿದ ಅಭ್ಯರ್ಥಿಗೆ ಮತ ನೀಡುವುದಾಗಿ ಹೇಳಿದ್ದಾರೆ. ಪ್ರೌಢ ಹಂತದ ಶಿಕ್ಷಣ ಪಡೆದ ಶೇ.32ರಷ್ಟು ಮಹಿಳೆಯರಲ್ಲಿ ಶೇ.75ರಷ್ಟು ಮಹಿಳೆಯರು ಕುಟುಂಬದ ಪುರುಷರು ಹೇಳಿದ ಅಭ್ಯರ್ಥಿಗೆ ಮತ ನೀಡುವುದಾಗಿ ತಿಳಿಸಿದ್ದಾರೆ. ಬೇಡ್ಕಣಿ ಗ್ರಾಮಪಂಚಾಯಿತಿಗೆ ಸದಸ್ಯರಾಗಿ ಆಯ್ಕೆಯಾದ ಮಹಿಳೆಯರಲ್ಲಿ ಯಾರು ಪದವಿ ಶಿಕ್ಷಣ ಪಡೆದಿಲ್ಲ. ಇವರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರೇ ಹೆಚ್ಚು ಇದ್ದಾರೆ. ಒಟ್ಟಾರೆಯಾಗಿ ಈ ಪಂಚಾಯಿತಿಯಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಪಡೆದ ಶೇ.53ರಷ್ಟು ನಾಗರಿಕರಿದ್ದು, ಇವರ ಪ್ರಕಾರ ಶೇ.61ರಷ್ಟು ಮಹಿಳೆಯರು ಮತ್ತು ಪ್ರೌಢ ಹಂತದ ಶಿಕ್ಷಣ ಪಡೆದ ಶೇ.30ರಷ್ಟು ನಾಗರಿಕರಿದ್ದು, ಇವರ ಪ್ರಕಾರ ಶೇ.73ರಷ್ಟು ಮಹಿಳೆಯರ ಪುರುಷರ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಆದರೆ ಪದವಿ ಹಂತದ ಶಿಕ್ಷಣ ಪಡೆದ ಶೇ.17ರಷ್ಟು ನಾಗರಿಕರಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಈ ಪಂಚಾಯಿತಿಯ ಮಹಿಳೆಯರಲ್ಲಿ ಶೇ.41ರಷ್ಟು ಮಹಿಳೆಯರು ಅವರ ಸ್ವನಿರ್ಧಾರಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಇವರಲ್ಲಿ ಶೇ.80ರಷ್ಟು ಪ್ರಾಥಮಿಕ ಶಿಕ್ಷಣ ಪಡೆದ ಮಹಿಳೆಯರಾಗಿದ್ದಾರೆ. ಒಟ್ಟಾರೆಯಾಗಿ ಈ ಪಂಚಾಯಿತಿಯ ನಾಗರಿಕರ ಪ್ರಕಾರ ಶೇ.46ರಷ್ಟು ಮಹಿಳೆಯರು ಮಾತ್ರ ಸ್ವಇಚ್ಛೆಯಂತೆ ಮತದಾನ ಮಾಡುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–4.5). ಈ ಪಂಚಾಯಿತಿಯಲ್ಲಿ ಪದವಿ ಶಿಕ್ಷಣ ಪಡೆದ ಪುರುಷರು ಶೇ.100ರಷ್ಟು ಮಹಿಳೆಯರಿಗೆ ಅವರ ಇಷ್ಟದಂತೆ ಮತ ನೀಡುವುದಕ್ಕೆ ಸ್ವಾತಂತ್ರ್ಯವನ್ನು ನೀಡಿರುವುದು ಕಂಡುಬರುತ್ತದೆ. ಈ ಪಂಚಾಯಿತಿಯಲ್ಲಿ ಸಹ ಪುರುಷ ಯಜಮಾನಿಕೆಯ ಕಂಡುಬಂದರೂ, ಮಹಿಳೆಯರಿಗೆ ನಿರ್ಧಾರದ ಪ್ರಕ್ರಿಯೆಯಲ್ಲಿ ಆದ್ಯತೆ ನೀಡಿರುವುದರಲ್ಲಿ ಸ್ವಲ್ಪ ಮಟ್ಟಿಗೆ

ಸುಧಾರಣೆ ಕಂಡುಬರುತ್ತದೆ. ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಶಿಷ್ಟರಿಗಿಂತ ಮೇಲ್ವರ್ಗದವರು ಹೆಚ್ಚು ಇದ್ದು, ಇವರು ಶೈಕ್ಷಣಿಕವಾಗಿ ಮುಂದುವರೆದಿರುವುದು ಈ ಬೆಳವಣಿಗೆಯ ಪ್ರಮುಖ ಕಾರಣ ಇರಬಹುದೆಂದು ಗ್ರಹಿಸಲಾಗಿದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ 76 ಮಾಹಿತಿದಾರರನ್ನು ಸಂದರ್ಶಿಸಲಾಗಿದ್ದು, ಅವರ ಶೈಕ್ಷಣಿಕ ಮಾಹಿತಿ ಮತ್ತು ಮಹಿಳಾ ಮತಾಧಿಕಾರದ ಮಾಹಿತಿಯನ್ನು ವಿವರಿಸಲಾಗಿದೆ. ಇವರಲ್ಲಿ ಶೇ.49(37) ಪುರುಷ ಮತ್ತು ಶೇ.51(39) ಮಹಿಳಾ ಮಾಹಿತಿದಾರರೆಲ್ಲರು ಅಕ್ಷರಸ್ಥರಾಗಿದ್ದಾರೆ. ಪ್ರಾಥಮಿಕ ಮಾಹಿತಿ ನೀಡಿದ 37 ಪುರುಷ ಮಾಹಿತಿದಾರರಲ್ಲಿ ಶೇ.24ರಷ್ಟು ಪುರುಷರು ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆದವರಾಗಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಅವರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ಪ್ರೌಢ ಹಂತದ ಶಿಕ್ಷಣ ಪಡೆದ ಶೇ.68ರಷ್ಟು ಪುರುಷರಿದ್ದು, ಇವರ ಪ್ರಕಾರ ಶೇ.12ರಷ್ಟು ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ಪದವಿ ಶಿಕ್ಷಣ ಪಡೆದ ಶೇ.8 ಪುರುಷರಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಚುನಾವಣೆಯಲ್ಲಿ ಮತದಾನ ಮಾಡುತ್ತಾರೆಂದು ಹೇಳಿದ್ದಾರೆ. ಹಾಗೆಯೇ ಸಂದರ್ಶಿಸಿದ 39 ಮಹಿಳಾ ಮಾಹಿತಿದಾರರ ಶೈಕ್ಷಣಿಕ ವಿವರ ನೋಡಿದಾಗ, ಪ್ರಾಥಮಿಕ ಹಂತದ ಶಿಕ್ಷಣ ಪಡೆದ ಶೇ.64ರಷ್ಟು ಮಹಿಳೆಯರಲ್ಲಿ ಶೇ.44ರಷ್ಟು ಮಹಿಳೆಯರು ಕುಟುಂಬದ ಪುರುಷರು ಸೂಚಿಸಿದ ಅಭ್ಯರ್ಥಿಗೆ ಮತ ನೀಡುವುದಾಗಿ ಹೇಳಿದ್ದಾರೆ. ಪ್ರೌಢ ಹಂತದ ಶಿಕ್ಷಣ ಪಡೆದ ಶೇ.28ರಷ್ಟು ಮಹಿಳೆಯರಲ್ಲಿ ಮತ್ತು ಪದವಿ ಹಂತದ ಶಿಕ್ಷಣ ಪಡೆದ ಶೇ.8ರಷ್ಟು ಮಹಿಳೆಯರಲ್ಲಿ ಕ್ರಮವಾಗಿ ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಮತ ನೀಡುವುದಾಗಿ ತಿಳಿಸಿದ್ದಾರೆ. ಕೋಲಸಿರ್ಸಿ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ ಮಹಿಳೆಯರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರೇ ಹೆಚ್ಚು ಇದ್ದಾರೆ. ಒಟ್ಟಾರೆಯಾಗಿ ಈ ಪಂಚಾಯಿತಿಯಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಪಡೆದ ಶೇ.43ರಷ್ಟು ನಾಗರಿಕರ ಪ್ರಕಾರ ಶೇ.32ರಷ್ಟು ಮಹಿಳೆಯರು ಪುರುಷರ ಬೆಂಬಲಿಸಿದ ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. ಪ್ರೌಢ ಹಂತದ ಶಿಕ್ಷಣ ಪಡೆದ ಶೇ.46ರಷ್ಟು ನಾಗರಿಕರ ಪ್ರಕಾರ ಶೇ.8ರಷ್ಟು ಮಹಿಳೆಯರ ಮಾತ್ರ ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಆದರೆ ಪದವಿ ಹಂತದ ಶಿಕ್ಷಣ ಪಡೆದ ಶೇ.8ರಷ್ಟು ನಾಗರಿಕರ ಪ್ರಕಾರ ಶೇ.100ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಈ ಪಂಚಾಯಿತಿಯ ಮಹಿಳೆಯರಲ್ಲಿ ಶೇ.72ರಷ್ಟು ಮಹಿಳೆಯರು ಅವರ ಸ್ವನಿರ್ಧಾರಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಇವರಲ್ಲಿ ಶೇ.50ರಷ್ಟು ಪ್ರಾಥಮಿಕ ಶಿಕ್ಷಣ ಮತ್ತು ಶೇ.40ರಷ್ಟು ಪ್ರೌಢ ಶಿಕ್ಷಣ ಪಡೆದ ಮಹಿಳೆಯರಾಗಿದ್ದಾರೆ. ಒಟ್ಟಾರೆಯಾಗಿ ಈ ಪಂಚಾಯಿತಿಯ ನಾಗರಿಕರ ಪ್ರಕಾರ ಶೇ.82ರಷ್ಟು ಮಹಿಳೆಯರು ಸ್ವಇಚ್ಛೆಯಂತೆ ಮತದಾನ ಮಾಡುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–4.5). ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಮೇಲ್ವರ್ಗದವರು ಹೆಚ್ಚಿದ್ದು,

ಇವರು ಶೈಕ್ಷಣಿವಾಗಿ ಮುನ್ನಡೆ ಪಡೆದವರಾಗಿದ್ದಾರೆ. ಈ ಪಂಚಾಯಿತಿಯಲ್ಲಿ ಪದವಿ ಶಿಕ್ಷಣ ಪಡೆದ ನಾಗರಿಕರು ಮಹಿಳೆಯರಿಗೆ ಶೇ.100ರಷ್ಟು ಅವರ ಸ್ವಇಚ್ಛೆಯಂತೆ ಮತದಾನ ಮಾಡುವುದಕ್ಕೆ ಸ್ವಾತಂತ್ರ್ಯವನ್ನು ನೀಡಿರುವುದು ಕಂಡು ಬರುತ್ತದೆ. ಈ ಪಂಚಾಯಿತಿಯಲ್ಲಿ ಸಹ ಪುರುಷ ಯಜಮಾನಿಕೆಯು ಸಹಜವಾಗಿದೆ. ಆದರೆ ಶೈಕ್ಷಣಿಕವಾಗಿ ಪ್ರಗತಿಪರರು ಆಗಿರುವುದರಿಂದ ಮಹಿಳೆಯರಿಗೆ ಅವರ ಸ್ವನಿರ್ಧಾರದತೆ ಮತದಾನದ ಅವಕಾಶ ನೀಡಲು ಪ್ರೇರಣೆಯಾಗಿರಬಹುದೆಂದು ಗ್ರಹಿಸಲಾಗಿದೆ.

ತೌಲನಿಕ ಅಧ್ಯಯನ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ಗ್ರಾಮಪಂಚಾಯಿತಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಕ್ಷರಸ್ಥರ ಮತ್ತು ಅನಕ್ಷರಸ್ಥರ ಜನಪ್ರತಿನಿಧಿ/ಅಭ್ಯರ್ಥಿಗಳಲ್ಲಿ ಯಾರು ಪುರುಷರ ನಿರ್ಧಾರದಂತೆ ಮಹಿಳೆಯರು ಮತ ಚಲಾಯಿಸುವುದಕ್ಕೆ ಬಯಸುತ್ತಾರೋ ಅಥವಾ ಮಹಿಳೆಯರು ಅವರ ಸ್ವನಿರ್ಧಾರದಂತೆ ಮತ ನೀಡುವುದಕ್ಕೆ ಆಸಕ್ತಿ ತೋರುತ್ತಾರೋ ಎಂದು ನೋಡಲಾಗಿದೆ. ಹೊಸಪೇಟೆ ತಾಲೂಕಿನ ಎರಡು ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 147 ಜನಪ್ರತಿನಿಧಿ/ಅಭ್ಯರ್ಥಿಗಳಿಂದ ಕ್ಷೇತ್ರ ಅಧ್ಯಯನದಲ್ಲಿ ಪಡೆದ ಮಾಹಿತಿ ಪ್ರಮಾಣವನ್ನು ತಾಲೂಕು ಅಥವಾ ಜಿಲ್ಲೆಗೆ ಹೋಲಿಸಿದಾಗ, ಬಯಲುಸೀಮೆ ಹೊಸಪೇಟೆ ತಾಲೂಕು/ಬಳ್ಳಾರಿ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಅನಕ್ಷರಸ್ಥರ ನಾಗರಿಕರ ಪ್ರಕಾರ ಶೇ.77ರಷ್ಟು ಮಹಿಳೆಯರು, ಪ್ರಾಥಮಿಕ ಹಂತದ ಶಿಕ್ಷಣ ಪಡೆದ ನಾಗರಿಕರ ಪ್ರಕಾರ ಶೇ.78ರಷ್ಟು ಮಹಿಳೆಯರು, ಪ್ರೌಢ ಹಂತದ ಶಿಕ್ಷಣ ಪಡೆದ ನಾಗರಿಕರ ಪ್ರಕಾರ ಶೇ.86ರಷ್ಟು ಮಹಿಳೆಯರು ಮತ್ತು ಪದವಿ ಹಂತದ ಶಿಕ್ಷಣ ಪಡೆದ ನಾಗರಿಕರ ಪ್ರಕಾರ ಶೇ.50ರಷ್ಟು ಮಹಿಳೆಯರು ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಹೊಸಪೇಟೆ ತಾಲೂಕು/ಬಳ್ಳಾರಿ ಜಿಲ್ಲೆಯಲ್ಲಿ ಶೇ.78ರಷ್ಟು ಮಹಿಳೆಯರಿಗೆ ಮತಾಧಿಕಾರದಲ್ಲಿ ನಿರ್ಧಾರ ಇಲ್ಲದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-4.5). ಆದ್ದರಿಂದ ಈ ತಾಲೂಕು/ಜಿಲ್ಲೆಯ ಗ್ರಾಮೀಣ ಮಹಿಳೆಯರ ಸಬಲೀಕರಣ ಕಂಡುಬರುವುದಿಲ್ಲ.

ಸಿದ್ಧಾಪುರ ತಾಲೂಕಿನ ಎರಡು ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 148 ಜನಪ್ರತಿನಿಧಿ/ಅಭ್ಯರ್ಥಿಗಳಿಂದ ಕ್ಷೇತ್ರ ಅಧ್ಯಯನದಲ್ಲಿ ಪಡೆದ ಮಾಹಿತಿ ಪ್ರಮಾಣವನ್ನು ತಾಲೂಕು ಅಥವಾ ಜಿಲ್ಲೆಗೆ ಹೋಲಿಸಿದಾಗ, ಮಲೆನಾಡಿನ ಸಿದ್ಧಾಪುರು ತಾಲೂಕು/ಉತ್ತರ ಕನ್ನಡ ಜಿಲ್ಲೆಯ ಪಂಚಾಯಿತಿಗಳಲ್ಲಿ ಅನಕ್ಷರಸ್ಥರು ಚುನಾವಣಾ ಪ್ರಾತಿನಿಧ್ಯ ಪಡೆದಿರುವುದು ಕಂಡುಬರುವುದಿಲ್ಲ. ಆದರೆ ಪ್ರಾಥಮಿಕ ಹಂತದ ಶಿಕ್ಷಣ ಪಡೆದ ನಾಗರಿಕರ ಪ್ರಕಾರ, ಶೇ.61ರಷ್ಟು ಮಹಿಳೆಯರು, ಪ್ರೌಢ ಹಂತದ ಶಿಕ್ಷಣ ಪಡೆದ ನಾಗರಿಕರ ಪ್ರಕಾರ ಶೇ.33ರಷ್ಟು ಮಹಿಳೆಯರು ಮತ್ತು ಪದವಿ ಹಂತದ ಶಿಕ್ಷಣ ಪಡೆದ ನಾಗರಿಕರ ಪ್ರಕಾರ ಶೇ.100ರಷ್ಟು ಮಹಿಳೆಯರು ಪುರುಷರು ಹೇಳಿದ ಪಕ್ಷ/ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಸಿದ್ಧಾಪುರು ತಾಲೂಕು/ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇ.36ರಷ್ಟು ಮಹಿಳೆಯರಿಗೆ ಮತಾಧಿಕಾರದಲ್ಲಿ ನಿರ್ಧಾರ

ಇಲ್ಲದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-4.5). ಆದ್ದರಿಂದ ತಾಲೂಕು/ಜಿಲ್ಲೆಯ ಗ್ರಾಮೀಣ ಮಹಿಳೆಯರ ಸಬಲೀಕರಣ ಕಂಡುಬರುವುದಿಲ್ಲ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಈ ನಾಲ್ಕು ಗ್ರಾಮಪಂಚಾಯಿತಿಗಳಲ್ಲಿ ಅಕ್ಷರಸ್ಥರು ಮತ್ತು ಅನಕ್ಷರಸ್ಥರು ನೀಡಿರುವ ಮಹಿಳೆಯರ ಮತ ನೀಡುವ ನಿರ್ಧಾರದ ಮಾಹಿತಿಯನ್ನು ತೌಲನಿಕವಾಗಿ ನೋಡಿದಾಗ ಬಯಲುಸೀಮೆಯ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಿಂತ ಮಲೆನಾಡಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಲ್ಲಿ ಉತ್ತಮವಾಗಿ ಕಂಡುಬರುತ್ತದೆ. ಬಯಲುಸೀಮೆಯ ಪಂಚಾಯಿತಿಗಳಲ್ಲಿ ಹೆಚ್ಚು ಪರಿಶಿಷ್ಟರು ಮತ್ತು ಮಲೆನಾಡು ಪಂಚಾಯಿತಿಗಳಲ್ಲಿ ಹೆಚ್ಚು ಮೇಲ್ವರ್ಗದವರಿಂದ ಕೂಡಿವೆ. ಸಾಕ್ಷರತೆ ಪ್ರಮಾಣವು ಬಯಲುಸೀಮೆ ಪಂಚಾಯಿತಿಗಳಿಗಿಂತ ಮಲೆನಾಡು ಪಂಚಾಯಿತಿಗಳಲ್ಲಿ ಹೆಚ್ಚು ಇದೆ. ಇದಕ್ಕೆ ಬಯಲು ಸೀಮೆಯ ಎರಡು ಗ್ರಾಮಪಂಚಾಯಿತಿಗಳ ವ್ಯಾಪ್ತಿಗಳ ಗ್ರಾಮಗಳಲ್ಲಿ ಮತ್ತು ಕೇಂದ್ರಸ್ಥಾನದಲ್ಲಿ ಪ್ರಾಥಮಿಕ ಹಿರಿಯ ಶಾಲೆಗಳು ಮಾತ್ರ ಇವೆ. ಹೊಸೂರು ಗ್ರಾಮಪಂಚಾಯಿತಿಯ ಹಾನಗಲ್ಲು, ಇಪ್ಪೀತೇರಿ ಮತ್ತು ಎರೆಬೈಲು ಈ ಗ್ರಾಮಗಳ ನಡುವೆ ಕೇವಲ ಒಂದೇ ಹಿರಿಯ ಪ್ರಾಥಮಿಕ ಶಾಲೆ ಇದೆ. ನಾಗೇನಹಳ್ಳಿ ಗ್ರಾಮಪಂಚಾಯಿತಿಯ ಬೇಳಗೋಡು ಮತ್ತು ಕಳ್ಳಿರಾಂಪುರ ಗ್ರಾಮಗಳಲ್ಲಿ ಶಾಲೆಯೇ ಇರುವುದಿಲ್ಲ. ಆದರೆ ಮಲೆನಾಡಿನ ಬೇಡ್ಕಣಿ ಗ್ರಾಮಪಂಚಾಯಿತಿಯ ಕೇಂದ್ರಸ್ಥಾನದಲ್ಲಿ ಪ್ರೌಢಶಾಲೆ ಮತು ಕೋಲಸಿರ್ಸಿ ಪಂಚಾಯಿತಿಯ ವ್ಯಾಪ್ತಿಯಲ್ಲಿ ಪ್ರೌಢಶಾಲೆ, ಪದವಿಪೂರ್ವ, ಮತ್ತು ಪದವಿ ಕಾಲೇಜುಗಳಿವೆ. ಬಯಲುಸೀಮೆ ಪಂಚಾಯಿತಿಗಳಂತೆ ಮಲೆನಾಡು ಪಂಚಾಯಿತಿಗಳು ಕೃಷಿ ಅವಲಂಬಿತ ಪಂಚಾಯಿತಿಗಳಾಗಿದ್ದರೂ, ಶಿಕ್ಷಣ ಸಂಸ್ಥೆಗಳು ಹೆಚ್ಚು ಇವೆ. ಶಿಕ್ಷಣ ಸಂಸ್ಥೆಗಳು ಅಥವಾ ಶಿಕ್ಷಣ ಜನತೆಯಲ್ಲಿ ಲಿಂಗ ಸಮಾನತೆಯನ್ನು ಪ್ರತಿಪಾದಿಸುವಲ್ಲಿ ಮತ್ತು ನಿರ್ಧಾರ ಪ್ರಕಿಯೆಯಲ್ಲಿ ಮಹಿಳೆಯರಿಗೆ ಆದ್ಯತೆ ತೋರುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂಬುವುದನ್ನು ಮರೆಯುವಂತಿಲ್ಲ. ಹೀಗಾಗಿ, ಲಿಂಗ ಸಮಾನತೆಯ ಪ್ರಜ್ಞೆ ಮತ್ತು ಪಂಚಾಯಿತಿ ಚಟುವಟಿಕೆಗಳಲ್ಲಿ ಭಾಗವಹಿಸುವ ಅರಿವು ಬಯಲುಸೀಮೆ ಪಂಚಾಯಿತಿಗಳಿಗಿಂತ ಮಲೆನಾಡು ಪಂಚಾಯಿತಿಗಳಲ್ಲಿ ಹೆಚ್ಚು ಇರುವುದು ಕಂಡುಬರುತ್ತದೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಪಂಚಾಯಿತಿಗಳಲ್ಲಿನ ಅಂಕಿ ಅಂಶಗಳ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದಾಗ, ಗಾಮೀಣ ಪ್ರದೇಶದಲ್ಲಿರುವ ಅನಕ್ಷರಸ್ಥರ ಪ್ರಕಾರ ಶೇ.77ರಷ್ಟು ಮಹಿಳೆಯರು, ಪ್ರಾಥಮಿಕ ಹಂತದ ಶಿಕ್ಷಣ ಪಡೆದವರ ಪ್ರಕಾರ ಶೇ.62ರಷ್ಟು ಮಹಿಳೆಯರು, ಪ್ರೌಢ ಹಂತದ ಶಿಕ್ಷಣ ಪಡೆದ ಜನರ ಪ್ರಕಾರ ಶೇ.51ರಷ್ಟು ಮಹಿಳೆಯರು ಮತ್ತು ಪದವಿ ಹಂತದ ಶಿಕ್ಷಣ ಪಡೆದ ನಾಗರಿಕರ ಪ್ರಕಾರ ಶೇ.13ರಷ್ಟು ಮಹಿಳೆಯರು ಪುರುಷರು ಹೇಳಿದ ಪಕ್ಷ/ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ರಾಜ್ಯದಲ್ಲಿ ಶೇ.57ರಷ್ಟು ಮಹಿಳೆಯರಿಗೆ ಮತಾಧಿಕಾರದಲ್ಲಿ ನಿರ್ಧಾರ ಇಲ್ಲದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-4.5). ಆದ್ದರಿಂದ ಈ ಅಧ್ಯಯನದಲ್ಲಿ ಲಭ್ಯವಾಗಿರುವ ಅಂಕಿ ಅಂಶಗಳ ಆಧಾರ ಮೇಲೆ ರಾಜ್ಯದ ಮಟ್ಟದಲ್ಲಿ ಗ್ರಾಮೀಣ ಮಹಿಳೆಯರು ಸಹಜವಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಸಬಲೀಕರಣಗೊಂಡಿಲ್ಲ ಎಂದು ಗ್ರಹಿಸಲಾಗಿದೆ.

4.7 ಆದಾಯ: ಮಹಿಳಾ ಮತದಾನ ಮತ್ತು ಮಹಿಳಾ ಸಬಲೀಕರಣ

ಭಾರತ ಜನತಂತ್ರ ವಿಕೇಂದ್ರೀಕರಣ ರಾಷ್ಟ್ರ. ಸಮಾನತೆಯೇ ಇದರ ಮೂಲಮಂತ್ರ. ಇದು ಜಾತಿ, ಧರ್ಮ, ಲಿಂಗ, ಭಾಷೆ, ಶಿಕ್ಷಣ, ವರಮಾನ ಇತ್ಯಾದಿಗಳ ತಾರತಮ್ಯ ಮಾಡದೇ ಎಲ್ಲರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಹಭಾಗಿತ್ವದಲ್ಲಿ ಭಾಗವಹಿಸುವ ಮತ್ತು ನೀತಿ-ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗಳಲ್ಲಿ ಸಮಾನತೆಯನ್ನು ನೀಡಿದೆ. ಅಂದರೆ ಸಂವಿಧಾನವು ಲಿಂಗ ಸಮಾನತೆ ಮತ್ತು ಸಮಾನ ಅವಕಾಶಗಳನ್ನು ಪ್ರತಿಪಾದಿಸುತ್ತದೆ. ಇದು ಎಲ್ಲಾ ರಂಗಗಲ್ಲಿ ಮಹಿಳೆಯರ ಸಮಾನ ಪ್ರಾತಿನಿಧ್ಯ ಇರಲೇಬೇಕೆಂದು ಸೂಚಿಸುತ್ತದೆ. ಬದುಕನ್ನು ಉತ್ತಮ ಪಡಿಸಿಕೊಳ್ಳುಲು ಇರುವ ಅವಕಾಶಗಳಲ್ಲಿ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳುವ ನಿರ್ಧಾರದ ಮಹಿಳೆಯರಿಗೂ ಇರಬೇಕೆಂದು ಹೇಳುತ್ತದೆ.

2011ರ ಜನಗಣತಿ ಪ್ರಕಾರ, ರಾಜ್ಯದಲ್ಲಿ ಪ್ರತಿ 1000 ಪುರುಷರಿಗೆ 968ರಷ್ಟು ಮಹಿಳೆಯರು ಇದ್ದಾರೆ.[9] ಅಂದರೆ ಹೆಚ್ಚು ಕಡಿಮೆ ಪುರುಷರಿಗೆ ಸಮಾನವಾಗಿ ಮಹಿಳೆಯರು ಇದ್ದಾರೆ. ಆದ್ದರಿಂದ ವಿಕೇಂದ್ರೀಕರಣದ ತತ್ವಕ್ಕೆ ಬದ್ಧವಾದ ಭಾರತವು ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ನೀಡುವ ಮೂಲಕ ತಳಮಟ್ಟದ ಆಡಳಿತದಲ್ಲಿ ಪುರಷರಿಗೆ ಸಮನಾಗಿ ಭಾಗವಹಿಸಲು ಅವಕಾಶ ನೀಡಿದೆ. ಆದರೆ ವಾಸ್ತವವಾಗಿ ಈ ಏಣಿ-ಶ್ರೇಣಿ ಮತ್ತು ಪುರುಷಶಾಹಿ ಸಮಾಜದಲ್ಲಿ ಮಹಿಳೆಯರ ವೈಯಕ್ತಿಕ ಮತ್ತು ಸಮುದಾಯದ ಬದುಕಿಗೆ ಸಂಬಂಧಿಸಿದ ನಿರ್ಧಾರದ ಪ್ರಕ್ರಿಯೆಯಲ್ಲಿ ಪುರುಷರು ಪ್ರಾತಿನಿಧ್ಯ ವಹಿಸುವುದು ಸಹಜವಾಗಿ ಕಂಡುಬರುತ್ತದೆ.

ಇಂದು ಮಹಿಳೆಯರು ಮನೆ, ಕೃಷಿ, ಕೈಗಾರಿಕೆ, ವಿಜ್ಞಾನ, ತಂತ್ರಜ್ಞಾನ ಇತ್ಯಾದಿ ರಂಗಗಳಲ್ಲಿ ಪ್ರಮುಖ ದುಡಿಮೆಗಾರರಾಗಿದ್ದಾರೆ. ಆದರೆ ಅನೂಚಾನವಾಗಿ ಪುರುಷಶಾಹಿ ಸಮಾಜವು ಮಹಿಳೆಯರ ದುಡಿಮೆಯನ್ನು ಆದಾಯದ ಭಾಗವೆಂದು ಒಪ್ಪಿಕೊಳ್ಳುತ್ತಿಲ್ಲ. ಮಹಿಳೆಯರ ದುಡಿಮೆಯನ್ನು ಸಂಗೋಪನಾ ದುಡಿಮೆಯೆಂದೇ ಪುರುಷಪ್ರಧಾನ ಸಮಾಜದ ಅಭಿಪ್ರಾಯವಾಗಿದೆ.[10] ಈ ಪುರುಷಶಾಹಿ ಸಮಾಜವು ಅನೂಚಾನವಾಗಿ ಮಹಿಳೆಯರನ್ನು ಅಧೀನ ಸ್ಥಿತಿಯಲ್ಲಿ ಇರಿಸಿಕೊಂಡಿರುವುದಕ್ಕಾಗಿ, ಮಹಿಳೆಯರ ದುಡಿಮೆಯನ್ನು ಆದಾಯದ ಭಾಗವೆಂದು ಸಂಪೂರ್ಣವಾಗಿ ಒಪ್ಪಿಕೊಳ್ಳಲು ಮನಸ್ಸು ಮಾಡುತ್ತಿಲ್ಲ. ಮಹಿಳೆಯರ ದುಡಿಮೆಯನ್ನು ಆದಾಯವೆಂದು ಒಪ್ಪಿಕೊಳ್ಳದಿರುವುದಕ್ಕೂ ಮತ್ತು ಲಿಂಗ ಅಸಮಾನತೆಗೂ ಪರಸ್ಪರ ಸಂಬಂಧವಿದೆ. ಮಹಿಳೆ ಬೆವರು, ಕಣ್ಣೀರು ಮತ್ತು ರಕ್ತ ಹರಿಸಿ ಸಮಾಜವನ್ನು ಪ್ರತಿನಿಧಿಸುತ್ತಿದ್ದರೂ, ಅವರಿಗೆ ಸಂಪತ್ತು, ದುಡಿಮೆ ಮತ್ತು ಆದಾಯಗಳ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವಲ್ಲಿ ಪ್ರಾತಿನಿಧ್ಯ ಕಂಡುಬರುವುದಿಲ್ಲ. ಅಂದರೆ ಸ್ವಾಭಾವಿಕವಾಗಿ ಮಹಿಳೆ ವೈಯಕ್ತಿಕ, ಕೌಟುಂಬಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಪುರುಷರಿಂದ ನಿರ್ಲಕ್ಷ್ಯಕ್ಕೆ ಮತ್ತು ತಾರತಮ್ಯಕ್ಕೆ ಒಳಗಾಗುತ್ತಿರುವುದು ಕಂಡುಬರುತ್ತಿದೆ. ಹೀಗಾಗಿ ಮನೆ ಒಳಗೆ ಮತ್ತು ಹೊರಗೆ ದುಡಿಯುವ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಇತ್ಯಾದಿ ರಂಗಗಳಲ್ಲಿ ಭಾಗವಹಿಸುವುದು ಕಂಡುಬರುತ್ತಿದ್ದರೂ, ಅದು ನಾಮಮಾತ್ರವಾಗಿದೆ. ಈ ಮೇಲಿನ ರಂಗಗಳಲ್ಲಿ ಮಹಿಳೆಯರು ಭಾಗವಹಿಸುವುದಕ್ಕೆ ಪುರುಷರ ನಿರ್ಧಾರವೇ ಅಂತಿಮವಾಗಿರುತ್ತದೆ. ಒಂದು ವೇಳೆ ಪುರುಷ ನಿರ್ಧಾರವನ್ನು ಉಲ್ಲಂಘಿಸಿ ಮಹಿಳೆ

ಪ್ರತಿನಿಧಿಸಿದ್ದಾದರೆ, ಈ ಸಮಾಜದಲ್ಲಿ ಅವಳು ಮತ್ತಷ್ಟು ಸಂಕಷ್ಟ ಮತ್ತು ಶೋಷಣೆಗೆ ಒಳಗಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹೀಗಾಗಿ ಬಹುತೇಕ ಮಹಿಳೆಯರು ಪುರುಷರ ನಿರ್ಧಾರದಂತೆ ಭಾಗವಹಿಸುವುದು ಸರ್ವೇಸಾಮಾನ್ಯ ಸಂಗತಿಯಾಗಿದೆ.

ಇಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಪೂರಕವಾದ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಿವೆ. ಇವು ಮಹಿಳೆಯರ ಪ್ರಾತಿನಿಧಿಕ ಪ್ರಾತಿನಿಧ್ಯವನ್ನು ಮತ್ತು ಪಾಲುದಾರಿಕೆ ಪ್ರಾತಿನಿಧ್ಯವನ್ನು ಉತ್ತಮಗೊಳಿಸುವ ಪ್ರಯತ್ನದಲ್ಲಿ ಮಹತ್ವದ ಕಾಣಿಕೆಯನ್ನು ನೀಡುತ್ತಿವೆ. ಪ್ರಾತಿನಿಧಿಕ ಪ್ರಾತಿನಿಧ್ಯವು ಸಹಭಾಗಿತ್ವದಲ್ಲಿ ಮಹಿಳೆಯರು ಭೌತಿಕವಾಗಿ ಭಾಗವಹಿಸುವ ಸಂಖ್ಯೆಯನ್ನು ಪ್ರತಿನಿಧಿಸಿದರೆ, ಪಾಲುದಾರಿಕೆ ಪ್ರಾತಿನಿಧ್ಯವು ಸಹಭಾಗಿತ್ವದಲ್ಲಿ ಪುರುಷರ ಹಸ್ತಕ್ಷೇಪ ಅಥವಾ ನಿಯಂತ್ರಣವಿಲ್ಲದೇ ಮಹಿಳೆಯರು ಸ್ವತಂತ್ರವಾಗಿ ಭಾಗವಹಿಸುವ ಭೌತಿಕ ಸಂಖ್ಯೆಯನ್ನು ಮತ್ತು ನಿರ್ಧಾರ ತೆಗೆದುಕೊಳ್ಳುವ ಬೌದ್ಧಿಕ ಪ್ರಮಾಣವನ್ನು ಪ್ರತಿನಿಧಿಸುತ್ತದೆಂದು ಪರಿಭಾವಿಸಿಕೊಳ್ಳಲಾಗಿದೆ. ಈ ಬಗೆಯ ಕಾರ್ಯಕ್ರಮಗಳಲ್ಲಿ ಮಹಿಳೆಯರ ಒಟ್ಟಾರೆ ಪ್ರಾತಿನಿಧ್ಯವನ್ನು ಹೆಚ್ಚಿಸುವ ಮತ್ತು ಅವರ ಸಬಲೀಕರಣಗೊಳಿಸುವ ದೃಷ್ಟಿಕೋನವು ಕೆಲಸ ಮಾಡುತ್ತದೆ. ಜೊತೆಗೆ ಮಹಿಳೆಯರ ದುಡಿಮೆ ಅಥವಾ ಆದಾಯದ ಮಹತ್ವವನ್ನು ಅಧಿಕಗೊಳಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಇದು ನಿರ್ಧಾರ ಪ್ರಕ್ರಿಯೆಗಳಲ್ಲಿ ಪುರುಷರಿಗೆ ಸಮಾನವಾಗಿ ಮಹಿಳೆಯರ ಪ್ರಾತಿನಿಧ್ಯವನ್ನು ಹೆಚ್ಚಿಸುವುದಾಗಿರುತ್ತದೆ.

ಸ್ವತಂತ್ರ ಭಾರತವು ಸಂವಿಧಾನಾತ್ಮಕ ಆಡಳಿತವನ್ನು ಒಪ್ಪಿಕೊಂಡ ಕಾಲದಿಂದಲೂ ಸಾರ್ವತ್ರಿಕ ವಯಸ್ಕ ಮತದಾನಕ್ಕೆ ಆದ್ಯತೆ ನೀಡುತ್ತಾ ಬಂದಿದೆ. ಮಹಿಳೆಯರಿಗೂ ಸಮಾನವಾಗಿ ಮತದಾನದ ಪ್ರಾತಿನಿಧ್ಯವನ್ನು ನೀಡಿದೆ. ಇದನ್ನು ಒಪ್ಪಿಕೊಂಡ ಪುರುಷಶಾಹಿ ಸಮಾಜವು ಮಹಿಳೆಯರಿಗೆ ಅವರ ಸ್ವನಿರ್ಧಾರದಂತೆ ಬೇಕಾದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವ ಹಕ್ಕನ್ನು ಬಿಟ್ಟುಕೊಡಲಿಲ್ಲ. ಇದಕ್ಕೆ ನಮ್ಮ ಪುರುಷಶಾಹಿ ಸಮಾಜವು ಎರಡು ಕಾರಣಗಳನ್ನು ಮತ್ತು ವಿವರಣೆಗಳನ್ನು ನೀಡುತ್ತಾ ಬಂದಿದೆ. ಒಂದು, ಮಹಿಳೆಯರು ಸ್ವಾಭಾವಿಕವಾಗಿ ದುರ್ಬಲರು. ಇವರು ಮನೆಗೆಲಸ, ಲಾಲನೆ-ಪಾಲನೆ ಮತ್ತು ಸಂಗೋಪನಾ ದುಡಿಮೆಗಳನ್ನು ಮಾಡುವಂಥ ಸಾಮರ್ಥ್ಯ ಪಡೆದವರಾಗಿದ್ದಾರೆ. ಇದರ ಅರ್ಥ ಮಹಿಳೆಯರ ಕಾರ್ಯಕ್ಷೇತ್ರ ಮನೆ ಒಳಗೆ ಮಾತ್ರ ಎಂಬುದಾಗಿದೆ. ಎರಡು, ಮಹಿಳೆಯರಿಗೆ ಬುದ್ಧಿ ಮಟ್ಟ ಕಡಿಮೆ. ಇವರಿಗೆ ಸಾರ್ವಜನಿಕ ಬದುಕಿನ ಆಯ್ಕೆಗಳಲ್ಲಿ ಮತ್ತು ಅನುಭವಗಳಲ್ಲಿ ಕೊರತೆಯ ನೆಪ ನೀಡಿ ಇವರನ್ನು ವೈಯಕ್ತಿಕ, ಕೌಟುಂಬಿಕ ಮತ್ತು ಸಾರ್ವಜನಿಕ ಬದುಕಿನಲ್ಲಿ ನಿರ್ಧಾರದ ಅಧಿಕಾರದಿಂದ ದೂರವಿಡುವ ಪ್ರಯತ್ನ ಮಾಡುತ್ತಾ ಬಂದಿದೆ. ಇದರ ಅರ್ಥ ಮಹಿಳೆ ಸಂಸಾರ, ಗಂಡ, ಮಕ್ಕಳು, ಕುಟುಂಬ ಮುಂತಾದ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಣೆ ಮಾಡುವ ಸಲುವಾಗಿ ಮಹಿಳೆಯನ್ನು ಸಾರ್ವಜನಿಕ ಬದುಕಿನಿಂದ ದೂರ ಇಡಲಾಗಿದೆ. ಈ ಎರಡು ಪ್ರಮುಖ ಕಾರಣಗಳಿಂದ ಮಹಿಳೆಯರನ್ನು ಅನೂಚಾನವಾಗಿ ಮನೆ ಹೊರಗಿನ ಕೆಲಸ-ಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿ ಮತ್ತು ಆಯ್ಕೆಯ ನಿರ್ಧಾರದಿಂದ ದೂರ ಇಡಲಾಗಿದೆ. ಹೀಗಾಗಿ ಶಿಕ್ಷಿತ ಮತ್ತು ಆದಾಯ ತರುವ ಮಹಿಳೆಯರು ಸಹ ಸ್ವತಂತ್ರವಾಗಿ ಮತ ನೀಡದೇ ಸಾಮಾನ್ಯವಾಗಿ ಪುರುಷರು ಸೂಚಿಸಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುತ್ತಿರುವುದು ಕಂಡುಬರುತ್ತಿದೆ.

ವಾಸ್ತವವಾಗಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಭಾಗವಹಿಸುವ ಮಹಿಳಾ ಮತದಾರರಲ್ಲಿ ಹೆಚ್ಚಾಗಿ ಪ್ರಾತಿನಿಧಿಕ ಮತದಾರರಾಗಿ ಕಂಡುಬರುತ್ತಾರೆ ವಿನಹ ಪಾಲುದಾರಿಕೆ ಮತದಾರರಾಗಿ ಅಲ್ಲವೆಂಬ ಅಂಶವನ್ನು ಅಲ್ಲಗಳೆಯುವಂತಿಲ್ಲ. ಜನತಂತ್ರ ವಿಕೇಂದ್ರೀಕರಣ ವ್ಯವಸ್ಥೆ ಮತ್ತಷ್ಟು ಅರ್ಥಪೂರ್ಣಗೊಳ್ಳಬೇಕಾದರೆ ಮಹಿಳೆಯರನ್ನು ಪಾಲುದಾರಿಕೆ ಮತದಾರರನ್ನಾಗಿ ಬದಲಾಯಿಸಬೇಕಾದ ಅನಿವಾರ್ಯತೆ ಇದೆ. ಪ್ರಸ್ತುತ ಅಧ್ಯಯನದಲ್ಲಿ ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ಮತದಾರರಾಗಿ ಭಾಗವಹಿಸುವ ಮಹಿಳೆಯರ ಆದಾಯದ ಪ್ರಮಾಣದ ಮೇಲೆ ಪ್ರಾತಿನಿಧಿಕ ಮತ್ತು ಪಾಲುದಾರಿಕೆ ಮತದಾರರಾಗಿ ಭಾಗವಹಿಸುವರ ಪ್ರಮಾಣವೆಷ್ಟು ಎಂಬುದನ್ನು ನೋಡುವ ಪ್ರಯತ್ನ ಮಾಡಲಾಗಿದೆ. ಅಂದರೆ, ಆದಾಯ ತರುವ ಉದ್ಯೋಗಸ್ಥ ಮಹಿಳೆಯರು ಪುರುಷರ ನಿಯಂತ್ರಣವಿಲ್ಲದೇ ಸ್ವತಂತ್ರವಾಗಿ ಸ್ವನಿರ್ಧಾರದಂತೆ ಮತ ಚಲಾಯಿಸುತ್ತಾರೋ ಅಥವಾ ಮನೆಗೆಲಸ, ಲಾಲನೆ–ಪಾಲನೆಗೆ ಸೀಮಿತವಾದ ಗೃಹಿಣಿಯರು ಸ್ವತಂತ್ರವಾಗಿ ಮತ ನೀಡುತ್ತಾರೋ ಮತ್ತು ಅದು ಯಾವ ಪ್ರಮಾಣದಲ್ಲಿದೆ ಎಂದು ನೋಡುವುದು ಈ ಅಧ್ಯಯನದ ಉದ್ದೇಶವಾಗಿದೆ. ಆದಾಯ ತರುವ ಮಹಿಳೆಯರು ಎಂಬ ಒಂದೇ ಕಾರಣಕ್ಕೆ ಅವರು ಸಬಲೀಕರಣಗೊಂಡವರಲ್ಲ. ಆದಾಯಕ್ಕಿಂತ ಹೆಚ್ಚಾಗಿ ಅವರು ಯಾವುದೇ ನಿರ್ಧಾರದ ಪ್ರಕ್ರಿಯೆಗಳಲ್ಲಿ ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುವ ಗರಿಷ್ಠ ಪ್ರಮಾಣವನ್ನೇ ಮಹಿಳಾ ಸಬಲೀಕರಣವೆಂದು ಪರಿಭಾವಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದ ನಾಲ್ಕು ಪಂಚಾಯಿತಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ ಜನಪ್ರತಿನಿಧಿಗಳ/ಅಭ್ಯರ್ಥಿಗಳ ಆದಾಯ ಮತ್ತು ಮಹಿಳಾ ಮತಾಧಿಕಾರ ನಿರ್ಧಾರದ ಬಗ್ಗೆ ನೀಡಿರುವ ಮಾಹಿತಿ ಆಧಾರದ ಮೇಲೆ ಮಹಿಳಾ ಸಬಲೀಕರಣದ ಪ್ರಮಾಣವನ್ನು ಗುರುತಿಸಲಾಗಿದೆ. ಈ ಪ್ರಮಾಣದ ಆಧಾರದ ಮೇಲೆ ಆಯಾ ಗ್ರಾಮಪಂಚಾಯಿತಿಗಳ ಮಹಿಳೆಯರ ಸಬಲೀಕರಣವೆಂದು ಗ್ರಹಿಸಲಾಗಿದೆ. ಈ ಉದ್ದೇಶದಿಂದ ಅಧ್ಯಯನಕ್ಕೆ ಒಳಪಡಿಸಿದ ಗ್ರಾಮಪಂಚಾಯಿತಿಗಳ ಮಾಹಿತಿದಾರರ ಆದಾಯ ಮತ್ತು ಮಹಿಳೆಯರ ಮತ ನೀಡುವ ನಿರ್ಧಾರವನ್ನು ಕ್ಷೇತ್ರ ಅಧ್ಯಯನದಲ್ಲಿ ಪಡೆದ ಪ್ರಾಥಮಿಕ ಮಾಹಿತಿ ಆಧಾರದ ಮೇಲೆ ಕೋಷ್ಟಕವನ್ನು ತಯಾರಿಸಿ, ವಿಶ್ಲೇಷಣೆ ಮಾಡಲಾಗಿದೆ(ಕೋಷ್ಟಕ–4.6).

ಬಯಲುಸೀಮೆ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 68 ಮಾಹಿತಿದಾರರ ಆದಾಯದ ಬಗ್ಗೆ ಪ್ರಶ್ನಾವಳಿ ಮೂಲಕ ಪ್ರಾಥಮಿಕ ಮಾಹಿತಿ ಪಡೆದು ವಿವರಿಸಲಾಗಿದೆ. ಇವರಲ್ಲಿ ಶೇ.49ರಷ್ಟು ಪುರುಷ ಮತ್ತು ಶೇ.51ರಷ್ಟು ಮಹಿಳಾ ಮಾಹಿತಿದಾರರು ಇದ್ದಾರೆ. ಈ ಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ 33 ಪುರುಷ ಮಾಹಿತಿದಾರರೆಲ್ಲರೂ ಆದಾಯವುಳ್ಳವರಾಗಿದ್ದಾರೆ(ನೋಡಿ ಕೋಷ್ಟಕ–4.6). ಇವರಲ್ಲಿ ಶೇ.52ರಷ್ಟು ಪುರುಷರು ರೂ.30,000ವರೆಗೆ ಮತ್ತು ಶೇ.48 ಪುರುಷರು ರೂ.30,100ರಿಂದ 1,00,000ದವರೆಗೆ ಆದಾಯ ಇರುವರಾಗಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ರೂ.1,00,100ಕ್ಕಿಂತ ಮೇಲ್ಪಟ್ಟು

ಆದಾಯ ಇರುವ ಯಾವ ಪುರುಷ ಸದಸ್ಯರು ಈ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧಯ ಪಡೆದಿರುವುದಿಲ್ಲ. ಹಾಗೆಯೇ ಸಂದರ್ಶಿಸಿದ 35 ಮಹಿಳಾ ಮಾಹಿತಿದಾರರ ಆದಾಯದ ವಿವರ ನೋಡಿದಾಗ, ಇವರಲ್ಲಿ ಶೇ.9ರಷ್ಟು ಮಹಿಳೆಯರು ಆದಾಯ ಇಲ್ಲದವರಾಗಿದ್ದು, ಇವರಲ್ಲಿ ಶೇ.100ರಷ್ಟು ಮಹಿಳೆಯರು ಕುಟುಂಬದ ಪುರುಷರು ಸೂಚಿಸಿದ ಅಭ್ಯರ್ಥಿಗೆ ಮತ ನೀಡುವುದಾಗಿ ಹೇಳಿದ್ದಾರೆ. ರೂ. 30,000ದವರೆಗೆ ಆದಾಯವಿರುವ ಶೇ.60ರಷ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.81ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತೇವೆಂದು ತಿಳಿಸಿದ್ದಾರೆ. ರೂ. 30,100ರಿಂದ 1,00,000ದವರೆಗೆ ಆದಾಯ ಇರುವ ಶೇ.11ರಷ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.100ರಷ್ಟು ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತದಾನ ಮಾಡುವುದಾಗಿ ತಿಳಿಸಿರುತ್ತಾರೆ. ರೂ. 1,00,100ಕ್ಕಿಂತ ಮೇಲ್ಪಟ್ಟು ಆದಾಯ ಇರುವ ಶೇ.20ರಷ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.57ರಷ್ಟು ಮಹಿಳೆಯರು ಪುರುಷರು ಸೂಚಿಸಿದ ಅಭ್ಯರ್ಥಿ/ಪಕ್ಷಕ್ಕೆ ಮತ ನೀಡುವುದಾಗಿ ಹೇಳಿರುತ್ತಾರೆ.

ಈ ಪ್ರಮಾಣವನ್ನು ಹೊಸೂರು ಗ್ರಾಮಪಂಚಾಯಿತಿಯ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ರೂ. 30,000ದವರಗೆ ಆದಾಯ ಇರುವ ಗ್ರಾಮಸ್ಥರು ಹೆಚ್ಚು ಕಂಡುಬರುತ್ತಾರೆ. ಈ ಪಂಚಾಯಿತಿಯಲ್ಲಿ ಆದಾಯ ಇಲ್ಲದ ಗ್ರಾಮಸ್ಥರ ಪ್ರಕಾರ ಶೇ.100ರಷ್ಟು ಮಹಿಳೆಯರು ಪುರುಷರು ಬೆಂಬಲಿಸಿದ ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. ರೂ.30,000ದವರೆಗೆ ಆದಾಯ ಇರುವ ಗ್ರಾಮಸ್ಥರ ಪ್ರಕಾರ, ಶೇ.89ರಷ್ಟು ಮಹಿಳೆಯರು ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ರೂ.30.100ದಿಂದ 1,00,000ದವರೆಗೆ ಆದಾಯ ಇರುವ ಗ್ರಾಮಸ್ಥರ ಪ್ರಕಾರ ಶೇ.100ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುವುದಾಗಿ ಕಂಡುಬರುತ್ತದೆ. ರೂ.1,00,100ಕ್ಕಿಂತ ಹೆಚ್ಚು ಆದಾಯ ಇರುವ ನಾಗರಿಕರ ಪ್ರಕಾರ ಶೇ.57ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಈ ಪಂಚಾಯಿತಿಯ ಶೇ.20ರಷ್ಟು ಮಹಿಳೆಯರು ಅವರ ಸ್ವನಿರ್ಧಾರಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಕೌಟುಂಬಿಕ ನಿರ್ವಹಣೆಗೆ ಆದಾಯ ಮೂಲವಾಗಿರುವ ಮತ್ತು ಯಜಮಾನಿಕೆ ಜವಾಬ್ದಾರಿಯನ್ನು ನಿರ್ವಹಿಸುವಂತಹ ಮಹಿಳೆಯರು ಮಾತ್ರ ಸ್ವನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಪಂಚಾಯಿತಿಯ ನಾಗರಿಕರ ಪ್ರಕಾರ ಶೇ.10ರಷ್ಟು ಮಹಿಳೆಯರು ಸ್ವಇಚ್ಚೆಯಂತೆ ಮತದಾನ ಮಾಡುವುದು ಕಂಡುಬರುತ್ತದೆ. ಹೀಗಾಗಿ ಹೊಸೂರು ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರ ಆದಾಯಕ್ಕೂ ಮತ್ತು ನಿರ್ಧಾರ ಪ್ರಕ್ರಿಯೆಗೂ ಯಾವ ಸಂಬಂಧ ಕಂಡುಬರುತ್ತಿಲ್ಲ. ಆದಾಯಕ್ಕಿಂತ ಹೆಚ್ಚಾಗಿ ಲಿಂಗ ಸಮಾನತೆಯ ಬಗ್ಗೆ ಅರಿವು ಮತ್ತು ಶಿಕ್ಷಣದ ಅಗತ್ಯವಾಗಿದೆ. ಈ ಗ್ರಾಮಪಂಚಾಯಿತಿಯಲ್ಲಿ ಪರಿಶಿಷ್ಟರು ಬಹುಸಂಖ್ಯಾತರಾಗಿದ್ದು, ಇವರು ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಇವರು ಕೌಟುಂಬಿಕ ಮತ್ತು ಸಾಮುದಾಯಿಕ ರಂಗಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡುವ ಅರಿವಿನ ಕೊರತೆ ಇರುವುದು ಕಂಡುಬರುತ್ತದೆ.

ನಾಗೇನಹಳ್ಳಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗೆ ಚುನಾವಣಾ ಪ್ರಾತಿನಿಧಿಯ ಪಡೆದವರಲ್ಲಿ ಸಂದರ್ಶಿಸಿದ 79 ಮಾಹಿತಿದಾರರ ಆದಾಯದ ವಿವರವನ್ನು ಕ್ಷೇತ್ರ ಅಧ್ಯಯನದಲ್ಲಿ ಪಡೆದ ಪ್ರಾಥಮಿಕ ಮಾಹಿತಿ ಆಧಾರ ಮೇಲೆ ವಿವರಿಸಲಾಗಿದೆ. ಮಾಹಿತಿ ನೀಡಿದ 79 ಮಾಹಿತಿದಾರರಲ್ಲಿ ಶೇ.52ರಷ್ಟು ಪುರುಷ ಮತ್ತು ಶೇ.48ರಷ್ಟು ಮಹಿಳಾ ಮಾಹಿತಿದಾರರಿದ್ದಾರೆ. ಈ ಪಂಚಾಯಿತಿಯ ಪುರುಷ ಮಾಹಿತಿದಾರರೆಲ್ಲರು ಆದಾಯವುಳ್ಳವರಾಗಿದ್ದಾರೆ. ಕ್ಷೇತ್ರ ಅಧ್ಯಯನದಲ್ಲಿ ಮಾಹಿತಿ ನೀಡದ 41 ಪುರುಷರಲ್ಲಿ ಶೇ.68ರಷ್ಟು ಮಾಹಿತಿದಾರರು ರೂ.30,000ವರೆಗೆ ಆದಾಯವುಳ್ಳವರಾಗಿದ್ದು, ಇವರ ಪ್ರಕಾರ ಶೇ.64ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ರೂ.30,100ರಿಂದ 1,00,000ದವರೆಗೆ ಆದಾಯ ಇರುವ ಶೇ.20ರಷ್ಟು ಪುರುಷ ಮಾಹಿತಿದಾರರ ಪ್ರಕಾರ, ಶೇ.100ರಷ್ಟು ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ರೂ.1,00,100ಕ್ಕಿಂತ ಹೆಚ್ಚು ಆದಾಯ ಇರುವ ಶೇ.12ರಷ್ಟು ಪುರುಷ ಮಾಹಿತಿದಾರರ ಪ್ರಕಾರ ಶೇ.100ರಷ್ಟು ಮಹಿಳೆಯರು ಕುಟುಂಬದ ಪುರುಷರು ಹೇಳಿದ ಅಭ್ಯರ್ಥಿಗೆ ಮತ ನೀಡುತ್ತಾರೆಂದು ತಿಳಿಸಿದ್ದಾರೆ. ಹಾಗೆಯೇ ಮಾಹಿತಿ ನೀಡಿದ 38 ಮಹಿಳೆಯರಲ್ಲಿ ಶೇ.49ರಷ್ಟು ಆದಾಯ ಇಲ್ಲದ ಮಹಿಳೆಯರಿದ್ದು, ಇವರಲ್ಲಿ ಶೇ.65ರಷ್ಟು ಮಹಿಳೆಯರು ಕುಟುಂಬದ ಪುರುಷರು ಸೂಚಿಸಿದ ಅಭ್ಯರ್ಥಿಗೆ ಮತ ನೀಡುವುದಾಗಿ ಹೇಳಿದ್ದಾರೆ. ರೂ.30,000ದವರೆಗೆ ಆದಾಯವಿರುವ ಶೇ.51ರಷ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.50ರಷ್ಟು ಮಹಿಳೆಯರು ಪುರುಷರು ಹೇಳಿದಂತೆ ಮತದಾನ ಮಾಡುತ್ತೇವೆಂದು ತಿಳಿಸಿದ್ದಾರೆ. ರೂ.30,100ರಿಂದ 1,00,000ದವರೆಗೆ ಆದಾಯ ಇರುವ ಶೇ.7.70ರಷ್ಟು ಮಹಿಳಾ ಮಾಹಿತಿದಾರರಲ್ಲಿ ಶೇ.100ರಷ್ಟು ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತದಾನ ಮಾಡುವುದಾಗಿ ತಿಳಿಸಿದ್ದಾರೆ. ರೂ.1,00,100ಕ್ಕಿಂತ ಅಧಿಕ ಆದಾಯ ಇರುವ ಯಾವ ಮಹಿಳೆಯರು ಈ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದಿರುವುದಿಲ್ಲ(ನೋಡಿ ಕೋಷ್ಟಕ–4.6). ಮೇಲ್ವರ್ಗದ/ಹೆಚ್ಚು ಆದಾಯವಿರುವ ಮಹಿಳೆಯರು ಸ್ವನಿರ್ಧಾರದಂತೆ ಮತ ಚಲಾಯಿಸುವುದು ಕಂಡುಬರುವುದಿಲ್ಲ. ಮೇಲ್ವರ್ಗದ ಪುರುಷರು ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಮತ್ತು ಘನತೆ ಗೌರವದ ಪ್ರತೀಕವಾಗಿ ಮಹಿಳೆಯರನ್ನು ರಾಜಕೀಯವಾಗಿ ನಿರ್ಬಂಧಿಸಿರಬಹುದೆಂದು ಗ್ರಹಿಸಲಾಗಿದೆ.

ಈ ಪ್ರಮಾಣವನ್ನು ನಾಗೇನಹಳ್ಳಿ ಗ್ರಾಮಪಂಚಾಯಿತಿಯ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ರೂ.30,000ದವರಗೆ ಆದಾಯ ಇರುವ ಗ್ರಾಮಸ್ಥರು ಹೆಚ್ಚು ಕಂಡುಬರುತ್ತಾರೆ. ಈ ಪಂಚಾಯಿತಿಯಲ್ಲಿ ಆದಾಯ ಇಲ್ಲದ ಗ್ರಾಮಸ್ಥರ ಪ್ರಕಾರ ಶೇ.65ರಷ್ಟು ಮಹಿಳೆಯರು ಪುರುಷರು ಬೆಂಬಲಿಸಿದ ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. ರೂ.30,000ದವರೆಗೆ ಆದಾಯ ಇವರು ಗ್ರಾಮಸ್ಥರ ಪ್ರಕಾರ ಶೇ.59ರಷ್ಟು ಮಹಿಳೆಯರು ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ರೂ.30.100ದಿಂದ ರೂ.1,00,000ದವರೆಗೆ ಮತ್ತು ರೂ.1,00,100ಕ್ಕಿಂತ ಹೆಚ್ಚು ಆದಾಯ ಇರುವ ಗ್ರಾಮಸ್ಥರ ಪ್ರಕಾರ ಶೇ.100ರಷ್ಟು ಮಹಿಳೆಯರು

ಪುರುಷರ ನಿರ್ಧಾರದಂತೆ ಮತದಾನ ಮಾಡುವುದಾಗಿ ಕಂಡುಬರುತ್ತದೆ. ಈ ಪಂಚಾಯಿತಿಯ ಮಹಿಳೆಯರಲ್ಲಿ ಶೇ.39ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಇವರು ಸ್ವತಂತ್ರವವಾಗಿ ದುಡಿದು ಜೀವನ ನಡೆಸುವ ಸಾಮರ್ಥ್ಯವುಳ್ಳ ಮಹಿಳೆಯರು ಆಗಿದ್ದಾರೆ. ಆದರೆ ಕುಟುಂಬದ ಆದಾಯದಲ್ಲಿ ಮಹಿಳೆಯರ ದುಡಿಮೆಯು ಮೂಲವಾಗಿದ್ದರೂ ಅವರದು ಸಂಗೋಪನಾ ದುಡಿಮೆಯಾಗಿಯೇ ಆಗಿದೆ. ಅವರ ಶ್ರಮದ ಫಲ ಅಥವಾ ಆದಾಯ ಅವರ ಗಂಡನಿಗೆ ಸಲ್ಲುತ್ತಿದೆ. ಇಂತಹ ಮಹಿಳೆಯರು ನಿರ್ಧಾರ ಪ್ರಕ್ರಿಯೆಯಲ್ಲಿ ಗೌಣವಾಗುತ್ತಾರೆ. ಕುಟುಂಬದ ಆದಾಯಕ್ಕೆ ಮೂಲವಾಗಿರುವ ಮತ್ತು ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗುವ ಮಹಿಳೆಯರು ವೈಯಕ್ತಿಕವಾಗಿ, ಕೌಟುಂಬಿಕವಾಗಿ ಮತ್ತು ಸಾರ್ವಜನಿಕವಾಗಿ ಸ್ವನಿರ್ಧಾರ ತೆಗೆದುಕೊಳ್ಳುವ ಅವಕಾಶ ಮತ್ತು ಅಧಿಕಾರ ಲಭಿಸುತ್ತೆಂದು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಒಟ್ಟಾರೆಯಾಗಿ ಈ ಪಂಚಾಯಿತಿಯ ನಾಗರಿಕರ ಪ್ರಕಾರ ಶೇ.32ರಷ್ಟು ಮಹಿಳೆಯರು ಸ್ವಇಚ್ಚೆಯಂತೆ ಮತದಾನ ಮಾಡುವುದು ಕಂಡುಬರುತ್ತದೆ. ಆದಾಯ ಇಲ್ಲದ ಮತ್ತು ಆದಾಯ ಹೆಚ್ಚು ಇರುವ ನಾಗರಿಕರ ಪ್ರಕಾರ ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡಬೇಕೆಂಬ ಅಭಿಪ್ರಾಯ ಕಂಡುಬರುತ್ತದೆ.

ಮಲೆನಾಡು ಗ್ರಾಮಪಂಚಾಯಿತಿಗಳು

ಬೇಡ್ಕಣಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 72 ಜನಪ್ರತಿನಿಧಿ/ಅಭ್ಯರ್ಥಿಗಳ ಆದಾಯದ ವಿವರವನ್ನು ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ ಆಧಾರದ ಮೇಲೆ ವಿವರಿಸಲಾಗಿದೆ. ಸಂದರ್ಶನ ನೀಡಿದ 72 ಮಾಹಿತಿದಾರರಲ್ಲಿ ಶೇ.49ರಷ್ಟು ಪುರುಷ ಮತ್ತು ಶೇ.51ರಷ್ಟು ಮಹಿಳಾ ಮಾಹಿತಿದಾರರಿದ್ದಾರೆ. ಈ ಪಂಚಾಯಿತಿಯಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 35 ಪುರುಷ ಮಾಹಿತಿದಾರರೆಲ್ಲರು ಆದಾಯವುಳ್ಳವರಾಗಿದ್ದಾರೆ. ಇವರಲ್ಲಿ ಶೇ.71ರಷ್ಟು ಪುರುಷ ಮಾಹಿತಿದಾರರು ರೂ.30,000ವರೆಗೆ ಆದಾಯವುಳ್ಳವರಾಗಿದ್ದು, ಇವರ ಪ್ರಕಾರ ಶೇ.28ರಷ್ಟು ಮಹಿಳೆಯರು ಅವರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ರೂ.30,100ರಿಂದ ರೂ.1,00,000ದವರೆಗೆ ಆದಾಯ ಇರುವ ಶೇ.29ರಷ್ಟು ಪುರುಷ ಸದಸ್ಯರಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಕುಟುಂಬದ ಪುರುಷರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ರೂ.1,00,100ಕ್ಕಿಂತ ಹೆಚ್ಚು ಆದಾಯ ಇರುವ ಪುರುಷರು ಈ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದಿರುವುದಿಲ್ಲ. ಹಾಗೆಯೇ ಸಂದರ್ಶಿಸಿದ 37 ಮಹಿಳಾ ಮಾಹಿತಿದಾರರ ಆದಾಯದ ವಿವರ ನೋಡಿದಾಗ, ಇವರಲ್ಲಿ ಆದಾಯ ಇಲ್ಲದ ಶೇ.16ರಷ್ಟು ಮಹಿಳೆಯರು ಚುನಾವಣಾ ಪ್ರಾತಿನಿಧ್ಯ ಪಡೆದಿದ್ದು, ಇವರಲ್ಲಿ ಶೇ.50ರಷ್ಟು ಮಹಿಳೆಯರು ಕುಟುಂಬದ ಪುರುಷರು ಸೂಚಿಸಿದ ಅಭ್ಯರ್ಥಿಗೆ ಮತ ನೀಡುತ್ತೇವೆಂದು ಹೇಳಿದ್ದಾರೆ. ರೂ.30,000ದವರೆಗೆ ಆದಾಯವಿರುವ ಶೇ.84ರಷ್ಟು ಮಹಿಳೆಯರಿದ್ದು, ಇವರಲ್ಲಿ ಶೇ.61ರಷ್ಟು ಮಹಿಳೆಯರು ಪುರುಷರು ಹೇಳಿದಂತೆ ಮತದಾನ ಮಾಡುವುದಾಗಿ ತಿಳಿಸಿದ್ದಾರೆ. ರೂ.30,100ರಿಂದ

ರೂ.1,00,000 ಮತ್ತು ರೂ.1,00,100ಕ್ಕಿಂತ ಅಧಿಕ ಆದಾಯ ಇರುವ ಮಹಿಳೆಯರು ಈ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದಿರುವುದು ಕಂಡುಬರುವುದಿಲ್ಲ(ನೋಡಿ ಕೋಷ್ಟಕ-4.6). ಉತ್ತಮ ಆದಾಯ ಇರುವ ಮಹಿಳೆಯರು ಈ ಗ್ರಾಮಪಂಚಾಯಿತಿಗೆ ಆಯ್ಕೆಯಾಗದಿರುವುದಕ್ಕೆ ಇಲ್ಲಿ ಕಂಡುಬರುವ ವೈದಿಕ ಪರಂಪರೆಯ ಪ್ರಭಾವವೇ ಮುಖ್ಯ ಕಾರಣವಾಗಿರಬಹುದು. ಕುಟುಂಬದ ಅಥವಾ ಪುರುಷರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಮತ್ತು ಘನತೆ ಗೌರವದ ಪ್ರತೀಕವಾಗಿ ಮಹಿಳೆಯರು ರಾಜಕೀಯ ಪ್ರಾತಿನಿಧ್ಯ/ನಿರ್ಧಾರ ಪ್ರಕ್ರಿಯೆದಿಂದ ದೂರ ಇಟ್ಟಿರಬಹುದೆಂದು ಗ್ರಹಿಸಲಾಗಿದೆ.

ಈ ಪ್ರಮಾಣವನ್ನು ಬೇಡ್ಕಣಿ ಗ್ರಾಮಪಂಚಾಯಿತಿಯ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ರೂ.30,000ದವರೆಗೆ ಆದಾಯ ಇರುವ ಗ್ರಾಮಸ್ಥರು ಹೆಚ್ಚು ಕಂಡುಬರುತ್ತಾರೆ. ಈ ಪಂಚಾಯಿತಿಯಲ್ಲಿ ಆದಾಯ ಇಲ್ಲದ ಶೇ.8ರಷ್ಟು ಗ್ರಾಮಸ್ಥರ ಪ್ರಕಾರ ಶೇ.50ರಷ್ಟು ಮಹಿಳೆಯರು ಪುರುಷರು ಬೆಂಬಲಿಸಿದ ಅಭ್ಯರ್ಥಿಗೆ ಮತ ನೀಡುವುದು ಕಂಡುಬರುತ್ತದೆ. ರೂ.30,000ದವರೆಗೆ ಆದಾಯ ಇರುವ ಶೇ.78ರಷ್ಟು ಗ್ರಾಮಸ್ಥರ ಪ್ರಕಾರ ಶೇ.46ರಷ್ಟು ಮಹಿಳೆಯರು ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ರೂ.30.100ದಿಂದ ರೂ.1,00,000ದವರೆಗೆ ಆದಾಯ ಇರುವ ಶೇ.14ರಷ್ಟು ಗ್ರಾಮಸ್ಥರ ಪ್ರಕಾರ ಶೇ.100ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಮತದಾನ ಮಾಡುವುದಾಗಿ ಕಂಡುಬರುತ್ತದೆ. ರೂ.1,00,100ಕ್ಕಿಂತ ಹೆಚ್ಚು ಆದಾಯ ಇರುವ ನಾಗರಿಕರು ಇದ್ದರೂ, ಯಾರೂ ಹೆಚ್ಚಿನ ಆದಾಯವನ್ನು ತೋರಿಸಿಕೊಳ್ಳುತ್ತಿಲ್ಲ. ಕಾರಣ ಅವರಿಗೆ ಸಿಗಬೇಕಾದ ಸಾರ್ವಜನಿಕ ಸೌಲಭ್ಯಗಳು ಗ್ರಾಮಪಂಚಾಯಿತಿ ಅಥವಾ ಸರ್ಕಾರದಿಂದ ಸಿಗುವುದಿಲ್ಲವೆಂಬ ಹೆದರಿಕೆ ಮತ್ತು ಜಾಗೃತಿ ಹೆಚ್ಚಿರುವುದು ಕಂಡುಬರುತ್ತದೆ. ಈ ಪಂಚಾಯಿತಿಯ ಮಹಿಳೆಯರಲ್ಲಿ ಶೇ.41ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಮಹಿಳೆಯರ ದುಡಿಮೆಯನ್ನು ಸಂಗೋಪನಾ ದುಡಿಮೆಯಾಗಿಯೇ ಪರಿಗಣಿಸಲಾಗುತ್ತಿದೆ. ಇವರ ಶ್ರಮದ ಫಲ ಅಥವಾ ಆದಾಯ ಕುಟುಂಬದ ಪುರುಷರಿಗೆ ಸಲ್ಲುತ್ತಿದೆ. ಈ ಪಂಚಾಯಿತಿಯಲ್ಲಿ ಸ್ವನಿರ್ಧಾರದಂತೆ ಮತ ಚಲಾಯಿಸುವುದಾಗಿ ಹೇಳಿಕೆ ನೀಡಿರುವ ಮಹಿಳೆಯರು ಸ್ವತಂತ್ರವವಾಗಿ ದುಡಿದು ಜೀವನ ನಡೆಸುವ ಸಾಮರ್ಥ್ಯವುಳ್ಳವರಾಗಿದ್ದಾರೆ. ಈ ಮಹಿಳೆಯರು ಕೃಷಿ/ಕೂಲಿ ಕೆಲಸ ಮಾಡುವವರಾಗಿದ್ದಾರೆ. ಇವರು ಆದಾಯ ಮೂಲವಾಗಿದ್ದು, ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗುವ ಮಹಿಳೆಯರಾಗಿದ್ದಾರೆ. ಹೀಗಾಗಿ ಇವರಿಗೆ ಸಾರ್ವತ್ರಿಕ ಚುನಾವಣೆಯಲ್ಲಿ ವೈಯಕ್ತಿಕವಾಗಿ ನಿರ್ಧಾರ ತೆಗೆದುಕೊಂಡು ಮತ ನೀಡುವ ಸಾಮರ್ಥ್ಯ ಲಭಿಸಿದೆಯೆಂದು ಗ್ರಹಿಸಲಾಗಿದೆ. ಒಟ್ಟಾರೆಯಾಗಿ ಈ ಪಂಚಾಯಿತಿಯ ನಾಗರಿಕರ ಪ್ರಕಾರ ಶೇ.46ರಷ್ಟು ಮಹಿಳೆಯರು ಸ್ವಇಚ್ಛೆಯಂತೆ ಮತದಾನ ಮಾಡುವುದು ಕಂಡುಬರುತ್ತದೆ. ಈ ಪಂಚಾಯಿತಿಯಲ್ಲಿ ಆದಾಯ ಹೆಚ್ಚು ಇರುವ ನಾಗರಿಕರ ಪ್ರಕಾರ ಮಹಿಳೆಯರು ಪುರುಷ ನಿರ್ಧಾರದಂತೆ ಮತ ನೀಡಬೇಕೆಂಬ ಅಭಿಪ್ರಾಯ ಕಂಡುಬರುತ್ತದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 76 ಮಾಹಿತಿದಾರರ ಆದಾಯದ ವಿವರವನ್ನು ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ ಆಧಾರ ಮೇಲೆ ವಿವರಿಸಲಾಗಿದೆ. ಈ 76 ಮಾಹಿತಿದಾರರ ಪೈಕಿ ಶೇ.49ರಷ್ಟು ಪುರುಷ ಮತ್ತು ಶೇ.51ರಷ್ಟು ಮಹಿಳೆಯರಿದ್ದಾರೆ. ಈ ಪಂಚಾಯಿತಿಯಲ್ಲಿ ಪ್ರಾಥಮಿಕ ಮಾಹಿತಿ ನೀಡಿದ 35 ಪುರುಷ ಮಾಹಿತಿದಾರರು ಆದಾಯವುಳ್ಳವರಾಗಿದ್ದಾರೆ. ಇವರಲ್ಲಿ ಶೇ.84ರಷ್ಟು ಮಾಹಿತಿದಾರರು ರೂ.30,000ವರೆಗೆ ಆದಾಯವುಳ್ಳವರಾಗಿದ್ದು, ಇವರ ಪ್ರಕಾರ ಶೇ.10ರಷ್ಟು ಮಹಿಳೆಯರು ಅವರ ನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ರೂ.30,100ರಿಂದ ರೂ.1,00,000ದವರೆಗೆ ಆದಾಯ ಇರುವ ಶೇ.16ರಷ್ಟು ಪುರುಷರಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಅವರ ಸ್ವನಿರ್ಧಾರದಂತೆ ಮತದಾನ ಮಾಡುತ್ತಾರೆಂದು ತಿಳಿಸಿದ್ದಾರೆ. ರೂ.1,00,100ಕ್ಕಿಂತ ಹೆಚ್ಚು ಆದಾಯ ಇರುವ ಪುರುಷರು ಈ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದಿರುವುದು ಕಂಡುಬರುವುದಿಲ್ಲ. ಹಾಗೆಯೇ ಸಂದರ್ಶಿಸಿದ 37 ಮಹಿಳಾ ಮಾಹಿತಿದಾರರ ಆದಾಯದ ವಿವರ ನೋಡಿದಾಗ, ಇವರಲ್ಲಿ ಶೇ.36ರಷ್ಟು ಮಹಿಳೆಯರು ಆದಾಯ ಇಲ್ಲದವರಿದ್ದು, ಇವರಲ್ಲಿ ಶೇ.100ರಷ್ಟು ಮಹಿಳೆಯರು ಸ್ವನಿರ್ಧಾರದಂತೆ ಮತ ನೀಡುವುದಾಗಿ ಹೇಳಿದ್ದಾರೆ. ರೂ.30,000ದವರೆಗೆ ಆದಾಯವಿರುವ ಶೇ.49ರಷ್ಟು ಮಹಿಳೆಯರಿದ್ದು, ಇವರಲ್ಲಿ ಶೇ.42ರಷ್ಟು ಮಹಿಳೆಯರು ಪುರುಷರು ಹೇಳಿದಂತೆ ಮತದಾನ ಮಾಡುವುದಾಗಿ ತಿಳಿಸಿದ್ದಾರೆ. ರೂ.30,100ರಿಂದ ರೂ.1,00,000ದವರೆಗೆ ಆದಾಯವಿರುವ ಶೇ.15ರಷ್ಟು ಮಹಿಳಾ ಸದಸ್ಯರಿದ್ದು, ಇವರ ಪ್ರಕಾರ ಶೇ.50ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ ಮತ ನೀಡುತ್ತೇವೆಂದು ತಿಳಿಸಿದ್ದಾರೆ. ರೂ.1,00,100ಕ್ಕಿಂತ ಮೇಲ್ಪಟ್ಟು ಆದಾಯ ಇರುವ ಮಹಿಳೆಯರು ಈ ಗ್ರಾಮಪಂಚಾಯಿತಿಗೆ ಚುನಾವಣಾ ಪ್ರಾತಿನಿಧ್ಯ ಪಡೆದಿರುವುದಿಲ್ಲ(ನೋಡಿ ಕೋಷ್ಟಕ–4.6). ಉತ್ತಮ ಆದಾಯ ಇರುವ ಮಹಿಳೆಯರು ಈ ಗ್ರಾಮಪಂಚಾಯಿತಿಗೆ ಆಯ್ಕೆಯಾಗದಿರುವುದಕ್ಕೆ ಆಚರಣೆಯಲ್ಲಿರುವ ವೈದಿಕ ಲಕ್ಷಣಗಳು ಮುಖ್ಯ ಕಾರಣವಾಗಿರಬಹುದು. ಕುಟುಂಬದ ಅಥವಾ ಪುರುಷರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಮತ್ತು ಘನತೆ ಗೌರವದ ಪ್ರತೀಕವಾಗಿ ಮಹಿಳೆಯರನ್ನು ರಾಜಕೀಯವಾಗಿ ನಿರ್ಧಾರದಿಂದ ದೂರ ಇಡಲಾಗಿದೆಯೆಂದು ಗ್ರಹಿಸಲಾಗಿದೆ.

ಈ ಪ್ರಮಾಣವನ್ನು ಕೋಲಸಿರ್ಸಿ ಗ್ರಾಮಪಂಚಾಯಿತಿಯ ಮಟ್ಟಕ್ಕೆ ಹೋಲಿಸಿದಾಗ, ಒಟ್ಟಾರೆಯಾಗಿ ರೂ.30,000ದವರೆಗೆ ಆದಾಯ ಇರುವ ಗ್ರಾಮಸ್ಥರು ಹೆಚ್ಚು ಕಂಡುಬರುತ್ತಾರೆ. ಈ ಪಂಚಾಯಿತಿಯಲ್ಲಿ ಆದಾಯ ಇಲ್ಲದ ಗ್ರಾಮಸ್ಥರು ಶೇ.18ರಷ್ಟಿದ್ದು, ಇವರ ಪ್ರಕಾರ ಶೇ.100ರಷ್ಟು ಮಹಿಳೆಯರು ಸ್ವನಿರ್ಧಾರದಂತೆ ಮತದಾನ ಮಡುವುದು ಕಂಡುಬರುತ್ತದೆ. ರೂ.30,000 ದವರೆಗೆ ಆದಾಯ ಇವರು ಗ್ರಾಮಸ್ಥರು ಶೇ.68ರಷ್ಟಿದ್ದು, ಇವರ ಪ್ರಕಾರ ಶೇ.22ರಷ್ಟು ಮಹಿಳೆಯರು ಮತ್ತು ರೂ.30.100ದಿಂದ ರೂ.1,00,000ದವರೆಗೆ ಆದಾಯ ಇರುವ ಶೇ.16ರಷ್ಟು ಗ್ರಾಮಸ್ಥರಿದ್ದು, ಇವರ ಪ್ರಕಾರ ಶೇ.25ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತದಾನ ಮಾಡುವುದಾಗಿ ಕಂಡುಬರುತ್ತದೆ. ರೂ.1,00,100ಕ್ಕಿಂತ

ಹೆಚ್ಚು ಆದಾಯ ಇರುವ ನಾಗರಿಕರು ಇದ್ದರೂ, ಯಾರೂ ಹೆಚ್ಚಿನ ಆದಾಯವನ್ನು ತೋರಿಸಿಕೊಳ್ಳಲು ಸಿದ್ಧರಿಲ್ಲ. ಕಾರಣ ಅವರಿಗೆ ಸಿಗಬೇಕಾದ ಸಾರ್ವಜನಿಕ ಸೌಲಭ್ಯಗಳು ಸಿಗುವುದಿಲ್ಲವೆಂಬ ಹೆದರಿಕೆ ಮತ್ತು ಜಾಗೃತಿ ಹೆಚ್ಚಿರುವುದು ಕಂಡುಬರುತ್ತದೆ. ಈ ಪಂಚಾಯಿತಿಯ ಮಹಿಳೆಯರ ಪ್ರಕಾರ ಶೇ.72ರಷ್ಟು ಮಹಿಳೆಯರು ಅವರ ಸ್ವನಿರ್ಧಾರಂತೆ ಚುನಾವಣೆಯಲ್ಲಿ ಮತದಾನ ಮಾಡುವುದು ಕಂಡುಬರುತ್ತದೆ. ಈ ಪಂಚಾಯಿತಿಯ ಮತದಾನದ ಪ್ರಕ್ರಿಯೆಯಲ್ಲಿ ಮಹಿಳೆಯರ ಸ್ವನಿರ್ಧಾರವು ಉತ್ತಮವಾಗಿದೆ ಎಂದು ಪರಿಗಣಿಸಲಾಗುತ್ತಿದೆ. ಸ್ವನಿರ್ಧಾರದಂತೆ ಮತ ಚಲಾಯಿಸುವುದಾಗಿ ಹೇಳಿಕೆ ನೀಡಿದ ಮಹಿಳೆಯರಲ್ಲಿ ಗೃಹಿಣಿ, ಕೂಲಿ ಮತ್ತು ಕೃಷಿ ಕಾರ್ಮಿಕರು, ಅಂಗನವಾಡಿ ಸಹಾಯಕಿ, ವ್ಯಾಪಾರ ಹಾಗೂ ಟೈಲರ್ ಎಂದು ಹೇಳಿಕೊಂಡವರಾಗಿದ್ದಾರೆ. ಇವರು ಸ್ವತಂತ್ರವಾಗಿ ದುಡಿದು ಜೀವನ ನಡೆಸುವ ಸಾಮರ್ಥ್ಯವುಳ್ಳ ಮಹಿಳೆಯರಾಗಿದ್ದಾರೆ. ಇವರಲ್ಲಿ ಆದಾಯ ಇಲ್ಲವೆಂದು ಹೇಳಿಕೆ ನೀಡಿದ ಮಹಿಳೆಯಲ್ಲಿ ಉತ್ತಮ ಆರ್ಥಿಕ ಸ್ಥಿತಿ ಇರುವ ಕುಟುಂಬ ಮತ್ತು ಶಿಕ್ಷಿತರರಾಗಿದ್ದು, ತಮ್ಮ ಆದಾಯದ ಬಗ್ಗೆ ಮಾಹಿತಿ ನೀಡಿಲ್ಲ. ಇವರೆಲ್ಲರೂ ಚುನಾವಣೆಯಲ್ಲಿ ಸ್ವನಿರ್ಧಾರದಂತೆ ಮತ ನೀಡುವುದಾಗಿ ಹೇಳಿರುತ್ತಾರೆ. ಸಾಮಾನ್ಯವಾಗಿ ಇವರ ದುಡಿಮೆಯನ್ನು ಸಂಗೋಪನಾ ದುಡಿಮೆಯಾಗಿಯೇ ಪರಿಗಣಿಸಲಾಗಿದೆ. ಇವರ ಶ್ರಮದ ಫಲ ಅಥವಾ ಆದಾಯ ಕುಟುಂಬದ ಪುರುಷರಿಗೆ ಸಲ್ಲುತ್ತಿದೆ. ಇವರು ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗುವ ಮಹಿಳೆಯರಾಗಿದ್ದಾರೆ. ಹೀಗಾಗಿ ಇವರಿಗೆ ಸಾರ್ವತ್ರಿಕ ಚುನಾವಣೆಯಲ್ಲಿ ವೈಯಕ್ತಿಕವಾಗಿ ನಿರ್ಧಾರ ತೆಗೆದುಕೊಂಡು ಮತ ನೀಡುವ ಅವಕಾಶ ಲಭಿಸಿದೆ ಎಂದು ಹೇಳಬಹುದು. ಒಟ್ಟಾರೆಯಾಗಿ ಈ ಪಂಚಾಯಿತಿಯ ನಾಗರಿಕರ ಪ್ರಕಾರ ಶೇ.82ರಷ್ಟು ಮಹಿಳೆಯರು ಸ್ವಇಚ್ಛೆಯಂತೆ ಮತದಾನ ಮಾಡುವುದು ಕಂಡುಬರುತ್ತದೆ. ಇದು ಮಹಿಳಾ ಸಬಲೀಕರಣದ ಸೂಚಿಯಾಗಿ ಕಂಡುಬರುತ್ತದೆ. ಈ ಅಂಕಿ ಅಂಶಗಳ ಪ್ರಕಾರ ಈ ಪಂಚಾಯಿತಿಯ ಮಹಿಳೆಯರು ಸಬಲೀಕರಣಗೊಂಡವರು ಎಂದು ಕಂಡುಬರುತ್ತದೆ. ಆದರೆ ಇದು ನಾಮಮಾತ್ರವಾಗಿರುತ್ತದೆ. ಕಾರಣ ಈ ಪಂಚಾಯಿತಿಯಲ್ಲಿ ಸಾಕ್ಷರತೆಯ ಪ್ರಮಾಣ ಉತ್ತಮವಾಗಿದ್ದು, ಇವರು ಮಹಿಳಾ ಹಕ್ಕು, ಕಾನೂನು ಮತ್ತು ಅವಕಾಶಗಳ ಬಗ್ಗೆ ಚೆನ್ನಾಗಿ ಬಲ್ಲವರಾಗಿದ್ದಾರೆ. ಮಹಿಳೆಯರ ಸ್ವಾತಂತ್ರ್ಯ, ಸಮಾನತೆ ಮತ್ತು ನಿರ್ಧಾರ ಬಗ್ಗೆ ಕೇಳಿರುವ ಪ್ರಶ್ನೆಗಳಿಗೆ ಅತ್ಯಂತ ಎಚ್ಚರಿಕೆಯಿಂದ ಉತ್ತರಿಸಿರುವುದು ಕ್ಷೇತ್ರಾಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ನಿರ್ಧಾರದ ಪ್ರಕ್ರಿಯೆಯಲ್ಲಿ ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯ ನೀಡಿರುವುದು ಅವರ ಬುದ್ಧಿವಂತಿಕೆಯಿಂದ ಎಂದು ಗ್ರಹಿಸಿ, ಇಲ್ಲಿ ಕಂಡುಬರುವ ಮಹಿಳಾ ಸಬಲೀಕರಣವು ನೈಜ ಸ್ವರೂಪ ಹೊಂದಿಲ್ಲ ಎಂಬ ತೀರ್ಮಾನಕ್ಕೂ ಬರಬಹುದಾಗಿದೆ.

ತೌಲನಿಕ ಅಧ್ಯಯನ

ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 147 ಜನಪ್ರತಿನಿಧಿ/ಅಭ್ಯರ್ಥಿಗಳಿಂದ ಕ್ಷೇತ್ರ ಅಧ್ಯಯನದಲ್ಲಿ ಪಡೆದ ಮಾಹಿತಿ ಪ್ರಮಾಣವನ್ನು ತಾಲೂಕು ಅಥವಾ ಜಿಲ್ಲೆಗೆ ಹೋಲಿಸಿದಾಗ, ಬಯಲುಸೀಮೆ ಹೊಸಪೇಟೆ ತಾಲೂಕು/ಬಳ್ಳಾರಿ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಆದಾಯವಿಲ್ಲದ

ನಾಗರಿಕರ ಪ್ರಕಾರ ಶೇ.70ರಷ್ಟು ಮಹಿಳೆಯರು, ರೂ.30,000ಗಳವರೆಗೆ ಆದಾಯವಿರುವ ನಾಗರಿಕರ ಪ್ರಕಾರ ಶೇ.73ರಷ್ಟು ಮಹಿಳೆಯರು, ರೂ.30,100ದಿಂದ ರೂ.1,00,000ದವರೆಗೆ ಆದಾಯ ಇರುವ ನಾಗರಿಕರ ಪ್ರಕಾರ ಶೇ.100ರಷ್ಟು ಮಹಿಳೆಯರು ಮತ್ತು ರೂ.1,00,100ಕ್ಕಿಂತ ಹೆಚ್ಚು ಆದಾಯವಿರುವ ನಾಗರಿಕರ ಪ್ರಕಾರ ಶೇ.75ರಷ್ಟು ಮಹಿಳೆಯರು ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಹೊಸಪೇಟೆ ತಾಲೂಕು/ಬಳ್ಳಾರಿ ಜಿಲ್ಲೆಯಲ್ಲಿ ಶೇ.78ರಷ್ಟು ಮಹಿಳೆಯರಿಗೆ ಮತಾಧಿಕಾರದಲ್ಲಿ ನಿರ್ಧಾರ ಇಲ್ಲದಿರುವುದು ಕಂಡುಬರುತ್ತದೆ. ಆದ್ದರಿಂದ ಜಿಲ್ಲೆಯ ಗ್ರಾಮೀಣ ಮಹಿಳೆಯರ ಸಬಲೀಕರಣ ಕಂಡುಬರುವುದಿಲ್ಲ.

ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 148 ಜನಪ್ರತಿನಿಧಿ/ಅಭ್ಯರ್ಥಿಗಳಿಂದ ಕ್ಷೇತ್ರ ಅಧ್ಯಯನದಲ್ಲಿ ಪಡೆದ ಮಾಹಿತಿ ಪ್ರಮಾಣವನ್ನು ತಾಲೂಕು ಅಥವಾ ಜಿಲ್ಲೆಗೆ ಹೋಲಿಸಿದಾಗ, ಸಿದ್ದಾಪುರ ತಾಲೂಕು/ಉತ್ತರ ಕನ್ನಡ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಆದಾಯವಿಲ್ಲದ ನಾಗರಿಕರ ಪ್ರಕಾರ ಶೇ.15ರಷ್ಟು ಮಹಿಳೆಯರು, ರೂ.30,000ಗಳವರೆಗೆ ಆದಾಯವಿರುವ ನಾಗರಿಕರ ಪ್ರಕಾರ ಶೇ.35ರಷ್ಟು ಮಹಿಳೆಯರು ಮತ್ತು ರೂ.30,100ದಿಂದ ರೂ.1,00,000ದವರೆಗೆ ಆದಾಯ ಇರುವ ನಾಗರಿಕರ ಪ್ರಕಾರ ಶೇ.59ರಷ್ಟು ಮಹಿಳೆಯರು ಪುರುಷರು ತೆಗೆದುಕೊಳ್ಳುವ ನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಸಿದ್ದಾಪುರು ತಾಲೂಕು/ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇ.36ರಷ್ಟು ಮಹಿಳೆಯರಿಗೆ ಮತಾಧಿಕಾರದಲ್ಲಿ ನಿರ್ಧಾರ ಇಲ್ಲದಿರುವುದು ಕಂಡುಬರುತ್ತದೆ. ಆದ್ದರಿಂದ ನಿರ್ಧಾರ ಪ್ರಕ್ರಿಯೆಗಳಲ್ಲಿ ಈ ತಾಲೂಕು/ಜಿಲ್ಲೆಯ ಗ್ರಾಮೀಣ ಮಹಿಳೆಯರ ಸಬಲೀಕರಣ ಕಂಡುಬರುವುದಿಲ್ಲ.

ಈ ಎರಡು ತಾಲೂಕು/ಜಿಲ್ಲೆಗಳ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದಾಗ ಗ್ರಾಮಪಂಚಾಯಿತಿಗಳಲ್ಲಿ ಆದಾಯವಿಲ್ಲದ ನಾಗರಿಕರ ಪ್ರಕಾರ ಶೇ.43ರಷ್ಟು ಮಹಿಳೆಯರು, ರೂ. 30,000ದವರೆಗೆ ಆದಾಯ ಇರುವ ಗ್ರಾಮಸ್ಥರ ಪ್ರಕಾರ ಶೇ.52ರಷ್ಟು ಮಹಿಳೆಯರು, ರೂ.30,100ರಿಂದ ರೂ.1,00,000ದವರೆಗೆ ಆದಾಯವಿರುವ ನಾಗರಿಕರ ಪ್ರಕಾರ ಶೇ.83ರಷ್ಟು ಮಹಿಳೆಯರು ಮತ್ತು ರೂ.1,00,100ಕ್ಕಿಂತ ಹೆಚ್ಚು ಆದಾಯವಿರುವ ನಾಗರಿಕರು ಪ್ರಕಾರ ಶೇ.75ರಷ್ಟು ಮಹಿಳೆಯರು ಪುರುಷರು ಹೇಳಿದ ಅಭ್ಯರ್ಥಿಗೆ/ಪಕ್ಷಕ್ಕೆ ಮತ ನೀಡುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ರಾಜ್ಯದಲ್ಲಿ ಶೇ.57ರಷ್ಟು ಮಹಿಳೆಯರಿಗೆ ಮತಾಧಿಕಾರದಲ್ಲಿ ನಿರ್ಧಾರ ಇಲ್ಲದಿರುವುದು ಕಂಡುಬರುತ್ತದೆ. ಆದ್ದರಿಂದ ರಾಜ್ಯದಲ್ಲಿ ಗ್ರಾಮೀಣ ಮಹಿಳೆಯರು ನಿರ್ಧಾರದ ಪ್ರಕ್ರಿಯೆಗಳಲ್ಲಿ ಪುರುಷರ ನಿಯಂತ್ರಕ್ಕೆ ಒಳಪಟ್ಟಿರುವುದು ಕಂಡುಬರುವುದರಿಂದ ಮಹಿಳಾ ಸಬಲೀಕರಣ ಕಂಡುಬರುವುದಿಲ್ಲ.

ನಾಲ್ಕು ಗ್ರಾಮಪಂಚಾಯಿತಿಗಳಲ್ಲಿ ಸಾಮ್ಯವಿರುವ ಕೆಲವು ಪ್ರಮುಖ ಅಂಶಗಳು ಕಂಡುಬರುತ್ತದೆ. ಅವುಗಳೆಂದರೆ, ಒಂದು, ಈ ನಾಲ್ಕು ಗ್ರಾಮಪಂಚಾಯಿತಿಗಳು ಪ್ರಮುಖವಾಗಿ ಕೃಷಿಪ್ರಧಾನ ಪಂಚಾಯಿತಿಗಳಾಗಿವೆ. ಎರಡು, ಈ ನಾಲ್ಕು ಪಂಚಾಯಿತಿಗಳಲ್ಲಿ ಆದಾಯರಹಿತ ಸದಸ್ಯರಲ್ಲಿ

ಮಹಿಳೆಯರು ಮಾತ್ರ ಇದ್ದಾರೆ. ಇವರಲ್ಲಿ ಬಹುತೇಕರು ಗೃಹಿಣಿಯರಾಗಿದ್ದು, ಉತ್ತಮ ಆರ್ಥಿಕ ಹಿನ್ನೆಲೆಯುಳ್ಳ(ಎಪಿಎಲ್) ಮತ್ತು ಮೇಲ್ವರ್ಗದ ಕುಟುಂಬದ ಮಹಿಳೆಯರಾಗಿದ್ದಾರೆ. ಮೂರು, ಕಡಿಮೆ ಆದಾಯ ಇರುವ ಕುಟುಂಬದಲ್ಲಿ ಬಹುತೇಕ ಮಹಿಳೆಯರು ಸ್ವನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ನಾಲ್ಕು, ಹೆಚ್ಚು ಆದಾಯ ಇರುವ ಕುಟುಂಬದಲ್ಲಿ ಮಹಿಳೆಯರು ಪುರುಷರ ನಿರ್ಧಾರದಂತೆ ಮತ ನೀಡುವುದು ಕಂಡುಬರುತ್ತದೆ. ನಾಲ್ಕು ಗ್ರಾಮಪಂಚಾಯಿತಿಗಳಲ್ಲಿ ಆದಾಯ ಇರುವ ಮತ್ತು ಆದಾಯ ಇಲ್ಲದ ಮಹಿಳೆಯರ ಮತ ನೀಡುವ ನಿರ್ಧಾರವನ್ನು ತೌಲನಿಕವಾಗಿ ನೋಡಿದಾಗ ಬಯಲುಸೀಮೆಯ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಿಗಿಂತ ಮಲೆನಾಡಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಲ್ಲಿ ಉತ್ತಮವಾಗಿ ಕಂಡುಬರುತ್ತದೆ. ಇದಕ್ಕೆ ಕೆಲವು ಕಾರಣಗಳನ್ನು ನೀಡಬಹುದು. ಒಂದು, ಬಯಲುಸೀಮೆಯ ಪಂಚಾಯಿತಿಗಳಲ್ಲಿ ಹೆಚ್ಚು ಪರಿಶಿಷ್ಟರು ಇದ್ದರೆ, ಮಲೆನಾಡು ಪಂಚಾಯಿತಿಗಳಲ್ಲಿ ಹೆಚ್ಚು ಮೇಲ್ವರ್ಗದವರು ಇದ್ದಾರೆ. ಎರಡು, ಬಯಲುಸೀಮೆ ಪಂಚಾಯಿತಿಗಳಿಗಿಂತ ಮಲೆನಾಡು ಪಂಚಾಯಿತಿಗಳಲ್ಲಿ ಸಾಕ್ಷರತೆ ಮಟ್ಟ ಹೆಚ್ಚು ಇದೆ. ಪ್ರಮುಖವಾಗಿ ಈ ಎರಡು ಲಕ್ಷಣಗಳು ಬಯಲುಸೀಮೆ ಪಂಚಾಯಿತಿಗಳಿಗಿಂತ ಮಲೆನಾಡು ಪಂಚಾಯಿತಿಗಳ ಜನತೆಯಲ್ಲಿ ಲಿಂಗ ಸಮಾನತೆಯ ಪ್ರಜ್ಞೆ ಕಾಣುವಲ್ಲಿ ಮತ್ತು ಮಹಿಳೆಯರಿಗೆ ಕೌಟುಂಬಿಕ ಮತ್ತು ಸಾರ್ವಜನಿಕ ಸಹಭಾಗಿತ್ವದ ಪ್ರಕ್ರಿಯೆಗಳಲ್ಲಿ ಪ್ರಾಮುಖ್ಯತೆ ತೋರುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ ಎಂಬುದು ಕಂಡುಬರುತ್ತದೆ. ಆದರೆ ಉತ್ತಮ ಆದಾಯವುಳ್ಳ ಕುಟುಂಬದಲ್ಲಿ ಪುರುಷರು ಯಜಮಾನಿಕೆ ಮನೋಭಾವನೆ ಸ್ಪಷ್ಟವಾಗಿದೆ. ಇದಕ್ಕೆ ಕುಟುಂಬದ ಪ್ರತಿಷ್ಠೆ ಮುಖ್ಯವಾಗಿ ಕಂಡುಬರುತ್ತದೆ. ಇಲ್ಲಿ ಒಬ್ಬ ಮಹಿಳಾ ಸದಸ್ಯೆ ಕುಟುಂಬದ ಆಸ್ತಿಯ ವಾರಸುದಾರಳಾಗಿದ್ದಾಳೆಯೇ ವಿನಾ ಆದಾಯದ ಮೂಲವಾಗಿಲ್ಲ. ಇವರ ದುಡಿಮೆ ಅಥವಾ ಆದಾಯ ಸಂಗೋಪನಾ ದುಡಿಮೆಯಾಗಿಯೇ ಪರಿಗಣಿಸಲ್ಪಟ್ಟಿರುವುದರಿಂದ ಕುಟುಂಬದ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಇತರೆ ಪ್ರಮುಖ ವಿಷಯಗಳಲ್ಲಿ ಪುರುಷರೇ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಕಂಡುಬರುತ್ತದೆ. ಸಾಮಾನ್ಯ ಕುಟುಂಬದಲ್ಲಿ ಪ್ರತಿಷ್ಠೆ ಗೌಣವಾಗುತ್ತದೆ. ಆದಾಯವೇ ಮುಖ್ಯವಾಗುತ್ತದೆ. ಹೀಗಾಗಿ ಸಾಮಾನ್ಯ ಕುಟುಂಬದಲ್ಲಿ ಆದಾಯದ ಪ್ರಮುಖ ಮೂಲವಾಗಿರುವ ಮಹಿಳೆಯರು ಕುಟುಂಬದ ಎಲ್ಲಾ ಪ್ರಮುಖ ವಿಷಯಗಳಲ್ಲಿ ನಿರ್ಧಾರ ಕೈಗೊಳ್ಳುವುದು ಕಂಡುಬರುತ್ತದೆ. ಸಂಗೋಪನಾ ದುಡಿಮೆಗಿಂತ ಸಂಪಾದನೆಯ ದುಡಿಮೆಯ ಮಹಿಳೆಯರು ಸಬಲೀಕರಣದ ಹಾದಿಯಲ್ಲಿ ಸಾಗುತ್ತಿದ್ದಾರೆ ಎಂಬುದನ್ನು ಈ ಅಧ್ಯಾಯದಿಂದ ಕಂಡುಕೊಳ್ಳಲಾಗಿದೆ.

ಭಾರತ ಸ್ವಾತಂತ್ರ್ಯ ಪಡೆದು ಸಂವಿಧಾನಾತ್ಮಕ ಆಡಳಿತ ಜಾರಿಗೆ ಬಂದ ನಂತರ ಜರುಗಿದ ಮೊದಲ ಸಾರ್ವತ್ರಿಕ ಚುನಾವಣೆಯಿಂದ ಹಿಡಿದು 2010ರಲ್ಲಿ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಗಳು ಸೇರಿದಂತರ ಎಲ್ಲಾ ಚುನಾವಣೆಗಳು ಮಹಿಳೆಯರ ಸಬಲೀಕರಣಕ್ಕೆ ಪೂರಕವಾಗಿ ಕಂಡುಬರುತ್ತಿಲ್ಲ. ಈ ಸಾರ್ವತ್ರಿಕ ಚುನಾವಣೆಗಳು ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಾತಿನಿಧ್ಯ ಪರಿವರ್ತನೆಗೆ ಸೋಪಾನವಾಗಿಲ್ಲ. ಸ್ವಾತಂತ್ರ್ಯಾನಂತರ ಇಷ್ಟೆಲ್ಲಾ ಚುನಾವಣೆಗಳು

ಜರುಗಿದ್ದರೂ, ಅವುಗಳಲ್ಲಿ ಮಹಿಳೆಯರ ಸ್ವನಿರ್ಧಾರದಂತೆ ಮತ ಚಲಾಯಿಸಲಾಗದೇ, ಹೆಚ್ಚಾಗಿ ಪುರುಷರ ನಿರ್ಧಾರಕ್ಕೆ ಬದ್ಧವಾಗಿ ಮತ ನೀಡುವುದು ಕಂಡುಬರುತ್ತದೆ. ಗ್ರಾಮೀಣ ಭಾರತದಲ್ಲಿ ಜಮೀನ್ದಾರಿ ಮತ್ತು ವೈದಿಕ ಪರಂಪರೆಯ ಪುರುಷಪ್ರಧಾನ ಲಕ್ಷಣಗಳು ಯಥಾಸ್ಥಿತಿಯಲ್ಲಿ ಮುಂದುವರೆಯುವುದು ಕಂಡುಬರುತ್ತದೆ. ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ಸಮಾನ ಮತ್ತು ಸಮಗ್ರ ರಾಜಕೀಯ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ, ಪಂಚಾಯತ್‌ರಾಜ್ ವ್ಯವಸ್ಥೆ ಮತ್ತು ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಲಾಗಿದೆ. ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಪುರುಷರ ಮಧ್ಯಸ್ಥಿಕೆ ಇಲ್ಲದೆ ಪ್ರಾತಿನಿಧ್ಯ ಲಭಿಸಬೇಕೆಂಬುದು ಮೀಸಲಾತಿಯ ಉದ್ದೇಶವಾಗಿದೆ. ಈ ಉದ್ದೇಶಗಳು ಉದ್ದೇಶಿತ ವರ್ಗಕ್ಕೆ ತಲುಪಬೇಕು. ಆದರೆ ಲಿಂಗ, ಜಾತಿ, ವಯಸ್ಸು, ಶಿಕ್ಷಣ, ಆದಾಯ, ಪ್ರತಿಷ್ಠೆ ಇತ್ಯಾದಿಗಳು ಮಹಿಳೆಯರ ಮತದಾನದ ಪ್ರಾತಿನಿಧ್ಯ ಕಸಿದುಕೊಳ್ಳುವಲ್ಲಿ ಪ್ರಭಾವ ಬೀರಿರುವುದು ಈ ಅಧ್ಯಯನದಿಂದ ಕಂಡುಬರುತ್ತದೆ.

ಕೊನೆ ಟಿಪ್ಪಣಿ

1. O.P.Bohra, *Women in Decentralized Democracy- A Case Study of Tamil Nadu.* New Delhi: Institute of Social Science, 1997, p.56.
2. ಎ.ಶ್ರೀಧರ, *ಪಂಚಾಯತ್ ಸಂಸ್ಥೆಗಳ ಸಾಮಾಜಿಕ ಆಯಾಮಗಳು,* ಹಂಪಿ: ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ, 2006, ಪು.3
3. ಎಂ. ಚಂದ್ರ ಪೂಜಾರಿ, *ದೇಶಿಯತೆಯ ನೆರಳಲ್ಲಿ ವಿಕೇಂದ್ರೀಕರಣ,* ಹಂಪಿ: ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ, 2008, ಪು.5.
4. ಎಂ.ಯರಿಸ್ವಾಮಿ, *ಗ್ರಾಮಪಂಚಾಯಿತಿ ಮತ್ತು ಸಬಲೀಕರಣ,* ಹಂಪಿ: ಕನ್ನಡ ವಿಶ್ವವಿದ್ಯಾಲಯ, ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಮಂಡಿಸಿದ ಅಪ್ರಕಟಿತ ಪಿಎಚ್.ಡಿ ಪ್ರಬಂಧ, 2002, ಪು.3.
5. ಎಸ್. ಜಿ. ಹಿರೇಮಠ, *ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ,* ಸಿಂದಿಗಿ: ಪ್ರದೀಪ ಪ್ರಕಾಶನ, 2008, ಪು.101–102.
6. ನಿರ್ಮಲ ಬುಚ್, (2009) *"ರಿಝರ್ವೇಶನ್ ಫಾರ್ ವುಮೆನ್ ಇನ್ ಪಂಚಾಯತ್: ಎ ಸಾಪ್‌ಇನ್ ಡಿಸ್‌ಗೈಜ್?",* ಇಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಮುಂಬೈ: ಎ ಸಮೀಕ್ಷ ಟ್ರಸ್ಟ್ ಪಬ್ಲಿಕೇಶನ್, ಅಕ್ಟೋಬರ್, 3–12, ಪು.9.
7. ಚುನಾವಣಾ ಅಧಿಕಾರಿಗಳು, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, *ಸಂಸತ್ತು, ಜಿಲ್ಲಾಪಂಚಾಯಿತಿ ಮತ್ತು ಗ್ರಾಮಪಂಚಾಯಿತಿ ಚುನಾವಣೆಗಳು,* ಸಿದ್ದಾಪುರ: ಮತದಾನ ಅಂಕಿ ಅಂಶಗಳ ವಿವರ, ಚುನಾವಣೆ ವಿಭಾಗ, ತಾಲೂಕು ಕಛೇರಿ, 2009, 2010.
8. Arun & Rashmi, (1997), *The Role of Women in Panchayti Raj,* New Delhi: Ashis Publication.
9. www. *Census of India,* 2011, dated: 11/08/2011, Time: 20:35pm.
10. ಟಿ. ಆರ್. ಚಂದ್ರಶೇಖರ, *ಲಿಂಗಸಂಬಂಧಿ ಅಭಿವೃದ್ಧಿ ಅಧ್ಯಯನ ಪ್ರಬಂಧಗಳು,* ಹಂಪಿ:ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಮಂಟಪಮಾಲೆ–160, 2008.

ಕೋಷ್ಟಕ–4.1

ಗ್ರಾಮಪಂಚಾಯಿತಿವಾರು 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ ಜನಪ್ರತಿನಿಧಿಗಳ ಮತ್ತು ಅಭ್ಯರ್ಥಿಗಳ ಲಿಂಗವಾರು ವಿವರ

ಕ್ರ. ಸಂ.	ಜಿಲ್ಲೆ, ತಾಲೂಕು ಮತ್ತು ಗ್ರಾಮಪಂಚಾಯಿತಿಗಳು	ಜನಪ್ರತಿನಿಧಿಗಳು			ಮರುಆಯ್ಕೆ			ಮರಣ			ಅಭ್ಯರ್ಥಿಗಳು			ಒಟ್ಟು ಮಾಹಿತಿದಾರರು		
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
	ಬಳ್ಳಾರಿ/ಹೊಸಪೇಟೆ															
1	ಹೊಸೂರು	10	10	20	1	0	1	1	0	1	25	25	50	33	35	68
2	ನಾಗೇನಹಳ್ಳಿ	17	13	30	1	0	1	0	0	0	25	25	50	41	38	79
	ಉ.ಕ/ಸಿದ್ದಾಪುರ															
3	ಬೇಡ್ಕಣಿ	10	12	22	0	0	0	0	0	0	25	25	50	35	37	72
4	ಕೋಲಸಿರ್ಸಿ	12	14	26	0	0	0	0	0	0	25	25	50	37	39	76
	ಒಟ್ಟು	**49**	**49**	**98**	**2**	**0**	**2**	**1**	**0**	**1**	**100**	**100**	**200**	**146**	**149**	**295**

ಮೂಲ: 1. ಪ್ರಾಥಮಿಕ ಮಾಹಿತಿ.

2. ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ಚುನಾವಣಾ ವಿವರ ಪ್ರಪತ್ರ–36, ಹೊಸಪೇಟೆ ಮತ್ತು ಸಿದ್ದಾಪುರ: ಚುನಾವಣಾ ವಿಭಾಗ ತಾಲೂಕು ಕಛೇರಿ, ಮೇ 17, 2010.

ಕೋಷ್ಟಕ–4.2

ಮಹಿಳಾ ಮತಾಧಿಕಾರದ ಬಗ್ಗೆ ಪಂಚಾಯಿತಿವಾರು ಮತ್ತು ಲಿಂಗವಾರು 2005ಮತ್ತು 2010ರ ಅವಧಿಗಳ ಜನಪ್ರತಿನಿಧಿಗಳು ಮತ್ತು ಅಭ್ಯರ್ಥಿಗಳು ನೀಡಿದ ವಿವರ

ಕ್ರ. ಸಂ.	ಜಿಲ್ಲೆ, ತಾಲೂಕು ಮತ್ತು ಗ್ರಾಮಪಂಚಾಯಿತಿಗಳು	ಪುರುಷ ಮಾಹಿತಿದಾರರು			ಮಹಿಳಾ ಮಾಹಿತಿದಾರರು			ಒಟ್ಟು ಮಾಹಿತಿದಾರರು		
		ಗಂಡು	ಸ್ವಇಚ್ಛೆ	ಒಟ್ಟು	ಗಂಡು	ಸ್ವಇಚ್ಛೆ	ಒಟ್ಟು	ಗಂಡು	ಸ್ವಇಚ್ಛೆ	ಒಟ್ಟು
	ಬಳ್ಳಾರಿ/ಹೊಸಪೇಟೆ									
1	ಹೊಸೂರು	33	0	33	28	7	35	61	7	68
2	ನಾಗೇನಹಳ್ಳಿ	31	10	41	24	14	38	55	24	79
	ಉ.ಕ/ಸಿದ್ದಾಪುರ									
3	ಬೇಡ್ಕಣಿ	17	18	35	21	16	37	38	34	72
4	ಕೋಲಸಿರ್ಸಿ	3	34	37	11	28	39	14	62	76
	ಒಟ್ಟು	**84**	**62**	**146**	**84**	**65**	**149**	**168**	**127**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಕೋಷ್ಟಕ–4.3

ಮಹಿಳಾ ಮತಾಧಿಕಾರದ ಬಗ್ಗೆ ಮಾಹಿತಿ ನೀಡಿದ ಪಂಚಾಯಿತಿವಾರು ಮತ್ತು ಲಿಂಗವಾರು 2005ಮತ್ತು 2010ರ ಅವಧಿಗಳ ಜನಪ್ರತಿನಿಧಿಗಳ ಮತ್ತು ಅಭ್ಯರ್ಥಿಗಳ ವಯಸ್ಸಿನ ವಿವರ

ಕ್ರ. ಸಂ.	ಜಿಲ್ಲೆ, ತಾಲೂಕು ಮತ್ತು ಗ್ರಾಮಪಂಚಾಯಿತಿಗಳು	ವಯಸ್ಸು	ಪುರುಷ ಮಾಹಿತಿದಾರರು			ಮಹಿಳಾ ಮಾಹಿತಿದಾರರು			ಒಟ್ಟು ಮಾಹಿತಿದಾರರು		
			ಗಂಡು	ಸ್ವಇಚ್ಚೆ	ಒಟ್ಟು	ಗಂಡು	ಸ್ವಇಚ್ಚೆ	ಒಟ್ಟು	ಗಂಡು	ಸ್ವಇಚ್ಚೆ	ಒಟ್ಟು
	ಬಳ್ಳಾರಿ/ಹೊಸಪೇಟೆ										
1	ಹೊಸೂರು	18ರಿಂದ 35	8	0	8	17	4	21	25	4	29
		36ರಿಂದ 50	17	0	17	4	3	7	21	3	24
		51 ಮೇಲ್ಪಟ್ಟು	8	0	8	7	0	7	15	0	15
		ಒಟ್ಟು	**33**	**0**	**33**	**28**	**7**	**35**	**61**	**7**	**68**
2	ನಾಗೇನಹಳ್ಳಿ	18ರಿಂದ 35	15	0	15	6	8	14	21	8	29
		36ರಿಂದ 50	13	5	18	12	6	18	25	11	36
		51 ಮೇಲ್ಪಟ್ಟು	3	5	8	6	0	6	9	5	14
		ಒಟ್ಟು	**31**	**10**	**41**	**24**	**14**	**38**	**55**	**24**	**79**

ಕ್ರ. ಸಂ.	ಜಿಲ್ಲೆ, ತಾಲೂಕು ಮತ್ತು ಗ್ರಾಮಪಂಚಾಯಿತಿಗಳು	ವಯಸ್ಸು	ಪುರುಷ ಮಾಹಿತಿದಾರರು			ಮಹಿಳಾ ಮಾಹಿತಿದಾರರು			ಒಟ್ಟು ಮಾಹಿತಿದಾರರು		
			ಗಂಡು	ಸ್ವಇಚ್ಛೆ	ಒಟ್ಟು	ಗಂಡು	ಸ್ವಇಚ್ಛೆ	ಒಟ್ಟು	ಗಂಡು	ಸ್ವಇಚ್ಛೆ	ಒಟ್ಟು
	ಉ.ಕ/ಸಿದ್ದಾಪುರ										
3	ಬೇಡ್ಕಣಿ	18ರಿಂದ 35	4	7	11	12	3	15	16	10	26
		36ರಿಂದ 50	6	8	14	5	13	18	11	21	32
		51 ಮೇಲ್ಪಟ್ಟು	7	3	10	4	0	4	11	3	14
		ಒಟ್ಟು	**17**	**18**	**35**	**21**	**16**	**37**	**38**	**34**	**72**
4	ಕೋಲಸಿರ್ಸಿ	18ರಿಂದ 35	3	9	12	6	11	17	9	20	29
		36ರಿಂದ 50	0	16	16	5	17	22	5	33	38
		51 ಮೇಲ್ಪಟ್ಟು	0	9	9	0	0	0	0	9	9
		ಒಟ್ಟು	**3**	**34**	**37**	**11**	**28**	**39**	**14**	**62**	**76**
5	ಒಟ್ಟು	18ರಿಂದ 35	30	16	46	41	26	67	71	42	113
		36ರಿಂದ 50	36	29	65	26	39	65	62	68	130
		51 ಮೇಲ್ಪಟ್ಟು	18	17	35	17	0	17	35	17	52
		ಒಟ್ಟು	**84**	**62**	**146**	**84**	**65**	**149**	**168**	**127**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಕೋಷ್ಟಕ–4.4

ಮಹಿಳಾ ಮತಾಧಿಕಾರದ ಬಗ್ಗೆ ಮಾಹಿತಿ ನೀಡಿದ ಪಂಚಾಯಿತಿವಾರು ಮತ್ತು ಲಿಂಗವಾರು 2005ಮತ್ತು 2010ರ ಅವಧಿಗಳ ಜನಪ್ರತಿನಿಧಿಗಳ ಮತ್ತು ಅಭ್ಯರ್ಥಿಗಳ ಜಾತಿ ವಿವರ

			ಬಯಲುಸೀಮೆ ಗ್ರಾಮಪಂಚಾಯಿತಿಗಳು						ಮಲೆನಾಡು ಗ್ರಾಮಪಂಚಾಯಿತಿಗಳು								
ಕ್ರ. ಸಂ.	ಜಾತಿ	ಮತದಾನದ ನಿರ್ಧಾರ	ಹೊಸೂರು ಮಾಹಿತಿದಾರರು			ನಾಗೇನಹಳ್ಳಿ ಮಾಹಿತಿದಾರರು			ಬೇಡ್ಕಣಿ ಮಾಹಿತಿದಾರರು			ಕೋಲಸಿರ್ಸಿ ಮಾಹಿತಿದಾರರು			ಒಟ್ಟು ಮಾಹಿತಿದಾರರು		
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಎಸ್.ಸಿ	ಪುರುಷ	4	7	11	8	6	14	6	8	14	3	6	9	21	27	48
		ಸ್ವ–ಇಚ್ಚೆ	0	0	0	2	6	8	6	4	10	11	8	19	19	18	37
		ಒಟ್ಟು	**4**	**7**	**11**	**10**	**12**	**22**	**12**	**12**	**24**	**14**	**14**	**28**	**40**	**45**	**85**
2	ಎಸ್.ಟಿ	ಪುರುಷ	25	14	39	8	3	11	0	0	0	0	0	0	33	17	50
		ಸ್ವ–ಇಚ್ಚೆ	0	7	7	0	6	6	0	0	0	0	0	0	0	13	13
		ಒಟ್ಟು	**25**	**21**	**46**	**8**	**9**	**17**	**0**	**0**	**0**	**0**	**0**	**0**	**33**	**30**	**60**
3	ಇತರೆ/ಸಾಮಾನ್ಯ	ಪುರುಷ	4	7	11	15	15	30	11	13	24	0	5	5	30	40	70
		ಸ್ವ–ಇಚ್ಚೆ	0	0	0	8	2	10	12	12	24	23	20	43	43	34	77
		ಒಟ್ಟು	**4**	**7**	**11**	**23**	**17**	**40**	**23**	**25**	**48**	**23**	**25**	**48**	**73**	**74**	**147**
4	**ಒಟ್ಟು**	ಪುರುಷ	33	28	61	31	24	55	17	21	38	3	11	14	84	85	168
		ಸ್ವ–ಇಚ್ಚೆ	0	7	7	10	14	24	18	16	34	34	28	62	62	65	127
		ಒಟ್ಟು	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**149**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಕೋಷ್ಟಕ–4.5

ಮಹಿಳಾ ಮತಾಧಿಕಾರದ ಬಗ್ಗೆ ಮಾಹಿತಿ ನೀಡಿದ ಪಂಚಾಯಿತಿವಾರು ಮತ್ತು ಲಿಂಗವಾರು 2005ಮತ್ತು 2010ರ ಅವಧಿಗಳ ಜನಪ್ರತಿನಿಧಿಗಳ ಮತ್ತು ಅಭ್ಯರ್ಥಿಗಳ ಶೈಕ್ಷಣಿಕ ವಿವರ

		ಬಯಲುಸೀಮೆ ಗ್ರಾಮಪಂಚಾಯಿತಿಗಳು						ಮಲೆನಾಡು ಗ್ರಾಮಪಂಚಾಯಿತಿಗಳು								
ಕ್ರ. ಸಂ. ಶಿಕ್ಷಣ	ಮತದಾನದ ನಿರ್ಧಾರ	ಹೊಸೂರು ಮಾಹಿತಿದಾರರು			ನಾಗೇನಹಳ್ಳಿ ಮಾಹಿತಿದಾರರು			ಬೇಡ್ಕಣಿ ಮಾಹಿತಿದಾರರು			ಕೋಲಸಿರ್ಸಿ ಮಾಹಿತಿದಾರರು			ಒಟ್ಟು ಮಾಹಿತಿದಾರರು		
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1. **ಅನಕ್ಷರಸ್ಥರು**	ಪುರುಷ	12	10	22	5	7	12	0	0	0	0	0	0	17	17	34
	ಸ್ವ–ಇಚ್ಛೆ	0	4	4	0	5	5	0	0	0	0	0	0	0	9	9
	ಒಟ್ಟು	**12**	**14**	**26**	**5**	**12**	**17**	**0**	**0**	**0**	**0**	**0**	**0**	**17**	**26**	**43**
2 **ಪ್ರಾಥಮಿಕ**	ಪುರುಷ	17	10	27	13	14	27	10	13	23	0	11	11	40	48	88
	ಸ್ವ–ಇಚ್ಛೆ	0	3	3	3	9	12	3	12	15	9	14	23	15	38	53
	ಒಟ್ಟು	**17**	**13**	**30**	**16**	**23**	**39**	**13**	**25**	**38**	**9**	**25**	**34**	**55**	**86**	**141**
3. **ಪ್ರೌಢ**	ಪುರುಷ	4	8	12	10	3	13	7	8	15	3	0	3	24	19	43
	ಸ್ವ–ಇಚ್ಛೆ	0	0	0	4	0	4	3	4	7	22	11	33	29	15	44
	ಒಟ್ಟು	**4**	**8**	**12**	**14**	**3**	**17**	**10**	**12**	**22**	**25**	**11**	**36**	**53**	**34**	**87**
4. **ಪದವಿ**	ಪುರುಷ	0	0	0	3	0	3	0	0	0	0	0	0	3	0	3
	ಸ್ವ–ಇಚ್ಛೆ	0	0	0	3	0	3	12	0	12	3	3	6	18	3	21
	ಒಟ್ಟು	**0**	**0**	**0**	**6**	**0**	**6**	**12**	**0**	**12**	**3**	**3**	**6**	**21**	**3**	**24**
5. **ಒಟ್ಟು**	ಪುರುಷ	33	28	61	31	24	55	17	21	38	3	11	14	84	84	168
	ಸ್ವ–ಇಚ್ಛೆ	0	7	7	10	14	24	18	16	34	34	28	62	62	65	127
	ಒಟ್ಟು	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**149**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಕೋಷ್ಟಕ–4.6

ಮಹಿಳಾ ಮತಾಧಿಕಾರದ ಬಗ್ಗೆ ಮಾಹಿತಿ ನೀಡಿದ ಪಂಚಾಯಿತಿವಾರು ಮತ್ತು ಲಿಂಗವಾರು 22005ಮತ್ತು 2010ರ ಅವಧಿಗಳ ಜನಪ್ರತಿನಿಧಿಗಳ ಮತ್ತು ಅಭ್ಯರ್ಥಿಗಳ ಆದಾಯದ ವಿವರ

			ಬಯಲುಸೀಮೆ ಗ್ರಾಮಪಂಚಾಯಿತಿಗಳು						ಮಲೆನಾಡು ಗ್ರಾಮಪಂಚಾಯಿತಿಗಳು								
ಕ್ರ. ಸಂ.	ಆದಾಯ	ಮತದಾನದ ನಿರ್ಧಾರ	ಹೊಸೂರು ಮಾಹಿತಿದಾರರು			ನಾಗೇನಹಳ್ಳಿ ಮಾಹಿತಿದಾರರು			ಬೇಡ್ಕಣಿ ಮಾಹಿತಿದಾರರು			ಕೋಲಸಿರ್ಸಿ ಮಾಹಿತಿದಾರರು			ಒಟ್ಟು ಮಾಹಿತಿದಾರರು		
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1.	ಇಲ್ಲ	ಪುರುಷ	0	3	3	0	11	11	0	3	3	0	0	0	0	17	17
		ಸ್ವ–ಇಚ್ಛೆ	0	0	0	0	6	6	0	3	3	0	14	14	0	23	23
		ಒಟ್ಟು	**0**	**3**	**3**	**0**	**17**	**17**	**0**	**6**	**6**	**0**	**14**	**14**	**0**	**40**	**40**
2.	**30,000** ವರೆಗೆ	ಪುರುಷ	17	17	34	18	10	28	7	18	25	3	8	11	45	53	98
		ಸ್ವ–ಇಚ್ಛೆ	0	4	4	10	8	18	18	13	31	28	11	39	56	36	92
		ಒಟ್ಟು	**17**	**21**	**38**	**28**	**18**	**46**	**25**	**31**	**56**	**31**	**19**	**50**	**101**	**89**	**190**
3.	**30,100** ರಿಂದ **1,00,000**	ಪುರುಷ	16	4	20	8	3	11	10	0	10	0	3	3	34	10	44
		ಸ್ವ–ಇಚ್ಛೆ	0	0	0	0	0	0	0	0	0	6	3	9	6	3	9
		ಒಟ್ಟು	**16**	**4**	**20**	**8**	**3**	**11**	**10**	**0**	**10**	**6**	**6**	**12**	**40**	**13**	**53**
4.	**1,00,100** ಮೇಲ್ಪಟ್ಟು	ಪುರುಷ	0	4	4	5	0	5	0	0	0	0	0	0	5	4	9
		ಸ್ವ–ಇಚ್ಛೆ	0	3	3	0	0	0	0	0	0	0	0	0	0	3	3
		ಒಟ್ಟು	**0**	**7**	**7**	**5**	**0**	**5**	**0**	**0**	**0**	**0**	**0**	**0**	**5**	**7**	**12**
5.	**ಒಟ್ಟು**	ಪುರುಷ	33	28	61	31	24	55	17	21	38	3	11	14	84	84	168
		ಸ್ವ–ಇಚ್ಛೆ	0	7	7	10	14	24	18	16	34	34	28	62	62	65	127
		ಒಟ್ಟು	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**149**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಅಧ್ಯಾಯ ಐದು

ಚುನಾವಣಾ ಉಮೇದುವಾರಿಕೆ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ

ಪೀಠಿಕೆ

ಲೋಕತಂತ್ರ ಗಣರಾಜ್ಯ ವ್ಯವಸ್ಥೆಯಲ್ಲಿ ಕಂಡುಬರುವ ರಾಜಕೀಯ ಪ್ರಾತಿನಿಧ್ಯವು ಒಂದು ಬಹುಮುಖ್ಯವಾದ ವ್ಯವಸ್ಥೆಯಾಗಿದೆ. ಇದು ವಿಶಾಲ ಅರ್ಥ, ವ್ಯಾಪ್ತಿ ಮತ್ತು ಉದ್ದೇಶಗಳನ್ನು ಹೊಂದಿರುತ್ತದೆ. ಪ್ರಾತಿನಿಧ್ಯವೆಂದರೆ ಒಂದು ನಿರ್ದಿಷ್ಟ ಜನಸಮುದಾಯದ ಪರವಾಗಿ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹ ಪ್ರತಿನಿಧಿಸುವುದಾಗಿರುತ್ತದೆ. ಅಂದರೆ ಜನತಂತ್ರ ವ್ಯವಸ್ಥೆಯಲ್ಲಿ ಇಡೀ ಜನಸಮುದಾಯದ ಪರವಾಗಿ ಸಣ್ಣ ಗುಂಪೊಂದು ಶಾಸನಸಭೆಯನ್ನು ಪ್ರತಿನಿಧಿಸುವುದಾಗಿರುತ್ತದೆ. ಜನಸಮುದಾಯವನ್ನು ಪ್ರತಿನಿಧಿಸುವ ರಾಜಕೀಯ ಪ್ರತಿನಿಧಿಗಳು ಮತದಾರರ ಅಭಿಪ್ರಾಯ, ಹಿತಾಸಕ್ತಿ, ಒಲವು, ನಿಲವು, ಆದ್ಯತೆಗಳನ್ನು ಶಾಸನಗಳ ರೂಪದಲ್ಲಿ ತರುವುದೇ ಪ್ರಾತಿನಿಧ್ಯದ ಮೂಲ ಉದ್ದೇಶವಾಗಿರುತ್ತದೆ. ನಿರ್ದೇಶನ ಹಾಗೂ ನಿಯಂತ್ರಣ ಮಾಡುವುದು ಮತ್ತು ಜನತೆಯ ಇಚ್ಚೆಯನ್ನು ಪೂರ್ಣಗೊಳಿಸುವುದೇ ಪ್ರಾತಿನಿಧ್ಯವೆಂದು ಮ್ಯಾಕ್ ಹೇಳಿರುತ್ತಾನೆ.[1] ಪ್ರಾತಿನಿಧ್ಯ ಒಂದು ವ್ಯವಸ್ಥೆಯಾಗಿದ್ದು, ಇದು ಒಂದು ವರ್ಗದ ಜನರು ಮತ್ತೊಂದು ವರ್ಗದ ಜನರ ಮೇಲೆ ಪ್ರಭಾವ ಬೀರುವುದಾಗಿರುತ್ತದೆ. ಪ್ರಾತಿನಿಧ್ಯದ ಉದ್ದೇಶವು ಜನಪ್ರತಿನಿಧಿಗಳಾದವರು ಸರ್ಕಾರದ ಆಡಳಿತಕ್ಕೆ ಹಾಗೂ ಸಮುದಾಯದ ವಿವಿಧ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶಾಸನ ಮತ್ತು ಯೋಜನೆಗಳನ್ನು ರೂಪಿಸುವ ಹಾಗೂ ಅನುಷ್ಠಾನಗೊಳಿಸುವ ಪ್ರಕ್ರಿಯೆಯಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಜನಪ್ರತಿನಿಧಿಗಳು ತಮ್ಮ ಸ್ವನಿರ್ಧಾರ ಮತ್ತು ಸ್ವಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವುದಕ್ಕೆ ಅವಕಾಶವಿರುತ್ತದೆ. ಇದು ಜನಾಭಿಪ್ರಾಯವನ್ನು ರೂಪಿಸುವ ಸಾಧನವಾಗಿರುತ್ತದೆ. ಇದರಿಂದ ಜನರ ಮತ್ತು ಜನಪ್ರತಿನಿಧಿಗಳ ನಡುವೆ ಸಂಬಂಧ ಗಟ್ಟಿಗೊಳ್ಳುತ್ತದೆ, ಇದನ್ನು ರಾಜಕೀಯವಾಗಿ ಜನತಂತ್ರ ವ್ಯವಸ್ಥೆ ಎಂದು ಹೇಳಲಾಗುತ್ತದೆ. ಆದ್ದರಿಂದ ಜನಪ್ರತಿನಿಧಿಗಳು ಅಥವಾ ಜನಪ್ರತಿನಿಧಿಗಳಾಗಬಯಸುವವರು ಯಾರ ನಿಯಂತ್ರಣಕ್ಕೆ ಒಳಪಡದೇ ಸ್ವತಂತ್ರವಾಗಿ, ಸ್ವನಿರ್ಧಾರದಂತೆ ಉಮೇದುವಾರಿಕೆ ಪಡೆದು ಚುನಾಯಿತರಾಗಬೇಕಾಗುತ್ತದೆ. ಈ ಉದ್ದೇಶದಿಂದಲೇ ಜನಪ್ರತಿನಿಧಿಗಳು ತಮ್ಮ ವಿವೇಚನೆ ಹಾಗೂ ಆತ್ಮಪ್ರಜ್ಞೆಯ ಅನುಗುಣವಾಗಿಯೇ ಕಾರ್ಯಪ್ರವೃತ್ತರಾಗಬೇಕೆಂದು ಎಡ್ಮಂಡ್ ಬರ್ಕ್ ಹೇಳಿರುತ್ತಾನೆ.[2]

ಸ್ವಇಚ್ಛೆ ಅಥವಾ ಸ್ವನಿರ್ಧಾರದ ಪ್ರಾತಿನಿಧ್ಯವು ಸ್ವಾತಂತ್ರ್ಯದ ಮತ್ತು ಸಬಲೀಕರಣದ ಸಂಕೇತವಾಗಿರುತ್ತದೆ. ರಾಜಕೀಯ ಪ್ರಾತಿನಿಧ್ಯ ಪಡೆದವರು ಅಥವಾ ಪಡೆಯಲು ಬಯಸುವವರು ಅವರ ಸ್ವನಿರ್ಧಾರದಂತೆ ಚುನಾವಣಾ ಉಮೇದುವಾರಿಕೆ ಪಡೆದರೆ ಅವರು ಸಬಲೀಕರಣಗೊಂಡವರು ಎಂದು ಹೇಳಬಹುದು. ಅಭ್ಯರ್ಥಿಯು ಸ್ವಇಚ್ಛೆಗೆ ಅನುಗುಣವಾಗಿ ಉಮೇದುವಾರಿಕೆ ಪಡೆದರೆ ವ್ಯಕ್ತಿ ಮತ್ತು ಸಮುದಾಯಗಳೆರಡು ಅಭಿವೃದ್ಧಿ ಹೊಂದಲು ಸಹಾಯವಾಗುತ್ತದೆ. ವ್ಯಕ್ತಿ ಸ್ವಾತಂತ್ರ್ಯದಿಂದ ಸಮಾಜದ ಪ್ರಗತಿ ಸಾಧ್ಯ. ಸ್ವಾತಂತ್ರ್ಯಗಳನ್ನು ಅನುಭವಿಸಲು ಯಾವ ಅಡೆತಡೆಗಳು ಇರಬಾರದು ಎಂದು ಜೆ.ಎಸ್.ಮಿಲ್ ಅವರು 'ದಿ ಎಸ್ಸೇಸ್ ಆನ್ ಲಿಬಿರಿಟಿ ಆ್ಯಂಡ್ ರೆಪ್ರಜೆಂಟೇಟಿವ್ ಗವರ್ನ್‌ಮೆಂಟ್' ಎಂಬ ಕೃತಿಯಲ್ಲಿ ವ್ಯಕ್ತಪಡಿಸಿದ್ದಾನೆ. ಅಭ್ಯರ್ಥಿಯು ಬೇರೊಬ್ಬರ ಒತ್ತಡಕ್ಕೆ, ಹಿತಾಸಕ್ತಿಗೆ ಮಣಿದು ಚುನಾವಣೆ ಉಮೇದುವಾರಿಕೆ ಪಡೆದಿದ್ದಾದರೆ ಅದು ನೈಜ ಪ್ರಾತಿನಿಧ್ಯವಾಗಲಾರದು. ಅವರು ನೈಜ ಇಚ್ಛೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾರರು. ಅದ್ದರಿಂದ ಅವರು ಸಬಲೀಕರಣಗೊಂಡವರು ಎಂದು ಹೇಳಲಾಗದು.

ಭಾರತ ಜನತಂತ್ರ ವಿಕೇಂದ್ರೀಕರಣ ರಾಷ್ಟ್ರ. ಇಲ್ಲಿ ಎಲ್ಲಾ ಹಂತದ ರಾಜಕೀಯ ಸಂಸ್ಥೆಗಳು ಜನಪ್ರಾತಿನಿಧ್ಯದಿಂದ ಕೂಡಿದವುಗಳಾಗಿವೆ. ತಳಮಟ್ಟದ ಪ್ರಜಾಪ್ರಭುತ್ವ ಎನ್ನಲಾದ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮೀಸಲಾತಿ ಮೂಲಕ ಎಲ್ಲಾ ಜಾತಿ ಮತ್ತು ವರ್ಗದ ಜನರಿಗೆ ಮತ್ತು ಮಹಿಳೆಯರಿಗೆ ಪ್ರಾತಿನಿಧ್ಯವನ್ನು ವಿಸ್ತಾರಗೊಳಿಸಲಾಗಿದೆ. ಮಹಿಳೆ ಪಂಚಾಯತ್‌ರಾಜ್ ಸಂಸ್ಥೆಗಳ ಆಡಳಿತದ ಮೂಲಕ ಸಮುದಾಯದ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು, ಆ ಮೂಲಕ ಮಹಿಳೆ ಸಬಲೀಕರಣಗೊಳ್ಳುವಳು ಎಂಬ ಉದ್ದೇಶದಿಂದಲೇ ಮಹಿಳಾ ಪ್ರಾತಿನಿಧ್ಯವನ್ನು ವಿಸ್ತರಿಸಲಾಗಿದೆ. 1992ರಲ್ಲಿ ಸಂವಿಧಾನದ 73ನೇ ತಿದ್ದುಪಡಿಯು ಈ ಉದ್ದೇಶವನ್ನು ಹೊತ್ತುಕೊಂಡು ಜಾರಿಗೆ ಬಂದದ್ದು ತುಂಬಾ ಸ್ವಾಗತಾರ್ಹವಾದದ್ದು. 2010ರ ಮೇ ತಿಂಗಳಿನಲ್ಲಿ ನಾಲ್ಕನೇ ಅವಧಿಗೆ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಶೇ.33.33(ಮುಂದಿನ ಚುನಾವಣೆಯಲ್ಲಿ ಶೇ.50)ರಷ್ಟು ಮಹಿಳೆಯರಿಗೆ ಮೀಸಲಾತಿಯನ್ನು ನೀಡಲಾಗಿದೆ. 73ನೇ ತಿದ್ದುಪಡಿಯ ಫಲವಾಗಿ ಇಂದು ಗ್ರಾಮಪಂಚಾಯಿತಿಗೆ ಸಾವಿರಾರು ಗ್ರಾಮೀಣ ಮಹಿಳೆಯರು ಜನಪ್ರತಿನಿಧಿಗಳಾಗಿ ಪ್ರಾತಿನಿಧ್ಯ ಪಡೆದಿದ್ದಾರೆ.

ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಮೀಸಲಾತಿಯನ್ನು ಶೇ.33.33ರಿಂದ ಶೇ.50ಕ್ಕೆ ವಿಸ್ತರಿಸಿರುವುದು ಮತ್ತು ಮಹಿಳೆಯರ ಜನಸಂಖ್ಯೆಗೆ ಸಮನಾಗಿ ಮೀಸಲಾತಿ ನೀಡಿರುವುದರಿಂದ ಮಹಿಳೆಯರು ಸಬಲೀಕರಣಗೊಳ್ಳುವರು ಎಂಬ ಗ್ರಹಿಕೆ ಈ ಮೀಸಲಾತಿ ನೀತಿಯ ಹಿಂದೆ ಕಂಡುಬರುತ್ತದೆ. ಮೀಸಲಾತಿ ಮಹಿಳಾ ಪ್ರಾತಿನಿಧ್ಯಕ್ಕೆ ಸಾಧನವೇ ಹೊರತು ಅದುವೇ ಮಹಿಳಾ ಸಬಲೀಕರಣವಲ್ಲ. ಜಮೀನ್ದಾರಿ ಮತ್ತು ಪುರುಷ ಯಜಮಾನಿಕೆಯ ಗ್ರಾಮೀಣ ಸಮಾಜದಲ್ಲಿ ಮಹಿಳಾ ಪ್ರಾತಿನಿಧ್ಯವು ಗೌಣವಾಗಿ ಕಂಡುಬರುತ್ತದೆ. ಕಾರಣ ಗ್ರಾಮೀಣ ಸಮಾಜದಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಯ ಪುರುಷರು ನಿಯಂತ್ರಿಸುವುದು ಕಂಡುಬರುತ್ತದೆ. ಆದ್ದರಿಂದ ಪ್ರಾತಿನಿಧ್ಯದಿಂದ ಮಹಿಳಾ ಸಬಲೀಕರಣವೆಂಬುದು ಕೇವಲ ಛಾಯೆಯಾಗಿ ಮಾತ್ರ ಕಂಡುಬರುತ್ತದೆ.

ಮಹಾಪ್ರಬಂಧದ ಈ ಅಧ್ಯಾಯದಲ್ಲಿ ಮಹಿಳಾ ಸಬಲೀಕರಣಕ್ಕೆ ಅಡ್ಡಿಯಾಗಿರುವ ಕೆಲವು ಸಮಸ್ಯೆಗಳನ್ನು ಗುರುತಿಸಲಾಗಿದೆ. ಒಂದು, ಮಹಿಳಾ ಮೀಸಲಾತಿ ನೀತಿಯನ್ನು(ಅನಿವಾರ್ಯತೆಯಿಂದ) ಒಪ್ಪಿಕೊಂಡ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಅವರ ಸ್ವ ನಿರ್ಧಾರದಂತೆ ಗ್ರಾಮಪಂಚಾಯಿತಿ ಉಮೇದುವಾರಿಕೆ ಪಡೆಯುತ್ತಾರೆಯೇ? ಎರಡು, ಸಾಮಾನ್ಯ(ಪುರುಷ) ಸ್ಥಾನಕ್ಕೆ ಕಂಡುಬರುವಷ್ಟು ಉಮೇದುವಾರಿಕೆಯ ಪೈಪೋಟಿ/ಸ್ಪರ್ಧೆ ಮಹಿಳಾ ಸ್ಥಾನಗಳಲ್ಲಿ ಕಂಡುಬರುತ್ತಿದೆಯೇ? ಮೂರು, ಮಹಿಳಾ ಮೀಸಲಾತಿ ಸ್ಥಾನಗಳನ್ನು ಬಿಟ್ಟು ಸಾಮಾನ್ಯ ಸ್ಥಾನಗಳಿಗೆ ಮಹಿಳೆಯರು ಸ್ಪರ್ಧಿಸುತ್ತಿದ್ದಾರೆಯೇ? ನಾಲ್ಕು, ಪ್ರಾತಿನಿಧ್ಯಕ್ಕಾಗಿ ನೀಡಿರುವ ಮಹಿಳಾ ಮೀಸಲಾತಿಗೆ ಅನುಗುಣವಾಗಿ ಮತದಾರರು ಚುನಾವಣೆಯಲ್ಲಿ ಮತ ನೀಡುತ್ತಾರೆಯೇ? ಐದು, ಪಕ್ಷರಹಿತ ಮತ್ತು ಬಹುವ್ಯಕ್ತಿ ಚುನಾವಣಾ ಕ್ಷೇತ್ರಗಳಾಗಿರುವ ಗ್ರಾಮಪಂಚಾಯಿತಿ ಚುನಾವಣೆಯು ಮಹಿಳೆಯರ ರಾಜಕೀಯ ಹಿತಾಸಕ್ತಿಯನ್ನು ಕಾಪಾಡುತ್ತಾವೆಯೇ? ಈ ಮೇಲಿನ ಸಮಸ್ಯೆಗಳು ಪ್ರಬಂಧದ ಉದ್ದೇಶಗಳಾಗಿವೆ. ಈ ಉದ್ದೇಶಗಳಿಗೆ ಅನುಗುಣವಾಗಿ ಜನತಂತ್ರ ವಿಕೇಂದ್ರೀಕರಣದ ಆಡಳಿತದಲ್ಲಿ ಮಹಿಳೆ ಸ್ವತಂತ್ರವಾಗಿ ಸ್ವನಿರ್ಧಾರದಂತೆ ಪಡೆಯುವ ಉಮೇದುವಾರಿಕೆಯನ್ನು ಮಹಿಳಾ ಸಬಲೀಕರಣವೆಂದು ಪರಿಭಾವಿಸಿಕೊಳ್ಳಲಾಗಿದೆ.

ಇಂದಿನ ಆಧುನಿಕ ಗ್ರಾಮೀಣ ಸಮಾಜದಲ್ಲಿ ಊಳಿಗಮಾನ್ಯ ವ್ಯವಸ್ಥೆಗೆ ಪರ್ಯಾಯವಾಗಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿ ವರ್ಗಗಳು ಬೆಳೆಯುತ್ತಿರುವುದರಿಂದ ಶ್ರೇಣೀಕೃತ ಮತ್ತು ಪುರುಷಪ್ರಧಾನ ಲಕ್ಷಣಗಳು ಗಟ್ಟಿಯಾಗಿ ಬೇರೂರಿವೆ. ಆದ್ದರಿಂದ ಲಿಂಗ ತಾರತಮ್ಯ ಮತ್ತು ಮಹಿಳೆಯರ ಬಗ್ಗೆ ಇರುವ ನಿರ್ಲಕ್ಷ್ಯ ಭಾವನೆಗಳು ಅಳಿಯದೇ ಉಳಿದುಕೊಂಡಿರುವದು ಕಂಡುಬರುತ್ತವೆ. ಹೀಗಾಗಿ ಮೂರು-ಮುಕ್ಕಾಲು ಪಾಲು ಗ್ರಾಮೀಣ ಮಹಿಳೆಯರು ರಾಜಕೀಯ ಹಿತಾಸಕ್ತಿ ಪುರುಷರ ಒತ್ತಡಕ್ಕೆ ಅಥವಾ ಓಲೈಕೆಗೆ ಮಣಿದು ರಾಜಕೀಯ ಉಮೇದುವಾರಿಕೆಯನ್ನು ಪಡೆದುಕೊಳ್ಳುತ್ತಾರೆಯೇ ವಿನಾ ಅವರ ಸ್ವನಿರ್ಧಾರದಿಂದಲ್ಲ ಎಂಬುದು ಕಂಡುಬರುತ್ತದೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಮುಖಂಡರ ಅಥವಾ ಕುಟುಂಬದ ಪುರುಷರ ಮರ್ಜಿಯಲ್ಲಿ ಬದುಕಬೇಕಾದ ಗ್ರಾಮೀಣ ಮಹಿಳೆಯರಿಗೆ ಚುನಾವಣೆ ಉಮೇದುವಾರಿಕೆಗೆ ಬೇಕು ಅಥವಾ ಬೇಡ ಎಂಬ ಅಭಿಪ್ರಾಯಗಳಿಲ್ಲ. ಮಹಿಳೆಯರ ಇಚ್ಚೆಗಿಂತ ಪುರುಷರ ಒತ್ತಾಸೆಯೇ ಮುಖ್ಯವಾಗಿ ಕಂಡುಬರುತ್ತದೆ. ಚುನಾವಣೆ ಉಮೇದುವಾರಿಕೆ ಎಂಬುದು ಕಾನೂನುಬದ್ಧ ಹಕ್ಕಾಗಿದ್ದರೂ, ಅದು ಮಹಿಳೆಯರ ಪಾಲಿಗೆ ಪುರುಷರು ನೀಡುವ ಉಡುಗೊರೆಯಾಗಿ ಕಂಡುಬರುತ್ತದೆ. ಸಾಮಾಜಿಕವಾಗಿ ಪುರುಷರ ಬಿಗಿ ಹಿಡಿತದಲ್ಲಿರುವ ಮಹಿಳೆಯರು ಅವರ ರಾಜಕೀಯ ಪ್ರಾತಿನಿಧ್ಯದ ಬಗ್ಗೆ ನಿರ್ಧಾರವನ್ನು ಹೊಂದುವಷ್ಟು ಸ್ವಾತಂತ್ರ್ಯವಿಲ್ಲದೇ ದುರ್ಬಲರಾಗಿದ್ದಾರೆ.

ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಮಹಿಳಾ ಮೀಸಲು ಅಭ್ಯರ್ಥಿಗಳು ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ ಅಭ್ಯರ್ಥಿಗಿಂತ ಹೆಚ್ಚು ಮತಗಳನ್ನು ಪಡೆದರೆ ಆ ಸ್ಥಾನಗಳು ಮಹಿಳಾ ಮೀಸಲು ಅಭ್ಯರ್ಥಿಗಳ ಪಾಲಾಗುತ್ತದೆ. ಈ ನೀತಿಯನ್ನು ಅರಿತವರು ಆತಂಕದಿಂದ ಮಹಿಳಾ ಅಭ್ಯರ್ಥಿಗಳನ್ನು ನಿರ್ಲಕ್ಷ ಮಾಡುತ್ತಿರುವುದು ಕಂಡುಬರುತ್ತದೆ. ನಾವು ಪುರುಷರು, ಹೇಳಿಕೇಳಿ ಅವಳು(ಪರಿಶಿಷ್ಟ) ಮಹಿಳೆ,

ಅವಳು ಚುನಾವಣೆಯಲ್ಲಿ ಗೆದ್ದರೆ ಅವಳ ಮುಂದೆ ಕೈಕಟ್ಟಿ ನಿಂತುಕೊಳ್ಳಬೇಕಾಗುತ್ತದೆ. ಅವಳ ಅಡಿಯಾಳಾಗಬೇಕಾಗುತ್ತದೆಂದು ಹೇಳುವರು. ಮಹಿಳಾ ಅಭ್ಯರ್ಥಿಗಳಿಗೆ ಮತ ಹಾಕದಂತೆ ಜನಸಾಮಾನ್ಯರ ದಿಕ್ಕನ್ನು ತಪ್ಪಿಸುವುದು ಕಂಡುಬರುತ್ತದೆ. ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಮೀಸಲಾತಿಯನ್ನು ನೀಡಲಾಗಿದೆ. ಆದರೆ ಮಹಿಳಾ ಅಭ್ಯರ್ಥಿಗಳನ್ನು ಕಡೆಗಣಿಸಿ ಆ ವಾರ್ಡ್‌ನ ಸಾಮಾನ್ಯ(ಪುರುಷ) ಸ್ಥಾನಗಳಿಗೆ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ ಮಾತ್ರ ಮತ ನೀಡುವ ಅಪರಿಮಿತ ಸ್ವಾತಂತ್ರ್ಯವನ್ನು ಮತದಾರನಿಗೆ ನೀಡಿರುವುದು ಮಹಿಳೆಯರ ಸಬಲೀಕರಣಕ್ಕೆ ಅಡ್ಡಿಯಾಗಿ ಕಂಡುಬರುತ್ತದೆ. ಮೀಸಲಾತಿ ನೀತಿ/ವ್ಯವಸ್ಥೆಯು ಮಹಿಳೆಯರನ್ನು ಪುರುಷರ ಬಿಗಿಹಿಡಿತದಿಂದ ತಪ್ಪಿಸಲು ಅಸಹಾಯಕವಾಗಿವೆ. ಜಿಲ್ಲಾಪಂಚಾಯಿತಿ ಮತ್ತು ತಾಲೂಕುಪಂಚಾಯಿತಿಗಳಂತೆ ಗ್ರಾಮಪಂಚಾಯಿತಿ ಚುನಾವಣಾ ಕ್ಷೇತ್ರಗಳು ಏಕವ್ಯಕ್ತಿ ಚುನಾವಣಾ ಕ್ಷೇತ್ರಗಳಲ್ಲ. ಬಹುವ್ಯಕ್ತಿ ಚುನಾವಣಾ ಕ್ಷೇತ್ರಗಳಾಗಿರುವುದು. ಜೊತೆಗೆ ಪಕ್ಷರಹಿತ ಚುನಾವಣೆಯಾಗಿರುವುದು ಗ್ರಾಮೀಣ ಮಹಿಳೆಯರನ್ನು ದುರ್ಬಲಗೊಳಿಸುವುದಕ್ಕೆ ಕಾರಣಗಳಾಗಿವೆ. ಒಟ್ಟಾರೆಯಾಗಿ ಗ್ರಾಮಪಂಚಾಯಿತಿ ಚುನಾಣೆಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಸಾಕಷ್ಟು ಅನ್ಯಾಯವಾಗುತ್ತಿರುವುದು ಕಂಡುಬರುತ್ತದೆ. ಮಹಿಳಾ ಅಭ್ಯರ್ಥಿಗಳಿಗಾಗುವ ಅನ್ಯಾಯವನ್ನು ತಿಳಿಯ ಬೇಕಾದರೆ ಮೊದಲು ಗ್ರಾಮಪಂಚಾಯಿತಿ ರಚನೆ ಮತ್ತು ಮೀಸಲು ಸ್ಥಾನಗಳ ಹಂಚಿಕೆ ಬಗ್ಗೆ ತಿಳಿಯುವುದು ಅಗತ್ಯವಾಗಿ ಕಂಡುಬರುತ್ತದೆ.

5.1 ಗ್ರಾಮಪಂಚಾಯಿತಿ ರಚನೆ: ಮಹಿಳಾ ಮೀಸಲಾತಿ ಮತ್ತು ಮಹಿಳಾ ಸಬಲೀಕರಣ

ರಾಜ್ಯದಲ್ಲಿ 1993ರ ಪಂಚಾಯತ್‌ರಾಜ್ ಅಧಿನಿಯಮದ ನಾಲ್ಕನೇ ಪ್ರಕರಣದನುಸಾರವಾಗಿ ಗ್ರಾಮಪಂಚಾಯಿತಿಗಳನ್ನು ಸ್ಥಾಪಿಸಲಾಗಿದೆ. ಸರ್ಕಾರದ ಸಾಮಾನ್ಯ ಮತ್ತು ವಿಶೇಷ ಆದೇಶಕ್ಕೆ ಅನುಗುಣವಾಗಿ ಒಂದು ಗ್ರಾಮ ಅಥವಾ ಒಂದಕ್ಕಿಂತ ಹೆಚ್ಚು ಗ್ರಾಮಗಳ ಸಮೂಹವನ್ನು ಒಂದು ಗ್ರಾಮಪಂಚಾಯಿತಿಯಾಗಿ ಸ್ಥಾಪಿಸಬಹುದಾಗಿದೆ. ಗ್ರಾಮಪಂಚಾಯಿತಿಯ ಗಡಿ ಹಾಗೂ ಜನಸಂಖ್ಯೆ ಮಿತಿಯನ್ನು ನಿರ್ಧಾರ ಮಾಡುವ ಅಧಿಕಾರ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಸಾಮಾನ್ಯವಾಗಿ 5,000ದಿಂದ 7,000 ಜನಸಂಖ್ಯೆಯುಳ್ಳ ಒಂದು ಗ್ರಾಮ ಅಥವಾ ಗ್ರಾಮಗಳನ್ನು ಸೇರಿಸಿ ಗ್ರಾಮಪಂಚಾಯಿತಿಯೊಂದನ್ನು ಸ್ಥಾಪನೆ ಮಾಡಲಾಗುತ್ತಿದೆ. ಆದರೆ ವಿಶೇಷವಾಗಿ ಮಲೆನಾಡು ಹಾಗೂ ಗುಡ್ಡಗಾಡು ಜಿಲ್ಲೆಗಳಲ್ಲಿ 2,500 ಜನಸಂಖ್ಯೆಗೆ ಕಡಿಮೆ ಇಲ್ಲದಂತೆ ಹಾಗೂ ಅವಶ್ಯಕವೆಂದು ಕಂಡುಬಂದಲ್ಲಿ ಗ್ರಾಮದ ಕೇಂದ್ರದಿಂದ 5 ಕಿ.ಮೀ. ಸುತ್ತಳೆಯ ಪ್ರದೇಶವನ್ನು ಗ್ರಾಮಪಂಚಾಯಿತಿಯಾಗಿ ರಚಿಸಬಹುದು. ಇನ್ನೂ ಕೆಲವು ಜಿಲ್ಲೆಗಳಲ್ಲಿ 7,000ಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮಗಳನ್ನು ಗ್ರಾಮಪಂಚಾಯಿತಿಯಾಗಿ ಸ್ಥಾಪಿಸಲಾಗಿದೆ. ಪ್ರತಿ ಗ್ರಾಮಪಂಚಾಯಿತಿಯಲ್ಲಿ ಒಬ್ಬ ಜನಪ್ರತಿನಿಧಿ 400 ಜನರನ್ನು ಪ್ರತಿನಿಧಿಸುತ್ತಾರೆ. ಗ್ರಾಮಪಂಚಾಯಿತಿ ಸದಸ್ಯರ ಸಂಖ್ಯೆ ಆಯಾ ಗ್ರಾಮಪಂಚಾಯಿತಿಗಳ ವ್ಯಾಪ್ತಿಯಯಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿರುತ್ತದೆ. ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮ/ಪ್ರದೇಶಗಳನ್ನು ಚುನಾವಣಾ ಕ್ಷೇತ್ರ/ವಾರ್ಡ್‌ಗಳನ್ನಾಗಿ ವಿಂಗಡಿಸಲಾಗುತ್ತದೆ. ಪ್ರಸ್ತುತವಾಗಿ ರಾಜ್ಯದಲ್ಲಿ 5,628 ಗ್ರಾಮಪಂಚಾಯಿತಿಗಳನ್ನು ಕ್ರಮಬದ್ಧವಾಗಿ ಸ್ಥಾಪಿಸಲಾಗಿದೆ.[3] ಗ್ರಾಮಪಂಚಾಯಿತಿಯ

ಒಟ್ಟು ಸದಸ್ಯರಲ್ಲಿ 2/3ರಷ್ಟು ಸದಸ್ಯರು ಚುನಾಯಿತರಾದ ಪಕ್ಷದಲ್ಲಿ ಅಂತಹ ಗ್ರಾಮಪಂಚಾಯಿತಿಯನ್ನು ಕ್ರಮಬದ್ಧವಾಗಿದೆ ಎಂದು ಘೋಷಿಸಲಾಗುವುದು. ಗ್ರಾಮಪಂಚಾಯಿತಿಯ ಪ್ರದೇಶದಲ್ಲಿ ವಾಸವಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಅನುಪಾತಕ್ಕೆ ಕ್ರಮವಾಗಿ ಶೇ.15 ಮತ್ತು ಶೇ.3ರಷ್ಟು ಕಡಿಮೆ ಇಲ್ಲದಂತೆ ಪಂಚಾಯಿತಿಯ ಸ್ಥಾನ ಮತ್ತು ಹುದ್ದೆಗಳಲ್ಲಿ ಮೀಸಲಾತಿ ನೀಡಲಾಗಿದೆ. ಹಿಂದುಳಿದ ವರ್ಗಗಳಿಗೆ ಶೇ.33(ಪ್ರವರ್ಗ 'ಎ'ಗೆ ಶೇ.80 ಮತ್ತು ಪ್ರವರ್ಗ 'ಬಿ'ಗೆ ಶೇ.20ರಷ್ಟು) ಮೀಸಲಾತಿಯನ್ನು ನೀಡಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಸಾಮಾನ್ಯ ವರ್ಗಗಳು ಸೇರಿದಂತೆ ಮಹಿಳೆಯರಿಗೆ ಶೇ.33.33ರಷ್ಟು(ಮುಂದಿನ ಚುನಾವಣೆಯಲ್ಲಿ ಶೇ.50ರಷ್ಟು) ಕಡಿಮೆ ಇಲ್ಲದಷ್ಟು ಮತ್ತು ಮತ್ತು ಆಯಾ ಗ್ರಾಮಪಂಚಾಯಿತಿಗಳಲ್ಲಿರುವ ಮಹಿಳೆಯರ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನ ಮತ್ತು ಹುದ್ದೆಗಳಲ್ಲಿ ಮೀಸಲಾತಿ ನೀಡಲಾಗಿದೆ. ಮಹಿಳೆಯರಿಗೆ ನೀಡುವ ಸ್ಥಾನ ಮತ್ತು ಹುದ್ದೆಗಳ ಮೀಸಲಾತಿಯನ್ನು ಆವರ್ತನ ನೀತಿಗೆ ಒಳಪಡಿಸಲಾಗುವುದು. ಸಾಮಾನ್ಯ ವರ್ಗದ ಸ್ಥಾನಗಳಿಗೆ ಎಲ್ಲಾ ವರ್ಗದ ಸ್ತ್ರೀ–ಪುರುಷರು ಸ್ಪರ್ಧಿಸಬಹುದು. ಹಾಗೆಯೇ ಆಯಾ ಜಾತಿ, ವರ್ಗಗಳಗೆ ಹಂಚಿಕೆಯಾದ ಮೀಸಲಾತಿ ಸಾಮಾನ್ಯ ಸ್ಥಾನಗಳಿಗೆ ಸ್ತ್ರೀ–ಪುರುಷರಿಬ್ಬರು ಸ್ಪರ್ಧಿಸಲು ಅರ್ಹರಾಗಿರುತ್ತಾರೆ. ಆಯಾ ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮ ಅಥವಾ ಗ್ರಾಮಗಳನ್ನು ಸೇರಿಸಿ, ಒಂದು ವಾರ್ಡನ್ನು ರಚನೆ ಮಾಡಲಾಗುತ್ತದೆ. ಪ್ರತಿಯೊಂದು ಗ್ರಾಮಪಂಚಾಯಿತಿಗೆ ಅಲ್ಲಿನ ಜನಸಂಖ್ಯೆಯ ಆಧಾರದ ಮೇಲೆ ಮೂರರಿಂದ ಐದು ವಾರ್ಡ್‌ಗಳನ್ನಾಗಿ ರಚನೆ ಮಾಡಲಾಗುತ್ತದೆ. ಆ ವಾರ್ಡ್‌ಗಳನ್ನೇ ಚುನಾವಣಾ ಕ್ಷೇತ್ರಗಳನ್ನಾಗಿ ಗುರುತಿಸಲಾಗುತ್ತದೆ. ಪ್ರತಿಯೊಂದು ವಾರ್ಡ್‌ಗೆ ಒಂದೊಂದು ಮತಗಟ್ಟೆಯನ್ನು ಸ್ಥಾಪಿಸಲಾಗುತ್ತದೆ. ಪ್ರತಿ 400 ಜನರಿಗೆ ಒಬ್ಬ ಪ್ರತಿನಿಧಿಯಂತೆ ಆಯಾ ವಾರ್ಡ್‌ನಲ್ಲಿರುವ ಜನಸಂಖ್ಯೆಯನ್ನು ಲಿಂಗ, ಜಾತಿ ಮತ್ತು ವರ್ಗಗಳನ್ನು ಮೀಸಲಾತಿಗೆ ಒಳಪಡಿಸಿ, ಪಂಚಾಯಿತಿ ಸ್ಥಾನಗಳನ್ನು ಹಂಚಿಕೆ ಮಾಡಲಾಗುತ್ತದೆ. ಹೀಗಾಗಿ ಒಂದು ವಾರ್ಡ್‌ಗೆ ಕನಿಷ್ಠ ಒಂದು ಸ್ಥಾನ ಹಾಗೂ ಗರಿಷ್ಠ ಐದು ಅಥವಾ ಆರು ಸ್ಥಾನಗಳು ಹಂಚಿಕೆಯಾಗಬಹುದು. ಆಯಾ ವಾರ್ಡ್‌ನ ಮತದಾರರು ಆಯಾ ವಾರ್ಡ್‌ಗೆ ಹಂಚಿಕೆಯಾದ ಸ್ಥಾನಗಳಿಗೆ ಅನುಗುಣವಾಗಿ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಹೀಗಾಗಿ ಗ್ರಾಮಪಂಚಾಯಿತಿ ಚುನಾವಣಾ ಕ್ಷೇತ್ರಗಳು ಬಹುವ್ಯಕ್ತಿ ಆಯ್ಕೆ ಕ್ಷೇತ್ರಗಳಾಗಿವೆ.

ಸಂವಿಧಾನದ 73ನೇ ತಿದ್ದುಪಡಿಯು ಗ್ರಾಮೀಣ ಮಹಿಳೆಯರಿಗೆ ತಳಮಟ್ಟದ ಆಡಳಿತವಾದ ಗ್ರಾಮಪಂಚಾಯಿತಿಯಲ್ಲಿ ವಿಶೇಷ ಪ್ರಾತಿನಿಧ್ಯ ನೀಡುವ ಅವಕಾಶವನ್ನು ಹೊತ್ತುಕೊಂಡು ಜಾರಿಗೆ ಬಂದಿದೆ. 2010, ಮೇ ತಿಂಗಳಿನಲ್ಲಿ ನಾಲ್ಕನೇ ಅವಧಿಗೆ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಶೇ.33.33ರಷ್ಟು ಮಹಿಳಾ ಮೀಸಲಾತಿಯನ್ನು ನೀಡಲಾಗಿದೆ. 2001ರ ಜನಗಣತಿ ಪ್ರಕಾರ ಆಯಾ ಗ್ರಾಮಪಂಚಾಯಿತಿಯಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳಾ ಮೀಸಲಾತಿ ನೀಡಲಾಗಿದೆ. ಮಹಿಳಾ ಮೀಸಲಾತಿ ಮತ್ತು ಮಹಿಳಾ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ, ಬಯಲುಸೀಮೆಯ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲೂಕಿನ ಹೊಸೂರು ಮತ್ತು

ನಾಗೇನಹಳ್ಳಿ ಮತ್ತು ಮಲೆನಾಡಿನ ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಬಯಲುಸೀಮೆಯ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ಹೊಸೂರು ಗ್ರಾಮ ಮತ್ತು ಹಾನಗಲ್ಲು, ಇಪ್ಪಿತೇರಿ ಮತ್ತು ಎರೇಬೈಲು ಮಾಗಣಿಗಳು ಬರುತ್ತವೆ. ಈ ಪಂಚಾಯಿತಿಯ ವ್ಯಾಪ್ತಿಯಲ್ಲಿ ಹೊಸೂರು ಮಾತ್ರ ಕಂದಾಯ ಗ್ರಾಮವಾಗಿದೆ. ಹೀಗಾಗಿ, ಕಂದಾಯ ಗ್ರಾಮಗಳಲ್ಲದ ಈ ಮೂರು ಮಾಗಣಿಗಳನ್ನು ಹೊಸೂರು ಕಂದಾಯ ಗ್ರಾಮಕ್ಕೆ ಸೇರಿಸಲಾಗಿದೆ. ಜನಗಣತಿ ಪ್ರೊಫೈಲ್‌ನಲ್ಲಿ ಈ ಮೂರು ಮಾಗಣಿಗಳ ಜನಸಂಖ್ಯೆಯ ಗಣತಿಯನ್ನು ಹೊಸೂರು ಕಂದಾಯ ಗ್ರಾಮಕ್ಕೆ ಸೇರಿಸಲಾಗಿದೆ. ಹೀಗಾಗಿ, 2001ರ ಜನಗಣತಿ ಪ್ರಕಾರ, ಹೊಸೂರು ಗ್ರಾಮಪಂಚಾಯಿತಿಯು 3,779 ಜನಸಂಖ್ಯೆಯನ್ನು ಹೊಂದಿದ್ದು, ಇದರಲ್ಲಿ 1,889(ಶೇ.49.98) ಪುರುಷರು ಮತ್ತು 1,890(ಶೇ.50.02) ಮಹಿಳೆಯರು ಇದ್ದಾರೆ. ಈ ಪಂಚಾಯಿತಿಯ ಒಟ್ಟು ಜನಸಂಖ್ಯೆಯಲ್ಲಿ ಶೇ.7(261)ರಷ್ಟು ಪರಿಶಿಷ್ಟ ಜಾತಿಯವರಿದ್ದು, ಇವರಲ್ಲಿ ಶೇ.51(133) ಪುರುಷರು ಮತ್ತು ಶೇ.49(128) ಮಹಿಳೆಯರು ಇದ್ದಾರೆ(ನೋಡಿ ಕೋಷ್ಟಕ-5.2). ಹಾಗೆಯೇ ಶೇ.79(2,999)ರಷ್ಟು ಪರಿಶಿಷ್ಟ ಪಂಗಡದವರಿದ್ದು, ಇವರಲ್ಲಿ ಕ್ರಮವಾಗಿ ಶೇ.50(1,486) ಪುರುಷರು ಮತ್ತು ಮಹಿಳೆಯರು ಇದ್ದಾರೆ.[4] ಈ ಗ್ರಾಮಪಂಚಾಯಿತಿಯ ಒಂದು ಗ್ರಾಮ ಮತ್ತು ಮೂರು ಮಾಗಣಿಗಳನ್ನು ಸೇರಿಸಿ ಮೂರು ವಾರ್ಡ್‌ಗಳನ್ನಾಗಿ ವಿಂಗಡಿಸಲಾಗಿದೆ. 2001ರ ಜನಗಣತಿ ಪ್ರಕಾರ, ಆಯಾ ವಾರ್ಡ್‌ಗಳ ಪುರುಷ ಮತ್ತು ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ಈ ಗ್ರಾಮಪಂಚಾಯಿತಿಗೆ 2010ರ ಅವಧಿಗೆ 10 ಸ್ಥಾನಗಳನ್ನು ಹಂಚಿಕೆ ಮಾಡಲಾಗಿದೆ. ಈ 10 ಸ್ಥಾನಗಳಲ್ಲಿ 5(ಶೇ.50) ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಹಂಚಿಕೆಯಾದ 10 ಸ್ಥಾನಗಳಲ್ಲಿ ಪರಿಶಿಷ್ಟ ಜಾತಿಗೆ 1(ಶೇ.10)ಸ್ಥಾನ ನೀಡಲಾಗಿದ್ದು, ಅದು ಮಹಿಳಾ ಸ್ಥಾನವಾಗಿದೆ. ಪರಿಶಿಷ್ಟ ಪಂಗಡಕ್ಕೆ 8(ಶೇ.80)ಸ್ಥಾನಗಳನ್ನು ನೀಡಲಾಗಿದ್ದು, ಇದರಲ್ಲಿ 3(ಶೇ.37.5) ಮಹಿಳಾ ಮೀಸಲು ಸ್ಥಾನಗಳಾಗಿವೆ. ಹಿಂದುಳಿದ ವರ್ಗ(ಎ)ಕ್ಕೆ 1 ಸ್ಥಾನ ನೀಡಲಾಗಿದ್ದು, ಅದು ಮಹಿಳಾ ಮೀಸಲು ಸ್ಥಾನವಾಗಿದೆ(ನೋಡಿ ಕೋಷ್ಟಕ-5.1). ಈ ಪಂಚಾಯಿತಿಯಲ್ಲಿ ಹಂಚಿಕೆಯಾದ ಸ್ಥಾನಗಳಲ್ಲಿ ಬಹು ಪಾಲು ಪರಿಶಿಷ್ಟ ಪಂಗಡದವರ ಪಾಲಾಗಿದೆ. ಈ ಪಂಚಾಯಿತಿಯಲ್ಲಿ ಪರಿಶಿಷ್ಟರಿಗೆ ನೀಡಬೇಕಾಗಿದ್ದ ಶೇ.15ರಷ್ಟು ಮೀಸಲಾತಿಗಿಂತ ಕಡಿಮೆ ನೀಡಲಾಗಿದೆ. ಪರಿಶಿಷ್ಟರ ಮೀಸಲಾತಿಯನ್ನು ಆವರ್ತನ ನೀತಿಗೆ ಒಳಪಡಿಸುವುದರಿಂದ ಈ ತರದ ವ್ಯತ್ಯಾಸಗಳು ಕಂಡುಬರುತ್ತವೆ. ಮಹಿಳೆಯರಿಗೆ ನೀಡಬೇಕಾಗಿದ್ದ ಶೇ.33.33ಕ್ಕಿಂತ ಶೇ.16.17ರಷ್ಟು ಹೆಚ್ಚು ಮೀಸಲಾತಿ ನೀಡಿರುವುದು ಕಂಡುಬರುತ್ತದೆ. ಇದು ಹೊಸೂರು ಗ್ರಾಮಪಂಚಾಯಿತಿಯಲ್ಲಿರುವ ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ನೀಡಲಾದ ಮೀಸಲಾತಿಯಾಗಿದೆ.

ಹೊಸೂರು ಗ್ರಾಮವನ್ನು ವಾರ್ಡ್ ನಂ.1 ಎಂದು ಗುರುತಿಸಿ, 4 ಸ್ಥಾನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ 2 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಈ ಪಂಚಾಯಿತಿಯ 2ನೇ ವಾರ್ಡ್ ಇಪ್ಪಿತೇರಿ ಮಾಗಣಿಗೆ 3 ಸ್ಥಾನಗಳನ್ನು ಹಂಚಲಾಗಿದ್ದು, ಇದರಲ್ಲಿ

1 ಮಹಿಳಾ ಮೀಸಲು ಸ್ಥಾನವಾಗಿದೆ. ಎರೇಬೈಲು ಮತ್ತು ಹಾನಗಲ್ಲು ಮಾಗಣಿಗಳನ್ನು ಸೇರಿಸಿ 3ನೇ ವಾರ್ಡಾಗಿ ಗುರುತಿಸಿ, 3 ಸ್ಥಾನಗಳನ್ನು ನೀಡಲಾಗಿದೆ. ಈ 3 ಸ್ಥಾನಗಳಲ್ಲಿ 2 ಸ್ಥಾನಗಳನ್ನು ಮಹಿಳೆಯರಿಗೆ ನೀಡಲಾಗಿದೆ(ನೋಡಿ ಕೋಷ್ಟಕ–5.1).

ನಾಗೇನಹಳ್ಳಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ ಆರು ಗ್ರಾಮಗಳಿಂದ ರಚನೆಯಾಗಿದೆ. ಈ ಗ್ರಾಮಪಂಚಾಯಿತಿ ವ್ಯಾಪ್ತಿಗೆ ನಾಗೇನಹಳ್ಳಿ, ಬೆನಕಾಪುರ, ಬಸವನದುರ್ಗ, ಕಳ್ಳಿರಾಂಪುರ, ಬೆಳಗೋಡು ಮತ್ತು ಕಾಲಘಟ್ಟ ಗ್ರಾಮಗಳು ಬರುತ್ತವೆ. 2001ರ ಜನಗಣತಿ ಪ್ರಕಾರ, ಈ ಗ್ರಾಮಪಂಚಾಯಿತಿಯಲ್ಲಿ 5,888 ಜನಸಂಖ್ಯೆ ಇದ್ದು, ಇವರಲ್ಲಿ ಕ್ರಮವಾಗಿ ಶೇ.50ರಷ್ಟು ಪುರುಷರು(2,954) ಮತ್ತು ಮಹಿಳೆಯರು(2,934) ಇದ್ದಾರೆ(ನೋಡಿ ಕೋಷ್ಟಕ–5.2). ಈ ಪಂಚಾಯಿತಿಯ ಒಟ್ಟು ಜನಸಂಖ್ಯೆಯಲ್ಲಿ ಶೇ.27(1,599)ರಷ್ಟು ಪರಿಶಿಷ್ಟ ಜಾತಿಯವರಿದ್ದು, ಇವರಲ್ಲಿ ಶೇ.49(779) ಪುರುಷರು ಮತ್ತು ಶೇ.51(820) ಮಹಿಳೆಯರು ಇದ್ದಾರೆ. ಹಾಗೆಯೇ ಶೇ.20(1,186)ರಷ್ಟು ಪರಿಶಿಷ್ಟ ಪಂಗಡದವರಿದ್ದು, ಇವರಲ್ಲಿ ಶೇ.49(578) ಪುರುಷರು ಮತ್ತು ಶೇ.51(608) ಮಹಿಳೆಯರು ಇದ್ದಾರೆ[5]. 2001ರ ಜನಗಣತಿ ಪ್ರಕಾರ, ಆಯಾ ವಾರ್ಡ್‌ಗಳ ಪುರುಷ ಮತ್ತು ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ನಾಗೇನಹಳ್ಳಿ ಗ್ರಾಮಪಂಚಾಯಿತಿಗೆ 2010ರ ಅವಧಿಗೆ 15 ಸ್ಥಾನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ 6(ಶೇ.40) ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಈ 15 ಸ್ಥಾನಗಳಲ್ಲಿ ಪರಿಶಿಷ್ಟ ಜಾತಿಗೆ 4(ಶೇ.27) ಸ್ಥಾನಗಳು ನೀಡಲಾಗಿದ್ದು, ಅದರಲ್ಲಿ ಶೇ.50ರಷ್ಟು ಮಹಿಳೆಯರಿಗೆ ನೀಡಲಾಗಿದೆ. ಹಾಗೆಯೇ ಪರಿಶಿಷ್ಟ ಪಂಗಡಕ್ಕೆ 3(ಶೇ.20)ಸ್ಥಾನಗಳನ್ನು ನೀಡಲಾಗಿದ್ದು ಇದರಲ್ಲಿ ಶೇ.33ರಷ್ಟು ಮಹಿಳಾ ಸ್ಥಾನಗಳಾಗಿವೆ. ಈ ಪಂಚಾಯಿತಿಯಲ್ಲಿ ಪರಿಶಿಷ್ಟರಿಗೆ ಮತ್ತು ಮಹಿಳೆಯರಿಗೆ ನೀಡಬೇಕಾಗಿದ್ದ (ಶೇ.18 ಮತ್ತು 33.33) ಮೀಸಲಾತಿ ಪ್ರಮಾಣಕ್ಕಿಂತ ಕ್ರಮವಾಗಿ ಶೇ.29 ಮತ್ತು 7ರಷ್ಟು ಹೆಚ್ಚು ಪ್ರಾತಿನಿಧ್ಯ ಕಂಡುಬರುತ್ತದೆ. ಇದು ನಾಗೇನಹಳ್ಳಿ ಗ್ರಾಮಪಂಚಾಯಿತಿಯಲ್ಲಿರುವ ಪರಿಶಿಷ್ಟರ ಮತ್ತು ಮಹಿಳೆಯರ ಜನಸಂಖ್ಯೆಗೆ ಅನುಗುಣವಾಗಿ ಅವರು ಪಡೆದ ಪ್ರಾತಿನಿಧ್ಯವಾಗಿರುತ್ತದೆ.

ನಾಗೇನಹಳ್ಳಿ ಗ್ರಾಮಕ್ಕೆ ಕಂದಾಯ ಗ್ರಾಮವಲ್ಲದ ಬೆನಕಾಪುರ ಸೇರುವುದರಿಂದ ಇದು ಪಂಚಾಯಿತಿಯಲ್ಲೇ ದೊಡ್ಡ ಗ್ರಾಮವಾಗಿ ಕಂಡುಬರುತ್ತದೆ. ನಾಗೇನಹಳ್ಳಿ ಮತ್ತು ಬೆನಕಾಪುರ ಗ್ರಾಮಗಳ ಒಟ್ಟು ಜನಸಂಖ್ಯೆ 3,989(ಶೇ68)ರಷ್ಟಿದ್ದು, ಇದರಲ್ಲಿ 1,998(ಶೇ.50.08) ಪುರುಷರು ಮತ್ತು 1,991(ಶೇ.49.92) ಮಹಿಳೆಯರು ಇದ್ದಾರೆ. ಹೀಗಾಗಿ ನಾಗೇನಹಳ್ಳಿಯನ್ನು ವಾರ್ಡ್ ನಂ. 1 ಮತ್ತು ವಾರ್ಡ್ ನಂ. 2 ಎಂದು ವಿಂಗಡಿಸಿ, 10(ಶೇ.67) ಸ್ಥಾನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ 5(ಶೇ.50) ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ನಾಗೇನಹಳ್ಳಿ ಗ್ರಾಮಪಂಚಾಯಿತಿಯ 3ನೇ ವಾರ್ಡ್ ಬಸವನದುರ್ಗ(ಗುಡಿ ಓಬಳಾಪುರ) ಗ್ರಾಮದ ಜನಸಂಖ್ಯೆ 1,600(ಶೇ.27)ರಷ್ಟಿದ್ದು ಇವರಲ್ಲಿ 809(ಶೇ.50.56) ಪುರುಷರು ಮತ್ತು 791(ಶೇ.49.44) ಮಹಿಳೆಯರು ಇದ್ದಾರೆ. ಹೀಗಾಗಿ, ಈ ವಾರ್ಡ್‌ನಲ್ಲಿ 4(ಶೇ.27) ಸ್ಥಾನಗಳನ್ನು ಹಂಚಿಕೆ ಮಾಡಲಾಗಿದ್ದು, ಅದರಲ್ಲಿ 1(ಶೇ.25) ಸ್ಥಾನವನ್ನು

ಮಹಿಳೆಯರಿಗೆ ನೀಡಲಾಗಿದೆ. ಕಳ್ಳಿರಾಂಪುರ, ಬೆಳಗೋಡು ಮತ್ತು ಕಾಲಘಟ್ಟ ಗ್ರಾಮಗಳನ್ನು ಸೇರಿಸಿ 4ನೇ ವಾರ್ಡ್‌ನ್ನಾಗಿ ರಚಿಸಲಾಗಿದೆ. ಈ ಮೂರು ಗ್ರಾಮಗಳಲ್ಲಿ 299(ಶೇ.5) ಜನರಿದ್ದು, ಇವರಲ್ಲಿ 147(ಶೇ.49.16) ಪುರುಷರು ಮತ್ತು 152(ಶೇ.50.84) ಮಹಿಳೆಯರು ಇದ್ದಾರೆ. ಈ ಮೂರು ಗ್ರಾಮಗಳಿಗೆ 1(ಶೇ.6) ಸ್ಥಾನವನ್ನು ನೀಡಿ, ಪ.ಜಾತಿ(ಸಾಮಾನ್ಯ) ಸ್ಥಾನವಾಗಿದೆ(ನೋಡಿ ಕೋಷ್ಟಕ-5.1 & 5.2). 2010ರ ಅವಧಿಯ ನಾಗೇನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಮೀಸಲಾತಿಯನ್ನು ಆವರ್ತನ ನೀತಿಗೆ ಒಳಪಡಿಸಿದ್ದರಿಂದ 3ನೇ ಮತ್ತು 4ನೇ ವಾರ್ಡ್‌ಗಳಲ್ಲಿ ಮಹಿಳೆಯರಿಗ ಸಮರ್ಪಕವಾಗಿ ಪ್ರಾತಿನಿಧ್ಯ ಸಿಕ್ಕಿರುವುದಿಲ್ಲ. ಮುಂದಿನ ಅವಧಿಗೆ ಈ ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿ ಬದಲಾಗುವ ಅವಕಾಶವಿದೆ. ಗ್ರಾಮಪಂಚಾಯಿತಿಯ ಸಾಮಾನ್ಯ ಸ್ಥಾನಗಳಿಗೆ ಮಹಿಳೆಯರು ಸ್ಪರ್ಧಿಸಲು ಅರ್ಹರಾಗಿರುತ್ತಾರೆ.

ಮಲೆನಾಡಿನ ಗ್ರಾಮಪಂಚಾಯಿತಿಗಳು

ಬೇಡ್ಕಣಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ ವ್ಯಾಪ್ತಿಗೆ ಬೇಡ್ಕಣಿ, ತ್ಯಾರ್ಸಿ, ಭಾನ್ಕುಳಿ ಮತ್ತು ಮುತ್ತಿಗೆ ಗ್ರಾಮಗಳು ಒಳಪಡುತ್ತವೆ. 2001ರ ಜನಗಣತಿ ಪ್ರಕಾರ, ಈ ಪಂಚಾಯಿತಿಯಲ್ಲಿ 4,266 ಜನಸಂಖ್ಯೆಯಿದ್ದು, ಇವರಲ್ಲಿ ಶೇ.49(2,105) ಪುರುಷರು ಮತ್ತು ಶೇ.51(2,161) ಮಹಿಳೆಯರು ಇದ್ದಾರೆ. ಈ ಪಂಚಾಯಿತಿಯ ಒಟ್ಟು ಜನಸಂಖ್ಯೆಯಲ್ಲಿ ಶೇ.6.56(280)ರಷ್ಟು ಪರಿಶಿಷ್ಟ ಜಾತಿಯವರಿದ್ದು, ಇವರಲ್ಲಿ ಶೇ.48(134) ಪುರುಷರು ಮತ್ತು ಶೇ.52(146) ಮಹಿಳೆಯರು ಇದ್ದಾರೆ(ನೋಡಿ ಕೋಷ್ಟಕ-5.2). ಆದರೆ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡದ ಜನರು ಕಂಡುಬರುತ್ತಿಲ್ಲ[6]. 2001ರ ಜನಗಣತಿ ಪ್ರಕಾರ, ಆಯಾ ವಾರ್ಡ್‌ಗಳ ಪುರುಷ ಮತ್ತು ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ಬೇಡ್ಕಣಿ ಗ್ರಾಮಪಂಚಾಯಿತಿಗೆ 2010ರ ಅವಧಿಗೆ 11 ಸ್ಥಾನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ 6(ಶೇ.55) ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಈ 11 ಸ್ಥಾನಗಳಲ್ಲಿ ಪರಿಶಿಷ್ಟ ಜಾತಿಗೆ 1(ಶೇ.10) ಸ್ಥಾನ ಮತ್ತು ಪರಿಶಿಷ್ಟ ಪಂಗಡಕ್ಕೆ 1(ಶೇ.10) ಸ್ಥಾನಗಳನ್ನು ನೀಡಲಾಗಿದೆ. ಈ ಎರಡು ಮಹಿಳಾ ಮೀಸಲು ಸ್ಥಾನಗಳಾಗಿವೆ. ಈ ಪಂಚಾಯಿತಿಯಲ್ಲಿ ಪರಿಶಿಷ್ಟ ಪಂಗಡದ ಜನರು ಕಂಡುಬಾರದ ಕಾರಣ ಆ ಸ್ಥಾನ ಪರಿಶಿಷ್ಟ ಜಾತಿಯ ಪಾಲಾಗಿದೆ. ಈ ಪಂಚಾಯಿತಿಯಲ್ಲಿ ಪರಿಶಿಷ್ಟರಿಗೆ ನೀಡಬೇಕಾಗಿದ್ದ ಶೇ.18ರಷ್ಟು ಮೀಸಲಾತಿಯನ್ನು ನೀಡಿದಂತಾಗಿದೆ. ಮಹಿಳೆಯರಿಗೆ ನೀಡಬೇಕಾಗಿದ್ದ ಮೀಸಲಾತಿ ಪ್ರಮಾಣಕ್ಕಿಂತ ಶೇ.22ರಷ್ಟು ಹೆಚ್ಚು ನೀಡಿರುವುದು ಕಂಡುಬರುತ್ತದೆ. ಇದು ಬೇಡ್ಕಣಿ ಗ್ರಾಮಪಂಚಾಯಿತಿಯಲ್ಲಿರುವ ಮಹಿಳಾ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಲಭಿಸಿರುವ ಮೀಸಲಾತಿಯಾಗಿದೆ.

ಈ ಪಂಚಾಯಿತಿಯ ನಾಲ್ಕು ಗ್ರಾಮಗಳು ಮತ್ತು ಅವುಗಳ ವ್ಯಾಪ್ತಿಗೆ ಸೇರಿದ ವಸತಿನೆಲೆ(ಮಜರೆ)ಗಳನ್ನು ಸೇರಿಸಿ ನಾಲ್ಕು ಚುನಾವಣಾ ವಾರ್ಡ್‌ಗಳಾಗಿ ರಚನೆ ಮಾಡಲಾಗಿದೆ. ಬೇಡ್ಕಣಿ ಗ್ರಾಮಪಂಚಾಯಿತಿಯ ವಾರ್ಡ್ ನಂ.1 ಬೇಡ್ಕಣಿ ಎಂದು ಗುರುತಿಸಲಾಗಿದೆ. ಈ ವಾರ್ಡ್‌ನಲ್ಲಿ 1,772(ಶೇ.42) ಜನಸಂಖ್ಯೆಯಿದ್ದು, ಇವರಲ್ಲಿ ಕ್ರಮವಾಗಿ ಶೇ.50ರಷ್ಟು ಪುರುಷರು(881) ಮತ್ತು

ಮಹಿಳೆಯರು(891) ಇದ್ದಾರೆ. ಈ ವಾರ್ಡ್‌ನ ಜನಸಂಖ್ಯೆಗೆ ಅನುಗುಣವಾಗಿ 5(ಶೇ.46) ಸ್ಥಾನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ಶೇ.60(3)ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಈ ಪಂಚಾಯಿತಿಯ 2ನೇ ವಾರ್ಡ್ ಆದ ತ್ಯಾರ್ಸಿ ಗ್ರಾಮದಲ್ಲಿ 1,608(ಶೇ.37) ಜನಸಂಖ್ಯೆಯಿದ್ದು, ಅವರಲ್ಲಿ ಶೇ.49(791) ಪುರುಷರು ಮತ್ತು ಶೇ.51(817) ಮಹಿಳೆಯರು ಇದ್ದಾರೆ. ಈ ಚುನಾವಣಾ ವಾರ್ಡ್‌ನಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ 4(ಶೇ.36) ಸ್ಥಾನಗಳನ್ನು ನೀಡಲಾಗಿದ್ದು, ಇದರಲ್ಲಿ ಶೇ.75(3)ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ನೀಡಲಾಗಿದೆ. ಈ ಪಂಚಾಯಿತಿಯ 3ನೇ ವಾರ್ಡ್ ಆದ ಭಾನ್ಕುಳಿ ಗ್ರಾಮದಲ್ಲಿ 360(ಶೇ.8) ಜನಸಂಖ್ಯೆಯಿದ್ದು, ಇವರಲ್ಲಿ ಶೇ.49(175) ಪುರುಷರು ಮತ್ತು ಶೇ.51(185) ಮಹಿಳೆಯರು ಇದ್ದಾರೆ. ಈ ವಾರ್ಡ್‌ನ ಜನಸಂಖ್ಯೆಗೆ ಅನುಸಾರವಾಗಿ 1(ಶೇ.9) ಸ್ಥಾನವನ್ನು ನೀಡಲಾಗಿದ್ದು, ಅದು ಸಾಮಾನ್ಯ(ಸಾಮಾನ್ಯ) ಸ್ಥಾನವಾಗಿದೆ. ಹಾಗೆಯೇ ನಾಲ್ಕನೇ ವಾರ್ಡಾಗಿರುವ ಮುತ್ತಿಗೆ ಗ್ರಾಮದಲ್ಲಿ 526(ಶೇ.12) ಜನಸಂಖ್ಯೆಯಿದ್ದು, ಇವರಲ್ಲಿ ಶೇ.49(258) ಪುರುಷರು ಮತ್ತು ಶೇ.51(268) ಮಹಿಳೆಯರು ಇದ್ದಾರೆ. ಈ ವಾರ್ಡ್‌ನ ಜನಸಂಖ್ಯೆಗೆ ಅನುಗುಣವಾಗಿ 1(ಶೇ.9) ಸ್ಥಾನವನ್ನು ಹಂಚಿಕೆ ಮಾಡಲಾಗಿದ್ದು, ಅದು ಸಾಮಾನ್ಯ(ಸಾಮಾನ್ಯ) ಸ್ಥಾನವೆಂದು ಘೋಷಣೆ ಮಾಡಲಾಗಿದೆ(ನೋಡಿ ಕೋಷ್ಟಕ–5.1 & 5.2). ಬೇಡ್ಕಣಿ ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಮೀಸಲಾತಿಯನ್ನು ಆವರ್ತನ ನೀತಿಗೆ ಒಳಪಡಿಸಿದ್ದರಿಂದ 3ನೇ ಮತ್ತು 4ನೇ ವಾರ್ಡ್‌ಗಳ ಸ್ಥಾನಗಳನ್ನು 2010ರ ಅವಧಿಗೆ ಸಾಮಾನ್ಯ (ಸಾಮಾನ್ಯ) ಸ್ಥಾನಗಳನ್ನಾಗಿ ಘೋಷಿಸಲಾಗಿದೆ. ಮುಂದಿನ ಅವಧಿಗೆ ಈ ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿ ಬದಲಾಗುವ ಅವಕಾಶವಿದೆ. ಗ್ರಾಮಪಂಚಾಯಿತಿಯ ಸಾಮಾನ್ಯ ಸ್ಥಾನಗಳಿಗೆ ಮಹಿಳೆಯರು ಸ್ಪರ್ಧಿಸಲು ಅರ್ಹರಾಗಿರುತ್ತಾರೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ ವ್ಯಾಪ್ತಿಗೆ ಕೋಲಸಿರ್ಸಿ, ಬಳಗುಳಿ, ಹೆಗ್ಗದ್ದೆ, ಅವರಗುಪ್ಪ, ಕುಣಿಜಿ, ಕಸ್ತೂರ, ಬಂದೀಸರ, ಹಲಗಡಿಕೊಪ್ಪ, ಮಂಡ್ಲಿಕೊಪ್ಪ, ತುಂಬರಗೋಡು, ಮತ್ತು ಹೆಗ್ಗೋಡುಮನೆ (11)ಗ್ರಾಮಗಳು ಒಳಪಡುತ್ತವೆ. 2001ರ ಜನಗಣತಿ ಪ್ರಕಾರ, ಈ ಪಂಚಾಯಿತಿಯಲ್ಲಿ 5,099 ಜನಸಂಖ್ಯೆಯಿದ್ದು, ಇವರಲ್ಲಿ ಶೇ.49(2,516) ಪುರುಷರು ಮತ್ತು ಶೇ.51(2,583) ಮಹಿಳೆಯರು ಇದ್ದಾರೆ(ನೋಡಿ ಕೋಷ್ಟಕ–5.2). ಈ ಪಂಚಾಯಿತಿಯ ಒಟ್ಟು ಜನಸಂಖ್ಯೆಯಲ್ಲಿ ಶೇ.7.65(390)ರಷ್ಟು ಪರಿಶಿಷ್ಟ ಜಾತಿಯವರಿದ್ದು, ಇವರಲ್ಲಿ ಶೇ.48.98(191) ಪುರುಷರು ಮತ್ತು ಶೇ.51.02(199) ಮಹಿಳೆಯರು ಇದ್ದಾರೆ. ಆದರೆ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಪಂಗಡದ ಜನರು ಕಂಡುಬರುತ್ತಿಲ್ಲ[7]. 2001ರ ಜನಗಣತಿ ಪ್ರಕಾರ ಆಯಾ ವಾರ್ಡ್‌ಗಳ ಪುರುಷ ಮತ್ತು ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ಕೋಲಸಿರ್ಸಿ ಗ್ರಾಮಪಂಚಾಯಿತಿಗೆ 2010ರ ಅವಧಿಗೆ 13 ಸ್ಥಾನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ 7(ಶೇ.54) ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಈ 13 ಸ್ಥಾನಗಳಲ್ಲಿ ಪರಿಶಿಷ್ಟ ಜಾತಿಗೆ 1(ಶೇ.8)ಸ್ಥಾನ ಮತ್ತು ಪರಿಶಿಷ್ಟ ಪಂಗಡಕ್ಕೆ 1(ಶೇ.8) ಸ್ಥಾನಗಳನ್ನು ನೀಡಲಾಗಿದೆ. ಈ ಎರಡು ಮಹಿಳಾ ಮೀಸಲು ಸ್ಥಾನಗಳಾಗಿವೆ.

ಈ ಪಂಚಾಯಿತಿಯಲ್ಲಿ ಪರಿಶಿಷ್ಟ ಪಂಗಡದ ಜನರು ಕಂಡುಬಾರದ ಕಾರಣ ಆ ಸ್ಥಾನ ಪರಿಶಿಷ್ಟ ಜಾತಿಯ ಪಾಲಾಗಿದೆ. ಈ ಪಂಚಾಯಿತಿಯಲ್ಲಿ ಪರಿಶಿಷ್ಟರಿಗೆ ಶೇ.16ರಷ್ಟು ಮತ್ತು ಮಹಿಳೆಯರಿಗೆ ಶೇ.54ರಷ್ಟು ಮೀಸಲಾತಿಯನ್ನು ನೀಡಲಾಗಿದೆ. ಈ ಪಂಚಾಯಿತಿಯಲ್ಲಿ ಪರಿಶಿಷ್ಟರಿಗೆ ಮತ್ತು ಮಹಿಳೆಯರಿಗೆ ನೀಡಬೇಕಾಗಿದ್ದ ಮೀಸಲಾತಿಯಲ್ಲಿ ಪ್ರಮಾಣದಲ್ಲಿ ಪರಿಶಿಷ್ಟರಿಗೆ ಶೇ.2ರಷ್ಟು ಕಡಿಮೆ ಮತ್ತು ಮಹಿಳೆಯರಿಗೆ ಶೇ.21ರಷ್ಟು ಹೆಚ್ಚು ಪ್ರಾತಿನಿಧ್ಯ ನೀಡಿರುವುದು ಕಂಡುಬರುತ್ತದೆ. ಇದು ಕೋಲಸಿರ್ಸಿ ಗ್ರಾಮಪಂಚಾಯಿತಿಯಲ್ಲಿರುವ ಪರಿಶಿಷ್ಟರ ಮತ್ತು ಮಹಿಳೆಯರ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಲಭಿಸಿರುವ ಪ್ರಾತಿನಿಧ್ಯವಾಗಿದೆ.

ಈ ಪಂಚಾಯಿತಿಯ ಹನ್ನೊಂದು ಗ್ರಾಮಗಳು ಮತ್ತು ಅವುಗಳ ವ್ಯಾಪ್ತಿಗೆ ಸೇರಿದ ವಸತಿನೆಲೆ(ಮಜರೆ)ಗಳನ್ನು ಸೇರಿಸಿ ನಾಲ್ಕು ಚುನಾವಣಾ ವಾರ್ಡ್‌ಗಳಾಗಿ ರಚನೆ ಮಾಡಲಾಗಿದೆ. ಕೋಲಸಿರ್ಸಿ ಗ್ರಾಮಪಂಚಾಯಿತಿಯ ಕೋಲಸಿರ್ಸಿ, ಬಳುಗುಳಿ ಮತ್ತು ಹೆಗ್ಗದ್ದೆ ಗ್ರಾಮಗಳನ್ನು ಸೇರಿಸಿ, ಚುನಾವಣಾ ವಾರ್ಡ್ ನಂ.1 ಎಂದು ಗುರುತಿಸಲಾಗಿದೆ. ಈ ವಾರ್ಡ್‌ನಲ್ಲಿ 1,804(ಶೇ.35) ಜನಸಂಖ್ಯೆಯಿದ್ದು, ಇವರಲ್ಲಿ ಶೇ.48(857) ಪುರುಷರು ಮತ್ತು ಶೇ.52(947) ಮಹಿಳೆಯರಿದ್ದಾರೆ. ಹೀಗಾಗಿ ಈ ವಾರ್ಡ್‌ನ ಜನಸಂಖ್ಯೆಗೆ ಅನುಗುಣವಾಗಿ 5(ಶೇ.39) ಸ್ಥಾನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ಶೇ.60(3)ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಈ ಪಂಚಾಯಿತಿಯ ಅವರಗುಪ್ಪ ಗ್ರಾಮವನ್ನು ವಾರ್ಡ್ ನಂ. 2 ಎಂದು ಗುರುತಿಸಲಾಗಿದೆ. ಈ ಗ್ರಾಮದಲ್ಲಿ 1,544(ಶೇ.30) ಜನಸಂಖ್ಯೆಯಿದ್ದು, ಅವರಲ್ಲಿ ಕ್ರಮವಾಗಿ ಶೇ.50 ಪುರುಷರು(771) ಮತ್ತು ಮಹಿಳೆಯರು(773) ಇದ್ದಾರೆ. ಈ ಚುನಾವಣಾ ವಾರ್ಡ್‌ನಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ 4(ಶೇ.31) ಸ್ಥಾನಗಳನ್ನು ನೀಡಲಾಗಿದ್ದು, ಇದರಲ್ಲಿ ಶೇ.50(2)ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ನೀಡಲಾಗಿದೆ. ಈ ಪಂಚಾಯಿತಿಯ ಕುಣಿಜಿ, ಕಸ್ತೂರ, ಬಂದೀಸರ ಮತ್ತು ಹಲಗಡಿಕೊಪ್ಪ ಗ್ರಾಮಗಳನ್ನು ಸೇರಿಸಿ ವಾರ್ಡ್ ನಂ 3 ಕುಣಿಜಿ ಎಂದು ರಚನೆ ಮಾಡಲಾಗಿದೆ. ಈ ವಾರ್ಡ್‌ನಲ್ಲಿ 949(ಶೇ.19) ಜನಸಂಖ್ಯೆಯಿದ್ದು, ಇವರಲ್ಲಿ ಕ್ರಮವಾಗಿ ಶೇ.50 ಪುರುಷರು(472) ಮತ್ತು ಮಹಿಳೆಯರು(477) ಇದ್ದಾರೆ. ಈ ವಾರ್ಡ್‌ನ ಜನಸಂಖ್ಯೆಗೆ ಅನುಸಾರವಾಗಿ 2(ಶೇ.15) ಸ್ಥಾನವನ್ನು ನೀಡಲಾಗಿದ್ದು, ಅದರಲ್ಲಿ ಶೇ.50(1)ರಷ್ಟು ಸ್ಥಾನವನ್ನು ಮಹಿಳೆಯರಿಗೆ ಮೀಸಲು ನೀಡಲಾಗಿದೆ. ಹಾಗೆಯೇ ಮಂಡ್ಲಿಕೊಪ್ಪ, ತುಂಬರಗೋಡು ಮತ್ತು ಹೆಗ್ಗದ್ದೆ ಗ್ರಾಮಗಳನ್ನು ಸೇರಿಸಿ ವಾರ್ಡ್ ನಂ. 4 ಮಂಡ್ಲಿಕೊಪ್ಪ ಎಂದು ಗುರುತಿಸಲಾಗಿದೆ. ಈ ವಾರ್ಡ್‌ನಲ್ಲಿ 802(ಶೇ.16) ಜನಸಂಖ್ಯೆಯಿದ್ದು, ಇವರಲ್ಲಿ ಶೇ.52(416) ಪುರುಷರು ಮತ್ತು ಶೇ.48(386) ಮಹಿಳೆಯರು ಇದ್ದಾರೆ. ಈ ವಾರ್ಡಿನ ಜನಸಂಖ್ಯೆಗೆ ಅನುಗುಣವಾಗಿ 2(ಶೇ.15) ಸ್ಥಾನವನ್ನು ಹಂಚಿಕೆ ಮಾಡಲಾಗಿದ್ದು, ಅದರಲ್ಲಿ ಶೇ.50(1)ರಷ್ಟು ಸ್ಥಾನವನ್ನು ಮಹಿಳೆಯರಿಗೆ ಮೀಸಲು ನೀಡಲಾಗಿದೆ(ನೋಡಿ ಕೋಷ್ಟಕ–5.1 & 5.2). ಕೋಲಸಿರ್ಸಿ ಗ್ರಾಮಪಂಚಾಯಿತಿಯ ವಾರ್ಡ್ ನಂ.1ರಲ್ಲಿ ಮೀಸಲಾತಿಯನ್ನು ಆವರ್ತನ ನೀತಿಗೆ ಒಳಪಡಿಸಿದ್ದರಿಂದ 5 ಸ್ಥಾನಗಳಲ್ಲಿ 3 ಸ್ಥಾನಗಳು ಮಹಿಳೆಯರಿಗೆ ಲಭಿಸಿವೆ. ಮುಂದಿನ ಅವಧಿಗೆ ಈ ಸ್ಥಾನಗಳು ಮಹಿಳಾ ಮೀಸಲು

ಸ್ಥಾನಗಳಾಗಿ ಬದಲಾಗುವ ಅವಕಾಶವಿದೆ. ಪಂಚಾಯಿತಿ ಸಾಮಾನ್ಯ ಸ್ಥಾನಗಳಿಗೆ ಮಹಿಳೆಯರು ಸ್ಪರ್ಧಿಸಲು ಅರ್ಹರಾಗಿರುತ್ತಾರೆ.

ತೌಲನಿಕ ಅಧ್ಯಯನ

2001ರ ಜನಗಣತಿ ಪ್ರಕಾರ ಮೇ 2010ರಲ್ಲಿ ನಾಲ್ಕನೇ ಅವಧಿಗೆ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಶೇ.33.33ರಷ್ಟು ಕಡಿಮೆ ಇಲ್ಲದಷ್ಟು ಮತ್ತು ಆಯಾ ಗ್ರಾಮಪಂಚಾಯಿತಿಯಲ್ಲಿರುವ ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ನೀಡಲು ಸಂವಿಧಾನದ 73ನೇ ತಿದ್ದುಪಡಿಯು ಸೂಚಿಸಿದೆ. ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲೂಕಿನಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಲ್ಲಿ ಕ್ರಮವಾಗಿ ಶೇ.50ರಷ್ಟು ಮಹಿಳೆಯರಿದ್ದು, ಕ್ರಮವಾಗಿ ಶೇ.50ರಷ್ಟು ಮತ್ತು ಶೇ.40ರಷ್ಟು ಮಹಿಳಾ ಮೀಸಲಾತಿ ನೀಡಲಾಗಿದೆ. ಈ ಪ್ರಮಾಣವನ್ನು ತಾಲೂಕು/ಜಿಲ್ಲೆಗೆ ಹೋಲಿಸಿದಾಗ, ಶೇ.50ರಷ್ಟು ಮಹಿಳೆಯರಿದ್ದು, ಶೇ.45ರಷ್ಟು ಮಹಿಳೆಯರಿಗೆ ಪ್ರಾತಿನಿಧ್ಯ ಲಭಿಸಿದೆ. ಇದು ಈ ಜಿಲ್ಲೆಯ ಗ್ರಾಮೀಣ ಮಹಿಳೆಯರ ಜನಸಂಖ್ಯೆಗೆ ಅನುಗುಣವಾಗಿ ನೋಡಿದಾಗ ಶೇ.5ರಷ್ಟು ಕಡಿಮೆ ಮೀಸಲಾತಿ ಲಭಿಸದಿರುವುದು ಕಂಡುಬರುತ್ತದೆ. ಮೀಸಲಾತಿಯನ್ನು ಆವರ್ತನ ನೀತಿಗೆ ಒಳಪಡಿಸಿ ಸ್ಥಾನಗಳನ್ನು ಹಂಚಿಕೆ ಮಾಡಿರುವುದರಿಂದ ಈ ವ್ಯತ್ಯಾಸ ಕಂಡುಬರುವುದನ್ನು ಗ್ರಹಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕಿನಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಲ್ಲಿ ಸಮನಾಗಿ ಶೇ.51ರಷ್ಟು ಮಹಿಳೆಯರು ಇದ್ದು, ಈ ಗ್ರಾಮಪಂಚಾಯಿತಿಗಳಲ್ಲಿ ಕ್ರಮವಾಗಿ ಶೇ.55ರಷ್ಟು ಮತ್ತು ಶೇ.54ರಷ್ಟು ಮಹಿಳೆಯರಿಗೆ ಮೀಸಲಾತಿ ಸಿಕ್ಕಿದೆ. ಈ ಪ್ರಮಾಣವನ್ನು ತಾಲೂಕು/ಜಿಲ್ಲೆಗೆ ಹೋಲಿಸಿದಾಗ, ಶೇ.51ರಷ್ಟು ಮಹಿಳೆಯರು ಇದ್ದು, ಶೇ.55ರಷ್ಟು ಮಹಿಳೆಯರಿಗೆ ಪ್ರಾತಿನಿಧ್ಯ ಲಭಿಸಿದೆ. ಇದು ಈ ಜಿಲ್ಲೆಯ ಗ್ರಾಮೀಣ ಮಹಿಳೆಯರ ಜನಸಂಖ್ಯೆಗಿಂತ ಶೇ.4ರಷ್ಟು ಹೆಚ್ಚು ಮೀಸಲಾತಿ ಲಭಿಸದಿರುವುದು ಕಂಡುಬರುತ್ತದೆ. ಈ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಮೀಸಲಾತಿಯನ್ನು ಆವರ್ತನ ನೀತಿಗೆ ಒಳಪಡಿಸಿ ಸ್ಥಾನಗಳನ್ನು ಹಂಚಿಕೆ ಮಾಡುವುದರಿಂದ ಸಾಮಾನ್ಯವಾಗಿ ಈ ವ್ಯತ್ಯಾಸ ಕಂಡುಬರುತ್ತೆಂದು ಗ್ರಹಿಸಲಾಗಿದೆ.

5.2 ಚುನಾವಣೆ: ಮಹಿಳಾ ಉಮೇದುವಾರಿಕೆ ಮತ್ತು ಮಹಿಳಾ ಸಬಲೀಕರಣ

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ ಪ್ರಕಾರ ಮೇ, 2010ರಲ್ಲಿ ನಡೆದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಶೇ.33.33ರಷ್ಟು ಕಡಿಮೆ ಇಲ್ಲದಷ್ಟು ಮತ್ತು ಆಯಾ ಗ್ರಾಮಪಂಚಾಯಿತಿಯಲ್ಲಿರುವ ಮಹಿಳಾ ಜನಸಂಖ್ಯೆಗೆ ಸಮನಾಗಿ ಮಹಿಳಾ ಮೀಸಲಾತಿಯನ್ನು ನೀಡಲಾಗಿದೆಂಬುದನ್ನು ಈ ಅಧ್ಯಾಯದ ಹಿಂದಿನ ಭಾಗದಲ್ಲಿ ನೋಡಲಾಗಿದೆ. ತಳಮಟ್ಟದ ಪ್ರಜಾಪ್ರಭುತ್ವ ಎನ್ನಲಾದ ಗ್ರಾಮಪಂಚಾಯಿತಿಯಲ್ಲಿ ಮೀಸಲಾತಿ ಮೂಲಕ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ನೀಡಿದರೆ ಅವರು ಸಬಲೀಕರಣಗೊಳ್ಳುವರೆಂಬ ಗ್ರಹಿಕೆಯಿದೆ. ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಆದ್ದರಿಂದ

ಇಲ್ಲಿ ಪ್ರತಿಯೊಬ್ಬ ಸ್ತ್ರೀ-ಪುರುಷರಿಗೂ ಸಮಾನವಾಗಿ ರಾಜಕೀಯ ಪ್ರಾತಿನಿಧ್ಯ ನೀಡುವುದು ನ್ಯಾಯ ಸಮ್ಮತವಾಗಿದೆ. 2011ರ ಜನಗಣತಿ ಪ್ರಕಾರ, ಭಾರತದಲ್ಲಿ ಶೇ.48.49ರಷ್ಟು ಮತ್ತು ಕರ್ನಾಟಕದಲ್ಲಿ ಶೇ.49.20ರಷ್ಟು ಮಹಿಳೆಯರು ಇದ್ದಾರೆ.[8] ಅಂದರೆ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಜನಸಂಖ್ಯೆಯಲ್ಲಿ ಪುರುಷ ಮತ್ತು ಮಹಿಳೆಯರು ಹೆಚ್ಚು ಕಡಿಮೆ ಸಮಾನವಾಗಿ ಇದ್ದಾರೆ. ಆದ್ದರಿಂದ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸಮಾನ ರಾಜಕೀಯ ಪ್ರಾತಿನಿಧ್ಯ ನೀಡುವ ಉದ್ದೇಶದಿಂದಲೇ ಮೀಸಲಾತಿ ನೀತಿಯನ್ನು ಸಂವಿಧಾನಾತ್ಮಕವಾಗಿ ಜಾರಿಗೆ ತರಲಾಗಿದೆ. ತಳಮಟ್ಟದ ಪ್ರಜಾಪ್ರಭುತ್ವ ಎನ್ನಲಾದ ಪಂಚಾಯತ್‌ರಾಜ್ ಆಡಳಿತದಲ್ಲಿ ಮಹಿಳಾ ಜನಸಂಖ್ಯೆಗೆ ಸಮಾನವಾಗಿ ರಾಜಕೀಯ ಪ್ರಾತಿನಿಧ್ಯ ನೀಡಿರುವುದು ಪ್ರಜಾತಂತ್ರ ವಿಕೇಂದ್ರೀಕರಣ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿದಂತಾಗಿದೆ. ಈ ಮೀಸಲಾತಿ ನಿಯಮದಿಂದ ಇಂದು ಸಾವಿರಾರು ಗ್ರಾಮೀಣ ಮಹಿಳೆಯರು ಗ್ರಾಮಪಂಚಾಯಿತಿಯ ಸ್ಥಾನ ಮತ್ತು ಹುದ್ದೆಗಳನ್ನು ಪಡೆದುಕೊಳ್ಳುತ್ತಿರುವುದು ಅವರ ಪ್ರಾತಿನಿಧ್ಯಕ್ಕೆ ಸಾಕ್ಷಿಯಾಗಿದೆ. ಇದನ್ನೇ ಮಹಿಳಾ ಸಬಲೀಕರಣವೆಂದು ಹೇಳಲಾಗುತ್ತಿದೆ. ಆದರೆ ವಾಸ್ತವದಲ್ಲಿ ಪುರುಷ ಯಜಮಾನಿಕೆ ಇರುವ ಗ್ರಾಮೀಣ ಸಮಾಜದಲ್ಲಿ ಮಹಿಳೆಯರ ಪ್ರಾತಿನಿಧ್ಯವು ನಾಮಮಾತ್ರವಾಗಿ ಕಂಡುಬರುತ್ತಿದೆ. ಮೀಸಲಾತಿ ನಿಯಮವು ಮಹಿಳೆಯರ ರಾಜಕೀಯ ಪ್ರಾತಿನಿಧ್ಯಕ್ಕೆ ಅವಕಾಶ ನೀಡಿರಬಹುದೇ ಹೊರತು ಅದುವೇ ಮಹಿಳಾ ಸಬಲೀಕರಣವಲ್ಲ ಎಂಬದು ಕಂಡುಬರುತ್ತದೆ. ಮಹಿಳಾ ಮೀಸಲಾತಿಯನ್ನು ಮೇಲ್ಮಟ್ಟದಲ್ಲಿ ಚರ್ಚಿತವಾಗಿ ಸಂವಿಧಾನಾತ್ಮಕವಾಗಿ ಅನುಷ್ಠಾನಕ್ಕೆ ತರಲಾಗಿದೆ.[9] ಈ ಮಹಿಳಾ ಮೀಸಲಾತಿ ನಿಯಮವನ್ನು ಪುರುಷಪ್ರಧಾನ ಸಮಾಜವು ಅನಿವಾರ್ಯತೆಯಿಂದ ಒಪ್ಪಿಕೊಂಡಂತೆ ಕಂಡುಬರುತ್ತದೆ.[10] ಆದ್ದರಿಂದ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಶಾಸನಾತ್ಮಕವಾಗಿ ಕಂಡುಬರುವ ಮಹಿಳೆಯರ ಪ್ರಾತಿನಿಧ್ಯವು ವಾಸ್ತವದಲ್ಲಿ ನಾಮಮಾತ್ರವಾಗಿ ಕಂಡುಬರುತ್ತಿದೆ. ಗ್ರಾಮಪಂಚಾಯಿತಿಗಳ ಚುನಾವಣೆಗೆ ಸ್ಪರ್ಧಿಸುವ ಶೇ.99ಕ್ಕಿಂತ ಹೆಚ್ಚು ಮಹಿಳೆಯರು ರಾಜಕೀಯ ಹಿತಾಸಕ್ತಿ ಪುರುಷರ ಅಥವಾ ಕುಟುಂಬದ ಪುರುಷ ಸದಸ್ಯರ ಒತ್ತಡ ಅಥವಾ ಓಲೈಕೆಗೆ ಮಣಿದು ಚುನಾವಣೆ ಉಮೇದುವಾರಿಕೆ ಪಡೆಯುವುದು ಕಂಡುಬರುತ್ತದೆ.[11] ಹೀಗಾಗಿ ಗ್ರಾಮಪಂಚಾಯಿತಿಗಳಲ್ಲಿ ಕಂಡುಬರುವ ಮಹಿಳಾ ಪ್ರಾತಿನಿಧ್ಯವು ಅವರ ಸಬಲೀಕರಣಕ್ಕೆ ಸಾಧನವಾಗಿರಬಹುದೇ ಹೊರತು ಅದುವೇ ಸಬಲೀಕರಣವಲ್ಲ. ಪುರುಷರ ಹಸ್ತಕ್ಷೇಪವಿಲ್ಲದೇ ಮಹಿಳೆಯರು ಸ್ವತಂತ್ರವಾಗಿ ಮತ್ತು ಸ್ವನಿರ್ಧಾರದಂತೆ ಚುನಾವಣೆಯಲ್ಲಿ ಸ್ಪರ್ಧಿಸುವ ಮತ್ತು ಚುನಾಯಿತರಾಗುವ ಪ್ರಮಾಣವನ್ನು ಸಬಲೀಕರಣವೆಂದು ಈ ಅಧ್ಯಯನದಲ್ಲಿ ಪರಿಭಾವಿಸಿಕೊಳ್ಳಲಾಗಿದೆ.

ಈ ಅಧ್ಯಯನದ ಉದ್ದೇಶಕ್ಕೆ ಅನುಗುಣವಾಗಿ ಮಹಿಳಾ ಸದಸ್ಯರ ಉಮೇದುವಾರಿಕೆಯ ನಿರ್ಧಾರವನ್ನು ಪರೀಕ್ಷಿಸಲು ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಹಾಗೂ ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಮೇಲಿನ ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾಯಿತರಾದ ಜನಪ್ರತಿಗಳು ಮತ್ತು ಚುನಾವಣೆಗೆ ಸ್ಪರ್ಧಿಸಿದ್ದ,

ಉಮೇದುವಾರಿಕೆ ವಾಪಾಸು ಪಡೆದ ಅಭ್ಯರ್ಥಿಗಳಿಗೆ ಅಧ್ಯಯನವನ್ನು ಸೀಮಿತಗೊಳಿಸಿದೆ. ಆದರೆ ಮಾಹಿತಿದಾರರ ಕೊರತೆ ಕಂಡುಬಂದಲ್ಲಿ ಹಿಂದಿನ ಅವಧಿಗಳಲ್ಲಿ ಚುನಾಯಿತ ಮತ್ತು ಸ್ಪರ್ಧಿಸಿದ್ದ ಲಭ್ಯ ರಾಜಕೀಯ ಹಾಗೂ ಅಂಗನವಾಡಿ/ಆಶಾ ಕಾರ್ಯಕರ್ತರನ್ನು ಪ್ರಶ್ನಾವಳಿ ಮೂಲಕ ಸಂದರ್ಶಿಸಿ, ಅವರ ಉಮೇದುವಾರಿಕೆ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಣೆ ಮಾಡಿದೆ. ಈ ಮೇಲಿನ ಪಂಚಾಯಿತಿಗಳಲ್ಲಿ ಸ್ತ್ರೀ–ಪುರುಷ ಅಭ್ಯರ್ಥಿಗಳು ಚುನಾವಣೆ ಉಮೇದುವಾರಿಕೆಯನ್ನು ಅವರ ಸ್ವನಿರ್ಧಾರದಂತೆ ಪಡೆದಿರುವರೋ ಅಥವಾ ಪುರುಷರ ನಿರ್ಧಾರದಂತೆ ಪಡೆದಿರುವರೋ ಎಂದು ಪರೀಕ್ಷಿಸಲು ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರು, ಕುಟುಂಬದ ಪುರುಷ ಸದಸ್ಯರು, ಗ್ರಾಮದ ಜನರು ಮತ್ತು ಸ್ವನಿರ್ಧಾರ ಎಂಬ ಈ ನಾಲ್ಕು ಸರಳ ಸೂಚ್ಯಂಕಗಳನ್ನು ಬಳಸಿಕೊಳ್ಳಲಾಗಿದೆ. ಅಂದರೆ ಗ್ರಾಮಪಂಚಾಯಿತಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಅವರ ಸ್ವನಿರ್ಧಾರದಂತೆ ಸ್ಪರ್ಧಿಸುತ್ತಾರೊ ಅಥವಾ ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ, ಕುಟುಂಬದ ಪುರುಷ ಸದಸ್ಯರ ಅಥವಾ ಗ್ರಾಮದ ಜನರು ಒತ್ತಡ ಅಥವಾ ಓಲೈಕೆಗೆ ಸ್ಪರ್ಧಿಸುತ್ತಾರೊ ಎಂದು ನೋಡುವುದು ಅಧ್ಯಯನದ ಉದ್ದೇಶವಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಪಂಚಾಯಿತಿಗಳ ಪುರುಷ ಮತ್ತು ಮಹಿಳಾ ಜನಪ್ರತಿನಿಧಿಗಳ ಮತ್ತು ಅಭ್ಯರ್ಥಿಗಳ ಚುನಾವಣಾ ಉಮೇದುವಾರಿಕೆ ನಿರ್ಧಾರವನ್ನು ಪ್ರತ್ಯೇಕವಾಗಿ ಮತ್ತು ಪರಸ್ಪರ ಹೋಲಿಕೆ ಮಾಡಿ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ(ನೋಡಿ ಕೋಷ್ಟಕ–5.3). ಈ ಅಧ್ಯಯನದಲ್ಲಿ ಮಹಿಳೆಯರು ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ಹಿತಾಸಕ್ತಿಗೆ ಮಣಿದು ಚುನಾವಣೆ ಉಮೇದುವಾರಿಕೆ ಪಡೆದಿದ್ದಾದರೆ ಅವರು ಅತ್ಯಂತ ದುರ್ಬಲರು. ಕುಟುಂಬದ ಪುರುಷ ಸದಸ್ಯರ ಒತ್ತಡಕ್ಕೆ ಚುನಾವಣೆಗೆ ಸ್ಪರ್ಧಿಸಿದ್ದಾದರೆ ಅವರು ಅಬಲರು. ಗ್ರಾಮದ ಜನರ ಓಲೈಕೆಗೆ ಚುನಾವಣೆಗೆ ಸ್ಪರ್ಧಿಸಿದ್ದಾದರೆ ಅವರು ಸಬಲೀಕರಣದ ಪಥದಲ್ಲಿರುವವರು. ಮಹಿಳೆಯರು ಅವರ ಸ್ವನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದು ಕೊಂಡಿದ್ದಾದರೆ ಅವರು ಸಬಲರು ಎಂದು ಪರಿಭಾವಿಸಲಾಗಿದೆ. ಇದೊಂದು ತುಲಾನ್ಮಾತಕ ಅಧ್ಯಯನವಾಗಿರುವುದರಿಂದ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಯಾವ ಗ್ರಾಮಪಂಚಾಯಿತಿಗಳಲ್ಲಿ ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ಮತ್ತು ಕುಟುಂಬದ ಪುರುಷ ಸದಸ್ಯರ ನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವ ಮಹಿಳೆಯರ ಪ್ರಮಾಣ ಹೆಚ್ಚು ಇರುತ್ತದೆಯೋ ಅಂತಹ ಗ್ರಾಮಪಂಚಾಯಿತಿಗಳು ಸಾಮಾಜಿಕವಾಗಿ ಹಿಂದುಳಿದವುಗಳಾಗಿದ್ದು, ಅಲ್ಲಿ ಮಹಿಳೆಯರ ಸಬಲೀಕರಣ ಕಂಡುಬರುವುದಿಲ್ಲವೆಂದು ನಿರ್ಣಯಿಸಲಾಗಿದೆ.

ಬಯಲುಸೀಮೆ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಯ ಚುನಾವಣೆಗಳಲ್ಲಿ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 68 ಅಭ್ಯರ್ಥಿಗಳಲ್ಲಿ ಶೇ.51(35)ರಷ್ಟು ಮಹಿಳಾ ಅಭ್ಯರ್ಥಿಗಳು ಇದ್ದಾರೆ. ಈ ಎರಡು ಅವಧಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ

ಪೈಕಿ ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ಬೆಂಬಲದೊಂದಿಗೆ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ 22(ಶೇ.32) ಮಾಹಿತಿದಾರರಲ್ಲಿ ಶೇ.18ರಷ್ಟು ಪುರುಷರು ಮತ್ತು 82ರಷ್ಟು ಮಹಿಳಾ ಅಭ್ಯರ್ಥಿಗಳು ಇದ್ದಾರೆ. ಈ ಗ್ರಾಮಪಂಚಾಯಿತಿಯಲ್ಲಿ ಪುರುಷರಿಗಿಂತ ಶೇ.64ರಷ್ಟು ಹೆಚ್ಚು ಮಹಿಳಾ ಸದಸ್ಯರು ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಅಲ್ಲದೇ ಈ ಪಂಚಾಯಿತಿಯಲ್ಲಿ ಕುಟುಂಬದ ಪುರುಷರು ಹೇಳಿದ್ದಕ್ಕಾಗಿಯೇ ಚುನಾವಣೆಗೆ ಸ್ಪರ್ಧಿಸಿದ್ದಾಗಿ ಹೇಳಿಕೆ ನೀಡಿದ 18(ಶೇ.26) ಅಭ್ಯರ್ಥಿಗಳಲ್ಲಿ ಶೇ. 22ರಷ್ಟು ಪುರುಷ ಮತ್ತು ಶೇ.78ರಷ್ಟು ಮಹಿಳಾ ಸದಸ್ಯರಾಗಿದ್ದಾರೆ. ಇವರಲ್ಲಿ ಶೇ.56ರಷ್ಟು ಹೆಚ್ಚು ಮಹಿಳೆಯರು ಕುಟುಂಬದ ಪುರುಷರ ಒಲೈಕೆಗೆ ಸ್ಪರ್ಧಿಸಿರುವುದು ಕಂಡುಬರುತ್ತದೆ. ಹಾಗೆಯೇ ಈ ಪಂಚಾಯಿತಿಯಲ್ಲಿ ಗ್ರಾಮದ ಜನರು ಹೇಳಿದ್ದಕ್ಕಾಗಿ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ 11(ಶೇ.16) ಅಭ್ಯರ್ಥಿಗಳಲ್ಲಿ ಶೇ.78ರಷ್ಟು ಪುರುಷರು ಮತ್ತು ಶೇ.22ರಷ್ಟು ಮಹಿಳಾ ಅಭ್ಯರ್ಥಿಗಳು ಇದ್ದಾರೆ. ಈ ಗ್ರಾಮಪಂಚಾಯಿತಿಯಲ್ಲಿ ಪುರುಷ ಸದಸ್ಯರಿಗಿಂತ ಶೇ.56ರಷ್ಟು ಕಡಿಮೆ ಮಹಿಳಾ ಸದಸ್ಯರು ಗ್ರಾಮದ ಜನರ ಇಚ್ಚೆಯಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಅಂದರೆ ಈ ಅಂತಿಮವಾಗಿ ಸ್ವನಿರ್ಧಾರದಂತೆ ಚುನಾವಣಾ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ 17(ಶೇ.25) ಅಭ್ಯರ್ಥಿಗಳಲ್ಲಿ ಶೇ.100ರಷ್ಟು ಪುರುಷ ಸದಸ್ಯರಾಗಿದ್ದಾರೆ. ಅಂದರೆ, ಈ ಪಂಚಾಯಿತಿಯಲ್ಲಿ ಯಾವೊಬ್ಬ ಮಹಿಳೆಗೂ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವ ಸ್ವಾತಂತ್ರ್ಯವಿಲ್ಲವೆಂಬುದು ಕಂಡುಬರುತ್ತದೆ(ನೋಡಿ ಕೋಷ್ಟಕ–5.3). ಒಟ್ಟಾರೆಯಾಗಿ ಈ ಗ್ರಾಮಪಂಚಾಯಿತಿಯಲ್ಲಿ ಶೇ.50ರಷ್ಟು ಪುರುಷ ಸದಸ್ಯರು ಮಾತ್ರ ಅವರ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸಿದರೆ, ಶೇ.100ರಷ್ಟು ಮಹಿಳೆಯರಿಗೆ ಚುನಾವಣೆ ಉಮೇದುವಾರಿಕೆಯಲ್ಲಿ ಸ್ವನಿರ್ಧಾರ ಇಲ್ಲವಾಗಿದೆ.

ಈ ಪಂಚಾಯಿತಿಯಲ್ಲಿ ಚುನಾವಣೆಗೆ ಸ್ಪರ್ಧಿಸುವುದಕ್ಕೆ ಮಹಿಳೆಯರಿಗೆ ಸ್ವನಿರ್ಧಾರ ಇಲ್ಲದಿರುವುದು ಮತ್ತು ಜನರ ಇಚ್ಚೆಯಂತೆ ಚುನಾವಣೆಗೆ ಸ್ಪರ್ಧಿಸುವ ಶೇ.22 ಮಹಿಳೆಯರ ಪ್ರಮಾಣ ತುಂಬಾ ಕಡಿಮೆ ಇರುವುದು ಪ್ರಜಾಪ್ರಭುತ್ವಕ್ಕೆ ಆತಂಕದ ಮತ್ತು ಮಹಿಳೆಯರ ಸಬಲೀಕರಣಕ್ಕೆ ಹಿನ್ನಡೆ ಬೆಳವಣಿಗೆಯಾಗಿದೆ. ಈ ಪಂಚಾಯಿತಿಯಲ್ಲಿ ಚುನಾವಣೆ ಉಮೇದುವಾರಿಕೆಯಲ್ಲಿ ಮಹಿಳೆಯರು ಅವರ ಸ್ವನಿರ್ಧಾರದ ಪ್ರಮಾಣ ಇಲ್ಲದಿರುವುದಕ್ಕೆ ಪ್ರಮುಖವಾಗಿ ಪರಿಶಿಷ್ಟ ಪಂಗಡದಲ್ಲಿರುವ ಪುರುಷ ಯಜಮಾನಿಕೆ ಲಕ್ಷಣಗಳು ಕಾರಣಗಳಾಗಿವೆಂದು ಗ್ರಹಿಸಲಾಗಿದೆ. ಈ ಪಂಚಾಯಿತಿಯಲ್ಲಿ ಶೇ.50ರಷ್ಟು ಪುರುಷರು ಅವರ ಸ್ವನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದುಕೊಳ್ಳುವುದು ಕಂಡುಬಂದರೂ ಇದರ ಪ್ರಮಾಣ ಕಡಿಮೆ ಎನ್ನಬಹುದು. ಈ ಪಂಚಾಯಿತಿಯಲ್ಲಿ ಮಹಿಳೆಯರಂತೆ ಪುರುಷರು ಸಹ ದುರ್ಬಲರಾಗಿರುವುದು ಕಂಡುಬರುತ್ತದೆ. ಈ ಪಂಚಾಯಿತಿಯಲ್ಲಿ ಚುನಾವಣೆಗೆ ಸ್ಪರ್ಧಿಸುವ ಪುರುಷರು ಹೆಚ್ಚಾಗಿ ಆರ್ಥಿಕವಾಗಿ ಉತ್ತಮವಾಗಿದ್ದರೂ ಪರಿಶಿಷ್ಟ ಪಂಗಡದಲ್ಲಿ ಸಾಂಪ್ರದಾಯಿಕವಾಗಿ ಕಂಡುಬರುವ ಗುಂಪು ಅಥವಾ ಸಾಮಾಜಿಕ ಯಾಜಮಾನಿಕೆಗೆ ಮತ್ತು ಇದಕ್ಕೆ

ಪರ್ಯಾಯವಾಗಿ ಬೆಳೆದು ಬರುತ್ತಿರುವ ಆರ್ಥಿಕ ಮತ್ತು ರಾಜಕೀಯ ಯಜಮಾನ್ಯ ಲಕ್ಷಣಗಳು ಕಾರಣವಾಗಿವೆ. ಜೊತೆಗೆ ಈ ಪಂಚಾಯಿತಿಯು ಶೈಕ್ಷಣಿಕವಾಗಿ ಹಿಂದುಳಿದಿರುವುದು ಮತ್ತೊಂದು ಪ್ರಮುಖ ಕಾರಣವಾಗಿರಬಹುದೆಂದು ಗ್ರಹಿಸಲಾಗಿದೆ.

ನಾಗೇನಹಳ್ಳಿ ಗ್ರಾಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 79 ಚುನಾಯಿತ ಸದಸ್ಯರು ಮತ್ತು ಚುನಾವಣಾ ಅಭ್ಯರ್ಥಿಗಳಲ್ಲಿ ಶೇ.48ರಷ್ಟು ಮಹಿಳಾ ಮಾಹಿತಿದಾರರು ಇದ್ದಾರೆ. ಇವರಲ್ಲಿ ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ಬೆಂಬಲದೊಂದಿಗೆ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.46(36)ರಷ್ಟು ಅಭ್ಯರ್ಥಿಗಳಲ್ಲಿ ಕ್ರಮವಾಗಿ ಶೇ.50ರಷ್ಟು ಪುರುಷರು ಮತ್ತು ಮಹಿಳೆಯರು ಇದ್ದಾರೆ. ಅಲ್ಲದೇ ಈ ಪಂಚಾಯಿತಿಯಲ್ಲಿ ಕುಟುಂಬದ ಪುರುಷ ಸದಸ್ಯರು ಹೇಳಿದ್ದಕ್ಕಾಗಿಯೇ ಚುನಾವಣೆಗೆ ಸ್ಪರ್ಧಿಸಿದ್ದಾಗಿ ಹೇಳಿಕೆ ನೀಡಿದ ಶೇ.23(18) ಮಾಹಿತಿದಾರರಲ್ಲಿ ಶೇ.100ರಷ್ಟು ಮಹಿಳಾ ಅಭ್ಯರ್ಥಿಗಳಾಗಿದ್ದಾರೆ. ಹಾಗೆಯೇ ಈ ಪಂಚಾಯಿತಿಯಲ್ಲಿ ಗ್ರಾಮದ ಜನರು ಹೇಳಿದ್ದಕ್ಕಾಗಿ ಚುನಾವಣೆ ಉಮೇದುವಾರಿಕೆ ಪಡಿದಿರುವುದಾಗಿ ಹೇಳಿಕೆ ನೀಡಿದ ಶೇ.15(12) ಅಭ್ಯರ್ಥಿಗಳಲ್ಲಿ ಶೇ.83ರಷ್ಟು ಪುರುಷರು ಮತ್ತು ಶೇ.17ರಷ್ಟು ಮಹಿಳೆಯರಾಗಿದ್ದಾರೆ. ಗ್ರಾಮದ ಜನರ ಇಚ್ಚೆಯಂತೆ ಚುನಾವಣೆ ಉಮೇದುವಾರಿಕೆ ಪಡೆಯುವಲ್ಲಿ ಪುರುಷರಿಗಿಂತ ಶೇ.66ರಷ್ಟು ಕಡಿಮೆ ಮಹಿಳೆಯರು ಇರುವುದು ಕಂಡುಬರುತ್ತದೆ. ಅಂತಿಮವಾಗಿ ಸ್ವನಿರ್ಧಾರದಂತೆ ಚುನಾವಣಾ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.16(13)ಅಭ್ಯರ್ಥಿಗಳಲ್ಲಿ ಶೇ.100ರಷ್ಟು ಪುರುಷ ಅಭ್ಯರ್ಥಿಗಳಾಗಿದ್ದಾರೆ. ಅಂದರೆ ಈ ಪಂಚಾಯಿತಿಯಲ್ಲಿ ಶೇ.100ರಷ್ಟು ಮಹಿಳೆಯರಿಗೆ ಅವರ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವ ಸ್ವಾತಂತ್ರ್ಯವಿಲ್ಲವೆಂಬುದು ಕಂಡುಬರುತ್ತದೆ(ನೋಡಿ ಕೋಷ್ಟಕ-5.3). ಒಟ್ಟಾರೆಯಾಗಿ, ಈ ಗ್ರಾಮಪಂಚಾಯಿತಿಯಲ್ಲಿ ಶೇ.32ರಷ್ಟು ಪುರುಷ ಸದಸ್ಯರು ಮಾತ್ರ ಅವರ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸಿದರೆ, ಶೇ.100ರಷ್ಟು ಮಹಿಳೆಯರಿಗೆ ಚುನಾವಣೆ ಉಮೇದುವಾರಿಕೆ ಸ್ವನಿರ್ಧಾರ ಇಲ್ಲದಿರುವುದು ಕಂಡುಬರುತ್ತದೆ.

ಈ ಪಂಚಾಯಿತಿಯಲ್ಲಿ ಚುನಾವಣೆಗೆ ಸ್ಪರ್ಧಿಸುವುದಕ್ಕೆ ಮಹಿಳೆಯರಿಗೆ ಸ್ವನಿರ್ಧಾರ ಇಲ್ಲದಿರುವುದು ಮತ್ತು ಜನರ ಇಚ್ಚೆಯಂತೆ ಚುನಾವಣೆಗೆ ಸ್ಪರ್ಧಿಸುವ ಶೇ.16ರಷ್ಟು ಮಹಿಳೆಯರ ಪ್ರಮಾಣ ತುಂಬಾ ಕಡಿಮೆ ಇರುವುದು ಮಹಿಳಾ ಸಬಲೀಕರಣಕ್ಕೆ ಅಡ್ಡಿ ಮತ್ತು ಪ್ರಜಾಪ್ರಭುತ್ವಕ್ಕೆ ಆತಂಕದ ಬೆಳವಣಿಗೆಯಾಗಿದೆ. ಈ ಪಂಚಾಯಿತಿಯಲ್ಲಿ ಚುನಾವಣೆ ಉಮೇದುವಾರಿಕೆಯಲ್ಲಿ ಮಹಿಳೆಯರಿಗೆ ಸ್ವನಿರ್ಧಾರ ಇಲ್ಲದಿರುವುದಕ್ಕೆ ಸಾಮಾಜಿಕ ಯಾಜಮಾನ್ಯಕ್ಕಿಂತ ಆರ್ಥಿಕ ಮತ್ತು ರಾಜಕೀಯ ಪುರುಷ ಯಾಜಮಾನ್ಯ ಲಕ್ಷಣಗಳು ಕಾರಣಗಳಾಗಿವೆಂದು ಗ್ರಹಿಸಲಾಗಿದೆ. ಈ ಪಂಚಾಯಿತಿಯಲ್ಲಿ ಶೇ.32ರಷ್ಟು ಪುರುಷರು ಅವರ ಸ್ವನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದುಕೊಳ್ಳುವುದು ಕಂಡುಬಂದರೂ ಇದರ ಪ್ರಮಾಣ ಕಡಿಮೆ ಎನ್ನಬಹುದು. ಈ ಪಂಚಾಯಿತಿಯಲ್ಲಿ ಮಹಿಳೆಯರಂತೆ ಪುರುಷರು ಸಹ ದುರ್ಬಲರಾಗಿರುವುದು ಕಂಡುಬರುತ್ತದೆ. ಈ ಪಂಚಾಯಿತಿಯಲ್ಲಿ ಚುನಾವಣೆಗೆ ಸ್ಪರ್ಧಿಸುವ ಪುರುಷರು

ಹೆಚ್ಚಾಗಿ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಊಳಿಗಮಾನ್ಯ ಮತ್ತು ಸಾಮಾಜಿಕ ಯಾಜಮಾನಿಕೆಗೆ ಪರ್ಯಾಯವಾಗಿ ಬೆಳೆದು ಬರುತ್ತಿರುವ ಆರ್ಥಿಕ ಮತ್ತು ರಾಜಕೀಯ ಯಾಜಮಾನ್ಯ ಲಕ್ಷಣಗಳು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳ ಮೇಲೆ ತನ್ನ ಹಿಡಿತವನ್ನು ಹೊಂದಲು ಸಹಾಯಕವಾಗಿದೆಯೆಂದು ಗ್ರಹಿಸಲಾಗಿದೆ.

ಮಲೆನಾಡು ಗ್ರಾಮಪಂಚಾಯಿತಿಗಳು

ಬೇಡ್ಕಣಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಯಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 72 ಚುನಾಯಿತ ಸದಸ್ಯರು ಮತ್ತು ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಶೇ.51ರಷ್ಟು ಮಹಿಳೆಯರಿದ್ದಾರೆ. ಕ್ಷೇತ್ರ ಅಧ್ಯಯನ ವೇಳೆ ಮಾಹಿತಿ ನೀಡಿದ 72 ಮಾಹಿತಿದಾರರ ಪೈಕಿ ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ಬೆಂಬಲದೊಂದಿಗೆ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.29(11) ಮಾಹಿತಿದಾರರಲ್ಲಿ ಶೇ.52ರಷ್ಟು ಪುರುಷರು ಮತ್ತು 48ರಷ್ಟು ಮಹಿಳಾ ಸದಸ್ಯರು ಇದ್ದಾರೆ. ಈ ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಅಭ್ಯರ್ಥಿಗಳಿಂತ ಶೇ.4ರಷ್ಟು ಹೆಚ್ಚು ಪುರುಷ ಅಭ್ಯರ್ಥಿಗಳು ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಅಲ್ಲದೇ ಈ ಪಂಚಾಯಿತಿಯಲ್ಲಿ ಕುಟುಂಬದ ಪುರುಷ ಸದಸ್ಯರು ಹೇಳಿದ್ದಕ್ಕಾಗಿಯೇ ಚುನಾವಣೆಗೆ ಸ್ಪರ್ಧಿಸಿದ್ದಾಗಿ ಹೇಳಿಕೆ ನೀಡಿದ ಶೇ.13(9) ಅಭ್ಯರ್ಥಿಗಳಲ್ಲಿ ಶೇ.100ರಷ್ಟು ಮಹಿಳಾ ಸದಸ್ಯರಾಗಿದ್ದಾರೆ. ಹಾಗೆಯೇ ಈ ಪಂಚಾಯಿತಿಯಲ್ಲಿ ಗ್ರಾಮದ ಜನರು ಹೇಳಿದ್ದಕ್ಕಾಗಿ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.44(32) ಸದಸ್ಯರಲ್ಲಿ ಶೇ.44ರಷ್ಟು ಪುರುಷರು ಮತ್ತು ಶೇ.56ರಷ್ಟು ಮಹಿಳಾ ಸದಸ್ಯರು ಇದ್ದಾರೆ. ಈ ಗ್ರಾಮಪಂಚಾಯಿತಿಯಲ್ಲಿ ಪುರುಷ ಸದಸ್ಯರಿಗಿಂತ ಮಹಿಳಾ ಅಭ್ಯರ್ಥಿಗಳು ಶೇ.12ರಷ್ಟು ಹೆಚ್ಚು ಗ್ರಾಮದ ಜನರ ಇಚ್ಚೆಯಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಅಂತಿಮವಾಗಿ ಸ್ವನಿರ್ಧಾರದಂತೆ ಚುನಾವಣಾ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.14(10) ಅಭ್ಯರ್ಥಿಗಳಲ್ಲಿ ಶೇ.100ರಷ್ಟು ಪುರುಷರಾಗಿದ್ದಾರೆ(ನೋಡಿ ಕೋಷ್ಟಕ-5.3). ಅಂದರೆ ಈ ಪಂಚಾಯಿತಿಯಲ್ಲಿ ಮಹಿಳೆಯರಿಗೆ ಅವರ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವ ಸ್ವಾತಂತ್ರ್ಯವಿಲ್ಲವೆಂಬುದು ಕಂಡುಬರುತ್ತದೆ. ಒಟ್ಟಾರೆಯಾಗಿ, ಈ ಗ್ರಾಮಪಂಚಾಯಿತಿಯಲ್ಲಿ ಶೇ.14ರಷ್ಟು ಪುರುಷ ಸದಸ್ಯರು ಮಾತ್ರ ಅವರ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸಿದರೆ ಶೇ.100ರಷ್ಟು ಮಹಿಳೆಯರಿಗೆ ಉಮೇದುವಾರಿಕೆ ಸ್ವನಿರ್ಧಾರ ಇಲ್ಲವಾಗಿದೆ.

ಈ ಪಂಚಾಯಿತಿಯಲ್ಲಿ ಶೇ.50ರಷ್ಟು ಮಹಿಳೆಯರು ಗ್ರಾಮದ ಜನರ ಓಲೈಕೆ ಅಥವಾ ಒತ್ತಡಕ್ಕೆ ಚುನಾವಣೆಗೆ ಸ್ಪರ್ಧಿಸಿರುವುದಾಗಿ ಹೇಳಿಕೆ ನೀಡಿರುವುದು ಕಂಡುಬರುತ್ತದೆ. ಇದು ಪ್ರಜಾಪಭುತ್ವದ ತತ್ವಕ್ಕೆ ಅನುಗುಣವಾಗಿ ಜನರ ಇಚ್ಚೆಯಂತೆ ಮಹಿಳೆಯರು ಚುನಾವಣೆಗೆ ಸ್ಪರ್ಧಿಸುವುದು ಸಮಾಧಾನಕರ ಬೆಳವಣಿಗೆಯಾಗಿದೆ. ಈ ಪಂಚಾಯಿತಿಯಲ್ಲಿ ಚುನಾವಣೆ ಉಮೇದುವಾರಿಕೆ ಪಡೆಯುವಲ್ಲಿ

ಮಹಿಳೆಯರಿಗೆ ಸ್ವನಿರ್ಧಾರದ ಇಲ್ಲದಿರುವುದಕ್ಕೆ ಸಾಮಾಜಿಕ ಮತ್ತು ಕೌಟಂಬಿಕ ವ್ಯವಸ್ಥೆಯಲ್ಲಿರುವ ಪುರುಷ ಯಜಮಾನಿಕೆ ಲಕ್ಷಣಗಳು ಕಾರಣಗಳಾಗಿವೆ. ಈ ಪಂಚಾಯಿತಿಯಲ್ಲಿ ಶೇ.29ರಷ್ಟು ಪುರುಷರು ಅವರ ಸ್ವನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದುಕೊಳ್ಳುವುದು ಕಂಡುಬಂದರೂ ಇದರ ಪ್ರಮಾಣ ಕಡಿಮೆ ಎನ್ನಬಹುದು. ಈ ಪಂಚಾಯಿತಿಯಲ್ಲಿ ಮಹಿಳೆಯರಂತೆ ಪುರುಷರು ಸಹ ದುರ್ಬಲರಾಗಿರುವುದು ಕಂಡುಬರುತ್ತದೆ. ಈ ಪಂಚಾಯಿತಿಯಲ್ಲಿ ಚುನಾವಣೆಗೆ ಸ್ಪರ್ಧಿಸುವ ಪುರುಷರು ಹೆಚ್ಚಾಗಿ ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಇದಕ್ಕೆ ಊಳಿಗಮಾನ್ಯ ವ್ಯವಸ್ಥೆ ಪರ್ಯಾಯವಾಗಿ ಇಂದು ಬೆಳೆದುಬಂದಿರುವ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಯಜಮಾನ್ಯ ವ್ಯವಸ್ಥೆ ಕಾರಣವಾಗಿದೆ. ಇದು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಪುರುಷ ಮತ್ತು ಮಹಿಳೆಯರ ಮೇಲೆ ತನ್ನ ಹಿಡಿತವನ್ನು ಮುಂದುವರಿಸಿಕೊಂಡು ಹೋಗುತ್ತಿದೆ ಎಂದು ಗ್ರಹಿಸಲಾಗಿದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಯಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 76 ಚುನಾಯಿತ ಸದಸ್ಯರು ಮತ್ತು ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಶೇ.51ರಷ್ಟು ಮಹಿಳೆಯರಿದ್ದಾರೆ. ಕ್ಷೇತ್ರ ಅಧ್ಯಯನ ವೇಳೆ ಮಾಹಿತಿ ನೀಡಿದ 76 ಮಾಹಿತಿದಾರರ ಪೈಕಿ ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ಬೆಂಬಲದೊಂದಿಗೆ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.30(23) ಅಭ್ಯರ್ಥಿಗಳಲ್ಲಿ ಶೇ.13ರಷ್ಟು ಪುರುಷರು ಮತ್ತು 87ರಷ್ಟು ಮಹಿಳಾ ಅಭ್ಯರ್ಥಿಗಳಾಗಿದ್ದಾರೆ. ಈ ಗ್ರಾಮಪಂಚಾಯಿತಿಯಲ್ಲಿ ಪುರುಷರಿಗಿಂತ ಶೇ.74ರಷ್ಟು ಹೆಚ್ಚು ಮಹಿಳಾ ಸದಸ್ಯರು ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಅಲ್ಲದೇ ಈ ಪಂಚಾಯಿತಿಯಲ್ಲಿ ಕುಟುಂಬದ ಪುರುಷ ಸದಸ್ಯರು ಹೇಳಿದ್ದಕ್ಕಾಗಿಯೇ ಚುನಾವಣೆಗೆ ಸ್ಪರ್ಧಿಸಿದ್ದಾಗಿ ಹೇಳಿಕೆ ನೀಡಿದ ಶೇ.14(11) ಮಾಹಿತಿದಾರರಲ್ಲಿ ಶೇ.100ರಷ್ಟು ಮಹಿಳೆಯರಾಗಿದ್ದಾರೆ. ಹಾಗೆಯೇ ಈ ಪಂಚಾಯಿತಿಯಲ್ಲಿ ಗ್ರಾಮದ ಜನರು ಹೇಳಿದ್ದಕ್ಕಾಗಿ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.36(27) ಸದಸ್ಯರಲ್ಲಿ ಶೇ.70ರಷ್ಟು ಪುರುಷರು ಮತ್ತು ಶೇ.30ರಷ್ಟು ಮಹಿಳಾ ಅಭ್ಯರ್ಥಿಗಳಾಗಿದ್ದಾರೆ. ಈ ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರಿಗಿಂತ ಶೇ.40ರಷ್ಟು ಹೆಚ್ಚು ಪುರುಷ ಅಭ್ಯರ್ಥಿಗಳು ಗ್ರಾಮದ ಜನರ ಇಚ್ಚೆಯಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಅಂತಿಮವಾಗಿ ಸ್ವನಿರ್ಧಾರದಂತೆ ಚುನಾವಣಾ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.20(15) ಮಾಹಿತಿದಾರರಲ್ಲಿ ಶೇ.100ರಷ್ಟು ಪುರುಷ ಸದಸ್ಯರಾಗಿದ್ದಾರೆ(ನೋಡಿ ಕೋಷ್ಟಕ–5.3). ಅಂದರೆ ಈ ಪಂಚಾಯಿತಿಯಲ್ಲಿ ಮಹಿಳೆಯರಿಗೆ ಅವರ ಸ್ವ ನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವ ಸ್ವಾತಂತ್ರ್ಯವಿಲ್ಲವೆಂಬುದು ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಗ್ರಾಮಪಂಚಾಯಿತಿಯಲ್ಲಿ ಶೇ.20ರಷ್ಟು ಪುರುಷ ಸದಸ್ಯರು ಮಾತ್ರ ಅವರ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸಿದರೆ ಶೇ.100ರಷ್ಟು ಮಹಿಳೆಯರಿಗೆ ಉಮೇದುವಾರಿಕೆ ಸ್ವನಿರ್ಧಾರ ಇಲ್ಲದಿದರುವುದು ಕಂಡುಬರುತ್ತದೆ.

ಈ ಪಂಚಾಯಿತಿಯಲ್ಲಿ ಚುನಾವಣೆ ಉಮೇದುವಾರಿಕೆ ಪಡೆಯುವಲ್ಲಿ ಮಹಿಳೆಯರಿಗೆ ಸ್ವನಿರ್ಧಾರ ಇಲ್ಲದಿರುವುದಕ್ಕೆ ಸಾಮಾಜಿಕ ಮತ್ತು ಕೌಟಂಬಿಕ ವ್ಯವಸ್ಥೆಯಲ್ಲಿರುವ ಪುರುಷ ಯಜಮಾನಿಕೆ ಲಕ್ಷಣಗಳು ಕಾರಣಗಳಾಗಿವೆ. ಈ ಪಂಚಾಯಿತಿಯಲ್ಲಿ ಶೇ.41.67 ಪುರುಷರು ಅವರ ಸ್ವನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದುಕೊಳ್ಳುವುದು ಕಂಡುಬಂದರೂ ಇದರ ಪ್ರಮಾಣ ಕಡಿಮೆ ಎನ್ನಬಹುದು. ಇಂದು ಊಳಿಗಮಾನ್ಯ ವ್ಯವಸ್ಥೆ ಪರ್ಯಾಯವಾಗಿ ಬೆಳೆದು ಬಂದಿರುವ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಯಜಮಾನ್ಯ ಲಕ್ಷಣಗಳು ಕಾರಣಗಳಾಗಿವೆ ಎಂದು ಗ್ರಹಿಸಲಾಗಿದೆ.

ತೌಲನಿಕ ಅಧ್ಯಯನ

ಬಯಲುಸೀಮೆಯ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಿಗೆ 2005 ಮತ್ತು 2010ರ ಅವಧಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರಲ್ಲಿ ಸಂದರ್ಶಿಸಿದ 147 ಮಾಹಿತಿದಾರರಲ್ಲಿ ಶೇ.50(73) ಮಹಿಳಾ ಮಾಹಿತಿದಾರರಾಗಿದ್ದಾರೆ. ಇವರ ಚುನಾವಣೆ ಉಮೇದುವಾರಿಕೆ ನಿರ್ಧಾರ ಯಾರ ಕೈಯಲ್ಲಿದೆ ಎಂಬುದನ್ನು ಕ್ಷೇತ್ರ ಅಧ್ಯಯನದಲ್ಲಿ ಪಡೆದ ಮಾಹಿತಿಯನ್ನು ಅಂಕಿ ಅಂಶಗಳ ರೂಪದಲ್ಲಿ ಸಂಗ್ರಹಿಸಿ, ವಿಶ್ಲೇಷಣೆ ಮಾಡಲಾಗಿದೆ(ನೋಡಿ ಕೋಷ್ಟಕ–5.3). ಈ ಪ್ರಮಾಣವನ್ನು ತಾಲೂಕು/ಜಿಲ್ಲೆಗೆ ಹೋಲಿಸಿದಾಗ, ಹೊಸಪೇಟೆ ತಾಲೂಕು/ಬಳ್ಳಾರಿ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಚುನಾವಣಾ ಉಮೇದುವಾರಿಕೆ ಪಡೆಯುವವರಲ್ಲಿ ಶೇ.39ರಷ್ಟು ಅಭ್ಯರ್ಥಿಗಳು ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ಬೆಂಬಲದೊಂದಿಗೆ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ್ದಾರೆ. ಇವರಲ್ಲಿ ಶೇ.68ರಷ್ಟು ಮಹಿಳೆಯರಾಗಿದ್ದಾರೆ. ಈ ತಾಲೂಕು/ಜಿಲ್ಲೆಯಲ್ಲಿ ಪುರುಷರಿಗಿಂತ ಶೇ.36ರಷ್ಟು ಹೆಚ್ಚು ಮಹಿಳೆಯರು ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಅಲ್ಲದೇ ಕುಟುಂಬದ ಪುರುಷ ಸದಸ್ಯರು ಹೇಳಿದ್ದಕ್ಕಾಗಿಯೇ ಚುನಾವಣೆಗೆ ಸ್ಪರ್ಧಿಸಿದ್ದಾಗಿ ಹೇಳಿಕೆ ನೀಡಿದ ಬಯಲುಸೀಮೆಯ ಶೇ.25ರಷ್ಟು ಅಭ್ಯರ್ಥಿಗಳಲ್ಲಿ ಶೇ.89ರಷ್ಟು ಮಹಿಳಾ ಅಭ್ಯರ್ಥಿಗಳಾಗಿದ್ದಾರೆ. ಅಂದರೆ ಕುಟುಂಬದ ಪುರುಷ ಸದಸ್ಯರ ನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆಯುವವರಲ್ಲಿ ಶೇ.78ರಷ್ಟು ಹೆಚ್ಚು ಮಹಿಳೆಯರಾಗಿದ್ದಾರೆ. ಹಾಗೆಯೇ ಗ್ರಾಮದ ಜನರು ಹೇಳಿದ್ದಕ್ಕಾಗಿ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.16ರಷ್ಟು ಅಭ್ಯರ್ಥಿಗಳಲ್ಲಿ ಶೇ.22ರಷ್ಟು ಮಾತ್ರ ಮಹಿಳಾ ಅಭ್ಯರ್ಥಿಗಳಾಗಿದ್ದಾರೆ. ಬಯಲುಸೀಮೆಯ ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರಿಗಿಂತ ಶೇ.56ರಷ್ಟು ಹೆಚ್ಚು ಪುರುಷ ಸದಸ್ಯರು ಗ್ರಾಮದ ಜನರ ಇಚ್ಚೆಯಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಅಂತಿಮವಾಗಿ ಸ್ವನಿರ್ಧಾರದಂತೆ ಚುನಾವಣಾ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.20ರಷ್ಟು ಅಭ್ಯರ್ಥಿಗಳಲ್ಲಿ ಶೇ.100ರಷ್ಟು ಪುರುಷ ಸದಸ್ಯರಾಗಿದ್ದಾರೆ. ಅಂದರೆ ಬಯಲುಸೀಮೆಯ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವ ಸ್ವಾತಂತ್ರ್ಯ ಶೇ.100ರಷ್ಟು ಇಲ್ಲವೆಂಬುದು ಕಂಡುಬರುತ್ತದೆ. ಒಟ್ಟಾರೆಯಾಗಿ, ಬಯಲುಸೀಮೆಯಲ್ಲಿ

ಶೇ.20ರಷ್ಟು ಪುರುಷ ಅಭ್ಯರ್ಥಿಗಳು ಮಾತ್ರ ಅವರ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವುದು ಕಂಡುಬರುತ್ತದೆ. ಆದರೆ ಮಹಿಳೆಯರಿಗೆ ಉಮೇದುವಾರಿಕೆಯಲ್ಲಿ ಸ್ವನಿರ್ಧಾರ ಇಲ್ಲವಾಗಿದೆ.

ಬಯಲಯಸೀಮೆಯ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಚುನಾವಣೆ ಉಮೇದುವಾರಿಕೆಯಲ್ಲಿ ಸ್ವನಿರ್ಧಾರ ಇಲ್ಲದಿರುವುದು ಕಂಡುಬರುತ್ತದೆ. ಅಲ್ಲದೇ ಪುರುಷರಲ್ಲಿ ಶೇ.40ರಷ್ಟು ಪುರುಷರು ಮಾತ್ರ ಅವರ ಸ್ವನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದುಕೊಳ್ಳುವುದು ಕಂಡುಬರುತ್ತದೆ. ಈ ಪ್ರಮಾಣವು ಕಡಿಮೆ ಎನ್ನಬಹುದು. ಇದಕ್ಕೆ ಬಯಲುಸೀಮೆಯ ಪ್ರದೇಶದಲ್ಲಿ ಪರಿಶಿಷ್ಟರು ಹೆಚ್ಚು ಇದ್ದು, ಇವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಾಗಿರುವುದೇ ಕಾರಣವಾಗಿದೆ. ಇಂದು ಊಳಿಗಮಾನ್ಯ ವ್ಯವಸ್ಥೆ ಪರ್ಯಾಯವಾಗಿ ಬೆಳೆದು ಬರುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪುರುಷ ಯಾಜಮಾನ್ಯ ಲಕ್ಷಣಗಳು ಪ್ರಮುಖ ಕಾರಣಗಳಾಗಿವೆ ಎಂದು ಗ್ರಹಿಸಲಾಗಿದೆ.

ಮಲೆನಾಡಿನ ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಿಗೆ 2005ರ ಮತ್ತು 2010ರ ಅವಧಿಗೆ ಚುನಾವಣಾ ಪ್ರಾತಿನಿಧ್ಯ ಪಡೆದವರ ಚುನಾವಣೆ ಉಮೇದುವಾರಿಕೆ ನಿರ್ಧಾರ ಯಾರ ಕೈಯಲ್ಲಿದೆ ಎಂಬುದನ್ನು ಕ್ಷೇತ್ರ ಅಧ್ಯಯನದಲ್ಲಿ ಪಡೆದ ಮಾಹಿತಿಯನ್ನು ಅಂಕಿ ಅಂಶಗಳ ರೂಪದಲ್ಲಿ ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ. ಕ್ಷೇತ್ರ ಅಧ್ಯಯನದಲ್ಲಿ ಮಾಹಿತಿ ನೀಡಿದ 148 ಮಾಹಿತಿದಾರಲ್ಲಿ ಶೇ.51ರಷ್ಟು ಮಹಿಳೆಯರಾಗದ್ದು, ಇವರ ನೀಡಿದ ಮಾಹಿತಿ ಪ್ರಮಾಣವನ್ನು ತಾಲೂಕು/ಜಿಲ್ಲೆಗೆ ಹೋಲಿಕೆ ಮಾಡಿದಾಗ, ಸಿದ್ದಾಪುರು ತಾಲೂಕು/ ಉತ್ತರ ಕನ್ನಡ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ಬೆಂಬಲದೊಂದಿಗೆ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.30ರಷ್ಟು ಅಭ್ಯರ್ಥಿಗಳಲ್ಲಿ ಶೇ.68ರಷ್ಟು ಮಹಿಳಾ ಅಭ್ಯರ್ಥಿಗಳಾಗಿದ್ದಾರೆ. ಈ ಗ್ರಾಮಪಂಚಾಯಿತಿಯಲ್ಲಿ ಪುರುಷರಿಗಿಂತ ಶೇ.36ರಷ್ಟು ಹೆಚ್ಚು ಮಹಿಳೆಯರು ಗ್ರಾಮದ(ಸಾಮಾಜಿಕ, ಆರ್ಥಿಕ, ರಾಜಕೀಯ) ಮುಖಂಡರ ನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಅಲ್ಲದೇ ಕುಟುಂಬದ ಪುರುಷ ಸದಸ್ಯರು ಹೇಳಿದ್ದಕ್ಕಾಗಿಯೇ ಚುನಾವಣೆಗೆ ಸ್ಪರ್ಧಿಸಿದ್ದಾಗಿ ಹೇಳಿಕೆ ನೀಡಿದ ಮಲೆನಾಡಿನ ಶೇ.14 ಅಭ್ಯರ್ಥಿಗಳಲ್ಲಿ ಶೇ.100ರಷ್ಟು ಮಹಿಳೆಯರಾಗಿದ್ದಾರೆ. ಹಾಗೆಯೇ ಗ್ರಾಮದ ಜನರು ಹೇಳಿದ್ದಕ್ಕಾಗಿ ಚುನಾವಣೆ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.40ರಷ್ಟು ಅಭ್ಯರ್ಥಿಗಳಲ್ಲಿ ಶೇ.44ರಷ್ಟು ಮಹಿಳಾ ಮಾಹಿತಿದಾರರಾಗಿದ್ದಾರೆ. ಈ ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರಿಗಿಂತ ಶೇ.12ರಷ್ಟು ಹೆಚ್ಚು ಪುರುಷರು ಗ್ರಾಮದ ಜನರ ಇಚ್ಚೆಯಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಅಂತಿಮವಾಗಿ ಸ್ವನಿರ್ಧಾರದಂತೆ ಚುನಾವಣಾ ಉಮೇದುವಾರಿಕೆ ಪಡೆದಿರುವುದಾಗಿ ಹೇಳಿಕೆ ನೀಡಿದ ಶೇ.17 ಅಭ್ಯರ್ಥಿಗಳಲ್ಲಿ ಶೇ.100ರಷ್ಟು ಪುರುಷರಾಗಿದ್ದಾರೆ. ಅಂದರೆ ಮಲೆನಾಡಿನ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಅವರ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವ ಸ್ವಾತಂತ್ರ್ಯ ಶೇ.100ರಷ್ಟು

ಇಲ್ಲವೆಂಬುದು ಕಂಡುಬರುತ್ತದೆ. ಒಟ್ಟಾರೆಯಾಗಿ, ಮಲೆನಾಡಿನಲ್ಲಿ ಶೇ.17ರಷ್ಟು ಪುರುಷರು ಮಾತ್ರ ಅವರ ಸ್ವನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವುದು ಕಂಡುಬರುತ್ತದೆ. ಆದರೆ ಮಹಿಳೆಯರಿಗೆ ಉಮೇದುವಾರಿಕೆಯಲ್ಲಿ ಸ್ವನಿರ್ಧಾರ ಇಲ್ಲವಾಗಿದೆ.

ಮಲೆನಾಡಿನ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಚುನಾವಣೆ ಉಮೇದುವಾರಿಕೆಯಲ್ಲಿ ಸ್ವನಿರ್ಧಾರ ಇಲ್ಲದಿರುವುದು ಕಂಡುಬರುತ್ತದೆ. ಇದಕ್ಕೆ ಮಲೆನಾಡು ಪ್ರದೇಶದಲ್ಲಿರುವ ಸಾಮಾಜಿಕ ಮತ್ತು ಕೌಟಂಬಿಕ ವ್ಯವಸ್ಥೆಯಲ್ಲಿರುವ ಪುರೋಹಿತಶಾಹಿ ಮತ್ತು ಪುರುಷ ಯಜಮಾನಿಕೆ ಲಕ್ಷಣಗಳು ಕಾರಣಗಳಾಗಿವೆ. ಮಲೆನಾಡು ಪ್ರದೇಶದಲ್ಲಿ ಪುರುಷರಲ್ಲೇ ಶೇ.35 ಪುರುಷರು ಅವರ ಸ್ವನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದುಕೊಳ್ಳುವುದು ಕಂಡುಬಂದರೂ ಇದರ ಪ್ರಮಾಣ ಕಡಿಮೆ ಎನ್ನಬಹುದು. ಇದಕ್ಕೆ ಊಳಿಗಮಾನ್ಯ ವ್ಯವಸ್ಥೆ ಪರ್ಯಾಯವಾಗಿ ಇಂದು ಬೆಳೆದು ಬಂದಿರುವ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಯಾಜಮಾನ್ಯ ಲಕ್ಷಣಗಳು ಕಾರಣಗಳಾಗಿವೆ ಎಂದು ಗ್ರಹಿಸಲಾಗಿದೆ.

ಬಳ್ಳಾರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗ್ರಾಮೀಣ ಮಹಿಳೆಯರ ಉಮೇದುವಾರಿಕೆಯ ನಿರ್ಧಾರವನ್ನು ತೌಲನಿಕವಾಗಿ ನೋಡಿದಾಗ, ಬಯಲುಸೀಮೆ ಗ್ರಾಮಪಂಚಾಯಿತಿಗಳಲ್ಲಿ ಶೇ.49ರಷ್ಟು ಮಹಿಳೆಯರು ಮತ್ತು ಮಲೆನಾಡು ಗ್ರಾಮಪಂಚಾಯಿತಿಗಳಲ್ಲಿ ಶೇ.39ರಷ್ಟು ಮಹಿಳೆಯರು ಗ್ರಾಮದ(ಸಾ.ಆ.ರಾ) ಮುಖಂಡರ ಬೆಂಬಲದೊಂದಿಗೆ ಸ್ಪರ್ಧಿಸುವುದು ಕಂಡುಬರುತ್ತದೆ. ಅಂದರೆ ಮಲೆನಾಡಿನ ಮಹಿಳೆಯರಿಗಿಂತ ಬಯಲುಸೀಮೆಯ ಮಹಿಳೆಯರು ಶೇ.10ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಗ್ರಾಮದ(ಸಾ.ಆ.ರಾ) ಮುಖಂಡರ ನಿರ್ಧಾರದಂತೆ ಸ್ಪರ್ಧಿಸಿದಂತಾಗುತ್ತದೆ. ಅಲ್ಲದೇ ಬಯಲುಸೀಮೆ ಗ್ರಾಮಪಂಚಾಯಿತಿಗಳಲ್ಲಿ ಶೇ.44ರಷ್ಟು ಮಹಿಳೆಯರು ಮತ್ತು ಮಲೆನಾಡು ಗ್ರಾಮಪಂಚಾಯಿತಿಗಳಲ್ಲಿ ಶೇ.28ರಷ್ಟು ಮಹಿಳೆಯರು ಕುಟುಂಬದ ಪುರುಷರ ಓಲೈಕೆ ಮತ್ತು ಒತ್ತಡಕ್ಕೆ ಸ್ಪರ್ಧಿಸುವುದು ಕಂಡುಬರುತ್ತದೆ. ಅಂದರೆ ಮಲೆನಾಡಿನ ಮಹಿಳೆಯರಿಗಿಂತ ಬಯಲುಸೀಮೆಯ ಮಹಿಳೆಯರು ಶೇ.16ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಕಟುಂಬದ ಪುರುಷರ ನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವುದು ಕಂಡುಬರುತ್ತದೆ. ಹಾಗೆಯೇ ಬಯಲುಸೀಮೆ ಗ್ರಾಮಪಂಚಾಯಿತಿಗಳಲ್ಲಿ ಶೇ.7ರಷ್ಟು ಮಹಿಳೆಯರು ಮತ್ತು ಮಲೆನಾಡು ಗ್ರಾಮಪಂಚಾಯಿತಿಗಳಲ್ಲಿ ಶೇ.34ರಷ್ಟು ಮಹಿಳೆಯರು ಗ್ರಾಮದ ಜನರ ಆಸಕ್ತಿಗೆ ಅನುಗುಣವಾಗಿ ಸ್ಪರ್ಧಿಸುವುದು ಕಂಡುಬರುತ್ತದೆ. ಅಂದರೆ ಮಲೆನಾಡಿನ ಮಹಿಳೆಯರಿಗಿಂತ ಬಯಲುಸೀಮೆಯ ಮಹಿಳೆಯರು ಶೇ.27ರಷ್ಟು ಕಡಿಮೆ ಪ್ರಮಾಣದಲ್ಲಿ ಗ್ರಾಮದ ಜನರ ನಿರ್ಧಾರದಂತೆ ಚುನಾವಣೆಗೆ ಸ್ಪರ್ಧಿಸುವುದು ಕಂಡುಬರುತ್ತದೆ. ಅಂತಿಮವಾಗಿ ಈ ಎರಡು ಜಿಲ್ಲೆಗಳಲ್ಲಿ ಗ್ರಾಮೀಣ ಮಹಿಳೆಯರಿಗೆ ಉಮೇದುವಾರಿಕೆ ಪಡೆಯುವಲ್ಲಿ ಶೇ.100ರಷ್ಟು ಸ್ವನಿರ್ಧಾರ ಇಲ್ಲದಿರುವುದು ಕಂಡುಬರುತ್ತದೆ. ಆದರೆ ಈ ಎರಡು ಜಿಲ್ಲೆಗಳ ಗ್ರಾಮೀಣ ಮಹಿಳೆಯರ ಉಮೇದುವಾರಿಕೆ ನಿರ್ಧಾರದ ಅಂಕಿ ಅಂಶಗಳನ್ನು ವಿಶ್ಲೇಷಣೆ ಮಾಡಿದಾಗ ಬಳ್ಳಾರಿ ಜಿಲ್ಲೆಯ ಗ್ರಾಮೀಣ ಮಹಿಳೆಯರಿಗಿಂತ ಉತ್ತರ ಕನ್ನಡ ಗ್ರಾಮೀಣ ಮಹಿಳೆಯರು ಸಬಲೀಕರಣದ ಪಥದಲ್ಲಿರುವರಾಗಿ ಕಂಡುಬರುತ್ತಾರೆ.

ಬಯಲುಸೀಮೆ ಬಳ್ಳಾರಿ ಜಿಲ್ಲೆ ಮತ್ತು ಮಲೆನಾಡು ಉತ್ತರ ಕನ್ನಡ ಜಿಲ್ಲೆಗಳ ಪಂಚಾಯಿತಿಗಳಲ್ಲಿ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳ ಉಮೇದುವಾರಿಕೆ ನಿರ್ಧಾರವನ್ನು ಪರಸ್ಪರ ಹೋಲಿಕೆ ಮಾಡಿ ರಾಜ್ಯಕ್ಕೆ ಹೋಲಿಸಿದಾಗ, ರಾಜ್ಯದಲ್ಲಿ ಗ್ರಾಮದ(ಸಾ.ಆ.ರಾ) ಮುಖಂಡರ ನಿರ್ಧಾರ ಮತ್ತು ಬೆಂಬಲದೊಂದಿಗೆ ಚುನಾವಣೆಗೆ ಸ್ಪರ್ಧಿಸಿರುವ ಶೇ.34ರಷ್ಟು ಅಭ್ಯರ್ಥಿಗಳಲ್ಲಿ ಶೇ.65ರಷ್ಟು ಮಹಿಳೆಯರಾಗಿದ್ದಾರೆ. ಅಲ್ಲದೇ ಕುಟುಂಬದ ಪುರುಷರ ಒತ್ತಡ ಮತ್ತು ಓಲೈಕೆಯಿಂದಾಗಿ ಚುನಾವಣೆಯಲ್ಲಿ ಸ್ಪರ್ಧಿಸಿರುವ ಶೇ.19ರಷ್ಟು ಅಭ್ಯರ್ಥಿಗಳಲ್ಲಿ ಶೇ.93ರಷ್ಟು ಮಹಿಳಾ ಅಭ್ಯರ್ಥಿಗಳಾಗಿದ್ದಾರೆ. ಜನರ ಒತ್ತಾಯ ಮತ್ತು ಆಸಕ್ತಿಗೆ ಅನುಗುಣವಾಗಿ ಚುನಾವಣಾ ಉಮೇದುವಾರಿಕೆ ಪಡೆದಿರುವ ಶೇ.28ರಷ್ಟು ಅಭ್ಯರ್ಥಿಗಳಲ್ಲಿ ಶೇ.38ರಷ್ಟು ಮಹಿಳೆಯರು ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ. ಸಬಲೀಕರಣದ ಸೂಚಕವಾಗಿ ಸ್ವನಿರ್ಧಾರದಂತೆ ಚುನಾವಣಾ ಉಮೇದುವಾರಿಕೆ ಪಡೆದ 19ರಷ್ಟು ಅಭ್ಯರ್ಥಿಗಳಲ್ಲೆ ಶೇ.100ರಷ್ಟು ಪುರುಷರಾಗಿದ್ದಾರೆ. ರಾಜ್ಯ ಮಟ್ಟದಲ್ಲಿ ಗ್ರಾಮಪಂಚಾಯಿತಿ ಚುನಾವಣಾ ಉಮೇದುವಾರಿಕೆ ಪಡೆದ ಗ್ರಾಮೀಣ ಮಹಿಳೆಯರಲ್ಲಿ ಶೇ.44ರಷ್ಟು ಮಹಿಳೆಯರು ಗ್ರಾಮದ(ಸಾ.ಆ.ರಾ) ಮುಖಂಡರ ನಿರ್ಧಾರದಂತೆ, ಶೇ.35ರಷ್ಟು ಮಹಿಳೆಯರು ಕುಟುಂಬದ ಪುರುಷರ ಒತ್ತಡ ಮತ್ತು ಓಲೈಕೆಯಿಂದ ಮತ್ತು ಶೇ.21ರಷ್ಟು ಮಹಿಳೆಯರು ಗ್ರಾಮದ ಜನರ ಒತ್ತಾಯಕ್ಕೆ ಚುನಾವಣೆಗೆ ಸ್ಪರ್ಧಿಸಿರುವುದು ಕಂಡುಬರುತ್ತೆ. ರಾಜ್ಯದಲ್ಲಿ ಯಾವ ಮಹಿಳೆಯು ಸ್ವನಿರ್ಧಾರದಂತೆ ಗ್ರಾಮಪಂಚಾಯಿತಿ ಉಮೇದುವಾರಿಕೆ ಪಡೆದಿರುವುದು ಕಂಡುಬರುವುದಿಲ್ಲ. ಗ್ರಾಮೀಣ ಮಹಿಳೆಯರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪುರುಷರ ಒತ್ತಾಸೆಗೆ ಅನಿವಾರ್ಯತೆಯಿಂದ ಚುನಾವಣೆಗೆ ಸ್ಪರ್ಧಿಸುತ್ತಿರುವುದಾಗಿ ಕಂಡುಬರುತ್ತದೆ. ಗ್ರಾಮಪಂಚಾಯಿತಿಯ ಚುನಾವಣೆಗಳಿಗೆ ಸ್ಪರ್ಧಿಸುವುದಕ್ಕೆ ಮಹಿಳೆಯರಿಗೆ ಶಾಸನಾತ್ಮಕ ಮೀಸಲಾತಿ ಇದೆ. ಅಲ್ಲದೇ ಮಹಿಳೆಯರು ಅವರ ಜನಸಂಖ್ಯೆಗೆ ಸಮಾನವಾಗಿ ಗ್ರಾಮಪಂಚಾಯಿತಿಯ ಸ್ಥಾನ ಮತ್ತು ಹುದ್ದೆಗಳಲ್ಲಿ ಪ್ರಾತಿನಿಧ್ಯ ಪಡೆಯುತ್ತಿದ್ದಾರೆ. ಆದರೆ ಈ ಸ್ಥಾನ ಮತ್ತು ಹುದ್ದೆಗಳ ಪ್ರಾತಿನಿಧ್ಯದಲ್ಲಿ ಮಹಿಳೆಯರಿಗೆ ಸ್ವನಿರ್ಧಾರ ಇಲ್ಲದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಮಹಿಳೆಯರು ಸ್ವನಿರ್ಧಾರವಿಲ್ಲದೇ ಪಡೆಯುವ ಗ್ರಾಮಪಂಚಾಯಿತಿ ಪ್ರಾತಿನಿಧ್ಯವು ಮಹಿಳಾ ಸಬಲೀಕರಣದ ರೂಪದಲ್ಲಿ ಕಂಡುಬರುವುದಿಲ್ಲವೆಂದು ಈ ಅಧ್ಯಯನದ ಮೂಲಕ ತಿಳಿದುಬರುತ್ತದೆ.

5.3 ಚುನಾವಣಾ ಉಮೇದುವಾರಿಕೆ: ಮಹಿಳಾ ಸ್ಪರ್ಧೆ ಮತ್ತು ಮಹಿಳಾ ಸಬಲೀಕರಣ

ಈ ಅಧ್ಯಾಯದ ಮೊದಲ ಭಾಗದಲ್ಲಿ ಗ್ರಾಮಪಂಚಾಯಿತಿ ಚುನಾವಣೆ ಉಮೇದುವಾರಿಕೆ ಪಡೆಯುವಲ್ಲಿ ಮಹಿಳೆಯರ ಸ್ವನಿರ್ಧಾರದ ಆಧಾರದ ಮೇರೆಗೆ ಮಹಿಳೆಯರ ಸಬಲೀಕರಣವನ್ನು ಮಾಪನ ಮಾಡಲಾಗಿದೆ. ಪ್ರಜಾಪ್ರಭುತ್ವದ ಆಶಯಕ್ಕೆ ಅನುಗುಣವಾಗಿ ಜನಸಂಖ್ಯೆಯಲ್ಲಿ ಪುರುಷರಿಗೆ ಹೆಚ್ಚುಕಡಿಮೆ ಸರಿಸಮವಿರುವ ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯಕ್ಕಾಗಿಯೇ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಶೇ.50ರಷ್ಟು ಮಹಿಳಾ ಮೀಸಲಾತಿ ನೀಡಲಾಗಿದೆ. ಈ ಮೀಸಲಾತಿಯ ಅವಕಾಶದಿಂದಾಗಿ ಗ್ರಾಮಪಂಚಾಯಿತಿಗಳಲ್ಲಿ ಜನಪ್ರತಿನಿಧಿಗಳಾಗಿ ಪ್ರಾತಿನಿಧ್ಯವನ್ನು ಪಡೆದಿರುವ ಮಹಿಳೆಯರು ರಾಜಕೀಯ

ಹಿತಾಸಕ್ತಿ ಪುರುಷರ ಒತ್ತಾಯ ಅಥವಾ ಓಲೈಕೆಯ ಪ್ರಭಾವದಿಂದ ಪಡೆದಿರುವುದಾಗಿ ಕಂಡುಬರುತ್ತದೆ. ಹೀಗಾಗಿ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯವು ನಾಮಮಾತ್ರವಾಗಿ ಕಂಡುಬರುತ್ತದೆ. ಆದ್ದರಿಂದ ಸ್ವನಿರ್ಧಾರವಿಲ್ಲದ ಗ್ರಾಪಂಚಾಯಿತಿಯ(ರಾಜಕೀಯ) ಪ್ರಾತಿನಿಧ್ಯದಿಂದ ಗ್ರಾಮೀಣ ಮಹಿಳೆಯರ ಸಬಲೀಕರಣ ಕಂಡುಬರುವುದಿಲ್ಲ ಎಂಬದು ಈ ಅಧ್ಯಾಯದಲ್ಲಿ ಈಗಾಗಲೇ ತಿಳಿದುಬಂದ ಸಂಗತಿಯಾಗಿದೆ. ಮಹಿಳೆಯರಿಗೆ ಚುನಾವಣೆ ಉಮೇದುವಾರಿಕೆಯಲ್ಲಿ ಸ್ವನಿರ್ಧಾರವಿಲ್ಲ. ಆದ್ದರಿಂದ ಮಹಿಳೆಯರು ಸಬಲೀಕರಣಗೊಂಡಿಲ್ಲ ಎಂಬುದೇ ಅಂತಿಮ ತೀರ್ಮಾನವಲ್ಲ. ಇದಕ್ಕೆ ಪೂರಕವಾಗಿ ಚುನಾವಣೆ ಉಮೇದುವಾರಿಕೆ ಪಡೆಯುವಲ್ಲಿ ಕಂಡುಬರುವ ಮಹಿಳಾ ಸ್ಪರ್ಧೆಯ ಪ್ರಮಾಣದ ಆಧಾರಗಳ ಮೇಲೆ ವಿಶ್ಲೇಷಣೆ ಮಾಡಿ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ. ಅಂದರೆ ಅಯಾ ಗ್ರಾಮಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವಿವಿಧ ವರ್ಗಗಳ ಮತ್ತು ಸಾಮಾನ್ಯ ಸಾಮಾನ್ಯ(ಪುರುಷ) ಸ್ಥಾನಗಳಿಗೆ ಕಂಡುಬರುವಷ್ಟು ಸ್ಪರ್ಧೆ ಮಹಿಳಾ ಸ್ಥಾನಗಳಲ್ಲಿ ಕಂಡುಬರುತ್ತದೆಯೇ? ರಾಜ್ಯದಲ್ಲಿ ಆಯಾ ಗ್ರಾಮಪಂಚಾಯಿತಿಗಳಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ವಿವಿಧ ವರ್ಗಗಳ ಪುರುಷ ಮತ್ತು ಮಹಿಳೆಯರ ಜನಸಂಖ್ಯೆಗೆ ಅನುಗುಣವಾಗಿ ಗ್ರಾಮಪಂಚಾಯಿತಿ ಸ್ಥಾನಗಳನ್ನು ನೀಡಲಾಗುತ್ತದೆ. ರಾಜ್ಯದಲ್ಲಿ 2010ರಲ್ಲಿ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಶೇ.33.33ರಷ್ಟು ಕಡಿಮೆಯಿಲ್ಲದಷ್ಟು ಮತ್ತು ಆಯಾ ಗ್ರಾಮಪಂಚಾಯಿತಿಯಲ್ಲಿರುವ ಮಹಿಳೆಯರ ಜನಸಂಖ್ಯೆಗೆ ಅನುಗುಣವಾಗಿ ಮಹಿಳಾ ಮೀಸಲಾತಿಯನ್ನು ನೀಡಲಾಗಿದೆ. ಇದರಿಂದಾಗಿ ಮಹಿಳಾ ಪ್ರಾತಿನಿಧ್ಯಕ್ಕೆ ವಿಶೇಷ ಅವಕಾಶ ನೀಡಿದಂತಾಗಿದೆ. ಗ್ರಾಮೀಣ ಮಹಿಳೆಯರಿಗೆ ತಳಮಟ್ಟದ ಆಡಳಿತದಲ್ಲಿ ಸೂಕ್ತ ಪ್ರಾತಿನಿಧ್ಯ ನೀಡಿದರೆ ಅವರು ಸಬಲೀಕರಣಗೊಳ್ಳುವರು ಎಂಬದು ಸಂವಿಧಾನದ 73ನೇ ತಿದ್ದುಪಡಿಯ ಉದ್ದೇಶವಾಗಿದೆ. ಆದರೆ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕಷ್ಟೇ ಮಹಿಳೆಯರಿಗೆ ಮೀಸಲಾತಿ ಸಿಕ್ಕಿತೇ ಹೊರತು ಮಹಿಳೆಯರಿಗೆ ಅವರ ಸ್ವನಿರ್ಧಾರದಂತೆ ಉಮೇದುವಾರಿಕೆ ಪಡೆಯುವ ಮತ್ತು ಸ್ಪರ್ಧೆಯೊಡ್ಡುವ ಸ್ವಾತಂತ್ರ್ಯವಿಲ್ಲದಿರುವುದು ಕಂಡುಬರುತ್ತದೆ. ಹಾಗೆಯೇ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಪಂಚಾಯಿತಿಗಳಲ್ಲಿರುವ ಪುರುಷ ಮತ್ತು ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ವಿವಿಧ ವರ್ಗಗಳ ಮತ್ತು ಮಹಿಳೆಯರ ಮೀಸಲಾತಿಯನ್ನು ನೀಡಲಾಗಿದೆ(ನೋಡಿ ಕೋಷ್ಟಕ–5.1). ಈ ಪಂಚಾಯಿತಿಗಳಲ್ಲಿ ಮೀಸಲಾತಿ ಮತ್ತು ಸಾಮಾನ್ಯ ಸಾಮಾನ್ಯ(ಪುರುಷ) ಸ್ಥಾನಗಳಲ್ಲಿ ಕಂಡುಬರುವಷ್ಟು ಉಮೇದುವಾರಿಕೆಯ ಪೈಪೋಟಿ/ಸ್ಪರ್ಧೆ ಮಹಿಳಾ ಸ್ಥಾನಗಳಲ್ಲಿ ಕಂಡುಬರುತ್ತಿದೆಯೇ ಎಂಬುದು ಅಧ್ಯಯನದ ಸಮಸ್ಯೆಯಾಗಿದೆ. ಈ ಸಮಸ್ಯೆ ಅಧ್ಯಯನ ಉದ್ದೇಶವು ಆಗಿದೆ. ಈ ಉದ್ದೇಶಗಳಿಗೆ ಅನುಗುಣವಾಗಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಮಹಿಳಾ ಮೀಸಲಾತಿ ಸ್ಥಾನಗಳಿಗೆ ಸ್ಪರ್ಧಿಸುವ ಮಹಿಳಾ ಅಭ್ಯರ್ಥಿಗಳ ಪ್ರಮಾಣ ಮತ್ತು ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸುವ ಪುರುಷ ಅಭ್ಯರ್ಥಿಗಳ ಪ್ರಮಾಣವನ್ನು ಪ್ರತ್ಯೇಕವಾಗಿ ಮತ್ತು ತೌಲನಿಕವಾಗಿ ವಿಶ್ಲೇಷಣೆ ಮಾಡಿ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ.

ಬಯಲುಸೀಮೆ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಈ ಗ್ರಾಮಪಂಚಾಯಿತಿಯಲ್ಲಿ ಮೂರು ವಾರ್ಡ್‌ಗಳನ್ನು ರಚನೆ ಮಾಡಲಾಗಿದೆ. ಈ ಮೂರು ವಾರ್ಡ್‌ಗಳು ಈ ಪಂಚಾಯಿತಿಯ ಚುನಾವಣಾ ಕ್ಷೇತ್ರಗಳಾಗಿವೆ. ಈ ಮೂರು ವಾರ್ಡ್‌ಗಳನ್ನು ಸೇರಿಸಿ,[12] 2001ರ ಜನಸಂಖ್ಯೆಗೆ ಅನುಗುಣವಾಗಿ ಈ ಗ್ರಾಮಪಂಚಾಯಿತಿಯ ಸ್ಥಾನಗಳನ್ನು ಹಂಚಲಾಗಿದೆ. ಒಂದನೇ ವಾರ್ಡ್ ಹೊಸೂರಿನಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ 4 ಪಂಚಾಯಿತಿ ಸ್ಥಾನಗಳನ್ನು ಹಂಚಿಕೆ ಮಾಡಲಾಗಿದೆ. ಇದರಲ್ಲಿ ಶೇ.50(2) ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಈ ವಾರ್ಡ್‌ನಲ್ಲಿ ಮಹಿಳಾ ಮೀಸಲು 2 ಸ್ಥಾನಗಳಿಗೆ 4 ಮಹಿಳೆಯರು ಸ್ಪರ್ಧಿಸಿದ್ದಾರೆ, ಸಾಮಾನ್ಯ 2 ಸ್ಥಾನಗಳಿಗೆ 3 ಪುರುಷರು ಸ್ಪರ್ಧಿಸಿದ್ದಾರೆ. ಎರಡನೇ ವಾರ್ಡ್ ಹೊಸೂರು(ಇಪ್ಪಿತೇರಿ ಮಾಗಣಿ) ಜನಸಂಖ್ಯೆಗೆ ಅನುಗುಣವಾಗಿ 3 ಪಂಚಾಯಿತಿ ಸ್ಥಾನಗಳನ್ನು ನೀಡಲಾಗಿದ್ದು, ಇದರಲ್ಲಿ 1(ಶೇ.33.33) ಸ್ಥಾನ ಮಹಿಳಾ ಮೀಸಲು ಸ್ಥಾನವಾಗಿದೆ. ಮಹಿಳಾ ಮೀಸಲು 1 ಸ್ಥಾನಕ್ಕೆ 3 ಮಹಿಳೆಯರು ಸ್ಪರ್ಧಿಸಿದ್ದಾರೆ, ಸಾಮಾನ್ಯ 2 ಸ್ಥಾನಗಳಿಗೆ 5 ಪುರುಷರು ಸ್ಪರ್ಧಿಸಿದ್ದಾರೆ. ಹಾಗೆಯೇ ಈ ಪಂಚಾಯಿತಿಯ ಮೂರನೇ ವಾರ್ಡ್ ಹೊಸೂರು(ಎರೇಬೈಲು ಮತ್ತು ಹಾನಗಲ್ಲು ಮಾಗಣಿ) ಜನಸಂಖ್ಯೆಗೆ ಅನುಗುಣವಾಗಿ 3 ಪಂಚಾಯಿತಿ ಸ್ಥಾನಗಳನ್ನು ನೀಡಲಾಗಿದೆ. ಈ 3 ಸ್ಥಾನಗಳಲ್ಲಿ 2(ಶೇ.66.67) ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿವೆ. ಈ 2 ಮಹಿಳಾ ಸ್ಥಾನಗಳನ್ನು 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದರೆ, ಉಳಿದ 1 ಸ್ಥಾನಕ್ಕೆ 3 ಮಹಿಳೆಯರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನಲ್ಲಿ 2 ಮಹಿಳಾ ಸ್ಥಾನಗಳಿಗೆ 4 ಮಹಿಳೆಯರು ಸ್ಪರ್ಧಿಸಿದಂತಾಗುತ್ತದೆ. ಆದರೆ ಸಾಮಾನ್ಯ 1 ಸ್ಥಾನಕ್ಕೆ 4ಪುರುಷರು ಸ್ಪರ್ಧಿಸಿರುತ್ತಾರೆ(ನೋಡಿ ಕೋಷ್ಟಕ-5.1, 5.2 ಮತ್ತು 5.4).

ಹೊಸೂರು ಗ್ರಾಮಪಂಚಾಯಿತಿಯ 10 ಸ್ಥಾನಗಳಲ್ಲಿ 5 ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿವೆ. ಈ 5 ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದರೆ, ಉಳಿದ 4 ಸ್ಥಾನಗಳಿಗೆ 10 ಮಹಿಳೆಯರು ಸ್ಪರ್ಧಿಸಿದ್ದಾರೆ. ಒಟ್ಟಾರೆಯಾಗಿ 5 ಮಹಿಳಾ ಸ್ಥಾನಗಳಿಗೆ 11 ಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸಿದಂತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಯ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.2.9ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಹಾಗೆಯೇ 5 ಸಾಮಾನ್ಯ ಸ್ಥಾನಗಳಿಗೆ 12 ಪುರುಷರು ಸ್ಪರ್ಧಿಸಿದಂತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಯ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.3.1ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಹೊಸೂರು ಗ್ರಾಮಪಂಚಾಯಿತಿಯಲ್ಲಿ ಚುನಾವಣೆ ಉಮೇದುವಾರಿಕೆ ಸ್ಪರ್ಧೆಯಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣ ಶೇ.0.2ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಈ ಗ್ರಾಮಪಂಚಾಯಿತಿಯ ಎಲ್ಲಾ 10(ಮಹಿಳಾ ಮತ್ತು ಪುರುಷ ಮೀಸಲು) ಸ್ಥಾನಗಳಿಗೆ 23 ಅಭ್ಯರ್ಥಿಗಳ ಸ್ಪರ್ಧಿಸಿರುವುದು ಕಂಡುಬರುತ್ತದೆ. ಆದ್ದರಿಂದ ಈ ಪಂಚಾಯಿತಿಯ ಒಟ್ಟು ಜನಸಂಖ್ಯೆಯಲ್ಲಿ ಶೇ.6ರಷ್ಟು ಅಭ್ಯರ್ಥಿಗಳ ಸ್ಪರ್ಧೆ ಇರುವುದು ಕಂಡುಬರುತ್ತದೆ. ಒಟ್ಟಾರೆ ಹೊಸೂರು ಗ್ರಾಮಪಂಚಾಯಿತಿಯಲ್ಲಿ ಮಹಿಳೆ ಮತ್ತು ಪುರುಷರ ಸ್ಪರ್ಧೆಯ

ಪ್ರಮಾಣ ಹೆಚ್ಚು ಕಡಿಮೆ ಸಮ ಕಂಡುಬಂದರೂ, ಮಹಿಳೆಯರ ಉಮೇದುವಾರಿಕೆ ಸ್ವನಿರ್ಧಾರದಿಂದ ಪಡೆದಿದ್ದಲ್ಲ. ಅದು ರಾಜಕೀಯ ಹಿತಾಸಕ್ತಿ ಅಥವಾ ಕುಟುಂಬದ ಪುರುಷರ ಒತ್ತಾಯ ಅಥವಾ ಓಲೈಕೆಯಿಂದ ಪಡೆದಿರುವುದಾಗಿ ಕ್ಷೇತ್ರ ಅಧ್ಯಯನದಿಂದ ತಿಳಿದುಬಂದಿದೆ. ಶಾಸನಾತ್ಮಕವಾಗಿ ನೀಡಿರುವ ಮಹಿಳಾ ಮೀಸಲಾತಿಯಿಂದಾಗಿ ಪಂಚಾಯಿತಿಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಕಂಡುಬರುತ್ತಿದೆಯೇ ವಿನಾ ವಾಸ್ತವದಲ್ಲಿ ಮಹಿಳಾಸ್ಪರ್ಧೆ ಪುರುಷರ ಸ್ಪರ್ಧೆಯಾಗಿಯೇ ಕಂಡುಬರುತ್ತದೆ. ಆದ್ದರಿಂದ ಹೊಸೂರು ಗ್ರಾಮಪಂಚಾಯಿತಿಯಲ್ಲಿ ಮಹಿಳಾಸ್ಪರ್ಧೆ ಗೌಣವಾಗಿ ಕಂಡುಬರುತ್ತದೆ. ಹೀಗಾಗಿ ಈ ಪಂಚಾಯಿತಿಯಲ್ಲಿ ಮಹಿಳೆಯರು ಸಬಲೀಕರಣ ಕಂಡುಬರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

ನಾಗೇನಹಳ್ಳಿ ಗ್ರಾಮಪಂಚಾಯಿತಿ: 2001ರ ಜನಸಂಖ್ಯೆಗೆ ಅನುಗುಣವಾಗಿ ಈ ಗ್ರಾಮಪಂಚಾಯಿತಿಯಲ್ಲಿ ನಾಲ್ಕು ವಾರ್ಡ್‌ಗಳೆ ರಚನೆ ಹಾಗೂ ಸ್ಥಾನಗಳನ್ನು ಹಂಚಿಕೆ ಮಾಡಲಾಗಿದೆ. ಈ ನಾಲ್ಕು ವಾರ್ಡ್‌ಗಳು ಈ ಪಂಚಾಯಿತಿಯ ಚುನಾವಣಾ ಕ್ಷೇತ್ರಗಳಾಗಿವೆ. ಈ ಗ್ರಾಮಪಂಚಾಯಿತಿಯ ನಾಗೇನಹಳ್ಳಿ ಗ್ರಾಮಕ್ಕೆ ಕಂದಾಯ ಗ್ರಾಮವಲ್ಲದ ಬೆನಕಕಾಪುರ ಗ್ರಾಮವನ್ನು ಸೇರಿಸಿ, ನಾಗೇನಹಳ್ಳಿಯನ್ನು ಎರಡು ವಾರ್ಡ್‌ಗಳನ್ನಾಗಿ ರಚನೆ ಮಾಡಲಾಗಿದೆ. ನಾಗೇನಹಳ್ಳಿ ಒಂದನೇ ವಾರ್ಡ್‌ಗೆ 4 ಸ್ಥಾನಗಳು ಮತ್ತು ಎರಡನೇ ವಾರ್ಡ್‌ಗೆ 6 ಸ್ಥಾನಗಳನ್ನು ಹಂಚಿಕೆ ಮಾಡಲಾಗಿದೆ. ಈ ಎರಡು ವಾರ್ಡ್‌ಗಳಲ್ಲಿ ಕ್ರಮವಾಗಿ ಶೇ.50(2+3=5)ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಈ ಎರಡು ವಾರ್ಡ್‌ನ ಮಹಿಳಾ ಮೀಸಲು 5 ಸ್ಥಾನಗಳಿಗೆ 12 ಮಹಿಳೆಯರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.3ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಈ ಎರಡು ವಾರ್ಡ್‌ಗಳ ಸಾಮಾನ್ಯ(ಸಾಮಾನ್ಯ ಮತ್ತು ಮೀಸಲು) 5 ಸ್ಥಾನಗಳಿಗೆ 13 ಪುರುಷರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.3.2ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ವಾರ್ಡ್‌ನಲ್ಲಿ ಪುರುಷರಿಗಿಂತ ಮಹಿಳಾ ಸ್ಪರ್ಧೆಯ ಪ್ರಮಾಣ ಶೇ.0.2ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಹಾಗೆಯೇ ಈ ಪಂಚಾಯಿತಿಯ ಮೂರನೇ ವಾರ್ಡ್ ಬಸವನದುರ್ಗ ಜನಸಂಖ್ಯೆಗೆ ಅನುಗುಣವಾಗಿ 4 ಸ್ಥಾನಗಳನ್ನು ನೀಡಲಾಗಿದೆ. ಈ 4 ಸ್ಥಾನಗಳಲ್ಲಿ 1(ಶೇ.25) ಸ್ಥಾನ ಮಹಿಳಾ ಮೀಸಲು ಸ್ಥಾನವಾಗಿದೆ. ಈ ಮಹಿಳಾ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.0.1ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಆದರೆ ಸಾಮಾನ್ಯ 3 ಸ್ಥಾನಕ್ಕೆ 11 ಪುರುಷರು ಸ್ಪರ್ಧಿಸಿರುತ್ತಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.4ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ವಾರ್ಡ್‌ನಲ್ಲಿ ಪುರುಷರಿಗಿಂತ ಮಹಿಳಾ ಸ್ಪರ್ಧೆಯ ಪ್ರಮಾಣ ಶೇ.3.9ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಈ ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 11 ಅಭ್ಯರ್ಥಿಗಳಲ್ಲಿ ಒಬ್ಬ ಮಹಿಳಾ ಅಭ್ಯರ್ಥಿ ಇರುವುದು ವಿಶೇಷವಾಗಿದೆ. ಈ ಪಂಚಾಯಿತಿಯ ನಾಲ್ಕನೇ ವಾರ್ಡ್ ಬೆಳಗೋಡು(ಕಳ್ಳಿರಾಂಪುರ ಮತ್ತು ಕಾಳಘಟ್ಟ) ಜನಸಂಖ್ಯೆಗೆ ಅನುಗುಣವಾಗಿ 1 ಪಂಚಾಯಿತಿ ಸ್ಥಾನಗಳನ್ನು ನೀಡಲಾಗಿದೆ. ಈ 1 ಸ್ಥಾನವು ಸಾಮಾನ್ಯ ಮೀಸಲು ಸ್ಥಾನವಾಗಿದೆ. ಈ

1 ಸಾಮಾನ್ಯ ಸ್ಥಾನಕ್ಕೆ 2 ಪುರುಷರು ಸ್ಪರ್ಧಿಸಿರುತ್ತಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.2.8ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ(ನೋಡಿ ಕೋಷ್ಟಕ-5.1, 5.2 ಮತ್ತು 5.4).

ನಾಗೇನಹಳ್ಳಿ ಗ್ರಾಮಪಂಚಾಯಿತಿಯ 15 ಸ್ಥಾನಗಳಲ್ಲಿ 6(ಶೇ.40) ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿವೆ. ಈ 6 ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದರೆ, ಹೀಗಾಗಿ ಉಳಿದ 5 ಸ್ಥಾನಗಳಿಗೆ 12 ಮಹಿಳೆಯರು ಸ್ಪರ್ಧಿಸಿದ್ದಾರೆ. ಒಟ್ಟಾರೆಯಾಗಿ 6 ಮಹಿಳಾ ಸ್ಥಾನಗಳಿಗೆ 13 ಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸಿದಂತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಯ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.2.6ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಹಾಗೆಯೇ 9 ಸಾಮಾನ್ಯ ಸ್ಥಾನಗಳಿಗೆ 26 ಪುರುಷರು ಸ್ಪರ್ಧಿಸಿರುತ್ತಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.7.9ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ಗ್ರಾಮಪಂಚಾಯಿತಿಯ ಎಲ್ಲಾ 15(ಮಹಿಳಾ ಮತ್ತು ಪುರುಷ ಮೀಸಲು) ಸ್ಥಾನಗಳಿಗೆ 39 ಅಭ್ಯರ್ಥಿಗಳ ಸ್ಪರ್ಧಿಸಿರುವುದು ಕಂಡುಬರುತ್ತದೆ. ಆದ್ದರಿಂದ ಈ ಪಂಚಾಯಿತಿಯ ಒಟ್ಟ ಜನಸಂಖ್ಯೆಯಲ್ಲಿ ಶೇ.9.9ರಷ್ಟು ಅಭ್ಯರ್ಥಿಗಳ ಸ್ಪರ್ಧೆ ಇರುವುದು ಕಂಡುಬರುತ್ತದೆ. ಈ ಪಂಚಾಯಿತಿಯಲ್ಲಿ ಮಹಿಳೆಯರು ರಾಜಕೀಯ ಹಿತಾಸಕ್ತಿ ಅಥವಾ ಕುಟುಂಬ ಪುರುಷರ ಒತ್ತಾಯ ಅಥವಾ ಓಲೈಕೆಯಿಂದ ಚುನಾವಣಾ ಉಮೇದುವಾರಿಕೆ ಪಡೆದಿರುವುದರಿಂದ ಸ್ಪರ್ಧೆಯ ಪ್ರಮಾಣದಲ್ಲಿ ಪುರುಷರಿಗಿಂತ ಶೇ.5.5ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಚುನಾವಣಾ ಉಮೇದುವಾರಿಕೆಯಲ್ಲಿ ಪುರುಷರ ಮಧ್ಯಸ್ಥಿಕೆ ಹೆಚ್ಚಿರುವುದರಿಂದ ಈ ಗ್ರಾಮಪಂಚಾಯಿತಿಯಲ್ಲಿ ಮಹಿಳಾಸ್ಪರ್ಧೆ ಗೌಣವಾಗಿ ಕಂಡುಬರುತ್ತದೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮಹಿಳೆಯರು ಸಬಲೀಕರಣ ಕಂಡುಬರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಹೊಸೂರು ಗ್ರಾಮಪಂಚಾಯಿತಿಯಲ್ಲಿ ಚುನಾವಣಾ ಉಮೇದುವಾರಿಕೆಯಲ್ಲಿ ಶೇ.3.1ರಷ್ಟು ಪುರುಷ ಮತ್ತು ಶೇ.2.9ರಷ್ಟು ಮಹಿಳಾಸ್ಪರ್ಧೆ ಇರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಹೊಸೂರು ಗ್ರಾಮಪಂಚಾಯಿತಿಯ ಒಟ್ಟು ಜನಸಂಖ್ಯೆಯಲ್ಲಿ ಶೇ.6ರಷ್ಟು ಚುನಾವಣಾ ಉಮೇದುವಾರಿಕೆಯ ಸ್ಪರ್ಧೆ ಕಂಡುಬರುತ್ತದೆ. ಆದರೆ ನಾಗೇನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಶೇ.7.9ರಷ್ಟು ಪುರುಷ ಮತ್ತು ಶೇ.2.6ರಷ್ಟು ಮಹಿಳಾಸ್ಪರ್ಧೆ ಇರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ನಾಗೇನಹಳ್ಳಿ ಗ್ರಾಮಪಂಚಾಯಿತಿಯ ಒಟ್ಟು ಜನಸಂಖ್ಯೆಯಲ್ಲಿ ಶೇ.10ರಷ್ಟು ಚುನಾವಣಾ ಉಮೇದುವಾರಿಕೆಯ ಸ್ಪರ್ಧೆ ಕಂಡುಬರುತ್ತದೆ. ಈ ಗ್ರಾಮಪಂಚಾಯಿತಿಗಳಲ್ಲಿನ ಚುನಾವಣಾ ಉಮೇದುವಾರಿಕೆಯ ಸ್ಪರ್ಧೆಯ ಪ್ರಮಾಣವನ್ನು ಪರಸ್ಪರ ಹೋಲಿಕೆ ಮಾಡಿ ನೋಡಿದಾಗ, ಹೊಸೂರು ಗ್ರಾಮಪಂಚಾಯಿತಿಗಿಂತ ನಾಗೇನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.0.3ರಷ್ಟು ಕಡಿಮೆ ಮತ್ತು ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.4.8ರಷ್ಟು ಹೆಚ್ಚು ಇರುವುದು ಕಂಡುಬರುತ್ತದೆ. ಆದ್ದರಿಂದ ನಾಗೇನಹಳ್ಳಿ ಗ್ರಾಮಪಂಚಾಯಿತಿಗಿಂತ ಹೊಸೂರು ಗ್ರಾಮಪಂಚಾಯಿತಿಯಲ್ಲಿ ಚುನಾವಣಾ ಉಮೇದುವಾರಿಕೆಯಲ್ಲಿ ಮಹಿಳಾಸ್ಪರ್ಧೆ ಸ್ವಲ್ಪ ಉತ್ತಮವಾಗಿರುವುದು ಕಂಡುಬರುತ್ತದೆ. ಆದರೆ ಈ ಸ್ಪರ್ಧೆಯ ಪ್ರಮಾಣ ತುಂಬಾ ಕಡಿಮೆ ಎನ್ನಬಹುದು.

ಮಲೆನಾಡು ಗ್ರಾಮಪಂಚಾಯಿತಿಗಳು

ಬೇಡ್ಕಣಿ ಗ್ರಾಮಪಂಚಾಯಿತಿ: 2001ರ ಜನಸಂಖ್ಯೆಗೆ ಅನುಗುಣವಾಗಿ ಈ ಗ್ರಾಮಪಂಚಾಯಿತಿಯಲ್ಲಿ ನಾಲ್ಕು ವಾರ್ಡ್‌ಗಳನ್ನು ರಚನೆ ಹಾಗೂ ಸ್ಥಾನಗಳನ್ನು ಹಂಚಿಕೆ ಮಾಡಲಾಗಿದ್ದು, ಇವು ಈ ಪಂಚಾಯಿತಿಯ ಚುನಾವಣಾ ಕ್ಷೇತ್ರಗಳಾಗಿವೆ. ಈ ಗ್ರಾಮಪಂಚಾಯಿತಿಯ ಒಂದನೇ ವಾರ್ಡ್ ಬೇಡ್ಕಣಿಗೆ 2001ರ ಜನಸಂಖ್ಯೆಗೆ ಅನುಗುಣವಾಗಿ 5 ಸ್ಥಾನಗಳನ್ನು ಹಂಚಿಕೆ ಮಾಡಲಾಗಿದೆ. ಇದರಲ್ಲಿ 3(ಶೇ.60) ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿವೆ. ಈ ಮಹಿಳಾ ಮೀಸಲು 3 ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದೆ. ಉಳಿದ 2 ಸ್ಥಾನಗಳಿಗೆ 7(ಶೇ.1.5) ಮಹಿಳೆಯರು ಸ್ಪರ್ಧಿಸಿದ್ದಾರೆ. ಒಟ್ಟಾರೆಯಾಗಿ ಮಹಿಳಾ ಮೀಸಲು 3 ಸ್ಥಾನಗಳಿಗೆ 8 ಮಹಿಳೆಯರು ಸ್ಪರ್ಧಿಸಿದಂತಾಗುತ್ತದೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.2.6ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಸಾಮಾನ್ಯ 2 ಸ್ಥಾನಗಳಿಗೆ 6(ಶೇ.1.3) ಪುರುಷರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನಲ್ಲಿ ಪುರುಷರಿಗಿಂತ ಮಹಿಳೆಯರ ಸ್ಪರ್ಧೆಯ ಪ್ರಮಾಣ ಶೇ.1.3ರಷ್ಟು ಹೆಚ್ಚಿರುವುದು ಕಂಡುಬರುತ್ತದೆ. ಎರಡನೇ ವಾರ್ಡ್ ತ್ಯಾರ್ಸಿ ಗ್ರಾಮದ ಜನಸಂಖ್ಯೆಗೆ ಅನುಗುಣವಾಗಿ 4 ಸ್ಥಾನಗಳನ್ನು ನೀಡಲಾಗಿದ್ದು, ಇದರಲ್ಲಿ 3(ಶೇ.75) ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿವೆ. ಮಹಿಳಾ ಮೀಸಲು 3 ಸ್ಥಾನಕ್ಕೆ 6 ಮಹಿಳೆಯರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.2.2ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಸಾಮಾನ್ಯ 1 ಸ್ಥಾನಗಳಿಗೆ 4 ಪುರುಷರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.0.5ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ವಾರ್ಡ್‌ನಲ್ಲಿ ಪುರುಷರಿಗಿಂತ ಮಹಿಳೆಯರ ಸ್ಪರ್ಧೆಯ ಪ್ರಮಾಣ ಶೇ.1.7ರಷ್ಟು ಹೆಚ್ಚು ಇರುವುದು ಕಂಡುಬರುತ್ತದೆ. ಹಾಗೆಯೇ ಈ ಪಂಚಾಯಿತಿಯ ಮೂರನೇ ವಾರ್ಡ್ ಭಾನ್ಕುಳಿ ಗ್ರಾಮದ ಜನಸಂಖ್ಯೆಗೆ ಅನುಗುಣವಾಗಿ 1 ಸ್ಥಾನವನ್ನು ನೀಡಲಾಗಿದೆ. ಇದು ಸಾಮಾನ್ಯ ಸ್ಥಾನವಾಗಿದೆ. ಈ ಸಾಮಾನ್ಯ 1 ಸ್ಥಾನಕ್ಕೆ 3 ಪುರುಷರು ಸ್ಪರ್ಧಿಸಿರುತ್ತಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.1.7ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ಪಂಚಾಯಿತಿಯ ನಾಲ್ಕನೇ ವಾರ್ಡ್ ಮುತ್ತಿಗೆ ಗ್ರಾಮದ ಜನಸಂಖ್ಯೆಗೆ ಅನುಗುಣವಾಗಿ 1 ಸ್ಥಾನಗಳನ್ನು ನೀಡಲಾಗಿದೆ. ಈ 1 ಸ್ಥಾನವು ಸಾಮಾನ್ಯ ಮೀಸಲು ಸ್ಥಾನವಾಗಿದ್ದು, ಅದು ಅವಿರೋಧವಾಗಿ ಆಯ್ಕೆಯಾಗಿದೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.0.3ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಒಬ್ಬ ಮಹಿಳಾ ಅಭ್ಯರ್ಥಿ ಸ್ಪರ್ಧಿಸದೇ ಇರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–5.1, 5.2 ಮತ್ತು 5.4).

ಒಟ್ಟಾರೆಯಾಗಿ ಬೇಡ್ಕಣಿ ಗ್ರಾಮಪಂಚಾಯಿತಿ 11 ಸ್ಥಾನಗಳಲ್ಲಿ 6(ಶೇ.55) ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿವೆ. ಈ 6 ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದೆ. ಉಳಿದ 5 ಸ್ಥಾನಗಳಿಗೆ 10 ಮಹಿಳೆಯರು ಸ್ಪರ್ಧಿಸಿರುತ್ತಾರೆ. ಆದ್ದರಿಂದ ಈ ಪಂಚಾಯಿತಿಯ ಮಹಿಳಾ

ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.2.3ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಒಟ್ಟಾರೆಯಾಗಿ 6 ಮಹಿಳಾ ಸ್ಥಾನಗಳಿಗೆ 11 ಮಹಿಳೆಯರು ಸ್ಪರ್ಧಿಸಿರುತ್ತಾರೆ. ಆದ್ದರಿಂದ ಈ ಪಂಚಾಯಿತಿಯ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.3ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಹಾಗೆಯೇ 5 ಸಾಮಾನ್ಯ ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದರೆ, ಉಳಿದ 4 ಸ್ಥಾನಗಳಿಗೆ 11 ಪುರುಷರು ಸ್ಪರ್ಧಿಸಿರುತ್ತಾರೆ. ಆದ್ದರಿಂದ ಈ ಪಂಚಾಯಿತಿಯ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.2ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಒಟ್ಟಾರೆಯಾಗಿ 5 ಸಾಮಾನ್ಯ(ಪುರುಷ) ಸ್ಥಾನಗಳಿಗ 12 ಪುರುಷರು ಸ್ಪರ್ಧಿಸಿರುತ್ತಾರೆ. ಆದ್ದರಿಂದ ಈ ಪಂಚಾಯಿತಿಯ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.2.8ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಬೇಡ್ಕಣಿ ಗ್ರಾಮಪಂಚಾಯಿತಿಯಲ್ಲಿ ಚುನಾವಣೆ ಉಮೇದುವಾರಿಕೆ ಸ್ಪರ್ಧೆಯಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣ ಶೇ.0.2ರಷ್ಟು ಹೆಚ್ಚು ಇರುವುದು ಕಂಡುಬರುತ್ತದೆ. ಈ ಪ್ರಮಾಣ ತುಂಬಾ ಕಡಿಮೆ ಎನ್ನಬಹುದು. ಈ ಪಂಚಾಯಿತಿಯಲ್ಲಿ ಮಹಿಳೆಯರು ರಾಜಕೀಯ ಹಿತಾಸಕ್ತಿ ಅಥವಾ ಕುಟುಂಬ ಪುರುಷರ ಒತ್ತಾಯ ಅಥವಾ ಓಲೈಕೆಯಿಂದ ಚುನಾವಣಾ ಉಮೇದುವಾರಿಕೆ ಪಡೆದಿರುವುದು ಸಾಬೀತಾಗಿದೆ. ಉಮೇದುವಾರಿಕೆ ಸ್ಪರ್ಧೆಯ ಪುರುಷ ಮಧ್ಯಸ್ಥಿಕೆ ಇರುವುದರಿಂದ ಅದು ವಾಸ್ತವದಲ್ಲಿ ಪುರುಷಸ್ಪರ್ಧೆಯಾಗಿ ಕಂಡುಬರುತ್ತದೆ. ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಲಾಗಿದ್ದರೆ ಅದು ಪ್ರಾತಿನಿಧ್ಯಕ್ಕಷ್ಟೇ ಸೀಮಿತವಾಗಿದೇ ಹೊರತು ಅವರು ಸ್ವಇಚ್ಚೆಯಿಂದ ಚುನಾವಣೆ ಸ್ಪರ್ಧೆ ಪಡೆಯುವುದಕ್ಕಲ್ಲ ಎಂಬ ಸಂಗತಿ ಈ ಅಧ್ಯಯನದಿಂದ ಕಂಡುಬಂದಿದೆ. ಪುರುಷರ ನಿಯಂತ್ರಣಕ್ಕೆ ಒಳಪಟ್ಟು, ಸ್ವನಿರ್ಧಾರವಿಲ್ಲದ ಚುನಾವಣೆ ಉಮೇದುವಾರಿಕೆಯ ಸ್ಪರ್ಧೆಯಲ್ಲಿ ಮಹಿಳೆ ಗೌಣವಾಗುತ್ತಾಳೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮಹಿಳೆಯರ ಸಬಲೀಕರಣ ಕಂಡುಬರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ: ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮಲೆನಾಡಿನ ಕೋಲಸಿರ್ಸಿ ಗ್ರಾಮಪಂಚಾಯಿತಿಯಲ್ಲಿ ನಾಲ್ಕು ವಾರ್ಡ್‌ಗಳನ್ನು ರಚನೆ ಮಾಡಲಾಗಿದ್ದು, ಇವು ಈ ಪಂಚಾಯಿತಿಯ ಚುನಾವಣಾ ಕ್ಷೇತ್ರಗಳಾಗಿವೆ. ಈ ಗ್ರಾಮಪಂಚಾಯಿತಿಯ ಒಂದನೇ ವಾರ್ಡ್ ಕೋಲಸಿರ್ಸಿ(ಬಳಗುಳಿ ಮತ್ತು ಹೆಗ್ಗದ್ದೆ)ಗೆ 2001 ಜನಸಂಖ್ಯೆಗೆ ಅನುಗುಣವಾಗಿ 5 ಸ್ಥಾನಗಳನ್ನು ಹಂಚಿಕೆ ಮಾಡಲಾಗಿದೆ. ಇದರಲ್ಲಿ 3(ಶೇ.60) ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ. ಈ ವಾರ್ಡ್‌ನ ಮಹಿಳಾ ಮೀಸಲು 3 ಸ್ಥಾನಗಳಿಗೆ 9 ಮಹಿಳೆಯರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.2.8ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಸಾಮಾನ್ಯ 2 ಸ್ಥಾನಗಳಿಗೆ 15 ಪುರುಷರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.3.5ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ವಾರ್ಡ್‌ನಲ್ಲಿ ಪುರುಷರ ಸ್ಪರ್ಧೆಯ ಪ್ರಮಾಣ ಮಹಿಳೆಯರಿಗಿಂತ ಶೇ.0.7ರಷ್ಟು ಹೆಚ್ಚು ಇರುವುದು ಕಂಡುಬರುತ್ತದೆ. ಎರಡನೇ ವಾರ್ಡ್ ಅವರಗುಪ್ಪ ಗ್ರಾಮದ ಜನಸಂಖ್ಯೆಗೆ ಅನುಗುಣವಾಗಿ 4 ಸ್ಥಾನಗಳನ್ನು ನೀಡಲಾಗಿದ್ದು, ಇದರಲ್ಲಿ 2(ಶೇ.50) ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿವೆ. ಮಹಿಳಾ ಮೀಸಲು 2

ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿರುತ್ತದೆ. ಉಳಿದ 1 ಸ್ಥಾನಕ್ಕೆ 2 ಮಹಿಳೆಯರು ಸ್ಪರ್ಧಿಸಿದ್ದಾರೆ. ಒಟ್ಟಾರೆ ಈ ವಾರ್ಡ್‌ನಲ್ಲಿ 2 ಮಹಿಳಾ ಸ್ಥಾನಕ್ಕೆ 3 ಮಹಿಳೆಯರು ಸ್ಪರ್ಧಿಸಿದಂತಾಗುತ್ತದೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.0.7ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಹಾಗೇಯೇ ಸಾಮಾನ್ಯ 2 ಸ್ಥಾನಗಳಿಗೆ 11 ಪುರುಷರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.2.8ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ವಾರ್ಡ್‌ನಲ್ಲಿ ಪುರುಷರ ಸ್ಪರ್ಧೆಯ ಪ್ರಮಾಣ ಮಹಿಳೆಯರಿಗಿಂತ ಶೇ.2.1ರಷ್ಟು ಹೆಚ್ಚು ಇರುವುದು ಕಂಡುಬರುತ್ತದೆ. ಹಾಗೆಯೇ ಈ ಪಂಚಾಯಿತಿಯ ಮೂರನೇ ವಾರ್ಡ್ ಕುಣಿಜಿ(ಕಸ್ತೂರ, ಬಂದಿಸರ ಮತ್ತು ಹಲಗಡಿಕೊಪ್ಪ) ಗ್ರಾಮಗಳ ವ್ಯಾಪಿಯ ಜನಸಂಖ್ಯೆಗೆ ಅನುಗುಣವಾಗಿ 2 ಪಂಚಾಯಿತಿ ಸ್ಥಾನವನ್ನು ನೀಡಲಾಗಿದ್ದು, ಇದರಲ್ಲಿ 1(ಶೇ.50) ಸ್ಥಾನ ಮಹಿಳಾ ಮೀಸಲು ಸ್ಥಾನವಾಗಿದೆ. ಈ 1 ಸ್ಥಾನಕ್ಕೆ 2ಮಹಿಳೆಯರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.0.4ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಹಾಗೆಯೇ ಸಾಮಾನ್ಯ 1 ಸ್ಥಾನಕ್ಕೆ 5 ಪುರುಷರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.1ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ವಾರ್ಡ್‌ನಲ್ಲಿ ಪುರುಷರ ಸ್ಪರ್ಧೆಯ ಪ್ರಮಾಣ ಮಹಿಳೆಯರಿಗಿಂತ ಶೇ.0.6ರಷ್ಟು ಹೆಚ್ಚು ಇರುವುದು ಕಂಡುಬರುತ್ತದೆ. ಈ ಪಂಚಾಯಿತಿಯ ನಾಲ್ಕನೇ ವಾರ್ಡ್ ಮಂಡ್ಲಿಕೊಪ್ಪ(ತುಂಬರಗೋಡು ಮತ್ತು ಹೆಗ್ಗೋಡುಮನೆ) ಗ್ರಾಮಗಳ ವ್ಯಾಪ್ತಿಯ ಜನಸಂಖ್ಯೆಗೆ ಅನುಗುಣವಾಗಿ 2 ಪಂಚಾಯಿತಿ ಸ್ಥಾನಗಳನ್ನು ನೀಡಲಾಗಿದ್ದು, ಇದರಲ್ಲಿ 1(ಶೇ.50) ಸ್ಥಾನವು ಮಹಿಳಾ ಮೀಸಲು ಸ್ಥಾನವಾಗಿದೆ. ಈ 1 ಸ್ಥಾನಕ್ಕೆ 5 ಮಹಿಳೆಯರು ಸ್ಪರ್ಧಿಸಿರುತ್ತಾರೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.1.2ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಹಾಗೆಯೇ ಸಾಮಾನ್ಯ 1 ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿರುತ್ತದೆ. ಆದ್ದರಿಂದ ಈ ವಾರ್ಡ್‌ನಲ್ಲಿ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.0.2ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ವಾರ್ಡ್‌ನಲ್ಲಿ ಮಹಿಳಾ ಸ್ಪರ್ಧೆಯ ಪ್ರಮಾಣ ಪುರುಷರಿಗಿಂತ ಶೇ.1ರಷ್ಟು ಹೆಚ್ಚು ಇರುವುದು ಕಂಡುಬರುತ್ತದೆ.(ನೋಡಿ ಕೋಷ್ಟಕ–5.1, 5.2 ಮತ್ತು 5.4).

ಒಟ್ಟಾರೆಯಾಗಿ ಕೋಲಸಿರ್ಸಿ ಗ್ರಾಮಪಂಚಾಯಿತಿಯ 13 ಸ್ಥಾನಗಳಲ್ಲಿ 7(ಶೇ.53.84) ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿವೆ. ಈ 7 ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದರೆ, ಉಳಿದ 6 ಸ್ಥಾನಗಳಿಗೆ 18 ಮಹಿಳೆಯರು ಸ್ಪರ್ಧಿಸಿರುತ್ತಾರೆ. ಒಟ್ಟಾರೆ ಈ ವಾರ್ಡ್‌ನಲ್ಲಿ 7 ಮಹಿಳಾ ಸ್ಥಾನಕ್ಕೆ 19 ಮಹಿಳೆಯರು ಸ್ಪರ್ಧಿಸಿದಂತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.5.1ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಹಾಗೆಯೇ 6 ಸಾಮಾನ್ಯ ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದರೆ, ಉಳಿದ 5 ಸ್ಥಾನಗಳಿಗೆ 31 ಪುರುಷರು ಸ್ಪರ್ಧಿಸಿರುತ್ತಾರೆ. ಒಟ್ಟಾರೆ ಈ ಪಂಚಾಯಿತಿಯ 6 ಸಾಮಾನ್ಯ(ಪುರಷ) ಸ್ಥಾನಕ್ಕೆ 32 ಪರುಷರು ಸ್ಪರ್ಧಿಸಿದಂತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಪುರುಷ ಉಮೇದುವಾರಿಕೆ

ಸ್ಪರ್ಧೆಯಲ್ಲಿ ಶೇ.7.6ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಕೋಲಸಿರ್ಸಿ ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರಿಗಿಂತ ಪುರುಷ ಸ್ಪರ್ಧೆಯ ಪ್ರಮಾಣ ಶೇ.2.5ರಷ್ಟು ಹೆಚ್ಚು ಇರುವುದು ಕಂಡುಬರುತ್ತದೆ. ಈ ಪಂಚಾಯಿತಿಯಲ್ಲಿ ಮಹಿಳೆಯರು ರಾಜಕೀಯ ಹಿತಾಸಕ್ತಿ ಅಥವಾ ಕುಟುಂಬದ ಪುರುಷರ ಒತ್ತಾಯ ಅಥವಾ ಒಲೈಕೆಯಿಂದ ಚುನಾವಣಾ ಉಮೇದುವಾರಿಕೆ ಪಡೆದಿರುವುದರಿಂದ ಸ್ಪರ್ಧೆಯ ಪ್ರಮಾಣದಲ್ಲಿ ಪುರುಷರಿಗಿಂತ ಶೇ.2.5ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಪುರುಷರ ಬಿಗಿ ಹಿಡಿತದಲ್ಲಿರುವ ಮಹಿಳೆಯರಿಗೆ ಸ್ವನಿರ್ಧಾರವಿಲ್ಲದ್ದರಿಂದ ಅವರು ಚುನಾವಣೆ ಉಮೇದುವಾರಿಕೆ ಸ್ಪರ್ಧೆಯಲ್ಲಿ ಗೌಣವಾಗಿರುವುದು ಕಂಡುಬರುತ್ತದೆ. ಈ ಕಾರಣದಿಂದ ಕೋಲಸಿರ್ಸಿ ಪಂಚಾಯಿತಿಯಲ್ಲಿ ಮಹಿಳೆಯರ ಸಬಲೀಕರಣ ಕಂಡುಬರುವುದಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ತೌಲನಿಕ ಅಧ್ಯಯನ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಬಯಲುಸೀಮೆ ಮತ್ತು ಮಲೆನಾಡುಗಳ 4 ಗ್ರಾಮಪಂಚಾಯಿಗಳಿಗೆ ಜರುಗಿದ ಚುನಾವಣೆಯಲ್ಲಿ 2001ರ ಜನಗಣತಿ ಆಧಾರದ ಮೇಲೆ ನೀಡಿದ ಮೀಸಲಾತಿ ನಿಯಮ ಪ್ರಕಾರ ಆಯಾ ಜಾತಿ, ಪಂಗಡ, ವಿವಿಧ ವರ್ಗ ಮತ್ತು ಸಾಮಾನ್ಯ ವರ್ಗಗಳು ಸೇರಿದಂತೆ ಮಹಿಳೆ ಮತ್ತು ಪುರುಷ ಸ್ಥಾನಗಳನ್ನು ಹಂಚಿಕೆ ಮಾಡಲಾಗಿದೆ. ಹೀಗೆ ಹಂಚಿಕೆಯಾದ ಪುರುಷ ಮತ್ತು ಮಹಿಳಾ ಸ್ಥಾನಗಳಿಗೆ ಉಮೇದುವಾರಿಕೆ ಪಡೆಯುವಲ್ಲಿ ಕಂಡುಬರುವ ಸ್ಪರ್ಧೆಯ ಪ್ರಮಾಣದ ಮೇರೆಗೆ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ. ಅಧ್ಯಯನದ ಉದ್ದೇಶವನ್ನು ಮಾಪನ ಮಾಡಲು 'ಉಮೇದುವಾರಿಕೆ ಸ್ಪರ್ಧೆ' ಎಂಬ ಸೂಚ್ಯಂಕದ ಪ್ರಕಾರ, ಬಯಲುಸೀಮೆ ಮತ್ತು ಮಲೆನಾಡು ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರ ಸ್ಪರ್ಧೆ ಪ್ರಮಾಣವನ್ನು ಹಾಗೂ ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸುವ ಪುರುಷರ ಸ್ಪರ್ಧೆಯ ಪ್ರಮಾಣವನ್ನು ಪ್ರತ್ಯೇಕವಾಗಿ ಮತ್ತು ಪರಸ್ಪರ ಹೋಲಿಕೆ ಮಾಡಿ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ.

ಬಯಲುಸೀಮೆಯ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಿಗೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಗೆ ಚುನಾವಣೆಯಲ್ಲಿ 2001ರ ಜನಗಣತಿ ಪ್ರಕಾರ, ಈ ಎರಡು ಗ್ರಾಮಪಂಚಾಯಿತಿಗಳ ಜನಸಂಖ್ಯೆಗೆ ಅನುಗುಣವಾಗಿ ಒಟ್ಟು 25 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ ಶೇ.44(11)ರಷ್ಟು ಮಹಿಳಾ ಮೀಸಲು ಸ್ಥಾನಗಳಾಗಿವೆ. ಆದರೆ ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ನೋಡಿದರೆ ಮಹಿಳೆಯರಿಗೆ ಶೇ.5ರಷ್ಟು ಕಡಿಮೆ ಸ್ಥಾನಗಳು ನೀಡಿರುವುದು ಕಂಡುಬರುತ್ತದೆ. ಈ 25 ಸ್ಥಾನಗಳಿಗೆ 62 ಅಭ್ಯರ್ಥಿಗಳು ಉಮೇದುವಾರಿಕೆ ಪಡೆದಿದ್ದಾರೆ. ಇವರಲ್ಲಿ ಶೇ.39(24)ರಷ್ಟು ಮಹಿಳಾ ಉಮೇದುವಾರಿಕೆ ಇದೆ(ನೋಡಿ ಕೋಷ್ಟಕ–5.1, 5.2 ಮತ್ತು 5.4). ಈ ಮಹಿಳಾ ಮೀಸಲು ಶೇ.44(11)ರಷ್ಟು ಸ್ಥಾನಗಳಲ್ಲಿ ಶೇ.18(2)ರಷ್ಟು ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಹೀಗೆ ಅವಿರೋಧವಾಗಿ ಆಯ್ಕೆಯಾದ ಎಲ್ಲಾ(ಶೇ.18ರಷ್ಟು) ಸ್ಥಾನಗಳು ಪರಿಶಿಷ್ಟ ಮಹಿಳಾ ಮೀಸಲು ಸ್ಥಾನಗಳಾಗಿವೆ. ಉಳಿದ 9 ಸ್ಥಾನಗಳಿಗೆ 22 ಮಹಿಳೆಯರು ಸ್ಪರ್ಧಿಸಿರುತ್ತಾರೆ. ಒಟ್ಟಾರೆ 11 ಮಹಿಳಾ ಮೀಸಲು ಸ್ಥಾನಗಳಿಗೆ 24 ಮಹಿಳೆಯರು ಸ್ಪರ್ಧಿಸಿದಂತಾಗುತ್ತದೆ.

ಆದ್ದರಿಂದ ಈ ಪಂಚಾಯಿತಿಗಳಲ್ಲಿ ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ನೋಡಿದಾಗ, ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.5.4ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಹಾಗೆಯೇ ಈ ಎರಡು ಗ್ರಾಮಪಂಚಾಯಿತಿಗಳಿಗೆ ಹಂಚಿಕೆಯಾದ 14 ಸಾಮಾನ್ಯ ಸ್ಥಾನಗಳಿಗೆ 37 ಪುರುಷರು ಸ್ಪರ್ಧಿಸಿರುತ್ತಾರೆ. ಆದ್ದರಿಂದ ಈ ಪಂಚಾಯಿತಿಗಳಲ್ಲಿ ಪುರುಷ ಜನಸಂಖ್ಯೆಗೆ ಅನುಗುಣವಾಗಿ ನೋಡಿದಾಗ, ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.10.6ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ಗ್ರಾಮಪಂಚಾಯಿತಿಗಳಲ್ಲಿ ಚುನಾವಣೆ ಉಮೇದುವಾರಿಕೆ ಸ್ಪರ್ಧೆಯಲ್ಲಿ ಪುರುಷರಿಗಿಂತ ಮಹಿಳಾ ಅಭ್ಯರ್ಥಿಗಳ ಪ್ರಮಾಣ ಶೇ.6.2ರಷ್ಟು ಕಡಿಮೆ ಇದೆ. ಆದರೆ ಈ ಗ್ರಾಮಪಂಚಾಯಿತಿಗಳಲ್ಲಿ(ನಾಗೇನಹಳ್ಳಿ ಗ್ರಾಮಪಂಚಾಯಿತಿಯ 3ನೇ ವಾರ್ಡ್‌ಗೆ) ಹಂಚಿಕೆಯಾದ ಹಿಂದುಳಿದ ವರ್ಗ(ಅ) ಸಾಮಾನ್ಯ ಸ್ಥಾನದ ಉಮೇದುವಾರಿಕೆಯಲ್ಲಿ ಒಬ್ಬ ಮಹಿಳಾ ಅಭ್ಯರ್ಥಿ ಸ್ಪರ್ಧಿಸಿರುವುದು ಮಾತ್ರ ಕಂಡುಬರುತ್ತದೆ. ಆದರೆ ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸುವ ಮಹಿಳೆಯರ ಪ್ರಮಾಣ ಶೇ.0.2ರಷ್ಟು ಕಂಡುಬರುತ್ತದೆ. ಸಾಮಾನ್ಯ ಸ್ಥಾನಕ್ಕೆ ಮಹಿಳೆ ಸ್ಪರ್ಧಿಸುವುದು ಮಹಿಳಾ ಸಬಲೀಕರಣದ ನೈಜ ಸೂಚಿಯಾಗುತ್ತದೆ. ಅಂದರೆ ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸುವ ಅವಕಾಶ ಮಹಿಳೆಯರಿಗೆ ಇದ್ದರು ಅದು ಇಲ್ಲದ ಸ್ಥಿತಿಯಾಗಿದೆ. ಅಂದರೆ ಚುನಾವಣಾ ಉಮೇದುವಾರಿಕೆಯಲ್ಲಿ ಪುರುಷರಲ್ಲಿ ಕಂಡುಬರುವಷ್ಟು ಸ್ಪರ್ಧೆಯ ಪ್ರಮಾಣ ಮಹಿಳೆಯರಲ್ಲಿ ಕಂಡುಬರುತ್ತಿಲ್ಲ. ಬಯಲುಸೀಮೆ ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಚುನಾವಣಾ ಉಮೇದುವಾರಿಕೆ ಪಡೆಯುವಲ್ಲಿ ಸ್ವಾತಂತ್ರ್ಯ ಮತ್ತು ಸ್ವನಿರ್ಧಾರ ಇಲ್ಲವಾಗಿದೆ. ಅಲ್ಲದೇ ರಾಜಕೀಯ ಹಿತಾಸಕ್ತಿ ಅಥವಾ ಕುಟುಂಬ ಪುರುಷರ ಒತ್ತಾಯ ಅಥವಾ ಒಲೈಕೆಯಿಂದ ಮಹಿಳೆಯರು ಚುನಾವಣಾ ಉಮೇದುವಾರಿಕೆ ಪಡೆಯುದು ಇದಕ್ಕೆ ಪ್ರಮುಖ ಕಾರಣವಾಗಿದೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಈ ಎರಡು ಗ್ರಾಮಪಂಚಾಯಿತಿಗಳ ಚುನಾವಣಾ ಉಮೇದುವಾರಿಕೆ ಪ್ರಮಾಣವನ್ನು ತಾಲೂಕು/ಜಿಲ್ಲೆಗೆ ಹೋಲಿಸಿದಾಗ, ಹೊಸಪೇಟೆ ತಾಲೂಕು/ಬಳ್ಳಾರಿ ಜಿಲ್ಲೆ ಗ್ರಾಮಪಂಚಾಯಿತಿಗಳ ಚುನಾವಣೆಯಲ್ಲಿ ಮಹಿಳಾ ಮೀಸಲು ಸ್ಥಾನಗಳಿಗೆ ಮಹಿಳೆಯರಲ್ಲಿ ಶೇ.5.4ರಷ್ಟು ಉಮೇದುವಾರಿಕೆ ಸ್ಪರ್ಧೆ ಕಂಡುಬರುತ್ತದೆ. ಹಾಗೆಯೇ ಸಾಮಾನ್ಯ ಸ್ಥಾನಗಳಿಗೆ ಪುರುಷರಲ್ಲಿ ಶೇ.10.6ರಷ್ಟು ಉಮೇದುವಾರಿಕೆ ಸ್ಪರ್ಧೆ ಕಂಡುಬರುತ್ತದೆ. ಚುನಾವಣಾ ಉಮೇದುವಾರಿಕೆಯಲ್ಲಿ ಮಹಿಳಾ ಮತ್ತು ಪುರುಷ ಸ್ಪರ್ಧೆಯನ್ನು ಪರಸ್ಪರ ತೌಲನಿಕವಾಗಿ ನೋಡಿದಾಗ ಉಮೇದುವಾರಿಕೆಯಲ್ಲಿ ಪುರುಷರಿಗಿಂತ ಮಹಿಳಾ ಸ್ಪರ್ಧೆಯ ಪ್ರಮಾಣ ಶೇ.5.2ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಆದ್ದರಿಂದ ಹೊಸಪೇಟೆ ತಾಲೂಕು/ಬಳ್ಳಾರಿ ಜಿಲ್ಲೆಯಲ್ಲಿ ಮಹಿಳಾ ಸಬಲೀಕರಣ ಕಂಡುಬರುವುದಿಲ್ಲ.

ಮಲೆನಾಡಿನ ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಿಗೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಗೆ ಚುನಾವಣೆಯಲ್ಲಿ 2001ರ ಜನಗಣತಿ ಪ್ರಕಾರ, ಈ ಎರಡು ಗ್ರಾಮಪಂಚಾಯಿತಿಗಳ ಜನಸಂಖ್ಯೆಗೆ ಅನುಗುಣವಾಗಿ ಒಟ್ಟು 24 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 13(ಶೇ.54) ಮಹಿಳಾ ಮೀಸಲು ಸ್ಥಾನಗಳಾಗಿವೆ. ಆದರೆ ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ನೋಡಿದರೆ ಮಹಿಳೆಯರಿಗೆ ಶೇ.3ರಷ್ಟು ಹೆಚ್ಚು ಸ್ಥಾನಗಳು

ನೀಡಿರುವುದು ಕಂಡುಬರುತ್ತದೆ. ಈ ಪಂಚಾಯಿತಿಗಳಿಗೆ ಹಂಚಿಕೆಯಾದ 24 ಸ್ಥಾನಗಳಿಗೆ 79 ಅಭ್ಯರ್ಥಿಗಳು ಉಮೇದುವಾರಿಕೆ ಪಡೆದಿದ್ದಾರೆ. ಇವರಲ್ಲಿ ಶೇ.42(33)ರಷ್ಟು ಮಹಿಳಾ ಉಮೇದುವಾರಿಕೆ ಇದೆ(ನೋಡಿ ಕೋಷ್ಟಕ–5.1, 5.2 ಮತ್ತು 5.4). ಈ ಮಹಿಳಾ ಮೀಸಲು 13(ಶೇ.54) ಸ್ಥಾನಗಳಲ್ಲಿ ಶೇ.15(2)ರಷ್ಟು ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಹೀಗೆ ಅವಿರೋಧವಾಗಿ ಆಯ್ಕೆಯಾದ ಎಲ್ಲಾ(ಶೇ.15ರಷ್ಟು) ಸ್ಥಾನಗಳು ಪರಿಶಿಷ್ಟ ಮಹಿಳಾ ಮೀಸಲು ಸ್ಥಾನಗಳಾಗಿವೆ. ಉಳಿದ 11 ಮಹಿಳಾ ಮೀಸಲು ಸ್ಥಾನಗಳಿಗೆ 26 ಮಹಿಳೆಯರು ಸ್ಪರ್ಧಿಸಿದ್ದಾರೆ. ಒಟ್ಟಾರೆಯಾಗಿ 13 ಮಹಿಳಾ ಮೀಸಲು ಸ್ಥಾನಗಳಿಗೆ 33 ಮಹಿಳೆಯರು ಸ್ಪರ್ಧಿಸಿದಂತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಗಳಲ್ಲಿ ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ನೋಡಿದಾಗ ಮಹಿಳಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.9ರಷ್ಟು ಮಹಿಳಾ ಪ್ರಾತಿನಿಧ್ಯ ಕಂಡುಬರುತ್ತದೆ. ಹಾಗೆಯೇ ಈ ಎರಡು ಗ್ರಾಮಪಂಚಾಯಿತಿಗಳಿಗೆ ಹಂಚಿಕೆಯಾದ 11 ಸಾಮಾನ್ಯ ಸ್ಥಾನಗಳಲ್ಲಿ ಶೇ.18(2) ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಹೀಗೆ ಅವಿರೋಧವಾಗಿ ಆಯ್ಕೆಯಾದ ಶೇ.18ರಷ್ಟು ಸ್ಥಾನಗಳು ಹಿಂದುಳಿದ ವರ್ಗ(ಬಿ) ಸಾಮಾನ್ಯ ಸ್ಥಾನಗಳಾಗಿದ್ದು, ಮೇಲ್ವರ್ಗದ ಪುರುಷರು ಆಯ್ಕೆಯಾಗಿದ್ದಾರೆ. ಉಳಿದ 9 ಸ್ಥಾನಗಳಿಗೆ 44 ಪುರುಷರು ಸ್ಪರ್ಧಿಸಿದ್ದಾರೆ. ಒಟ್ಟಾರೆಯಾಗಿ 11 ಸಾಮಾನ್ಯ ಸ್ಥಾನಗಳಿಗೆ 46 ಪುರುಷ ಅಭ್ಯರ್ಥಿಗಳು ಸ್ಪರ್ಧಿಸಿದಂತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಗಳಲ್ಲಿ ಪುರುಷ ಜನಸಂಖ್ಯೆಗೆ ಅನುಗುಣವಾಗಿ ನೋಡಿದಾಗ ಪುರುಷ ಉಮೇದುವಾರಿಕೆ ಸ್ಪರ್ಧೆಯಲ್ಲಿ ಶೇ.10.9ರಷ್ಟು ಪುರುಷ ಪ್ರಾತಿನಿಧ್ಯ ಕಂಡುಬರುತ್ತದೆ. ಈ ಗ್ರಾಮಪಂಚಾಯಿತಿಗಳಲ್ಲಿ ಚುನಾವಣೆ ಉಮೇದುವಾರಿಕೆ ಸ್ಪರ್ಧೆಯಲ್ಲಿ ಪುರುಷರಿಗಿಂತ ಮಹಿಳಾ ಅಭ್ಯರ್ಥಿಗಳ ಪ್ರಮಾಣ ಶೇ.1.9ರಷ್ಟು ಕಡಿಮೆ ಇದೆ. ಮಲೆನಾಡು ಗ್ರಾಮಪಂಚಾಯಿತಿಗಳಿಗೆ ಹಂಚಿಕೆಯಾದ ಯಾವೊಂದು ಸಾಮಾನ್ಯ ಸ್ಥಾನಕ್ಕೆ ಯಾವೊಬ್ಬ ಮಹಿಳೆ ಸ್ಪರ್ಧಿಸಿರುವುದು ಕಂಡುಬರುವುದಿಲ್ಲ. ಮಲೆನಾಡು ಗ್ರಾಮಪಂಚಾಯಿತಿಗಳಲ್ಲಿ ಚುನಾವಣೆ ಉಮೇದುವಾರಿಕೆ ಪಡೆದುಕೊಳ್ಳುವಲ್ಲಿ ಪುರುಷರಲ್ಲಿ ಕಂಡುಬರುವಷ್ಟು ಸ್ಪರ್ಧೆಯ ಪ್ರಮಾಣ ಮಹಿಳೆಯರಲ್ಲಿ ಕಂಡುಬರುತ್ತಿಲ್ಲ. ಮಲೆನಾಡು ಗ್ರಾಮಪಂಚಾಯಿತಿಗಳಲ್ಲಿ ರಾಜಕೀಯ ಹಿತಾಸಕ್ತಿ ಅಥವಾ ಕುಟುಂಬ ಪುರುಷರ ಒತ್ತಾಯ ಅಥವಾ ಒಲ್ಮೆಕೆಗಿಂತ ವೈದಿಕ ಮತ್ತು ಪುರುಷಪ್ರಧಾನ ಲಕ್ಷಣಗಳು ಹೆಚ್ಚಾಗಿ ಕಂಡುಬರುವುದರಿಂದ ಮಹಿಳೆಯರು ಚುನಾವಣಾ ಉಮೇದುವಾರಿಕೆ ಪಡೆಯುವ ಸ್ಪರ್ಧೆಯ ಪ್ರಮಾಣದಲ್ಲಿ ಪುರುಷರಿಗಿಂತ ಹಿಂದುಳಿದಿದ್ದಾರೆ. ಆದ್ದರಿಂದ ಮಹಿಳಾ ಸಬಲೀಕರಣ ಕಂಡುಬರುವುದಿಲ್ಲ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಈ ಎರಡು ಗ್ರಾಮಪಂಚಾಯಿತಿಗಳ ಚುನಾವಣಾ ಉಮೇದುವಾರಿಕೆ ಪ್ರಮಾಣವನ್ನು ತಾಲೂಕು/ಜಿಲ್ಲೆಗೆ ಹೋಲಿಸಿದಾಗ, ಸಿದ್ದಾಪುರ ತಾಲೂಕು/ಉತ್ತರ ಕನ್ನಡ ಜಿಲ್ಲೆ ಗ್ರಾಮಪಂಚಾಯಿತಿಗಳ ಚುನಾವಣೆಯಲ್ಲಿ ಮಹಿಳಾ ಮೀಸಲು ಸ್ಥಾನಗಳಿಗೆ ಮಹಿಳೆಯರಲ್ಲಿ ಶೇ.7.6ರಷ್ಟು ಉಮೇದುವಾರಿಕೆ ಸ್ಪರ್ಧೆ ಕಂಡುಬರುತ್ತದೆ. ಹಾಗೆಯೇ ಸಾಮಾನ್ಯ ಸ್ಥಾನಗಳಿಗೆ ಪುರುಷರಲ್ಲಿ ಶೇ.10.9ರಷ್ಟು ಉಮೇದುವಾರಿಕೆ ಸ್ಪರ್ಧೆ ಕಂಡುಬರುತ್ತದೆ. ಚುನಾವಣಾ ಉಮೇದುವಾರಿಕೆಯಲ್ಲಿ ಮಹಿಳಾ ಮತ್ತು ಪುರುಷ ಸ್ಪರ್ಧೆಯ ಪ್ರಮಾಣವನ್ನು ಪರಸ್ಪರ ತೌಲನಿಕವಾಗಿ ನೋಡಿದಾಗ,

ಪುರುಷರಿಗಿಂತ ಮಹಿಳಾ ಸ್ಪರ್ಧೆಯ ಪ್ರಮಾಣ ಶೇ.3.3ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಆದ್ದರಿಂದ ಸಿದ್ದಾಪುರ ತಾಲೂಕು/ಉತ್ತರ ಕನ್ನಡ ಜಿಲ್ಲೆಯಲ್ಲಿ ಮಹಿಳಾ ಸಬಲೀಕರಣ ಕಂಡುಬರುವುದಿಲ್ಲ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ 4 ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಚುನಾವಣಾ ಉಮೇದುವಾರಿಕೆ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿದಾಗ, ರಾಜ್ಯದಲ್ಲಿ ಹಂಚಿಕೆಯಾದ ಗ್ರಾಮಪಂಚಾಯಿತಿ ಸ್ಥಾನಗಳಲ್ಲಿ ಶೇ.49ರಷ್ಟು ಸ್ಥಾನಗಳು ಮಹಿಳಾ ಮೀಸಲು ಸ್ಥಾನಗಳಾಗಿವೆ. ರಾಜ್ಯದಲ್ಲಿ ಹಂಚಿಕೆಯಾದ ಮಹಿಳಾ(ಮೀಸಲು/ಸಾಮಾನ್ಯ) ಸ್ಥಾನಗಳಲ್ಲಿ ಶೇ.16.6ರಷ್ಟು ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಹೀಗೆ ಅವಿರೋಧವಾಗಿ ಆಯ್ಕೆಯಾದ ಶೇ.16.6ರಷ್ಟು ಸ್ಥಾನಗಳು ಪರಿಶಿಷ್ಟ ಮಹಿಳಾ ಮೀಸಲು ಸ್ಥಾನಗಳಾವೆ. ಒಟ್ಟಾರೆಯಾಗಿ ರಾಜ್ಯದ ಗ್ರಾಮಪಂಚಾಯಿತಿಗಳಲ್ಲಿ ಹಂಚಿಕೆಯಾದ ಶೇ.49ರಷ್ಟು ಮಹಿಳಾ ಮೀಸಲು ಸ್ಥಾನಗಳಿಗೆ ಚುನಾವಣಾ ಉಮೇದುವಾರಿಕೆಯಲ್ಲಿ ಮಹಿಳೆಯರ ಸ್ಪರ್ಧೆ ಶೇ.14.2ರಷ್ಟು ಇರುವುದು ಕಂಡುಬರುತ್ತದೆ. ಹಾಗೆಯೇ ರಾಜ್ಯದಲ್ಲಿ ಗ್ರಾಮಪಂಚಾಯಿತಿಗಳಿಗೆ ಹಂಚಿಕೆಯಾದ ಶೇ.51ರಷ್ಟು ಸಾಮಾನ್ಯ ಸ್ಥಾನಗಳಲ್ಲಿ ಶೇ.8 ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಹೀಗೆ ಅವಿರೋಧವಾಗಿ ಆಯ್ಕೆಯಾದ ಶೇ.8 ಪುರುಷರು ಸಾಮಾನ್ಯವಾಗಿ ಮೇಲ್ವರ್ಗದವರಾಗಿದ್ದಾರೆ. ಒಟ್ಟಾರೆಯಾಗಿ ರಾಜ್ಯದ ಗ್ರಾಮಪಂಚಾಯಿತಿಗಳಲ್ಲಿ ಹಂಚಿಕೆಯಾದ ಶೇ.51ರಷ್ಟು ಸಾಮಾನ್ಯ(ಮೀಸಲು/ಸಾಮಾನ್ಯ) ಸ್ಥಾನಗಳಿಗೆ ಚುನಾವಣಾ ಉಮೇದುವಾರಿಕೆಯಲ್ಲಿ ಪರುಷರ ಸ್ಪರ್ಧೆ ಶೇ.21.9ರಷ್ಟು ಇರುವುದು ಕಂಡುಬರುತ್ತದೆ. ಹಾಗೆಯೇ ರಾಜ್ಯದಲ್ಲಿ ಗ್ರಾಮಪಂಚಾಯಿತಿಗಳಿಗೆ ಹಂಚಿಕೆಯಾದ ಶೇ.51ರಷ್ಟು ಸಾಮಾನ್ಯ(ಮೀಸಲು/ಸಾಮಾನ್ಯ) ಸ್ಥಾನಗಳಿಗೆ ಉಮೇದುವಾರಿಕೆ ಪಡೆಯುವರಲ್ಲಿ ಮಹಿಳೆಯರ ಪ್ರಮಾಣ ಶೇ.0.2ರಷ್ಟು ಇದೆ. ರಾಜ್ಯದಲ್ಲಿ ಗ್ರಾಮಪಂಚಾಯಿತಿಗಳ ಚುನಾವಣೆ ಉಮೇದುವಾರಿಕೆಯ ಸ್ಪರ್ಧೆಯಲ್ಲಿ ಪರುಷ ಮತ್ತು ಮಹಿಳೆಯರ ಸ್ಪರ್ಧೆಯ ಪ್ರಮಾಣವನ್ನು ಪರಸ್ಪರ ತೌಲನಿಕವಾಗಿ ನೋಡಿದಾಗ ಪುರುಷರಿಗಿಂತ ಮಹಿಳೆಯರ ಉಮೇದುವಾರಿಕೆಯ ಸ್ಪರ್ಧೆಯ ಪ್ರಮಾಣ ಶೇ.7.7ರಷ್ಟು ಕಡಿಮೆ ಇರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಚುನಾವಣೆ ಉಮೇದುವಾರಿಕೆ ಸ್ಪರ್ಧೆಯಲ್ಲಿ ಸಾಮಾನ್ಯ ಸ್ಥಾನಗಳಿಗೆ ಕಂಡುಬರುವಷ್ಟು ಪುರುಷರ ಸ್ಪರ್ಧೆ ಮಹಿಳಾ ಮೀಸಲು ಸ್ಥಾನಗಳಿಗೆ ಮಹಿಳೆಯರಲ್ಲಿ ಕಂಡುಬರುವುದಿಲ್ಲ. ಇದಕ್ಕೆ ಇಂದು ಪಂಚಾಯಿತಿಗಳ ಚುನಾವಣಾ ಉಮೇದುವಾರಿಕೆ ಪಡೆಯುವ ಮಹಿಳೆಯರು ಭಾಗಶಃ ವೈದಿಕ ಮತ್ತು ಪುರುಷಪ್ರಧಾನ ಲಕ್ಷಣಗಳಿಂದ ಮತ್ತು ಭಾಗಶಃ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿ ಅಥವಾ ಕುಟುಂಬ ಪುರುಷರ ಒತ್ತಾಯ ಅಥವಾ ಓಲೈಕೆಯಿಂದ ಪಡೆಯುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಒಟ್ಟಾರೆಯಾಗಿ ಗ್ರಾಮೀಣ ಮಹಿಳೆಯರು ಪುರುಷರ ಮಾತಿನಂತೆ ನಡೆದುಕೊಳ್ಳುವುದು ಕಂಡುಬರುತ್ತದೆ. ಹೀಗಾಗಿ ಅವರಿಗೆ ಚುನಾವಣೆ ಉಮೇದುವಾರಿಕೆ ಪಡೆಯುವಲ್ಲಿ ಸ್ವನಿರ್ಧಾರ ಇಲ್ಲವಾಗಿದೆ. ಮೀಸಲಾತಿ ನೀತಿಯಿಂದ ಗ್ರಾಮೀಣ ಮಹಿಳೆಯರಿಗೆ ಪಂಚಾಯಿತಿಗಳಲ್ಲಿ ಸಮಾನ ಪ್ರಾತಿನಿಧ್ಯ ಲಭಿಸಿರಬಹುದು. ಅದುವೇ ಗ್ರಾಮೀಣ ಮಹಿಳೆಯರ ಸಬಲೀಕರಣವಲ್ಲ.

5.4 ಮತದಾನ: ಮಹಿಳಾ ಅಭ್ಯರ್ಥಿಗಳು ಪಡೆದ ಮತಗಳು ಮತ್ತು ಮಹಿಳಾ ಸಬಲೀಕರಣ

ಈ ಅಧ್ಯಾಯದ ಎರಡನೇ ಭಾಗದಲ್ಲಿ ಗ್ರಾಮಪಂಚಾಯಿತಿ ಚುನಾವಣೆ ಉಮೇದುವಾರಿಕೆ ಪಡೆಯುವಲ್ಲಿ ಮಹಿಳಾ ಸ್ಪರ್ಧೆಯ ಸಾಮರ್ಥ್ಯ ಅಥವಾ ಪೈಪೋಟಿಯ ಆಧಾರದ ಮೇಲೆ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ. ಜನತಂತ್ರ ವಿಕೇಂದ್ರೀಕರಣದ ಉದ್ದೇಶಕ್ಕೆ ಬದ್ಧವಾಗಿ ಮಹಿಳಾ ಜನಸಂಖ್ಯೆಗೆ ಅನುಗುಣವಾಗಿ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಸ್ಥಾನ ಮತ್ತು ಹುದ್ದೆಗಳಲ್ಲಿ ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯವನ್ನು ಮೀಸಲಾತಿ ಮೂಲಕ ನೀಡಲಾಗಿದೆ. ಅಂದರೆ ಮೀಸಲಾತಿ ಅನಿವಾರ್ಯತೆಯಿಂದ ಮಹಿಳೆಯರು ಚುನಾವಣೆಗೆ ಸ್ಪರ್ಧಿಸುವರೇ ವಿನಾ ಅವರ ಸ್ವನಿರ್ಧಾರದಿಂದಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿ ಪುರುಷರ ಒತ್ತಾಯಕ್ಕೆ ಅಥವಾ ಓಲೈಕೆಗೆ ಮಹಿಳೆಯರು ಚುನಾವಣೆಗೆ ಸ್ಪರ್ಧಿಸುತ್ತಿರುವುದರಿಂದ ಅದು ಮಹಿಳೆಯರ ಸ್ಪರ್ಧೆಯಾಗದೇ ಪುರುಷ ಸ್ಪರ್ಧೆಯಾಗಿ ಕಂಡುಬರುತ್ತಿದೆ. ಆದ್ದರಿಂದ ಮಹಿಳೆಯರು ಸಬಲೀಕರಣಗೊಂಡಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಈ ಅಭಿಪ್ರಾಯವನ್ನು ಮತ್ತಷ್ಟು ಪರೀಕ್ಷಿಸಲು ಗ್ರಾಮಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಮಹಿಳಾ ಅಭ್ಯರ್ಥಿಗಳು ಪಡೆದ ಮತಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಿ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ. ಅಂದರೆ ಗ್ರಾಮಪಂಚಾಯಿತಿಗಳ ಆಯಾ ವಾರ್ಡ್‌ಗಳಲ್ಲಿ ಮತದಾರರು ಚಲಾಯಿಸಿದ ಸಿಂಧುತ್ವ ಮತಗಳಲ್ಲಿ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಪಡೆದ ಮತಗಳು ಸಮಾನವಾಗಿರುವುದೇ? ಆಯಾ ವಾರ್ಡ್‌ಗಳಲ್ಲಿ ವಿಜೇತ ಪುರುಷ ಅಭ್ಯರ್ಥಿ ಪಡೆದ ಮತಗಳು ಮತ್ತು ವಿಜೇತ ಮಹಿಳಾ ಅಭ್ಯರ್ಥಿಗಳು ಪಡೆದ ಮತಗಳು ಸಮಾನವಾಗಿರುವುದೇ? ಈ ಮೇಲಿನ ಸಮಸ್ಯೆಗಳು ಪ್ರಬಂಧದ ಉದ್ದೇಶಗಳಾಗಿವೆ. ಈ ಉದ್ದೇಶಗಳಿಗೆ ಅನುಗುಣವಾಗಿ ನಮ್ಮ ಶ್ರೇಣೀಕೃತ ಪುರುಷಪ್ರಧಾನ ಸಮಾಜದಲ್ಲಿ ಹಾಗೂ ಜನತಂತ್ರ ವಿಕೇಂದ್ರೀಕರಣದಲ್ಲಿ ಮಹಿಳೆಯರಿಗೆ ಮೀಸಲಾತಿ ಜೊತೆಗೆ ಚುನಾವಣೆಯಲ್ಲಿ ಪುರುಷ ಅಭ್ಯರ್ಥಿಗಳು ಪಡೆದ ಮತಗಳಿಗೆ ಸಮನಾಗಿ ಅಥವಾ ಹೆಚ್ಚು ಮತಗಳನ್ನು ಮಹಿಳಾ ಅಭ್ಯರ್ಥಿಗಳು ಪಡೆಯುವುದನ್ನೇ ಮಹಿಳಾ ಸಬಲೀಕರಣವೆಂದು ಈ ಪ್ರಬಂಧದಲ್ಲಿ ಪರಿಭಾವಿಸಿಕೊಳ್ಳಲಾಗಿದೆ. ಹೀಗಾಗಿ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಪಡೆದ ಮತಗಳ ಆಧಾರದ ಮೇಲೆ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ. ಆದರೆ ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ಮಹಿಳಾ ಅಭ್ಯರ್ಥಿಗಳು ಮತದಾನದ ಪ್ರಕ್ರಿಯೆಯಲ್ಲಿ ಮತದಾರರಿಂದ ವಂಚಿತಳಾಗುತ್ತಾಳೆಂದು ಅಧ್ಯಯನದಲ್ಲಿ ಗ್ರಹಿಸಲಾಗಿದೆ. ಮತದಾನದ ಪ್ರಕ್ರಿಯೆಯಲ್ಲಿ ಮಹಿಳಾ ಅಭ್ಯರ್ಥಿಗಳು ಹೇಗೆ ಮತ್ತು ಏಕೆ ವಂಚಿತಳಾಗುತ್ತಾಳೆ? ಇದಕ್ಕೆ ಕಂಡುಬರುವ ಕಾರಣಗಳೇನು? ಎಂಬುದನ್ನು ತಿಳಿಯಬೇಕಾದರೆ ಪಂಚಾಯಿತಿಗಳ ವಾರ್ಡ್‌ಗಳ ರಚನಾಕ್ರಮದ ಬಗ್ಗೆ ತಿಳಿಯುವುದು ಅಗತ್ಯ ಕಂಡುಬರುತ್ತದೆ.

ರಾಜ್ಯದಲ್ಲಿ ಜನಸಂಖ್ಯೆ ಅಥವಾ ಭೂಪ್ರದೇಶ ಇವರೆಡರಲ್ಲಿ ಯಾವುದಾದರೂ ಒಂದನ್ನು ಆಧರಿಸಿ ಗ್ರಾಮಪಂಚಾಯಿತಿಗಳನ್ನು ರಚನೆ ಮಾಡಲಾಗುತ್ತದೆ. ಆಯಾ ಗ್ರಾಮಪಂಚಾಯಿತಿಯ

ವ್ಯಾಪ್ತಿಯಲ್ಲಿ ಬರುವ ಗ್ರಾಮ ಅಥವಾ ಗ್ರಾಮಗಳನ್ನು ಸೇರಿಸಿ ಗ್ರಾಮಪಂಚಾಯಿತಿಯ ವಾರ್ಡ್ ಅಥವಾ ಚುನಾವಣಾ ಕ್ಷೇತ್ರಗಳನ್ನು ರಚನೆ ಮಾಡಲಾಗುತ್ತದೆ. ಪ್ರತಿ 400 ಜನರಿಗೆ ಒಬ್ಬ ಪ್ರತಿನಿಧಿಯಂತೆ ಆಯಾ ವಾರ್ಡ್‌ಗಳಲ್ಲಿರುವ ಜನಸಂಖ್ಯೆ ಅನುಗುಣವಾಗಿ ಪಂಚಾಯಿತಿ ಸ್ಥಾನಗಳನ್ನು ನಿಗದಿಪಡಿಸಲಾಗುತ್ತದೆ. ಈ ಸ್ಥಾನಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳಾ ಮೀಸಲಾತಿಯನ್ನು ಒಳಪಡಿಸಿ ಮತ್ತು ಇವರ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳನ್ನು ನಿಗದಿಪಡಿಸಲಾಗುತ್ತದೆ. ಹೀಗಾಗಿ ಒಂದು ವಾರ್ಡ್‌ಗೆ ಕನಿಷ್ಠ ಒಂದು, ಗರಿಷ್ಠ ಆರು ಸ್ಥಾನಗಳು ಹಂಚಿಕೆಯಾಗಬಹುದು. ಗ್ರಾಮಪಂಚಾಯಿತಿಗಳ ಆಯಾ ವಾರ್ಡ್‌ಗಳಿಗೆ ಹಂಚಿಕೆಯಾದ ಸ್ಥಾನಗಳಿಗೆ ಸಮನಾಗಿ ಆಯಾ ವಾರ್ಡ್‌ನ ಮತದಾರ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲು ತನ್ನ ಮತಪತ್ರದಲ್ಲಿ ಮತ ಚಲಾಯಿಸಬೇಕಾಗುತ್ತದೆ. ಹೀಗಾಗಿ ಗ್ರಾಮಪಂಚಾಯಿತಿ ಚುನಾವಣಾ ಕ್ಷೇತ್ರಗಳು ಬಹುವ್ಯಕ್ತಿ ಆಯ್ಕೆ ಕ್ಷೇತ್ರಗಳಾಗಿವೆ. ಉದಾಹರಣೆಗೆ ಗ್ರಾಮಪಂಚಾಯಿತಿ ವಾರ್ಡ್‌ವೊಂದಕ್ಕೆ 4 ಸ್ಥಾನಗಳು ಹಂಚಿಕೆಯಾಗಿವೆ. ಈ 4 ಸ್ಥಾನಗಳಲ್ಲಿ 2 ಮಹಿಳಾ ಮೀಸಲು ಮತ್ತು 2 ಸಾಮಾನ್ಯ ಸ್ಥಾನಗಳಾಗಿವೆ. ಚುನಾವಣೆ ವೇಳೆ ಈ ವಾರ್ಡ್‌ನಲ್ಲಿ ಮತಗಟ್ಟೆಯೊಂದನ್ನು ಸ್ಥಾಪನೆ ಮಾಡಲಾಗುತ್ತದೆ. ಇಲ್ಲಿನ ಮತದಾರರು ತಮ್ಮ ಮತಪತ್ರದಲ್ಲಿ ನಾಲ್ಕು ಮತಗಳನ್ನು ನೀಡಲು ಅರ್ಹರಾಗಿರುತ್ತಾರೆ. ಈ ವಾರ್ಡ್‌ನ 2 ಮಹಿಳಾ ಸ್ಥಾನಗಳಿಗೆ 4 ಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸಿರುತ್ತಾರೆ. ಸಾಮಾನ್ಯ 2 ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದು, ಉಳಿದ 1 ಸ್ಥಾನಕ್ಕೆ 4 ಪುರುಷ ಅಭ್ಯರ್ಥಿಗಳು ಸ್ಪರ್ಧಿಸಿರುತ್ತಾರೆ. ಹೀಗಾಗಿ ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಮೂರು ಮತಗಳನ್ನು ಚಲಾಯಿಸಬೇಕಾಗುತ್ತದೆ. ಮತದಾರ ತಾನು ನೀಡಬೇಕಾದ ಮೂರು ಮತಗಳಲ್ಲಿ ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ ನಾಲ್ಕು ಮಹಿಳಾ ಅಭ್ಯರ್ಥಿಗಳಲ್ಲಿ ಯಾರಾದರೂ ಇಬ್ಬರು ಮಹಿಳಾ ಅಭ್ಯರ್ಥಿಗಳಿಗೆ ತನ್ನ ಎರಡು ಮತಗಳನ್ನು ಹಾಗೂ ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ ನಾಲ್ಕು ಅಭ್ಯರ್ಥಿಗಳಲ್ಲಿ ಒಬ್ಬರಿಗೆ ಒಂದು ಮತವನ್ನು ನೀಡಬೇಕಾಗುತ್ತದೆ. ಆದರೆ ಮತದಾರ ತನ್ನ ಮತಪತ್ರದಲ್ಲಿ ತನ್ನ ಮೂರು ಮತಗಳನ್ನು ಸಾಮಾನ್ಯ ಸ್ಥಾನವೊಂದಕ್ಕೆ ಸ್ಪರ್ಧಿಸಿದ ಪುರುಷ ಅಭ್ಯರ್ಥಿಗಳಿಗೆ ನೀಡಿ, ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ ಮಹಿಳಾ ಅಭ್ಯರ್ಥಿಗಳಿಗೆ ನೀಡಲು ನಿರಾಕರಿಸಬಹುದು ಅಥವಾ ಎರಡು ಮತಗಳನ್ನು ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ ಪುರುಷ ಅಭ್ಯರ್ಥಿಗಳಿಗೆ ನೀಡಿ, ಮೂರನೇ ಮತವನ್ನು ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ ಮಹಿಳಾ ಅಭ್ಯರ್ಥಿಗಳಿಗೆ ನೀಡಲು ನಿರಾಕರಿಸಬಹುದು ಅಥವಾ ಒಂದು ಮತ ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ ಪುರುಷ ಅಭ್ಯರ್ಥಿಗಳಿಗೆ ನೀಡಿ, ಎರಡು ಮತ್ತು ಮೂರನೇ ಮತವನ್ನು ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ ಮಹಿಳಾ ಅಭ್ಯರ್ಥಿಗಳಿಗೆ ನೀಡಲು ನಿರಾಕರಿಸಬಹುದು. ವಾರ್ಡ್‌ವೊಂದಕ್ಕೆ ಹಂಚಿಕೆಯಾದ ಮಹಿಳಾ ಮತ್ತು ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಎಲ್ಲಾ ಅಭ್ಯರ್ಥಿಗಳಲ್ಲಿ ತಾನು ಇಚ್ಛಿಸಿದ ಯಾವುದೇ ಅಭ್ಯರ್ಥಿಗಳಿಗೆ ಹಂಚಿಕೆಯಾದ ಸ್ಥಾನಗಳಿಗೆ ಸಮನಾಗಿ ಅಥವಾ ಕಡಿಮೆಯಾಗಿ ತನ್ನ ಮತಪತ್ರದಲ್ಲಿ ಮತ ನೀಡಲು ಸ್ವತಂತ್ರನಾಗಿರುತ್ತಾನೆ. ಹೀಗೆ ಜಾರಿಯಲ್ಲಿರುವ ಗ್ರಾಮಪಂಚಾಯಿತಿ ಚುನಾವಣೆ ನೀತಿಯ ಪ್ರಕಾರ, ಒಬ್ಬ ಮತದಾರ ನೀಡಿದ ಮತಪತ್ರ ಯೋಗ್ಯವಾದ ಅಥವಾ ಸಿಂಧುತ್ವ

ಪಡೆದ ಮತವಾಗುತ್ತದೆ. ಮತ ಎಣಿಕೆ ಸಂದರ್ಭದಲ್ಲಿ ಈ ಮತಪತ್ರವನ್ನು ಅಸಿಂಧು ಎಂದು ತಿರಸ್ಕರಿಸಲಾಗುವುದಿಲ್ಲ. ಹೀಗಾಗಿ ಮಹಿಳಾ ಅಭ್ಯರ್ಥಿಗಳು ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಪುರುಷ ಅಭ್ಯರ್ಥಿಗಳಿಗಿಂತ ಕಡಿಮೆ ಮತಗಳನ್ನು ಪಡೆಯಲು ಕಾರಣವಾಗುತ್ತದೆ ಎಂಬದನ್ನು ಗ್ರಹಿಸಲಾಗಿದೆ. ಇದಕ್ಕೆ ಪ್ರಮುಖವಾಗಿ ಮೂರು ಕಾರಣಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಒಂದು, ಗ್ರಾಮೀಣ ಪ್ರದೇಶದಲ್ಲಿ ಸಾಂಪ್ರದಾಯಿಕವಾಗಿ ಗಟ್ಟಿಯಾಗಿ ಬೇರೂರಿರುವ ಜಾತಿ, ಧರ್ಮ ಆಧಾರಿತ ಲಿಂಗ ತಾರತಮ್ಯ ಭಾವನೆಗಳು. ಎರಡು, ಗ್ರಾಮಪಂಚಾಯಿತಿ ಚುನಾವಣಾ ಕ್ಷೇತ್ರಗಳು ತಾಲೂಕು ಮತ್ತು ಜಿಲ್ಲಾಪಂಚಾಯಿತಿಗಳ ಚುನಾವಣಾ ಕ್ಷೇತ್ರಗಳಂತೆ ಏಕಸದಸ್ಯತ್ವ(ಏಕವ್ಯಕ್ತಿ ಆಯ್ಕೆ) ಚುನಾವಣಾ ಕ್ಷೇತ್ರಗಳಲ್ಲ. ಇವು ಬಹುಸದಸ್ಯತ್ವ(ಬಹುವ್ಯಕ್ತಿ ಆಯ್ಕೆ) ಚುನಾವಣಾ ಕ್ಷೇತ್ರಗಳಾಗಿರುವುದು. ಮೂರು, ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಪರಿಶಿಷ್ಟ ಸ್ಥಾನಕ್ಕೆ ಸ್ಪರ್ಧಿಸಿದ ಮಹಿಳಾ ಅಭ್ಯರ್ಥಿಗಳಲ್ಲಿ ಹೆಚ್ಚು ಮತ ಪಡೆದು ಎರಡನೇ ಸ್ಥಾನದಲ್ಲಿರುವ ಮಹಿಳಾ ಅಭ್ಯರ್ಥಿ ಇತರ ಮಹಿಳಾ ಮೀಸಲು ಸ್ಥಾನಗಳಿಗೆ ಸ್ಪರ್ಧಿಸಿದ ಹಾಗೂ ಹೆಚ್ಚು ಮತಗಳನ್ನು ಪಡೆದ ಮೊದಲನೇ ಸ್ಥಾನದಲ್ಲಿರುವ ಮಹಿಳಾ ಅಭ್ಯರ್ಥಿಗಿಂತ ಅಥವಾ ಪರಿಶಿಷ್ಟ ಮತ್ತು ಇತರ ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಹಾಗೂ ಹೆಚ್ಚು ಮತಗಳನ್ನು ಪಡೆದ ಮೊದಲನೇ ಸ್ಥಾನದಲ್ಲಿರುವ ಪುರುಷ ಅಭ್ಯರ್ಥಿಗಿಂತ ಹೆಚ್ಚು ಮತಗಳನ್ನು ಪಡೆದರೆ ಈ ಇತರೆ ಮಹಿಳಾ ಮೀಸಲು ಅಥವಾ ಸಾಮಾನ್ಯ(ಮೀಸಲು/ಸಾಮಾನ್ಯ) ಸ್ಥಾನವು ಎರಡನೇ ಸ್ಥಾನದಲ್ಲಿರುವ ಪರಿಶಿಷ್ಟ ಮಹಿಳೆಯ ಪಾಲಾಗುತ್ತದೆ. ಈ ಮೇಲಿನ ಸಾಂಪ್ರದಾಯಿಕವಾಗಿ ಮತ್ತು ತಾಂತ್ರಿಕವಾಗಿ ಕಾರಣಗಳಿಂದ ಚುನಾವಣಾ ಉಮೇದುವಾರಿಕೆ ಪಡೆದ ಮಹಿಳಾ ಅಭ್ಯರ್ಥಿಗಳು ಮತದಾರರಿಂದ ತಿರಸ್ಕಾರಕ್ಕೆ ಒಳಗಾಗುವುದು ಕಂಡುಬರುತ್ತದೆ. ಹೀಗಾಗಿ ವಿಜೇತರಲ್ಲಿ ಮಹಿಳಾ ಅಭ್ಯರ್ಥಿಗಳು ಪುರುಷ ಅಭ್ಯರ್ಥಿಗಳಿಂತ ಕಡಿಮೆ ಮತ ಪಡೆದಿರುವುದು ಕಂಡುಬರುತ್ತದೆ. ಅಲ್ಲದೇ, ಆಯಾ ವಾರ್ಡ್‌ನಲ್ಲಿ ಚಲಾಯಿಸಿದ ಒಟ್ಟು ಮತಗಳನ್ನು ವರ್ಗೀಕರಣ ಮಾಡಿದಾಗ ಪುರುಷ ಅಭ್ಯರ್ಥಿಗಳಿಂತ ಮಹಿಳಾ ಅಭ್ಯರ್ಥಿಗಳು ಕಡಿಮೆ ಮತಗಳನ್ನು ಪಡೆದಿರುವುದು ಕಂಡುಬರುತ್ತದೆ. ಕ್ಷೇತ್ರ ಅಧ್ಯಯನದಲ್ಲಿ ಮಾಹಿತಿದಾರರು ನೀಡಿರುವ ಹೇಳಿಕೆ ಪೂರಕವಾಗಿ ಮಹಿಳಾ ಮೀಸಲು ಸ್ಥಾನಗಳಲ್ಲಿ ಪರಿಶಿಷ್ಟ ಸ್ಥಾನಗಳಿಗೆ ಕೆಳವರ್ಗದ ಮಹಿಳೆಯರು ಮತ್ತು ಸಾಮಾನ್ಯ(ಮೀಸಲು/ಸಾಮಾನ್ಯ) ಸ್ಥಾನಗಳಲ್ಲಿ ಸಾಮಾನ್ಯ(ಸಾಮಾನ್ಯ) ಸ್ಥಾನಗಳಿಗೆ ಮೇಲ್ವರ್ಗದ ಪುರುಷರು ಮಾತ್ರ ಅವಿರೋಧವಾಗಿ ಆಯ್ಕೆಯಾಗಿರುವುದು ಕಂಡುಬರುತ್ತದೆ.

ಬಯಲುಸೀಮೆ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಯಲುಸೀಮೆಯ ಹೊಸೂರು ಗ್ರಾಮಪಂಚಾಯಿತಿಯಲ್ಲಿ ಮೂರು ವಾರ್ಡ್‌ಗಳನ್ನು ರಚಿಸಲಾಗಿದ್ದು, ಒಂದನೇ ವಾರ್ಡ್‌ಗೆ 4 ಸ್ಥಾನಗಳು, ಎರಡು ಮತ್ತು ಮೂರನೇ ವಾರ್ಡ್‌ಗಳಿಗೆ ಕ್ರಮವಾಗಿ 3 ಸ್ಥಾನಗಳನ್ನು ಹಂಚಿಕೆ ಮಾಡಲಾಗಿದೆ. ಒಂದನೇ ವಾರ್ಡ್ ಹೊಸೂರಿನಲ್ಲಿ 4 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 2 ಮಹಿಳಾ(ಪ.ಪಂ) ಮೀಸಲು ಮತ್ತು 2 ಸಾಮಾನ್ಯ(ಪ.ಪಂ) ಮೀಸಲು ಸ್ಥಾನಗಳಾಗಿವೆ. ಮಹಿಳಾ(ಪ.ಪಂ)

ಮೀಸಲು 2 ಸ್ಥಾನಗಳಿಗೆ 4 ಮಹಿಳೆಯರು ಮತ್ತು ಸಾಮಾನ್ಯ(ಪ.ಪಂ) 2 ಸ್ಥಾನಗಳಿಗೆ 3 ಪುರುಷರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 4 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ, ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 4 ಮತಗಳಲ್ಲಿ 2 ಮತಗಳನ್ನು 2 ಮಹಿಳಾ(ಪ.ಪಂ) ಮೀಸಲುಸ್ಥಾನಗಳಿಗೆ ಸ್ಪರ್ಧಿಸಿದ 4 ಅಭ್ಯರ್ಥಿಗಳಲ್ಲಿ ಇಬ್ಬರಿಗೆ ಹಾಗೂ 2 ಸಾಮಾನ್ಯ(ಪ.ಪಂ) ಸ್ಥಾನಗಳಿಗೆ ಸ್ಪರ್ಧಿಸಿದ 3 ಅಭ್ಯರ್ಥಿಗಳಲ್ಲಿ ಇಬ್ಬರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ ಒಂದನೇ ವಾರ್ಡ್ ಹೊಸೂರುನಲ್ಲಿ 1,128 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 4 ಮತಗಳನ್ನು ನೀಡಿದರೆ ಒಟ್ಟು 4,512 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 2,944(ಶೇ.65.25) ಮತಗಳು ಚಲಾಯಿಸಲಾಗಿದೆ. ಆದರೆ ಇದರಲ್ಲಿ 46(ಶೇ.1.56) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 2,898(ಶೇ.98.44) ಕ್ರಮಬದ್ಧ ಮತಗಳಾಗಿವೆ(ನೋಡಿ ಕೋಷ್ಟಕ-5.4). ಕ್ರಮಬದ್ಧವಾಗಿ ಚಲಾಯಿಸಿದ 2,898 ಮತಗಳಲ್ಲಿ ನ್ಯಾಯೋಚಿತವಾಗಿ 2 ಮಹಿಳಾ(ಪ.ಪಂ) ಮೀಸಲು ಸ್ಥಾನಕ್ಕೆ ಸ್ಪರ್ಧಿಸಿದ 4 ಮಹಿಳಾ ಅಭ್ಯರ್ಥಿಗಳಿಗೆ ಸೇರಿ 1,449(ಶೇ.50) ಮತಗಳು ಹಾಗೂ 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 3 ಪುರುಷ ಅಭ್ಯರ್ಥಿಗಳಿಗೆ ಸೇರಿ 1,449(ಶೇ.50) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 2,898 ಮತಗಳಲ್ಲಿ ಶೇ.46.48 ಮತಗಳು 2 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ 4 ಮಹಿಳಾ ಅಭ್ಯರ್ಥಿಗಳಿಗೆ ಪಡೆದರೆ, ಶೇ.53.32 ಮತಗಳು 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 3 ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ-5.4). ಈ ವಾರ್ಡ್‌ನಲ್ಲಿ ಮತದಾರ ಮಹಿಳೆಯರಿಗಿಂತ ಶೇ.6.64ರಷ್ಟು ಹೆಚ್ಚು ಮತಗಳು ಪುರುಷರಿಗೆ ನೀಡಿರುವುದು ಕಂಡುಬರುತ್ತದೆ. ಮಹಿಳೆ ಸಬಲೀಕರಣಗೊಂಡಿಲ್ಲ ಎಂಬುದಕ್ಕೆ ಪೂರಕವಾಗಿ ಈ ವಾರ್ಡ್‌ನಲ್ಲಿ ವಿಜೇತ ಮಹಿಳಾ ಅಭ್ಯರ್ಥಿ ಪಡೆದ ಮತಗಳಿಂತ ಹೆಚ್ಚು ಮತಗಳನ್ನು ವಿಜೇತ ಪುರುಷ ಅಭ್ಯರ್ಥಿ ಪಡೆದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-5.5.ಎ).

ಎರಡನೇ ವಾರ್ಡ್ ಹೊಸೂರಿನಲ್ಲಿ 3 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 1 ಮಹಿಳಾ ಮೀಸಲು ಮತ್ತು 2 ಸಾಮಾನ್ಯ(ಪುರುಷ) ಸ್ಥಾನಗಳಾಗಿವೆ. ಮಹಿಳಾ(ಹಿ.ವ.ಅ) ಮೀಸಲು 1 ಸ್ಥಾನಕ್ಕೆ 3 ಮಹಿಳೆಯರು ಮತ್ತು ಸಾಮಾನ್ಯ(ಪ.ಪಂ) 2 ಸ್ಥಾನಗಳಿಗೆ 5 ಪುರುಷರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 3 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 3 ಮತಗಳಲ್ಲಿ 1 ಮತವನ್ನು ಮಹಿಳಾ(ಹಿ.ವ.ಅ) ಸ್ಥಾನಕ್ಕೆ ಸ್ಪರ್ಧಿಸಿದ 3 ಅಭ್ಯರ್ಥಿಗಳಲ್ಲಿ ಒಬ್ಬರಿಗೆ ಹಾಗೂ ಉಳಿದ ಎರಡು ಮತಗಳನ್ನು 2 ಸಾಮಾನ್ಯ(ಪ.ಪಂ) ಸ್ಥಾನಗಳಿಗೆ ಸ್ಪರ್ಧಿಸಿದ 5 ಅಭ್ಯರ್ಥಿಗಳಲ್ಲಿ ಇಬ್ಬರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ, ಎರಡನೇ ವಾರ್ಡ್ ಹೊಸೂರಿನಲ್ಲಿ 776 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 3 ಮತಗಳನ್ನು ನೀಡಿದರೆ

ಒಟ್ಟು 2,328 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 1,934(ಶೇ.83.07) ಮತಗಳು ಚಲಾಯಿಸಲಾಗಿದೆ. ಆದರೆ ಇದರಲ್ಲಿ 14(ಶೇ.0.72) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 1,920(ಶೇ.99.28) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 1,920 ಮತಗಳಲ್ಲಿ ನ್ಯಾಯೋಚಿತನಾಗಿ 1 ಮಹಿಳಾ(ಹಿ.ವ.ಅ) ಸ್ಥಾನಕ್ಕೆ ಸ್ಪರ್ಧಿಸಿದ 3 ಮಹಿಳಾ ಅಭ್ಯರ್ಥಿಗಳಿಗೆ 640(ಶೇ.33.33) ಮತಗಳು ಹಾಗೂ 2 ಸಾಮಾನ್ಯ(ಪ.ಪಂ) ಸ್ಥಾನಗಳಿಗೆ ಸ್ಪರ್ಧಿಸಿದ 5 ಪುರುಷ ಅಭ್ಯರ್ಥಿಗಳಿಗೆ ಸೇರಿ 1,280(ಶೇ.66.67) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 1,920 ಮತಗಳಲ್ಲಿ ಶೇ.32.80 ಮತಗಳು 1 ಮಹಿಳಾ(ಹಿ.ವ.ಅ) ಸ್ಥಾನಕ್ಕೆ ಸ್ಪರ್ಧಿಸಿದ 3 ಮಹಿಳಾ ಅಭ್ಯರ್ಥಿಗಳು ಪಡೆದರೆ ಶೇ.67.20 ಮತಗಳು 2 ಸಾಮಾನ್ಯ(ಪ.ಪಂ) ಸ್ಥಾನಗಳಿಗೆ ಸ್ಪರ್ಧಿಸಿದ 5 ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ–5.4). ಈ ವಾರ್ಡ್‌ನಲ್ಲಿ ಮತದಾರ ಮಹಿಳೆಯರಿಗಿಂತ ಶೇ.0.53ರಷ್ಟು ಹೆಚ್ಚು ಮತಗಳು ಪುರುಷರಿಗೆ ನೀಡಿರುವುದು ಕಂಡುಬರುತ್ತದೆ. ಇದಕ್ಕೆ ಪೂರಕವಾಗಿ ಈ ವಾರ್ಡ್‌ನಲ್ಲಿ ವಿಜೇತ ಮಹಿಳಾ ಅಭ್ಯರ್ಥಿ ಪಡೆದ ಮತಗಳಿಂತ ಇಬ್ಬರು ವಿಜೇತ ಪುರುಷ ಅಭ್ಯರ್ಥಿಗಳಲ್ಲಿ ಒಬ್ಬ ಹೆಚ್ಚು ಮತಗಳನ್ನು ಪಡೆದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–5.5.ಎ).

ಮೂರನೇ ವಾರ್ಡ್ ಹೊಸೂರಿನಲ್ಲಿ 3 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 2 ಮಹಿಳಾ(ಪ.ಜಾ & ಪ.ಪಂ) ಮೀಸಲು ಮತ್ತು 1 ಸಾಮಾನ್ಯ(ಪ.ಪಂ) ಸ್ಥಾನಗಳಾಗಿವೆ. ಮಹಿಳಾ ಮೀಸಲು 2 ಸ್ಥಾನಗಳಲ್ಲಿ 1 ಮಹಿಳಾ(ಪ.ಜಾ) ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದೆ. ಉಳಿದ 1 ಮಹಿಳಾ(ಪ.ಪಂ) ಸ್ಥಾನಕ್ಕೆ 3 ಮಹಿಳೆಯರು ಮತ್ತು ಸಾಮಾನ್ಯ(ಪ.ಪಂ) 1 ಸ್ಥಾನಕ್ಕೆ 4 ಪುರುಷರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 2 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ, ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 2 ಮತಗಳಲ್ಲಿ 1 ಮತವನ್ನು 1 ಮಹಿಳಾ(ಪ.ಪಂ) ಸ್ಥಾನಗಳಿಗೆ ಸ್ಪರ್ಧಿಸಿದ 3 ಅಭ್ಯರ್ಥಿಗಳಲ್ಲಿ ಒಬ್ಬರಿಗೆ ಹಾಗೂ ಒಂದು ಮತವನ್ನು 1 ಸಾಮಾನ್ಯ(ಪ.ಪಂ) ಸ್ಥಾನಗಳಿಗೆ ಸ್ಪರ್ಧಿಸಿದ 4 ಅಭ್ಯರ್ಥಿಗಳಲ್ಲಿ ಒಬ್ಬರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ, ಮೂರನೇ ವಾರ್ಡ್ ಹೊಸೂರಿನಲ್ಲಿ 587 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 2 ಮತಗಳನ್ನು ನೀಡಿದರೆ ಒಟ್ಟು 1,174 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 991(ಶೇ.84.41) ಮತಗಳನ್ನು ಚಲಾಯಿಸಲಾಗಿದೆ. ಆದರೆ ಇದರಲ್ಲಿ 18(ಶೇ.1.82) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 973(ಶೇ.98.18) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 973 ಮತಗಳಲ್ಲಿ ನ್ಯಾಯೋಚಿತವಾಗಿ 1 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 3 ಮಹಿಳಾ ಅಭ್ಯರ್ಥಿಗಳಿಗೆ 486.5(ಶೇ.50) ಮತಗಳು ಹಾಗೂ 1 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 4

ಪುರುಷ ಅಭ್ಯರ್ಥಿಗಳಿಗೆ ಸೇರಿ 486.5(ಶೇ.50) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 973 ಮತಗಳಲ್ಲಿ ಶೇ.44.20 ಮತಗಳು 1 ಮಹಿಳಾ(ಪ.ಪಂ) ಸ್ಥಾನಕ್ಕೆ ಸ್ಪರ್ಧಿಸಿದ 3 ಮಹಿಳಾ ಅಭ್ಯರ್ಥಿಗಳು ಪಡೆದರೆ, ಶೇ.55.80 ಮತಗಳು 1 ಸಾಮಾನ್ಯ(ಪ.ಪಂ) ಸ್ಥಾನಕ್ಕೆ ಸ್ಪರ್ಧಿಸಿದ 4 ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ-5.4). ಈ ವಾರ್ಡ್‌ನಲ್ಲಿ ಮತದಾರರು ಮಹಿಳಾ ಅಭ್ಯರ್ಥಿಗಳಿಂತ ಶೇ.11.60ರಷ್ಟು ಹೆಚ್ಚು ಮತಗಳು ಪುರುಷರಿಗೆ ನೀಡಿರುವುದು ಕಂಡುಬರುತ್ತದೆ. ಆದರೆ ಈ ವಾರ್ಡ್‌ನಲ್ಲಿ ವಿಜೇತ ಪುರುಷ ಅಭ್ಯರ್ಥಿಗಿಂತ ವಿಜೇತ ಮಹಿಳಾ ಅಭ್ಯರ್ಥಿ ಒಂದು ಮತ ಹೆಚ್ಚು ಪಡೆದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-5.5.ಎ).

ಒಟ್ಟಾರೆಯಾಗಿ ಹೊಸೂರು ಗ್ರಾಮಪಂಚಾಯಿತಿಗೆ ಹಂಚಿಕೆಯಾದ 10 ಸ್ಥಾನಗಳಲ್ಲಿ ಶೇ.50ರಷ್ಟು ಮಹಿಳಾ ಮೀಸಲು ಹಾಗೂ ಶೇ.50ರಷ್ಟು ಸಾಮಾನ್ಯ ಸ್ಥಾನಗಳಾಗಿವೆ. ಮಹಿಳಾ ಮೀಸಲು 5 ಸ್ಥಾನಗಳಲ್ಲಿ ಒಂದು ಸ್ಥಾನಕ್ಕೆ(ಶೇ.20) ಅವಿರೋಧ ಆಯ್ಕೆಯಾಗಿದೆ. ಉಳಿದ 4(ಶೇ.80)ಸ್ಥಾನಗಳಿಗೆ ಮಹಿಳೆಯರಲ್ಲಿ 10(ಶೇ.2.1) ಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಹಾಗೆಯೇ 5 ಸಾಮಾನ್ಯ ಸ್ಥಾನಗಳಿಗೆ ಪುರುಷರಲ್ಲಿ ಶೇ.3.1ರಷ್ಟು ಪುರುಷರು ಸ್ಪರ್ಧಿಸಿದ್ದಾರೆ. 2001ರ ಜನಗಣತಿ ಪ್ರಕಾರ, ಹೊಸೂರು ಗ್ರಾಮಪಂಚಾಯಿತಿಯಲ್ಲಿ ಒಟ್ಟು 2,491 ಮತದಾರರು ಇರುವರು. ಈ ಪಂಚಾಯಿತಿಯ ಮತದಾರ ತನ್ನ ಮತಪತ್ರದಲ್ಲಿ ನೀಡಿದ ಒಟ್ಟು ಮತಗಳ ಮೌಲ್ಯ 5,869ರಷ್ಟು ಆಗುತ್ತದೆ. ಇದರಲ್ಲಿ ಶೇ.1.33ರಷ್ಟು(78) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮತದಾರರು ನೀಡಿದ ಮತಗಳ ಮೌಲ್ಯದಲ್ಲಿ ಶೇ.98.67(5,791) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 5,791 ಮತಗಳಲ್ಲಿ ನ್ಯಾಯೋಚಿತವಾಗಿ 4 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 10 ಮಹಿಳಾ ಅಭ್ಯರ್ಥಿಗಳಿಗೆ ಸೇರಿ 2,574(ಶೇ.44.4) ಮತಗಳು ಹಾಗೂ 5 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 12 ಪುರುಷ ಅಭ್ಯರ್ಥಿಗಳಿಗೆ ಸೇರಿ 3,217(ಶೇ.55.6) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 5,791 ಮತಗಳಲ್ಲಿ ಶೇ.41.6(2,413)ರಷ್ಟು ಮತಗಳು 4 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ 10 ಮಹಿಳಾ ಅಭ್ಯರ್ಥಿಗಳು ಪಡೆದರೆ, ಶೇ.58.4(3,378)ರಷ್ಟು ಮತಗಳು 5 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 12 ಪುರುಷ ಅಭ್ಯರ್ಥಿಗಳು ಪಡೆದಿದ್ದಾರೆ(ನೋಡಿ ಕೋಷ್ಟಕ-5.4). ಈ ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಅಭ್ಯರ್ಥಿಗಳಿಗಿ ಸಿಗಬೇಕಿದ್ದ ಮತಗಳ ಮೌಲ್ಯಕ್ಕಿಂತ ಶೇ.2.8ರಷ್ಟು ಕಡಿಮೆ ಪಡೆದಿರುವುದು ಕಂಡುಬರುತ್ತದೆ. ಈ ಅಂಕಿ ಅಂಶಗಳ ಆಧಾರದ ಮೇಲೆ ಈ ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಸಬಲೀಕರಣ ಕಂಡುಬರುತ್ತಿಲ್ಲ ಎಂಬ ಸಂಗತಿ ಸ್ಪಷ್ಟವಾಗುತ್ತದೆ. ಇಲ್ಲಿನ ಚುನಾವಣೆಯಲ್ಲಿ ಮಹಿಳಾ ಉಮೇದುವಾರಿಕೆ ನಾಮಮಾತ್ರವಾಗಿ, ವಾಸ್ತವದಲ್ಲಿ ಅದು ಪುರುಷ ಪ್ರತಿಷ್ಠೆ ಉಮೇದುವಾರಿಕೆಯಾಗಿ ಕಂಡುಬರುತ್ತದೆ. ಅಲ್ಲದೇ ಪರಿಶಿಷ್ಟರೇ ಹೆಚ್ಚು ಇರುವ ಈ ಪಂಚಾಯಿತಿಯಲ್ಲಿ ಪುರುಷರು ಮಹಿಳೆಯರ ಮೇಲೆ ನಿಯಂತ್ರಣ ಹೊಂದಿರುವುದಕ್ಕೆ ಸಾಮಾಜಿಕವಾಗಿ ಅವರ ಒಳಾಡಳಿತ ವ್ಯವಸ್ಥೆಯು ಕಾರಣವಾಗಿ ಕಂಡುಬರುತ್ತದೆ.

ನಾಗೇನಹಳ್ಳಿ ಗ್ರಾಮಪಂಚಾಯಿತಿ: ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಯಲುಸೀಮೆಯ ನಾಗೇನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ನಾಲ್ಕು ವಾರ್ಡ್‌ಗಳನ್ನು ರಚಿಸಲಾಗಿದ್ದು, ಒಂದನೇ ವಾರ್ಡ್‌ಗೆ 4 ಸ್ಥಾನಗಳು, ಎರಡನೇ ವಾರ್ಡ್‌ಗೆ 6 ಸ್ಥಾನಗಳು, ಮೂರನೇ ವಾರ್ಡ್‌ಗೆ 4 ಸ್ಥಾನಗಳು ಹಾಗೂ ನಾಲ್ಕನೇ ವಾರ್ಡ್‌ಗೆ 1 ಸ್ಥಾನವನ್ನು ಹಂಚಿಕೆ ಮಾಡಲಾಗಿದೆ. ಒಂದನೇ ವಾರ್ಡ್ ನಾಗೇನಹಳ್ಳಿಯಲ್ಲಿ 4 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 2 ಮಹಿಳಾ(ಪ.ಜಾ-1 & ಹಿ.ವ.ಅ-1) ಮೀಸಲು ಮತ್ತು 2 ಸಾಮಾನ್ಯ(ಪ.ಪಂ-1 & ಹಿ.ವ.ಬ-1) ಸ್ಥಾನಗಳಾಗಿವೆ. ಮಹಿಳಾ ಮೀಸಲು 2 ಸ್ಥಾನಗಳಿಗೆ 5 ಮಹಿಳೆಯರು ಮತ್ತು ಸಾಮಾನ್ಯ 2 ಸ್ಥಾನಗಳಿಗೆ 5 ಪುರುಷರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 4 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ, ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 4 ಮತಗಳಲ್ಲಿ 2 ಮತಗಳನ್ನು 2 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ 5 ಅಭ್ಯರ್ಥಿಗಳಲ್ಲಿ ಇಬ್ಬರಿಗೆ ಹಾಗೂ 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 5 ಅಭ್ಯರ್ಥಿಗಳಲ್ಲಿ ಇಬ್ಬರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ, ಒಂದನೇ ವಾರ್ಡ್ ನಾಗೇನಹಳ್ಳಿಯಲ್ಲಿ 1,014 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 4 ಮತಗಳನ್ನು ನೀಡಿದರೆ ಒಟ್ಟು 4,056 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 3,142(ಶೇ.77.56) ಮತಗಳನ್ನು ಚಲಾಯಿಸಲಾಗಿದೆ. ಆದರೆ ಇದರಲ್ಲಿ 100(ಶೇ.3.18) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 3,042(ಶೇ.96.82) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 3.042 ಮತಗಳಲ್ಲಿ ನ್ಯಾಯೋಚಿತವಾಗಿ 2 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 5 ಮಹಿಳಾ ಅಭ್ಯರ್ಥಿಗಳಿಗೆ 1,521(ಶೇ.50) ಮತಗಳು ಹಾಗೂ 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 5 ಪುರುಷ ಅಭ್ಯರ್ಥಿಗಳಿಗೆ ಸೇರಿ 1,521(ಶೇ.50) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 3,042 ಮತಗಳಲ್ಲಿ ಶೇ.49.11 ಮತಗಳು 2 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ 5 ಮಹಿಳಾ ಅಭ್ಯರ್ಥಿಗಳಿಗೆ ಪಡೆದರೆ, ಶೇ.50.89 ಮತಗಳು 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 5 ಪುರುಷ ಅಭ್ಯರ್ಥಿಗಳು ಪಡೆದಿದ್ದಾರೆ(ನೋಡಿ ಕೋಷ್ಟಕ-5.4). ಈ ವಾರ್ಡ್‌ನಲ್ಲಿ ಮತದಾರ ಮಹಿಳೆಯರಿಗಿಂತ ಶೇ.0.89ರಷ್ಟು ಹೆಚ್ಚು ಮತಗಳು ಪುರುಷರಿಗೆ ನೀಡಿರುವುದು ಕಂಡುಬರುತ್ತದೆ. ಮಹಿಳೆ ಸಬಲೀಕರಣಗೊಂಡಿಲ್ಲ ಎಂಬುದಕ್ಕೆ ಪೂರಕವಾಗಿ ಈ ವಾರ್ಡ್‌ನಲ್ಲಿ ವಿಜೇತ ಪುರುಷ ಅಭ್ಯರ್ಥಿಗಿಂತ ವಿಜೇತ ಮಹಿಳಾ ಅಭ್ಯರ್ಥಿಗಳು ಕಡಿಮೆ ಮತಗಳನ್ನು ಪಡೆದಿರುವುದು ಕಂಡಬರುತ್ತದೆ(ನೋಡಿ ಕೋಷ್ಟಕ-5.5.ಬಿ).

ಎರಡನೇ ವಾರ್ಡ್ ನಾಗೇನಹಳ್ಳಿಯಲ್ಲಿ 6 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 3 ಮಹಿಳಾ(ಪ.ಜಾ-1, ಹಿ.ವ.ಅ-1 & ಸಾ-1) ಮೀಸಲು ಮತ್ತು 3 ಸಾಮಾನ್ಯ(ಪ.ಪಂ-1, ಹಿ.ವ.ಅ-1 & ಸಾ-1) ಸ್ಥಾನಗಳಾಗಿವೆ. ಮಹಿಳಾ ಮೀಸಲು 3 ಸ್ಥಾನಗಳಿಗೆ 7 ಮಹಿಳೆಯರು ಮತ್ತು ಸಾಮಾನ್ಯ 3 ಸ್ಥಾನಗಳಿಗೆ 8 ಪುರುಷರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ

ತನ್ನ ಮತಪತ್ರದಲ್ಲಿ 6 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 6 ಮತಗಳಲ್ಲಿ 3 ಮತಗಳನ್ನು 3 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ 7 ಅಭ್ಯರ್ಥಿಗಳಲ್ಲಿ ಮೂವರಿಗೆ ಹಾಗೂ 3 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 8 ಅಭ್ಯರ್ಥಿಗಳಲ್ಲಿ ಮೂವರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ, ಎರಡನೇ ವಾರ್ಡ್ ನಾಗೇನಹಳ್ಳಿಯಲ್ಲಿ 1,468 ಮತದಾಗರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 6 ಮತಗಳನ್ನು ನೀಡಿದರೆ ಒಟ್ಟು 8,808 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 5,036(ಶೇ.57.17) ಮತಗಳು ಚಲಾಯಿಸಲಾಗಿದೆ. ಆದರೆ ಇದರಲ್ಲಿ 178(ಶೇ.3.53) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 4,858(ಶೇ.96.46) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 4,858 ಮತಗಳಲ್ಲಿ ನ್ಯಾಯೋಚಿತವಾಗಿ 3 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 7 ಮಹಿಳಾ ಅಭ್ಯರ್ಥಿಗಳಿಗೆ 2,429(ಶೇ.50) ಮತಗಳು ಹಾಗೂ 3 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 8 ಪುರುಷ ಅಭ್ಯರ್ಥಿಗಳಿಗೆ ಸೇರಿ 2,429(ಶೇ.50) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 4,858 ಮತಗಳಲ್ಲಿ ಶೇ.42.59 ಮತಗಳು 3 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 7 ಮಹಿಳಾ ಅಭ್ಯರ್ಥಿಗಳು ಪಡೆದರೆ, ಶೇ.57.01 ಮತಗಳು 3 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 8 ಪುರುಷ ಅಭ್ಯರ್ಥಿಗಳು ಪಡೆದಿದ್ದಾರೆ(ನೋಡಿ ಕೋಷ್ಟಕ–5.4). ಈ ವಾರ್ಡ್‌ನ ಮತದಾರರು ಮಹಿಳೆಯರಿಗಿಂತ ಶೇ.7.01ರಷ್ಟು ಹೆಚ್ಚು ಮತಗಳು ಪುರುಷರಿಗೆ ನೀಡಿರುವುದು ಕಂಡುಬರುತ್ತದೆ. ಮಹಿಳೆ ಸಬಲೀಕರಣಗೊಂಡಿಲ್ಲ ಎಂಬುದಕ್ಕೆ ಪೂರಕವಾಗಿ ಈ ವಾರ್ಡ್‌ನಲ್ಲಿ ವಿಜೇತ ಪುರುಷ ಅಭ್ಯರ್ಥಿ ವಿಜೇತ ಮಹಿಳಾ ಅಭ್ಯರ್ಥಿಗಳು ಪಡೆದ ಮತಗಳಿಂತ ಹೆಚ್ಚು ಮತಗಳನ್ನು ಪಡೆದಿರುವುದು ಕಂಡಬರುತ್ತದೆ(ನೋಡಿ ಕೋಷ್ಟಕ–5.5.ಬಿ).

ನಾಗೇನಹಳ್ಳಿ ಗ್ರಾಮಪಂಚಾಯಿತಿಯ ಮೂರನೇ ವಾರ್ಡ್ ಬಸವನದುರ್ಗದಲ್ಲಿ 4 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 1 ಮಹಿಳಾ(ಪ.ಪಂ) ಮೀಸಲು ಮತ್ತು 3 ಸಾಮಾನ್ಯ(ಪ.ಜಾ–1, ಹಿ.ವ.ಅ–1 & ಸಾ–1) ಸ್ಥಾನಗಳಾಗಿವೆ. ಮಹಿಳಾ ಮೀಸಲು 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದೆ. ಉಳಿದ ಸಾಮಾನ್ಯ 3 ಸ್ಥಾನಕ್ಕೆ 11 ಪುರುಷರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 3 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 3 ಮತಗಳಲ್ಲಿ 3 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 11 ಅಭ್ಯರ್ಥಿಗಳಲ್ಲಿ ಯಾರಿಗಾದರೂ ಮೂವರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ ಮೂರನೇ ವಾರ್ಡ್ ಬಸವನದುರ್ಗದಲ್ಲಿ 1053 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 3 ಮತಗಳನ್ನು ನೀಡಿದರೆ ಒಟ್ಟು 3,159 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 2,477(ಶೇ.78.41) ಮತಗಳು ಚಲಾಯಿಸಲಾಗಿದೆ. ಆದರೆ ಇದರಲ್ಲಿ 35(ಶೇ.1.41)

ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 2,442(ಶೇ.98.59) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 2,442 ಮತಗಳೆಲ್ಲವೂ 3 ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ 11 ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ-5.4). ಈ ವಾರ್ಡ್‌ನಲ್ಲಿ ಮಹಿಳಾ ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದರಿಂದ ಮತದಾರ ಶೇ.100ರಷ್ಟು ಮತಗಳು ಪುರುಷರಿಗೆ ನೀಡಿರುವುದು ಕಂಡುಬರುತ್ತದೆ. ಈ ವಾರ್ಡ್‌ನಲ್ಲಿ ಮಹಿಳೆ ಅವಿರೋಧ ಆಯ್ಕೆಯಾಗಿರುವುದು ಮಹಿಳೆ ಸಬಲೀಕರಣಗೊಂಡಿಲ್ಲ ಎಂಬುದಕ್ಕೆ ಸಾಕ್ಷಿಯಾದಂತಾಗಿದೆ.

ನಾಗೇನಹಳ್ಳಿ ಗ್ರಾಮಪಂಚಾಯಿತಿಯ ನಾಲ್ಕನೇ ವಾರ್ಡ್ ಬೆಳಗೋಡು ಗ್ರಾಮಕ್ಕೆ 1 ಸ್ಥಾನ ಹಂಚಿಕೆಯಾಗಿದ್ದು, ಇದು ಸಾಮಾನ್ಯ(ಪ.ಜಾ) ಸ್ಥಾನವಾಗಿವೆ. ಈ 1 ಸ್ಥಾನಕ್ಕೆ 2 ಪುರುಷರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 1 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 1 ಮತವನ್ನು ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ 2 ಅಭ್ಯರ್ಥಿಗಳಲ್ಲಿ ಯಾರಿಗಾದರೂ ಒಬ್ಬರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ, ನಾಲ್ಕನೇ ವಾರ್ಡ್ ಬೆಳಗೋಡು ಗ್ರಾಮದಲ್ಲಿ 151 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 1 ಮತವನ್ನು ನೀಡಿದರೆ ಒಟ್ಟು 151 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 146(ಶೇ.96.68) ಮತಗಳು ಚಲಾಯಿಸಲಾಗಿದೆ. ಆದರೆ ಇದರಲ್ಲಿ 9(ಶೇ.6.16) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 137(ಶೇ.93.84) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 137 ಮತಗಳನ್ನು 1 ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ 2 ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ-5.4). ಈ ವಾರ್ಡ್‌ನಲ್ಲಿ ಮಹಿಳಾ ಸ್ಥಾನವು ಹಂಚಿಕೆಯಾಗದ್ದರಿಂದ ಮತದಾರ ಶೇ.100ರಷ್ಟು ಮತಗಳು ಪುರುಷರಿಗೆ ನೀಡಿರುವುದು ಕಂಡುಬರುತ್ತದೆ.

ನಾಗೇನಹಳ್ಳಿ ಗ್ರಾಮಪಂಚಾಯಿತಿಗೆ ಹಂಚಿಕೆಯಾದ 15 ಸ್ಥಾನಗಳಲ್ಲಿ ಶೇ.40(6)ರಷ್ಟು ಮಹಿಳಾ(ಪ.ಜಾ, ಹಿ.ವ.ಅ & ಸಾ) ಮೀಸಲು ಹಾಗೂ ಶೇ.60(9)ರಷ್ಟು ಸಾಮಾನ್ಯ(ಪ.ಜಾ, ಹಿ.ವ.ಅ & ಸಾ) ಸ್ಥಾನಗಳಾಗಿವೆ. ಮಹಿಳಾ ಮೀಸಲು ಸ್ಥಾನಗಳಲ್ಲಿ ಶೇ.16.66ರಷ್ಟು ಅವಿರೋಧ ಆಯ್ಕೆಯಾಗಿದೆ. ಉಳಿದ ಶೇ.83.34ರಷ್ಟು ಸ್ಥಾನಗಳಿಗೆ ಮಹಿಳೆಯರಲ್ಲಿ ಶೇ.1.3ರಷ್ಟು ಮಹಿಳೆಯರು ಸ್ಪರ್ಧಿಸಿದ್ದಾರೆ. ಹಾಗೆಯೇ ಸಾಮಾನ್ಯ ಸ್ಥಾನಗಳಿಗೆ ಪರುಷರಲ್ಲಿ ಶೇ.4.83ರಷ್ಟು ಪುರುಷರು ಸ್ಪರ್ಧಿಸಿದ್ದಾರೆ. 2001ರ ಜನಗಣತಿ ಪ್ರಕಾರ, ನಾಗೇನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಒಟ್ಟು 3,686 ಮತದಾರರು ಇದ್ದಾರೆ. ಈ ಪಂಚಾಯಿತಿಯ ಮತದಾರ ತನ್ನ ಮತಪತ್ರದಲ್ಲಿ ನೀಡಿದ ಒಟ್ಟು ಮತಗಳ ಮೌಲ್ಯ 10,801ರಷ್ಟು ಆಗುತ್ತದೆ. ಇದರಲ್ಲಿ ಶೇ.2.98ರಷ್ಟು(322) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮತದಾರರು ನೀಡಿದ ಮತಗಳ ಮೌಲ್ಯದಲ್ಲಿ ಶೇ.97.02(10,479) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 10,479 ಮತಗಳಲ್ಲಿ ನ್ಯಾಯೋಚಿತವಾಗಿ 5 ಮಹಿಳಾ

ಸ್ಥಾನಗಳಿಗೆ ಸ್ಪರ್ಧಿಸಿದ 12 ಮಹಿಳಾ ಅಭ್ಯರ್ಥಿಗಳಿಗೆ ಸೇರಿ ಶೇ.35.7(3,742)ರಷ್ಟು ಮತಗಳು ಹಾಗೂ 9 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 26 ಪುರುಷ ಅಭ್ಯರ್ಥಿಗಳಿಗೆ ಸೇರಿ ಶೇ.64.3(6,737)ರಷ್ಟು ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 10,479 ಮತಗಳಲ್ಲಿ ಶೇ.34(3,563)ರಷ್ಟು ಮತಗಳು 5 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ ಮಹಿಳಾ ಅಭ್ಯರ್ಥಿಗಳು ಪಡೆದರೆ ಶೇ.66(6,916)ರಷ್ಟು ಮತಗಳು 9 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ–5.4). ಈ ಗ್ರಾಮಪಂಚಾಯಿತಿಯಲ್ಲಿ ಮತದಾರರು ಮಹಿಳಾ ಅಭ್ಯರ್ಥಿಗಳಿಗೆ ನೀಡಬೇಕಿದ್ದ ಮತಗಳಿಗಿಂತ ಶೇ.1.7ರಷ್ಟು ಕಡಿಮೆ ಮತಗಳನ್ನು ಪಡೆದಿರುವುದು ಕಂಡುಬರುತ್ತದೆ. ಈ ಅಂಕಿ ಅಂಶಗಳ ಆಧಾರದ ಮೇಲೆ ಈ ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಸಬಲೀಕರಣ ಕಂಡುಬರುತ್ತಿಲ್ಲ ಎಂಬ ಸಂಗತಿ ಸ್ಪಷ್ಟವಾಗುತ್ತದೆ.

ಮಲೆನಾಡು ಗ್ರಾಮಪಂಚಾಯಿತಿಗಳು

ಬೇಡ್ಕಣಿ ಗ್ರಾಮಪಂಚಾಯಿತಿ: ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಯಲುಸೀಮೆಯ ಬೇಡ್ಕಣಿ ಗ್ರಾಮಪಂಚಾಯಿತಿಯಲ್ಲಿ ನಾಲ್ಕು ವಾರ್ಡ್‌ಗಳನ್ನು ರಚಿಸಲಾಗಿದ್ದು, ಒಂದನೇ ವಾರ್ಡ್‌ಗೆ 5 ಸ್ಥಾನಗಳು, ಎರಡನೇ ವಾರ್ಡ್‌ಗೆ 4 ಸ್ಥಾನಗಳು, ಮೂರನೇ ವಾರ್ಡ್‌ಗೆ 1 ಸ್ಥಾನ ಹಾಗು ನಾಲ್ಕನೇ ವಾರ್ಡ್‌ಗೆ 1 ಸ್ಥಾನವನ್ನು ಹಂಚಿಕೆ ಮಾಡಲಾಗಿದೆ. ಒಂದನೇ ವಾರ್ಡ್ ಬೇಡ್ಕಣಿಯಲ್ಲಿ 5 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 3 ಮಹಿಳಾ(ಪ.ಜಾ–1, ಹಿ.ವ.ಅ–1 & ಸಾ–1) ಮೀಸಲು ಮತ್ತು 2 ಸಾಮಾನ್ಯ(ಪುರುಷ) ಸ್ಥಾನಗಳಾಗಿವೆ. ಮಹಿಳಾ ಮೀಸಲು 3 ಸ್ಥಾನಗಳಿಗೆ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದು, ಉಳಿದ 2 ಸ್ಥಾನಗಳಿಗೆ 7 ಮಹಿಳೆಯರು ಮತ್ತು ಸಾಮಾನ್ಯ 2 ಸ್ಥಾನಗಳಿಗೆ 6 ಪುರುಷರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 4 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 4 ಮತಗಳಲ್ಲಿ 2 ಮತಗಳನ್ನು 2 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ 7 ಅಭ್ಯರ್ಥಿಗಳಲ್ಲಿ ಇಬ್ಬರಿಗೆ ಹಾಗೂ 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 6 ಅಭ್ಯರ್ಥಿಗಳಲ್ಲಿ ಇಬ್ಬರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ ಒಂದನೇ ವಾರ್ಡ್ ಬೇಡ್ಕಣಿಯಲ್ಲಿ 1,224 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 4 ಮತಗಳನ್ನು ನೀಡಿದರೆ ಒಟ್ಟು 4,896 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 3,952(ಶೇ.80.71) ಮತಗಳು ಚಲಾಯಿಸಲಾಗಿದೆ. ಆದರೆ ಇದರಲ್ಲಿ 29(ಶೇ.0.73) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 3,923(ಶೇ.99.27) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 3,923 ಮತಗಳಲ್ಲಿ ನ್ಯಾಯೋಚಿತವಾಗಿ 2 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 7 ಮಹಿಳಾ ಅಭ್ಯರ್ಥಿಗಳಿಗೆ ಸೇರಿ 1,961.5(ಶೇ.50) ಮತಗಳು ಹಾಗೂ 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 6 ಪುರುಷ ಅಭ್ಯರ್ಥಿಗಳಿಗೆ ಸೇರಿ 1,961.5(ಶೇ.50) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 3,923

ಮತಗಳಲ್ಲಿ ಶೇ.41.27(1,619) ಮತಗಳು 2 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ 7 ಮಹಿಳಾ ಅಭ್ಯರ್ಥಿಗಳಿಗೆ ಪಡೆದರೆ, ಶೇ.58.73(2,304) ಮತಗಳು 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 6 ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ–5.3). ಈ ವಾರ್ಡ್‌ನಲ್ಲಿ ಮತದಾರರು ಮಹಿಳಾ ಅಭ್ಯರ್ಥಿಗಳಿಗೆ ನೀಡಬೇಕಿದ್ದ ಮತಗಳಿಂತ ಶೇ.8.73ರಷ್ಟು ಕಡಿಮೆ ಮತಗಳು ನೀಡಿರುವುದು ಕಂಡುಬರುತ್ತದೆ. ಅಲ್ಲದೇ ಮಹಿಳೆ ಸಬಲೀಕರಣಗೊಂಡಿಲ್ಲ ಎಂಬುದಕ್ಕೆ ಪೂರಕವಾಗಿ ಈ ವಾರ್ಡ್‌ನಲ್ಲಿ ವಿಜೇತ ಪುರುಷ ಅಭ್ಯರ್ಥಿಗಳಿಂತ ವಿಜೇತ ಮಹಿಳಾ ಅಭ್ಯರ್ಥಿಗಳು ಕಡಿಮೆ ಪಡೆದ ಮತಗಳನ್ನು ಪಡೆದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–5.5.ಸಿ). ಈ ವಾರ್ಡ್‌ನಲ್ಲಿ ಮಹಿಳೆ ಅವಿರೋಧ ಆಯ್ಕೆಯಾಗಿರುವುದು ಮತ್ತು ವಿಜೇತ ಪುರುಷ ಅಭ್ಯರ್ಥಿಗಿಂತ ವಿಜೇತ ಮಹಿಳಾ ಅಭ್ಯರ್ಥಿಗಳಿಬ್ಬರು ಕಡಿಮೆ ಮತಗಳನ್ನು ಪಡೆದಿರುವುದು ಮಹಿಳಾ ಸಬಲೀಕರಣ ಕಂಡುಬರುವುದಿಲ್ಲವೆಂಬ ಅಂಶ ಸ್ಪಷ್ಟವಾಗುತ್ತದೆ.

ಬೇಡ್ಕಣಿ ಗ್ರಾಮಪಂಚಾಯಿತಿಯ ಎರಡನೇ ವಾರ್ಡ್ ತ್ಯಾರ್ಸಿಯಲ್ಲಿ 4 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 3 ಮಹಿಳಾ(ಪ.ಜಾ–1 & ಹಿ.ವ.ಅ–2) ಮೀಸಲು ಮತ್ತು 1 ಸಾಮಾನ್ಯ(ಸಾ) ಸ್ಥಾನಗಳಾಗಿವೆ. ಮಹಿಳಾ ಮೀಸಲು 3 ಸ್ಥಾನಗಳಿಗೆ 6 ಮಹಿಳೆಯರು ಮತ್ತು ಸಾಮಾನ್ಯ 1 ಸ್ಥಾನಕ್ಕೆ 4 ಪುರುಷರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 4 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 4 ಮತಗಳಲ್ಲಿ 3 ಮತಗಳನ್ನು 3 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ 6 ಅಭ್ಯರ್ಥಿಗಳಲ್ಲಿ ಯಾರಿಗಾದರೂ ಮೂವರಿಗೆ ಹಾಗೂ 1 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 4 ಅಭ್ಯರ್ಥಿಗಳಲ್ಲಿ ಒಬ್ಬರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ ಎರಡನೇ ವಾರ್ಡ್ ತ್ಯಾರ್ಸಿಯಲ್ಲಿ 1,158 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 4 ಮತಗಳನ್ನು ನೀಡಿದರೆ ಒಟ್ಟು 4,632 ಮತಗಳನ್ನು ನೀಡಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 3,512(ಶೇ.75.82) ಮತಗಳನ್ನು ಚಲಾಯಿಸಲಾಗಿದೆ. ಆದರೆ ಇದರಲ್ಲಿ 47(ಶೇ.1.34) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 3,465(ಶೇ.98.66) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 3,465 ಮತಗಳಲ್ಲಿ ನ್ಯಾಯೋಚಿತವಾಗಿ 3 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 6 ಮಹಿಳಾ ಅಭ್ಯರ್ಥಿಗಳಿಗೆ 2,599(ಶೇ.75) ಮತಗಳು ಹಾಗೂ 1 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 4 ಪುರುಷ ಅಭ್ಯರ್ಥಿಗಳಿಗೆ ಸೇರಿ 866(ಶೇ.25) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 3,465 ಮತಗಳಲ್ಲಿ ಶೇ.62.77(2,175) ಮತಗಳು 3 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 6 ಮಹಿಳಾ ಅಭ್ಯರ್ಥಿಗಳು ಪಡೆದರೆ, ಶೇ.37.23(1,290) ಮತಗಳು 1 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 4 ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ–5.4). ಈ ವಾರ್ಡ್‌ನ ಮತದಾರರು ಮಹಿಳಾ ಅಭ್ಯರ್ಥಿಗಳಿಗೆ ನೀಡಬೇಕಿದ್ದ ಮತಗಳಿಂತ ಶೇ.12.23ರಷ್ಟು ಕಡಿಮೆ ಮತಗಳು ನೀಡಿರುವುದು

ಕಂಡುಬರುತ್ತದೆ. ಆದರೆ ಈ ವಾರ್ಡ್‌ನಲ್ಲಿ ವಿಜೇತ ಮಹಿಳಾ ಅಭ್ಯರ್ಥಿಗಳಿಗಿಂತ ವಿಜೇತ ಪುರುಷ ಅಭ್ಯರ್ಥಿ ಹೆಚ್ಚು ಮತಗಳನ್ನು ಪಡೆದಿರುವುದರಿಂದ ಇಲ್ಲಿ ಮಹಿಳೆ ಸಬಲೀಕರಣಗೊಂಡಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ(ನೋಡಿ ಕೋಷ್ಟಕ-5.5.ಸಿ).

ಬೇಡ್ಕಣಿ ಗ್ರಾಮಪಂಚಾಯಿತಿಯ ಮೂರನೇ ವಾರ್ಡ್ ಭಾನ್ಕುಳಿಯಲ್ಲಿ 1 ಸ್ಥಾನ ಹಂಚಿಕೆಯಾಗಿದ್ದು, ಇದು ಸಾಮಾನ್ಯ(ಪುರುಷ) ಸ್ಥಾನವಾಗಿದೆ. ಈ 1 ಸ್ಥಾನಕ್ಕೆ 3 ಪುರುಷರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 1 ಮತವನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ, ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 1 ಮತವನ್ನು ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ 3 ಅಭ್ಯರ್ಥಿಗಳಲ್ಲಿ ಯಾರಿಗಾದರೂ ಒಬ್ಬರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ, ಮೂರನೇ ವಾರ್ಡ್ ಭಾನ್ಕುಳಿಯಲ್ಲಿ 288 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 1 ಮತವನ್ನು ನೀಡಿದರೆ ಒಟ್ಟು 288 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 256(ಶೇ.88.88) ಮತಗಳನ್ನು ಚಲಾಯಿಸಲಾಗಿದೆ. ಆದರೆ ಇದರಲ್ಲಿ 2(ಶೇ.6.16) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 254(ಶೇ.99.22) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 254 ಮತಗಳಲ್ಲೆವು 1 ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ 3 ಪುರುಷ ಅಭ್ಯರ್ಥಿಗಳು ಪಡೆದಿದ್ದಾರೆ(ನೋಡಿ ಕೋಷ್ಟಕ-5.4). ಈ ವಾರ್ಡ್‌ನಲ್ಲಿ ಹಂಚಿಕೆಯಾದ ಸಾಮಾನ್ಯ ಸ್ಥಾನಕ್ಕೆ ಯಾವ ಮಹಿಳೆ ಸ್ಪರ್ಧಿಸದಿದ್ದರಿಂದ ಮತದಾರ ಶೇ.100ರಷ್ಟು ಮತಗಳನ್ನು ಪುರುಷರಿಗೆ ನೀಡಿರುವುದು ಕಂಡುಬರುತ್ತದೆ. ಹಾಗೆಯೇ ಬೇಡ್ಕಣಿ ಗ್ರಾಮಪಂಚಾಯಿತಿಯ ನಾಲ್ಕನೇ ವಾರ್ಡ್ ಮುತ್ತಿಗೆಗೆ 1 ಸ್ಥಾನ ಹಂಚಿಕೆಯಾಗಿದ್ದು, ಇದು ಸಾಮಾನ್ಯ(ಪುರುಷ) ಸ್ಥಾನವಾಗಿದೆ. ಈ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿರುತ್ತದೆ.

ಬೇಡ್ಕಣಿ ಗ್ರಾಮಪಂಚಾಯಿತಿಗೆ ಹಂಚಿಕೆಯಾದ 11 ಸ್ಥಾನಗಳಲ್ಲಿ ಶೇ.54.55(6)ರಷ್ಟು ಮಹಿಳಾ ಮೀಸಲು ಹಾಗೂ ಶೇ.45.45(5)ರಷ್ಟು ಸಾಮಾನ್ಯ ಸ್ಥಾನಗಳಾಗಿವೆ. ಮಹಿಳಾ ಮೀಸಲು ಸ್ಥಾನಗಳಲ್ಲಿ ಶೇ.16.66ರಷ್ಟು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದೆ. ಉಳಿದ ಶೇ.83.84ರಷ್ಟು ಸ್ಥಾನಗಳಿಗೆ ಮಹಿಳೆಯರಲ್ಲಿ ಶೇ.3.ರಷ್ಟು ಮಹಿಳೆಯರು ಸ್ಪರ್ಧಿಸಿದ್ದಾರೆ. ಹಾಗೆಯೇ ಸಾಮಾನ್ಯ ಸ್ಥಾನಗಳಲ್ಲಿ ಶೇ.20ರಷ್ಟು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದೆ. ಉಳಿದ ಶೇ.80ರಷ್ಟು ಸ್ಥಾನಗಳಿಗೆ ಶೇ.2.47ರಷ್ಟು ಪುರುಷರು ಸ್ಪರ್ಧಿಸಿದ್ದಾರೆ. 2001ರ ಜನಗಣತಿ ಪ್ರಕಾರ, ಬೇಡ್ಕಣಿ ಗ್ರಾಮಪಂಚಾಯಿತಿಯಲ್ಲಿ ಒಟ್ಟು 3,144 ಮತದಾರರು ಇದ್ದಾರೆ. ಈ ಪಂಚಾಯಿತಿಯ ಮತದಾರ ತನ್ನ ಮತಪತ್ರದಲ್ಲಿ ನೀಡಿದ ಒಟ್ಟು ಮತಗಳ ಮೌಲ್ಯ 7,720ರಷ್ಟು ಆಗುತ್ತದೆ. ಇದರಲ್ಲಿ ಶೇ.1ರಷ್ಟು(78) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮತದಾರರು ನೀಡಿದ ಮತಗಳ ಮೌಲ್ಯದಲ್ಲಿ ಶೇ.99ರಷ್ಟು(7,642) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 7,642 ಮತಗಳಲ್ಲಿ ನ್ಯಾಯೋಚಿತವಾಗಿ 5 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 13 ಮಹಿಳಾ ಅಭ್ಯರ್ಥಿಗಳಿಗೆ ಸೇರಿ 4,246(ಶೇ.55.56) ಮತಗಳು

ಹಾಗೂ 4 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 13 ಪುರುಷ ಅಭ್ಯರ್ಥಿಗಳಿಗೆ ಸೇರಿ 3,396(ಶೇ.44.44) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 7,642 ಮತಗಳಲ್ಲಿ ಶೇ.49.65(3,794)ರಷ್ಟು ಮತಗಳನ್ನು 5 ಸ್ಥಾನಗಳಿಗೆ ಸ್ಪರ್ಧಿಸಿದ 13 ಮಹಿಳಾ ಅಭ್ಯರ್ಥಿಗಳು ಪಡೆದರೆ, ಶೇ.50.35ರಷ್ಟು ಮತಗಳು 4 ಸ್ಥಾನಗಳಿಗೆ ಸ್ಪರ್ಧಿಸಿದ 13 ಪುರುಷ ಅಭ್ಯರ್ಥಿಗಳು ಪಡೆದಿದ್ದಾರೆ(ನೋಡಿ ಕೋಷ್ಟಕ–5.4). ಈ ಗ್ರಾಮಪಂಚಾಯಿತಿಯಲ್ಲಿ ಮತದಾರರು ಮಹಿಳಾ ನೀಡಬೇಕಾಗಿದ್ದ ಮತಗಳಲ್ಲಿ ಶೇ.5.91ರಷ್ಟು ಕಡಿಮೆ ಮತಗಳನ್ನು ನೀಡಿರುವುದು ಕಂಡುಬರುತ್ತದೆ. ಅಲ್ಲದೇ ವಿಜೇತ ಪುರಷ ಅಭ್ಯರ್ಥಿಗಳಿಂತ ವಿಜೇತ ಮಹಿಳಾ ಅಭ್ಯರ್ಥಿಗಳು ಕಡಿಮೆ ಮತಗಳನ್ನು ಪಡೆದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–5.5.ಸಿ). ಆದ್ದರಿಂದ ಈ ಪಂಚಾಯಿತಿಯಲ್ಲಿ ಮಹಿಳೆ ಸಬಲೀಕರಣಗೊಂಡಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ. ಒಟ್ಟಾರೆಯಾಗಿ ಈ ಪಂಚಾಯಿತಿಯಲ್ಲಿ ಮಹಿಳೆ ಮತ್ತು ಪುರುಷ ಅಭ್ಯರ್ಥಿಗಳಿಗೆ ಹಂಚಿಕೆಯಾದ ಸ್ಥಾನಗಳ ಪ್ರಮಾಣ, ಇವರ ನಡುವೆ ಕಂಡುಬರುವ ಸ್ಪರ್ಧೆಯ ಪ್ರಮಾಣ ಮತ್ತು ಪಡೆದ ಮತಗಳ ಪ್ರಮಾಣ ಪರಸ್ಪರ ತೌಲನಿಕವಾಗಿ ವಿಶ್ಲೇಷಣೆ ಮಾಡಿ ತೀರ್ಮಾನಕ್ಕೆ ಬರಲಾಗಿದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ: ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಯಲುಸೀಮೆಯ ಕೋಲಸಿರ್ಸಿ ಗ್ರಾಮಪಂಚಾಯಿತಿಯಲ್ಲಿ ನಾಲ್ಕು ವಾರ್ಡ್‌ಗಳನ್ನು ರಚಿಸಲಾಗಿದ್ದು, ಒಂದನೇ ವಾರ್ಡ್‌ಗೆ 5 ಸ್ಥಾನಗಳು, ಎರಡನೇ ವಾರ್ಡ್‌ಗೆ 4 ಸ್ಥಾನಗಳು, ಮೂರು ಮತ್ತು ನಾಲ್ಕನೇ ವಾರ್ಡ್‌ಗಳಿಗೆ ತಲಾ 2 ಸ್ಥಾನಗಳನ್ನು ಹಂಚಿಕೆ ಮಾಡಲಾಗಿದೆ. ಒಂದನೇ ವಾರ್ಡ್ ಕೋಲಸಿರ್ಸಿಗೆ 5 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 3 ಮಹಿಳಾ(ಹಿ.ವ.ಅ–2 & ಸಾ–2) ಮೀಸಲು ಮತ್ತು 2 ಸಾಮಾನ್ಯ(ಹಿ.ವ.ಅ–1 & ಸಾ–1) ಸ್ಥಾನಗಳಾಗಿವೆ. ಮಹಿಳಾ ಮೀಸಲು 3 ಸ್ಥಾನಗಳಿಗೆ 9 ಮಹಿಳೆಯರು ಮತ್ತು ಸಾಮಾನ್ಯ 2 ಸ್ಥಾನಗಳಿಗೆ 15 ಪುರುಷರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 5 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ, ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 5 ಮತಗಳಲ್ಲಿ 3 ಮತಗಳನ್ನು 3 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ 9 ಅಭ್ಯರ್ಥಿಗಳಲ್ಲಿ ಮೂವರಿಗೆ ಹಾಗೂ 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 15 ಅಭ್ಯರ್ಥಿಗಳಲ್ಲಿ ಇಬ್ಬರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ, ಒಂದನೇ ವಾರ್ಡ್ ಕೋಲಸಿರ್ಸಿಯಲ್ಲಿ 1,325 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 5 ಮತಗಳನ್ನು ನೀಡಿದರೆ ಒಟ್ಟು 6,625 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 4,112(ಶೇ.62.06) ಮತಗಳು ಚಲಾಯಿಸಲಾಗಿದೆ. ಇದರಲ್ಲಿ 55(ಶೇ.1.37) ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 4,057(ಶೇ.98.66) ಮತಗಳು ಕ್ರಮಬದ್ಧವಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 4,057 ಮತಗಳಲ್ಲಿ ನ್ಯಾಯೋಚಿತವಾಗಿ 3 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 9 ಮಹಿಳಾ ಅಭ್ಯರ್ಥಿಗಳಿಗೆ ಸೇರಿ 2,434(ಶೇ.60) ಮತಗಳು ಹಾಗೂ 2

ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 15 ಪುರುಷ ಅಭ್ಯರ್ಥಿಗಳಿಗೆ ಸೇರಿ 1,623(ಶೇ.40) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 4,057 ಮತಗಳಲ್ಲಿ 3 ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ 9 ಮಹಿಳಾ ಅಭ್ಯರ್ಥಿಗಳು ಶೇ.36.30(1,473) ಮತಗಳು ಪಡೆದರೆ, 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 15 ಪುರುಷ ಅಭ್ಯರ್ಥಿಗಳು ಶೇ.63.70(2,584) ಮತಗಳು ಪಡೆದ್ದಾರೆ(ನೋಡಿ ಕೋಷ್ಟಕ–5.4). ಈ ವಾರ್ಡ್‌ನ ಮತದಾರರು ಮಹಿಳಾ ಅಭ್ಯರ್ಥಿಗಳಿಗೆ ನೀಡಬೇಕಿದ್ದ ಮತಗಳಲ್ಲಿ ಶೇ.23.7ರಷ್ಟು ಕಡಿಮೆ ಮತಗಳು ನೀಡಿರುವುದು ಕಂಡುಬರುತ್ತದೆ. ಮಹಿಳೆ ಸಬಲೀಕರಣಗೊಂಡಿಲ್ಲ ಎಂಬುದಕ್ಕೆ ಪೂರಕವಾಗಿ ಈ ವಾರ್ಡ್‌ನಲ್ಲಿ ವಿಜೇತ ಮಹಿಳಾ ಅಭ್ಯರ್ಥಿಗಳು ಪಡೆದ ಮತಗಳಿಂತ ಹೆಚ್ಚು ಮತಗಳನ್ನು ವಿಜೇತ ಪುರುಷ ಅಭ್ಯರ್ಥಿಗಳು ಪಡೆದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–5.5.ಡ). ಈ ವಾರ್ಡ್‌ನಲ್ಲಿ ನೀಡದ ಒಟ್ಟು ಮತಗಳಲ್ಲಿ ಮತ್ತು ವಿಜೇತ ಅಭ್ಯರ್ಥಿಗಳಲ್ಲಿ ವಿಜೇತ ಮಹಿಳೆಯರು ಕಡಿಮೆ ಮತಗಳನ್ನು ಪಡೆದಿರುವುದು ಮಹಿಳೆ ಸಬಲೀಕರಣಗೊಂಡಿಲ್ಲ ಎಂಬುದಕ್ಕೆ ಕಾರಣವಾಗುತ್ತದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿಯ ಎರಡನೇ ವಾರ್ಡ್ ಅವರಗುಪ್ಪಕ್ಕೆ 4 ಸ್ಥಾನಗಳು ಹಂಚಿಕೆಯಾಗಿದ್ದು, ಇದರಲ್ಲಿ 2 ಮಹಿಳಾ(ಪ.ಪಂ–1 & ಹಿ.ವ.ಅ–1) ಮೀಸಲು ಮತ್ತು 2 ಸಾಮಾನ್ಯ(ಸಾ–2) ಸ್ಥಾನಗಳಾಗಿವೆ. ಮಹಿಳಾ ಮೀಸಲು 2 ಸ್ಥಾನಗಳಲ್ಲಿ 1 ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿರುತ್ತದೆ. ಉಳಿದ 1 ಸ್ಥಾನಕ್ಕೆ 2 ಮಹಿಳೆಯರು ಮತ್ತು ಸಾಮಾನ್ಯ 2 ಸ್ಥಾನಗಳಿಗೆ 11 ಪುರುಷರು ಸ್ಪರ್ಧಿಸಿದ್ದಾರೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 3 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ, ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 3 ಮತಗಳಲ್ಲಿ 1 ಮತವನ್ನು ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 2 ಅಭ್ಯರ್ಥಿಗಳಲ್ಲಿ ಯಾರಿಗಾದರೂ ಒಬ್ಬರಿಗೆ ಹಾಗೂ 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 11 ಅಭ್ಯರ್ಥಿಗಳಲ್ಲಿ ಇಬ್ಬರಿಗೆ ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ, ಎರಡನೇ ವಾರ್ಡ್ ಅವರಗುಪ್ಪದಲ್ಲಿ 1,160 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 3 ಮತಗಳನ್ನು ನೀಡಿದರೆ ಒಟ್ಟು 3,480 ಮತಗಳನ್ನು ನೀಡಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 2,270(ಶೇ.65.22) ಮತಗಳನ್ನು ಚಲಾಯಿಸಲಾಗಿದೆ. ಆದರೆ ಇದರಲ್ಲಿ 20(ಶೇ.0.88) ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 2,250(ಶೇ.99.12) ಕ್ರಮಬದ್ಧ ಮತಗಳಾಗಿವೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ ಮೂರು ಮತಗಳನ್ನು ನೀಡಿದ್ದಾದರೆ, ಕ್ರಮಬದ್ಧವಾಗಿ ಚಲಾಯಿಸಿದ 2,250 ಮತಗಳಲ್ಲಿ ನ್ಯಾಯೋಚಿತವಾಗಿ 1 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 2 ಮಹಿಳಾ ಅಭ್ಯರ್ಥಿಗಳಿಗೆ 750(ಶೇ.33.33) ಮತಗಳು ಹಾಗೂ 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 11 ಪುರುಷ ಅಭ್ಯರ್ಥಿಗಳಿಗೆ ಸೇರಿ 1,500(ಶೇ.66.67) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿ 2,250 ಮತಗಳಲ್ಲಿ 1 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 2 ಮಹಿಳಾ ಅಭ್ಯರ್ಥಿಗಳು ಶೇ.18.18(409) ಮತಗಳು

ಪಡೆದರೆ, 2 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 11 ಪುರುಷ ಅಭ್ಯರ್ಥಿಗಳು ಶೇ.81.82 ಮತಗಳು ಪಡೆದಿದ್ದಾರೆ(ನೋಡಿ ಕೋಷ್ಟಕ–5.4). ಈ ವಾರ್ಡ್‌ನ ಮತದಾರರು ಮಹಿಳಾ ಅಭ್ಯರ್ಥಿಗಳಿಗೆ ನೀಡಬೇಕಿದ್ದ ಮತಗಳಲ್ಲಿ ಶೇ.15.15ರಷ್ಟು ಕಡಿಮೆ ಮತಗಳು ನೀಡಿರುವುದು ಕಂಡುಬರುತ್ತದೆ. ಅಲ್ಲದೇ ಈ ವಾರ್ಡ್‌ನಲ್ಲಿ ವಿಜೇತ ಪುರುಷ ಅಭ್ಯರ್ಥಿಗಳಿಂತ ವಿಜೇತ ಮಹಿಳಾ ಅಭ್ಯರ್ಥಿಯು ಕಡಿಮೆ ಮತಗಳನ್ನು ಪಡೆದಿರುವುದರಿಂದ ಇಲ್ಲಿ ಮಹಿಳೆ ಸಬಲೀಕರಣಗೊಂಡಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ(ನೋಡಿ ಕೋಷ್ಟಕ–5.5.ಡ).

ಕೋಲಸಿರ್ಸಿ ಗ್ರಾಮಪಂಚಾಯಿತಿಯ ಮೂರನೇ ವಾರ್ಡ್ ಕುಣಿಜಿಗೆ 2 ಸ್ಥಾನಗಳು ಹಂಚಿಕೆಯಾಗಿದೆ. ಇದರಲ್ಲಿ 1 ಸ್ಥಾನ ಪರಿಶಿಷ್ಟ ಪಂಗಡ ಮಹಿಳಾ ಮೀಸಲು ಹಾಗೂ 1 ಸ್ಥಾನ ಸಾಮಾನ್ಯ(ಸಾಮಾನ್ಯ) ಸ್ಥಾನವಾಗಿದೆ. ಮಹಿಳಾ ಮೀಸಲು 1 ಸ್ಥಾನಕ್ಕೆ 2 ಮಹಿಳೆಯರು ಹಾಗೂ 1 ಸಾಮಾನ್ಯ ಸ್ಥಾನಕ್ಕೆ 5 ಪುರುಷರು ಸ್ಪರ್ಧಿಸಿದ್ದಾರೆ. ಆದ್ದರಿಂದ ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 2 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 2 ಮತಗಳಲ್ಲಿ 1 ಮತವನ್ನು 1 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 2 ಮಹಿಳಾ ಅಭ್ಯರ್ಥಿಗಳಲ್ಲಿ ಒಬ್ಬರಿಗೆ ಹಾಗೂ 1 ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ 5 ಅಭ್ಯರ್ಥಿಗಳಲ್ಲಿ ಯಾರಿಗಾದರೂ ಒಬ್ಬರಿಗೆ ಒಂದು ಮತ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ ಮೂರನೇ ವಾರ್ಡ್ ಕುಣಿಜಿಯಲ್ಲಿ 690 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 2 ಮತಗಳನ್ನು ನೀಡಿದರೆ ಒಟ್ಟು 1380 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 996(ಶೇ.72.17) ಮತಗಳನ್ನು ಚಲಾಯಿಸಲಾಗಿದೆ. ಆದರೆ ಇದರಲ್ಲಿ 14(ಶೇ.1.40) ಮತಗಳು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 982(ಶೇ.98.60) ಕ್ರಮಬದ್ಧ ಮತಗಳಾಗಿವೆ. ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ ಎರಡು ಮತಗಳನ್ನು ನೀಡಿದ್ದಾದರೆ, ಕ್ರಮಬದ್ಧವಾಗಿ ಚಲಾಯಿಸಿದ 982 ಮತಗಳಲ್ಲಿ ನ್ಯಾಯೋಚಿತವಾಗಿ 1 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 2 ಮಹಿಳಾ ಅಭ್ಯರ್ಥಿಗಳಿಗೆ ಸೇರಿ 491(ಶೇ.50) ಮತಗಳು ಹಾಗೂ 1 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 5 ಪುರುಷ ಅಭ್ಯರ್ಥಿಗಳಿಗೆ ಸೇರಿ 491(ಶೇ.50) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿ 982 ಮತಗಳಲ್ಲಿ 1 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 2 ಮಹಿಳಾ ಅಭ್ಯರ್ಥಿಗಳು ಶೇ.36.35(357) ಮತಗಳು ಪಡೆದರೆ, 1 ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಿದ 5 ಪುರುಷ ಅಭ್ಯರ್ಥಿಗಳು ಶೇ.63.65(625) ಮತಗಳು ಪಡೆದಿದ್ದಾರೆ(ನೋಡಿ ಕೋಷ್ಟಕ–5.4). ಈ ವಾರ್ಡ್‌ನ ಮತದಾರರು ಮಹಿಳಾ ಅಭ್ಯರ್ಥಿಗಳಿಗೆ ನೀಡಬೇಕಿದ್ದ ಮತಗಳಲ್ಲಿ ಶೇ.13.56ರಷ್ಟು ಕಡಿಮೆ ಮತಗಳು ನೀಡಿರುವುದು ಕಂಡುಬರುತ್ತದೆ. ಅಲ್ಲದೇ ಈ ವಾರ್ಡ್‌ನಲ್ಲಿ ವಿಜೇತ ಮಹಿಳಾ ಅಭ್ಯರ್ಥಿ ವಿಜೇತ ಪುರುಷ ಅಭ್ಯರ್ಥಿಗಿಂತ ಹೆಚ್ಚು ಮತಗಳನ್ನು ಪಡೆದಿರುವುದರಿಂದ ಹಿಂದೆ ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿ ಪುರಷನ ಕೈವಾಡವಿರುವುದು ಕ್ಷೇತ್ರ ಅಧ್ಯಯನದಲ್ಲಿ ತಿಳಿದು ಬಂದಿದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿಯ ನಾಲ್ಕನೇ ವಾರ್ಡ್ ಮಂಡ್ಲಿಕೊಪ್ಪಕ್ಕೆ 2 ಸ್ಥಾನಗಳು ಹಂಚಿಕೆಯಾಗಿದೆ. ಇದರಲ್ಲಿ 1 ಸ್ಥಾನ ಸಾಮಾನ್ಯ ಮಹಿಳಾ ಮೀಸಲು ಹಾಗೂ 1 ಹಿಂದುಳಿದ ವರ್ಗ(ಬಿ)ಸ್ಥಾನ ಸಾಮಾನ್ಯ ಸ್ಥಾನವಾಗಿದೆ. ಮಹಿಳಾ ಮೀಸಲು 1 ಸ್ಥಾನಕ್ಕೆ 5 ಮಹಿಳೆಯರು ಸ್ಪರ್ಧಿಸಿದ್ದರೆ, 1 ಸಾಮಾನ್ಯ ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿರುತ್ತದೆ. ಆದ್ದರಿಂದ ಈ ವಾರ್ಡ್‌ನ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 1 ಮತಗಳನ್ನು ನೀಡಲು ಅರ್ಹನಾಗುತ್ತಾನೆ. ಅಂದರೆ, ಈ ವಾರ್ಡ್‌ನ ಮತದಾರ ತನ್ನ ಮತಪತ್ರದಲ್ಲಿ ಚಲಾಯಿಸಬೇಕಾದ 1 ಮತವನ್ನು 1 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 5 ಮಹಿಳಾ ಅಭ್ಯರ್ಥಿಗಳಲ್ಲಿ ಯಾರಿಗಾದರೂ ಒಬ್ಬರಿಗೆ ನೀಡಬೇಕಾಗುತ್ತದೆ. 2001ರ ಜನಗಣತಿ ಪ್ರಕಾರ, ನಾಲ್ಕನೇ ವಾರ್ಡ್ ಮಂಡ್ಲಿಕೊಪ್ಪದಲ್ಲಿ 494 ಮತದಾರರು ಇರುವರು. ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ 1 ಮತವನ್ನು ನೀಡಿದರೆ ಒಟ್ಟು 494 ಮತಗಳನ್ನು ಚಲಾಯಿಸಿದಂತಾಗುತ್ತದೆ. ಆದರೆ 2010ರಲ್ಲಿ ಜರುಗಿದ ನಾಲ್ಕನೇ ಅವಧಿಯ ಚುನಾವಣೆಯಲ್ಲಿ ಈ ವಾರ್ಡ್‌ನಲ್ಲಿ ಒಟ್ಟು 382(ಶೇ.77.32) ಮತಗಳು ಚಲಾಯಿಸಲಾಗಿದೆ. ಈ ಮತಗಳಲ್ಲಿ ಕುಲಗೆಟ್ಟ ಮತಗಳಿಲ್ಲ. ಆದ್ದರಿಂದ ಈ ವಾರ್ಡ್‌ನಲ್ಲಿ ಮತದಾರರು ನೀಡಿದ ಮತಗಳಲ್ಲಿ 382(ಶೇ.77.32) ಕ್ರಮಬದ್ಧ ಮತಗಳಾಗಿವೆ. ಸಾಮಾನ್ಯ ಸ್ಥಾನಕ್ಕೆ ಅವಿರೋಧ ಆಯ್ಕೆಯಾಗಿದ್ದರಿಂದ ಈ ವಾರ್ಡ್ ಪ್ರತಿಯೊಬ್ಬ ಮತದಾರ ತನ್ನ ಮತಪತ್ರದಲ್ಲಿ ನೀಡಿದ 382 ಮತಗಳೆಲ್ಲವು 1 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 2 ಮಹಿಳಾ ಅಭ್ಯರ್ಥಿಗಳಿಗೆ ನೀಡಿದಂತಾಗಿದೆ(ನೋಡಿ ಕೋಷ್ಟಕ–5.4).

ಕೋಲಸಿರ್ಸಿ ಗ್ರಾಮಪಂಚಾಯಿತಿಗೆ ಹಂಚಿಕೆಯಾದ 13 ಸ್ಥಾನಗಳಲ್ಲಿ ಶೇ.54ರಷ್ಟು ಮಹಿಳಾ ಮೀಸಲು ಹಾಗೂ ಶೇ.46ರಷ್ಟು ಸಾಮಾನ್ಯ ಸ್ಥಾನಗಳಾಗಿವೆ. ಮಹಿಳಾ ಮೀಸಲು 13 ಸ್ಥಾನಗಳಲ್ಲಿ ಶೇ.14(1)ರಷ್ಟು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದೆ. ಉಳಿದ ಶೇ.86(6)ರಷ್ಟು ಸ್ಥಾನಗಳಿಗೆ ಮಹಿಳೆಯರಲ್ಲಿ ಶೇ.4.1ರಷ್ಟು ಮಹಿಳೆಯರು ಸ್ಪರ್ಧಿಸಿದ್ದಾರೆ. ಹಾಗೆಯೇ ಸಾಮಾನ್ಯ 6 ಸ್ಥಾನಗಳಲ್ಲಿ ಶೇ.17(1)ರಷ್ಟು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದೆ. ಉಳಿದ ಶೇ.83.33(5)ರಷ್ಟು ಸ್ಥಾನಗಳಿಗೆ ಪುರುಷರಲ್ಲಿ ಶೇ.7.3ರಷ್ಟು ಪುರುಷರು ಸ್ಪರ್ಧಿಸಿದ್ದಾರೆ. 2001ರ ಜನಗಣತಿ ಪ್ರಕಾರ, ಕೋಲಸಿರ್ಸಿ ಗ್ರಾಮಪಂಚಾಯಿತಿಯಲ್ಲಿ ಒಟ್ಟು 3669 ಮತದಾರರು ಇರುವರು. ಈ ಪಂಚಾಯಿತಿಯ ಮತದಾರ ತನ್ನ ಮತಪತ್ರದಲ್ಲಿ ನೀಡಿದ ಒಟ್ಟು ಮತಗಳ ಮೌಲ್ಯ 7760ರಷ್ಟು ಆಗುತ್ತದೆ. ಇದರಲ್ಲಿ ಶೇ.1.15ರಷ್ಟು(89) ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮತದಾರರು ನೀಡಿದ ಮತಗಳ ಮೌಲ್ಯದಲ್ಲಿ ಶೇ.98.85ರಷ್ಟು(7,671) ಕ್ರಮಬದ್ಧ ಮತಗಳಾಗಿವೆ. ಕ್ರಮಬದ್ಧವಾಗಿ ಚಲಾಯಿಸಿದ 7,671 ಮತಗಳಲ್ಲಿ ನ್ಯಾಯೋಚಿತವಾಗಿ 6 ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ 18 ಮಹಿಳಾ ಅಭ್ಯರ್ಥಿಗಳಿಗೆ ಸೇರಿ 4,184(ಶೇ.54.54) ಮತಗಳು ಹಾಗೂ 5 ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ 31 ಪುರುಷ ಅಭ್ಯರ್ಥಿಗಳಿಗೆ ಸೇರಿ 3,487(ಶೇ.45.46) ಮತಗಳು ಬರಬೇಕಾಗುತ್ತದೆ. ಆದರೆ ಕ್ರಮಬದ್ಧವಾಗಿ ಚಲಾಯಿಸಿದ 7,671 ಮತಗಳಲ್ಲಿ ಶೇ.34.16(2,621)ರಷ್ಟು ಮತಗಳು ಮಹಿಳಾ ಅಭ್ಯರ್ಥಿಗಳು ಪಡೆದರೆ, ಶೇ.65.84(5050)ರಷ್ಟು ಮತಗಳು ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ–

5.4). ಈ ಗ್ರಾಮಪಂಚಾಯಿತಿಯಲ್ಲಿ ಮತದಾರರು ಮಹಿಳಾ ಅಭ್ಯರ್ಥಿಗಳಿಗೆ ನೀಡಬೇಕಿದ್ದ ಮತಗಳಲ್ಲಿ ಶೇ.20.39ರಷ್ಟು ಕಡಿಮೆ ಮತಗಳು ನೀಡಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಪಡೆದ ಮತಗಳ ಈ ಅಂಕಿ ಅಂಶಗಳ ಆಧಾರದ ಮೇಲೆ ಈ ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಸಬಲೀಕರಣವನ್ನು ವಿಶ್ಲೇಷಣೆ ಮಾಡಲಾಗಿದೆ. ಈ ಪಂಚಾಯಿತಿಯಲ್ಲಿ ಮಹಿಳೆ ಮತ್ತು ಪುರುಷ ಅಭ್ಯರ್ಥಿಗಳಿಗೆ ಹಂಚಿಕೆಯಾದ ಸ್ಥಾನಗಳ ಪ್ರಮಾಣ, ಇವರ ನಡುವೆ ಕಂಡು ಬರುವ ಸ್ಪರ್ಧೆಯ ಪ್ರಮಾಣ ಮತ್ತು ಪಡೆದ ಮತಗಳ ಪ್ರಮಾಣ ಪರಸ್ಪರ ತೌಲನಿಕವಾಗಿ ವಿಶ್ಲೇಷಣೆ ಮಾಡಿ ತೀರ್ಮಾನಕ್ಕೆ ಬರಲಾಗಿದೆ. ಪಂಚಾಯಿತಿಯ ಒಟ್ಟು ಸ್ಥಾನಗಳಲ್ಲಿ ಶೇ.7.7ರಷ್ಟು ಹೆಚ್ಚು ಮಹಿಳಾ ಸ್ಥಾನಗಳಿದ್ದು, ಶೇ.20.39ರಷ್ಟು ಕಡಿಮೆ ಮತ ಪಡೆದಿರುವುದು ಹಾಗೂ ಮಹಿಳಾ ವಿಜೇತ ಅಭ್ಯರ್ಥಿ ಪುರುಷ ವಿಜೇತ ಅಭ್ಯರ್ಥಿಗಿಂತ ಕಡಿಮೆ ಮತಗಳನ್ನು ಪಡೆದಿರುವುದರಿಂದ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಿಳೆ ಸಬಲೀಕರಣಗೊಂಡಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ತೌಲನಿಕ ಅಧ್ಯಯನ

ಬಯಲುಸೀಮೆಯ ಬಳ್ಳಾರಿ ಜಿಲ್ಲೆಯ, ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಿಗೆ ಹಂಚಿಕೆಯಾದ 25 ಸ್ಥಾನಗಳಲ್ಲಿ ಶೇ.44ರಷ್ಟು ಮಹಿಳಾ ಮೀಸಲು ಹಾಗೂ ಶೇ.56ರಷ್ಟು ಸಾಮಾನ್ಯ ಸ್ಥಾನಗಳಾಗಿವೆ. ಮಹಿಳಾ ಮೀಸಲು 11 ಸ್ಥಾನಗಳಲ್ಲಿ ಶೇ.18(2)ರಷ್ಟು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದೆ. ಉಳಿದ 9(ಶೇ.82ರಷ್ಟು) ಸ್ಥಾನಗಳಿಗೆ ಮಹಿಳೆಯರಲ್ಲಿ ಶೇ.4.1ರಷ್ಟು ಮಹಿಳೆಯರು ಸ್ಪರ್ಧಿಸಿದ್ದಾರೆ. ಹಾಗೆಯೇ ಸಾಮಾನ್ಯ 14 ಸ್ಥಾನಗಳಲ್ಲಿ ಪುರುಷರಲ್ಲಿ ಶೇ.10.9ರಷ್ಟು ಪುರುಷರು ಸ್ಪರ್ಧಿಸಿದ್ದಾರೆ. 2001ರ ಜನಗಣತಿ ಪ್ರಕಾರ, ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಈ ಎರಡು ಗ್ರಾಮಪಂಚಾಯಿತಿಗಳಲ್ಲಿ ಒಟ್ಟು 6,177 ಮತದಾರರು ಇರುವರು. 2010ರಲ್ಲಿ ನಾಲ್ಕನೇ ಅವಧಿಗೆ ಜರುಗಿದ ಚುನಾವಣೆಯಲ್ಲಿ ಈ ಎರಡು ಗ್ರಾಮಪಂಚಾಯಿತಿಗಳ ಮತದಾರ ತನ್ನ ಮತಪತ್ರದಲ್ಲಿ ನೀಡಿದ ಒಟ್ಟು ಮತಗಳ ಮೌಲ್ಯ 16,670ರಷ್ಟು ಆಗುತ್ತದೆ. ಆದರೆ ಇದರಲ್ಲಿ ಶೇ.2.40ರಷ್ಟು(400) ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ಪಂಚಾಯಿತಿಗಳ ಮತದಾರರು ನೀಡಿದ ಒಟ್ಟು ಮತಗಳ ಮೌಲ್ಯದಲ್ಲಿ ಶೇ.97.60ರಷ್ಟು(16,270) ಕ್ರಮಬದ್ಧ ಮತಗಳಾಗಿವೆ. ಬಯಲುಸೀಮೆ ಗ್ರಾಮಪಂಚಾಯಿತಿಗಳಲ್ಲಿ ಮತದಾರರು ತಮ್ಮ ಮತಪತ್ರದಲ್ಲಿ ಚಲಾಯಿಸಿದ ಕ್ರಮಬದ್ಧವಾಗಿ 16,270 ಮತಗಳಲ್ಲಿ ನ್ಯಾಯೋಚಿತವಾಗಿ ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸಿದ ಮಹಿಳಾ ಅಭ್ಯರ್ಥಿಗಳಿಗೆ ಶೇ.39.13(6,367) ಮತಗಳು ಹಾಗೂ ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಪುರುಷ ಅಭ್ಯರ್ಥಿಗಳಿಗೆ ಶೇ.60.87(9,903) ಮತಗಳು ಬರಬೇಕಾಗುತ್ತದೆ. ಆದರೆ 2010ರಲ್ಲಿ ನಾಲ್ಕನೇ ಅವಧಿಗೆ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಕ್ರಮಬದ್ಧವಾಗಿ ಚಲಾಯಿಸಿದ 16,270 ಮತಗಳಲ್ಲಿ ಶೇ.36.77(5,976)ರಷ್ಟು ಮತಗಳನ್ನು ಮಹಿಳಾ ಅಭ್ಯರ್ಥಿಗಳು ಪಡೆದರೆ, ಶೇ.63.23(10,294)ರಷ್ಟು ಮತಗಳನ್ನು ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ–5.4). ಬಳ್ಳಾರಿ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಮತದಾರರು ಮಹಿಳಾ ಅಭ್ಯರ್ಥಿಗಳಿಗೆ

ನೀಡಬೇಕಿದ್ದ ಮತಗಳಲ್ಲಿ ಶೇ.2.36ರಷ್ಟು ಕಡಿಮೆ ಮತಗಳನ್ನು ನೀಡಿರುವುದು ಕಂಡುಬರುತ್ತದೆ. ಬಯಲುಸೀಮೆ ಗ್ರಾಮಪಂಚಾಯಿತಿಗಳಲ್ಲಿ ಒಟ್ಟು ಸ್ಥಾನಗಳಲ್ಲಿ ಶೇ.12ರಷ್ಟು ಕಡಿಮೆ ಮಹಿಳಾ ಸ್ಥಾನಗಳು, ಪುರುಷ ಅಭ್ಯರ್ಥಿಗಳ ಸ್ಪರ್ಧೆಯ(ಶೇ.11) ಪ್ರಮಾಣಕ್ಕಿಂತ ಮಹಿಳಾ ಸ್ಪರ್ಧೆಯ(ಶೇ.5ರಷ್ಟು) ಪ್ರಮಾಣ ಶೇ.6ರಷ್ಟು ಕಡಿಮೆ ಸ್ಪರ್ಧೆ ಮತ್ತು ಮಹಿಳೆ ಶೇ.2.36ರಷ್ಟು ಕಡಿಮೆ ಮತ ಪಡೆದಿರುವುದು ಕಂಡುಬರುತ್ತದೆ. ಅಲ್ಲದೇ, ವಿಜೇತ ಪುರುಷ ಅಭ್ಯರ್ಥಿಗಳಿಗಿಂತ ವಿಜೇತ ಮಹಿಳಾ ಅಭ್ಯರ್ಥಿಗಳು ಕಡಿಮೆ ಮತಗಳನ್ನು ಪಡೆದಿರುವುದು ಸ್ಪಷ್ಟವಾಗಿ ಕಂಡುಬಂದಿರುವುದರಿಂದ ಬಯಲುಸೀಮೆ ಗ್ರಾಮಪಂಚಾಯಿತಿಯಲ್ಲಿ ಮಹಿಳೆ ಸಬಲೀಕರಣಗೊಂಡಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಮಲೆನಾಡಿನ ಉತ್ತರ ಕನ್ನಡ ಜಿಲ್ಲೆಯ, ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಿಗೆ ಹಂಚಿಕೆಯಾದ 24 ಸ್ಥಾನಗಳಲ್ಲಿ ಶೇ.54(13)ರಷ್ಟು ಮಹಿಳಾ ಮೀಸಲು ಹಾಗೂ ಶೇ.46(11)ರಷ್ಟು ಸಾಮಾನ್ಯ ಸ್ಥಾನಗಳಾಗಿವೆ. ಮಹಿಳಾ ಮೀಸಲು ಸ್ಥಾನಗಳಲ್ಲಿ ಶೇ.15(2)ರಷ್ಟು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದೆ. ಉಳಿದ 11(ಶೇ.85ರಷ್ಟು) ಸ್ಥಾನಗಳಿಗೆ ಮಹಿಳೆಯರಲ್ಲಿ ಶೇ.7.1ರಷ್ಟು ಮಹಿಳೆಯರು ಸ್ಪರ್ಧಿಸಿದ್ದಾರೆ. ಹಾಗೆಯೇ ಸಾಮಾನ್ಯ ಸ್ಥಾನಗಳಲ್ಲಿ ಶೇ.18ರಷ್ಟು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದೆ. ಉಳಿದ ಶೇ.82ರಷ್ಟು ಸ್ಥಾನಗಳಿಗೆ ಪುರುಷರಲ್ಲಿ ಶೇ.8.5ರಷ್ಟು ಪುರುಷರು ಸ್ಪರ್ಧಿಸಿದ್ದಾರೆ. 2001ರ ಜನಗಣತಿ ಪ್ರಕಾರ, ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಈ ಎರಡು ಗ್ರಾಮಪಂಚಾಯಿತಿಗಳಲ್ಲಿ ಒಟ್ಟು 6,813 ಮತದಾರರು ಇರುವರು. 2010ರಲ್ಲಿ ನಾಲ್ಕನೇ ಅವಧಿಗೆ ಜರುಗಿದ ಚುನಾವಣೆಯಲ್ಲಿ ಈ ಎರಡು ಗ್ರಾಮಪಂಚಾಯಿತಿಗಳ ಮತದಾರ ತನ್ನ ಮತಪತ್ರದಲ್ಲಿ ನೀಡಿದ ಒಟ್ಟು ಮತಗಳ ಮೌಲ್ಯ 15,480ರಷ್ಟು ಆಗುತ್ತದೆ. ಆದರೆ ಇದರಲ್ಲಿ ಶೇ.1(167)ರಷ್ಟು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ಪಂಚಾಯಿತಿಗಳ ಮತದಾರರು ನೀಡಿದ ಒಟ್ಟು ಮತಗಳ ಮೌಲ್ಯದಲ್ಲಿ ಶೇ.99(15,313)ರಷ್ಟು ಕ್ರಮಬದ್ಧ ಮತಗಳಾಗಿವೆ. ಮಲೆನಾಡು ಗ್ರಾಮಪಂಚಾಯಿತಿಗಳಲ್ಲಿ ಮತದಾರರು ತಮ್ಮ ಮತಪತ್ರದಲ್ಲಿ ಚಲಾಯಿಸಿದ ಕ್ರಮಬದ್ಧವಾದ 15,313 ಮತಗಳಲ್ಲಿ ನ್ಯಾಯೋಚಿತವಾಗಿ ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ ಮಹಿಳಾ ಅಭ್ಯರ್ಥಿಗಳಿಗೆ ಶೇ.55(8,422) ಮತಗಳು ಹಾಗೂ ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಪುರುಷ ಅಭ್ಯರ್ಥಿಗಳಿಗೆ ಶೇ.45(6,891) ಮತಗಳು ಹಂಚಿಕೆಯಾಗಬೇಕಾಗುತ್ತದೆ. ಆದರೆ 2010ರಲ್ಲಿ ನಾಲ್ಕನೇ ಅವಧಿಗೆ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಕ್ರಮಬದ್ಧವಾಗಿ ಚಲಾಯಿಸಿದ 15,313 ಮತಗಳಲ್ಲಿ ಶೇ.42(6,415)ರಷ್ಟು ಮತಗಳನ್ನು ಮಹಿಳಾ ಅಭ್ಯರ್ಥಿಗಳು ಪಡೆದರೆ, ಶೇ.58(8,898)ರಷ್ಟು ಮತಗಳನ್ನು ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಪುರುಷ ಅಭ್ಯರ್ಥಿಗಳು ಪಡೆದ್ದಾರೆ(ನೋಡಿ ಕೋಷ್ಟಕ–5.4). ಉತ್ತರ ಕನ್ನಡ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಮತದಾರರು ಮಹಿಳಾ ಅಭ್ಯರ್ಥಿಗಳಿಗೆ ನೀಡಬೇಕಿದ್ದ ಮತಗಳಲ್ಲಿ ಶೇ.13ರಷ್ಟು ಕಡಿಮೆ ಮತಗಳನ್ನು ನೀಡಿರುವುದು ಕಂಡುಬರುತ್ತದೆ. ಮಲೆನಾಡು ಗ್ರಾಮಪಂಚಾಯಿತಿಗಳ ಒಟ್ಟು ಸ್ಥಾನಗಳಲ್ಲಿ ಶೇ.8.34ರಷ್ಟು ಹೆಚ್ಚು ಮಹಿಳಾ ಸ್ಥಾನಗಳು ಹಂಚಿಕೆಯಾಗಿದ್ದರೂ, ಪುರುಷ ಅಭ್ಯರ್ಥಿಗಳ ಸ್ಪರ್ಧೆಯ(ಶೇ.11) ಪ್ರಮಾಣಕ್ಕಿಂತ ಮಹಿಳಾ ಸ್ಪರ್ಧೆಯ(ಶೇ.9ರಷ್ಟು) ಪ್ರಮಾಣ ಶೇ.3ರಷ್ಟು ಕಡಿಮೆ ಮತ್ತು ಶೇ.13ರಷ್ಟು ಕಡಿಮೆ ಮತಗಳನ್ನು

ಪಡೆದಿರುವುದು ಕಂಡುಬರುತ್ತದೆ. ಅಲ್ಲದೇ ವಿಜೇತ ಪುರುಷ ಅಭ್ಯರ್ಥಿಗಳಿಗಿಂತ ವಿಜೇತ ಮಹಿಳಾ ಅಭ್ಯರ್ಥಿಗಳು ಕಡಿಮೆ ಮತಗಳನ್ನು ಪಡೆದಿರುವುದು ಸ್ಪಷ್ಟವಾಗಿ ಕಂಡುಬಂದಿರುವುದರಿಂದ ಮಲೆನಾಡು ಗ್ರಾಮಪಂಚಾಯಿತಿಯಲ್ಲಿ ಮಹಿಳೆ ಸಬಲೀಕರಣಗೊಂಡಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಬಳ್ಳಾರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ತಲಾ ಎರಡೆರಡು ಗ್ರಾಮಪಂಚಾಯಿತಿಗಳಲ್ಲಿ ಹಂಚಿಕೆಯಾದ ಸ್ಥಾನಗಳನ್ನು ರಾಜ್ಯಕ್ಕೆ ಹೋಲಿಸಿದಾಗ, ರಾಜ್ಯದ ಗ್ರಾಮಪಂಚಾಯಿಗಳಿಲ್ಲಿ ಹಂಚಿಕೆಯಾದ ಒಟ್ಟು ಸ್ಥಾನಗಳಲ್ಲಿ ಶೇ.49ರಷ್ಟು ಮಹಿಳಾ(ಪ.ಜಾ, ಪ.ಪಂ, ಹಿ.ವ & ಸಾ) ಮೀಸಲು ಹಾಗೂ ಶೇ.51ರಷ್ಟು ಸಾಮಾನ್ಯ(ಪ.ಜಾ, ಪ.ಪಂ, ಹಿ.ವ & ಸಾ) ಸ್ಥಾನಗಳಾಗಿ ಕಂಡುಬರುತ್ತವೆ. ಮಹಿಳಾ ಮೀಸಲು ಸ್ಥಾನಗಳಲ್ಲಿ ಶೇ.17ರಷ್ಟು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದ್ದು, ಉಳಿದ ಸ್ಥಾನಗಳಿಗೆ ಶೇ.13ರಷ್ಟು ಮಹಿಳೆಯರ ಸ್ಪರ್ಧೆ ಕಂಡುಬರುತ್ತದೆ. ಹಾಗೆಯೇ ಸಾಮಾನ್ಯ ಸ್ಥಾನಗಳಲ್ಲಿ ಶೇ.8ರಷ್ಟು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದೆ. ಉಳಿದ ಸ್ಥಾನಗಳಿಗೆ ಶೇ.20ರಷ್ಟು ಪುರುಷರ ಸ್ಪರ್ಧೆ ಕಂಡುಬರುತ್ತದೆ. 2001ರ ಜನಗಣತಿ ಪ್ರಕಾರ, ಜರುಗಿದ 2010ರಲ್ಲಿ ನಾಲ್ಕನೇ ಅವಧಿಗೆ ಗ್ರಾಮಪಂಚಾಯಿತಿಗಳ ಚುನಾವಣೆಯಲ್ಲಿ ಮತದಾರರು ತಮ್ಮ ಮತಪತ್ರದಲ್ಲಿ ನೀಡಿದ ಒಟ್ಟು ಮತಗಳ ಮೌಲ್ಯದಲ್ಲಿ ಶೇ.1.76ರಷ್ಟು ಕುಲಗೆಟ್ಟ ಮತಗಳಾಗಿವೆ. ಆದ್ದರಿಂದ ಈ ಪಂಚಾಯಿತಿಗಳ ಮತದಾರರು ನೀಡಿದ ಕ್ರಮಬದ್ಧವಾದ ಮತಗಳಲ್ಲಿ ನ್ಯಾಯೋಚಿತವಾಗಿ ಶೇ.49ರಷ್ಟು ಮಹಿಳಾ ಸ್ಥಾನಕ್ಕೆ ಸ್ಪರ್ಧಿಸಿದ ಶೇ.13ರಷ್ಟು ಮಹಿಳಾ ಅಭ್ಯರ್ಥಿಗಳಿಗೆ ಶೇ.47ರಷ್ಟು ಮತಗಳು ಹಾಗೂ ಶೇ.51ರಷ್ಟು ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಶೇ.20ರಷ್ಟು ಪುರುಷ ಅಭ್ಯರ್ಥಿಗಳಿಗೆ ಶೇ.53ರಷ್ಟು ಮತಗಳು ಹಂಚಿಕೆಯಾಗಬೇಕಾಗುತ್ತದೆ. ಆದರೆ 2010ರಲ್ಲಿ ನಾಲ್ಕನೇ ಅವಧಿಗೆ ಜರುಗಿದ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಕ್ರಮಬದ್ಧವಾಗಿ ಚಲಾಯಿಸಿದ ಮತಗಳಲ್ಲಿ ಶೇ.39ರಷ್ಟು ಮತಗಳು ಮಹಿಳಾ ಅಭ್ಯರ್ಥಿಗಳು ಪಡೆದರೆ, ಶೇ.61ರಷ್ಟು ಮತಗಳು ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಪುರುಷ ಅಭ್ಯರ್ಥಿಗಳು ಪಡೆದಿದ್ದಾರೆ(ನೋಡಿ ಕೋಷ್ಟಕ–5.4). ರಾಜ್ಯದ ಗ್ರಾಮಪಂಚಾಯಿತಿಗಳಲ್ಲಿ ಮತದಾರರು ಮಹಿಳಾ ಅಭ್ಯರ್ಥಿಗಳಿಗೆ ನೀಡಬೇಕಾಗಿದ್ದ ಮತಗಳಲ್ಲಿ ಶೇ.8ರಷ್ಟು ಕಡಿಮೆ ಮತಗಳನ್ನು ನೀಡಿರುವುದು ಕಂಡುಬರುತ್ತದೆ. ರಾಜ್ಯದಲ್ಲಿ ಮಹಿಳೆ ಮತ್ತು ಪುರುಷ ಅಭ್ಯರ್ಥಿಗಳಿಗೆ ಹಂಚಿಕೆಯಾದ ಸ್ಥಾನಗಳ ಪ್ರಮಾಣ, ಉಮೇದುವಾರಿಕೆಯಲ್ಲಿನ ಸ್ಪರ್ಧೆಯ ಪ್ರಮಾಣ ಮತ್ತು ಪಡೆದ ಮತಗಳ ಪ್ರಮಾಣ ಪರಸ್ಪರ ಪ್ರತ್ಯೇಕವಾಗಿ ಮತ್ತು ತೌಲನಿಕವಾಗಿ ವಿಶ್ಲೇಷಣೆ ಮಾಡಿ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ. ರಾಜ್ಯದ ಗ್ರಾಮೀಣ ಮಹಿಳೆಯರ ಸಂಖ್ಯೆಗಿಂತ ಶೇ.2ರಷ್ಟು ಕಡಿಮೆ ಸ್ಥಾನಗಳನ್ನು ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಹಂಚಿಕೆಯಾಗಿರುವುದು ಕಂಡುಬರುತ್ತದೆ. ಅಲ್ಲದೇ ಪುರುಷರಿಗಿಂತ ಮಹಿಳಾ ಸ್ಪರ್ಧೆ ಶೇ.7.ರಷ್ಟು ಕಡಿಮೆ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ನೀಡಬೇಕಾಗಿದ್ದ ಮತಗಳಲ್ಲಿ ಶೇ.8ರಷ್ಟು ಕಡಿಮೆ ಮತಗಳನ್ನು ನೀಡಿದರುವುದು ಕಂಡುಬರುತ್ತದೆ. ಈ ಅಂಶಗಳ ಮೇಲೆ ರಾಜ್ಯದಲ್ಲಿ ಗ್ರಾಮೀಣ ಮಹಿಳೆಯರ ಸಬಲೀಕರಣ ಕಂಡುಬರುವುದಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ. ಮಹಿಳಾ ಸ್ಪರ್ಧೆಯ ನಿರ್ಣಯ ಕುಟುಂಬ, ಆರ್ಥಿಕ ಮತ್ತು

ರಾಜಕೀಯ ಪುರುಷರ ನಿರ್ಧಾರಲ್ಲಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಚುನಾವಣೆಯಲ್ಲಿ ಮಹಿಳೆ ಪಡೆದ ಮತಗಳು ಪುರುಷರ ವರ್ಚಸ್ಸಿನಿಂದ ಪಡೆದ ಮತಗಳಾಗಿವೆ ಎಂದು ಈ ಅಧ್ಯಯನದಲ್ಲಿ ನಿರ್ಣಯಕ್ಕೆ ಬರಲಾಗಿದೆ. ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯ ಪುರುಷರಿಗೆ ಸಮಾನವಾಗಿ ಕಂಡುಬಂದರೂ ವಿಜೇತ ಪುರುಷ ಅಭ್ಯರ್ಥಿಗಳಿಗಿಂತ ವಿಜೇತ ಮಹಿಳಾ ಅಭ್ಯರ್ಥಿಗಳು ಕಡಿಮೆ ಮತಗಳನ್ನು ಪಡೆದಿರುವುದು ಕಂಡುಬರುತ್ತದೆ. ಆದ್ದರಿಂದ ರಾಜ್ಯದಲ್ಲಿ ಮಹಿಳಾ ಸಬಲೀಕರಣ ಕಂಡುಬರುತ್ತಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಗ್ರಂಥಋಣ

1. ಎನ್.ಬಿ.ಪಾಟಿಲ್ ಮತ್ತು ಜಿ.ಬಿ.ಶೀಲವಂತ, *ರಾಜಕೀಯ ಸಿದ್ಧಾಂತ ಮತ್ತು ಪಾಶ್ಚಿಮಾತ್ಯ ರಾಜಕೀಯ ಚಿಂತನೆ,* ಬಾಗಲಕೋಟೆ: ಅರುಣ ಪ್ರಕಾಶನ, 2005, ಪು.105.
2. ಅದೇ., 2005, ಪು.107.
3. ವಿಲ್‌ಫ್ರೆಡ್ ಡಿಸೋಜಾ, "ಗ್ರಾಮಪಂಚಾಯಿತಿ: ಪ್ರಕಾರ್ಯಗಳು ಮತ್ತು ಜವಾಬ್ದಾರಿ", ಯೋಜನಾ, ಬೆಂಗಳೂರು: ಜೂನ್, 2011, ಪುಟ. 43. ಮತ್ತು ಪ್ರಜಾವಾಣಿ ದಿನಪತ್ರಿಕೆ, ಹುಬ್ಬಳ್ಳಿ-ಧಾರವಾಡ ವಿಭಾಗ, ದಿನಾಂಕ: 11.06.2012.
4. ಸಾಂಖ್ಯಿಕ ಅಧಿಕಾರಿಗಳು, *ಗ್ರಾಮಪಂಚಾಯಿತಿವಾರು, ಗ್ರಾಮವಾರು ಜನಸಂಖ್ಯೆ-2001,* ಹೊಸಪೇಟೆ: ಜನಗಣತಿ ಮತ್ತು ಅಂಕಿ ಅಂಶಗಳ ವಿಭಾಗ, ತಾಲೂಕು ಕಛೇರಿ, 2011.
5. ಅದೇ.
6. ಸಾಂಖ್ಯಿಕ ಅಧಿಕಾರಿಗಳು, *ಗ್ರಾಮಪಂಚಾಯಿತಿವಾರು, ಗ್ರಾಮವಾರು ಜನಸಂಖ್ಯೆ-2001,* ಸಿದ್ದಾಪುರು: ಜನಗಣತಿ ಮತ್ತು ಅಂಕಿ ಅಂಶಗಳ ವಿಭಾಗ, ತಾಲೂಕು ಕಛೇರಿ, 2011.
7. ಅದೇ.
8. www. Census of India, Directorate of Census Operations-2011, Karnataka: Government of India, 2013, date: 11/08/2013, time:20:35.
9. Shirana Rai, *Looking to the Future: Panchayat, Women Representation and Delibaration Politics:* New Delhi: Indian Journal of Political Science, 2000, p.35.
10. ಸುಧಾ ಪಿಳ್ಳೈ, ಮಾಳ್ಕೋಡ್, (2001), "ಮಹಿಳೆಯ ಸಬಲೀಕರಣ ಮತ್ತು ಪಂಚಾಯತ್‌ರಾಜ್", *ಯೋಜನಾ,* ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಆಗಸ್ಟ್, ಸಂಪುಟ 27, ಸಂಚಿಕೆ 3.
11. Snehalata Panda, *Gender, Environment and Participation in Politics,* New Delhi: M.D Publication,1995, p.56.
12. ಈ ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ಹೊಸೂರು ಗ್ರಾಮ ಮತ್ತು ಹಾನಗಲ್ಲು, ಇಪ್ಪಿತೇರಿ ಮತ್ತು ಎರೇಬೈಲು ಮಾಗಣಿಗಳು ಬರುತ್ತವೆ. ಈ ಪಂಚಾಯಿತಿಯ ವ್ಯಾಪ್ತಿಯಲ್ಲಿ ಹೊಸೂರು ಮಾತ್ರ ಕಂದಾಯ ಗ್ರಾಮವಾಗಿದೆ. ಹೀಗಾಗಿ, ಕಂದಾಯ ಗ್ರಾಮಗಳಲ್ಲದ ಈ ಮೂರು ಮಾಗಣಿಗಳನ್ನು ಹೊಸೂರು ಕಂದಾಯ ಗ್ರಾಮಕ್ಕೆ ಸೇರಿಸಲಾಗಿದೆ. ಜನಗಣತಿ ಪ್ರೊಫೈಲ್‌ನಲ್ಲಿ ಈ ಮೂರು ಮಾಗಣಿಗಳ ಜನಸಂಖ್ಯೆಯ ಗಣತಿಯನ್ನು ಹೊಸೂರು ಕಂದಾಯ ಗ್ರಾಮಕ್ಕೆ ಸೇರಿಸಲಾಗಿದೆ.

ಕೋಷ್ಟಕ–5.1

ಗ್ರಾಮಪಂಚಾಯಿತಿ ಚುನಾವಣೆ–2010

ಬಯಲುಸೀಮೆ ಹೊಸೂರು ಮತ್ತು ನಾಗೇನಹಳ್ಳಿ ಹಾಗೂ ಮಲೆನಾಡು ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಿಗೆ ಹಂಚಿಕೆಯಾದ ಮೀಸಲಾತಿ ಸ್ಥಾನಗಳು

ಕ್ರ. ಸಂ.	ವಾರ್ಡ್ ಸಂಖ್ಯೆ & ಹೆಸರು	ಸ್ಥಾನಗಳು	ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಹಿಂದುಳಿದ ವರ್ಗ		ಸಾಮಾನ್ಯ ವರ್ಗ	
			ಸಾಮಾನ್ಯ	ಹೆಣ್ಣು	ಸಾಮಾನ್ಯ	ಹೆಣ್ಣು	ಸಾಮಾನ್ಯ	ಹೆಣ್ಣು	ಸಾಮಾನ್ಯ	ಹೆಣ್ಣು
	ಹೊಸೂರು									
1	1– ಹೊಸುರು	4	–	–	2	2	–	–	–	–
2	2– ಇಪ್ಪಿತೇರಿ	3	–	–	2	–	–	1(ಎ)	--	–
3	3– ಎರೇಬೈಲು	3	–	1	1	1	–	–	–	–
	ಒಟ್ಟು	**10**	**0**	**1**	**5**	**3**	**0**	**1**	**0**	**0**
	ನಾಗೇನಹಳ್ಳಿ									
1	1– ನಾಗೇನಹಳ್ಳಿ	4	–	1	1	–	1(ಬಿ)	1(ಎ)	–	–
2	2– ನಾಗೇನಹಳ್ಳಿ	6	–	1	1	–	1(ಎ)	1(ಎ)	1	1
3	3– ಬಸವನದುರ್ಗ	4	1	–	–	1	1(ಎ)	–	1	–
4	4– ಕಾಲಘಟ್ಟ	1	1	–	–	–	–	–	–	–
	ಒಟ್ಟು	**15**	**2**	**2**	**2**	**1**	**3**	**2**	**2**	**1**

ಕ್ರ. ಸಂ.	ವಾರ್ಡ್ ಸಂಖ್ಯೆ & ಹೆಸರು	ಸ್ಥಾನಗಳು	ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಹಿಂದುಳಿದ ವರ್ಗ		ಸಾಮಾನ್ಯ ವರ್ಗ	
			ಸಾಮಾನ್ಯ	ಹೆಣ್ಣು	ಸಾಮಾನ್ಯ	ಹೆಣ್ಣು	ಸಾಮಾನ್ಯ	ಹೆಣ್ಣು	ಸಾಮಾನ್ಯ	ಹೆಣ್ಣು
	ಬೇಡ್ಕಣಿ									
1	1– ಬೇಡ್ಕಣಿ	5	–	0	–	1	1(ಎ)	–	1	2
2	2– ತ್ಯಾರ್ಸಿ	4	–	1	–	–	–	2(ಎ)	1	–
3	3– ಬಾನ್ಕುಳಿ	1	–	–	–	–	–	–	1	–
4	4– ಮುತ್ತಿಗೆ	1	–	–	–	–	1(ಬಿ)	–	–	–
	ಒಟ್ಟು	**11**	**0**	**1**	**0**	**1**	**2**	**2**	**3**	**2**
	ಕೋಲಸಿರ್ಸಿ									
1	1– ಕೋಲ್‌ಸಿರ್ಸಿ	5	–	–	–	–	1(ಎ)	1(ಎ)	1	2
2	2– ಅವರಗುಪ್ಪ	4	–	1	–	–	–	1(ಎ)	2	–
3	3– ಕುಣಿಜಿ	2	–	–	–	–	–	–	1	1
4	4– ಮಂಡ್ಲಿಕೊಪ್ಪ	2	–	–	–	1	1(ಬಿ)	–	–	–
	ಒಟ್ಟು	**13**	**0**	**1**	**0**	**1**	**2**	**2**	**4**	**3**

ಮೂಲ: ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ಚುನಾವಣಾ ವಿವರ ಪ್ರತಿಕೆ, ಪ್ರಪತ್ರ–36, ಹೊಸಪೇಟೆ ಮತ್ತು ಸಿದ್ದಾಪುರ: ಚುನಾವಣಾ ವಿಭಾಗ, ತಾಲೂಕು ಕಛೇರಿ, ಮೇ 17, 2010.

ಕೋಷ್ಟಕ–5.2

2001ರ ಮತ್ತು 2011ರ ಜನಗಣತಿ ಪ್ರಕಾರ ಗ್ರಾಮಪಂಚಾಯಿತಿವಾರು ಹಾಗೂ ಗ್ರಾಮ/ವಾರ್ಡ್‌ವಾರು ಜನಸಂಖ್ಯೆ ವಿವರ

ಕ್ರ. ಸಂ.	ಗ್ರಾಮಪಂಚಾಯಿತಿ ಗ್ರಾಮ/ವಾರ್ಡ್‌ಗಳು	2001ರ ಜನಸಂಖ್ಯೆ ಗಂಡು	ಹೆಣ್ಣು	ಒಟ್ಟು	2011ರ ಜನಸಂಖ್ಯೆ ಗಂಡು	ಹೆಣ್ಣು	ಒಟ್ಟು
	ಹೊಸೂರು						
1	ಹೊಸೂರು (ಹಾನಗಲ್,ಇಪ್ಪಿತೇರಿ ಮತ್ತು ಎರೇಬೈಲು ಮಾಗಣಿಗಳು)	1889	1890	3779	2173	2217	4391
	ಒಟ್ಟು	**1889**	**1890**	**3779**	**2173**	**2217**	**4391**
	ನಾಗೇನಹಳ್ಳಿ						
1	ನಾಗೇನಹಳ್ಳಿ ಬೆನಕಾಪುರ	1998	1991	3989	2305	2297	4602
2	ಬಸವನದುರ್ಗ (ಗುಡಿ ಓಬಳಾಪುರ)	809	791	1600	1036	1070	2107
3	ಬೆಳಗೋಡು	49	54	103	278	275	553
4	ಕಳ್ಳಿರಾಂಪುರ	28	27	55	96	97	193
5	ಕಾಲಘಟ್ಟ	70	71	141	84	84	168
	ಒಟ್ಟು	**2954**	**2934**	**5888**	**3799**	**3823**	**7623**

ಕ್ರ.ಸಂ.	ಗ್ರಾಮಪಂಚಾಯಿತಿ ಗ್ರಾಮ/ವಾರ್ಡ್‌ಗಳು	2001ರ ಜನಸಂಖ್ಯೆ ಗಂಡು	ಹೆಣ್ಣು	ಒಟ್ಟು	2011ರ ಜನಸಂಖ್ಯೆ ಗಂಡು	ಹೆಣ್ಣು	ಒಟ್ಟು
	ಬೇಡ್ಕಣಿ						
1	ಬೇಡ್ಕಣಿ	881	891	1772	890	881	1771
2	ತ್ಯಾರ್ಸಿ	791	817	1608	825	824	1649
3	ಭಾನ್ಕುಳಿ	175	185	360	183	200	383
4	ಮುತ್ತಿಗೆ	258	268	526	273	312	585
	ಒಟ್ಟು	**2105**	**2161**	**4266**	**2171**	**2217**	**4388**
	ಕೋಲಸಿರ್ಸಿ						
1	ಕೋಲಸಿರ್ಸಿ	705	812	1517	736	829	1565
2	ಬಳುಗುಳಿ	144	130	274	130	150	280
3	ಹೆಗ್ಗದ್ದೆ	8	5	13	11	6	17
4	ಅವರಗುಪ್ಪ	771	773	1544	770	797	1567
5	ಕುಣಿಜಿ	176	191	367	198	189	387
6	ಕಸ್ತೂರ	162	169	331	164	181	345
7	ಬಂದೀಸರ	37	27	64	40	31	71
8	ಹಲಗಡಿಕೊಪ್ಪ	97	90	187	109	99	208
9	ಮಂಡ್ಲಿಕೊಪ್ಪ	228	207	435	238	226	464
10	ತುಂಬರಗೋಡು	22	12	34	13	19	32
11	ಹೆಗ್ಗೋಡುಮನೆ	166	167	333	157	163	320
	ಒಟ್ಟು	**2516**	**2583**	**5099**	**2566**	**2690**	**5256**

ಮೂಲ: www. Census of India, Government of India: Directorate of Census Operations, Karnataka, Census of India 2001 & Census of India, 2011 date: 11/08/2011, time:20:35. & ಸಾಂಖ್ಯಿಕಾಧಿಕಾರಿಗಳು, ಹೊಸಪೇಟೆ ಮತ್ತು ಸಿದ್ದಾಪುರ: ತಾಲೂಕು ಕಛೇರಿಗಳು, 2011.

ಕೋಷ್ಟಕ–5.3

2005 ಮತ್ತು 2010ರ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಯಾರ ನಿರ್ಧಾರದಂತೆ ಉಮೇದುವಾರಿಕೆ ಪಡೆದಿದ್ದು ಎಂದು ಮಾಹಿತಿ ನೀಡಿದ ಪಂಚಾಯಿತಿವಾರು ಮತ್ತು ಲಿಂಗವಾರು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ವಿವರ

		ಬಯಲುಸೀಮೆ ಗ್ರಾಮಪಂಚಾಯಿತಿಗಳು									ಮಲೆನಾಡು ಗ್ರಾಮಪಂಚಾಯಿತಿಗಳು											
ಕ್ರ. ಸಂ.	ಉಮೇದುವಾರಿಕೆಯ ನಿರ್ಧಾರ	ಹೊಸೂರು ಅಭ್ಯರ್ಥಿಗಳು			ನಾಗೇನಹಳ್ಳಿ ಅಭ್ಯರ್ಥಿಗಳು			ಒಟ್ಟು ಅಭ್ಯರ್ಥಿಗಳು			ಬೇಡ್ಕಣಿ ಅಭ್ಯರ್ಥಿಗಳು			ಕೋಲಸಿರ್ಸಿ ಅಭ್ಯರ್ಥಿಗಳು			ಒಟ್ಟು ಅಭ್ಯರ್ಥಿಗಳು			ಒಟ್ಟು ಅಭ್ಯರ್ಥಿಗಳು		
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	**ಒಟ್ಟು**
1	ಗ್ರಾಮದ(ಸಾಮಾಜಿಕ ಆರ್ಥಿಕ, ರಾಜಕೀಯ) ಮುಂಖಡರು	4	18	22	18	18	36	22	36	58	11	10	21	3	20	23	14	30	44	36	66	102
2	ಕುಟುಂಬದ ಸದಸ್ಯರು	4	14	18	0	18	18	4	32	36	0	9	9	0	11	11	0	20	20	4	52	56
3	ಗ್ರಾಮದ ಜನರು	8	3	11	10	2	12	18	5	23	14	18	32	19	8	27	33	26	59	51	31	82
4	ಸ್ವನಿರ್ಧಾರ	17	0	17	13	0	13	30	0	30	10	0	10	15	0	15	25	0	25	55	0	55
5	ಒಟ್ಟು	**33**	**35**	**68**	**41**	**38**	**79**	**74**	**73**	**147**	**35**	**37**	**72**	**37**	**39**	**76**	**72**	**76**	**148**	**146**	**149**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಕೋಷ್ಟಕ–5.4

ಗ್ರಾಮಪಂಚಾಯಿತಿಗಳ ಚುನಾವಣೆ–2010

ಪಂಚಾಯಿತಿವಾರು/ವಾರ್ಡ್‌ವಾರು ಹಂಚಿಕೆಯಾದ ಮಹಿಳಾ & ಸಾಮಾನ್ಯ(ಮೀಸಲಾತಿ) ಸ್ಥಾನಗಳಿಗೆ ಸ್ಪರ್ಧಿಸಿದ ಅಭ್ಯರ್ಥಿಗಳು ಮತ್ತು ಅವರು ಪಡೆದ ಮತಗಳ ವಿವರ

ಕ್ರ. ಸಂ.	ಗ್ರಾಮಪಂಚಾಯಿತಿ	ವಾರ್ಡ್/ಕ್ಷೇತ್ರ ಹೆಸರು & ಸಂಖ್ಯೆ	ಮತದಾರರ ಸಂಖ್ಯೆ	ಚಲಾಯಿಸಿದ ಮತಗಳು	ತಿರಸ್ಕೃತ ಮತಗಳು	ಸಿಂಧುತ್ವ ಮತಗಳು	ಹಂಚಿಕೆಯಾದ ಒಟ್ಟು ಸ್ಥಾನಗಳು	ಮಹಿಳಾ(ಮೀಸಲು & ಸಾ) ಸ್ಥಾನಗಳು	ಮಹಿಳಾ ಸ್ಪರ್ಧೆ	ಮಹಿಳಾ ಪಡೆದ ಮತಗಳು	ಪುರುಷಾ(ಮೀ. & ಸಾ) ಸ್ಥಾನಗಳು	ಪುರುಷಾ ಸ್ಪರ್ಧೆ	ಪುರುಷಾ ಪಡೆದ ಮತಗಳು
	ಬಳ್ಳಾರಿ/ಹೊಸಪೇಟೆ (ಬಯಲು ಸೀಮೆ)												
1	**ಹೊಸೂರು**	ಹೊಸೂರು–1	1128	2944	46	2898	4	2	4	1353	2	3	1545
		ಹೊಸೂರು–2	776	1934	14	1920	3	1	3	630	2	5	1290
		(ಇಪ್ಪಿತೇರಿ ಮಾಗಣಿ)											
		ಹೊಸೂರು–3	587	991	18	973	3	1	3	430	1	4	543
	(ಎರೇಬೈಲು ಮತ್ತು ಹಾನಗಲ್ಲು ಮಾಗಣಿಗಳು)							1	1	ಅವಿರೋಧ	–	–	––
		ಒಟ್ಟು	**2491**	**5869**	**78**	**5791**	**10**	**5**	**11**	**2413**	**5**	**12**	**3378**
2	**ನಾಗೇನಹಳ್ಳಿ**	ನಾಗೇನಹಳ್ಳಿ–1	1014	3142	100	3042	4	2	5	1494	2	5	1548
		ನಾಗೇನಹಳ್ಳಿ–2	1468	5036	178	4858	6	3	7	2069	3	8	2789
		(ಜೆನಕಾಪುರ)											
		ಬಸವನದುರ್ಗ–3	1053	2477	035	2442	4	1	1	ಅವಿರೋಧ	3	11	2442
		ಬೆಳಗೋಡು–4	0151	0146	009	0137	1	–	–	––	1	2	137
	(ಕಳ್ಳಿರಾಂಪುರ & ಕಾಲಘಟ್ಟ ಗ್ರಾಮಗಳು)												
		ಒಟ್ಟು	**3686**	**10801**	**322**	**10479**	**15**	**6**	**13**	**3563**	**9**	**26**	**6916**

ಕ್ರ. ಸಂ.	ಗ್ರಾಮಪಂಚಾಯಿತಿ	ವಾರ್ಡ್/ಕ್ಷೇತ್ರ ಹೆಸರು & ಸಂಖ್ಯೆ	ಮತದಾರರ ಸಂಖ್ಯೆ	ಚಲಾಯಿಸಿದ ಮತಗಳು	ತಿರಸ್ಕೃತ ಮತಗಳು	ಸಿಂಧುತ್ವ ಮತಗಳು	ಹಂಚಿಕೆಯಾದ ಒಟ್ಟು ಸ್ಥಾನಗಳು	ಮಹಿಳಾ(ಮೀಸಲು & ಸಾ) ಸ್ಥಾನಗಳು	ಸ್ಪರ್ಧೆ	ಪಡೆದ ಮತಗಳು	ಪುರುಷಾ(ಮೀ. & ಸಾ) ಸ್ಥಾನಗಳು	ಸ್ಪರ್ಧೆ	ಪಡೆದ ಮತಗಳು
	ಉತ್ತರ ಕನ್ನಡ/ಸಿದ್ದಾಪುರ (ಮಲೆನಾಡು)												
1	**ಬೇಡ್ಕಣಿ**	ಬೇಡ್ಕಣಿ–1	1224	3952	29	3923	5	2	7	1619	2	6	2304
								1	1	ಅವಿರೋಧ	–	–	--
		ತ್ಯಾರ್ಸಿ–2	1158	3512	47	3465	4	3	6	2175	1	4	1290
		ಭಾನ್ಕುಳಿ–3	288	256	2	254	1	–	–	--	1	3	254
		ಮುತ್ತಿಗೆ–4	474	--	–	--	1	–	–	--	1	1	ಅವಿರೋಧ
		ಒಟ್ಟು	**3144**	**7720**	**78**	**7642**	**11**	**6**	**14**	**3794**	**5**	**14**	**3848**
2	**ಕೋಲಸಿರ್ಸಿ**	ಕೋಲಸಿರ್ಸಿ–1 (ಬಳಗುಳಿ & ಹೆಗದ್ದೆ)	1325	4112	55	4057	5	3	9	1473	2	15	2584
		ಅವರಗುಪ್ಪ–2	1160	2270	20	2250	4	1	2	409	2	11	1841
								1	1	ಅವಿರೋಧ	–	–	--
		ಕುಣಜಿ–3 (ಕಸ್ತೂರ, ಬಂದಿಸರ & ಹಲಗಡಿಕೊಪ್ಪ)	690	996	14	982	2	1	2	357	1	5	625
		ಮಂಡ್ಲಿಕೊಪ್ಪ–4 (ತುಂಬರಗೋಡು & ಹೆಗ್ಗೋಡುಮನೆ)	494	382	0	382	2	1	5	382	1	1	ಅವಿರೋಧ
		ಒಟ್ಟು	**3669**	**7760**	**89**	**7671**	**13**	**7**	**19**	**2621**	**6**	**32**	**5050**

ಮೂಲ: ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ಚುನಾವಣಾ ವಿವರ ಪ್ರತಿಕೆ, ಪ್ರಪತ್ರ–36, ಹೊಸಪೇಟೆ ಮತ್ತು ಸಿದ್ದಾಪುರ: ಚುನಾವಣಾ ವಿಭಾಗ, ತಾಲೂಕು ಕಛೇರಿ, ಮೇ 17, 2010.

ಕೋಷ್ಟಕ–5.5.ಎ

ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲೂಕು, ಹೊಸೂರು ಗ್ರಾಮಪಂಚಾಯಿತಿ ಚುನಾವಣೆ–2010 ವಾರ್ಡ್‌ವಾರು, ಜಾತಿವಾರು ಮತ್ತು ಲಿಂಗವಾರು ಹಂಚಿಕೆಯಾದ(ಮೀಸಲಾತಿ) ಸ್ಥಾನಗಳು ಹಾಗೂ ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು ಮತ್ತು ಅವರು ಪಡೆದ ಮತಗಳ ವಿವರ

ಕ್ರ ಸಂ.	ವಾರ್ಡ್/ಕ್ಷೇತ್ರದ ಹೆಸರು ಹಂಚಿಕೆಯಾದ ಒಟ್ಟು ಸ್ಥಾನಗಳು	ಸಂಖ್ಯೆ ಮೀಸಲಿರಿಸಿದ ಜಾತಿ, ವರ್ಗ ಮತ್ತು ಲಿಂಗವಾರು ಸ್ಥಾನಗಳು	ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು	ಪಡೆದ ಮತಗಳು
1	**ಹೊಸೂರು–1**	ಪ.ಪಂ. ಮಹಿಳೆ	1. ಕಿಚಿಡಿ ಜಯಪದ್ಮ	139
	4 ಸ್ಥಾನಗಳು	2 ಸ್ಥಾನಗಳು	2. ತಳವಾರು ಗಂಗಮ್ಮ	604
			3. ಎ. ನಾಗರತ್ನ	337
			4. ಮರಡಿ ರಾಮಸುಬ್ಬಮ್ಮ	273
			ಒಟ್ಟು ಮತಗಳು	**1353**
		ಪ.ಪಂ ಸಾಮಾನ್ಯ	1. ಮಹಾರಾಜ್ ಡಿ. ಹುಲುಗಪ್ಪ	498
		2 ಸ್ಥಾನಗಳು	2. ಲಕ್ಷಪ್ಪ ಕಲ್ಲುಗಡಿ	678
			3. ಬಿ. ಸುದರ್ಶನ ನಾಯಕ	369
			ಒಟ್ಟು ಮತಗಳು	**1545**
2	**ಹೊಸೂರು–2**	ಹಿ.ವ.(ಅ) ಮಹಿಳೆ	1. ಗುಡಮಾಬೀ ಇಪ್ಪಿತೇರಿ	206
	(ಇಪ್ಪಿತೇರಿ ಮಾಗಣಿ)	1 ಸ್ಥಾನ	2. ನೂರ್ ಜಾಬೀ	405
	3 ಸ್ಥಾನಗಳು		3. ಹಮೀಜಾಬಿ	19
			ಒಟ್ಟು ಮತಗಳು	**630**
		ಪ.ಪಂ ಸಾಮಾನ್ಯ	1. ಬಲ್ಲಪ್ಪ. ಎನ್	157
		2 ಸ್ಥಾನಗಳು	2. ಬ್ಯಾಲಾಳ ಗಣೇಶ	445
			3. ರಾಮಪ್ಪ ನೀರ್ಲಗಿ	254
			4. ಸಣ್ಣ ಭರಮಪ್ಪ ತಳವಾರ	200
			5. ಸೋಮಣ್ಣ ತಳವಾರ	234
			ಒಟ್ಟು ಮತಗಳು	**1290**
3	**ಹೊಸೂರು–3**	ಪ.ಜಾ ಮಹಿಳೆ		
	3 ಸ್ಥಾನಗಳು	1 ಸ್ಥಾನ	1. ಗಾಳೆಮ್ಮ. ಹೆಚ್	**ಅವಿರೋಧ**
	(ಎರೇಬೈಲು ಮತ್ತು	ಪ.ಪಂ ಮಹಿಳೆ	1. ಉಷಾದೇವಿ. ಟಿ	126
	ಹಾನಗಲ್ಲು ಮಾಗಣಿ)	1 ಸ್ಥಾನ	2. ಪದ್ಮಮ್ಮ ಗಿಂಜಿ	114
			3. ಮಾಳಗಿ ದುರಗವ್ವ	190
			ಒಟ್ಟು ಮತಗಳು	**430**
		ಪ.ಪಂ ಸಾಮಾನ್ಯ	1. ತಿರುಕಪ್ಪ ಪಾರಗಂಟಿ	91
		1. ಸ್ಥಾನ	2. ವೆಂಕೋಬ. ಕೆ	123
			3. ಶಿವಮೂರ್ತಿ ತಾರಿಹಳ್ಳಿ	189
			4. ಸಣ್ಣ ಕಣಿಮಪ್ಪ	140
			ಒಟ್ಟು ಮತಗಳು	**543**

ಮೂಲ: ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ಚುನಾವಣಾ ವಿವರ ಪ್ರತಿಕೆ, ಪ್ರಪತ್ರ–36, ಹೊಸಪೇಟೆ: ಚುನಾವಣಾ ವಿಭಾಗ, ತಾಲೂಕು ಕಛೇರಿ, ಮೇ 17, 2010.

ಕೋಷ್ಟಕ–5.5.ಬಿ

ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲೂಕು, ನಾಗೇನಹಳ್ಳಿ ಗ್ರಾಮಪಂಚಾಯಿತಿ ಚುನಾವಣೆ–2010 ವಾರ್ಡ್‌ವಾರು, ಜಾತಿವಾರು ಮತ್ತು ಲಿಂಗವಾರು ಹಂಚಿಕೆಯಾದ(ಮೀಸಲಾತಿ) ಸ್ಥಾನಗಳು ಹಾಗೂ ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು ಮತ್ತು ಅವರು ಪಡೆದ ಮತಗಳ ವಿವರ

ಕ್ರ. ಸಂ.	ವಾರ್ಡ್/ಕ್ಷೇತ್ರದ ಹೆಸರು ಹಂಚಿಕೆಯಾದ ಒಟ್ಟು ಸ್ಥಾನಗಳು	ಸಂಖ್ಯೆ ಮೀಸಲಿರಿಸಿದ ಜಾತಿ, ವರ್ಗ ಮತ್ತು ಲಿಂಗವಾರು ಸ್ಥಾನಗಳು	ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು	ಪಡೆದ ಮತಗಳು
1	**ನಾಗೇನಹಳ್ಳಿ–1**	ಪ.ಜಾ. ಮಹಿಳೆ	1. ಕೊರವರ ಅಂಜಿನಮ್ಮ	496
	4 ಸ್ಥಾನಗಳು	1 ಸ್ಥಾನ	2. ನೀಲವೇಣಿ ಬಿ.ಎಸ್	89
			3. ರತ್ನಮ್ಮ ಕೊರವರ	218
			ಒಟ್ಟು ಮತಗಳು	**803**
		ಹಿ.ವ(ಅ) ಮಹಿಳೆ	1. ತಾಯಮ್ಮ ಬೇನಹಳ್ಳಿ	381
		1 ಸ್ಥಾನ	2. ಸೈನಜ್ ಬೇಗಂ	310
			ಒಟ್ಟು ಮತಗಳು	**691**
		ಪ.ಪಂ ಸಾಮಾನ್ಯ	1. ಕಣಿಮೆಪ್ಪ ನಾಯಕರ	508
		1 ಸ್ಥಾನ	2. ರಾಮಣ್ಣ. ಡಿ	186
			ಒಟ್ಟು ಮತಗಳು	**694**
		ಹಿ.ವ(ಬ) ಸಾಮಾನ್ಯ	1. ಪಿ. ಬಸವರಾಜ	123
		1 ಸ್ಥಾನ	2. ಶಿವಶರಣಪ್ಪ ಆರ್.	476
			3. ಷಡಕ್ಷರಿಗೌಡ ಪಾಟೀಲ್	255
			ಒಟ್ಟು ಮತಗಳು	**854**
2	**ನಾಗೇಹಳ್ಳಿ–2**	ಪ.ಜಾ. ಮಹಿಳೆ	1. ಮಲ್ಲಮ್ಮ	412
	(ಬೆನಕಾಪುರ)	1 ಸ್ಥಾನ	2. ಸಾಲುಮನಿ ಲಕ್ಷಮ್ಮ	315
	6 ಸ್ಥಾನಗಳು		**ಒಟ್ಟು ಮತಗಳು**	**727**
		ಹಿ.ವ(ಅ) ಮಹಿಳೆ	1. ಬಸವಂತೆವ್ವ	359
		1 ಸ್ಥಾನ	2. ಮೌಲಾನ್ ಬೀ ಪಟ್ಟೇದ್	292
			ಒಟ್ಟು ಮತಗಳು	**651**
		ಸಾಮಾನ್ಯ ಮಹಿಳೆ	1. ನಿಂಗಮ್ಮ	237
		1 ಸ್ಥಾನ	2. ಶಾರದಮ್ಮ ಬೇಳೂರು	301
			3. ಹನುಮಂತಮ್ಮ ಸಂಕ್ಲಾಪುರ	153
			ಒಟ್ಟು ಮತಗಳು	**691**
		ಪ.ಪಂ ಸಾಮಾನ್ಯ	1. ರಾಮಪ್ಪ ತಳವಾರ	306
		1 ಸ್ಥಾನ	2, ಸುಭಾಷ್. ಜಿ.ವಿ.	368
			ಒಟ್ಟು ಮತಗಳು	**674**
		ಹಿ.ವ(ಅ) ಸಾಮಾನ್ಯ	1. ಕೆ. ಕೃಷ್ಣ	345
		1 ಸ್ಥಾನ	2. ಹನುಮಂತ ಎಂ.	225
			3. ಪಿ. ದಾವೂದ್	577
			ಒಟ್ಟು ಮತಗಳು	**1147**
		ಸಾಮಾನ್ಯ ಸಾಮಾನ್ಯ	1. ಉಮಾಪತಿ. ಬಿ	50
			2. ರಾಮಣ್ಣ ಜಿ.ಕೆ	542
			3. ವೆಂಕಟೇಶ್ ಬಾರಿಕರ್	376
			ಒಟ್ಟು ಮತಗಳು	**968**

3	**ಬಸವನದುರ್ಗ–3**	ಪ.ಪಂ ಮಹಿಳೆ	1. ಕೆ. ಗಾಳೆಮ್ಮ	**ಅವಿರೋಧ**
	4 ಸ್ಥಾನಗಳು	1 ಸ್ಥಾನ		
		ಪ.ಜಾ ಸಾಮಾನ್ಯ	1. ಚಿನ್ನಣ್ಣ. ಕೆ	81
		1 ಸ್ಥಾನ	2. ತಾವರ್‍ಯಾನಾಯ್ಕ	206
			3. ತಿಮ್ಮಯ್ಯ ವಡ್ಡರ್	42
			4. ದುರ್ಗನಾಯ್ಕ ಲಂಬಾಣಿ	136
			5. ಪ್ರಕಾಶ್. ಹೆಚ್	183
			6. ಸುಬ್ರಮಣಿ. ಕೆ. ಎನ್	319
			ಒಟ್ಟು ಮತಗಳು	**967**
		ಹಿ.ವ(ಅ) ಸಾಮಾನ್ಯ	1. ಕುರುಬರ ಗೌರಮ್ಮ	210
		1 ಸ್ಥಾನ	2. ದೇವೇಂದ್ರ, ಇ	477
			ಒಟ್ಟು ಮತಗಳು	**687**
		ಸಾಮಾನ್ಯ ಸಾಮಾನ್ಯ	1. ಕಾಶಿನಾಥ. ಎಂ	554
		1 ಸ್ಥಾನ	2. ಗುರಪ್ಪ. ಜಿ	215
			3. ರಮೇಶ್ ಸಿ.ಹೆಚ್	19
			ಒಟ್ಟು ಮತಗಳು	**788**
4	**ಬೆಳಗೋಡು–4**	ಪ.ಜಾ. ಸಾಮಾನ್ಯ	1. ಗೋವಿಂದ ಹೆಚ್	88
	(ಕಳ್ಳಿರಾಂಪುರ &	1 ಸ್ಥಾನ	2. ಸಣ್ಣ ಹನುಮಂತ ಗುಂಜಳ್ಳಿ	49
	ಕಾಲಘಟ್ಟ) 1 ಸ್ಥಾನ		**ಒಟ್ಟು ಮತಗಳು**	**137**

ಮೂಲ: ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ಚುನಾವಣಾ ವಿವರ ಪ್ರತಿಕೆ, ಪ್ರಪತ್ರ–36, ಹೊಸಪೇಟೆ: ಚುನಾವಣಾ ವಿಭಾಗ, ತಾಲೂಕು ಕಛೇರಿ, ಮೇ 17, 2010.

ಕೋಷ್ಟಕ–5.5.ಸಿ

ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕು, ಬೇಡ್ಕಣಿ ಗ್ರಾಮಪಂಚಾಯಿತಿ ಚುನಾವಣೆ–2010 ವಾರ್ಡ್‌ವಾರು, ಜಾತಿವಾರು ಮತ್ತು ಲಿಂಗವಾರು ಹಂಚಿಕೆಯಾದ(ಮೀಸಲಾತಿ) ಸ್ಥಾನಗಳು ಹಾಗೂ ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು ಮತ್ತು ಅವರು ಪಡೆದ ಮತಗಳ ವಿವರ

ಕ್ರ. ಸಂ.	ವಾರ್ಡ್/ಕ್ಷೇತ್ರದ ಹೆಸರು ಹಂಚಿಕೆಯಾದ ಒಟ್ಟು ಸ್ಥಾನಗಳು	ಸಂಖ್ಯೆ ಮೀಸಲಿರಿಸಿದ ಜಾತಿ, ವರ್ಗ ಮತ್ತು ಲಿಂಗವಾರು ಸ್ಥಾನಗಳು	ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು	ಪಡೆದ ಮತಗಳು
1	**ಬೇಡ್ಕಣಿ–1**	ಪ.ಪಂ. ಮಹಿಳೆ		
	5 ಸ್ಥಾನಗಳು	1 ಸ್ಥಾನ	1. ಲಕ್ಷ್ಮಿ ತಿಪ್ಪ ಹಸ್ಲರ್	**ಅವಿರೋಧ**
		ಸಾಮಾನ್ಯ ಮಹಿಳೆ	1. ಅಕ್ಷತಾ ಮಂಜುನಾಥನಾಯ್ಕ	87
		2 ಸ್ಥಾನಗಳು	2. ಜಾನಕಿ ಯೋಗೇಂದ್ರಪ್ಪ	272
			3. ಸರಸ್ವತಿ ಲಕ್ಷ್ಮಣನಾಯ್ಕ	118
			4. ಹೇಮವತಿ ಅಣ್ಣಪ್ಪನಾಯ್ಕ	329
			5. ಶಾಂತಲಾ ಸದಾಶಿವನಾಯ್ಕ	220
			6. ಸಾಬ ರಜೀಯಾ ಬೀ	274
			7, ತಾರನರಸಿಂಹ ಹಂಚಿನಮನೆ	319
			ಒಟ್ಟು ಮತಗಳು	**1619**
		ಹಿ.ವ(ಅ) ಸಾಮಾನ್ಯ	1. ಉಮೇಶ ಕನ್ನಾನಾಯ್ಕ	197
		1 ಸ್ಥಾನ	2. ಜಿ, ಕೆ. ನಾಯ್ಕ	514
			3. ನಾಯ್ಕ ಈಶ್ವರ ಚೌಡ	426
			ಒಟ್ಟು ಮತಗಳು	**1137**
		ಸಾಮಾನ್ಯ ಸಾಮಾನ್ಯ	1. ಕಲ್ಲಿಮಠ ತುಕರಾಮ	186
		1 ಸ್ಥಾನ	2. ನಾಯ್ಕ ನೀಲಕಂಠ ಎನ್	551
			3. ಶಿವಕುಮಾರ ಭದ್ರಯ್ಯಗೌಡ	430
			ಒಟ್ಟು ಮತಗಳು	**1167**
2	**ತ್ಯಾರ್ಸಿ–2**	ಪ.ಜಾತಿ ಮಹಿಳೆ	1. ಚೆನ್ನಯ್ಯ ಪಾರ್ವತಿ	237
	4 ಸ್ಥಾನಗಳು	1 ಸ್ಥಾನ	2. ವಾಸಂತಿ ಪಾಂಡುರಂಗ	375
			ಒಟ್ಟು ಮತಗಳು	**612**
		ಹಿ.ವ(ಅ) ಮಹಿಳೆ	1. ನಾಯ್ಕ ಮಮತಾ ಆನಂದ	356
		2 ಸ್ಥಾನಗಳು	2. ನಾಯ್ಕ ಲೀಲಾವತಿ ಮಾರುತಿ	388
			3. ಲಕ್ಷ್ಮಿ ಪಾಂಡುರಂಗನಾಯ್ಕ	392
			4. ವಿನೋದ ವೆಂಕಟೇಶನಾಯ್ಕ	427
			ಒಟ್ಟು ಮತಗಳು	**1563**
		ಸಾಮಾನ್ಯ ಸಾಮಾನ್ಯ	1. ಉಮೇಶನನಾರಾಯಣನಾಯ್ಕ	520
		1 ಸ್ಥಾನ	2. ಕುಮಾರ ಬಂಗಾರನಾಯ್ಕ	87
			3. ಜಯಂತ ಬಂಗಾರ್ಯ ನಾಯ್ಕ	139
			4. ಎನ್. ಕೆ. ನಾಯ್ಕ	544
			ಒಟ್ಟು ಮತಗಳು	**1290**
3	**ಭಾನ್ಕುಳಿ–3**	ಸಾಮಾನ್ಯ ಸಾಮಾನ್ಯ	1. ಗೌಡ ಗಂಗಾಧರ	91
	1 ಸ್ಥಾನ	1 ಸ್ಥಾನ	2. ನಾಯ್ಕ ತಿಮ್ಮಣ್ಣ	24
			3. ನಾಯ್ಕ ಹನುಮಂತ	139
			ಒಟ್ಟು ಮತಗಳು	**254**
4	**ಮುತ್ತಿಗೆ**	ಹಿ.ವ(ಬಿ)ಸಾಮಾನ್ಯ		
	1 ಸ್ಥಾನ	1 ಸ್ಥಾನ	1. ಜಯನಂದಾ ಶಿವಾಜಿಗೌಡ	**ಅವಿರೋಧ**

ಮೂಲ: ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ಚುನಾವಣಾ ವಿವರ ಪ್ರತಿಕೆ, ಪ್ರಪತ್ರ–36, ಸಿದ್ದಾಪುರ: ಚುನಾವಣಾ ವಿಭಾಗ, ತಾಲೂಕು ಕಛೇರಿ, ಮೇ 17, 2010.

ಕೋಷ್ಟಕ–5.5.ಸಿ

ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕು, ಬೇಡ್ಕಣಿ ಗ್ರಾಮಪಂಚಾಯಿತಿ ಚುನಾವಣೆ–2010 ವಾರ್ಡ್‌ವಾರು, ಜಾತಿವಾರು ಮತ್ತು ಲಿಂಗವಾರು ಹಂಚಿಕೆಯಾದ(ಮೀಸಲಾತಿ) ಸ್ಥಾನಗಳು ಹಾಗೂ ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು ಮತ್ತು ಅವರು ಪಡೆದ ಮತಗಳ ವಿವರ

ಕ್ರ. ಸಂ.	ವಾರ್ಡ್/ಕ್ಷೇತ್ರದ ಹೆಸರು ಹಂಚಿಕೆಯಾದ ಒಟ್ಟು ಸ್ಥಾನಗಳು	ಸಂಖ್ಯೆ ಮೀಸಲಿರಿಸಿದ ಜಾತಿ, ವರ್ಗ ಮತ್ತು ಲಿಂಗವಾರು ಸ್ಥಾನಗಳು	ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು	ಪಡೆದ ಮತಗಳು
1	**ಬೇಡ್ಕಣಿ–1**	ಪ.ಪಂ. ಮಹಿಳೆ		
	5 ಸ್ಥಾನಗಳು	1 ಸ್ಥಾನ	1. ಲಕ್ಷ್ಮಿ ತಿಪ್ಪ ಹಸ್ಲರ್	**ಅವಿರೋಧ**
		ಸಾಮಾನ್ಯ ಮಹಿಳೆ	1. ಅಕ್ಷತಾ ಮಂಜುನಾಥನಾಯ್ಕ	87
		2 ಸ್ಥಾನಗಳು	2. ಜಾನಕಿ ಯೋಗೇಂದ್ರಪ್ಪ	272
			3. ಸರಸ್ವತಿ ಲಕ್ಷ್ಮಣನಾಯ್ಕ	118
			4. ಹೇಮವತಿ ಅಣ್ಣಪ್ಪನಾಯ್ಕ	329
			5. ಶಾಂತಲಾ ಸದಾಶಿವನಾಯ್ಕ	220
			6. ಸಾಬ ರಜೀಯಾ ಬೀ	274
			7, ತಾರನರಸಿಂಹ ಹಂಚಿನಮನೆ	319
			ಒಟ್ಟು ಮತಗಳು	**1619**
		ಹಿ.ವ(ಅ) ಸಾಮಾನ್ಯ	1. ಉಮೇಶ ಕನ್ನಾನಾಯ್ಕ	197
		1 ಸ್ಥಾನ	2. ಜಿ, ಕೆ. ನಾಯ್ಕ	514
			3. ನಾಯ್ಕ ಈಶ್ವರ ಚೌಡ	426
			ಒಟ್ಟು ಮತಗಳು	**1137**
		ಸಾಮಾನ್ಯ ಸಾಮಾನ್ಯ	1. ಕಲ್ಲಿಮಠ ತುಕರಾಮ	186
		1 ಸ್ಥಾನ	2. ನಾಯ್ಕ ನೀಲಕಂಠ ಎನ್	551
			3. ಶಿವಕುಮಾರ ಭದ್ರಯ್ಯಗೌಡ	430
			ಒಟ್ಟು ಮತಗಳು	**1167**
2	**ತ್ಯಾರ್ಸಿ–2**	ಪ.ಜಾತಿ ಮಹಿಳೆ	1. ಚೆನ್ನಯ್ಯ ಪಾರ್ವತಿ	237
	4 ಸ್ಥಾನಗಳು	1 ಸ್ಥಾನ	2. ವಾಸಂತಿ ಪಾಂಡುರಂಗ	375
			ಒಟ್ಟು ಮತಗಳು	**612**
		ಹಿ.ವ(ಅ) ಮಹಿಳೆ	1. ನಾಯ್ಕ ಮಮತಾ ಆನಂದ	356
		2 ಸ್ಥಾನಗಳು	2. ನಾಯ್ಕ ಲೀಲಾವತಿ ಮಾರುತಿ	388
			3. ಲಕ್ಷ್ಮಿ ಪಾಂಡುರಂಗನಾಯ್ಕ	392
			4. ವಿನೋದ ವೆಂಕಟೇಶನಾಯ್ಕ	427
			ಒಟ್ಟು ಮತಗಳು	**1563**
		ಸಾಮಾನ್ಯ ಸಾಮಾನ್ಯ	1. ಉಮೇಶನನಾರಾಯಣನಾಯ್ಕ	520
		1 ಸ್ಥಾನ	2. ಕುಮಾರ ಬಂಗಾರನಾಯ್ಕ	87
			3. ಜಯಂತ ಬಂಗಾರ್‍ಯ ನಾಯ್ಕ	139
			4. ಎನ್. ಕೆ. ನಾಯ್ಕ	544
			ಒಟ್ಟು ಮತಗಳು	**1290**
3	**ಭಾನ್ಕುಳಿ–3**	ಸಾಮಾನ್ಯ ಸಾಮಾನ್ಯ	1. ಗೌಡ ಗಂಗಾಧರ	91
	1 ಸ್ಥಾನ	1 ಸ್ಥಾನ	2. ನಾಯ್ಕ ತಿಮ್ಮಣ್ಣ	24
			3. ನಾಯ್ಕ ಹನುಮಂತ	139
			ಒಟ್ಟು ಮತಗಳು	**254**
4	**ಮುತ್ತಿಗೆ**	ಹಿ.ವ(ಬಿ)ಸಾಮಾನ್ಯ		
	1 ಸ್ಥಾನ	1 ಸ್ಥಾನ	1. ಜಯನಂದಾ ಶಿವಾಜಿಗೌಡ	**ಅವಿರೋಧ**

ಮೂಲ: ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ಚುನಾವಣಾ ವಿವರ ಪ್ರತಿಕೆ, ಪ್ರಪತ್ರ–36, ಸಿದ್ದಾಪುರ: ಚುನಾವಣಾ ವಿಭಾಗ, ತಾಲೂಕು ಕಛೇರಿ, ಮೇ 17, 2010.

ಕೋಷ್ಟಕ-5.5.ಡಿ

ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕು, ಕೋಲಸಿರ್ಸಿ ಗ್ರಾಮಪಂಚಾಯಿತಿ ಚುನಾವಣೆ-2010 ವಾರ್ಡ್‌ವಾರು, ಜಾತಿವಾರು ಮತ್ತು ಲಿಂಗವಾರು ಹಂಚಿಕೆಯಾದ(ಮೀಸಲಾತಿ) ಸ್ಥಾನಗಳು ಹಾಗೂ ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು ಮತ್ತು ಅವರು ಪಡೆದ ಮತಗಳ ವಿವರ

ಕ್ರ. ಸಂ.	ವಾರ್ಡ್/ಕ್ಷೇತ್ರದ ಹೆಸರು ಸಂಖ್ಯೆ & ಹಂಚಿಕೆಯಾದ ಒಟ್ಟು ಸ್ಥಾನಗಳು	ಸಂಖ್ಯೆ ಮೀಸಲಿರಿಸಿದ ಜಾತಿ, ವರ್ಗ ಮತ್ತು ಲಿಂಗವಾರು ಸ್ಥಾನಗಳು	ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳು	ಪಡೆದ ಮತಗಳು
1	ಕೋಲಸಿರ್ಸಿ-1 (ಬಳಗುಳಿ & ಹೆಗದ್ದೆ) 5 ಸ್ಥಾನಗಳು	ಹಿ.ವ(ಅ) ಮಹಿಳೆ 1 ಸ್ಥಾನ	1. ನಾಯ್ಕ ಮಂಗಲಾ	140
			2. ನಾಯ್ಕ ಶಶಿಕಲಾ ರಮೇಶ್	203
			3. ನಾಯ್ಕ ಸರಸ್ವತಿ ಸೋಮಶೇಖರ	129
			ಒಟ್ಟು ಮತಗಳು	**472**
		ಸಾಮಾನ್ಯ ಮಹಿಳೆ 2 ಸ್ಥಾನಗಳು	1. ನಾಯ್ಕ ಉಮಾಮಂಜುನಾಥ	240
			2. ನಾಯ್ಕ ಕೆರಿಯಮ್ಮ	104
			3. ನಾಯ್ಕ ಗಣಪತಿ ಈಶ್ವರ	147
			4. ನಾಯ್ಕ ವಿಜಯಲಕ್ಷ್ಮಿ	206
			5. ನಾಯ್ಕ ಸರಸ್ವತಿ ಮಾಬ್ಲೇಶ್ವರ	145
			6. ನಾಯ್ಕ ಭಟ್ಟ ಇಂದಿರಾ	159
			ಒಟ್ಟು ಮತಗಳು	**1001**
		ಹಿ.ವ(ಅ) ಸಾಮಾನ್ಯ 1 ಸ್ಥಾನ	1. ನಾಯ್ಕ ಈಶ್ವರ ರಾಮ	262
			2. ನಾಯ್ಕ ಬಾಲಕೃಷ್ಣ ಈರಾ	298
			3. ನಾಯ್ಕ ಬಂಗಾರ್ಯ	126
			4. ನಾಯ್ಕ ವಸಂತ	56
			5. ವಿನಾಯಕ್ ಕೆ.ಆರ್	475
			6. ಸೋಮಶೇಖರ ಕೆ. ಎನ್	225
			ಒಟ್ಟು ಮತಗಳು	**1442**
		ಸಾಮಾನ್ಯ ಸಾಮಾನ್ಯ 1 ಸ್ಥಾನ	1. ನಾಯ್ಕ ಈಶ್ವರ ಟೇಲರ್	51
			2. ನಾಯ್ಕ ಈರಾ	83
			3. ನಾಯ್ಕ ನಾರಾಯಣ	71
			4. ನಾಯ್ಕ ಪಾಂಡು ವೀರಭದ್ರ	183
			5. ನಾಯ್ಕ ರಾಜ ಮನ್ನಾ	57
			6. ನಾಯ್ಕ ರಾಮಚಂದ್ರ ಈರಾ	167
			7. ನಾಯ್ಕ ವಾಸು ಸಣ್ತಮ್ಮ	269
			8 ನಾಯ್ಕ ಸುರೇಶ್ ಗಣಪಯ್ಯ	168
			9. ನಾಯ್ಕ ಹನುಮಂತ	93
			ಒಟ್ಟು ಮತಗಳು	**1142**

2	**ಅವರಗುಪ್ಪ–2**	ಪ.ಜಾ. ಮಹಿಳೆ		
	4 ಸ್ಥಾನಗಳು	1 ಸ್ಥಾನ	1. ರೇಣುಕಾ ಉಮೇಶ್ ಹರಿಜನ **ಅವಿರೋಧ**	
		ಹಿ.ವ(ಅ) ಮಹಿಳೆ	1. ನಾಯ್ಕ ನೇತ್ರವತಿ ದಿನಕರ	162
			2. ನಾಯ್ಕ ಲತಾ	247
			ಒಟ್ಟು ಮತಗಳು	**409**
		ಸಾಮಾನ್ಯ ಸಾಮಾನ್ಯ	1. ಗೊಂಡ ಪ್ರಕಾಶ್	73
		2 ಸ್ಥಾನಗಳು	2. ಗೊಂಡ ರಾಜಬೊಮ್ಮ	411
			3. ಗೌಡರ್ ಧನಂಜಯ	194
			4 ನಾಯ್ಕ ಅಣ್ಣಪ್ಪ ಕನ್ನ	155
			5. ನಾಯ್ಕ ನಾರಾಯಣ ದ್ಯಾಮ	147
			6. ನಾಯ್ಕ ಪರಮೇಶ ದ್ಯಾಮ	107
			7. ನಾಯ್ಕ ಮಹಾಬಲೇಶ್ವರ ಚೌಡ	187
			8. ರಾಜಮದಲಿಂಗ	210
			9. ನಾಯ್ಕ ವಿಠಲ	36
			10. ಶ್ರೀಧರ ಗಣಪತಿ	56
			11. ಹನುಮಂತ ರಾಮ	265
			ಒಟ್ಟು ಮತಗಳು	**1841**
3	**ಕುಣೆಜಿ–3**	ಪ.ಪಂ ಮಹಿಳೆ	1. ಕೆ. ಶಾಂತಕುಮಾರಿ	95
	(ಕಸ್ತೂರ, ಬಂದಿಸರ	1 ಸ್ಥಾನ	2. ಹರಿಜನ ಲಕ್ಷ್ಮಿ	262
	ಹಲಗಡಿ ಕೊಪ್ಪ)		**ಒಟ್ಟು ಮತಗಳು**	**357**
	2 ಸ್ಥಾನಗಳು	ಸಾಮಾನ್ಯ ಸಾಮಾನ್ಯ	1. ಗೌಡರ್ ವಿನಯ್	187
		1 ಸ್ಥಾನ	2. ನಾಯ್ಕ ಅಣ್ಣಪ್ಪ ರಾಮು	32
			3. ನಾಯ್ಕ ರಾಮ ಬಸಿಯಾ	117
			4. ನಾರಾಯಾಣ ಈಶ್ವರ	206
			5. ಮಡಿವಾಳ ಆನಂದ	83
			ಒಟ್ಟು ಮತಗಳು	**625**
4	**ಮಂಡ್ಲಿಕೊಪ್ಪ**	ಸಾಮಾನ್ಯ ಮಹಿಳೆ	1. ಗೊಂಡ ನೀಲಾ	57
	(ತುಂಬರಗೋಡು	1 ಸ್ಥಾನ	2. ಗೊಂಡ ನೇತ್ರಾವತಿಕೆರಿಯಾ	115
			3. ಗೊಂಡ ಸಾವಿತ್ರಿ	122
			4. ನಾಯರ್ ರೇಣುಕಾಮೋಹನ್	27
			5. ಹೆಗಡೆ ವೀಣಾ	61
			ಒಟ್ಟು ಮತಗಳು	**382**
		ಹಿ.ವ(ಬ) ಸಾಮಾನ್ಯ		
		1 ಸ್ಥಾನ	1. ಗಂಗಾಧರ ಮಂಜಪ್ಪ ಗೌಡರ್ **ಅವಿರೋಧ**	

ಮೂಲ: ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, ಚುನಾವಣಾ ವಿವರ ಪತ್ರಿಕೆ, ಪ್ರಪತ್ರ–36, ಸಿದ್ದಾಪುರ: ಚುನಾವಣಾ ವಿಭಾಗ, ತಾಲೂಕು ಕಛೇರಿ, ಮೇ 17, 2010.

ಅಧ್ಯಾಯ ಆರು

ಗ್ರಾಮಸಭೆ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ

ಪೀಠಿಕೆ

ಪ್ರಜಾಪ್ರಭುತ್ವ ಎಂಬ ಕಮಾನಿನ ಸೂಜಿಗಲ್ಲು ಗ್ರಾಮಪಂಚಾಯಿತಿಯಾದರೆ, ಗ್ರಾಮಪಂಚಾಯಿತಿಯೆಂಬ ಕಮಾನಿನ ಸೂಜಿಗಲ್ಲು ಗ್ರಾಮಸಭೆಯಾಗಿದೆ. ಗ್ರಾಮಸಭೆ ಜನತಾಂತ್ರಿಕ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಅತ್ಯಂತ ತಳಮಟ್ಟದ ಜನಪ್ರಾತಿನಿಧ್ಯ ಸಂಸ್ಥೆಯಾಗಿದೆ. ಇದು ಪಂಚಾಯತ್‌ರಾಜ್ ವ್ಯವಸ್ಥೆಗಷ್ಟೇ ಅಲ್ಲದೇ ಪ್ರಜಾಪ್ರಭುತ್ವ ವ್ಯವಸ್ಥೆಗೇ ಭದ್ರ ಅಡಿಪಾಯವಾಗಿದೆ. ಅಷ್ಟಲ್ಲದೇ ಪ್ರಜಾಪ್ರಭುತ್ವದ ಯಶಸ್ಸು ಮತ್ತು ವಿಫಲತೆ ಗ್ರಾಮಸಭೆಯ ಮೇಲೆ ಅವಲಂಬಿಸಿರುತ್ತದೆ. ಗ್ರಾಮಸಭೆ ಪ್ರತ್ಯಕ್ಷ ಪ್ರಜಾಪ್ರಭುತ್ವ ಅವಕಾಶವನ್ನು ನೀಡುತ್ತದೆ. ಭಾರತದಲ್ಲಿ ಗ್ರಾಮಸಭೆಯಂತೆ ಬೇರ್ಯಾವ ರಾಜಕೀಯ ಸಂಸ್ಥೆಗಳು ಜನತೆಗೆ ನೇರ ಪ್ರಾತಿನಿಧ್ಯವನ್ನು ನೀಡಿಲ್ಲ. ಆದ್ದರಿಂದ ಇದು ಜನತಂತ್ರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಮುಖ್ಯವಾದ ರಾಜಕೀಯ ಸಂಸ್ಥೆಯಾಗಿದೆ. ಸಂಸತ್ತು ಮತ್ತು ವಿಧಾನಮಂಡಲಗಳಿಗೆ ಹಾಗೂ ಪಂಚಾಯಿತಿಗಳಿಗೆ ಜನಪ್ರತಿನಿಧಿಗಳು ಮಾತ್ರ ಸದಸ್ಯರಾದರೆ, ಗ್ರಾಮಸಭೆಗೆ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲಾ ಮತದಾರರು ಸದಸ್ಯರಾಗಿರುತ್ತಾರೆ. ಅಂದರೆ ಗ್ರಾಮಸಭೆ ಜನಪ್ರತಿನಿಧಿಗಳನ್ನು ಮತ್ತು ಜನತೆಯನ್ನು ಒಳಗೊಂಡ ಸಭೆಯಾಗಿದೆ. ಗ್ರಾಮದ ಎಲ್ಲಾ ಮತದಾರರು ಗ್ರಾಮಸಭೆಯ ಸದಸ್ಯರಾಗಿರುತ್ತಾರೆ. ಜನಪ್ರತಿನಿಧಿಗಳೊಂದಿಗೆ ಗ್ರಾಮದ ಮತದಾರರು ಗ್ರಾಮಸಭೆಯಲ್ಲಿ ನೇರವಾಗಿ ಭಾಗವಹಿಸುವ ಚರ್ಚಿಸುವ ಮತ್ತು ನಿರ್ಣಯವನ್ನು ಕೈಗೊಳ್ಳುವ ಅವಕಾಶವಿದೆ. ಬಡವ, ಶ್ರೀಮಂತ, ದಲಿತ, ಶೋಷಿತ, ಹಿಂದುಳಿದ, ಅಲ್ಪಸಂಖ್ಯಾತರೆಂಬ ತಾರತಮ್ಯವಿಲ್ಲದೇ ಎಲ್ಲಾ ಜಾತಿ ವರ್ಗಗಳ ಜನರು ಮತ್ತು ವಿಶೇಷವಾಗಿ ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುವ ಅವಕಾಶವಿದೆ. ಜನಪ್ರತಿನಿಧಿಗಳು ಮತ್ತು ಗ್ರಾಮದ ಜನರು ಸ್ಥಳೀಯ ಸಮಸ್ಯೆಗಳನ್ನು ಚರ್ಚಿಸಿ, ಅವರ ಬೇಕು ಬೇಡಿಕೆಗಳಿಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರುವ ಸಂಸ್ಥೆಯಾಗಿದೆ. ಹೀಗಾಗಿ ಗ್ರಾಮಸಭೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಗ್ರಾಮಸಭೆ ಗ್ರಾಮಪಂಚಾಯಿತಿಯು ರೂಪಿಸಿಬೇಕಾದ ಕಾರ್ಯಯೋಜನೆಗಳನ್ನು ಗ್ರಾಮದ ಜನತೆಗೆ ತಿಳಿಸಿ, ಅವರ ಒಪ್ಪಿಗೆಯನ್ನು ಪಡೆಯುವುದಾಗಿದೆ. ಇದು ಸ್ಥಳೀಯ ಆಡಳಿತದಲ್ಲಿ ಪಾರದರ್ಶಕತೆಯ ಸಾಧನವಾಗಿದೆ. ಗ್ರಾಮಸಭೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸಿದ ಯೋಜನೆಗಳನ್ನು ಗ್ರಾಮೀಣ ಮಟ್ಟದಲ್ಲಿ

ಉದ್ದೇಶಿತ ವರ್ಗಕ್ಕೆ ತಲುಪಿಸುವ ಸಾಂಸ್ಥಿಕ ವ್ಯವಸ್ಥೆಯಾಗಿದೆ.[1] ಅಂದರೆ ಗ್ರಾಮಸಭೆ ಮೇಲ್ಮಟ್ಟದ ಸರ್ಕಾರಗಳ ಅಥವಾ ಸ್ಥಳೀಯರ ಆಶಯಕ್ಕೆ ಅನುಗುಣವಾಗಿ ತಳಮಟ್ಟದಲ್ಲೇ ಯೋಜನೆಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ಮಹಿಳೆಯರ ಸಹಭಾಗಿತ್ವದ ಉದ್ದೇಶವನ್ನು ಹೊಂದಿದೆ. ಆದ್ದರಿಂದ ಮಹಿಳೆಯರ ಸ್ವನಿರ್ಧಾರ ಇಲ್ಲಿ ಕಂಡುಬರಬಹುದು. ಮಹಿಳೆಯರ ಸ್ಥಿತಿಗತಿಗಳು ಸುಧಾರಿಸಬಹುದು. ಅವರು ಸಬಲೀಕರಣಗೊಳ್ಳಬಹುದು ಎಂಬ ಉದ್ದೇಶವಿದೆ. ಹೀಗಾಗಿ ಜನತಾಂತ್ರಿಕ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮಸಭೆಗೆ ಅತ್ಯಂತ ಪ್ರಾಮುಖ್ಯತೆ ಲಭಿಸಿದೆ. ಗ್ರಾಮಸಭೆಯ ಪ್ರಾಮುಖ್ಯತೆಯನ್ನು ತಿಳಿಯಬೇಕಾದರೆ ಮೊದಲು ಅದರ ರಚನೆ ಮತ್ತು ಪ್ರಕಾರ್ಯಗಳ ಬಗ್ಗೆ ತಿಳಿಯುವುದು ಸೂಕ್ತವಾದುದು.

ಭಾರತದಲ್ಲಿ ಗ್ರಾಮಪಂಚಾಯಿತಿ ಅಥವಾ ಗ್ರಾಮೀಣ ಆಡಳಿತದ ಇತಿಹಾಸವನ್ನು ಅವಲೋಕಿಸಿದಾಗ ಪ್ರಾಚೀನ ಕಾಲದಲ್ಲಿ ಗ್ರಾಮಸಭೆ ಪರಿಕಲ್ಪನೆ ಇರುವುದು ಕಂಡುಬರುತ್ತದೆ. ಗ್ರಾಮಸಭೆಯ ಕಾರ್ಯನಿರ್ವಹಣೆಯ ಕುರಿತು ಕೆಲವು ಅಧ್ಯಯನಗಳು ಬೆಳಕು ಚೆಲ್ಲಿವೆ. ಆದರೆ ಬ್ರಿಟಿಷರ ಆಡಳಿತದ ಅವಧಿಯಲ್ಲಿ ಮೊದಲ ಬಾರಿಗೆ ಲಾರ್ಡ್ ರಿಪ್ಪನ್ ಮೇ 18, 1882ರಂದು ಜಾರಿಗೆ ತಂದ ಸ್ಥಳೀಯ ಸರ್ಕಾರದ ಕಾಯ್ದೆಯಲ್ಲಿ ಗ್ರಾಮಸಭೆಗೆ ಅವಕಾಶವಿರಲಿಲ್ಲ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅವಕಾಶ ನೀಡಿದ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಸಹ ಗ್ರಾಮಸಭೆಗೆ ಅವಕಾಶವಿರಲಿಲ್ಲ. ಅಲ್ಲದೇ 1959ರ ಮೈಸೂರು ಗ್ರಾಮಪಂಚಾಯತ್ ಮತ್ತು ಸ್ಥಳೀಯ ಬೋರ್ಡ್ ಕಾಯ್ದೆಯಲ್ಲಿ ಗ್ರಾಮಸಭೆಯ ಬಗ್ಗೆ ಸ್ಪಷ್ಟ ಉಲ್ಲೇಖವಿರಲಿಲ್ಲ. ಆದರೆ ಗ್ರಾಮಪಂಚಾಯಿತಿ ಗ್ರಾಮದ ಆಡಳಿತ ಮತ್ತು ಆಯವ್ಯಯದ ವರದಿಯನ್ನು ಗ್ರಾಮದ ಜನರಿಗೆ ತಿಳಿಸಬೇಕಾಗಿತ್ತು. ಗ್ರಾಮಸ್ಥರು ಸಭೆ ಸೇರಿ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಗ್ರಾಮಪಂಚಾಯಿತಿಗೆ ಸಲಹೆ ಸೂಚನೆಗಳನ್ನು ನೀಡಲು ಆಸ್ಪದವಿತ್ತು. ಆದರೆ ಗ್ರಾಮಪಂಚಾಯಿತಿ ಈ ಸಲಹೆಗಳನ್ನು ಒಪ್ಪಬಹುದು ಇಲ್ಲವೇ ಬಿಡಬಹುದಿತ್ತು. ಹೀಗೆ ಗ್ರಾಮಸಭೆಯ ಪರಿಕಲ್ಪನೆಯು ಯಾವುದೇ ನಿಶ್ಚಿತ ಕಾರ್ಯಗಳಿಲ್ಲದೆ ಅಸ್ತಿತ್ವದಲ್ಲಿತ್ತು. ಕರ್ನಾಟಕದಲ್ಲಿ ಗ್ರಾಮಸಭೆಗೆ ಕಾರ್ಯಕ್ಷಮತೆಯ ಪ್ರಾಯೋಗಿಕ ನೆಲೆಯನ್ನು ಐತಿಹಾಸಿಕವಾಗಿ '1983ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯಪಂಚಾಯತ್ ಕಾಯ್ದೆ'ಯು ಒದಗಿಸಿತು. ಈ ಕಾಯ್ದೆಯು ಗ್ರಾಮಸಭೆಯನ್ನು ಶಾಸನಾತ್ಮಕವಾಗಿ ಜಾರಿಗೊಳಿಸಿ, ಕೆಲವು ನಿರ್ದಿಷ್ಟ ಅಧಿಕಾರ ಪ್ರಕಾರ್ಯಗಳನ್ನು ಸ್ಪಷ್ಟಪಡಿಸಿತು. 1992ರಲ್ಲಿ ಸಂವಿಧಾನದ 73ನೇ ತಿದ್ದುಪಡಿಯಿಂದ ಪಂಚಾಯತ್‌ರಾಜ್ ಸಂಸ್ಥೆಗಳು ಸಾಂವಿಧಾನಿಕ ಮನ್ನಣೆ ಪಡೆದವು. ಇದರೊಂದಿಗೆ ಗ್ರಾಮಸಭೆಯು ಸಾಂವಿಧಾನಿಕ ಸ್ಥಾನಮಾನ ಪಡೆಯಿತು. ತತ್ಪರಿಣಾಮವಾಗಿ ಕರ್ನಾಟಕ ಸರ್ಕಾರವು 1993ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯನ್ನು ರೂಪಿಸಿ, ಜಾರಿಗೊಳಿಸಿತು.

ಭಾರತದಲ್ಲಿ ಗ್ರಾಮಸಭೆಯ ಪರಿಕಲ್ಪನೆಯನ್ನು ಸ್ವಿಸ್ ಒಕ್ಕೂಟದ ಪ್ರತಿನಿಧಿ ಕ್ಯಾಂಟನ್‌ಗಳ ಆಡಳಿತದಲ್ಲಿ ಅಸ್ತಿತ್ವದಲ್ಲಿರುವ ಲ್ಯಾಂಡ್ಸ್ ಜೆಮೈನೆಡ್ (Lands gemeinde) ಎಂಬ ವಿಶಿಷ್ಟ ಸಂಸ್ಥೆಯಿಂದ ಎರವಲು ಪಡೆಯಲಾಗಿರಬಹುದೆಂದು ಗ್ರಹಿಸಲಾಗಿದೆ. ಈ ಲ್ಯಾಂಡ್ಸ್ ಜೆಮೈನೆಡ್ 500 ವರ್ಷಗಳಷ್ಟು ಪುರಾತನ

ರಾಜಕೀಯ(Political Assembly) ಸಭೆಯಾಗಿದೆ. ಕ್ಯಾಂಟನ್‌ನ ಎಲ್ಲಾ ವಯಸ್ಕ ಪುರುಷರು ಈ ಸಭೆಯ ಸದಸ್ಯರಾಗಿರುತ್ತಾರೆ. ಇದು ಕ್ಯಾಂಟನ್ ಶಾಸಕಾಂಗದ ಸಭೆಯಂತೆ ಸುಸಜ್ಜಿತ ಸಭಾಂಗಣದಲ್ಲಿ ನಡೆಯದೇ ಬಯಲು ಆಲಯ/ಪ್ರದೇಶದಲ್ಲಿ ಮಾರ್ಚ್ ಅಥವಾ ಏಪ್ರಿಲ್ ತಿಂಗಳಿನಲ್ಲಿ ಭಾನುವಾರದಂದು ನಡೆಯುತ್ತದೆ. ಈ ಸಭೆಯಲ್ಲಿ ಪೌರರ ಹಾಜರಾತಿ ಕಡ್ಡಾಯವಾಗಿದೆ. ಹಾಜರಾಗದಿದ್ದವರಿಗೆ ಕೆಲವು ಕ್ಯಾಂಟನ್‌ಗಳಲ್ಲಿ ಕಡ್ಡಾಯವಾಗಿ ದಂಡ ವಿಧಿಸಲಾಗುತ್ತದೆ. ಈ ಸಭೆಯ ಅಧ್ಯಕ್ಷತೆಯನ್ನು ಲ್ಯಾಂಡ್‌ಮ್ಮಾನ್(Landmman) ವಹಿಸುತ್ತಾನೆ. ಈತನನ್ನು ಈ ಸಭೆಯೇ ಆಯ್ಕೆ ಮಾಡುತ್ತದೆ. ಅಲ್ಲದೇ ಕ್ಯಾಂಟನ್‌ನಿಂದ ರಾಜ್ಯಸಭೆಗೆ ಪ್ರತಿನಿಧಿಸುವ ಪ್ರತಿನಿಧಿಗಳನ್ನು, ಕ್ಯಾಂಟನ್ ನ್ಯಾಯಾಧೀಶರನ್ನು, ಅಧಿಕಾರಿಗಳನ್ನು ಮತ್ತು ಸರ್ಕಾರದ ಮುಖ್ಯಸ್ಥರನ್ನು ಕೈ ಎತ್ತುವ ಮೂಲಕ(Show of hands) ಆಯ್ಕೆ ಮಾಡಲಾಗುತ್ತದೆ. ಜೊತೆಗೆ ಬಜೆಟ್ ಮತ್ತು ಶಾಸನಗಳನ್ನು ಅನುಮೋದಿಸುತ್ತದೆ. ಕ್ಯಾಂಟನ್ ಮೇಲೆ ಪರಿಣಾಮ ಬೀರಬಹುದಾದ ಸಮಸ್ಯೆಗಳನ್ನು ಚರ್ಚಿಸಿ, ತೀರ್ಮಾನ ಕೈಗೊಳ್ಳುತ್ತದೆ ಮತ್ತು ಸಂವಿಧಾನವನ್ನು ಬದಲಾಯಿಸುವ ಅಧಿಕಾರ ಹೊಂದಿದೆ.[2]

ಭಾರತದಲ್ಲಿ ಜನತಾಂತ್ರಿಕ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ಗ್ರಾಮಸಭೆಗೆ ಮಹತ್ವದ ಪಾತ್ರವಿದೆ. ಗ್ರಾಮಸಭೆ ಆಡಳಿತದಲ್ಲಿ ಸ್ತ್ರೀ-ಪುರುಷರ ಸಹಭಾಗಿತ್ವಕ್ಕೆ ಅವಕಾಶ ಕಲ್ಪಿಸಿ, ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶವಾಗಿದೆ. ಇದು ಸ್ಥಳೀಯರು ತಮ್ಮ ಬೇಕು ಬೇಡಿಕೆಗಳನ್ನು ನಿರ್ಧರಿಸುವ, ಅವಶ್ಯಕತೆಗಳನ್ನು ಗುರುತಿಸುವ ಮತ್ತು ಆದ್ಯತೆಯನ್ನು ವ್ಯಕ್ತಪಡಿಸುವ ಸಂಸ್ಥೆಯಾಗಿದೆ. ಗ್ರಾಮಸಭೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಾಧಿಸುವ ಸಂಸ್ಥೆಯಾಗಿ ಕಂಡುಬರುತ್ತದೆ. ಇಂತಹ ಗ್ರಾಮಸಭೆ ಮತ್ತು ವಾರ್ಡ್ ಸಭೆಗಳ ದಿನಾಂಕ, ಸ್ಥಳ ಮತ್ತು ವೇಳೆಯನ್ನು ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಗಳು ಅಧ್ಯಕ್ಷರೊಡನೆ ಸಮಾಲೋಚಿಸಿ ನಿಗದಿಪಡಿಸಬೇಕು. ಗ್ರಾಮಪಂಚಾಯಿತಿಯು ಗ್ರಾಮಸಭೆಯನ್ನು ಕರೆಯಲು ತಪ್ಪಿದಲ್ಲಿ ತಾಲೂಕುಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಗ್ರಾಮಸಭೆ ಕರೆಯತಕ್ಕದ್ದು. ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಭೆಯ ತಿಳುವಳಿಕೆಯ ಬಗ್ಗೆ ಗ್ರಾಮಪಂಚಾಯಿತಿ ನೋಟಿಸ್ ಬೋರ್ಡ್‌ನಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಭಿತ್ತಿಪತ್ರಗಳನ್ನು ಅಂಟಿಸಿ ಪ್ರಚಾರ ಮಾಡಬೇಕು. ಗ್ರಾಮದ ಜನತೆಯ ಗಮನಕ್ಕೆ ತರಲು ಟಾಂಟಾಂ ಹಾಕಿಸುವ ಮೂಲಕ ಮತ್ತು ಕರಪತ್ರಗಳನ್ನು ಹಂಚುವ ಮೂಲಕ ಪ್ರಚಾರ ಮಾಡಬೇಕು. ಸ್ಥಳೀಯ ದಿನಪತ್ರಿಕೆ, ಆಕಾಶವಾಣಿ, ದೂರದರ್ಶನ ಮೂಲಕ ಪ್ರಚಾರ ಮಾಡಬೇಕು. ಪ್ರಸ್ತುತ ಎಲ್ಲ ಗ್ರಾಮಗಳಲ್ಲಿ ಸ್ವಸಹಾಯಕ ಗುಂಪುಗಳಿದ್ದು, ಅವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಬೇಕು. ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಅಧಿಕಾರಿಗಳು ಭಾಗವಹಿಸುವಂತೆ ಲಿಖಿತ ಸೂಚನೆ ನೀಡಬೇಕು.

ಗ್ರಾಮಸಭೆಯನ್ನು ವರ್ಷಕ್ಕೆ ಎರಡು ಬಾರಿ ಕರೆಯಬೇಕು. ಎರಡು ಗ್ರಾಮಸಭೆಗಳ ನಡುವಿನ ಅಂತರ ಆರು ತಿಂಗಳಿಗಿಂತ ಹೆಚ್ಚಿರಬಾರದು. ಗ್ರಾಮಸಭೆಯ ಶೇ.10ರಷ್ಟು ಸದಸ್ಯರು ಲಿಖಿತ ಕೋರಿಕೆಯ ಮೇರೆಗೆ ವಿಶೇಷ ಗ್ರಾಮಸಭೆ ಕರೆಯಬಹುದು. ಆದರೆ ಎರಡು ವಿಶೇಷ ಗ್ರಾಮಸಭೆಗಳ ನಡುವೆ

ಕನಿಷ್ಠ ಮೂರು ತಿಂಗಳ ಅಂತರವಿರಬೇಕು. ಗ್ರಾಮಸಭೆಯ ಅಧ್ಯಕ್ಷತೆಯನ್ನು ಗ್ರಾಮಪಂಚಾಯಿತಿ ಅಧ್ಯಕ್ಷರು, ಇವರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ವಹಿಸುತ್ತಾರೆ. ಇವರಿಬ್ಬರ ಗೈರುಹಾಜರಿಯಲ್ಲಿ ನಾಮನಿರ್ದೇಶಿತ ಸದಸ್ಯ ಅಧ್ಯಕ್ಷತೆಯನ್ನು ವಹಿಸಬೇಕು. ಮೊದಲು ಪಂಚಾಯಿತಿ ವ್ಯಾಪ್ತಿಯೊಳಗೆ ಬರುವ ಎಲ್ಲ ವಾರ್ಡ್‌ಸಭೆಗಳನ್ನು ನಡೆಸಿದ ನಂತರ ಗ್ರಾಮಸಭೆ ನಡೆಸತಕ್ಕದ್ದು. ಪಂಚಾಯಿತಿಯ ಮತದಾರರಲ್ಲಿ 1/10ರಷ್ಟು ಅಥವಾ 100 ಜನ ಹಾಜರಿಯಲ್ಲಿ ಗ್ರಾಮಸಭೆ ನಡೆಯಬೇಕು. ಗ್ರಾಮಸಭೆಯ ಹಾಜರಿಯಲ್ಲಿ ಶೇ.33ರಷ್ಟು(ಮುಂದಿನ ದಿನಗಳಲ್ಲಿ ಶೇ.50ರಷ್ಟು) ಮಹಿಳಾ ಹಾಜರಿ ಇರುವಂತೆ ನೋಡಿಕೊಳ್ಳಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಹಾಜರಾತಿ ಅವರ ಜನಸಂಖ್ಯೆಗೆ ಅನುಗುಣವಾಗಿರಬೇಕು. ಗ್ರಾಮಸಭೆ ಗ್ರಾಮಪಂಚಾಯಿತಿ ಮಟ್ಟದ ಸಭೆಯಾಗಿರುವುದರಿಂದ ಪ್ರತಿಯೊಂದು ವಾರ್ಡಿನಿಂದ ಕನಿಷ್ಠ 10 ಜನ ಮತದಾರರು ಇರುವಂತೆ ನೋಡಿಕೊಳ್ಳಬೇಕು. ಗ್ರಾಮಸಭೆಯ ಕಾರ್ಯಸೂಚಿ(ಅಜೆಂಡಾ)ಗೆ ಅನುಗುಣವಾಗಿ ಪ್ರತಿಯೊಂದು ವಿಷಯಗಳನ್ನು ಚರ್ಚಿಸಿ, ಬಹುಮತದ ಮೇಲೆ ಅಂಗೀಕರಿಸಬೇಕು. ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ ಗ್ರಾಮಸಭೆಯ ನಡಾವಳಿ/ಠರಾವುಗಳನ್ನು ಪುಸ್ತಕದಲ್ಲಿ ದಾಖಲಿಸಬೇಕು ಮತ್ತು ಸಭೆಯ ಮುಕ್ತಾಯದ ವೇಳೆಯಲ್ಲಿ ಓದಿ ಹೇಳಬೇಕು.[3] ಹೀಗೆ ಪ್ರಸ್ತುತವಾಗಿ ಗ್ರಾಮಸಭೆ ರಚನೆ ಹೊಂದಿದೆ.

ಆದರೆ ಗ್ರಾಮಸಭೆಗಳ ವಾಸ್ತವ ಪರಿಸ್ಥಿತಿ ಬೇರೆ ಇದೆ. ಗ್ರಾಮಪಂಚಾಯಿತಿ ಮತ್ತು ಗ್ರಾಮಸಭೆಗಳ ಬಗ್ಗೆ ಈಗಾಗಲೇ ಹಲವಾರು ಅಧ್ಯಯನಗಳು ನಡೆದಿವೆ. ಗ್ರಾಮಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ತುಂಬಾ ಕಡಿಮೆ ಇರುವುದು ಕಂಡುಬರುತ್ತದೆ. ಮಹಿಳೆಯರು ಅಥವಾ ಮಹಿಳಾ ಸದಸ್ಯರು ಗ್ರಾಮಸಭೆಯಲ್ಲಿ ಭಾಗವಹಿಸಲು(ಕುಟುಂಬ,ಆರ್ಥಿಕ ಮತ್ತು ರಾಜಕೀಯ) ಪುರುಷರ ನಿರ್ಧಾರ ಅಥವಾ ಒಪ್ಪಿಗೆಗೆ ಕಾಯಬೇಕಾಗುತ್ತದೆ. ಸಾಮಾನ್ಯವಾಗಿ ಗ್ರಾಮಸಭೆಯಲ್ಲಿ ಮಹಿಳಾ ಜನಪ್ರತಿನಿಧಿಗಳ ಜೊತೆಗೆ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಮತ್ತು ಮನೆ, ಗಂಡ ಹಾಗೂ ಮಕ್ಕಳು ಇತ್ಯಾದಿ ಮಿತಿಗಳನ್ನು ಮೀರಿದವರು ಅಥವಾ ಇವೆಲ್ಲವನ್ನು ಪೂರೈಸಿ ಇನ್ನೇನು ವಾನಪ್ರಸ್ಥಕ್ಕೆ ರೆಡಿಯಾದಂತಹ[4] ಮಹಿಳೆಯರು ಮಾತ್ರ ಭಾಗವಹಿಸುವುದು ಕಂಡುಬರುತ್ತದೆ. ಗ್ರಾಮಸಭೆಯಲ್ಲಿ ಪ್ರತಿಷ್ಠಿತವರ್ಗದ, ಮಧ್ಯಮ ವರ್ಗದ ಕುಟುಂಬದ ಮಹಿಳೆಯರು ಮತ್ತು ವಿದ್ಯಾವಂತ ಮಹಿಳೆಯರು ಭಾಗವಹಿಸುವುದು ಕಂಡುಬರುವುದಿಲ್ಲ. ಸಾಮಾನ್ಯವಾಗಿ ಮೂಲಭೂತ ಸೌಕರ್ಯಗಳ ಸಮಸ್ಯೆ ಅಥವಾ ಕೊರತೆಗಳ ತೀವ್ರತೆ ಹೆಚ್ಚು ಕಂಡುಬಂದಾಗ ಗ್ರಾಮಸಭೆಗಳಲ್ಲಿ ಮಹಿಳೆಯರ ಗುಂಪು ಹಾಜರಿರುವುದು ಕಂಡುಬರುತ್ತದೆ. ಆದರೆ ಇವರು ಗ್ರಾಮಸಭೆಯಲ್ಲಿ ಪುರುಷರ ಜೊತೆ ಸಮಾನವಾಗಿ ಕೂಡದೇ, ದೂರದಲ್ಲಿ ನಿಂತು ತಮ್ಮ ಸಮಸ್ಯೆ ಮತ್ತು ಬೇಡಿಕೆಗಳನ್ನು ಹೇಳಿಕೊಳ್ಳುವುದು ಕಂಡುಬರುತ್ತದೆ. ಇವರಿಗೆ ಗ್ರಾಮಸಭೆ ನಡೆಯುವ ಸ್ಥಳ, ದಿನಾಂಕ ಮತ್ತು ವೇಳೆಯ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ. ಗ್ರಾಮಸಭೆಗಳನ್ನು ಹೆಚ್ಚಾಗಿ ಗ್ರಾಮಪಂಚಾಯಿತಿ ಇರುವ ಸ್ಥಳಗಳಲ್ಲೇ ಕರೆಯಲಾಗುತ್ತದೆ.[5] ಗ್ರಾಮಸಭೆಯಲ್ಲಿ ಮಹಿಳೆಯರ ಬೇಕು ಬೇಡಿಕೆಗಳು ಈಡೇರುವುದಿಲ್ಲ. ಫಲಾನುಭವಿಗಳ ಆಯ್ಕೆಯಾಗುವುದಿಲ್ಲ. ಮಹಿಳೆಯರ ಬಗ್ಗೆ ಚರ್ಚೆಯಾಗಬೇಕಾದ ಸಮಸ್ಯೆಗಳ ಬಗ್ಗೆ ಚರ್ಚೆಯಾಗುವುದಿಲ್ಲ.

ಅವರ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ಗ್ರಾಮಸಭೆಗಳಲ್ಲಿ ಹೆಚ್ಚಾಗಿ ಜಗಳಗಳು ಆಗುತ್ತವೆ ಎಂಬ ಕಾರಣಗಳನ್ನು ಗುರುತಿಸಬಹುದು. ಈ ಕಾರಣಗಳಿಂದ ಮಹಿಳೆಯರು ಸ್ವತಂತ್ರವಾಗಿ ಗ್ರಾಮಸಭೆಯಲ್ಲಿ ಭಾಗವಹಿಸುವ ನಿರ್ಧಾರ ಇಲ್ಲವಾಗಿದೆ. ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುವುದಕ್ಕೆ ಪುರುಷರ ಅನುಮತಿಗಾಗಿ ಕಾಯಬೇಕಾಗಿದೆ. ಆದ್ದರಿಂದ ಗ್ರಾಮಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯದ ಪ್ರಮಾಣ ಕಡಿಮೆ ಎನ್ನಬಹುದು. ಗ್ರಾಮಸಭೆಯಲ್ಲಿ ಮಹಿಳೆಯರ ಕನಿಷ್ಠ ಪ್ರಾತಿನಿಧ್ಯ ಕಂಡುಬಂದರೂ ಅದು ಅನಿವಾರ್ಯ ಅಥವಾ ನಾಮಮಾತ್ರವಾಗಿರುತ್ತದೆ. ಆದ್ದರಿಂದ ಗ್ರಾಮೀಣ ಮಹಿಳೆಯರಿಗೆ ಗ್ರಾಮಸಭೆಯಲ್ಲಿ ಭಾಗವಹಿಸುವ ನಿರ್ಧಾರ ಇಲ್ಲದಿರುವುದರಿಂದ ಅವರು ಸಬಲೀಕರಣಗೊಂಡಿಲ್ಲವೆಂಬ ತೀರ್ಮಾನಕ್ಕೆ ಈ ಅಧ್ಯಯನದಲ್ಲಿ ಬರಲಾಗಿದೆ.

ಪ್ರಸ್ತುತ ಪ್ರಬಂಧದ ಉದ್ದೇಶಗಳನ್ನು ವಿಶ್ಲೇಷಿಸಲು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಎರಡು ವಿಭಿನ್ನ ಜಿಲ್ಲೆ ಮತ್ತು ತಾಲೂಕುಗಳ ನಾಲ್ಕು ಗ್ರಾಮಪಂಚಾಯತಿಗಳಿಗೆ 2005 ಮತ್ತು 2010ರ ಅವಧಿಗಳಿಗೆ ಚುನಾಯಿತರಾದ ಜನಪ್ರತಿಗಳು ಮತ್ತು ಚುನಾವಣೆಗೆ ಸ್ಪರ್ಧಿಸಿದ್ದ, ಉಮೇದುವಾರಿಕೆ ವಾಪಾಸು ಪಡೆದ ಅಭ್ಯರ್ಥಿಗಳನ್ನು ಹಾಗೂ ಅಗತ್ಯವಿದ್ದಲ್ಲಿ ಹಿಂದಿನ ಅವಧಿಗಳಲ್ಲಿ ಚುನಾಯಿತ ಮತ್ತು ಸ್ಪರ್ಧಿಸಿದ್ದ ಲಭ್ಯ ರಾಜಕೀಯ ಹಾಗೂ ಅಂಗನವಾಡಿ/ಆಶಾ ಕಾರ್ಯಕರ್ತರನ್ನು ಪ್ರಶ್ನಾವಳಿ ಮೂಲಕ ಸಂದರ್ಶಿಸಿ, ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಣೆ ಮಾಡಿದೆ. ಅಂದರೆ ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ಗ್ರಾಮಪಂಚಾಯಿತಿಗಳ 2005 ಮತ್ತು 2010ರ ಚುನಾವಣೆಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ ಸ್ತ್ರೀ-ಪುರುಷ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯ ಮತ್ತು ಅವರ ಸ್ವನಿರ್ಧಾರಕ್ಕೆ ಸೀಮಿತಗೊಳಿಸಲಾಗಿದೆ. ಇವರೆಲ್ಲರೂ ಮತದಾರರ ಪಟ್ಟಿಯಲ್ಲಿ ಹೆಸರಿರುವ ಗ್ರಾಮದ ಮತದಾರರು ಮತ್ತು ಗ್ರಾಮಸಭೆಯ ಸದಸ್ಯರು ಆಗಿರುತ್ತಾರೆ. ಸರ್ಕಾರದ ಕಾಯಿದೆ ಪ್ರಕಾರ ಪ್ರತಿವರ್ಷ ಕನಿಷ್ಠ ಎರಡು ಬಾರಿಯಾದರೂ ಗ್ರಾಮಸಭೆ ನಡೆಸಬೇಕಾಗುತ್ತದೆ. ಆದರೆ ಕಾಯ್ದೆಯಲ್ಲಿರುವ ಗ್ರಾಮಸಭೆಗೂ ಮತ್ತು ವಾಸ್ತವದಲ್ಲಿ ನಡೆಯುವ ಗ್ರಾಮಸಭೆಗೂ ತುಂಬಾ ವ್ಯತ್ಯಾಸವಿರುವುದನ್ನು ಕ್ಷೇತ್ರ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಕಾಯ್ದೆಯಲ್ಲಿ ನಿರ್ದಿಷ್ಟಪಡಿಸಿದ ಹಾಗೆಯೇ ಗ್ರಾಮಸಭೆಗಳು ನಡೆದಿವೆ ಎಂಬುದು ದಾಖಲೆಗಳಲ್ಲಿ ಮಾತ್ರ ಇವೆ. ಆದರೆ ಈ ಗ್ರಾಮಸಭೆಗಳಿಲ್ಲಿ ಗ್ರಾಮದ ಜನತೆಯ ಕನಿಷ್ಠ ಕೋರಂ ಇರುವುದಿಲ್ಲ. ಆದರೂ ಜನ ಸೇರಿದ್ದಾರೆ ಎಂದು ತೋರಿಸಲು ದಾಖಲೆಗಳಲ್ಲಿ ಸಹಿ ಇರುತ್ತದೆ.[7] ಗ್ರಾಮಸಭೆಯಲ್ಲಿ ಗ್ರಾಮಪಂಚಾಯಿತಿ ಸದಸ್ಯರು ಅದರಲ್ಲಿ ಮಹಿಳಾ ಸದಸ್ಯರು ಕಡ್ಡಾಯವಾಗಿ ಭಾಗವಹಿಸಬಹುದು. ಒಂದು ವೇಳೆ ಸದಸ್ಯರು ಭಾಗವಹಿಸದಿದ್ದರೂ ಅವರು ಭಾಗವಹಿಸಿದ್ದಾರೆ ಎಂದು ದಾಖಲೆಗಳಲ್ಲಿ ಕಂಡುಬರುತ್ತವೆ. ಗ್ರಾಮಸಭೆಯಲ್ಲಿ ಗ್ರಾಮಸ್ಥರ ಮತ್ತು ಮಹಿಳಾ ಮತದಾರರ ಹಾಜರಾತಿಯನ್ನು ಗ್ರಾಮಸಭೆಯ ಕಾರ್ಯಸೂಚಿಗೆ ಅನುಗುಣವಾಗಿ ತಯಾರಿಸುವುದು ಕಂಡುಬರುತ್ತದೆ. ಆದ್ದರಿಂದ ಗ್ರಾಮಸಭೆಗೆ ಸಂಬಂಧಿಸಿದಂತೆ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಮಾಪನ ಮಾಡಲು ಗ್ರಾಮಪಂಚಾಯಿತಿಯ ದಾಖಲೆಗಳ ಬದಲಾಗಿ, 2005 ಮತ್ತು 2010ರ ಚುನಾವಣೆಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ ಸ್ತ್ರೀ-ಪುರುಷ

ಅಭ್ಯರ್ಥಿಗಳು ನೀಡಿದ ಮಾಹಿತಿಗೆ ಈ ಅಧ್ಯಾಯವನ್ನು ಸೀಮಿತಗೊಳಿಸಲಾಗಿದೆ. ಮುಖ್ಯವಾಗಿ ಗ್ರಾಮಸಭೆಯಲ್ಲಿ ಭಾಗವಹಿಸುವ ಗ್ರಾಮೀಣ ಮಹಿಳೆಯರ ನಿರ್ಧಾರ ಯಾರ ಕೈಯಲ್ಲಿದೆ? ಗ್ರಾಮಸಭೆಯಲ್ಲಿ ಭಾಗವಹಿಸುವ ಮಹಿಳೆಯರ ನಿರ್ಧಾರವನ್ನು ಯಾರು ತೆಗೆದುಕೊಳ್ಳಬೇಕು? ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸಿದರೂ ಅವರ ಸಂಖ್ಯೆಯಷ್ಟು ಮತ್ತು ಅವರ ಸ್ವನಿರ್ಧಾರಗಳಿಗೆ ಅಥವಾ ಸ್ವಇಚ್ಚೆಗಳಿಗೆ ಅವಕಾಶವಿದೆಯೇ? ಮುಂತಾದ ಅಂಶಗಳ ಬಗ್ಗೆ ಚರ್ಚಿಸಲಾಗಿದೆ. ಕ್ಷೇತ್ರ ಅಧ್ಯಯನದ ವೇಳೆ ಪ್ರಶ್ನಾವಳಿ ಮೂಲಕ ಮಾಹಿತಿ ನೀಡಿದ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳ ನಿರ್ಧಾರಗಳನ್ನು ವೈಯಕ್ತಿಕವಾಗಿ ಮತ್ತು ಪರಸ್ಪರ ತೌಲನಿಕವಾಗಿ ವಿಶ್ಲೇಷಣೆ ಮಾಡಿ, ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ.

6.1 ಗ್ರಾಮಸಭೆ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಯಲುಸೀಮೆಯ ಹೊಸೂರು ಮತ್ತು ನಾಗೇನಹಳ್ಳಿ ಹಾಗೂ ಮಲೆನಾಡಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಿಗೆ ಜರುಗಿದ 2005 ಮತ್ತು 2010ರ ಚುನಾವಣೆಗಳಲ್ಲಿ ಚುನಾಯಿತರಾದ ಜನಪ್ರತಿಗಳು ಮತ್ತು ಚುನಾವಣೆಗೆ ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ(ಅಗತ್ಯವಿದ್ದಲ್ಲಿ ರಾಜಕೀಯ/ಅಂಗನವಾಡಿ/ಆಶಾ ಕಾರ್ಯಕರ್ತರನ್ನು ಒಳಗೊಂಡಂತೆ) ಅಭ್ಯರ್ಥಿಗಳನ್ನೊಳಗೊಂಡಂತೆ ಪ್ರತಿ ಗ್ರಾಮಪಂಚಾಯಿತಿಯಿಂದ 50 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆಮಾಡಿಕೊಂಡಿದೆ. ಒಟ್ಟಾರೆಯಾಗಿ ಈ ನಾಲ್ಕು ಗ್ರಾಮಪಂಚಾಯಿತಿಗಳಿಂದ 295(95 ಜನಪ್ರತಿನಿಧಿಗಳು ಹಾಗೂ 200 ಚುನಾವಣಾ ಅಭ್ಯರ್ಥಿಗಳು) ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳನ್ನು ಸಂದರ್ಶನ ಮಾಡಿದೆ. ಇವರಲ್ಲಿ ಶೇ.50ರಷ್ಟು ಮಹಿಳಾ ಅಭ್ಯರ್ಥಿಗಳು ಒಳಗೊಂಡಿದ್ದಾರೆ(ನೋಡಿ ಕೋಷ್ಟಕ–6.1). ಇವರೆಲ್ಲರೂ ಗ್ರಾಮದಲ್ಲಿ ಹೆಚ್ಚು ಪರಿಚಿತರು, ಜನತೆಯೊಂದಿಗೆ ಸಂಪರ್ಕದಲ್ಲಿರುವವರು, ಗ್ರಾಮದ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಇತ್ಯಾದಿ ಕಾರ್ಯಕ್ರಮಗಳಲ್ಲಿ ಸ್ಕ್ರಿಯವಾಗಿ ಭಾಗವಹಿಸುವವರಾಗಿದ್ದಾರೆ.

ಬಯಲುಸೀಮೆಯ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಈ ಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 68(33 ಪುರುಷ ಮಹಿಳಾ 35 ಮಹಿಳಾ) ಅಭ್ಯರ್ಥಿಗಳ ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರ ಅಧ್ಯಯನದಲ್ಲಿ ಪಡೆದು ವಿವರಿಸಲಾಗಿದೆ. ಇವರಲ್ಲಿ ಸಂದರ್ಶಿಸಿದ 35(ಶೇ.51) ಮಹಿಳಾ ಅಭ್ಯರ್ಥಿಗಳಲ್ಲಿ ಶೇ.29ರಷ್ಟು ಚುನಾಯಿತ ಪ್ರತಿನಿಧಿಗಳು ಮತ್ತು ಶೇ.71ರಷ್ಟು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳಾಗಿದ್ದಾರೆ. ಮೊದಲಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ 35 ಮಹಿಳಾ ಅಭ್ಯರ್ಥಿಗಳ ವಯೋಮಾನದ ಪ್ರಾತಿನಿಧ್ಯವನ್ನು ನೋಡಿದಾಗ ಇವರಲ್ಲಿ ಶೇ.60ರಷ್ಟು ಮಹಿಳೆಯರು 18ರಿಂದ 35ರ ವಯಸ್ಸು ಮತ್ತು ಶೇ.20ರಷ್ಟು ಮಹಿಳೆಯರು ಕ್ರಮವಾಗಿ 36ರಿಂದ 50ರ ವಯಸ್ಸು ಮತ್ತು 51 ಮೀರಿದ ವಯೋಮಾನದವರಾಗಿದ್ದರೆ, ಇವರ ಶೈಕ್ಷಣಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.40ರಷ್ಟು ಮಹಿಳೆಯರು ಅನಕ್ಷರಸ್ಥರು, ಶೇ.37ರಷ್ಟು ಮಹಿಳೆಯರು ಪ್ರಾಥಮಿಕ ಶಿಕ್ಷಣ ಮತ್ತು

ಶೇ.23ರಷ್ಟು ಮಹಿಳೆಯರು ಪ್ರೌಢ ಶಿಕ್ಷಣ ಪಡೆದವರಾಗಿದ್ದರೆ. ಇವರ ಆರ್ಥಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.8ರಷ್ಟು ಮಹಿಳೆಯರು ವ್ಯವಸಾಯ, ಶೇ.14ರಷ್ಟು ಮಹಿಳೆಯರು ಕೂಲಿ, ಶೇ.54ರಷ್ಟು ಗೃಹಿಣಿಯರು ಮತ್ತು ಶೇ.22ರಷ್ಟು ಮಹಿಳೆಯರು ಉದ್ಯೋಗಸ್ಥ(ಅಂಗನವಾಡಿ/ಆಶಾ ಕಾರ್ಯಕರ್ತೆಯ)ರಾಗಿದ್ದಾರೆ. ಹಾಗೆಯೇ ಮಾಹಿತಿ ನೀಡಿದ 33(ಶೇ.49)ಪುರುಷ ಅಭ್ಯರ್ಥಿಗಳಲ್ಲಿ ಶೇ.24ರಷ್ಟು ಚುನಾಯಿತ ಪ್ರತಿನಿಧಿಗಳು ಮತ್ತು ಶೇ.76ರಷ್ಟು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳಾಗಿದ್ದಾರೆ. ಇವರ ವಯೋಮಾನದ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.24ರಷ್ಟು ಪುರುಷರು 18ರಿಂದ 35ರ ವಯೋಮಾನದವರು, ಶೇ.52ರಷ್ಟು ಪುರುಷರು 36ರಿಂದ 50ರ ವಯೋಮಾನದವರು ಹಾಗೂ ಶೇ.24ರಷ್ಟು ಪುರುಷರು 51 ವರ್ಷ ಮೀರಿದ ವಯೋಮಾನದವರಾಗಿದ್ದಾರೆ. ಇವರ ಶೈಕ್ಷಣಿಕ ಪ್ರಾತಿನಿಧ್ಯವನ್ನು ನೋಡಿದಾಗ ಶೇ.36ರಷ್ಟು ಪುರುಷರು ಅನಕ್ಷರಸ್ಥರು, ಶೇ.52ರಷ್ಟು ಪುರುಷರು ಪ್ರಾಥಮಿಕ ಶಿಕ್ಷಣ ಮತ್ತು ಶೇ.12ರಷ್ಟು ಪುರುಷರು ಪ್ರೌಢ ಶಿಕ್ಷಣ ಪಡೆದವರಾಗಿದ್ದಾರೆ. ಇವರ ಆರ್ಥಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.91ರಷ್ಟು ಪುರುಷರು ವ್ಯವಸಾಯ ಮತ್ತು ಶೇ.9ರಷ್ಟು ಪುರುಷರು ಕೃಷಿಕೂಲಿ ಮಾಡುವರಾಗಿದ್ದಾರೆ(ನೋಡಿ ಕೋಷ್ಟಕ–6.2). ಈ ಪಂಚಾಯಿತಿಯಲ್ಲಿ ಪದವಿ ಶಿಕ್ಷಣ ಪಡೆದ ಮಹಿಳೆ ಅಥವಾ ಪುರುಷರು ಚುನಾವಣಾ ಪ್ರಾತಿನಿಧ್ಯ ಪಡೆದಿರುವುದಿಲ್ಲ.

ಹೊಸೂರು ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗೆ ಆಯ್ಕೆಗೊಂಡ ಜನಪ್ರತಿನಿಧಿಗಳ ಮತ್ತು ಚುನಾವಣೆಗೆ ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ನೋಡಿದಾಗ, ಸಂದರ್ಶಿಸಿದ ಮಾಹಿತಿದಾರಲ್ಲಿ ಮೊದಲಿಗೆ ಮಹಿಳಾ ಅಭ್ಯರ್ಥಿಗಳಲ್ಲಿ ಶೇ.34ರಷ್ಟು ಮಹಿಳಾ ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲ ಎಂದು, ಶೇ.34ರಷ್ಟು ಮಹಿಳಾ ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.9ರಷ್ಟು ಮಹಿಳಾ ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ ಮತ್ತು ಶೇ.23ರಷ್ಟು ಮಹಿಳಾ ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದಾಗಿ ಹೇಳಿಕೆ ನೀಡಿದ್ದಾರೆ. ಹಾಗೆಯೇ ಸಂದರ್ಶಿಸಿದ ಪುರುಷರ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.15ರಷ್ಟು ಪುರುಷ ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲ ಎಂದು, ಶೇ.15ರಷ್ಟು ಪುರುಷ ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.31ರಷ್ಟು ಪುರುಷ ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ, ಶೇ.24ರಷ್ಟು ಪುರುಷ ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಮತ್ತು ಶೇ.15ರಷ್ಟು ಪುರುಷ ಅಭ್ಯರ್ಥಿಗಳು 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದಾಗಿ ಹೇಳಿಕೆ ನೀಡಿದ್ದಾರೆ(ನೋಡಿ ಕೋಷ್ಟಕ–6.3). ಒಟ್ಟಾರೆಯಾಗಿ ಪುರುಷ ಮತ್ತು ಮಹಿಳಾ ಮತದಾರರ ಗ್ರಾಮಸಭೆಯ ಪ್ರಾತಿನಿಧ್ಯವನ್ನು ತೌಲನಿಕವಾಗಿ ಅವಲೋಕಿಸಿದಾಗ, ಶೇ.25ರಷ್ಟು ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲದಿರುವುದು ಕಂಡುಬರುತ್ತದೆ. ಆದರೆ ಶೇ.25ರಷ್ಟು ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.19ರಷ್ಟು ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ, ಶೇ.24ರಷ್ಟು ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಮತ್ತು ಶೇ.7ರಷ್ಟು ಅಭ್ಯರ್ಥಿಗಳು 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಗ್ರಾಮಸಭೆಯ

ಕಾರ್ಯಸೂಚಿಯ ಪ್ರಕಾರ ವರ್ಷಕ್ಕೆ ಎರಡು ಗ್ರಾಮಸಭೆಗಳು ನಡೆಯಬೇಕು. ಆದ್ದರಿಂದ ಹೊಸೂರು ಗ್ರಾಮಪಂಚಾಯಿತಿಯಲ್ಲಿ 2005ರಿಂದ 2012ರವರೆಗೆ ಸರಿ ಸುಮಾರು 16 ಗ್ರಾಮಸಭೆಗಳು ನಡೆಸಲಾಗಿದೆ. ಕ್ಷೇತ್ರ ಅಧ್ಯಯನದಲ್ಲಿ ಅಭ್ಯರ್ಥಿಗಳು ನೀಡಿದ ಮಾಹಿತಿ ವಿಶ್ಲೇಷಿಸಿದಾಗ ಶೇ.8ರಷ್ಟು ಅಭ್ಯರ್ಥಿಗಳು ಮಾತ್ರ 16 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಇದರಲ್ಲಿ ಮಹಿಳಾ ಅಭ್ಯರ್ಥಿಗಳ ಪ್ರಾತಿನಿಧ್ಯ ಇಲ್ಲದಿರುವುದು ಕಂಡುಬರುತ್ತದೆ. ಆದ್ದರಿಂದ ಹೊಸೂರು ಗ್ರಾಮಪಂಚಾಯಿತಿಯ ಗ್ರಾಮಸಭೆಗಳಲ್ಲಿ ಮಹಿಳಾ ಅಭ್ಯರ್ಥಿಗಳ ಉತ್ತಮ ಪ್ರಾತಿನಿಧ್ಯ ಇಲ್ಲವೆಂಬ ತೀರ್ಮಾನಕ್ಕೆ ಬರಲಾಗಿದೆ.

ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಚುನಾವಣೆಗಳಲ್ಲಿ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯ ಆಧಾರದ ಮೇರೆಗೆ ಗ್ರಾಮಸಭೆಯಲ್ಲಿ ಭಾಗವಹಿಸುವ ಗ್ರಾಮಸ್ಥರ ಪ್ರಮಾಣವನ್ನು ವಿಶ್ಲೇಷಿಸಲಾಗಿದೆ. ಸಂದರ್ಶಿಸಿದ ಮಾಹಿತಿದಾರರಲ್ಲಿ ಮೊದಲಿಗೆ ಮಹಿಳಾ ಅಭ್ಯರ್ಥಿಗಳ ಪ್ರಕಾರ, ಶೇ 34ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 50ರಿಂದ 100 ಗ್ರಾಮಸ್ಥರು, ಶೇ.40ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 101ರಿಂದ 150 ಗ್ರಾಮಸ್ಥರು, ಶೇ.17ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 151ರಿಂದ 200 ಗ್ರಾಮಸ್ಥರು ಮತ್ತು ಶೇ.9ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 201ರಿಂದ 250 ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸಿದ್ದಾರೆಂದು ಮಾಹಿತಿ ನೀಡಿದ್ದಾರೆ. ಹಾಗೆಯೇ ಪುರುಷರ ಅಭ್ಯರ್ಥಿಗಳ ಮಾಹಿತಿಯನ್ನು ನೋಡಿದಾಗ, ಇವರಲ್ಲಿ ಶೇ.40ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, 50ರಿಂದ 100 ಗ್ರಾಮಸ್ಥರು, ಶೇ.30ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ 101ರಿಂದ 150 ಗ್ರಾಮಸ್ಥರು, ಶೇ.30ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ ಸುಮಾರು 151ರಿಂದ 200 ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸಿದ್ದಾರೆಂದು ಮಾಹಿತಿ ನೀಡಿದ್ದಾರೆ(ನೋಡಿ ಕೋಷ್ಟಕ–6.4). ಒಟ್ಟಾರೆಯಾಗಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ಹೊಸೂರು ಗ್ರಾಮಸ್ಥರು ನೀಡಿದ ಮಾಹಿತಿ ಎಂದು ವಿಶ್ಲೇಷಿಸಿದಾಗ, ಶೇ.37ರಷ್ಟು ಗ್ರಾಮಸ್ಥರ ಪ್ರಕಾರ 50ರಿಂದ 100 ಮತದಾರರು ಶೇ.35ರಷ್ಟು ಗ್ರಾಮಸ್ಥರ ಪ್ರಕಾರ 101ರಿಂದ 150 ಗ್ರಾಮಸ್ಥರು, ಶೇ.24ರಷ್ಟು ಗ್ರಾಮಸ್ಥರ ಪ್ರಕಾರ 151ರಿಂದ 200 ಗ್ರಾಮಸ್ಥರು ಮತ್ತು ಶೇ.4ರಷ್ಟು ಗ್ರಾಮಸ್ಥರ ಪ್ರಕಾರ 201ರಿಂದ 250 ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸಿದ್ದಾರೆಂದು ಮಾಹಿತಿ ನೀಡಿದ್ದಾರೆ. ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ, ಗ್ರಾಮಪಂಚಾಯಿತಿಯ ಮತದಾರರಲ್ಲಿ 1/10ರಷ್ಟು ಅಥವಾ 100 ಜನ ಗ್ರಾಮಸಭೆಯಲ್ಲಿ ಹಾಜರಾತಿ ಇರಬೇಕು. ಆದರೆ 2010ರಲ್ಲಿ ಜರುಗಿದ ಹೊಸೂರು ಗ್ರಾಮಪಂಚಾಯಿತಿ ಚುನಾವಣೆಯಲ್ಲಿ 2,491 ಮತದಾರರು ಇದ್ದು, ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ ಗ್ರಾಮಸಭೆಯಲ್ಲಿ ಸರಿಯಾಗಿ 250 ಗ್ರಾಮಸ್ಥರು ಭಾಗವಹಿಸಬೇಕಾಗುತ್ತದೆ. ಈ ಗ್ರಾಮಪಂಚಾಯಿತಿಯಲ್ಲಿ 250ಕ್ಕಿಂತ ಹೆಚ್ಚು ಗ್ರಾಮಸ್ಥರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಗ್ರಾಮಸ್ಥರು ನೀಡಿದ ಪ್ರಾಥಮಿಕ ಮಾಹಿತಿಯಲ್ಲಿ ಕಂಡುಬರುವುದಿಲ್ಲ. ಅಲ್ಲದೇ ಶೇ.63ರಷ್ಟು ಅಭ್ಯರ್ಥಿಗಳ ಪ್ರಕಾರ ಕನಿಷ್ಠ 101ಕ್ಕೂ ಹೆಚ್ಚು ಮತದಾರರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಮಾಹಿತಿ ನೀಡಿರುವುದು ಕಂಡುಬರುತ್ತದೆ. ಆದ್ದರಿಂದ ಹೊಸೂರು ಗ್ರಾಮಪಂಚಾಯಿತಿಯಲ್ಲಿ ಜರುಗುವ ಗ್ರಾಮಸಭೆಗಳಲ್ಲಿ ಗ್ರಾಮಸ್ಥರ ಉತ್ತಮ ಪ್ರಾತಿನಿಧ್ಯ ಇದೆಯೆಂದು ತಿಳಿಯಲಾಗಿದೆ.

ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ಹೇಳಿಕೆಯ ಆಧಾರದ ಮೇರೆಗೆ ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಪ್ರಮಾಣವನ್ನು ವಿಶ್ಲೇಷಿಸಲಾಗಿದೆ. ಮೊದಲಿಗೆ ಮಹಿಳಾ ಅಭ್ಯರ್ಥಿಗಳ ಹೇಳಿಕೆ ವಿಶ್ಲೇಷಿಸಿದಾಗ, ಇವರಲ್ಲಿ ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 10ರಿಂದ 25 ಮಹಿಳೆಯರು, ಶೇ.66ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 26ರಿಂದ 50 ಮಹಿಳೆಯರು, ಶೇ.26ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿರುತ್ತಾರೆಂದು ಮಾಹಿತಿ ನೀಡಿದ್ದಾರೆ. ಹಾಗೆಯೇ ಪುರುಷ ಅಭ್ಯರ್ಥಿಗಳ ಮಾಹಿತಿಯನ್ನು ನೋಡಿದಾಗ, ಶೇ.24ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, 10ರಿಂದ 25 ಮಹಿಳೆಯರು, ಶೇ.54ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ 26ರಿಂದ 50 ಮಹಿಳೆಯರು, ಶೇ.21ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿರುತ್ತಾರೆಂದು ಮಾಹಿತಿ ನೀಡಿದ್ದಾರೆ(ನೋಡಿ ಕೋಷ್ಟಕ–6.5). ಒಟ್ಟಾರೆಯಾಗಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ಹೊಸೂರು ಗ್ರಾಮಸ್ಥರು ನೀಡಿದ ಮಾಹಿತಿ ಎಂದು ವಿಶ್ಲೇಷಿಸಿದಾಗ, ಶೇ.16ರಷ್ಟು ಗ್ರಾಮಸ್ಥರ ಪ್ರಕಾರ, 10ರಿಂದ 25 ಮಹಿಳೆಯರು, ಶೇ.60ರಷ್ಟು ಗ್ರಾಮಸ್ಥರ ಪ್ರಕಾರ 26ರಿಂದ 50 ಮಹಿಳೆಯರು, ಶೇ.24ರಷ್ಟು ಗ್ರಾಮಸ್ಥರ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಮಾಹಿತಿ ನೀಡಿದಂತಾಗುತ್ತದೆ. ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ, ಗ್ರಾಮಸಭೆಯ ಹಾಜರಾತಿಯಲ್ಲಿ ಶೇ.33ರಷ್ಟು (ಮುಂದಿನ ದಿನಗಳಲ್ಲಿ ಶೇ.50ರಷ್ಟು) ಮಹಿಳಾ ಹಾಜರಾತಿ ಇರಬೇಕು. ಆದರೆ 2010ರಲ್ಲಿ ಜರುಗಿದ ಹೊಸೂರು ಗ್ರಾಮಪಂಚಾಯಿತಿ ಚುನಾವಣೆಯಲ್ಲಿ 2,491 ಮತದಾರರು ಇದ್ದು, ಇದರಲ್ಲಿ ಶೇ.10ರಷ್ಟು ಆದರೆ ಹೆಚ್ಚು ಕಡಿಮೆ 250 ಮತದಾರರು ಗ್ರಾಮಸಭೆಯಲ್ಲಿ ಭಾಗವಹಿಸಬೇಕಾಗುತ್ತದೆ. ಇದರಲ್ಲಿ ಶೇ.33ರಷ್ಟು ಅಂದರೆ ಕನಿಷ್ಠ 97 ಮಹಿಳೆಯರ ಹಾಜರಾತಿ ಇರಬೇಕಾಗುತ್ತದೆ. ಈ ಪಂಚಾಯಿತಿಯ ಶೇ.24ರಷ್ಟು ಗ್ರಾಮಸ್ಥರ ಪ್ರಕಾರ 51ರಿಂದ 100 ಮಹಿಳಾ ಮತದಾರರು ಗ್ರಾಮಸಭೆಗಳಲ್ಲಿ ಭಾಗವಹಿಸುವುದಾಗಿ ಹೇಳಿಕೆ ನೀಡಿರುತ್ತಾರೆ. ಅಂದರೆ ಈ ಪಂಚಾಯಿತಿಯಲ್ಲಿ ಮಹಿಳಾ ಮತದಾರರ ಕನಿಷ್ಠ ಕೋರಂ(97 ಮಹಿಳೆಯರ ಹಾಜರಾತಿ) ಇದ್ದು, ಗ್ರಾಮಸಭೆಗಳು ಜರುಗುತ್ತಾವೆಂಬದು ಶೇ.24ರಷ್ಟು ಗ್ರಾಮಸ್ಥರು ನೀಡಿದ ಮಾಹಿತಿಯಿಂದ ಸಾಬೀತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮಹಿಳೆಯರು ಸಬಲೀಕರಣಗೊಂಡಿಲ್ಲ ಎನ್ನುವ ತೀರ್ಮಾನಕ್ಕೆ ಬರಲಾಗಿದೆ.

ನಾಗೇನಹಳ್ಳಿ ಗ್ರಾಮಪಂಚಾಯಿತಿ: ಈ ಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 79(41 ಪುರುಷ ಮಹಿಳಾ 38 ಮಹಿಳಾ) ಅಭ್ಯರ್ಥಿಗಳ ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರ ಅಧ್ಯಯನದಲ್ಲಿ ಪಡೆದು ವಿವರಿಸಲಾಗಿದೆ. ಇವರಲ್ಲಿ ಸಂದರ್ಶಿಸಿದ 38(ಶೇ.48) ಮಹಿಳಾ ಅಭ್ಯರ್ಥಿಗಳಲ್ಲಿ ಶೇ.34ರಷ್ಟು ಚುನಾಯಿತ ಪ್ರತಿನಿಧಿಗಳು ಮತ್ತು ಶೇ.66ರಷ್ಟು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳಾಗಿದ್ದಾರೆ(ನೋಡಿ ಕೋಷ್ಟಕ–6.1). ಮೊದಲಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ 38 ಮಹಿಳಾ ಅಭ್ಯರ್ಥಿಗಳ ವಯೋಮಾನದ ಪ್ರಾತಿನಿಧ್ಯವನ್ನು ನೋಡಿದಾಗ ಇವರಲ್ಲಿ

ಶೇ.37ರಷ್ಟು ಮಹಿಳೆಯರು 18ರಿಂದ 35ರ ವಯಸ್ಸು, ಶೇ.47ರಷ್ಟು ಮಹಿಳೆಯರು 36ರಿಂದ 50ರ ವಯಸ್ಸು ಮತ್ತು ಶೇ.16ರಷ್ಟು ಮಹಿಳೆಯರು 51 ಮೀರಿದ ವಯೋಮಾನದವರಾಗಿದ್ದರೆ, ಇವರ ಶೈಕ್ಷಣಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.32ರಷ್ಟು ಮಹಿಳೆಯರು ಅನಕ್ಷರಸ್ಥರು, ಶೇ.60ರಷ್ಟು ಮಹಿಳೆಯರು ಪ್ರಾಥಮಿಕ ಶಿಕ್ಷಣ ಮತ್ತು ಶೇ.8ರಷ್ಟು ಮಹಿಳೆಯರು ಪ್ರೌಢ ಶಿಕ್ಷಣ ಪಡೆದವರಾಗಿದ್ದರೆ. ಇವರ ಆರ್ಥಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.8ರಷ್ಟು ಮಹಿಳೆಯರು ವ್ಯವಸಾಯ, ಶೇ.16ರಷ್ಟು ಮಹಿಳೆಯರು ಕೂಲಿ, ಶೇ.58ರಷ್ಟು ಮಹಿಳೆಯರು ಗೃಹಿಣಿಯರು, ಶೇ.10ರಷ್ಟು ಮಹಿಳೆಯರು ಉದ್ಯೋಗಸ್ಥರು(ಅಂಗನವಾಡಿ/ಆಶಾ ಕಾರ್ಯಕರ್ತೆಯರು)ಮತ್ತು ಶೇ.8ರಷ್ಟು ಮಹಿಳೆಯರು ವ್ಯಾಪಾರಸ್ಥರಾಗಿದ್ದಾರೆ. ಹಾಗೆಯೇ ಮಾಹಿತಿ ನೀಡಿದ 41(ಶೇ.52)ಪುರುಷ ಅಭ್ಯರ್ಥಿಗಳಲ್ಲಿ ಶೇ.39ರಷ್ಟು ಚುನಾಯಿತ ಪ್ರತಿನಿಧಿಗಳು ಮತ್ತು ಶೇ.61ರಷ್ಟು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳಾಗಿದ್ದಾರೆ. ಇವರ ವಯೋಮಾನದ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.37ರಷ್ಟು ಪುರುಷರು 18ರಿಂದ 35ರ ವಯೋಮಾನದವರು, ಶೇ.44ರಷ್ಟು ಪುರುಷರು 36ರಿಂದ 50ರ ವಯೋಮಾನದವರು ಹಾಗೂ ಶೇ.19ರಷ್ಟು ಪುರುಷರು 51 ವರ್ಷ ಮೀರಿದ ವಯೋಮಾನದವರಾಗಿದ್ದಾರೆ. ಇವರ ಶೈಕ್ಷಣಿಕ ಪ್ರಾತಿನಿಧ್ಯವನ್ನು ನೋಡಿದಾಗ ಶೇ.12ರಷ್ಟು ಪುರುಷರು ಅನಕ್ಷರಸ್ಥರು, ಶೇ.39ರಷ್ಟು ಪುರುಷರು ಪ್ರಾಥಮಿಕ ಶಿಕ್ಷಣ, ಶೇ.34ರಷ್ಟು ಪುರುಷರು ಪ್ರೌಢ ಶಿಕ್ಷಣ ಮತ್ತು ಶೇ.15ರಷ್ಟು ಪುರುಷರು ಪದವಿ ಶಿಕ್ಷಣ ಪಡೆದವರಾಗಿದ್ದಾರೆ. ಇವರ ಆರ್ಥಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.63ರಷ್ಟು ಪುರುಷರು ವ್ಯವಸಾಯ, ಶೇ.29ರಷ್ಟು ಪುರುಷರು ಇತರೆ ವೃತ್ತಿ/ಉದ್ಯೋಗ ಮತ್ತು ಶೇ.7ರಷ್ಟು ಪುರುಷರು ವ್ಯಾಪಾರಸ್ಥರಾಗಿದ್ದಾರೆ(ನೋಡಿ ಕೋಷ್ಟಕ–6.2).

ನಾಗೇನಹಳ್ಳಿ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗೆ ಆಯ್ಕೆಗೊಂಡ ಜನಪ್ರತಿನಿಧಿಗಳ ಮತ್ತು ಚುನಾವಣೆಗೆ ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ನೋಡಿದಾಗ, ಸಂದರ್ಶಿಸಿದ ಮಾಹಿತಿದಾರಲ್ಲಿ ಮೊದಲಿಗೆ ಮಹಿಳಾ ಅಭ್ಯರ್ಥಿಗಳಲ್ಲಿ ಶೇ.16ರಷ್ಟು ಮಹಿಳಾ ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲ ಎಂದು, ಶೇ.50ರಷ್ಟು ಮಹಿಳಾ ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ ಮತ್ತು ಶೇ.26ರಷ್ಟು ಮಹಿಳಾ ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದಾಗಿ ಮಾಹಿತಿ ನೀಡಿದ್ದಾರೆ. ಆದರೆ 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿದ ಮಹಿಳಾ ಅಭ್ಯರ್ಥಿಗಳು ಕಂಡುಬರುತ್ತಿಲ್ಲ. ಹಾಗೆಯೇ ಪುರುಷ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.22ರಷ್ಟು ಪುರುಷ ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲ ಎಂದು, ಶೇ.32ರಷ್ಟು ಪುರುಷ ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.15ರಷ್ಟು ಪುರುಷ ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ, ಶೇ.24ರಷ್ಟು ಪುರುಷ ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಮತ್ತು ಶೇ.7ರಷ್ಟು ಪುರುಷ ಅಭ್ಯರ್ಥಿಗಳು 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–6.3). ಒಟ್ಟಾರೆಯಾಗಿ ಪುರುಷ ಮತ್ತು

ಮಹಿಳಾ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ಪರಸ್ಪರ ತೌಲನಿಕವಾಗಿ ಅವಲೋಕಿಸಿದಾಗ, ಶೇ.19ರಷ್ಟು ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲದಿರುವುದು ಕಂಡುಬರುತ್ತದೆ. ಆದರೆ ಶೇ.41ರಷ್ಟು ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.11ರಷ್ಟು ಮತದಾರರು 6ರಿಂದ 10 ಗ್ರಾಮಸಭೆಗಳಲ್ಲಿ, ಶೇ.25ರಷ್ಟು ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಮತ್ತು ಶೇ.4ರಷ್ಟು ಅಭ್ಯರ್ಥಿಗಳು 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ ವರ್ಷಕ್ಕೆ ಎರಡು ಗ್ರಾಮಸಭೆಗಳು ನಡೆಯಬೇಕು. ಆದ್ದರಿಂದ ನಾಗೇನಹಳ್ಳಿ ಗ್ರಾಮಪಂಚಾಯಿತಿಯಲ್ಲಿ 2005ರಿಂದ 2012ರವರೆಗೆ ಸರಿ ಸುಮಾರು 16 ಗ್ರಾಮಸಭೆಗಳು ನಡೆಸಲಾಗಿದೆ. ಕ್ಷೇತ್ರ ಅಧ್ಯಯನದಲ್ಲಿ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ವಿಶ್ಲೇಷಿಸಿದಾಗ ಶೇ.4ರಷ್ಟು ಅಭ್ಯರ್ಥಿಗಳು ಮಾತ್ರ 16 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ಶೇ.4ರಷ್ಟು ಗ್ರಾಮಸಭೆ ಪ್ರಾತಿನಿಧ್ಯ ತುಂಬಾ ಸಾಧಾರಣ ಪ್ರಮಾಣದ್ದಾಗಿರುತ್ತದೆ. ಇದರಲ್ಲಿ ಮಹಿಳಾ ಪ್ರಾತಿನಿಧ್ಯ ಇಲ್ಲದಿರುವುದು ಕಂಡುಬರುತ್ತದೆ. ಆದ್ದರಿಂದ ನಾಗೇನಹಳ್ಳಿ ಗ್ರಾಮಪಂಚಾಯಿತಿಯ ಗ್ರಾಮಸಭೆಗಳಲ್ಲಿ ಮಹಿಳಾ ಅಭ್ಯರ್ಥಿಗಳ ಉತ್ತಮ ಪ್ರಾತಿನಿಧ್ಯ ಇಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಚುನಾವಣೆಗಳಲ್ಲಿ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯ ಆಧಾರದ ಮೇರೆಗೆ ಗ್ರಾಮಸಭೆಯಲ್ಲಿ ಭಾಗವಹಿಸುವ ಗ್ರಾಮಸ್ಥರ ಪ್ರಮಾಣವನ್ನು ವಿಶ್ಲೇಷಿಸಲಾಗಿದೆ. ಸಂದರ್ಶಿಸಿದ ಮಾಹಿತಿದಾರರಲ್ಲಿ ಮೊದಲಿಗೆ ಮಹಿಳಾ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ವಿಶ್ಲೇಷಿಸಿದಾಗ, ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳು ಗ್ರಾಮಸಭೆಯಲ್ಲಿ ಎಷ್ಟು ಜನ ಗ್ರಾಮಸ್ಥರು ಭಾಗವಹಿಸುತ್ತಾರೆಂಬುದು ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಆದರೆ ಶೇ 26ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 50ರಿಂದ 100 ಗ್ರಾಮಸ್ಥರು, ಶೇ.42ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 101ರಿಂದ 150 ಗ್ರಾಮಸ್ಥರು, ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ ಕ್ರಮವಾಗಿ 151ರಿಂದ 200 ಗ್ರಾಮಸ್ಥರು, 201ರಿಂದ 250 ಗ್ರಾಮಸ್ಥರು ಮತ್ತು 251ರಿಂದ 300 ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸಿರುತ್ತಾರೆಂದು ಮಾಹಿತಿ ನೀಡಿದ್ದಾರೆ. ಹಾಗೆಯೇ ಪುರುಷ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ನೋಡಿದಾಗ, ಶೇ.7ರಷ್ಟು ಪುರುಷ ಅಭ್ಯರ್ಥಿಗಳು ಪ್ರಕಾರ, ಗ್ರಾಮಸಭೆಯಲ್ಲಿ ಎಷ್ಟು ಮತದಾರರು ಭಾಗವಹಿಸುತ್ತಾರೆಂಬ ಮಾಹಿತಿ ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಆದರೆ ಶೇ.32ರಷ್ಟು ಪುರುಷ ಅಭ್ಯರ್ಥಿಗಳು ಪ್ರಕಾರ, 50ರಿಂದ 100 ಗ್ರಾಮಸ್ಥರು, ಶೇ.54ರಷ್ಟು ಪುರುಷರ ಅಭ್ಯರ್ಥಿಗಳು ಪ್ರಕಾರ 101ರಿಂದ 150 ಗ್ರಾಮಸ್ಥರು ಮತ್ತು ಶೇ.7ರಷ್ಟು ಪುರುಷ ಅಭ್ಯರ್ಥಿಗಳು ಪ್ರಕಾರ ಸುಮಾರು 151ರಿಂದ 200 ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸಿರುತ್ತಾರೆಂದು ಮಾಹಿತಿ ನೀಡಿದ್ದಾರೆ. ಒಟ್ಟಾರೆಯಾಗಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ನಾಗೇನಹಳ್ಳಿ ಗ್ರಾಮಸ್ಥರು ನೀಡಿದ ಮಾಹಿತಿ ಎಂದು ವಿಶ್ಲೇಷಿಸಿದಾಗ, ಶೇ.8ರಷ್ಟು ಗ್ರಾಮಸ್ಥರ ಪ್ರಕಾರ ಎಷ್ಟು ಮತದಾರರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂಬ ಮಾಹಿತಿ ಗೊತ್ತಿಲ್ಲ ಎಂಬುದಾಗಿ ಕಂಡುಬರುತ್ತದೆ. ಆದರೆ ಶೇ.29ರಷ್ಟು ಗ್ರಾಮಸ್ಥರ ಪ್ರಕಾರ 50ರಿಂದ 100 ಗ್ರಾಮಸ್ಥರು, ಶೇ.48ರಷ್ಟು ಗ್ರಾಮಸ್ಥರ

ಪ್ರಕಾರ 101ರಿಂದ 150 ಗ್ರಾಮಸ್ಥರು, ಶೇ.8ರಷ್ಟು ಗ್ರಾಮಸ್ಥರ ಪ್ರಕಾರ 151ರಿಂದ 200 ಗ್ರಾಮಸ್ಥರು, ಶೇ.4ರಷ್ಟು ಗ್ರಾಮಸ್ಥರ ಪ್ರಕಾರ ಕ್ರಮವಾಗಿ 201ರಿಂದ 250 ಗ್ರಾಮಸ್ಥರು ಮತ್ತು 251ರಿಂದ 300 ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸಿದ್ದಾರೆಂದು ಮಾಹಿತಿ ನೀಡಿದ್ದಾರೆ(ನೋಡಿ ಕೋಷ್ಟಕ-6.4). ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ, ಒಟ್ಟು ಮತದಾರರಲ್ಲಿ 1/10ರಷ್ಟು ಅಥವಾ 100 ಜನ ಗ್ರಾಮಸಭೆಯಲ್ಲಿ ಹಾಜರಾತಿ ಇರಬೇಕು. ಆದರೆ 2010ರಲ್ಲಿ ಜರುಗಿದ ನಾಗೇನಹಳ್ಳಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ 3,686 ಮತದಾರರು ಇದ್ದು, ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ ಗ್ರಾಮಸಭೆಯಲ್ಲಿ ಸರಿಯಾಗಿ 369 ಗ್ರಾಮಸ್ಥರು ಭಾಗವಹಿಸಬೇಕಾಗುತ್ತದೆ. ಈ ಗ್ರಾಮಪಂಚಾಯಿತಿಯಲ್ಲಿ 369ಕ್ಕಿಂತ ಹೆಚ್ಚು ಗ್ರಾಮಸ್ಥರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಅಭ್ಯರ್ಥಿಗಳು ನೀಡಿದ ಪ್ರಾಥಮಿಕ ಮಾಹಿತಿಯಲ್ಲಿ ಕಂಡುಬರುವುದಿಲ್ಲ. ಅಲ್ಲದೇ ಶೇ.63ರಷ್ಟು ಅಭ್ಯರ್ಥಿಗಳ ಪ್ರಕಾರ ಕನಿಷ್ಠ 101ಕ್ಕೂ ಹೆಚ್ಚು ಮತದಾರರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಮಾಹಿತಿ ನೀಡಿರುವುದು ಕಂಡುಬರುತ್ತದೆ. ಆದ್ದರಿಂದ ನಾಗೇನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಜರುಗುವ ಗ್ರಾಮಸಭೆಗಳಲ್ಲಿ ಗ್ರಾಮಸ್ಥರ ಉತ್ತಮ ಪ್ರಾತಿನಿಧ್ಯ ಇದೆಯೆಂದು ತಿಳಿಯಲಾಗಿದೆ.

ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ಹೇಳಿಕೆಯ ಆಧಾರದ ಮೇರೆಗೆ ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಪ್ರಮಾಣವನ್ನು ವಿಶ್ಲೇಷಿಸಲಾಗಿದೆ. ಮೊದಲಿಗೆ ಮಹಿಳಾ ಅಭ್ಯರ್ಥಿಗಳ ಹೇಳಿಕೆ ವಿಶ್ಲೇಷಿಸಿದಾಗ, ಇವರಲ್ಲಿ ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ ಗ್ರಾಮಸಭೆಯಲ್ಲಿ ಎಷ್ಟು ಮಹಿಳೆಯರು ಭಾಗವಹಿಸುತ್ತಾರೆಂದು ಗೊತ್ತಿಲ್ಲವೆಂದು ತಿಳಿಸಿದ್ದಾರೆ. ಆದರೆ ಶೇ.34ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 10ರಿಂದ 25 ಮಹಿಳೆಯರು, ಶೇ.34ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 26ರಿಂದ 50 ಮಹಿಳೆಯರು ಮತ್ತು ಶೇ.24ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿರುತ್ತಾರೆಂದು ಮಾಹಿತಿ ನೀಡಿದ್ದಾರೆ. ಹಾಗೆಯೇ ಪುರುಷ ಅಭ್ಯರ್ಥಿಗಳ ಮಾಹಿತಿಯನ್ನು ನೋಡಿದಾಗ, ಇವರಲ್ಲಿ ಶೇ.7ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ ಗ್ರಾಮಸಭೆಯಲ್ಲಿ ಎಷ್ಟು ಮಹಿಳಾ ಮತದಾರರು ಭಾಗವಹಿಸುತ್ತಾರೆಂದು ಗೊತ್ತಿಲ್ಲವೆಂದು ತಿಳಿಸಿದ್ದಾರೆ. ಆದರೆ ಶೇ.17ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, 10ರಿಂದ 25 ಮಹಿಳೆಯರು, ಶೇ.61ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ 26ರಿಂದ 50 ಮಹಿಳೆಯರು ಮತ್ತು ಶೇ.15ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿರುತ್ತಾರೆಂದು ಮಾಹಿತಿ ನೀಡಿದ್ದಾರೆ(ನೋಡಿ ಕೋಷ್ಟಕ-6.5). ಒಟ್ಟಾರೆಯಾಗಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ನಾಗೇನಹಳ್ಳಿ ಗ್ರಾಮಸ್ಥರು ನೀಡಿದ ಮಾಹಿತಿ ಎಂದು ವಿಶ್ಲೇಷಿಸಿದಾಗ, ಶೇ.8ರಷ್ಟು ಗ್ರಾಮಸ್ಥರ ಪ್ರಕಾರ, ಎಷ್ಟು ಮತದಾರರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂಬುದು ಗೊತ್ತಿಲ್ಲವೆಂದು ತಿಳಿಸಿರುವುದು ಕಂಡುಬರುತ್ತದೆ. ಆದರೆ ಶೇ.25ರಷ್ಟು ಗ್ರಾಮಸ್ಥರ ಪ್ರಕಾರ, 10ರಿಂದ 25 ಮಹಿಳೆಯರು, ಶೇ.48ರಷ್ಟು ಗ್ರಾಮಸ್ಥರ ಪ್ರಕಾರ 26ರಿಂದ 50 ಮಹಿಳೆಯರು ಮತ್ತು ಶೇ.19ರಷ್ಟು ಗ್ರಾಮಸ್ಥರ ಪ್ರಕಾರ 51ರಿಂದ

100 ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಮಾಹಿತಿ ನೀಡಿದಂತಾಗುತ್ತದೆ. ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ, ಗ್ರಾಮಸಭೆಯ ಹಾಜರಾತಿಯಲ್ಲಿ ಶೇ.33ರಷ್ಟು (ಮುಂದಿನ ದಿನಗಳಲ್ಲಿ ಶೇ.50ರಷ್ಟು) ಮಹಿಳಾ ಹಾಜರಾತಿ ಇರಬೇಕು. ಆದರೆ 2010ರಲ್ಲಿ ಜರುಗಿದ ನಾಗೇನಹಳ್ಳಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ 3,686 ಮತದಾರರು ಇದ್ದು, ಇದರಲ್ಲಿ ಶೇ.10ರಷ್ಟು ಆದರ ಹೆಚ್ಚು ಕಡಿಮೆ 369 ಮತದಾರರು ಗ್ರಾಮಸಭೆಯಲ್ಲಿ ಭಾಗವಹಿಸಬೇಕಾಗುತ್ತದೆ. ಇದರಲ್ಲಿ ಶೇ.33ರಷ್ಟು ಅಂದರೆ ಕನಿಷ್ಠ 122 ಮಹಿಳೆಯರ ಹಾಜರಾತಿ ಇರಬೇಕಾಗುತ್ತದೆ. ಈ ಗ್ರಾಮಪಂಚಾಯಿತಿಯಲ್ಲಿ 101ಕ್ಕಿಂತ ಹೆಚ್ಚು ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂಬ ಗ್ರಾಮಸ್ಥರು ನೀಡಿದ ಮಾಹಿತಿಯಲ್ಲಿ ಕಂಡುಬರುವುದಿಲ್ಲ. ಅಂದರೆ ಈ ಪಂಚಾಯಿತಿಯಲ್ಲಿ ಮಹಿಳಾ ಮತದಾರರ ಕನಿಷ್ಠ ಕೋರಂ(122 ಮಹಿಳೆಯರ ಹಾಜರಾತಿ) ಇಲ್ಲದೇ ಗ್ರಾಮಸಭೆಗಳು ಜರುಗುತ್ತಾವೆಂಬದು ಸಾಬೀತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮಹಿಳೆಯರು ಸಬಲೀಕರಣಗೊಂಡಿಲ್ಲ ಎನ್ನುವ ತೀರ್ಮಾನಕ್ಕೆ ಬರಲಾಗಿದೆ.

ಮಲೆನಾಡಿನ ಗ್ರಾಮಪಂಚಾಯಿತಿಗಳು

ಬೇಷ್ಕಣಿ ಗ್ರಾಮಪಂಚಾಯಿತಿ: ಈ ಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 72(35 ಪುರುಷ ಮಹಿಳಾ 37 ಮಹಿಳಾ) ಅಭ್ಯರ್ಥಿಗಳ ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರ ಅಧ್ಯಯನದಲ್ಲಿ ಪಡೆದು ವಿವರಿಸಲಾಗಿದೆ. ಇವರಲ್ಲಿ ಸಂದರ್ಶಿಸಿದ 37(ಶೇ.51) ಮಹಿಳಾ ಅಭ್ಯರ್ಥಿಗಳಲ್ಲಿ ಶೇ.32ರಷ್ಟು ಚುನಾಯಿತ ಪ್ರತಿನಿಧಿಗಳು ಮತ್ತು ಶೇ.68ರಷ್ಟು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳಾಗಿದ್ದಾರೆ(ನೋಡಿ ಕೋಷ್ಟಕ–6.1). ಮೊದಲಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ 37 ಮಹಿಳಾ ಅಭ್ಯರ್ಥಿಗಳ ವಯೋಮಾನದ ಪ್ರಾತಿನಿಧ್ಯವನ್ನು ನೋಡಿದಾಗ ಇವರಲ್ಲಿ ಶೇ.41ರಷ್ಟು ಮಹಿಳೆಯರು 18ರಿಂದ 35ರ ವಯಸ್ಸು, ಶೇ.49ರಷ್ಟು ಮಹಿಳೆಯರು 36ರಿಂದ 50ರ ವಯಸ್ಸು ಮತ್ತು ಶೇ.10ರಷ್ಟು ಮಹಿಳೆಯರು 51 ಮೀರಿದ ವಯೋಮಾನದವರಾಗಿದ್ದರೆ, ಇವರ ಶೈಕ್ಷಣಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.68ರಷ್ಟು ಮಹಿಳೆಯರು ಪ್ರಾಥಮಿಕ ಶಿಕ್ಷಣ ಮತ್ತು ಶೇ.32ರಷ್ಟು ಮಹಿಳೆಯರು ಪ್ರೌಢ ಶಿಕ್ಷಣ ಪಡೆದವರಾಗಿದ್ದರೆ. ಇವರ ಆರ್ಥಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.16ರಷ್ಟು ಮಹಿಳೆಯರು ವ್ಯವಸಾಯ, ಶೇ.8ರಷ್ಟು ಮಹಿಳೆಯರು ಕೂಲಿ, ಶೇ.46ರಷ್ಟು ಮಹಿಳೆಯರು ಗೃಹಿಣಿಯರು, ಶೇ.19ರಷ್ಟು ಮಹಿಳೆಯರು ಉದ್ಯೋಗಸ್ಥರು(ಅಂಗನವಾಡಿ/ಆಶಾ ಕಾರ್ಯಕರ್ತೆಯರು) ಮತ್ತು ಶೇ.11ರಷ್ಟು ಮಹಿಳೆಯರು ವ್ಯಾಪಾರಸ್ಥರಾಗಿದ್ದಾರೆ. ಹಾಗೆಯೇ ಮಾಹಿತಿ ನೀಡಿದ 35(ಶೇ.49)ಪುರುಷ ಅಭ್ಯರ್ಥಿಗಳಲ್ಲಿ ಶೇ.29ರಷ್ಟು ಚುನಾಯಿತ ಪ್ರತಿನಿಧಿಗಳು ಮತ್ತು ಶೇ.71ರಷ್ಟು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳಾಗಿದ್ದಾರೆ. ಇವರ ವಯೋಮಾನದ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.31ರಷ್ಟು ಪುರುಷರು 18ರಿಂದ 35ರ ವಯಸ್ಸಿನವರು, ಶೇ.40ರಷ್ಟು ಪುರುಷರು 36ರಿಂದ 50ರ ವಯಸ್ಸಿನವರು ಹಾಗೂ ಶೇ.29ರಷ್ಟು ಪುರುಷರು 51 ವರ್ಷ ಮೀರಿದ ವಯೋಮಾನದವರಾಗಿದ್ದಾರೆ. ಇವರ ಶೈಕ್ಷಣಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.37ರಷ್ಟು ಪುರುಷರು

ಪ್ರಾಥಮಿಕ ಶಿಕ್ಷಣ, ಶೇ.29ರಷ್ಟು ಪುರುಷರು ಪ್ರೌಢ ಶಿಕ್ಷಣ ಮತ್ತು ಶೇ.34ರಷ್ಟು ಪುರುಷರು ಪದವಿ ಶಿಕ್ಷಣ ಪಡೆದವರಾಗಿದ್ದಾರೆ. ಇವರ ಆರ್ಥಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.37ರಷ್ಟು ಪುರುಷರು ವ್ಯವಸಾಯ, ಶೇ.32ರಷ್ಟು ಪುರುಷರು ಕೂಲಿ, ಶೇ.17ರಷ್ಟು ಪುರುಷರು ಇತರ ವೃತ್ತಿ/ಉದ್ಯೋಗ ಮತ್ತು ಶೇ.14ರಷ್ಟು ಪುರುಷರು ವ್ಯಾಪಾರಸ್ಥರಾಗಿದ್ದಾರೆ(ನೋಡಿ ಕೋಷ್ಟಕ–6.2).

ಬೇಡ್ಕಣಿ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗೆ ಆಯ್ಕೆಗೊಂಡ ಜನಪ್ರತಿನಿಧಿಗಳ ಮತ್ತು ಚುನಾವಣೆಗೆ ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ನೋಡಿದಾಗ, ಸಂದರ್ಶಿಸಿದ ಮಾಹಿತಿದಾರಲ್ಲಿ ಮೊದಲಿಗೆ ಮಹಿಳಾ ಅಭ್ಯರ್ಥಿಗಳಲ್ಲಿ ಶೇ.33ರಷ್ಟು ಮಹಿಳಾ ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲ ಎಂದು, ಶೇ.43ರಷ್ಟು ಮಹಿಳಾ ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ ಮತ್ತು ಶೇ.16ರಷ್ಟು ಮಹಿಳಾ ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಮಾಹಿತಿ ನೀಡಿದ್ದಾರೆ. ಆದರೆ 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿದ ಮಹಿಳಾ ಅಭ್ಯರ್ಥಿಗಳು ಕಂಡುಬರುತ್ತಿಲ್ಲ. ಹಾಗೆಯೇ ಪುರುಷ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.22ರಷ್ಟು ಪುರುಷ ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲ ಎಂದು, ಶೇ.60ರಷ್ಟು ಪುರುಷ ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.9ರಷ್ಟು ಪುರುಷ ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ, ಶೇ.9ರಷ್ಟು ಪುರುಷ ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಯಾವ ಪುರುಷ ಅಭ್ಯರ್ಥಿಯು 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುವುದಿಲ್ಲ(ನೋಡಿ ಕೋಷ್ಟಕ–6.3). ಒಟ್ಟಾರೆಯಾಗಿ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ಪರಸ್ಪರ ತೌಲನಿಕವಾಗಿ ಅವಲೋಕಿಸಿದಾಗ, ಶೇ.28ರಷ್ಟು ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲದಿರುವುದು ಕಂಡುಬರುತ್ತದೆ. ಆದರೆ ಶೇ.51ರಷ್ಟು ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.8ರಷ್ಟು ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ, ಶೇ.13ರಷ್ಟು ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಈ ಗ್ರಾಮಪಂಚಾಯಿತಿಯಲ್ಲಿ ಯಾವೊಬ್ಬ ಮತದಾರ 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುವುದಿಲ್ಲ. ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ ವರ್ಷಕ್ಕೆ ಎರಡು ಗ್ರಾಮಸಭೆಗಳು ನಡೆಯಬೇಕು. ಆದ್ದರಿಂದ ಬೇಡ್ಕಣಿ ಗ್ರಾಮಪಂಚಾಯಿತಿಯಲ್ಲಿ 2005ರಿಂದ 2012ರವರೆಗೆ ಸರಿ ಸುಮಾರು 16 ಗ್ರಾಮಸಭೆಗಳು ನಡೆಸಲಾಗಿದೆ. ಕ್ಷೇತ್ರ ಅಧ್ಯಯನದಲ್ಲಿ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ವಿಶ್ಲೇಷಿಸಿದಾಗ ಈ ಗ್ರಾಮಪಂಚಾಯಿತಿಯಲ್ಲಿ ಯಾವೊಬ್ಬ ಸ್ತ್ರೀ–ಪುರುಷ ಅಭ್ಯರ್ಥಿಯು 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುವುದಿಲ್ಲ. ಆದ್ದರಿಂದ ಬೇಡ್ಕಣಿ ಗ್ರಾಮಪಂಚಾಯಿತಿಯ ಗ್ರಾಮಸಭೆಗಳಲ್ಲಿ ಮಹಿಳಾ ಅಭ್ಯರ್ಥಿಗಳ ಉತ್ತಮ ಪ್ರಾತಿನಿಧ್ಯ ಇಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಚುನಾವಣೆಗಳಲ್ಲಿ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯ ಆಧಾರದ ಮೇರೆಗೆ ಗ್ರಾಮಸಭೆಯಲ್ಲಿ ಭಾಗವಹಿಸುವ ಗ್ರಾಮಸ್ಥರ ಪ್ರಮಾಣವನ್ನು ವಿಶ್ಲೇಷಿಸಲಾಗಿದೆ. ಸಂದರ್ಶಿಸಿದ ಮಾಹಿತಿದಾರರಲ್ಲಿ ಮೊದಲಿಗೆ ಮಹಿಳಾ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ವಿಶ್ಲೇಷಿಸಿದಾಗ, ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳು ಗ್ರಾಮಸಭೆಯಲ್ಲಿ ಎಷ್ಟು ಜನ ಗ್ರಾಮಸ್ಥರು ಭಾಗವಹಿಸುತ್ತಾರೆಂಬುದು ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಆದರೆ ಶೇ 68ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 50ರಿಂದ 100 ಗ್ರಾಮಸ್ಥರು, ಶೇ.16ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 101ರಿಂದ 150 ಗ್ರಾಮಸ್ಥರು, ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 151ರಿಂದ 200 ಗ್ರಾಮಸ್ಥರು ಭಾಗವಹಿಸುತ್ತಾರೆಂದು ಮಾಹಿತಿ ನೀಡಿದ್ದಾರೆ. ಆದರೆ ಯಾವೊಬ್ಬ ಮಹಿಳಾ ಅಭ್ಯರ್ಥಿಯು 201ಕ್ಕಿಂತ ಹೆಚ್ಚು ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸುವುದಾಗಿ ಮಾಹಿತಿ ನೀಡಿರುವುದಿಲ್ಲ. ಹಾಗೆಯೇ ಪುರುಷ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ನೋಡಿದಾಗ, ಶೇ.9ರಷ್ಟು ಪುರುಷ ಅಭ್ಯರ್ಥಿಗಳು ಪ್ರಕಾರ, ಗ್ರಾಮಸಭೆಯಲ್ಲಿ ಎಷ್ಟು ಮತದಾರರು ಭಾಗವಹಿಸುತ್ತಾರೆಂಬ ಮಾಹಿತಿ ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಆದರೆ ಶೇ.68ರಷ್ಟು ಪುರುಷ ಅಭ್ಯರ್ಥಿಗಳು ಪ್ರಕಾರ, 50ರಿಂದ 100 ಗ್ರಾಮಸ್ಥರು ಮತ್ತು ಶೇ.23ರಷ್ಟು ಪುರುಷರ ಅಭ್ಯರ್ಥಿಗಳು ಪ್ರಕಾರ 101ರಿಂದ 150 ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸುತ್ತಾರೆಂದು ಮಾಹಿತಿ ನೀಡಿದ್ದಾರೆ. ಆದರೆ ಯಾವೊಬ್ಬ ಪುರುಷ ಅಭ್ಯರ್ಥಿಯು 151ಕ್ಕಿಂತ ಹೆಚ್ಚು ಗ್ರಾಮಸ್ಥರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಮಾಹಿತಿ ನೀಡಿರುವುದಿಲ್ಲ. ಒಟ್ಟಾರೆಯಾಗಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ಬೇಡ್ಕಣಿ ಗ್ರಾಮಸ್ಥರು ನೀಡಿದ ಮಾಹಿತಿ ಎಂದು ವಿಶ್ಲೇಷಿಸಿದಾಗ, ಶೇ.8ರಷ್ಟು ಗ್ರಾಮಸ್ಥರ ಪ್ರಕಾರ ಗ್ರಾಮಸಭೆಯಲ್ಲಿ ಎಷ್ಟು ಮತದಾರರು ಭಾಗವಹಿಸುತ್ತಾರೆಂಬ ಮಾಹಿತಿ ಗೊತ್ತಿಲ್ಲ ಎಂಬದು ತಿಳಿದುಬರುತ್ತದೆ. ಆದರೆ ಶೇ.68ರಷ್ಟು ಗ್ರಾಮಸ್ಥರ ಪ್ರಕಾರ 50ರಿಂದ 100 ಗ್ರಾಮಸ್ಥರು, ಶೇ.19ರಷ್ಟು ಗ್ರಾಮಸ್ಥರ ಪ್ರಕಾರ 101ರಿಂದ 150 ಗ್ರಾಮಸ್ಥರು ಮತ್ತು ಶೇ.4ರಷ್ಟು ಗ್ರಾಮಸ್ಥರ ಪ್ರಕಾರ 151ರಿಂದ 200 ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಈ ಪಂಚಾಯಿತಿಯ ಗ್ರಾಮಸ್ಥರ ಮಾಹಿತಿ ಪ್ರಕಾರ 201ಕ್ಕಿಂತ ಹೆಚ್ಚು ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-6.4). ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ, ಒಟ್ಟು ಮತದಾರರಲ್ಲಿ 1/10ರಷ್ಟು ಅಥವಾ 100 ಜನ ಗ್ರಾಮಸಭೆಯಲ್ಲಿ ಹಾಜರಾತಿ ಇರಬೇಕು. ಆದರೆ 2010ರಲ್ಲಿ ಜರುಗಿದ ಬೇಡ್ಕಣಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ 3,144 ಮತದಾರರು ಇದ್ದು, ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ ಗ್ರಾಮಸಭೆಯಲ್ಲಿ ಸರಿಯಾಗಿ 314 ಗ್ರಾಮಸ್ಥರು ಭಾಗವಹಿಸಬೇಕಾಗುತ್ತದೆ. ಈ ಗ್ರಾಮಪಂಚಾಯಿತಿಯಲ್ಲಿ 314ಕ್ಕಿಂತ ಹೆಚ್ಚು ಗ್ರಾಮಸ್ಥರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಅಭ್ಯರ್ಥಿಗಳು ನೀಡಿದ ಪ್ರಾಥಮಿಕ ಮಾಹಿತಿಯಲ್ಲಿ ಕಂಡುಬರುವುದಿಲ್ಲ. ಅಲ್ಲದೇ ಕನಿಷ್ಠ 101ಕ್ಕೂ ಹೆಚ್ಚು ಮತದಾರರು ಗ್ರಾಮಸಭೆಯಲ್ಲಿ ಭಾಗವಹಿಸುವುದಾಗಿ ಶೇ.24ರಷ್ಟು ಗ್ರಾಮಸ್ಥರು ಮಾಹಿತಿ ನೀಡಿರುವುದು ಕಂಡುಬರುತ್ತದೆ. ಆದ್ದರಿಂದ ಬೇಡ್ಕಣಿ ಗ್ರಾಮಪಂಚಾಯಿತಿಯಲ್ಲಿ ಜರುಗುವ ಗ್ರಾಮಸಭೆಗಳಲ್ಲಿ ಗ್ರಾಮಸ್ಥರ ಉತ್ತಮ ಪ್ರಾತಿನಿಧ್ಯ ಇಲ್ಲವೆಂದು ತಿಳಿಯಲಾಗಿದೆ.

ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ಹೇಳಿಕೆಯ ಆಧಾರದ ಮೇರೆಗೆ ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಪ್ರಮಾಣವನ್ನು ವಿಶ್ಲೇಷಿಸಲಾಗಿದೆ. ಮೊದಲಿಗೆ ಮಹಿಳಾ ಅಭ್ಯರ್ಥಿಗಳ ಹೇಳಿಕೆ ವಿಶ್ಲೇಷಿಸಿದಾಗ, ಇವರಲ್ಲಿ ಶೇ.24ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ ಗ್ರಾಮಸಭೆಯಲ್ಲಿ ಎಷ್ಟು ಮಹಿಳಾ ಮತದಾರರು ಭಾಗವಹಿಸುತ್ತಾರೆಂದು ಗೊತ್ತಿಲ್ಲವೆಂದು ತಿಳಿಸಿದ್ದಾರೆ. ಆದರೆ ಶೇ.51ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 10ರಿಂದ 25 ಮಹಿಳೆಯರು, ಶೇ.16ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 26ರಿಂದ 50 ಮಹಿಳೆಯರು ಮತ್ತು ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿರುತ್ತಾರೆಂದು ಮಾಹಿತಿ ನೀಡಿದ್ದಾರೆ. ಹಾಗೆಯೇ ಪುರುಷ ಅಭ್ಯರ್ಥಿಗಳ ಮಾಹಿತಿಯನ್ನು ನೋಡಿದಾಗ, ಇವರಲ್ಲಿ ಶೇ.9ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ ಗ್ರಾಮಸಭೆಯಲ್ಲಿ ಎಷ್ಟು ಮಹಿಳಾ ಮತದಾರರು ಭಾಗವಹಿಸುತ್ತಾರೆಂದು ಗೊತ್ತಿಲ್ಲವೆಂದು ತಿಳಿಸಿದ್ದಾರೆ. ಆದರೆ ಶೇ.31ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, 10ರಿಂದ 25 ಮಹಿಳೆಯರು, ಶೇ.51ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ 26ರಿಂದ 50 ಮಹಿಳೆಯರು ಮತ್ತು ಶೇ.9ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿರುತ್ತಾರೆಂದು ಮಾಹಿತಿ ನೀಡಿದ್ದಾರೆ(ನೋಡಿ ಕೋಷ್ಟಕ-6.5). ಒಟ್ಟಾರೆಯಾಗಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ಬೇಡ್ಕಣಿ ಗ್ರಾಮಸ್ಥರು ನೀಡಿದ ಮಾಹಿತಿ ಎಂದು ವಿಶ್ಲೇಷಿಸಿದಾಗ, ಶೇ.17ರಷ್ಟು ಗ್ರಾಮಸ್ಥರ ಪ್ರಕಾರ, ಎಷ್ಟು ಮತದಾರರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂಬುದು ಗೊತ್ತಿಲ್ಲವೆಂಬುದಾಗಿ ಕಂಡುಬರುತ್ತದೆ. ಆದರೆ ಶೇ.42ರಷ್ಟು ಗ್ರಾಮಸ್ಥರ ಪ್ರಕಾರ, 10ರಿಂದ 25 ಮಹಿಳೆಯರು, ಶೇ.33ರಷ್ಟು ಗ್ರಾಮಸ್ಥರ ಪ್ರಕಾರ 26ರಿಂದ 50 ಮಹಿಳೆಯರು ಮತ್ತು ಶೇ.8ರಷ್ಟು ಗ್ರಾಮಸ್ಥರ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಮಾಹಿತಿ ನೀಡಿದಂತಾಗುತ್ತದೆ. ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ, ಗ್ರಾಮಸಭೆಯ ಹಾಜರಾತಿಯಲ್ಲಿ ಶೇ.33ರಷ್ಟು (ಮುಂದಿನ ದಿನಗಳಲ್ಲಿ ಶೇ.50ರಷ್ಟು) ಮಹಿಳಾ ಹಾಜರಾತಿ ಇರಬೇಕು. ಆದರೆ 2010ರಲ್ಲಿ ಜರುಗಿದ ಬೇಡ್ಕಣಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ 3,144 ಮತದಾರರು ಇದ್ದು, ಇದರಲ್ಲಿ ಶೇ.10ರಷ್ಟು ಆದರೆ ಹೆಚ್ಚು ಕಡಿಮೆ 314 ಗ್ರಾಮಸ್ಥರು ಗ್ರಾಮಸಭೆಯಲ್ಲಿ ಭಾಗವಹಿಸಬೇಕಾಗುತ್ತದೆ. ಇದರಲ್ಲಿ ಶೇ.33ರಷ್ಟು ಅಂದರೆ ಕನಿಷ್ಠ 103 ಮಹಿಳೆಯರ ಹಾಜರಾತಿ ಇರಬೇಕಾಗುತ್ತದೆ. ಈ ಗ್ರಾಮಪಂಚಾಯಿತಿಯಲ್ಲಿ 101ಕ್ಕಿಂತ ಹೆಚ್ಚು ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂಬ ಗ್ರಾಮಸ್ಥರು ನೀಡಿದ ಮಾಹಿತಿಯಲ್ಲಿ ಕಂಡುಬರುವುದಿಲ್ಲ. ಅಂದರೆ ಈ ಪಂಚಾಯಿತಿಯಲ್ಲಿ ಮಹಿಳಾ ಮತದಾರರ ಕನಿಷ್ಠ ಕೋರಂ(103 ಮಹಿಳೆಯರ ಹಾಜರಾತಿ) ಇಲ್ಲದೇ ಗ್ರಾಮಸಭೆಗಳು ಜರುಗುತ್ತಾವೆಂಬದು ಸಾಬೀತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮಹಿಳೆಯರು ಸಬಲೀಕರಣಗೊಂಡಿಲ್ಲ ಎನ್ನುವ ತೀರ್ಮಾನಕ್ಕೆ ಬರಲಾಗಿದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ: ಈ ಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 76(37 ಪುರುಷ ಮಹಿಳಾ 39 ಮಹಿಳಾ) ಅಭ್ಯರ್ಥಿಗಳ ಪ್ರಾಥಮಿಕ

ಮಾಹಿತಿಯನ್ನು ಕ್ಷೇತ್ರ ಅಧ್ಯಯನದಲ್ಲಿ ಪಡೆದು ವಿವರಿಸಲಾಗಿದೆ. ಇವರಲ್ಲಿ ಸಂದರ್ಶಿಸಿದ 39(ಶೇ.51) ಮಹಿಳಾ ಅಭ್ಯರ್ಥಿಗಳಲ್ಲಿ ಶೇ.36ರಷ್ಟು ಚುನಾಯಿತ ಪ್ರತಿನಿಧಿಗಳು ಮತ್ತು ಶೇ.64ರಷ್ಟು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳಾಗಿದ್ದಾರೆ(ನೋಡಿ ಕೋಷ್ಟಕ-6.1). ಮೊದಲಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ 39 ಮಹಿಳಾ ಅಭ್ಯರ್ಥಿಗಳ ವಯೋಮಾನದ ಪ್ರಾತಿನಿಧ್ಯವನ್ನು ನೋಡಿದಾಗ ಇವರಲ್ಲಿ ಶೇ.44ರಷ್ಟು ಮಹಿಳೆಯರು 18ರಿಂದ 35ರ ವಯಸ್ಸು ಮತ್ತು ಶೇ.56ರಷ್ಟು ಮಹಿಳೆಯರು 36ರಿಂದ 50ರ ವಯಸ್ಸಿನವಾರಾಗಿದ್ದಾರೆ. ಇವರಲ್ಲಿ ಯಾರು 51 ಮೀರಿದ ವಯೋಮಾನದರು ಇರುವುದು ಕಂಡುಬರುವುದಿಲ್ಲ. ಇವರ ಶೈಕ್ಷಣಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.64ರಷ್ಟು ಮಹಿಳೆಯರು ಪ್ರಾಥಮಿಕ ಶಿಕ್ಷಣ, ಶೇ.28ರಷ್ಟು ಮಹಿಳೆಯರು ಪ್ರೌಢ ಶಿಕ್ಷಣ ಮತ್ತು ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳು ಪದವಿ ಶಿಕ್ಷಣ ಪಡೆದವರಾಗಿದ್ದರೆ. ಇವರ ಆರ್ಥಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.10ರಷ್ಟು ಮಹಿಳಾ ಅಭ್ಯರ್ಥಿಗಳು ವ್ಯವಸಾಯ, ಶೇ.10ರಷ್ಟು ಮಹಿಳಾ ಅಭ್ಯರ್ಥಿಗಳು ಕೂಲಿ, ಶೇ.51ರಷ್ಟು ಮಹಿಳೆಯರು ಗೃಹಿಣಿಯರು, ಶೇ.23ರಷ್ಟು ಮಹಿಳೆಯರು ಉದ್ಯೋಗಸ್ಥರು(ಅಂಗನವಾಡಿ/ಆಶಾ ಕಾರ್ಯಕರ್ತೆಯರು)ಮತ್ತು ಶೇ.5ರಷ್ಟು ಮಹಿಳೆಯರು ವ್ಯಾಪಾರಸ್ಥರಾಗಿದ್ದಾರೆ. ಹಾಗೆಯೇ ಮಾಹಿತಿ ನೀಡಿದ 35(ಶೇ.49)ಪುರುಷ ಅಭ್ಯರ್ಥಿಗಳಲ್ಲಿ ಶೇ.32ರಷ್ಟು ಚುನಾಯಿತ ಪ್ರತಿನಿಧಿಗಳು ಮತ್ತು ಶೇ.68ರಷ್ಟು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳಾಗಿದ್ದಾರೆ. ಇವರ ವಯೋಮಾನದ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.31ರಷ್ಟು ಪುರುಷರು 18ರಿಂದ 35ರ ವಯಸ್ಸಿನವರು, ಶೇ.40ರಷ್ಟು ಪುರುಷರು 36ರಿಂದ 50ರ ವಯಸ್ಸಿನವರು ಹಾಗೂ ಶೇ.29ರಷ್ಟು ಪುರುಷರು 51 ವರ್ಷ ಮೀರಿದ ವಯೋಮಾನದವರಾಗಿದ್ದಾರೆ. ಇವರ ಶೈಕ್ಷಣಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.37ರಷ್ಟು ಪುರುಷರು ಪ್ರಾಥಮಿಕ ಶಿಕ್ಷಣ, ಶೇ.29ರಷ್ಟು ಪುರುಷರು ಪ್ರೌಢ ಶಿಕ್ಷಣ ಮತ್ತು ಶೇ.34ರಷ್ಟು ಪುರುಷರು ಪದವಿ ಶಿಕ್ಷಣ ಪಡೆದವರಾಗಿದ್ದಾರೆ. ಇವರ ಆರ್ಥಿಕ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.37ರಷ್ಟು ಪುರುಷರು ವ್ಯವಸಾಯ, ಶೇ.32ರಷ್ಟು ಪುರುಷರು ಕೂಲಿ, ಶೇ.17ರಷ್ಟು ಪುರುಷರು ಇತರೆ ವೃತ್ತಿ/ಉದ್ಯೋಗ ಮತ್ತು ಶೇ.14ರಷ್ಟು ಪುರುಷರು ವ್ಯಾಪಾರಸ್ಥರಾಗಿದ್ದಾರೆ(ನೋಡಿ ಕೋಷ್ಟಕ-6.2).

ಕೋಲಸಿರ್ಸಿ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗೆ ಆಯ್ಕೆಗೊಂಡ ಜನಪ್ರತಿನಿಧಿಗಳ ಮತ್ತು ಚುನಾವಣೆಗೆ ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ನೋಡಿದಾಗ, ಸಂದರ್ಶಿಸಿದ ಮಾಹಿತಿದಾರಲ್ಲಿ ಮೊದಲಿಗೆ ಮಹಿಳಾ ಅಭ್ಯರ್ಥಿಗಳಲ್ಲಿ ಶೇ.33ರಷ್ಟು ಮಹಿಳಾ ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲ ಎಂದು, ಶೇ.33ರಷ್ಟು ಮಹಿಳಾ ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ ಮತ್ತು ಶೇ.26ರಷ್ಟು ಮಹಿಳಾ ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದಾಗಿ ಮಾಹಿತಿ ನೀಡಿದ್ದಾರೆ. ಆದರೆ 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿದ ಮಹಿಳಾ ಅಭ್ಯರ್ಥಿಗಳು ಕಂಡುಬರುತ್ತಿಲ್ಲ. ಹಾಗೆಯೇ ಪುರುಷ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ನೋಡಿದಾಗ, ಶೇ.8ರಷ್ಟು ಪುರುಷ ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ

ಭಾಗವಹಿಸಿಲ್ಲ ಎಂದು, ಶೇ.35ರಷ್ಟು ಪುರುಷ ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.24ರಷ್ಟು ಪುರುಷ ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ, ಶೇ.24ರಷ್ಟು ಪುರುಷ ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಮತ್ತು ಶೇ.8ರಷ್ಟು ಪುರುಷ ಅಭ್ಯರ್ಥಿಗಳು 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದಾಗಿ ಹೇಳಿದ್ದಾರೆ(ನೋಡಿ ಕೋಷ್ಟಕ-6.3). ಒಟ್ಟಾರೆಯಾಗಿ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳ ಗ್ರಾಮಸಭೆಯ ಪ್ರಾತಿನಿಧ್ಯವನ್ನು ಪರಸ್ಪರ ತೌಲನಿಕವಾಗಿ ಅವಲೋಕಿಸಿದಾಗ, ಶೇ.21ರಷ್ಟು ಅಭ್ಯರ್ಥಿಗಳು ಒಂದೂ ಗ್ರಾಮಸಭೆಯಲ್ಲಿ ಭಾಗವಹಿಸಿಲ್ಲದಿರುವುದು ಕಂಡುಬರುತ್ತದೆ. ಆದರೆ ಶೇ.34ರಷ್ಟು ಅಭ್ಯರ್ಥಿಗಳು 1ರಿಂದ 5 ಗ್ರಾಮಸಭೆಗಳಲ್ಲಿ, ಶೇ.16ರಷ್ಟು ಅಭ್ಯರ್ಥಿಗಳು 6ರಿಂದ 10 ಗ್ರಾಮಸಭೆಗಳಲ್ಲಿ, ಶೇ.25ರಷ್ಟು ಅಭ್ಯರ್ಥಿಗಳು 11ರಿಂದ 15 ಗ್ರಾಮಸಭೆಗಳಲ್ಲಿ ಮತ್ತು ಶೇ.4ರಷ್ಟು ಅಭ್ಯರ್ಥಿಗಳು 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ ವರ್ಷಕ್ಕೆ ಎರಡು ಗ್ರಾಮಸಭೆಗಳು ನಡೆಯಬೇಕು. ಆದ್ದರಿಂದ ಕೋಲಸಿರ್ಸಿ ಗ್ರಾಮಪಂಚಾಯಿತಿಯಲ್ಲಿ 2005ರಿಂದ 2012ರವರೆಗೆ ಸರಿ ಸುಮಾರು 16 ಗ್ರಾಮಸಭೆಗಳು ನಡೆಸಲಾಗಿದೆ. ಕ್ಷೇತ್ರ ಅಧ್ಯಯನದಲ್ಲಿ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ವಿಶ್ಲೇಷಿಸಿದಾಗ ಈ ಗ್ರಾಮಪಂಚಾಯಿತಿಯಲ್ಲಿ ಶೇ.4ರಷ್ಟು ಅಭ್ಯರ್ಥಿಗಳು ಮಾತ್ರ 16ರಿಂದ 20 ಗ್ರಾಮಸಭೆಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಇದರಲ್ಲಿ ಮಹಿಳಾ ಅಭ್ಯರ್ಥಿಗಳ ಇಲ್ಲವಾಗಿದ್ದಾರೆ. ಆದ್ದರಿಂದ ಕೋಲಸಿರ್ಸಿ ಗ್ರಾಮಪಂಚಾಯಿತಿಯ ಗ್ರಾಮಸಭೆಗಳಲ್ಲಿ ಮಹಿಳಾ ಅಭ್ಯರ್ಥಿಗಳ ಉತ್ತಮ ಪ್ರಾತಿನಿಧ್ಯ ಇಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಚುನಾವಣೆಗಳಲ್ಲಿ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯ ಆಧಾರದ ಮೇರೆಗೆ ಗ್ರಾಮಸಭೆಯಲ್ಲಿ ಭಾಗವಹಿಸುವ ಗ್ರಾಮಸ್ಥರ ಪ್ರಮಾಣವನ್ನು ವಿಶ್ಲೇಷಿಸಲಾಗಿದೆ. ಸಂದರ್ಶಿಸಿದ ಮಾಹಿತಿದಾರರಲ್ಲಿ ಮೊದಲಿಗೆ ಮಹಿಳಾ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ವಿಶ್ಲೇಷಿಸಿದಾಗ, ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳು ಗ್ರಾಮಸಭೆಯಲ್ಲಿ ಎಷ್ಟು ಜನ ಗ್ರಾಮಸ್ಥರು ಭಾಗವಹಿಸುತ್ತಾರೆಂಬುದು ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಆದರೆ ಶೇ 51ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 50ರಿಂದ 100 ಗ್ರಾಮಸ್ಥರು, ಶೇ.15ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 101ರಿಂದ 150 ಗ್ರಾಮಸ್ಥರು ಮತ್ತು ಶೇ.26ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 151ರಿಂದ 200 ಗ್ರಾಮಸ್ಥರು ಭಾಗವಹಿಸುತ್ತಾರೆಂದು ಮಾಹಿತಿ ನೀಡಿದ್ದಾರೆ. ಆದರೆ ಯಾವೊಬ್ಬ ಮಹಿಳಾ ಅಭ್ಯರ್ಥಿಯು 201ಕ್ಕಿಂತ ಹೆಚ್ಚು ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸುವುದಾಗಿ ಮಾಹಿತಿ ನೀಡಿರುವುದಿಲ್ಲ. ಹಾಗೆಯೇ ಪುರುಷ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ನೋಡಿದಾಗ, ಇವರಲ್ಲಿ ಶೇ.46ರಷ್ಟು ಪುರುಷ ಅಭ್ಯರ್ಥಿಗಳು ಪ್ರಕಾರ, 50ರಿಂದ 100 ಗ್ರಾಮಸ್ಥರು, ಶೇ.24ರಷ್ಟು ಪುರುಷರ ಅಭ್ಯರ್ಥಿಗಳು ಪ್ರಕಾರ 101ರಿಂದ 150 ಗ್ರಾಮಸ್ಥರು ಮತ್ತು ಶೇ.30ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ 151ರಿಂದ 200 ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸುತ್ತಾರೆಂದು ಮಾಹಿತಿ ನೀಡಿದ್ದಾರೆ. ಆದರೆ ಯಾವೊಬ್ಬ ಪುರುಷ ಅಭ್ಯರ್ಥಿಯು 201ಕ್ಕಿಂತ ಹೆಚ್ಚು ಗ್ರಾಮಸ್ಥರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು

ಮಾಹಿತಿ ನೀಡಿರುವುದಿಲ್ಲ. ಒಟ್ಟಾರೆಯಾಗಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ಕೋಲಸಿರ್ಸಿ ಗ್ರಾಮಸ್ಥರು ನೀಡಿದ ಮಾಹಿತಿ ಎಂದು ವಿಶ್ಲೇಷಿಸಿದಾಗ, ಶೇ.4ರಷ್ಟು ಗ್ರಾಮಸ್ಥರ ಪ್ರಕಾರ ಗ್ರಾಮಸಭೆಯಲ್ಲಿ ಎಷ್ಟು ಮತದಾರರು ಭಾಗವಹಿಸುತ್ತಾರೆಂಬ ಮಾಹಿತಿ ಗೊತ್ತಿಲ್ಲ ಎಂಬದು ಕಂಡುಬರುತ್ತದೆ. ಆದರೆ ಶೇ.49ರಷ್ಟು ಗ್ರಾಮಸ್ಥರ ಪ್ರಕಾರ 50ರಿಂದ 100 ಗ್ರಾಮಸ್ಥರು, ಶೇ.20ರಷ್ಟು ಗ್ರಾಮಸ್ಥರ ಪ್ರಕಾರ 101ರಿಂದ 150 ಗ್ರಾಮಸ್ಥರು ಮತ್ತು ಶೇ.28ರಷ್ಟು ಗ್ರಾಮಸ್ಥರ ಪ್ರಕಾರ 151ರಿಂದ 200 ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಈ ಪಂಚಾಯಿತಿಯ ಗ್ರಾಮಸ್ಥರ ಮಾಹಿತಿ ಪ್ರಕಾರ 201ಕ್ಕಿಂತ ಹೆಚ್ಚು ಗ್ರಾಮಸ್ಥರು ಗ್ರಾಮಸಭೆಗಳಲ್ಲಿ ಭಾಗವಹಿಸದಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-6.4). ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ, ಒಟ್ಟು ಮತದಾರರಲ್ಲಿ 1/10ರಷ್ಟು ಅಥವಾ 100 ಜನ ಗ್ರಾಮಸಭೆಯಲ್ಲಿ ಹಾಜರಾತಿ ಇರಬೇಕು. ಆದರೆ 2010ರಲ್ಲಿ ಜರುಗಿದ ಕೋಲಸಿರ್ಸಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ 3,669 ಮತದಾರರು ಇದ್ದು, ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ ಗ್ರಾಮಸಭೆಯಲ್ಲಿ ಸರಿಯಾಗಿ 367 ಗ್ರಾಮಸ್ಥರು ಭಾಗವಹಿಸಬೇಕಾಗುತ್ತದೆ. ಈ ಗ್ರಾಮಪಂಚಾಯಿತಿಯಲ್ಲಿ 367ಕ್ಕಿಂತ ಹೆಚ್ಚು ಗ್ರಾಮಸ್ಥರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಅಭ್ಯರ್ಥಿಗಳು ನೀಡಿದ ಪ್ರಾಥಮಿಕ ಮಾಹಿತಿಯಲ್ಲಿ ಕಂಡುಬರುವುದಿಲ್ಲ. ಅಲ್ಲದೇ ಕನಿಷ್ಠ 101ಕ್ಕೂ ಹೆಚ್ಚು ಮತದಾರರು ಗ್ರಾಮಸಭೆಯಲ್ಲಿ ಭಾಗವಹಿಸುವುದಾಗಿ ಶೇ.47ರಷ್ಟು ಗ್ರಾಮಸ್ಥರು ಮಾಹಿತಿ ನೀಡಿರುವುದು ಕಂಡುಬರುತ್ತದೆ. ಆದ್ದರಿಂದ ಕೋಲಸಿರ್ಸಿ ಗ್ರಾಮಪಂಚಾಯಿತಿಯಲ್ಲಿ ಜರುಗುವ ಗ್ರಾಮಸಭೆಗಳಲ್ಲಿ ಗ್ರಾಮಸ್ಥರ ಉತ್ತಮ ಪ್ರಾತಿನಿಧ್ಯ ಇಲ್ಲವೆಂದು ತಿಳಿಯಲಾಗಿದೆ.

ಈ ಗ್ರಾಮಪಂಚಾಯಿತಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ಹೇಳಿಕೆಯ ಆಧಾರದ ಮೇರೆಗೆ ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಪ್ರಮಾಣವನ್ನು ವಿಶ್ಲೇಷಿಸಲಾಗಿದೆ. ಮೊದಲಿಗೆ ಮಹಿಳಾ ಅಭ್ಯರ್ಥಿಗಳ ಹೇಳಿಕೆ ವಿಶ್ಲೇಷಿಸಿದಾಗ, ಇವರಲ್ಲಿ ಶೇ.8ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ ಗ್ರಾಮಸಭೆಯಲ್ಲಿ ಎಷ್ಟು ಮಹಿಳಾ ಮತದಾರರು ಭಾಗವಹಿಸುತ್ತಾರೆಂದು ಗೊತ್ತಿಲ್ಲವೆಂದು ತಿಳಿಸಿದ್ದಾರೆ. ಆದರೆ ಶೇ.26ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 10ರಿಂದ 25 ಮಹಿಳೆಯರು, ಶೇ.33ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 26ರಿಂದ 50 ಮಹಿಳೆಯರು ಮತ್ತು ಶೇ.33ರಷ್ಟು ಮಹಿಳಾ ಅಭ್ಯರ್ಥಿಗಳ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿರುತ್ತಾರೆಂದು ಮಾಹಿತಿ ನೀಡಿದ್ದಾರೆ. ಹಾಗೆಯೇ ಪುರುಷ ಅಭ್ಯರ್ಥಿಗಳ ಮಾಹಿತಿಯನ್ನು ನೋಡಿದಾಗ, ಇವರಲ್ಲಿ ಶೇ.38ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, 10ರಿಂದ 25 ಮಹಿಳೆಯರು, ಶೇ.16ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ 26ರಿಂದ 50 ಮಹಿಳೆಯರು ಮತ್ತು ಶೇ.46ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿರುತ್ತಾರೆಂದು ಮಾಹಿತಿ ನೀಡಿದ್ದಾರೆ(ನೋಡಿ ಕೋಷ್ಟಕ-6.5). ಒಟ್ಟಾರೆಯಾಗಿ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿಯನ್ನು ಕೋಲಸಿರ್ಸಿ ಗ್ರಾಮಸ್ಥರು ನೀಡಿದ ಮಾಹಿತಿ ಎಂದು ವಿಶ್ಲೇಷಿಸಿದಾಗ, ಶೇ.4ರಷ್ಟು ಗ್ರಾಮಸ್ಥರ ಪ್ರಕಾರ, ಗ್ರಾಮಸಭೆಯಲ್ಲಿ ಎಷ್ಟು ಮತದಾರರು

ಭಾಗವಹಿಸುತ್ತಾರೆಂದು ಗೊತ್ತಿಲ್ಲವೆಂಬುದಾಗಿ ಕಂಡುಬರುತ್ತದೆ. ಆದರೆ ಶೇ.32ರಷ್ಟು ಗ್ರಾಮಸ್ಥರ ಪ್ರಕಾರ, 10ರಿಂದ 25 ಮಹಿಳೆಯರು, ಶೇ.25ರಷ್ಟು ಗ್ರಾಮಸ್ಥರ ಪ್ರಕಾರ 26ರಿಂದ 50 ಮಹಿಳೆಯರು ಮತ್ತು ಶೇ.39ರಷ್ಟು ಗ್ರಾಮಸ್ಥರ ಪ್ರಕಾರ 51ರಿಂದ 100 ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಮಾಹಿತಿ ನೀಡಿದಂತಾಗುತ್ತದೆ. ಗ್ರಾಮಸಭೆಯ ಕಾರ್ಯಸೂಚಿಯ ಪ್ರಕಾರ, ಗ್ರಾಮಸಭೆಯ ಹಾಜರಾತಿಯಲ್ಲಿ ಶೇ.33ರಷ್ಟು (ಮುಂದಿನ ದಿನಗಳಲ್ಲಿ ಶೇ.50ರಷ್ಟು) ಮಹಿಳಾ ಹಾಜರಾತಿ ಇರಬೇಕು. ಆದರೆ 2010ರಲ್ಲಿ ಜರುಗಿದ ಕೋಲಸಿರ್ಸಿ ಗ್ರಾಮಪಂಚಾಯಿತಿ ಚುನಾವಣೆಯಲ್ಲಿ 3,669 ಮತದಾರರು ಇದ್ದು, ಇದರಲ್ಲಿ ಶೇ.10ರಷ್ಟು ಆದರೆ ಹೆಚ್ಚು ಕಡಿಮೆ 367 ಗ್ರಾಮಸ್ಥರು ಗ್ರಾಮಸಭೆಯಲ್ಲಿ ಭಾಗವಹಿಸಬೇಕಾಗುತ್ತದೆ. ಇದರಲ್ಲಿ ಶೇ.33ರಷ್ಟು ಅಂದರೆ ಕನಿಷ್ಠ 121 ಮಹಿಳೆಯರ ಹಾಜರಾತಿ ಇರಬೇಕಾಗುತ್ತದೆ. ಈ ಗ್ರಾಮಪಂಚಾಯಿತಿಯಲ್ಲಿ 101ಕ್ಕಿಂತ ಹೆಚ್ಚು ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂಬ ಗ್ರಾಮಸ್ಥರು ನೀಡಿದ ಮಾಹಿತಿಯಲ್ಲಿ ಕಂಡುಬರುವುದಿಲ್ಲ. ಅಂದರೆ ಈ ಪಂಚಾಯಿತಿಯಲ್ಲಿ ಮಹಿಳಾ ಮತದಾರರ ಕನಿಷ್ಠ ಕೋರಂ(121 ಮಹಿಳೆಯರ ಹಾಜರಾತಿ) ಇಲ್ಲದೇ ಗ್ರಾಮಸಭೆಗಳು ಜರುಗುತ್ತಾವೆಂಬದು ಸಾಬೀತಾಗುತ್ತದೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮಹಿಳೆಯರು ಸಬಲೀಕರಣಗೊಂಡಿಲ್ಲ ಎನ್ನುವ ತೀರ್ಮಾನಕ್ಕೆ ಬರಲಾಗಿದೆ.

6.2 ಗ್ರಾಮಸಭೆ: ಮಹಿಳಾ ಪ್ರಾತಿನಿಧ್ಯದ ನಿರ್ಧಾರ ಮತ್ತು ಮಹಿಳಾ ಸಬಲೀಕರಣ

ಈ ಅಧ್ಯಾಯದಲ್ಲಿ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸುತ್ತಾರೋ ಅಥವಾ ಪುರುಷರ ನಿರ್ಧಾರದಂತೆ ಭಾಗವಹಿಸುತ್ತಾರೋ ಎಂದು ಚರ್ಚಿಸಲಾಗಿದೆ. ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸಲು ಯಾರು ನಿರ್ಧಾರ ತೆಗೆದುಕೊಳ್ಳುತ್ತಾರೆ ಮತ್ತು ಯಾರು ನಿರ್ಧಾರ ತೆಗೆದು ಕೊಳ್ಳಬೇಕು ಎಂದು ವಿಶ್ಲೇಷಣೆ ಮಾಡಲಾಗಿದೆ. ಗ್ರಾಮಸಭೆಯಲ್ಲಿ ಸ್ವನಿರ್ಧಾರದಂತೆ ಭಾಗವಹಿಸುವ ಮಹಿಳಾ ಪ್ರಮಾಣವನ್ನು ಮಹಿಳೆಯರ ನೈಜ ಸಬಲೀಕರಣವೆಂದು ಈ ಅಧ್ಯಾಯದಲ್ಲಿ ಪರಿಭಾವಿಸಿಕೊಳ್ಳಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಯಲುಸೀಮೆಯ ಹೊಸೂರು ಮತ್ತು ನಾಗೇನಹಳ್ಳಿ ಹಾಗೂ ಮಲೆನಾಡಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಿಗೆ ಜರುಗಿದ 2005 ಮತ್ತು 2010ರ ಚುನಾವಣೆಗಳಲ್ಲಿ ಚುನಾಯಿತರಾದ ಜನಪ್ರತಿಗಳು ಹಾಗೂ ಚುನಾವಣೆಗೆ ಸ್ಪರ್ಧಿಸಿದ, ಉಮೇದುವಾರಿಕೆ ವಾಪಾಸು ಪಡೆದ(ಅಗತ್ಯವಿದ್ದಲ್ಲಿ ರಾಜಕೀಯ/ಅಂಗನವಾಡಿ/ಆಶಾ ಕಾರ್ಯಕರ್ತರು) ಅಭ್ಯರ್ಥಿಗಳು ಒಳಗೊಂಡಂತೆ ಪ್ರತಿ ಗ್ರಾಮಪಂಚಾಯಿತಿಯಿಂದ 50 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆಮಾಡಿಕೊಂಡಿದೆ. ಒಟ್ಟಾರೆಯಾಗಿ ಈ ನಾಲ್ಕು ಗ್ರಾಮಪಂಚಾಯಿತಿಗಳಿಂದ 295(95 ಜನಪ್ರತಿನಿಧಿಗಳು ಹಾಗೂ 200 ಚುನಾವಣಾ ಅಭ್ಯರ್ಥಿಗಳು) ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳನ್ನು ಸಂದರ್ಶನ ಮಾಡಿದೆ. ಇವರಲ್ಲಿ ಶೇ.50ರಷ್ಟು ಮಹಿಳಾ ಅಭ್ಯರ್ಥಿಗಳು ಒಳಗೊಂಡಿದ್ದಾರೆ(ನೋಡಿ ಕೋಷ್ಟಕ–6.1). ಇವರಿಂದ ಗ್ರಾಮಸಭೆ ಪ್ರಕ್ರಿಯೆಗಳಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸ್ವನಿರ್ಧಾರದ ಕುರಿತು ಮಾಹಿತಿಯನ್ನು ಪಡೆದು, ಮಹಿಳಾ ಸಬಲೀಕರಣವನ್ನು ವಿಶ್ಲೇಷಣೆ ಮಾಡಿದೆ.

ಬಯಲುಸೀಮೆಯ ಗ್ರಾಮಪಂಚಾಯಿತಿಗಳು

ಹೊಸೂರು ಗ್ರಾಮಪಂಚಾಯಿತಿ: ಈ ಪಂಚಾಯಿತಿಯಲ್ಲಿ ಜರುಗುವ ಗ್ರಾಮಸಭೆಗಳಲ್ಲಿ ಮಹಿಳೆಯರು ಯಾರ ನಿರ್ಧಾರದಂತೆ ಭಾಗವಹಿಸುತ್ತಾರೆ ಮತ್ತು ಮಹಿಳೆಯರು ಭಾಗವಹಿಸುವಿಕೆ ಬಗ್ಗೆ ಯಾರು ನಿರ್ಧಾರ ತೆಗೆದುಕೊಳ್ಳಬೇಕು ಎಂಬ ಈ ಎರಡು ಪ್ರಶ್ನೆಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 68 ಅಭ್ಯರ್ಥಿಗಳಿಂದ ಮಾಹಿತಿ ಪಡೆದು ವಿವರಿಸಿದೆ. ಮೊದಲಿಗೆ ಮಹಿಳೆಯರು ಯಾರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆ ಎಂಬ ಪ್ರಶ್ನೆಗೆ ಮಾಹಿತಿ ನೀಡಿದ 35 ಮಹಿಳಾ ಅಭ್ಯರ್ಥಿಗಳಲ್ಲಿ ಶೇ.74ರಷ್ಟು ಮಹಿಳಾ ಅಭ್ಯರ್ಥಿಗಳ ಮತ್ತು 33 ಪುರುಷ ಅಭ್ಯರ್ಥಿಗಳಲ್ಲಿ ಶೇ.100ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಹೇಳಿರುತ್ತಾರೆ. ಈ ಪ್ರಮಾಣವನ್ನು ಪಂಚಾಯಿತಿ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರಲ್ಲಿ ಶೇ.87ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತ್ತು ಶೇ.13ರಷ್ಟು ಮಹಿಳೆಯರು ಮಾತ್ರ ಸ್ವನಿರ್ಧಾರದಂತೆ ಗ್ರಾಮಸಭೆಗಳಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸುತ್ತಾರೆಂದು ಹೇಳಿದವರಲ್ಲಿ ಶೇ.100ರಷ್ಟು ಮಹಿಳೆಯರಾಗಿದ್ದಾರೆ(ನೋಡಿ ಕೋಷ್ಟಕ–6.6). ಹಾಗೆಯೇ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರು ಯಾರ(ಪುರುಷ ಅಥವಾ ಸ್ವ)ನಿರ್ಧಾರದಂತೆ ಭಾಗವಹಿಸಬೇಕು ಎಂಬ ಪ್ರಶ್ನೆಗೆ ಮಾಹಿತಿ ನೀಡಿದ ಅಭ್ಯರ್ಥಿಗಳಲ್ಲಿ, ಶೇ.66ರಷ್ಟು ಮಹಿಳಾ ಮತ್ತು ಶೇ.85ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸುವ ಬಗ್ಗೆ ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕೆಂದು ಹೇಳಿದ್ದಾರೆ. ಈ ಪ್ರಮಾಣವನ್ನು ಪಂಚಾಯಿತಿ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ಈ ಪಂಚಾಯಿತಿಯ ಶೇ.75ರಷ್ಟು ಗ್ರಾಮಸ್ಥರ ಪ್ರಕಾರ, ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುವ ಕುರಿತು ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕೆಂಬುದಾಗಿ ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಭಾಗವಹಿಸುವ ಬಗ್ಗೆ ಮಹಿಳೆಯರೇ ಸ್ವನಿರ್ಧಾರ ತೆಗೆದು ಕೊಳ್ಳಬೇಕೆಂದು ಮಾಹಿತಿ ನೀಡಿದ ಶೇ.25ರಷ್ಟು ಗ್ರಾಮಸ್ಥರಲ್ಲಿ ಶೇ.71ರಷ್ಟು ಮಹಿಳಾ ಮತ್ತು ಶೇ.29ರಷ್ಟು ಪುರುಷ ಮತದಾರರಾಗಿದ್ದಾರೆ(ನೋಡಿ ಕೋಷ್ಟಕ–6.6). ಈ ಮೇಲಿನ ವಿಶ್ಲೇಷಣೆಯನ್ನು ನೋಡಿದಾಗ, ಗ್ರಾಮಸಭೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸುವ ಬಗ್ಗೆ ಪುರುಷರಿಗೆ ಸಹಮತ ಇಲ್ಲದಿರುವುದು ಸ್ಪಷ್ಟವಾಗಿ ಕಂಡುಬರುವ ಸಂಗತಿಯಾಗಿದೆ. ಅದಕ್ಕಾಗಿ ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಪ್ರಮಾಣ ಮತ್ತು ಸ್ವನಿರ್ಧಾರದ ಪ್ರಮಾಣ ತುಂಬಾ ಕಡಿಮೆ ಇರುವುದು ಸಾಭೀತಾಗಿದೆ. ಪರಿಶಿಷ್ಟರೇ ಹೆಚ್ಚು ಇರುವ ಹೊಸೂರು ಪಂಚಾಯಿತಿಯಲ್ಲಿ ಸಾಂಪ್ರದಾಯಿಕವಾಗಿ ಪುರುಷಪ್ರಧಾನ ಲಕ್ಷಣಗಳು ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ನಿಯಂತ್ರಿಸುವಲ್ಲಿ ಯಶಸ್ಸು ಕಂಡಿವೆ ಎಂದು ಗುರುತಿಸಲಾಗಿದೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮಹಿಳಾ ಸಬಲೀಕರಣ ಕಂಡುಬರುವುದಿಲ್ಲವೆಂಬ ತೀರ್ಮಾನಕ್ಕೆ ಬರಲಾಗಿದೆ.

ನಾಗೇನಹಳ್ಳಿ ಗ್ರಾಮಪಂಚಾಯಿತಿ: ಈ ಪಂಚಾಯಿತಿಯಲ್ಲಿ ಜರುಗುವ ಗ್ರಾಮಸಭೆಗಳಲ್ಲಿ ಮಹಿಳೆಯರು ಯಾರ ನಿರ್ಧಾರದಂತೆ ಭಾಗವಹಿಸುತ್ತಾರೆ ಮತ್ತು ಮಹಿಳೆಯರು ಭಾಗವಹಿಸುವಿಕೆ ಬಗ್ಗೆ ಯಾರು ನಿರ್ಧಾರ ತೆಗೆದುಕೊಳ್ಳಬೇಕು ಎಂಬ ಈ ಎರಡು ಪ್ರಶ್ನೆಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 79 ಅಭ್ಯರ್ಥಿಗಳಿಂದ ಮಾಹಿತಿ ಪಡೆದು ವಿವರಿಸಿದೆ. ಮೊದಲಿಗೆ ಮಹಿಳೆಯರು ಯಾರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆ ಎಂಬ ಪ್ರಶ್ನೆಗೆ ಮಾಹಿತಿ ನೀಡಿದ 38 ಮಹಿಳಾ ಅಭ್ಯರ್ಥಿಗಳಲ್ಲಿ ಶೇ.71ರಷ್ಟು ಮಹಿಳಾ ಅಭ್ಯರ್ಥಿಗಳ ಮತ್ತು 41 ಪುರುಷ ಅಭ್ಯರ್ಥಿಗಳಲ್ಲಿ ಶೇ.76ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಹೇಳಿರುತ್ತಾರೆ. ಈ ಪ್ರಮಾಣವನ್ನು ಪಂಚಾಯಿತಿ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರಲ್ಲಿ ಶೇ.73ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತ್ತು ಶೇ.27ರಷ್ಟು ಮಹಿಳೆಯರು ಮಾತ್ರ ಸ್ವನಿರ್ಧಾರದಂತೆ ಗ್ರಾಮಸಭೆಗಳಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸುತ್ತಾರೆಂದು ಹೇಳಿದವರಲ್ಲಿ ಶೇ.48ರಷ್ಟು ಪುರುಷ ಮತ್ತು ಶೇ.52ರಷ್ಟು ಮಹಿಳೆಯರು ಇರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-6.6). ಹಾಗೆಯೇ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರು ಯಾರ(ಪುರುಷ ಅಥವಾ ಸ್ವ)ನಿರ್ಧಾರದಂತೆ ಭಾಗವಹಿಸಬೇಕು ಎಂಬ ಪ್ರಶ್ನೆಗೆ ಮಾಹಿತಿ ನೀಡಿದ ಅಭ್ಯರ್ಥಿಗಳಲ್ಲಿ, ಶೇ.58ರಷ್ಟು ಮಹಿಳಾ ಮತ್ತು ಶೇ.78ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸುವ ಬಗ್ಗೆ ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕೆಂದು ಹೇಳಿದ್ದಾರೆ. ಈ ಪ್ರಮಾಣವನ್ನು ಪಂಚಾಯಿತಿ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ಈ ಪಂಚಾಯಿತಿಯ ಶೇ.68ರಷ್ಟು ಗ್ರಾಮಸ್ಥರ ಪ್ರಕಾರ, ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುವ ಕುರಿತು ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕೆಂಬುದಾಗಿ ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಭಾಗವಹಿಸುವ ಬಗ್ಗೆ ಮಹಿಳೆಯರೇ ಸ್ವನಿರ್ಧಾರ ತೆಗೆದು ಕೊಳ್ಳಬೇಕೆಂದು ಹೇಳಿದ ಶೇ.32ರಷ್ಟು ಗ್ರಾಮಸ್ಥರಲ್ಲಿ ಶೇ.64ರಷ್ಟು ಮಹಿಳೆಯರು ಮತ್ತು ಶೇ.36ರಷ್ಟು ಪುರುಷರು ಇರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ-6.6). ಈ ಮೇಲಿನ ವಿಶ್ಲೇಷಣೆಯನ್ನು ನೋಡಿದಾಗ, ಗ್ರಾಮಸಭೆಯಲ್ಲಿ ಸ್ವನಿರ್ಧಾರದಂತೆ ಭಾಗವಹಿಸುವ ಮಹಿಳೆಯರ ಪ್ರಮಾಣ ತುಂಬಾ ಕಡಿಮೆ ಇದೆ ಎನ್ನಬಹುದು. ಇದಕ್ಕೆ ಪುರುಷರಿಗೆ ಸಹಮತ ಇಲ್ಲದಿರುವುದು ಕಾರಣವಾಗಿರಬಹುದು. ಅದಕ್ಕಾಗಿ ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಪ್ರಮಾಣ ಮತ್ತು ಸ್ವನಿರ್ಧಾರದ ಪ್ರಮಾಣ ತುಂಬಾ ಕಡಿಮೆ ಇರುವುದು ಸಾಭೀತಾಗಿದೆ. ಪರಿಶಿಷ್ಟರೇ ಹೆಚ್ಚು ಇರುವ ನಾಗೇನಹಳ್ಳಿ ಪಂಚಾಯಿತಿಯಲ್ಲಿ ಸಾಂಪ್ರದಾಯಿಕವಾಗಿ ಪುರುಷಪ್ರಧಾನ ಲಕ್ಷಣಗಳು ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ನಿಯಂತ್ರಿಸುವಲ್ಲಿ ಯಶಸ್ಸು ಕಂಡಿವೆ ಎಂದು ಗುರುತಿಸಲಾಗಿದೆ. ಆದ್ದರಿಂದ ಈ ಪಂಚಾಯಿತಿಯಲ್ಲಿ ಮಹಿಳಾ ಸಬಲೀಕರಣ ಕಂಡುಬರುವುದಿಲ್ಲವೆಂಬ ತೀರ್ಮಾನಕ್ಕೆ ಬರಲಾಗಿದೆ.

ಮಲೆನಾಡಿನ ಗ್ರಾಮಪಂಚಾಯಿತಿಗಳು

ಬೇಡ್ಕಣಿ ಗ್ರಾಮಪಂಚಾಯಿತಿ: ಈ ಪಂಚಾಯಿತಿಯಲ್ಲಿ ಜರುಗುವ ಗ್ರಾಮಸಭೆಗಳಲ್ಲಿ ಮಹಿಳೆಯರು ಯಾರ ನಿರ್ಧಾರದಂತೆ ಭಾಗವಹಿಸುತ್ತಾರೆ ಮತ್ತು ಮಹಿಳೆಯರು ಭಾಗವಹಿಸುವಿಕೆ ಬಗ್ಗೆ ಯಾರು ನಿರ್ಧಾರ ತೆಗೆದುಕೊಳ್ಳಬೇಕು ಎಂಬ ಈ ಎರಡು ಪ್ರಶ್ನೆಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 72 ಅಭ್ಯರ್ಥಿಗಳಿಂದ ಮಾಹಿತಿ ಪಡೆದು ವಿವರಿಸಿದೆ. ಮೊದಲಿಗೆ ಮಹಿಳೆಯರು ಯಾರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆ ಎಂಬ ಪ್ರಶ್ನೆಗೆ ಮಾಹಿತಿ ನೀಡಿದ 37 ಮಹಿಳಾ ಅಭ್ಯರ್ಥಿಗಳಲ್ಲಿ ಶೇ.68ರಷ್ಟು ಮಹಿಳಾ ಅಭ್ಯರ್ಥಿಗಳ ಮತ್ತು 35 ಪುರುಷ ಅಭ್ಯರ್ಥಿಗಳಲ್ಲಿ ಶೇ.69ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಹೇಳಿರುತ್ತಾರೆ. ಈ ಪ್ರಮಾಣವನ್ನು ಪಂಚಾಯಿತಿ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರಲ್ಲಿ ಶೇ.68ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತ್ತು ಶೇ.32ರಷ್ಟು ಮಹಿಳೆಯರು ಮಾತ್ರ ಸ್ವನಿರ್ಧಾರದಂತೆ ಗ್ರಾಮಸಭೆಗಳಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸುತ್ತಾರೆಂದು ಹೇಳಿದವರಲ್ಲಿ ಶೇ.48ರಷ್ಟು ಪುರುಷ ಮತ್ತು ಶೇ.52ರಷ್ಟು ಮಹಿಳೆಯರು ಇರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–6.6). ಹಾಗೆಯೇ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರು ಯಾರ(ಪುರುಷ ಅಥವಾ ಸ್ವ)ನಿರ್ಧಾರದಂತೆ ಭಾಗವಹಿಸಬೇಕು ಎಂಬ ಪ್ರಶ್ನೆಗೆ ಮಾಹಿತಿ ನೀಡಿದ ಅಭ್ಯರ್ಥಿಗಳಲ್ಲಿ, ಶೇ.59ರಷ್ಟು ಮಹಿಳಾ ಮತ್ತು ಶೇ.63ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸುವ ಬಗ್ಗೆ ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕೆಂದು ಹೇಳಿದ್ದಾರೆ. ಈ ಪ್ರಮಾಣವನ್ನು ಪಂಚಾಯಿತಿ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ಈ ಪಂಚಾಯಿತಿಯ ಶೇ.61ರಷ್ಟು ಗ್ರಾಮಸ್ಥರ ಪ್ರಕಾರ, ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುವ ಕುರಿತು ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕು ಎಂಬುದಾಗಿ ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಭಾಗವಹಿಸುವ ಬಗ್ಗೆ ಮಹಿಳೆಯರೇ ಸ್ವನಿರ್ಧಾರ ತೆಗೆದು ಕೊಳ್ಳಬೇಕೆಂದು ಮಾಹಿತಿ ನೀಡಿದ ಶೇ.39ರಷ್ಟು ಗ್ರಾಮಸ್ಥರಲ್ಲಿ ಶೇ.54ರಷ್ಟು ಮಹಿಳಾ ಮತ್ತು ಶೇ.46ರಷ್ಟು ಪುರುಷ ಮತದಾರರಾಗಿದ್ದಾರೆ(ನೋಡಿ ಕೋಷ್ಟಕ–6.6). ಈ ಮೇಲಿನ ವಿಶ್ಲೇಷಣೆಯನ್ನು ನೋಡಿದಾಗ, ಗ್ರಾಮಸಭೆಯಲ್ಲಿ ಸ್ವನಿರ್ಧಾರದಂತೆ ಭಾಗವಹಿಸುವ ಮಹಿಳೆಯರ ಪ್ರಮಾಣ ತುಂಬಾ ಕಡಿಮೆ ಇದೆ ಎನ್ನಬಹುದು. ಇದಕ್ಕೆ ಪುರುಷರಿಗೆ ಸಹಮತ ಇಲ್ಲದಿರುವುದು ಕಾರಣವಾಗಿರಬಹುದು. ಅದಕ್ಕಾಗಿ ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಪ್ರಮಾಣ ಮತ್ತು ಸ್ವನಿರ್ಧಾರದ ಪ್ರಮಾಣ ತುಂಬಾ ಕಡಿಮೆ ಇರುವುದು ಸಾಬೀತಾಗಿದೆ. ಮೇಲ್ವರ್ಗದವರೇ ಹೆಚ್ಚು ಇರುವ ಈ ಪಂಚಾಯಿತಿಯಲ್ಲಿ ವೈದಿಕ ಪರಂಪರೆಯ ನೆರಳಲ್ಲಿ ಬೆಳದುಬಂದ ಪುರುಷಪ್ರಧಾನ ಲಕ್ಷಣಗಳು ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ನಿಯಂತ್ರಿಸುವಲ್ಲಿ ಯಶಸ್ಸು ಕಂಡಿವೆ ಎಂದು ಗುರುತಿಸಲಾಗಿದೆ. ಆದ್ದರಿಂದ ಬೇಡ್ಕಣಿ ಪಂಚಾಯಿತಿಯಲ್ಲಿ ಮಹಿಳಾ ಸಬಲೀಕರಣ ಕಂಡುಬರುತ್ತಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಕೋಲಸಿರ್ಸಿ ಗ್ರಾಮಪಂಚಾಯಿತಿ: ಈ ಪಂಚಾಯಿತಿಯಲ್ಲಿ ಜರುಗುವ ಗ್ರಾಮಸಭೆಗಳಲ್ಲಿ ಮಹಿಳೆಯರು ಯಾರ ನಿರ್ಧಾರದಂತೆ ಭಾಗವಹಿಸುತ್ತಾರೆ ಮತ್ತು ಮಹಿಳೆಯರು ಭಾಗವಹಿಸುವಿಕೆ ಬಗ್ಗೆ ಯಾರು ನಿರ್ಧಾರ ತೆಗೆದುಕೊಳ್ಳಬೇಕು ಎಂಬ ಈ ಎರಡು ಪ್ರಶ್ನೆಗಳಿಗೆ 2005 ಮತ್ತು 2010ರ ಅವಧಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ 76 ಅಭ್ಯರ್ಥಿಗಳಿಂದ ಮಾಹಿತಿ ಪಡೆದು ವಿವರಿಸಿದೆ. ಮೊದಲಿಗೆ ಮಹಿಳೆಯರು ಯಾರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆ ಎಂಬ ಪ್ರಶ್ನೆಗೆ ಮಾಹಿತಿ ನೀಡಿದ 39 ಮಹಿಳಾ ಅಭ್ಯರ್ಥಿಗಳಲ್ಲಿ ಶೇ.59ರಷ್ಟು ಮಹಿಳಾ ಅಭ್ಯರ್ಥಿಗಳ ಮತ್ತು 37 ಪುರುಷ ಅಭ್ಯರ್ಥಿಗಳಲ್ಲಿ ಶೇ.70ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಹೇಳಿರುತ್ತಾರೆ. ಈ ಪ್ರಮಾಣವನ್ನು ಪಂಚಾಯಿತಿ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರಲ್ಲಿ ಶೇ.64ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತ್ತು ಶೇ.36ರಷ್ಟು ಮಹಿಳೆಯರು ಮಾತ್ರ ಸ್ವನಿರ್ಧಾರದಂತೆ ಗ್ರಾಮಸಭೆಗಳಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸುತ್ತಾರೆಂದು ಹೇಳಿದವರಲ್ಲಿ ಶೇ.41ರಷ್ಟು ಪುರುಷ ಮತ್ತು ಶೇ.59ರಷ್ಟು ಮಹಿಳೆಯರಾಗಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–6.6). ಹಾಗೆಯೇ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರು ಯಾರ(ಪುರುಷ ಅಥವಾ ಸ್ವ)ನಿರ್ಧಾರದಂತೆ ಭಾಗವಹಿಸಬೇಕು ಎಂಬ ಪ್ರಶ್ನೆಗೆ ಮಾಹಿತಿ ನೀಡಿದ ಅಭ್ಯರ್ಥಿಗಳಲ್ಲಿ, ಶೇ.46ರಷ್ಟು ಮಹಿಳಾ ಮತ್ತು ಶೇ.54ರಷ್ಟು ಪುರುಷ ಅಭ್ಯರ್ಥಿಗಳ ಪ್ರಕಾರ, ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸುವ ಬಗ್ಗೆ ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕೆಂದು ಹೇಳಿದ್ದಾರೆ. ಈ ಪ್ರಮಾಣವನ್ನು ಪಂಚಾಯಿತಿ ಗ್ರಾಮಸ್ಥರಿಗೆ ಹೋಲಿಸಿದಾಗ, ಒಟ್ಟಾರೆಯಾಗಿ ಈ ಪಂಚಾಯಿತಿಯ ಶೇ.50ರಷ್ಟು ಗ್ರಾಮಸ್ಥರ ಪ್ರಕಾರ, ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುವ ಕುರಿತು ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕು ಎಂಬುದಾಗಿ ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಭಾಗವಹಿಸುವ ಬಗ್ಗೆ ಮಹಿಳೆಯರೇ ಸ್ವನಿರ್ಧಾರ ತೆಗೆದು ಕೊಳ್ಳಬೇಕೆಂದು ಮಾಹಿತಿ ನೀಡಿದ ಶೇ.50ರಷ್ಟು ಗ್ರಾಮಸ್ಥರಲ್ಲಿ ಶೇ.55ರಷ್ಟು ಮಹಿಳಾ ಮತ್ತು ಶೇ.45ರಷ್ಟು ಪುರುಷ ಮತದಾರರಾಗಿದ್ದಾರೆ(ನೋಡಿ ಕೋಷ್ಟಕ–6.6). ಈ ಮೇಲಿನ ವಿಶ್ಲೇಷಣೆಯನ್ನು ನೋಡಿದಾಗ, ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಇತರ ಗ್ರಾಮಪಂಚಾಯಿತಿಗಳಿಗಿಂತ ಕೋಲಸಿರ್ಸಿ ಗ್ರಾಮಪಂಚಾಯಿತಿಯ ಗ್ರಾಮಸಭೆಯಲ್ಲಿ ಸ್ವನಿರ್ಧಾರದಂತೆ ಭಾಗವಹಿಸುವ ಮಹಿಳೆಯರ ಪ್ರಮಾಣ ಸ್ವಲ್ಪ ಉತ್ತಮವಾಗಿ ಕಂಡುಬರುತ್ತದೆ. ಆದರೆ ಈ ಪ್ರಮಾಣವು ಕಡಿಮೆ ಎನ್ನಬಹುದು. ಇದಕ್ಕೆ ಪುರುಷರಿಗೆ ಸಹಮತ ಇಲ್ಲದಿರುವುದು ಕಾರಣವಾಗಿರಬಹುದು. ಅದಕ್ಕಾಗಿ ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಪ್ರಮಾಣ ಮತ್ತು ಸ್ವನಿರ್ಧಾರದ ಪ್ರಮಾಣ ತುಂಬಾ ಕಡಿಮೆ ಇರುವುದು ಸಾಬೀತಾಗಿದೆ. ಮೇಲ್ವರ್ಗದವರೇ ಹೆಚ್ಚು ಇರುವ ಈ ಪಂಚಾಯಿತಿಯಲ್ಲಿ ವೈದಿಕ ಪರಂಪರೆಯ ನೆರಳಲ್ಲಿ ಬೆಳೆದುಬಂದ ಪುರುಷಪ್ರಧಾನ ಲಕ್ಷಣಗಳು ಗ್ರಾಮಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ನಿಯಂತ್ರಿಸುವಲ್ಲಿ ಯಶಸ್ಸು ಕಂಡಿವೆ ಎಂದು ಗುರುತಿಸಲಾಗಿದೆ. ಆದ್ದರಿಂದ ಕೋಲಸಿರ್ಸಿ ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಸಬಲೀಕರಣ ಕಂಡುಬರುತ್ತಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ತೌಲನಿಕ ಅಧ್ಯಯನ

ಹೊಸಪೇಟೆ ತಾಲೂಕಿನಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರ ನಿರ್ಧಾರದ ಕುರಿತು 2005 ಮತ್ತು 2010ರ ಅವಧಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿ ಪ್ರಮಾಣವನ್ನು ಜಿಲ್ಲೆಗೆ ಹೋಲಿಸಿ ವಿಶ್ಲೇಷಿಸಲಾಗಿದೆ. ಹೀಗಾಗಿ ಬಳ್ಳಾರಿ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರು ಯಾರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಎಂಬ ಪ್ರಶ್ನೆಗೆ ಮಾಹಿತಿ ನೀಡಿದ ಗ್ರಾಮಸ್ಥರಲ್ಲಿ ಶೇ.73ರಷ್ಟು ಮಹಿಳಾ ಮತ್ತು ಶೇ.86ರಷ್ಟು ಪುರುಷ ಮತದಾರರ ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂಬದು ಕಂಡುಬರುತ್ತದೆ. ಒಟ್ಟಾರೆಯಾಗಿ ಜಿಲ್ಲೆಯ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರಲ್ಲಿ ಶೇ.80ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತ್ತು ಶೇ.20ರಷ್ಟು ಮಹಿಳೆಯರು ಮಾತ್ರ ಸ್ವನಿರ್ಧಾರದಂತೆ ಗ್ರಾಮಸಭೆಗಳಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸುತ್ತಾರೆಂದು ಹೇಳಿದ ಪ್ರಮಾಣದಲ್ಲಿ ಶೇ.67ರಷ್ಟು ಮಹಿಳೆಯರಾಗಿರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–6.6). ಹಾಗೆಯೇ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರು ಯಾರ(ಪುರುಷ ಅಥವಾ ಸ್ವ) ನಿರ್ಧಾರದಂತೆ ಭಾಗವಹಿಸಬೇಕು ಎಂಬ ಪ್ರಶ್ನೆಗೆ ಮಾಹಿತಿ ನೀಡಿದ ಗ್ರಾಮೀಣ ಮತದಾರರಲ್ಲಿ ಶೇ.62ರಷ್ಟು ಮಹಿಳಾ ಮತ್ತು ಶೇ.81ರಷ್ಟು ಪುರುಷ ಮತದಾರರ ಪ್ರಕಾರ, ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸುವ ಬಗ್ಗೆ ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕೆಂಬದು ಕಂಡುಬರುತ್ತದೆ. ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯಲ್ಲಿ ಶೇ.71ರಷ್ಟು ಗ್ರಾಮಸ್ಥರ ಪ್ರಕಾರ, ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುವ ಕುರಿತು ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕು ಎಂಬುದಾಗಿ ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಭಾಗವಹಿಸುವ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸಬೇಕೆಂದು ಮಾಹಿತಿ ನೀಡಿದ ಶೇ.29ರಷ್ಟು ಗ್ರಾಮೀಣ ಜನರಲ್ಲಿ ಶೇ.67ರಷ್ಟು ಮಹಿಳಾ ಮತ್ತು ಶೇ.33ರಷ್ಟು ಪುರುಷ ಮತದಾರರಾಗಿದ್ದಾರೆ(ನೋಡಿ ಕೋಷ್ಟಕ–6.6). ಈ ಮೇಲಿನ ಅಂಕಿಅಂಶಗಳ ವಿಶ್ಲೇಷಣೆಯನ್ನು ನೋಡಿದಾಗ. ಬಳ್ಳಾರಿ ಜಿಲ್ಲೆಯ ಗ್ರಾಮಸಭೆಗಳಲ್ಲಿ ಸ್ವನಿರ್ಧಾರದಂತೆ ಭಾಗವಹಿಸುವ ಮಹಿಳೆಯರ ಪ್ರಮಾಣ ಮತ್ತು ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸಬೇಕೆಂದು ಹೇಳುವ ಗ್ರಾಮಸ್ಥರ ಪ್ರಮಾಣ ತುಂಬಾ ಕಡಿಮೆ ಇರುವುದು ಸಾಬೀತಾಗುತ್ತದೆ. ಇದಕ್ಕೆ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಪರಿಶಿಷ್ಟರೇ ಹೆಚ್ಚು ಇರುವುದರಿಂದ ಸಾಂಪ್ರದಾಯಿಕವಾಗಿ ಬೆಳೆದು ಬಂದ ಊಳಿಗಮಾನ್ಯ ಮತ್ತು ಪುರುಷ ಯಜಮಾನ್ಯ ಲಕ್ಷಣಗಳು ಗ್ರಾಮೀಣ ಮಹಿಳೆಯರ ಗ್ರಾಮಸಭೆಗಳ ಪ್ರಾತಿನಿಧ್ಯವನ್ನು ನಿಯಂತ್ರಿಸುವಲ್ಲಿ ಸಾಧ್ಯವಾಗಿದೆ ಎಂದು ಗುರುತಿಸಲಾಗಿದೆ. ಹೀಗಾಗಿ ಬಯಲುಸೀಮೆಯ ಬಳ್ಳಾರಿ ಜಿಲ್ಲೆಯ ಗ್ರಾಮಪಂಚಾಯಿತಿಗಳ ಗ್ರಾಮಸಭೆಯಲ್ಲಿ ಭಾಗವಹಿಸುವ ಮಹಿಳೆಯರ ಅಧಿಕಾರ, ಹಕ್ಕು ಮತ್ತು ಸ್ವಾತಂತ್ರ್ಯವನ್ನು ಪುರುಷರು ಹಿಡಿದಿಟ್ಟುಕೊಂಡಿರುವುದು ಕಂಡುಬರುತ್ತದೆ. ಈ ಎಲ್ಲಾ ಹಿನ್ನೆಲೆಗಳಿಂದ ಗ್ರಾಮಸಭೆಗಳಲ್ಲಿ ಗ್ರಾಮೀಣ ಮಹಿಳೆಯರ ಪ್ರಾತಿನಿಧ್ಯ ಪ್ರಮಾಣ ಕಡಿಮೆ ಕಂಡುಬರುವುರಿಂದ ಬಳ್ಳಾರಿ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಸಬಲೀಕರಣ ಕಂಡುಬರುವುದಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಸಿದ್ದಾಪುರ ತಾಲೂಕಿನಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರ ನಿರ್ಧಾರದ ಕುರಿತು 2005 ಮತ್ತು 2010ರ ಅವಧಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳು ನೀಡಿದ ಮಾಹಿತಿ ಪ್ರಮಾಣವನ್ನು ಜಿಲ್ಲೆಗೆ ಹೋಲಿಸಿ ವಿಶ್ಲೇಷಿಸಲಾಗಿದೆ. ಹೀಗಾಗಿ ಉತ್ತರ ಕನ್ನಡ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರು ಯಾರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂದು ಎಂಬ ಪ್ರಶ್ನೆಗೆ ಮಾಹಿತಿ ನೀಡಿದ ಗ್ರಾಮಸ್ಥರಲ್ಲಿ ಶೇ.33ರಷ್ಟು ಮಹಿಳಾ ಮತ್ತು ಶೇ.69ರಷ್ಟು ಪುರುಷ ಮತದಾರರ ಪ್ರಕಾರ, ಮಹಿಳೆಯರು ಪುರುಷರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂಬದು ಕಂಡುಬರುತ್ತದೆ. ಒಟ್ಟಾರೆಯಾಗಿ ಜಿಲ್ಲೆಯ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರಲ್ಲಿ ಶೇ.66ರಷ್ಟು ಮಹಿಳೆಯರು ಪುರುಷ ನಿರ್ಧಾರದಂತೆ ಮತ್ತು ಶೇ.34ರಷ್ಟು ಮಹಿಳೆಯರು ಮಾತ್ರ ಸ್ವನಿರ್ಧಾರದಂತೆ ಗ್ರಾಮಸಭೆಗಳಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸುತ್ತಾರೆಂದು ಹೇಳಿದ ಪ್ರಮಾಣದಲ್ಲಿ ಶೇ.56ರಷ್ಟು ಮಹಿಳಾ ಮತದಾರರಾಗಿವುದು ಕಂಡುಬರುತ್ತದೆ(ನೋಡಿ ಕೋಷ್ಟಕ–6.6). ಹಾಗೆಯೇ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರು ಯಾರ(ಪುರುಷ ಅಥವಾ ಸ್ವ)ನಿರ್ಧಾರದಂತೆ ಭಾಗವಹಿಸಬೇಕು ಎಂಬ ಪ್ರಶ್ನೆಗೆ ಮಾಹಿತಿ ನೀಡಿದ ಗ್ರಾಮಸ್ಥರಲ್ಲಿ ಶೇ.53ರಷ್ಟು ಮಹಿಳಾ ಮತ್ತು ಶೇ.58ರಷ್ಟು ಪುರುಷ ಮತದಾರರ ಪ್ರಕಾರ, ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸುವ ಬಗ್ಗೆ ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕೆಂಬದು ಕಂಡುಬರುತ್ತದೆ. ಒಟ್ಟಾರೆಯಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇ.55ರಷ್ಟು ಗ್ರಾಮಸ್ಥರ ಪ್ರಕಾರ, ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುವ ಕುರಿತು ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕು ಎಂಬುದಾಗಿ ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಭಾಗವಹಿಸುವ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸಬೇಕೆಂದು ಮಾಹಿತಿ ನೀಡಿದ ಶೇ.45ರಷ್ಟು ಗ್ರಾಮೀಣ ಜನರಲ್ಲಿ ಶೇ.55ರಷ್ಟು ಮಹಿಳಾ ಮತ್ತು ಶೇ.54ರಷ್ಟು ಪುರುಷ ಮತದಾರರಾಗಿದ್ದಾರೆ(ನೋಡಿ ಕೋಷ್ಟಕ–6.6). ಈ ಮೇಲಿನ ಅಂಕಿಅಂಶಗಳ ವಿಶ್ಲೇಷಣೆಯನ್ನು ನೋಡಿದಾಗ, ಉತ್ತರ ಕನ್ನಡ ಜಿಲ್ಲೆಯ ಗ್ರಾಮಸಭೆಗಳಲ್ಲಿ ಸ್ವನಿರ್ಧಾರದಂತೆ ಭಾಗವಹಿಸುವ ಮಹಿಳೆಯರ ಪ್ರಮಾಣ ಮತ್ತು ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸಬೇಕೆಂದು ಹೇಳುವ ಗ್ರಾಮಸ್ಥರ ಪ್ರಮಾಣ ತುಂಬಾ ಕಡಿಮೆ ಇರುವುದು ಸಾಬೀತಾಗುತ್ತದೆ. ಇದಕ್ಕೆ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಮೇಲ್ಜಾತಿ ಮತ್ತು ಮೇಲ್ವರ್ಗದವರು ಹೆಚ್ಚು ಇರುವುದರಿಂದ ಜಮೀನ್ದಾರಿ ಮತ್ತು ವೈದಿಕ ಪರಂಪರೆ ಪುರುಷಪ್ರಧಾನ ಲಕ್ಷಣಗಳು ಗ್ರಾಮಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ನಿಯಂತ್ರಿಸುವಲ್ಲಿ ಸಾಧ್ಯವಾಗಿದೆ ಎಂದು ಗ್ರಹಿಸಲಾಗಿದೆ. ಹೀಗಾಗಿ ಜಿಲ್ಲೆಯ ಗ್ರಾಮಪಂಚಾಯಿತಿಗಳ ಗ್ರಾಮಸಭೆಯಲ್ಲಿ ಭಾಗವಹಿಸುವ ಮಹಿಳೆಯರ ಅಧಿಕಾರ, ಹಕ್ಕು ಮತ್ತು ಸ್ವಾತಂತ್ರ್ಯವನ್ನು ಪುರುಷರು ಹಿಡಿದಿಟ್ಟುಕೊಂಡಿರುವುದು ಕಂಡುಬರುತ್ತದೆ. ಈ ಎಲ್ಲಾ ಹಿನ್ನೆಲೆಗಳಿಂದ ಗ್ರಾಮಸಭೆಗಳಲ್ಲಿ ಗ್ರಾಮೀಣ ಮಹಿಳೆಯರ ಪ್ರಾತಿನಿಧ್ಯ ಕಡಿಮೆ ಕಂಡುಬರುವುರಿಂದ ಉತ್ತರ ಕನ್ನಡ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಸಬಲೀಕರಣ ಕಂಡುಬರುವುದಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಗ್ರಾಮಸಭೆಗಳಲ್ಲಿ ಗ್ರಾಮೀಣ ಮಹಿಳೆಯರು ಯಾರ ನಿರ್ಧಾರದಂತೆ ಭಾಗವಹಿಸುತ್ತಾರೆ ಮತ್ತು ಅವರು ಯಾರ ನಿರ್ಧಾರದಂತೆ ಭಾಗವಹಿಸಬೇಕು ಎಂದು ಬಳ್ಳಾರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ದೊರೆತ ಗ್ರಾಮಸ್ಥರ ತೌಲಿನಿಕ ಮಾಹಿತಿ ಪ್ರಮಾಣವನ್ನು ರಾಜ್ಯಕ್ಕೆ ಹೋಲಿಸಿ, ರಾಜ್ಯಮಟ್ಟದಲ್ಲಿ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ. ಹೀಗಾಗಿ ರಾಜ್ಯದ ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರು ಯಾರ ನಿರ್ಧಾರದಂತೆ ಗ್ರಾಮಸಭೆಯಲ್ಲಿ ಭಾಗವಹಿಸುತ್ತಾರೆಂಬ ಪ್ರಶ್ನೆಗೆ ಮಾಹಿತಿ ನೀಡಿದ ರಾಜ್ಯದ ಗ್ರಾಮೀಣ ಮತದಾರರಲ್ಲಿ ಶೇ.68ರಷ್ಟು ಮಹಿಳಾ ಮತ್ತು ಶೇ.78ರಷ್ಟು ಪುರುಷ ಮತದಾರರ ಪ್ರಕಾರ, ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರು ಪುರುಷರ ನಿರ್ಧಾರದಂತೆ ಭಾಗವಹಿಸುತ್ತಾರೆಂಬದು ಕಂಡುಬರುತ್ತದೆ. ಒಟ್ಟಾರೆಯಾಗಿ ರಾಜ್ಯದಲ್ಲಿ ಗ್ರಾಮಸಭೆಗಳಲ್ಲಿ ಭಾಗವಹಿಸುವ ಶೇ.73ರಷ್ಟು ಗ್ರಾಮೀಣ ಮಹಿಳೆಯರು ಪುರುಷ ನಿರ್ಧಾರದಂತೆ ಗ್ರಾಮಸಭೆಗಳಲ್ಲಿ ಭಾಗವಹಿಸುವುದು ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸುದಾಗಿ ಕಂಡುಬರುವ ಶೇ.27ರಷ್ಟು ಪ್ರಮಾಣದಲ್ಲಿ ಶೇ.60ರಷ್ಟು ಮಹಿಳಾ ಮತ್ತು ಶೇ.40ರಷ್ಟು ಪುರುಷ ಮತದಾರರು ಇರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–6.6). ಹಾಗೆಯೇ ಗ್ರಾಮಸಭೆಗಳಲ್ಲಿ ಭಾಗವಹಿಸುವ ಮಹಿಳೆಯರು ಯಾರ(ಪುರುಷ ಅಥವಾ ಸ್ವ)ನಿರ್ಧಾರದಂತೆ ಭಾಗವಹಿಸಬೇಕು ಎಂಬ ಪ್ರಶ್ನೆಗೆ ಮಾಹಿತಿ ನೀಡಿದ ರಾಜ್ಯದ ಗ್ರಾಮೀಣ ಮತದಾರರಲ್ಲಿ ಶೇ.57ರಷ್ಟು ಮಹಿಳಾ ಮತ್ತು ಶೇ.70ರಷ್ಟು ಪುರುಷ ಮತದಾರರ ಪ್ರಕಾರ, ಗ್ರಾಮಸಭೆಗಳಲ್ಲಿ ಮಹಿಳೆಯರು ಭಾಗವಹಿಸುವ ಬಗ್ಗೆ ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕೆಂಬದು ಕಂಡುಬರುತ್ತದೆ. ಒಟ್ಟಾರೆಯಾಗಿ ರಾಜ್ಯದಲ್ಲಿ ಶೇ.63ರಷ್ಟು ಗ್ರಾಮಸ್ಥರ ಪ್ರಕಾರ, ಮಹಿಳೆಯರು ಗ್ರಾಮಸಭೆಯಲ್ಲಿ ಭಾಗವಹಿಸುವ ಬಗ್ಗೆ ಪುರುಷರೇ ನಿರ್ಧಾರ ತೆಗೆದು ಕೊಳ್ಳಬೇಕು ಎಂಬುದಾಗಿ ಕಂಡುಬರುತ್ತದೆ. ಆದರೆ ಗ್ರಾಮಸಭೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಭಾಗವಹಿಸಬೇಕೆನ್ನುವ ಶೇ.37ರಷ್ಟು ಗ್ರಾಮೀಣ ಮತದಾರರಲ್ಲಿ ಶೇ.59ರಷ್ಟು ಮಹಿಳಾ ಮತ್ತು ಶೇ.41ರಷ್ಟು ಪುರುಷ ಮತದಾರರು ಇರುವುದು ಕಂಡುಬರುತ್ತದೆ(ನೋಡಿ ಕೋಷ್ಟಕ–6.6). ಈ ಮೇಲಿನ ಅಂಕಿಅಂಶಗಳ ವಿಶ್ಲೇಷಣೆಯ ಮಾಹಿತಿಯನ್ನು ನೋಡಿದಾಗ ಸ್ವನಿರ್ಧಾರದಂತೆ ಪ್ರಾತಿನಿಧ್ಯವಹಿಸುವ ಮಹಿಳೆಯರ ಪ್ರಮಾಣ ರಾಜ್ಯದಲ್ಲಿ ತುಂಬಾ ಕಡಿಮೆ ಎನ್ನಬಹುದು. ಇದಕ್ಕೆ ರಾಜ್ಯದ ಪಂಚಾಯಿತಿಯಲ್ಲಿ ಸಾಂಪ್ರದಾಯಿಕವಾಗಿ ಜಮೀನ್ದಾರಿ, ವೈದಿಕ ಮತ್ತು ಪುರುಷಪ್ರಧಾನ ಲಕ್ಷಣಗಳು ಹೆಚ್ಚಾಗಿ ಕಂಡುಬರುತ್ತವೆ. ಇವು ಲಿಂಗ ತಾರತಮ್ಯ ಭಾವನೆಗಳಿಗೆ ಮತ್ತಷ್ಟು ಪುಷ್ಟಿ ನೀಡುತ್ತವೆ. ಆದ್ದರಿಂದ ಪುರುಷರು ನಿರ್ಧಾರ ಪ್ರಕ್ರಿಯೆಯಲ್ಲಿ ಸಮಾನ ಸ್ವಾತಂತ್ರ್ಯ, ಅವಕಾಶ ಮತ್ತು ಸ್ಥಾನಮಾನಗಳನ್ನು ಮಹಿಳೆಯರಿಗೆ ಬಿಟ್ಟುಕೊಡದಿರುವುದು ಕಂಡಬರುತ್ತದೆ. ಅಲ್ಲದೇ ಮಹಿಳೆಯರಲ್ಲಿ ಇವುಗಳನ್ನು ಪಡೆಯುವ ಸಾಮರ್ಥ್ಯ ಕಂಡುಬರುತ್ತಿಲ್ಲ. ಹೀಗಾಗಿ ಮಹಿಳೆಯರಲ್ಲಿ ಸ್ವನಿರ್ಧಾರದಂತೆ ಭಾಗವಹಿಸುವ ಪ್ರಜ್ಞೆಗಿಂತ ಪುರುಷರ ಆಜ್ಞೆಯನ್ನು ಪಾಲಿಸಿಕೊಂಡು ಬರುವ ಕಟ್ಟುಪಾಡುಗಳು ಮತ್ತು ಮನೋಭಾವನೆಗಳು ಹೆಚ್ಚಾಗಿರುವುದು ಕಂಡುಬರುತ್ತದೆ. ಆದ್ದರಿಂದ ರಾಜ್ಯದ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಸಬಲೀಕರಣ ಕಂಡುಬರುತ್ತಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಗ್ರಂಥಋಣ

1. ಎಂ. ಯರಿಸ್ವಾಮಿ, *ಗ್ರಾಮಪಂಚಾಯಿತಿ ಮತ್ತು ಸಬಲೀಕರಣ*, ಹಂಪಿ: ಕನ್ನಡ ವಿಶ್ವವಿದ್ಯಾಲಯ, ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಮಂಡಿಸಿದ ಪಿಎಚ್.ಡಿ ಪ್ರಬಂಧ, 2002, ಪು. 193.
2. ವಿಷ್ಣುಭಗವಾನ್ ಮತ್ತು ವಿದ್ಯಾಭೂಷಣ್, *ವರ್ಲ್ಡ್ ಕಾನ್‌ಸ್ಟಿಟ್ಯೂಶನ್, "ದಿ ಕಾನ್‌ಸ್ಟಿಟ್ಯೂಶನ್ ಆಫ್ ಸ್ವಿಡ್ಜರ್‌ಲ್ಯಾಂಡ್,"* ನ್ಯೂ ದೆಹಲಿ: ಸ್ಟರ್ಲಿಂಗ್ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್, 1994, ಪು. 70.
3. ಎಂ.ಸಿ. ಶೈಲಜ ಮತ್ತು ಇತರರು, *ಜನಾಧಿಕಾರ*, ಮೈಸೂರು: ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, 2010, ಪು. 10–13.
4. ಎಂ. ಚಂದ್ರ ಪೂಜಾರಿ, ದೇಶೀಯತೆಯ ನೆರಳಲ್ಲಿ ವಿಕೇಂದ್ರೀಕರಣ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2008, ಪು. 200–201.
5. ಎಂ. ಯರಿಸ್ವಾಮಿ, ಪೂರ್ವೋಕ್ತ, ಪು. 193.
6. ಅಶೋಕ್ ವಿ, *ಪ್ರೊಬ್ಲೆಮ್ಸ್ ಆ್ಯಂಡ್ ಪ್ರಾಸ್ಪೆಕ್ಟ್ಸ್ ಆಫ್ ಎಂಪವರ್‌ಮೆಂಟ್ ಆಫ್ ದಿ ವೀಕರ್ ಸೆಕ್ಷನ್ಸ್: ದಿ ರೋಲ್ ಆಫ್ ದಿ ರೆಪ್ರೆಜೆಂಟೇಟಿವ್ ಆಫ್ ವೀಕರ್ ಸೆಕ್ಷನ್ಸ್ ಇನ್ ಗ್ರಾಮಪಂಚಾಯತ್ಸ್ ಇನ್ ರೂರಲ್ ಕರ್ನಾಟಕ*, ಬೆಂಗಳೂರು: ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಅಪ್ರಕಟಿತ ಪಿಹೆಚ್.ಡಿ ಪ್ರಬಂಧ, 2008,
7. ಎಂ. ಯರಿಸ್ವಾಮಿ, ಪೂರ್ವೋಕ್ತ, ಪು.250–251.

ಕೋಷ್ಟಕ–6.1

ಗ್ರಾಮಪಂಚಾಯಿತಿಗಳ ಚುನಾವಣೆ – 2005 ಮತ್ತು 2010

ಗ್ರಾಮಪಂಚಾಯಿತಿವಾರು ಮತ್ತು ಲಿಂಗವಾರು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ವಿವರ

ಕ್ರ.	ಜಿಲ್ಲೆ, ತಾಲೂಕು	ಮಹಿಳಾ ಮಾಹಿತಿದಾರರು			ಪುರುಷ ಮಾಹಿತಿದಾರರು			
		2005 & 2010ರ ಅವಧಿಯ ಜನಪ್ರತಿನಿಧಿಗಳು	1993ರಿಂದ 2010ರ ಅವಧಿಗೆ ಸ್ಪರ್ಧಿಸಿದ್ದ ಲಭ್ಯ ಅಭ್ಯರ್ಥಿಗಳು	ಒಟ್ಟು ಮಾಹಿತಿ ದಾರರು	2005 & 2010ರ ಅವಧಿಯ ಜನಪ್ರತಿನಿಧಿಗಳು	1993ರಿಂದ 2010ರ ಅವಧಿಗೆ ಸ್ಪರ್ಧಿಸಿದ್ದ ಲಭ್ಯ ಅಭ್ಯರ್ಥಿಗಳು	ಒಟ್ಟು ಮಾಹಿತಿ ದಾರರು	**ಒಟ್ಟು ಮಾಹಿತಿ ದಾರರು**
	ಬಳ್ಳಾರಿ/ಹೊಸಪೇಟೆ							
1.	ಹೊಸೂರು	10	25	35	8	25	33	**68**
2.	ನಾಗೇನಹಳ್ಳಿ	13	25	38	16	25	41	**79**
	ಉ.ಕ/ಸಿದ್ದಾಪುರ							
3.	ಬೇಡ್ಕಣಿ	12	25	37	10	25	35	**72**
4.	ಕೋಲಸಿರ್ಸಿ	14	25	39	12	25	37	**76**
	ಒಟ್ಟು	**49**	**100**	**149**	**46**	**100**	**146**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಕೋಷ್ಟಕ-6.2

ಗ್ರಾಮಪಂಚಾಯಿತಿಗಳ ಚುನಾವಣೆ – 2005 ಮತ್ತು 2010

ಪಂಚಾಯಿತಿವಾರು ಮತ್ತು ಲಿಂಗವಾರು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ವಯಸ್ಸು, ಶಿಕ್ಷಣ ಮತ್ತು ಆರ್ಥಿಕ ವಿವರ

ಕ್ರ. ಸಂ.	ವಿವರಗಳು	ಬಯಲುಸೀಮೆ ಗ್ರಾಮಪಂಚಾಯಿತಿಗಳು ಚುನಾವಣಾ ಅಭ್ಯರ್ಥಿಗಳು						ಮಲೆನಾಡು ಗ್ರಾಮಪಂಚಾಯಿತಿಗಳು ಚುನಾವಣಾ ಅಭ್ಯರ್ಥಿಗಳು						ಒಟ್ಟು ಅಭ್ಯರ್ಥಿಗಳು		
		ಹೊಸೂರು			ನಾಗೇನಹಳ್ಳಿ			ಬೇಡ್ಕಣಿ			ಕೋಲಸಿರ್ಸಿ					
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
	ವಯಸ್ಸು															
1.	18ರಿಂದ 35	8	21	29	15	14	29	11	15	26	12	17	29	46	67	113
2.	36ರಿಂದ 50	17	7	24	18	18	36	14	18	32	16	22	38	65	65	130
3.	51ಮೇಲ್ಪಟ್ಟು	8	7	15	8	6	14	10	4	14	9	0	9	35	17	52
	ಒಟ್ಟು	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**149**	**295**
	ಶಿಕ್ಷಣ															
1.	ಅನಕ್ಷರಸ್ಥರು	12	14	26	5	12	17	0	0	0	0	0	0	17	26	43
2.	ಪ್ರಾಥಮಿಕ	17	13	30	16	23	39	13	25	38	9	25	34	55	86	141
3.	ಪ್ರೌಢ(SSLC & PUC)	4	8	12	14	3	17	10	12	22	25	11	36	53	34	87
4.	ಪದವಿ	0	0	0	6	0	6	12	0	12	3	3	6	21	3	24
	ಒಟ್ಟು	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**149**	**295**
	ಆರ್ಥಿಕ															
1.	ವ್ಯವಸಾಯ	30	3	33	26	3	29	13	6	19	14	4	18	83	16	99
2.	ಕೂಲಿ	3	5	8	0	6	6	11	3	14	11	4	15	25	18	43
3.	ಗೃಹಿಣಿ	–	19	19	–	22	22	–	17	17	–	20	20	–	78	78
4.	ಉದ್ಯೋಗ/ವೃತ್ತಿ	0	8	8	12	4	16	6	7	13	9	9	18	27	28	55
5.	ವ್ಯಾಪಾರ	0	0	0	3	3	6	5	4	9	3	2	5	11	9	20
	ಒಟ್ಟು	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**149**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಕೋಷ್ಟಕ-6.3

ಗ್ರಾಮಪಂಚಾಯಿತಿಗಳ ಚುನಾವಣೆ – 2005 ಮತ್ತು 2010

ಗ್ರಾಮಸಭೆಯಲ್ಲಿ ಭಾಗವಹಿಸಿದ ಬಗ್ಗೆ ಮಾಹಿತಿ ನೀಡಿದ ಪಂಚಾಯಿತಿವಾರು ಮತ್ತು ಲಿಂಗವಾರು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ವಿವರ

ಕ್ರ. ಸಂ.	ಭಾಗವಹಿಸಿದ ಗ್ರಾಮಸಭೆಗಳು	ಬಯಲುಸೀಮೆ ಗ್ರಾಮಪಂಚಾಯಿತಿಗಳು ಚುನಾವಣಾ ಅಭ್ಯರ್ಥಿಗಳು						ಮಲೆನಾಡು ಗ್ರಾಮಪಂಚಾಯಿತಿಗಳು ಚುನಾವಣಾ ಅಭ್ಯರ್ಥಿಗಳು						ಒಟ್ಟು ಅಭ್ಯರ್ಥಿಗಳು		
		ಹೊಸೂರು			ನಾಗೇನಹಳ್ಳಿ			ಬೇಡ್ಕಣಿ			ಕೋಲಸಿರ್ಸಿ					
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1.	ಭಾಗವಹಿಸಿಲ್ಲ	5	12	17	9	6	15	8	12	20	3	13	16	25	43	68
2.	1ರಿಂದ 5	5	12	17	13	19	32	21	16	37	13	13	26	52	60	112
3.	6ರಿಂದ 10	10	3	13	6	3	9	3	3	6	9	3	12	28	12	40
4.	11ರಿಂದ 15	8	8	16	10	10	20	3	6	9	9	10	19	30	34	64
5.	16ರಿಂದ 20	5	0	5	3	0	3	0	0	0	3	0	3	11	0	11
6.	ಒಟ್ಟು	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**48**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಕೋಷ್ಟಕ–6.4

ಗ್ರಾಮಪಂಚಾಯಿತಿಗಳ ಚುನಾವಣೆ – 2005 ಮತ್ತು 2010

ಗ್ರಾಮಸ್ಥರ ಗ್ರಾಮಸಭೆಯ ಪ್ರಾತಿನಿಧ್ಯದ ಬಗ್ಗೆ ಮಾಹಿತಿ ನೀಡಿದ ಪಂಚಾಯಿತಿವಾರು ಮತ್ತು ಲಿಂಗವಾರು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ವಿವರ

ಕ್ರ. ಸಂ.	ಗ್ರಾಮಸಭೆಯಲ್ಲಿ ಭಾಗವಹಿಸಿದ ಗ್ರಾಮಸ್ಥರ ಸಂಖ್ಯೆ	ಬಯಲುಸೀಮೆ ಗ್ರಾಮಪಂಚಾಯಿತಿಗಳು ಚುನಾವಣಾ ಅಭ್ಯರ್ಥಿಗಳು						ಮಲೆನಾಡು ಗ್ರಾಮಪಂಚಾಯಿತಿಗಳು ಚುನಾವಣಾ ಅಭ್ಯರ್ಥಿಗಳು						ಒಟ್ಟು ಅಭ್ಯರ್ಥಿಗಳು		
		ಹೊಸೂರು			ನಾಗೇನಹಳ್ಳಿ			ಬೇಡ್ಕಣಿ			ಕೋಲಸಿರ್ಸಿ					
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1.	ಗೊತ್ತಿಲ್ಲ	0	0	0	3	3	6	3	3	6	0	3	3	6	9	15
2.	50ರಿಂದ 100 ಗ್ರಾಮಸ್ಥರು	13	12	25	13	10	23	24	25	49	17	20	37	67	67	134
3.	101ರಿಂದ 150 ಗ್ರಾಮಸ್ಥರು	10	14	24	22	16	38	8	6	14	9	6	15	44	42	91
4.	151ರಿಂದ 200 ಗ್ರಾಮಸ್ಥರು	10	6	16	3	3	6	0	3	3	11	10	21	24	22	46
5.	201ರಿಂದ 250 ಗ್ರಾಮಸ್ಥರು	0	3	3	0	3	3	0	0	0	0	0	0	0	6	6
6.	251ರಿಂದ 300 ಗ್ರಾಮಸ್ಥರು	0	0	0	0	3	3	0	0	0	0	0	0	0	3	3
7.	301ರಿಂದ 400 ಗ್ರಾಮಸ್ಥರು	0	0	0	0	0	0	0	0	0	0	0	0	0	0	0
8.	**ಒಟ್ಟು**	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**149**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಕೋಷ್ಟಕ-6.5

ಗ್ರಾಮಪಂಚಾಯಿತಿಗಳ ಚುನಾವಣೆ - 2005 ಮತ್ತು 2010

ಮಹಿಳೆಯರ ಗ್ರಾಮಸಭೆಯ ಪ್ರಾತಿನಿಧ್ಯದ ಬಗ್ಗೆ ಮಾಹಿತಿ ನೀಡಿದ ಪಂಚಾಯಿತಿವಾರು ಮತ್ತು ಲಿಂಗವಾರು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ವಿವರ

ಕ್ರ. ಸಂ.	ಗ್ರಾಮಸಭೆಯಲ್ಲಿ ಭಾಗವಹಿಸಿದ ಗ್ರಾಮೀಣ ಮಹಿಳೆಯರ ಸಂಖ್ಯೆ	ಬಯಲುಸೀಮೆ ಗ್ರಾಮಪಂಚಾಯಿತಿಗಳು ಚುನಾವಣಾ ಅಭ್ಯರ್ಥಿಗಳು						ಮಲೆನಾಡು ಗ್ರಾಮಪಂಚಾಯಿತಿಗಳು ಚುನಾವಣಾ ಅಭ್ಯರ್ಥಿಗಳು						ಒಟ್ಟು ಅಭ್ಯರ್ಥಿಗಳು		
		ಹೊಸೂರು			ನಾಗೇನಹಳ್ಳಿ			ಬೇಡ್ಕಣಿ			ಕೋಲಸಿರ್ಸಿ					
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1.	ಗೊತ್ತಿಲ್ಲ	0	0	0	3	3	6	3	9	12	0	3	3	6	15	21
2.	10ರಿಂದ 25 ಮಹಿಳೆಯರು	8	3	11	7	13	20	11	19	30	14	10	24	40	45	85
3.	26ರಿಂದ 50 ಮಹಿಳೆಯರು	18	23	41	25	13	38	18	6	24	6	13	19	67	55	122
4.	51ರಿಂದ 100 ಮಹಿಳೆಯರು	7	9	16	6	9	15	3	3	6	17	13	30	33	34	67
5.	101ರಿಂದ 150 ಮಹಿಳೆಯರು	0	0	0	0	0	0	0	0	0	0	0	0	0	0	0
6.	**ಒಟ್ಟು**	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**149**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಕೋಷ್ಟಕ–6.6

ಗ್ರಾಮಪಂಚಾಯಿತಿಗಳ ಚುನಾವಣೆ – 2005 ಮತ್ತು 2010

ಗ್ರಾಮಸ್ಥರ ಗ್ರಾಮಸಭೆಯ ಪ್ರಾತಿನಿಧ್ಯದ ಬಗ್ಗೆ ಮಾಹಿತಿ ನೀಡಿದ ಪಂಚಾಯಿತಿವಾರು ಮತ್ತು ಲಿಂಗವಾರು ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳ ವಿವರ

ಕ್ರ. ಸಂ.	ಗ್ರಾಮಸಭೆಯಲ್ಲಿ ಮಹಿಳೆ ಭಾಗವಹಿಸುವ ನಿರ್ಧಾರ	ಬಯಲುಸೀಮೆ ಗ್ರಾಮಪಂಚಾಯಿತಿಗಳು ಚುನಾವಣಾ ಅಭ್ಯರ್ಥಿಗಳು						ಮಲೆನಾಡು ಗ್ರಾಮಪಂಚಾಯಿತಿಗಳು ಚುನಾವಣಾ ಅಭ್ಯರ್ಥಿಗಳು						ಒಟ್ಟು ಅಭ್ಯರ್ಥಿಗಳು		
		ಹೊಸೂರು			ನಾಗೇನಹಳ್ಳಿ			ಬೇಡ್ಕಣಿ			ಕೋಲಸಿರ್ಸಿ					
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1.	**ಯಾರು ತೆಗೆದುಕೊಳ್ಳುತ್ತಾರೆ?**															
	ಪುರುಷ	33	26	59	31	27	58	24	25	49	26	23	49	114	101	215
	ಸ್ವನಿರ್ಧಾರ	0	9	9	10	11	21	11	12	23	11	16	27	32	48	80
	ಒಟ್ಟು	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**149**	**295**
2.	**ಯಾರು ತೆಗೆದುಕೊಳ್ಳಬೇಕು?**															
	ಪುರುಷ	28	23	51	32	22	54	22	22	44	20	18	38	102	85	187
	ಸ್ವನಿರ್ಧಾರ	5	12	17	9	16	25	13	15	28	17	21	38	44	64	108
	ಒಟ್ಟು	**33**	**35**	**68**	**41**	**38**	**79**	**35**	**37**	**72**	**37**	**39**	**76**	**146**	**149**	**295**

ಮೂಲ: 1. ಕ್ಷೇತ್ರ ಅಧ್ಯಯನದಿಂದ ಪಡೆದ ಪ್ರಾಥಮಿಕ ಮಾಹಿತಿ.

ಅಧ್ಯಾಯ ಏಳು

ಸಮಾರೋಪ

ಪೀಠಿಕೆ

ಭಾರತದ ಜನತಂತ್ರ ವಿಕೇಂದ್ರೀಕರಣ ವ್ಯವಸ್ಥೆಯ ತಳಪಾಯವಾದ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಅಧ್ಯಯನ ಮಾಡುವ ಮುಖ್ಯ ಉದ್ದೇಶದಿಂದ ಮಹಾಪ್ರಬಂಧವನ್ನು ರಚಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹೊಸೂರು ಮತ್ತು ನಾಗೇನಹಳ್ಳಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳನ್ನು ತೌಲನಿಕ ಅಧ್ಯಯನ ಮಾಡುವುದರ ಮೂಲಕ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ. ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳು ರಾಜ್ಯದಲ್ಲಿ ಹಿಂದುಳಿದ ಬಳ್ಳಾರಿ ಜಿಲ್ಲೆಯಲ್ಲಿ ಅಭಿವೃದ್ಧಿ ಪಥದಲ್ಲಿರುವ ಹೊಸಪೇಟೆ ತಾಲೂಕಿನಲ್ಲಿವೆ. ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳು ಮುಂದುವರೆದ ಉತ್ತರ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿಯಲ್ಲಿ ಹಿಂದುಳಿದ ಸಿದ್ದಾಪುರ ತಾಲೂಕಿನಲ್ಲಿವೆ. ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಲ್ಲಿ ಪರಿಶಿಷ್ಟರು ಬಹುಸಂಖ್ಯಾತರಾದರೆ, ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಲ್ಲಿ ಇತರೆ ಹಿಂದುಳಿದ ಮತ್ತು ಸಾಮಾನ್ಯ ವರ್ಗದವರು ಬಹುಸಂಖ್ಯಾತರಾಗಿದ್ದಾರೆ. ಬಯಲುಸೀಮೆಯ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳು ನೀರಾವರಿ ಆಧಾರಿತ ಕೃಷಿಪ್ರಧಾನ ಪ್ರದೇಶಗಳಾದರೆ, ಮಲೆನಾಡಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳು ಮಳೆ ಆಶ್ರಿತ ಕೃಷಿಪ್ರಧಾನ ಪ್ರದೇಶಗಳಾಗಿವೆ. ತಾಲೂಕು ಕೇಂದ್ರಕ್ಕೆ ಹತ್ತಿರುವ ಈ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ತೌಲನಿಕವಾಗಿ ಅಧ್ಯಯನ ಮಾಡಲು ಅನುಕೂಲವಾಗಿದೆ.

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳಾ ಮೀಸಲಾತಿ ಒಂದು ವಿಕಸಿತ ಸಂಗತಿಯಾಗಿದೆ. ಆದರೆ ಸಂವಿಧಾನದ 73ನೇ ತಿದ್ದುಪಡಿಯು ಮಹಿಳಾ ಮೀಸಲಾತಿಯನ್ನು ಶಾಸನಬದ್ದ ಹಕ್ಕಾಗಿಸಿದೆ. ಈ ತಿದ್ದುಪಡಿಯು ಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಸಕಾರಾತ್ಮಕ(ಮುಂದಿನ ಚುನಾವಣೆಯಲ್ಲಿ ಸಮಾನ) ಅವಕಾಶ ನೀಡಿದೆ.[1] ಅಂದರೆ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳಾ ಪ್ರಾತಿನಿಧ್ಯಕ್ಕಾಗಿ

ಶೇ.33.33ರಷ್ಟು(ಮುಂದಿನ ಚುನಾವಣೆಯಲ್ಲಿ ಶೇ.50ರಷ್ಟು) ಮಹಿಳಾ ಮೀಸಲಾತಿಯನ್ನು ನೀಡಲಾಗಿದೆ. ತನ್ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸುವ ಪ್ರಯತ್ನ ಮಾಡಲಾಗಿದೆ. ಇಂದು ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿದೆ. ಆದರೆ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿ ಮೂಲಕ ನೀಡಿರುವ ಮಹಿಳಾ ಪ್ರಾತಿನಿಧ್ಯವು ಮಹಿಳಾ ಸಬಲೀಕರಣವಾಗಿ ಕಂಡುಬರುತ್ತಿಲ್ಲ. ಕಾರಣ, ಗ್ರಾಮೀಣ ಸಮಾಜದಲ್ಲಿ ಜಮೀನ್ದಾರಿ, ವೈದಿಕ ಮತ್ತು ಪುರುಷಪ್ರಧಾನ ಹಾಗೂ ಲಿಂಗ ಅಸಮಾನತೆಯ ಲಕ್ಷಣಗಳು ಜೀವಂತವಾಗಿರುವುದು ಕಂಡುಬರುತ್ತಿದೆ. ಹೀಗಾಗಿ ರಾಜಕೀಯ ಆಸಕ್ತ ಪುರುಷರು ಮಹಿಳಾ ಪ್ರಾತಿನಿಧ್ಯವನ್ನು ನಿರ್ಧರಿಸುವುದು ಮತ್ತು ನಿಯಂತ್ರಿಸುವುದು ನಿರಂತರವಾಗಿದೆ. ಆದರೆ ಮಹಿಳೆಯರು ಪಂಚಾಯಿತಿ ಪ್ರಕ್ರಿಯೆಗಳಲ್ಲಿ ಲಿಂಗಮಧ್ಯಸ್ಥಿಕೆ ಇಲ್ಲದೇ ಸ್ವನಿರ್ಧಾರದಂತೆ ಕ್ರಿಯಾತ್ಮಕವಾಗಿ ಭಾಗವಹಿಸುವುದರ ಆಧಾರದ ಮೇಲೆ ಮಹಿಳಾ ಸಬಲೀಕರಣ ನಿರ್ಣಯವಾಗುತ್ತದೆ.[2] ಆದ್ದರಿಂದ ಪಂಚಾಯಿತಿಗಳಲ್ಲಿ ಮಹಿಳಾ ಮೀಸಲಾತಿ ವ್ಯವಸ್ಥೆಯು ಕೇವಲ ಅವರ ಸದಸ್ಯತ್ವಕ್ಕಷ್ಟೇ ಸಿಕ್ಕಿತೇ ಹೊರತು ಪದಾಧಿಕಾರತ್ವದಲ್ಲಿ ಸಮರ್ಪಕವಾಗಿ ಸಿಕ್ಕಿಲ್ಲ[3] ಎಂಬ ವಾದವು ಕಂಡಬರುತ್ತದೆ. ಇದಕ್ಕೆ ಪೂರಕವಾಗಿ ಗ್ರಾಮೀಣ ಮಹಿಳೆಯರು ಸಮಯಾಧರಿತವಾಗಿ ಪಂಚಾಯಿತಿ ಸದಸ್ಯರಾಗಿದ್ದಾರೆ[4] ಎಂಬ ವಾದವು ಸಿಗುತ್ತದೆ. ಹೀಗಾಗಿ ಮಹಿಳೆ ತನ್ನ ವೈಯಕ್ತಿಕ ಮತ್ತು ಸಮುದಾಯದ ಬದುಕಿಗೆ ಸಂಬಂಧಿಸಿದ ಪ್ರಮುಖ ವಿಷಯಗಳಲ್ಲಿ ಸ್ವನಿರ್ಧಾರ ತೆಗೆದುಕೊಳ್ಳುವ ಸಾಮರ್ಾರ್ಥವೇ ಮಹಿಳಾ ಸಬಲೀಕರಣ[5] ಎಂದು ಹೇಳಲಾಗುತ್ತದೆ. ಆದ್ದರಿಂದ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯದ ಜೊತೆಗೆ ಮಹಿಳಾ ಸಬಲೀಕರಣಕ್ಕೆ ಸ್ವನಿರ್ಧಾರವು ಅಗತ್ಯ ಮತ್ತು ಅನಿವಾರ್ಯವೆಂದು ಈ ಅಧ್ಯಯನದಲ್ಲಿ ಪರಿಭಾವಿಸಲಾಗಿದೆ. ಗ್ರಾಮಪಂಚಾಯಿತಿಯಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣಗಳ ನಡುವಿನ ಆಂತರಿಕ ಸಂಬಂಧವನ್ನು ಗುರುತಿಸಲು ಮತದಾನ, ಉಮೇದುವಾರಿಕೆ, ಪಡೆದ ಮತಗಳು ಮತ್ತು ಗ್ರಾಮಸಭೆ ಎಂಬ ಸೂಚ್ಯಂಕಗಳನ್ನು ಬಳಸಲಾಗಿದೆ. ಅಂದರೆ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನ, ಉಮೇದುವಾರಿಕೆ, ಉಮೇದುವಾರಿಕೆಯಲ್ಲಿ ಸ್ಪರ್ಧೆ/ಪೈಪೋಟಿಗಳಲ್ಲಿ ಮಹಿಳಾ ಅಭ್ಯರ್ಥಿಗಳ ಪ್ರಮಾಣ, ಮತದಾರರು ನೀಡಿದ ಮತಗಳಲ್ಲಿ ಮಹಿಳಾ ಅಭ್ಯರ್ಥಿ ಪಡೆದ ಮತಗಳ ಪ್ರಮಾಣ ಮತ್ತು ಗ್ರಾಮಸಭೆಗಳಲ್ಲಿ ಮಹಿಳಾ ಮತದಾರರು ಭಾಗವಹಿಸುವ ಪ್ರಮಾಣದಲ್ಲಿ ಮಹಿಳಾ ಸ್ವನಿರ್ಧಾರದ ಪ್ರಮಾಣವನ್ನು ಪರಸ್ಪರ ಪುರುಷ ಅಭ್ಯರ್ಥಿ/ಮತದಾರರಿಗೆ ಹೋಲಿಸಿ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ. ಈ ಎಲ್ಲಾ ಅಂಶಗಳಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣವನ್ನು ರೂಪಿಸುವಲ್ಲಿ ಗ್ರಾಮೀಣ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸರ ಹೇಗೆ ಪ್ರಭಾವಿಸಿದೆ ಎಂಬುದನ್ನು ನೋಡಲಾಗಿದೆ. ಅಧ್ಯಯನ ಕೈಗೊಂಡ ಎರಡು ವಿಭಿನ್ನ ಜಿಲ್ಲೆ ಮತ್ತು ತಾಲೂಕುಗಳ ನಾಲ್ಕು ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯದ ಜೊತೆಗೆ ಮಹಿಳಾ ಸ್ವನಿರ್ಧಾರವು ಯಾವ ಪ್ರಮಾಣದಲ್ಲಿದೆ ಎಂಬುದನ್ನು ಪರೀಕ್ಷಿಸಿ ಮಹಿಳಾ ಸಬಲೀಕರಣವನ್ನು ಮಾಪನ ಮಾಡಲಾಗಿದೆ.

7.1 ಅಧ್ಯಯನದ ಸಾರಾಂಶ

ಅಧ್ಯಯನ ಕೈಗೊಂಡ ಗ್ರಾಮಪಂಚಾಯಿತಿಗಳು ಸೇರಿದಂತೆ ಎಲ್ಲಾ ಗ್ರಾಮಪಂಚಾಯಿತಿಗಳ ಚುನಾವಣೆಯಲ್ಲಿ ಮಹಿಳಾ ಮತದಾರ ಪ್ರಾತಿನಿಧ್ಯವು ಉತ್ತಮವಾಗಿದೆ. ಕಾರಣ ಚುನಾವಣೆಯಲ್ಲಿ ಸ್ಪರ್ಧಿಸುವ ಮಹಿಳಾ ಅಭ್ಯರ್ಥಿಗಳನ್ನು ಒಳಗೊಂಡಂತೆ ಎಲ್ಲಾ ಅಭ್ಯರ್ಥಿಗಳು ಮಹಿಳೆಯರ ಮತ ಪಡೆಯುವಲ್ಲಿ ಆಸಕ್ತಿ ಮತ್ತು ಪ್ರಚಾರವನ್ನು ಮಾಡುವುದು' ಕಂಡುಬರುತ್ತದೆ. ಹೀಗಾಗಿ ಪಂಚಾಯಿತಿ ಚುನಾವಣೆಗಳು ಸೇರಿದಂತೆ ಎಲ್ಲಾ ಹಂತದ ಸಾರ್ವತ್ರಿಕ ಚುನಾವಣೆಗಳಲ್ಲಿ ಮಹಿಳಾ ಮತದಾರ ಪ್ರಾಮುಖ್ಯತೆ ಮತ್ತು ಮಹತ್ವ ಹೆಚ್ಚಾಗಿದೆ. ಆದರೆ ಗ್ರಾಮೀಣ ಮಹಿಳೆಯರು ಸ್ವನಿರ್ಧಾರದಂತೆ ಮತದಾನ ಮಾಡುವ ಪ್ರಮಾಣವು ಕಡಿಮೆ ಇರುವುದು ಈ ಅಧ್ಯಯನದಿಂದ ಸಾಬೀತಾಗುತ್ತದೆ. ಅಧ್ಯಯನ ಕೈಗೊಂಡ ನಾಲ್ಕು ಗ್ರಾಮಪಂಚಾಯಿತಿಗಳಲ್ಲಿ ಸ್ವನಿರ್ಧಾರದಂತೆ ಮತದಾನ ಮಾಡುವ ಮಹಿಳಾ ಪ್ರಮಾಣವು ಕಡಿಮೆ ಇದೆ. ಆದರೆ ಬಯಲುಸೀಮೆಯ ಹೊಸೂರು ಮತ್ತು ನಾಗೇನಹಳ್ಳಿ ಗ್ರಾಮಪಂಚಾಯಿತಿಗಳಿಗಿಂತ ಮಲೆನಾಡಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಲ್ಲಿ ಉತ್ತಮವಾಗಿದೆ. ಈ ನಾಲ್ಕು ಗ್ರಾಮಪಂಚಾಯಿತಿಗಳಲ್ಲಿ ಸಾಮಾಜೋ-ಆರ್ಥಿಕ ಸಂಗತಿಗಳಾದ ಲಿಂಗ, ಜಾತಿ, ವಯಸ್ಸು, ಶಿಕ್ಷಣ ಮತ್ತು ಆದಾಯಗಳ ಆಧಾರ ಮೇಲೆ ಮಹಿಳೆಯರ ಮತ ನೀಡುವ ನಿರ್ಧಾರವನ್ನು ನೋಡಿದಾಗ, ಶೇ.43ರಷ್ಟು ಗ್ರಾಮೀಣ ಮಹಿಳೆಯರು ಮಾತ್ರ ಸ್ವನಿರ್ಧಾರದಂತೆ ಮತದಾನ ಮಾಡುವುದು ಕಂಡುಬರುತ್ತದೆ. ಇವರಲ್ಲಿ ಮಧ್ಯಮ(36ರಿಂದ 50 ವರ್ಷ) ವಯಸ್ಸಿನ, ಇತರೆ ಸಾಮಾನ್ಯ ವರ್ಗದ, ಪದವಿ ಶಿಕ್ಷಣ ಪಡೆದ ಮತ್ತು ಆದಾಯವಿಲ್ಲದ ಹಾಗೂ ಮಿತಆದಾಯ ಇರುವ ನಾಗರಿಕರಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಮತದಾನ ಮಾಡುವ ಪ್ರಮಾಣ ಹೆಚ್ಚು ಇರುವುದು ಕಂಡುಬರುತ್ತದೆ.

ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ಪಡೆಯುವಲ್ಲಿ ಗ್ರಾಮಪಂಚಾಯಿತಿ ಚುನಾವಣೆ ಉಮೇದುವಾರಿಕೆ ಒಂದು ಬಹುಮುಖ್ಯವಾದ ಸಾಧನವಾಗಿದೆ. ಇದು ಮಹಿಳೆಯರ ಸಬಲೀಕರಣವನ್ನು ಯಾವ ರೀತಿ ಪ್ರಭಾವಿಸಿದೆ ಎಂಬುದನ್ನು ಪರೀಕ್ಷಿಸಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಯಲುಸೀಮೆಯ ಹೊಸೂರು ಮತ್ತು ನಾಗೇನಹಳ್ಳಿ ಹಾಗೂ ಮಲೆನಾಡಿನ ಬೇಡ್ಕಣಿ ಮತ್ತು ಕೋಲಸಿರ್ಸಿ ಗ್ರಾಮಪಂಚಾಯಿತಿಗಳಲ್ಲಿ ಚುನಾವಣಾ ಉಮೇದುವಾರಿಕೆ ಪಡೆಯುವಲ್ಲಿ ಗ್ರಾಮೀಣ ಮಹಿಳೆಯರಿಗೆ 'ಸ್ವನಿರ್ಧಾರ ಇಲ್ಲದಿರುವುದು ಏಕ ರೀತಿಯಲ್ಲಿ' ಕಂಡುಬರುತ್ತದೆ. ಕಳೆದ ಎರಡು ಅವಧಿಗಳಿಗೆ ಚುನಾವಣಾ ಪ್ರಾತಿನಿಧ್ಯ ಪಡೆದ ಅಭ್ಯರ್ಥಿಗಳಲ್ಲಿ ಮಹಿಳಾ ಅಭ್ಯರ್ಥಿಗಳೆಲ್ಲರೂ ಗ್ರಾಮದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಮುಖಂಡರ ಮತ್ತು ಕುಟುಂಬದ ಪುರುಷ ಸದಸ್ಯರ ನಿರ್ಧಾರದಂತೆ ಚುನಾವಣಾ ಉಮೇದುವಾರಿಕೆ ಪಡೆದುಕೊಂಡಿರುವುದು ಕಂಡುಬರುತ್ತದೆ. ಅಲ್ಲದೇ ಈ ಗ್ರಾಮಪಂಚಾಯಿತಿಗಳಲ್ಲಿ ಚುನಾವಣಾ ಪ್ರಾತಿನಿಧ್ಯ ಪಡೆದ ಪುರುಷ ಅಭ್ಯರ್ಥಿಗಳಲ್ಲಿ ಶೇ.38ರಷ್ಟು ಪುರುಷರು ಮಾತ್ರ ಸ್ವನಿರ್ಧಾರದಂತೆ ಚುನಾವಣೆ ಉಮೇದುವಾರಿಕೆ ಪಡೆದಿರುವುದು ಕಂಡುಬರುತ್ತದೆ.

ಗ್ರಾಮಪಂಚಾಯಿತಿಯಲ್ಲಿ ಮಹಿಳೆಯರ ಚುನಾವಣಾ ಉಮೇದುವಾರಿಕೆಯ ಸ್ಪರ್ಧೆ ಅವರ ರಾಜಕೀಯ ಪ್ರಾತಿನಿಧ್ಯ ಮತ್ತು ಸಬಲೀಕರಣವನ್ನು ಹೇಗೆ ಪ್ರಭಾವಿಸಿದೆ ಎಂದು ವಿಶ್ಲೇಷಿಸಲಾಗಿದೆ. ಮಹಿಳೆಯರ ಚುನಾವಣಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಬಯಲುಸೀಮೆ(1 ಸ್ಥಾನಕ್ಕೆ x 5.4 ಅಭ್ಯರ್ಥಿಗಳ ಸ್ಪರ್ಧೆ) ಗ್ರಾಮಪಂಚಾಯಿತಿಗಳಿಗಿಂತ ಮಲೆನಾಡು(1 ಸ್ಥಾನಕ್ಕೆ x ಶೇ.9 ಅಭ್ಯರ್ಥಿಗಳ ಸ್ಪರ್ಧೆ) ಗ್ರಾಮಪಂಚಾಯಿತಿಗಳಲ್ಲಿ ಮಹಿಳೆಯರ ಉತ್ತಮ ಸ್ಪರ್ಧೆ ಇರುವುದು ಕಂಡುಬರುತ್ತದೆ. ಆದರೆ ಪುರುಷರ ಚುನಾವಣಾ ಉಮೇದುವಾರಿಕೆ ಸ್ಪರ್ಧೆಯಲ್ಲಿ ಬಯಲುಸೀಮೆಯ(1 ಸ್ಥಾನಕ್ಕೆ x ಶೇ.10.6 ಅಭ್ಯರ್ಥಿಗಳ ಸ್ಪರ್ಧೆ) ಗ್ರಾಮಪಂಚಾಯಿತಿಗಳಿಂತ ಮಲೆನಾಡು(1 ಸ್ಥಾನಕ್ಕೆ x ಶೇ.10.9 ಅಭ್ಯರ್ಥಿಗಳ ಸ್ಪರ್ಧೆ) ಗ್ರಾಮಪಂಚಾಯಿತಿಗಳಲ್ಲಿ ಪುರುಷರ ಉತ್ತಮ ಸ್ಪರ್ಧೆ ಇರುವುದು ಕಂಡುಬರುತ್ತದೆ. ಉಮೇದುವಾರಿಕೆಯಲ್ಲಿ ಮಹಿಳೆಯರ ಸ್ಪರ್ಧೆಯ ಪ್ರಮಾಣವನ್ನು ಪುರುಷರಿಗೆ ಹೋಲಿಸಿದಾಗ ಪುರುಷರ ಉಮೇದುವಾರಿಕೆ ಪ್ರಮಾಣ ಉತ್ತಮವಾಗಿದೆ. ಒಟ್ಟಾರೆಯಾಗಿ ಮಹಿಳೆ ಮತ್ತು ಪುರುಷರ ಉಮೇದುವಾರಿಕೆ ಸ್ಪರ್ಧೆಯ ಪ್ರಮಾಣವನ್ನು ಬಯಲುಸೀಮೆ ಮತ್ತು ಮಲೆನಾಡು ಪಂಚಾಯಿತಿಗಳಲ್ಲಿ ತೌಲನಿಕವಾಗಿ ನೋಡಿದಾಗ ಬಯಲುಸೀಮೆಯ ಪಂಚಾಯಿತಿಗಳಿಗಿಂತ(1 ಸ್ಥಾನಕ್ಕೆ x ಶೇ.16 ಅಭ್ಯರ್ಥಿಗಳ ಸ್ಪರ್ಧೆ) ಮಲೆನಾಡು ಪಂಚಾಯಿತಿಗಳಲ್ಲಿ(1 ಸ್ಥಾನಕ್ಕೆ x 20 ಅಭ್ಯರ್ಥಿಗಳ ಸ್ಪರ್ಧೆ) ಶೇ.4ರಷ್ಟು ಉಮೇದುವಾರಿಕೆಯ ಸ್ಪರ್ಧೆಯ ಪ್ರಮಾಣ ಹೆಚ್ಚು ಇರುವುದು ಕಂಡುಬರುತ್ತದೆ. ಅವಿರೋಧ ಆಯ್ಕೆ ಪ್ರಕ್ರಿಯೆಯಲ್ಲಿ ಬಯಲುಸೀಮೆ ಮತ್ತು ಮಲೆನಾಡು ಗ್ರಾಮಪಂಚಾಯಿತಿಗಳಲ್ಲಿ ಪರಿಶಿಷ್ಟ ಮಹಿಳೆಯರು ಮಾತ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆದರೆ ಮಲೆನಾಡು ಗ್ರಾಮಪಂಚಾಯಿತಿಗಳಲ್ಲಿ ಮೇಲ್ವರ್ಗದ ಪುರುಷರು ಅವಿರೋಧವಾಗಿ ಆಯ್ಕೆಯಾಗುವುದು ಕಂಡುಬರುತ್ತದೆ.

ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಮತದಾರರು ನೀಡಿದ ಮತಗಳು ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಮತ್ತು ಸಬಲೀಕರಣವನ್ನು ಹೇಗೆ ಪ್ರಭಾವಿಸಿದೆ ಎಂಬುದನ್ನು ವಿವರಿಸಲಾಗಿದೆ. ಮಹಿಳಾ ಅಭ್ಯರ್ಥಿಗಳು ಪುರುಷ ಅಭ್ಯರ್ಥಿಗಳಿಗಿಂತ ಕಡಿಮೆ ಮತಗಳನ್ನು ಪಡೆದಿರುವುದು ಕಂಡುಬರುತ್ತದೆ. ಆದರೆ ಬಯಲುಸೀಮೆಯ ಗ್ರಾಮಪಂಚಾಯಿತಿಗಳಿಗಿಂತ ಮಲೆನಾಡಿನ ಗ್ರಾಮಪಂಚಾಯಿತಿಗಳಲ್ಲಿ ಚುನಾವಣೆಗೆ ಸ್ಪರ್ಧಿಸಿದ ಮಹಿಳಾ ಅಭ್ಯರ್ಥಿಗಳು ಮತದಾರರಿಂದ ಉತ್ತಮ ರೀತಿಯಲ್ಲಿ ಮತಗಳನ್ನು ಪಡೆದುಕೊಂಡಿದ್ದಾರೆ. ಮತದಾರರು ಚಲಾಯಿಸಿದ ಸಿಂಧುತ್ವ ಮತಗಳಲ್ಲಿ ಬಯಲುಸೀಮೆಯ ಗ್ರಾಮಪಂಚಾಯಿತಿಗಳ ಮಹಿಳಾ ಅಭ್ಯರ್ಥಿಗಳು ಶೇ.37ರಷ್ಟು ಮತಗಳನ್ನು ಪಡೆದರೆ, ಮಲೆನಾಡಿನ ಗ್ರಾಮಪಂಚಾಯಿತಿಗಳ ಮಹಿಳಾ ಅಭ್ಯರ್ಥಿಗಳು ಶೇ.42ರಷ್ಟು ಮತಗಳನ್ನು ಪಡೆದಿದ್ದಾರೆ. ಅಂದರೆ ಮಲೆನಾಡಿನ ಮಹಿಳಾ ಅಭ್ಯರ್ಥಿಗಳು ಶೇ.5ರಷ್ಟು ಹೆಚ್ಚು ಮತಗಳನ್ನು ಮತದಾರರಿಂದ ಪಡೆದಿರುತ್ತಾರೆ. ಚುನಾವಣೆಯಲ್ಲಿ ಮತದಾರರಿಂದ ಪಡೆದ ಮತಗಳ ಆಧಾರದ ಮೇಲೆ ಮಹಿಳಾ ಸಬಲೀಕರಣವನ್ನು ಮಾಪನ ಮಾಡಿದಾಗ ಬಯಲುಸೀಮೆಯ ಮಹಿಳೆಯರಿಗಿಂತ ಮಲೆನಾಡಿನ ಮಹಿಳೆಯರು ಶೇ.5ರಷ್ಟು ಹೆಚ್ಚು ಸಬಲೀಕರಣಗೊಂಡಿರುವುದಾಗಿ ಕಂಡುಬರುತ್ತದೆ.

ಗ್ರಾಮೀಣ ಸಮುದಾಯದವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಾತಿನಿಧ್ಯವನ್ನು ಪಡೆಯಲು ಗ್ರಾಮಸಭೆ ಒಂದು ಬಹುಮುಖ್ಯ ಸಾಧನವಾಗಿದೆ. ಗ್ರಾಮೀಣ ಮಹಿಳೆಯರು ಅವರ ಸ್ವನಿರ್ಧಾರದಂತೆ ಗ್ರಾಮಸಭೆಯ ಪ್ರಾತಿನಿಧ್ಯವನ್ನು ಪಡೆಯುವ ಪ್ರಮಾಣ ಎಷ್ಟಿದೆ? ಅದು ಮಹಿಳೆಯರ ಸಬಲೀಕರಣವನ್ನು ಎಷ್ಟರಮಟ್ಟಿಗೆ ಸಾಕಾರಗೊಳಿಸಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಗ್ರಾಮಸಭೆಯಲ್ಲಿ ಸ್ವನಿರ್ಧಾರದಂತೆ ಭಾಗವಹಿಸುವ ಮಹಿಳೆಯರ ಪ್ರಮಾಣವು ಬಯಲುಸೀಮೆಯ ಹೊಸೂರು ಮತ್ತು ನಾಗೇನಹಳ್ಳಿ (ಶೇ.20ರಷ್ಟು) ಗ್ರಾಮಪಂಚಾಯಿತಿಗಳಿಂತ ಮಲೆನಾಡಿನ ಬೇಡ್ಕಣಿ ಮತ್ತು ಕೋಲಸಿರ್ಸಿ (ಶೇ.34ರಷ್ಟು) ಗ್ರಾಮಪಂಚಾಯಿತಿಗಳಲ್ಲಿ ಶೇ.14ರಷ್ಟು ಉತ್ತಮವಾಗಿದೆ. ಒಟ್ಟಾರೆಯಾಗಿ ಗ್ರಾಮಸಭೆಯಲ್ಲಿ ಸ್ವನಿರ್ಧಾರದಂತೆ ಭಾಗವಹಿಸುವ ಮಹಿಳೆಯರ ಪ್ರಮಾಣ ಶೇ.27ರಷ್ಟು ಇರುವುದು ಕಂಡುಬರುತ್ತದೆ. ಅಂದರೆ ಉಳಿದ ಶೇ.73ರಷ್ಟು ಮಹಿಳೆಯರು ಪುರುಷರ ನಿರ್ಧಾರದಂತೆ ಭಾಗವಹಿಸುವುದು ಕಂಡುಬರುತ್ತದೆ. ಗ್ರಾಮಸಭೆಯಲ್ಲಿ ಭಾಗವಹಿಸಲು ಮಹಿಳೆಯರೇ ಸ್ವನಿರ್ಧಾರ ತೆಗೆದುಕೊಳ್ಳಬೇಕೆಂದು ಹೇಳುವ ಮತದಾರರ ಪ್ರಮಾಣದಲ್ಲಿ ಬಯಲುಸೀಮೆಯ(ಶೇ.28ರಷ್ಟು) ಗ್ರಾಮಪಂಚಾಯಿತಿಗಳಿಗಿಂತ ಮಲೆನಾಡು(ಶೇ.44ರಷ್ಟು) ಗ್ರಾಮಪಂಚಾಯಿತಿಗಳಲ್ಲಿ ಶೇ.16ರಷ್ಟು ಪ್ರಮಾಣ ಹೆಚ್ಚಿದೆ. ಆದ್ದರಿಂದ ಬಯಲುಸೀಮೆಯ ಮಹಿಳೆಯರಿಗಿಂತ ಮಲೆನಾಡಿನ ಮಹಿಳೆಯರು ಸ್ವಲ್ಪಮಟ್ಟಿಗೆ ಸಬಲೀಕರಣಗೊಂಡಿರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ಗ್ರಾಮಸಭೆಗಳಲ್ಲಿ ಮಹಿಳೆಯರು ಅವರ ಸ್ವನಿರ್ಧಾರದಂತೆ ಭಾಗವಹಿಸಬೇಕೆಂದು ಹೇಳುವ ಗ್ರಾಮಸ್ಥರ ಪ್ರಮಾಣವು ಶೇ.36ರಷ್ಟು ಕಂಡುಬರುವುದರಿಂದ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಸಬಲೀಕರಣ ಕಂಡುಬರುವುದಿಲ್ಲ ಎಂಬದು ಈ ಅಧ್ಯಯನದ ಸಾರಾಂಶವಾಗಿದೆ.

7.2 ಅಧ್ಯಯನದ ಫಲಿತಗಳು

ಸಂವಿಧಾನದ 73ನೇ ತಿದ್ದುಪಡಿ ಜಾರಿಗೆ ಬಂದ ಮೇಲೆ ಅಧ್ಯಯನ ಕೈಗೊಂಡ ಗ್ರಾಮಪಂಚಾಯಿತಿಗಳು ಸೇರಿದಂತೆ ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯವು ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತದೆ. ಗ್ರಾಮಪಂಚಾಯಿತಿಗಳಲ್ಲಿ ಕಂಡುಬರುವ ಮಹಿಳಾ ಪ್ರಾತಿನಿಧ್ಯ ಪ್ರಮಾಣವೊಂದೇ ಮಹಿಳಾ ಸಬಲೀಕರಣವಾಗಿ ಕಂಡುಬರುವುದಿಲ್ಲ. ಏಕೆಂದರೆ ಮಹಿಳೆ ಆಜ್ಞಾಪೂರ್ವಕವಾಗಿ ಮೀಸಲಾತಿ ಅವಕಾಶದ ಫಲವಾಗಿ ಗ್ರಾಮಪಂಚಾಯಿತಿಗೆ ಪ್ರವೇಶ ಪಡೆದಿದ್ದಾಳೆ. ರಾಜಕೀಯ ಹಿನ್ನೆಲೆ ಇಲ್ಲದ ಮೂರು–ಮುಕ್ಕಾಲು ಪಾಲು ಮಹಿಳೆಯರು ಕುಟುಂಬದ ಪುರುಷ ಸದಸ್ಯರ ಒಲ್ಲೈಕೆಗೆ ಅಥವಾ ಗ್ರಾಮ ಸಮುದಾಯದ ಒತ್ತಡಕ್ಕೆ ಮಣಿದು ರಾಜಕೀಯ ಪ್ರವೇಶ ಪಡೆದಿದ್ದಾಳೆ[7] ಎಂಬ ವಾದಕ್ಕೆ ಪೂರಕವಾಗಿ ಗ್ರಾಮಪಂಚಾಯಿತಿಯ ಉಮೇದುವಾರಿಕೆ ಪಡೆದ ನೂರಕ್ಕೆ ನೂರರಷ್ಟು ಮಹಿಳೆಯರು ಪುರುಷರ ಒತ್ತಡ ಮತ್ತು ಒಲ್ಲೈಕೆಯಿಂದ ಪಡೆದಿದ್ದಾರೆಯೇ ಹೊರತು ಸ್ವನಿರ್ಧಾರದಿಂದಲ್ಲ ಎಂಬದು ಈ ಅಧ್ಯಯನದಲ್ಲಿ ನಿರೂಪಿತವಾಗಿದೆ. ಪಂಚಾಯತ್‌ರಾಜ್

ಸಂಸ್ಥೆಗಳಲ್ಲಿ ಪ್ರಜಾತಾಂತ್ರಿಕ ವಿಕೇಂದ್ರೀಕರಣ ಮತ್ತು ಲಿಂಗ ಅಸಮಾನತೆ ನಿವಾರಣೆಗಾಗಿ ಪ್ರಾತಿನಿಧ್ಯ ವಿಧಾನದ ಮೂಲಕ ದಲಿತ, ಶೋಷಿತ, ಹಿಂದುಳಿದ ಮತು ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡುವುದೇ 73ನೇ ತಿದ್ದುಪಡಿಯ ನೈಜ ಉದ್ದೇಶವಾಗಿದೆ.[8] ಆದರೆ ಈ ತಿದ್ದುಪಡಿಯು ಉದ್ದೇಶಿತ ವರ್ಗಕ್ಕೆ ನ್ಯಾಯವನ್ನು ದೊರಕಿಸಿಕೊಡುವುದರಲ್ಲಿ ಯಶಸ್ವಿಯಾಗಿಲ್ಲ ಎಂಬ ಅಂಶವು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಇಂದು ಗ್ರಾಮೀಣ ಪರಿಸರದಲ್ಲಿ ಊಳಿಗಮಾನ್ಯ, ವೈದಿಕ, ಪುರುಷ ಯಾಜಮಾನ್ಯ ಮತ್ತು ಲಿಂಗ ಅಸಮಾನತೆ ಲಕ್ಷಣಗಳು ಜೀವಂತವಾಗಿವೆ. ಇದಕ್ಕೆ ಸಾಕ್ಷಿ ಎಂಬಂತೆ ಗ್ರಾಮಪಂಚಾಯಿತಿ ಚುನಾವಣಾ ಪ್ರಾತಿನಿಧ್ಯ ಪಡೆದ ಮಹಿಳೆಯರಲ್ಲಿ ಶೇ.75ಕ್ಕಿಂತ ಹೆಚ್ಚು ಮಹಿಳೆಯರು ಗೃಹಿಣಿಯರು ಮತ್ತು ಕೃಷಿ ಕಾರ್ಮಿಕರಾಗಿರುವುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಇಂದು ಊಳಿಗಮಾನ್ಯ ವ್ಯವಸ್ಥೆಗೆ ಪರ್ಯಾಯವಾಗಿ ಬೆಳೆದುಕೊಂಡಿರುವ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿ ಪುರುಷ ಯಾಜಮಾನ್ಯವು ವಿಶೇಷವಾಗಿ ಪರಿಶಿಷ್ಟ ಮತ್ತು ಕೆಳ(ಬಡ)ವರ್ಗಗಳ ಮಹಿಳೆಯರ ಪ್ರಾತಿನಿಧ್ಯವನ್ನು ರೂಪಿಸುತ್ತಿದೆ ಮತ್ತು ನಿಯಂತ್ರಿಸುತ್ತಿದೆ. ಪರಿಶಿಷ್ಟ ಮತ್ತು ಕೆಳ(ಬಡ)ವರ್ಗಗಳ ಮಹಿಳೆಯರು ದೈನಂದಿನ ಬದುಕಿನಲ್ಲಿ ಉನ್ನತ ವರ್ಗಗಳ ಪುರುಷರ ಮರ್ಜಿಯಲ್ಲಿ ಬದುಕಬೇಕಾದ ಸ್ಥಿತಿ[9] ಇರುವುದಕ್ಕೆ ಪೂರಕವಾಗಿ ಆದಾಯವಿಲ್ಲದ ಮತ್ತು ಕಡಿಮೆ(ರೂ.30,000) ಆದಾಯವಿರುವ ಶೇ.87ರಷ್ಟು ಮಹಿಳೆಯರು ಚುನಾವಣೆಗೆ ಸ್ಪರ್ಧಿಸಿರುವು ಈ ಅಧ್ಯಯನದಲ್ಲಿ ನಿರುತವಾಗಿದೆ. ಅಲ್ಲದೇ ಪಂಚಾಯಿತಿಗೆ ಜನಪ್ರತಿನಿಧಿಗಳಾಗಿ ಆಯ್ಕೆಯಾಗುವ ಬಹುಪಾಲು ಮಹಿಳೆಯರು ಅನಕ್ಷರಸ್ಥ[10] ಮತ್ತು ಪ್ರಾಥಮಿಕ ಹಂತದ ಶಿಕ್ಷಣ ಪಡೆದವರಾಗಿದ್ದಾರೆ. ಮೇಲ್ವರ್ಗದ ಮತ್ತು ಹೆಚ್ಚು ಶಿಕ್ಷಣ ಪಡೆದ ಮಹಿಳೆಯರು ಗ್ರಾಮಪಂಚಾಯಿತಿ ಪ್ರಾತಿನಿಧ್ಯವನ್ನು ಪಡೆಯುವಲ್ಲಿ ಆಸಕ್ತಿ ತೋರುತ್ತಿಲ್ಲ. ಕಾರಣ ಶಿಕ್ಷಿತ ಮತ್ತು ಶ್ರೀಮಂತ ಮಹಿಳೆಯರು ಪಂಚಾಯಿತಿ ಪ್ರಾತಿನಿಧ್ಯ ಪಡೆಯಲು ಆ ಕುಟುಂಬದ ಪುರುಷರಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಮತ್ತು ಪ್ರತಿಷ್ಠೆಗಳು ಅಡ್ಡಿಯಾಗುತ್ತಿವೆ[11] ಎಂಬ ವಾದವೂ ಇದೆ. ಹೀಗಾಗಿ ಗ್ರಾಮೀಣ ಮಹಿಳೆಯರು ಅವರ ಸ್ವನಿರ್ಧಾರದಿಂದ ಪಂಚಾಯಿತಿ ಪ್ರಾತಿನಿಧ್ಯ ಪಡೆಯುವಷ್ಟು ಸ್ವತಂತ್ರರಾಗಿಲ್ಲ. ಆದ್ದರಿಂದ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯದಲ್ಲಿ ಪರಿಶಿಷ್ಟ ಮತ್ತು ಕೆಳ(ಬಡ)ವರ್ಗಗಳ ಮಹಿಳೆಯರ ಸಿಂಹಪಾಲು ಕಂಡುಬರುತ್ತದೆ. ಆದರೆ ಬಡ ಮಹಿಳಾ ಸದಸ್ಯರ ಭಾಗವಹಿಸುವಿಕೆಯನ್ನು ಅಪ್ರಮುಖವಾಗಿ ಕಾಣಲಾಗುತ್ತದೆ[12] ಎಂಬ ವಾದವು ಇದೆ. ಮನೆ, ಗಂಡ ಹಾಗೂ ಮಕ್ಕಳು ಇತ್ಯಾದಿ ಮಿತಿಗಳನ್ನು ಮೀರಿದವರು ಅಥವಾ ಇವೆಲ್ಲವನ್ನು ಪೂರೈಸಿ ಇನ್ನೇನು ವಾನಪ್ರಸ್ಥಕ್ಕೆ ರೆಡಿಯಾದಂತಹ ಮಹಿಳೆಯರು[13] ಜನಪ್ರತಿನಿಧಿಗಳಾಗಿ ಆಯ್ಕೆಯಾಗುವ ಪ್ರಮೇಯವು ಬದಲಾಗಿದೆ. ಇಂದು ಗ್ರಾಮಪಂಚಾಯಿತಿಗಳಿಗೆ ಜನಪ್ರತಿನಿಧಿಗಳಾಗಿ ಆಯ್ಕೆಯಾಗುವ ಮಹಿಳೆಯರಲ್ಲಿ ಬಹುತೇಕರು 25ರಿಂದ 45(18ರಿಂದ 50) ವರ್ಷದೊಳಿಗಿನವರಾಗಿರುವುದು[14] ಈ ಅಧ್ಯಯನದಲ್ಲಿ ನಿರೂಪಿತವಾಗಿದೆ. ಈ ಬೆಳವಣಿಗೆ ಮಹಿಳಾ ಸಬಲೀಕರಣಕ್ಕೆ ದಿಕ್ಸೂಚಿಯಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನದ ಫಲಿತಗಳು ಕೆಳಕಂಡಂತಿವೆ.

- ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯವು ಸ್ವನಿರ್ಧಾರದಿಂದ ರೂಪಿತವಾಗುತ್ತಿಲ್ಲ.
- ಗ್ರಾಮೀಣ ಮಹಿಳೆಯರು ಸ್ವನಿರ್ಧಾರದಿಂದ ಪಂಚಾಯಿತಿ ಪ್ರಾತಿನಿಧ್ಯ ಪಡೆಯುವಷ್ಟು ಸ್ವತಂತ್ರರಾಗಿಲ್ಲ.
- ಗ್ರಾಮೀಣ ಪರಿಸರದಲ್ಲಿ ಊಳಿಗಮಾನ್ಯ ಮತ್ತು ಪುರುಷ ಯಾಜಮಾನ್ಯ ವ್ಯವಸ್ಥೆ ಮಹಿಳಾ ಪ್ರಾತಿನಿಧ್ಯವನ್ನು ರೂಪಿಸುತ್ತದೆ.
- ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿ ಪುರುಷ ವರ್ಗವು ಪರಿಶಿಷ್ಟ ಮತ್ತು ಕೆಳ(ಬಡ)ವರ್ಗಗಳ ಮಹಿಳಾ ಪ್ರಾತಿನಿಧ್ಯವನ್ನು ನಿಯಂತ್ರಿಸುತ್ತಿದೆ.
- ದೈನಂದಿನ ಬದುಕಿನಲ್ಲಿ ದಲಿತ ಮತ್ತು ಹಿಂದುಳಿದ ಮಹಿಳೆಯರು ಉನ್ನತ ವರ್ಗಗಳ ಪುರುಷರ ಮರ್ಜಿಯಲ್ಲಿ ಬದುಕುತ್ತಿದ್ದಾರೆ.
- ಮೇಲ್ವರ್ಗದ ಮತ್ತು ಉನ್ನತ ಶಿಕ್ಷಣ ಪಡೆದ ಮಹಿಳೆಯರು ಗ್ರಾಮಪಂಚಾಯಿತಿ ಪ್ರಾತಿನಿಧ್ಯವನ್ನು ಪಡೆಯುವಲ್ಲಿ ಆಸಕ್ತಿ ತೋರುತ್ತಿಲ್ಲ.
- ಶಿಕ್ಷಿತ ಮತ್ತು ಶ್ರೀಮಂತ ಕುಟುಂಬದ ಮಹಿಳೆಯರಿಗೆ ಪಂಚಾಯಿತಿ ಪ್ರಾತಿನಿಧ್ಯ ಪಡೆಯಲು ಕುಟುಂಬದ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಮತ್ತು ಪ್ರತಿಷ್ಠೆಗಳು ಅಡ್ಡಿಯಾಗುತ್ತಿವೆ.
- ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯದಲ್ಲಿ ಪರಿಶಿಷ್ಟ ಮತ್ತು ಕೆಳ(ಬಡ)ವರ್ಗಗಳ ಮಹಿಳೆಯರ ಸಿಂಹಪಾಲು ಕಂಡುಬರುತ್ತದೆ.
- ಇಂದು ಜನಪ್ರತಿನಿಧಿಗಳಾಗಿ ಆಯ್ಕೆಯಾಗುವ ಮಹಿಳೆಯರಲ್ಲಿ ಬಹುತೇಕರು ವಯಸ್ಕರಾಗಿದ್ದಾರೆ.

ಒಟ್ಟಾರೆಯಾಗಿ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಪ್ರಧಾನ ಸಾಧನವಾಗಿ ಕಂಡುಬರುವ ಮತದಾನ, ಉಮೇದುವಾರಿಕೆ ಮತ್ತು ಗ್ರಾಮಸಭೆಗಳಲ್ಲಿ ಮಹಿಳಾ ಸ್ವನಿರ್ಧಾರಕ್ಕಿಂತ ಪುರುಷರ ಮಧ್ಯಸ್ಥಿಕೆ ಹೆಚ್ಚಾಗಿ ಕಂಡುಬರುತ್ತದೆ. ಸಮಾಜದ ಅಂಚಿನಲ್ಲಿರುವ ಬಹುಪಾಲು ಮಹಿಳೆಯರು ಪಂಚಾಯಿತಿಯ ಪ್ರಾತಿನಿಧ್ಯ ಪಡೆಯುವಲ್ಲಿ ಮತ್ತು ಗ್ರಾಮೀಣ ಆಡಳಿತದಲ್ಲಿ ಅಧಿಕಾರ ಅಥವಾ ಸ್ವನಿರ್ಧಾರವನ್ನು ಚಲಾಯಿಸಲು ಸಾಧ್ಯವಾಗುತ್ತಿಲ್ಲ. ಸಂವಿಧಾನಾತ್ಮವಾಗಿ ಪಂಚಾಯಿತಿಗಳಲ್ಲಿ ಪ್ರಾತಿನಿಧ್ಯದಲ್ಲಿ ಮಹಿಳಾ ಸಹಭಾಗಿತ್ವ ಕಂಡುಬಂದರೂ ನಿರ್ಧಾರ ಪ್ರಕ್ರಿಯೆಯಲ್ಲಿ ಮಹಿಳೆಯರು ಇಲ್ಲವಾಗಿದ್ದಾರೆ. ಹೀಗಾಗಿ 73ನೇ ತಿದ್ದುಪಡಿಯ ಲಾಭವು ಮಹಿಳೆಯರ ಸದಸ್ಯತ್ವಕ್ಕಷ್ಟೇ ಸೀಮಿತವಾಗಿದೆಯೇ ಹೊರತು ಮಹಿಳಾ ಸಬಲೀಕರಣದ ರೂಪದಲ್ಲಿ ಕಂಡುರುತ್ತಿಲ್ಲ. ಪಂಚಾಯಿತಿಗಳಲ್ಲಿ ಮಹಿಳಾ ಮೀಸಲಾತಿ ಪ್ರಾತಿನಿಧ್ಯಕ್ಕೆ ಸಾಧನವೇ ಹೊರತು ಅದುವೇ ಸಬಲೀಕರಣವಲ್ಲ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಮಹಿಳೆ ಸ್ವನಿರ್ಧಾರಕ್ಕೆ ಬದ್ಧವಾಗಿ ನಿರ್ಧಾರದ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದೇ ಸಬಲೀಕರಣ. ಪ್ರಾತಿನಿಧ್ಯ ಕೊಡುಗೆ ಅಲ್ಲ. ಅದು ಹಕ್ಕಾಗಬೇಕು. ಪಂಚಾಯಿತಿಯಲ್ಲಿ ರಾಜಕೀಯವಾಗಿ ನಿರ್ಧಾರ ತೆಗೆದುಕೊಳ್ಳುವ ಮತ್ತು ದಕ್ಕಿಸಿಕೊಳ್ಳುವ ಶಕ್ತಿ ಮಹಿಳೆಯರಲ್ಲಿ ಬರಬೇಕು. ಹೀಗೆ ಆದಾಗ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ.

7.3 ಮಹಿಳಾ ಸಬಲೀಕರಣ: ಸಲಹೆಗಳು

ಈ ಅಧ್ಯಯನದಲ್ಲಿ ಕಂಡುಬಂದ ಫಲಿತಗಳ ಆಧಾರದ ಮೇರೆಗೆ ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯದ ಮೂಲಕ ಮಹಿಳಾ ಸಬಲೀಕರಣವನ್ನು ಕಂಡುಕೊಳ್ಳಲು ಈ ಕೆಳಗಿನ ಸಲಹೆಗಳನ್ನು ಸೂಚಿಸಲಾಗಿದೆ.

1. ಗ್ರಾಮಪಂಚಾಯಿತಿಗಳಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಸ್ವನಿರ್ಧಾರದಂತೆ ರೂಪಿಸಲು ಮೇಲ್ಮಟ್ಟದ ಸರ್ಕಾರಗಳಲ್ಲಿ ನೀಡುವ ಸ್ಥಾನಮಾನ, ಸೌಲಭ್ಯ ಮತ್ತು ರಕ್ಷಣೆಗಳನ್ನು ಗ್ರಾಮಪಂಚಾಯಿತಿಗಳ ಮಟ್ಟದಲ್ಲಿ ಒದಗಿಸುವುದು.

2. ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಮಹಿಳೆಯರು ಸ್ವನಿರ್ಧಾರದಂತೆ ಸ್ಪರ್ಧಿಸುವಂತೆ ಪ್ರೋತ್ಸಾಹಿಸುವುದು ಮತ್ತು ಅದಕ್ಕೆ ಬೇಕಾದಂತ ಪರಿಸರ ಮತ್ತು ಪ್ರಚಾರವನ್ನು ಮಾಡುವುದು.

3. ಜಿಲ್ಲಾಪಂಚಾಯಿತಿ ಮತ್ತು ತಾಲೂಕುಪಂಚಾಯಿತಿಗಳ ಚುನಾವಣಾ ಕ್ಷೇತ್ರಗಳಂತೆ ಗ್ರಾಮಪಂಚಾಯಿತಿ ಚುನಾವಣಾ ಕ್ಷೇತ್ರಗಳನ್ನು ಏಕವ್ಯಕ್ತಿ ಕ್ಷೇತ್ರಗಳನ್ನಾಗಿ ರಚಿಸುವುದು ಅಥವಾ ಪ್ರತ್ಯೇಕ ಮಹಿಳಾ ಕ್ಷೇತ್ರಗಳನ್ನು ರಚಿಸುವುದು.

4. ಗ್ರಾಮೀಣ ಮಹಿಳೆಯರನ್ನು ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸುವಂತೆ ಶಿಕ್ಷಿತರನ್ನಾಗಿಸುವುದು ಮತ್ತು ಸಂಘಟಿತರನ್ನಾಗಿಸುವುದು.

5. ಜಿಲ್ಲಾಪಂಚಾಯಿತಿ ಮತ್ತು ತಾಲೂಕುಪಂಚಾಯಿತಿಗಳ ಚುನಾವಣೆಗಳಂತೆ ಗ್ರಾಮಪಂಚಾಯಿತಿ ಚುನಾವಣೆಗಳನ್ನು ಪಕ್ಷದ ಚಿಹ್ನೆ ಮೇಲೆ ಅಥವಾ ಪಕ್ಷಾಧಾರಿತವಾಗಿ ನಡೆಸುವುದು.

6. ಗ್ರಾಮೀಣ ಮಹಿಳೆಯರಲ್ಲಿ ಗ್ರಾಮಪಂಚಾಯಿತಿಯ ಆಂತರಿಕ ಮತ್ತು ಬಾಹ್ಯ ಸಭೆಗಳಲ್ಲಿ ಪ್ರಾತಿನಿಧ್ಯ ಮತ್ತು ಸ್ವನಿರ್ಧಾರದ ಅರಿವು ಮತ್ತು ಪ್ರಾಮುಖ್ಯತೆಯನ್ನು ಮೂಡಿಸುವುದು.

7. ಸಾಮಾನ್ಯಸಭೆ ಮತ್ತು ಗ್ರಾಮಸಭೆಗಳಲ್ಲಿ ಮಹಿಳಾ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಮತದಾರರಿಗೆ ತಜ್ಞರಿಂದ ಅಥವಾ ಸಂಪನ್ಮೂಲ ವ್ಯಕ್ತಿಗಳಿಂದ ಕಮ್ಮಟ ನಡೆಸುವುದು.

8. ಗ್ರಾಮಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಿಸಲು ಮಹಿಳಾ ಸಮಸ್ಯೆಗಳಿಗೆ ಒತ್ತು ಕೊಟ್ಟು ಪರಿಹಾರಕ್ಕಾಗಿ ಅವರ ಜೊತೆ ಚರ್ಚಿಸುವುದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುವುದು.

ಈ ಮೇಲೆ ಸೂಚಿಸಿದ ಸಲಹೆಗಳು ಗ್ರಾಮಪಂಚಾಯಿತಿಗಳಲ್ಲಿ ಕಂಡುಬಂದಲ್ಲಿ ಕಾಲಕ್ರಮೇಣವಾಗಿ ಪಂಚಾಯಿತಿಗಳ ಪ್ರಾತಿನಿಧ್ಯ ಮತ್ತು ಆಡಳಿತದ ಪ್ರಕ್ರಿಯೆಗಳಲ್ಲಿ ಮಹಿಳೆಯರ ಸ್ವನಿರ್ಧಾರದ ಪ್ರಮಾಣ ಹೆಚ್ಚಾಗಬಹುದು.

ಗ್ರಾಮೀಣ ಪರಿಸರದಲ್ಲಿ ಮಹಿಳೆಯರು ಮೀಸಲಾತಿ ನಿಯಮದ ಮೂಲಕ ರಾಜಕೀಯ ಪ್ರಾತಿನಿಧ್ಯವನ್ನು ಪಡೆದಿದ್ದಾರೆ. ಆದರೆ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯದಲ್ಲಿ ಸ್ವನಿರ್ಧಾರವಿಲ್ಲವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಸಾಮಾಜಿಕ ಮತ್ತು ಆರ್ಥಿಕ ಪ್ರಾತಿನಿಧ್ಯ ಪಡೆಯುವುದಕ್ಕಿಂತ ಮುಂಚೆಯೇ ರಾಜಕೀಯ ಪ್ರಾತಿನಿಧ್ಯವನ್ನು ಪಡೆದುಕೊಂಡಿದ್ದಾಳೆ. ಮಹಿಳೆಯರಿಗೆ ಸಾಮಾಜಿಕ ಮತ್ತು ಆರ್ಥಿಕ ಪ್ರಾತಿನಿಧ್ಯ ಉತ್ತಮಗೊಳಿಸಲು ಕೆಲವು ಕಾರ್ಯಕ್ರಮಗಳು ಮತ್ತು ಕಾನೂನಿನ ಅವಕಾಶಗಳು ಜಾರಿಗೆ ಬಂದಿದ್ದರೂ ಅವು ಗ್ರಾಮೀಣ ಮಹಿಳೆಯರಿಗೆ ತಲುಪುವಲ್ಲಿ ಮತ್ತಷ್ಟು ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಸಮುದಾಯದ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಮತ್ತು ನಿರ್ಧಾರವನ್ನು ತೆಗೆದುಕೊಳ್ಳುವ ಮಹಿಳೆಯರ ಅರಿವಿನ ಮಟ್ಟವನ್ನು ಹೆಚ್ಚಿಸುವ ಯೋಜನೆಗಳು ಜಾರಿಗೊಂಡರೆ ಜನತಂತ್ರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಉದ್ದೇಶಿತ ವರ್ಗವನ್ನು ಸಬಲೀಕರಣಗೊಳಿಸುವ ಪ್ರಯತ್ನ ಸಫಲಗೊಳ್ಳಬಹುದು.

ಕೊನೆ ಟಿಪ್ಪಣಿ

1. ಮಹಿಪಾಲ್, *"ವೈ ರೀಥಿಂಕ್ ರೋಟೇಶನ್ ಆಫ್ ರಿರ್ಜವೇಷನ್ ಇನ್ ಪಂಚಾಯತ್ಸ್?"*, *ಇಕಾಮಿಕ್ಸ್ ಅಂಡ್ ಪೋಲಿಡಿಕಲ್ ವೀಕ್ಲಿ*, ಮುಂಬೈ: ಎ ಸಮೀಕ್ಷ ಟ್ರಸ್ಟ್ ಪಬ್ಲಿಕೇಶನ್, ಜೂನ್ 6–12, 2008, ಪು.71.
2. Thomas Isaac T. M & Richard W Franke, *Local Democracy and Development: People's Campaign for Decentralization Planning in Kerala,* New Delhi: Left Word Books, 2004, p.135–138.
3. ಸುಧಾ ಪಿಳ್ಳೈ, ಮಾಳ್ಕೋಡ್, *"ಮಹಿಳೆಯ ಸಬಲೀಕರಣ ಮತ್ತು ಪಂಚಾಯತ್‌ರಾಜ್",ಯೋಜನಾ,* ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಆಗಸ್ಟ್, ಸಂಪುಟ 27, ಸಂಚಿಕೆ 3, 2001, ಪು.42
4. ಮಹಿಪಾಲ್, ಪೂರ್ವೋಕ್ತ..
5. Sachchidananda Satpathi, *Women Empowerment and PanchayatRaj: A case Study of Orissa:* New Delhi: Indian Journal of Public Administration, 2002, p. 35.
6. O. P. Bohra, *Women in Decentralized Democracy- A Case Study of Tamil Nadu.* Googal: www. Wikipedia.com, Pdf.file, August 27, 2009, time:10.30am. date:15/6/2010., p.26.
7. Snehalata Panda, *Gender, Environment and Participation in Politics.* New Delhi: M.D Publication, 1995, p.198.

8. O. P. Bohra, ಪೂರ್ವೋಕ್ತ,.
9. ಟಿ.ಆರ್.ಚಂದ್ರಶೇಖರ, *"ಮಹಿಳಾ ವಿಶ್ವವಿದ್ಯಾಲಯ ಒಂದು ಚರ್ಚೆ"*, ಟಿ.ಆರ್.ಚಂದ್ರಶೇಖರ ಮತ್ತು ಎಂ. ಚಂದ್ರ ಪೂಜಾರಿ(ಸಂ), *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ*, ಹಂಪಿ: ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ, ಸಂಪುಟ-2, ಸಂಚಿಕೆ-2, ಜನವರಿ-ಜೂನ್. 2003, ಪು.7
10. Bidyut Mohanty, *Woman and Political Empowerment*. New Delhi: ISS, 2002, p.25.
11. ಸುಧಾ ಪಿಳ್ಳೈ, ಮಾಳ್ಕೋಡ್, ಪೂರ್ವೋಕ್ತ,.
12. P. Manikyamba, *Woman in Panchayat Structure-Promises and Performances*, The Indian Journal of Political Science, Vol.14, No.3-4, 1989, p.56.
13. ಎಂ. ಚಂದ್ರ ಪೂಜಾರಿ, *ದೇಶೀಯತೆಯ ನೆರಳಲ್ಲಿ ವಿಕೇಂದ್ರಿಕರಣ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, 2008, ಪು.200-201.
14. Devaki Jain, *"Woman: New Vision of Leadership"*, Dublin: A presentation at global forum. Googal: www. Wikipedia.com, Pdf.file, August 27, 2009, time: 9.45am, date:15/6/2010, p.21.

ಪರಾಮರ್ಶನ ಗ್ರಂಥಗಳು

Agarawal R.C, (1993), *Political Theory*, New Delhi: Sultan Chand & Co, Ltd.

Flammang Janet (Ed.),, (1984), *Political Woman-Current Role in State and Local Government,* London I: Sage publication.

Frederick Ebert Goyal, M.L, (1974), *Political Participation in a developing Nation,* Bombay: India Asia Publishing House.

George Maithue, (2000), *Status of Panchayat Raj in the States and Union Territories of India,* New Delhi: Institute of Social Science.

Gurumurthy. U, (1987), *Panchayati Raj and Weaker section,* New Delhi: Ashis Publication.

Johari J. C, (2002), *Foundation of Political Science,* Jalandhar: Shoban lal & Company.

Kanango Sukla Deb, (1996), *Panchayati Raj and Emerging Woman Leadeship: An overview,* Social Action, Vol-46.

Kapur A. C, (1993), *Principles of Political Science,* New Delhi: S. Chand & Co, Ltd,.

Laksmhi, (1993), *Woman and Politics-A Study in Political Participation,* Hyderabad: Book Link Corporation.

Leela Devi R. Prasad, (2003), *Politics on Woman questions,* Bangalore: Poornima Prakashana.

Leelamma Devasisa, (1994), *Empowering Women for sustainable development,* New Delhi: Ashish Publishing House.

Madhurinath, (2003), *Rural Women works for in India,* New Delhi: B.R.Publishing Corporation.

Meheta Ashok, (1979), *Report of the Committee on Panchayat Raj,* New Delhi, Govt. of India.

Narashima Sakuntala, (1999), *Empowering Woman-An Altranative Strategy from Rural India,* New Delhi: Gyan Publishing House.

Poonam Vats, (2004), *Political Participation and Attitudinal Transformation of Rural Woman*, Delhi: Abijeet Publications.

Saraswathi Mishra, (2002), *Status of Indian Women*, New Delhi: Gyan Publishing House.

Sharma S. P, (1993), *Modern Political Theory*, New Delhi: Vikas Publishing House Pvt. Ltd.

Srinivas M. N, (1978), *The Changing Position of Indian Woman*, New Delhi: Oxford University Press.

Stifung, (1993), *Woman in Politics: Forms and Process*, New Delhi: Har Anand Publishers.

Subrata K. Mitra, (1998), *Culture and Rationality: The Politics of Social Change in Post-colonial Inidia*, New Delhi: Sage Pulbications.

Thomas Isaac T. M & Richard W Franke, (2004), *Local Democracy and Development: People's Campaign for Decentralization Planning in Kerala*, New Delhi: Left Word Books.

Vishnu Bhagavan & Vidhya Bhushan, (2002), *Selected Constitutions*, New Delhi: Chand & *Sultan* Co.

ಅನಿರ್‌ಬಾನು ಕಶ್ಯಪ್, (1989), *ಪಂಚಾಯತ್‌ರಾಜ್: ವ್ಯೂಸ್ ಫೌಂಡಿಂಗ್ ಫಾದರ್ಸ್ ಅಂಡ್ ರೆಕಮೆಂಡೇಶನ್ ಆಫ್ ಡಿಫರೆಂಟ್ ಕಮಿಟೀಸ್*, ನ್ಯೂ ದೆಹಲಿ: ಲ್ಯಾನ್ಸರ್ ಬುಕ್ಸ್.

ಅಶೋಕ್ ಟಿ, (2008), *ಪ್ರೊಬ್ಲೆಮ್ಸ್ ಆ್ಯಂಡ್ ಪ್ರಾಸ್ಪೆಕ್ಟಸ್ ಆಫ್ ಎಂಪವರ್‌ಮೆಂಟ್ ಆಫ್ ದಿ ವೀಕರ್ ಸೆಕ್ಷನ್ಸ್: ದಿ ರೋಲ್ ಆಫ್ ದಿ ರೆಪ್ರೆಜೆಂಟೇಟಿವ್ ಆಫ್ ವೀಕರ್ ಸೆಕ್ಷನ್ಸ್ ಇನ್ ಗ್ರಾಮಪಂಚಾಯತ್ಸ್ ಇನ್ ರೂರಲ್ ಕರ್ನಾಟಕ*, ಬೆಂಗಳೂರು: ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಅಪ್ರಕಟಿತ ಪಿಹೆಚ್.ಡಿ ಪ್ರಬಂಧ.

ಅಶೋಕ್ ಹೊಸೂರು, (1994), *ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993*, ಗದಗ: ಮಾರುತಿ ಪ್ರಕಾಶನ.

ಕರಭಂಟನಾಳ ಎಸ್.ಜಿ ಮತ್ತು ಇತರು, (1971), *ಪಂಚಾಯತ್ ರಾಜ್ಯ*, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ, ಉಪನ್ಯಾಸ ಗ್ರಂಥಮಾಲೆ.

ಕೃಷ್ಣ ಜೆ, (2004), *ಮಾನವ ಅಭಿವೃದ್ಧಿಯ ಪ್ರಾದೇಶಿಕ ಆಯಾಮಗಳ ಅಧ್ಯಯನ*, ಹಂಪಿ: ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಅಪ್ರಕಟಿತ ಪಿಹೆಚ್.ಡಿ ಪ್ರಬಂಧ.

ಗವರ್ನಮೆಂಟ್ ಆಫ್ ಇಂಡಿಯಾ, (1957), *ರಿಪೋರ್ಟ್ ಎಕ್ಸ್‌ಟೆನ್‌ಶನ್ ಸರ್ವೀಸ್, ಚೇರ್‌ಪರ್ಸನ್: ಬಲವಂತರಾಯ್ ಮೆಹತಾ*, ನ್ಯೂ ದೆಹಲಿ: ಕಮಿಟಿ ಆನ್ ಪ್ಲಾನ್ ಪ್ರೊಜೆಕ್ಟ್ಸ್, ನ್ಯಾಶನಲ್ ಡೆವಲಪ್‌ಮೆಂಟ್ ಕೌನ್ಸಿಲ್.

ಗೀತಾ ಕೃಷ್ಣಮೂರ್ತಿ, (2000), *ಮಹಿಳೆ: ಕಾನೂನು ಮತ್ತು ರಾಜಕಾರಣ*, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

ಕಾನೂನು ಸೇವೆಗಳ ಸಮಿತಿ, (2005), *ಗ್ರಾಮಪಂಚಾಯಿತಿ ಸದಸ್ಯರಿಗಾಗಿ ಕಾನೂನು ಅರಿವು ನೆರವು(ಸಂ)*, ಹೊಸಪೇಟೆ: ತಾಲೂಕು ನ್ಯಾಯಾಲಯ ಸಂಕೀರ್ಣ.

ಚಂದ್ರ ಪೂಜಾರಿ ಎಂ, (2002), *ಸಮುದಾಯ ಮತ್ತು ಸಹಭಾಗಿತ್ವ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2004), *ಸಂಶೋಧನ ಪ್ರಸ್ತಾವ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2005), *ಸಮಾಜ ಸಂಶೋಧನೆ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2008), *ರಾಜಕೀಯದ ಬಡತನ*, ಹೊಸಪೇಟೆ: ಸಿದ್ಧಾರ್ಥ ಪ್ರಕಾಶನ.

--- (2008), *ದೇಶೀಯತೆಯ ನೆರಳಲ್ಲಿ ವಿಕೇಂದ್ರಿಕರಣ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2008), *ಜನಾಯೋಜನೆ: ಹೈದರಾಬಾದ್ ಕರ್ನಾಟಕದ ಅನುಭವಗಳು*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2008), *ಸಂಶೋಧನೆ ಜವಾಬ್ದಾರಿ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2009), *ಸಂಶೋಧನೆ ಏನು? ಏಕೆ? ಹೇಗೆ?* ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2010), ಕರ್ನಾಟಕದ ಪಂಚವಾರ್ಷಿಕ ಯೋಜನೆಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2010), *ಯಾಕೀಗ ಭೂಮಿ ಪ್ರಶ್ನೆ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2011), *ಕರ್ನಾಟಕ ಪಂಚಾಯತ್‌ರಾಜ್ ಸಮಸ್ಯೆ ಮತ್ತು ಪರಿಹಾರಗಳು*, ಬೆಂಗಳೂರು: ಕರ್ನಾಟಕ ರಾಜ್ಯ ಗ್ರಾಮಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಒಕ್ಕೂಟ.

ಚಂದ್ರಶೇಖರ ಟಿ. ಆರ್, (2000), *ಅನುಭಾವಿಗಳ ಕ್ರಾಂತಿ*(ಅನು), ಗದಗ: ವೀರಶೈವ ಅಧ್ಯಯನ ಸಂಸ್ಥೆ, ಡಂಬಳ.

--- (2003), *ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು*, ಬೆಂಗಳೂರು: ಸಿ.ವಿ.ಜಿ ಪಬ್ಲಿಕೇಶನ್ಸ್.

--- (2005), *ಜನರ ಯೋಜನೆ ಕರ್ನಾಟಕದ ಅನುಭವಗಳು*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2007), *ಕರ್ನಾಟಕ ಅಭಿವೃದ್ಧಿ ಆಕೃತಿ*, ಪಲ್ಲವ ಪ್ರಕಾಶನ, ಚನ್ನಪಟ್ಟಣ.

--- (2007), *ಜನರನ್ನು ಒಳಗೊಳ್ಳುವ ಅಭಿವೃದ್ಧಿ(ಹೈದರಾಬಾದ್-ಕರ್ನಾಟಕ ಪ್ರದೇಶ)*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2008), *ಲಿಂಗಸಂಬಂಧಿ ಅಭಿವೃದ್ಧಿ ಅಧ್ಯಯನ ಪ್ರಬಂಧಗಳು*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಮಂಟಪಮಾಲೆ-160,

--- (2009), *ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರಿಗಳ ಸಮಿತಿ ವರದಿ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2009), *ಕರ್ನಾಟಕದಲ್ಲಿ ಮಹಿಳೆಯರ ಸಾಕ್ಷರತೆ ಮತ್ತು ಲಿಂಗಸಂಬಂಧಿ ಸ್ವರೂಪ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2010), *ಲಿಂಗಸಂಬಂಧಗಳು ಮತ್ತು ಅಭಿವೃದ್ಧಿ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2010), *ಧರೆ ಹತ್ತಿ ಉರಿದರೆ: ಪ್ರಚಲಿತ ಕರ್ನಾಟಕ ಕುರಿತ ಬರಹಗಳು*, ಚನ್ನಪಟ್ಟಣ: ಪಲ್ಲವ ಪ್ರಕಾಶನ.

--- (2010), *ಹಕ್ಕು-ಹಂಗು: ಅಭಿವೃದ್ಧಿ ಅಧ್ಯಯನ ಪ್ರಬಂಧಗಳು*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2001), *ಮಹಿಳೆ, ಆರ್ಥಿಕತೆ ಮತ್ತು ಅಭಿವೃದ್ಧಿ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2005), (ಸಂ), *ದಲಿತ ಅಧ್ಯಯನ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಚನ್ನಪ್ಪ ಕೆ, (2003), *ಭಾರತದ ಸಂವಿಧಾನ ಮತ್ತು ಸರ್ಕಾರ*, ಹೊಸಪೇಟೆ; ಶ್ರೀ ಹರ್ಷವರ್ಧನ ಪ್ರಕಾಶನ.

ತುಕಾರಾಮ್ ಎಸ್, (2003), (ಸಂ), *ಗ್ರಾಮ ಸಂಗಾತಿ*, ಮೈಸೂರು: ಅಬ್ದುಲ್ ನಜೀರ್ ಸಾಬ್, ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ.

ಪಾಟಿಲ್ ಎನ್. ಬಿ ಮತ್ತು ಶೀಲವಂತ ಜಿ. ಬಿ, (2005), *ರಾಜಕೀಯ ಸಿದ್ಧಾಂತ ಮತ್ತು ಪಾಶ್ಚಿಮಾತ್ಯ ರಾಜಕೀಯ ಚಿಂತನೆ*, ಬಾಗಲಕೋಟೆ: ಅರುಣ ಪ್ರಕಾಶನ.

ಪಾಟೀಲ್ ಎನ್. ಬಿ, (1994), *ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದ ಆಡಳಿತ ಸಂಸ್ಥೆಗಳು*, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಉಪನ್ಯಾಸ ಗ್ರಂಥಮಾಲೆ-427.

ಬಡ್ಡಿ ಎಂ.ಎಂ, (1994), *ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ 1993*, ಧಾರವಾಡ: ಆಕಳವಾಡಿ ಬುಕ್ ಡಿಪೋ.

ಭಾಜಪೈ ಮತ್ತು ವರ್ಮ, (1995), *ಪಂಚಾಯತ್‌ರಾಜ್ ಇನ್ ಇಂಡಿಯಾ*, ನ್ಯೂ ದೆಹಲಿ: ಎ ನ್ಯೂ ಟ್ರಸ್ಟ್, ವ್ಯಾಲ್ಯೂಮ್-1.

ಮಹದೇವ ಸಿ ಮತ್ತು ಇತರರು, (2002), *ಹೊಸಪೇಟೆ ತಾಲೂಕು ದರ್ಶನ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಮಹಮೂದ್ ಟಿ.ಕೆ, (1987), *ಸಿದ್ದಾಪುರ ತಾಲೂಕು ದರ್ಶನ*, ಬೆಂಗಳೂರು: ಐಬಿಎಚ್ ಪ್ರಕಾಶನ,

ಮೋಹನ್ ಹೆಚ್. ಎಲ್, (2003), (ಸಂ), *ನೂರಾರು ಪ್ರಶ್ನೆಗಳು*, ಮೈಸೂರು: ಅಬ್ದುಲ್ ನಜೀರ್‌ಸಾಬ್, ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ.

ಯರಿಸ್ವಾಮಿ ಎಂ, (2002), *ಗ್ರಾಮಪಂಚಾಯಿತಿ ಮತ್ತು ಸಬಲೀಕರಣ*, ಹಂಪಿ: ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಅಪ್ರಕಟಿತ ಪಿಹೆಚ್.ಡಿ ಪ್ರಬಂಧ.

ರಾಜಶೇಖರ್, (2001), *ಭಾರತೀಯ ಸಮಾಜ*, ಶಿವಮೊಗ್ಗ: ಭ್ರಮರ ಪ್ರಕಾಶನ.

ರಾಜಶೇಖರ ಹೆಚ್. ಎಂ, (2006), *ಭಾರತದ ಸರ್ಕಾರ ಮತ್ತು ರಾಜಕೀಯ*, ಮೈಸೂರು:ಕಿರಣ ಪ್ರಕಾಶನ.

ವರ್ಲ್ಡ್ ಬ್ಯಾಂಕ್, (2000), *ಓವರ್ ವ್ಯೂ ಆಫ್ ರೂರಲ್ ಡಿಸೆಂಟ್ರಲೈಜೇಷನ್ ಇನ್ ಇಂಡಿಯಾ*, ನ್ಯೂ ದೆಹಲಿ: ವ್ಯಾಲೂಮ್-3.

ಲೀಲಾದೇವಿ ಆರ್ ಪ್ರಸಾದ್, (2003), *20ನೇ ಶತಮಾನದ ಕರ್ನಾಟಕ ರಾಜಕೀಯ ಕ್ಷೇತ್ರದಲ್ಲಿ ಮಹಿಳೆ,* ಬೆಂಗಳೂರು: ಆರತಿ ಪಬ್ಲಿಕೇಷನ್.

ವೆಂಕಟರಂಗಯ್ಯ ಎಂ ಮತ್ತು ಪಟ್ಟಾಭಿರಾಮ ಎಂ, (1969), *ಲೋಕಲ್ ಗವರ್ನಮೆಂಟ್ ಇನ್ ಇಂಡಿಯಾ: ಸೆಲೆಕ್ಟ್ ರೀಡಿಂಗ್,* ನ್ಯೂ ದೆಹಲಿ: ಅಲೈಡ್ ಪಬ್ಲಿಷರ್ಸ್.

ವೆಂಕಟೇಶ್‌ರಾವ್ ವಿ ಮತ್ತು ಹಜರಿಕಾ ಎನ್, (1980), *ಲೋಕಲ್ ಸೆಲ್ಫ್ ಗವರ್ನ್‌ಮೆಂಟ್ ಇನ್ ಇಂಡಿಯಾ,* ನ್ಯೂ ದೆಹಲಿ: ಎಸ್. ಚಾಂದ್ ಆಂಡ್ ಕಂ.

ಶ್ರೀಧರ ಎ, (2006), *ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು,* ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2000), *ಪಂಚಾಯತ್‌ರಾಜ್ ಕಾಯ್ದೆಗಳು,* ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

--- (2002), *ವಿಕೇಂದ್ರೀಕರಣ ಮತ್ತು ಪಂಚಾಯತ್,* ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಶೈಲಜ ಎಂ.ಸಿ ಮತ್ತು ಇತರರು, (2010), *ಜನಾಧಿಕಾರ,* ಮೈಸೂರು: ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ,

ಸುಬ್ಬರಾಯ ಟಿ. ಎಂ, (1987), *ಶಿರಿಸಿ ತಾಲೂಕು ದರ್ಶನ,* ಬೆಂಗಳೂರು: ಐ.ಬಿ.ಎಚ್ ಪ್ರಕಾಶನ,

ಸುರೇಶ್. ಕೆ. ಜೆ, (2006), *ಭಾರತದ ರಾಜಕೀಯ ಚಿಂತನೆ,* ಮೈಸೂರು: ಲಕ್ಷ್ಮಿ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್.

ಸೈಯದ್ ಜಮೀರುಲ್ಲಾ ಷರೀಫ್, (1986), *ಕಾರವಾರ ತಾಲೂಕು ದರ್ಶನ,* ಬೆಂಗಳೂರು: ಐ.ಬಿ.ಎಚ್ ಪ್ರಕಾಶನ.

--- (1986), *ಭಟ್ಕಳ ತಾಲೂಕು ದರ್ಶನ,* ಬೆಂಗಳೂರು: ಐ.ಬಿ.ಎಚ್ ಪ್ರಕಾಶನ.

ಸಂಗೀತ ಗಾಂವಕರ್, (2010), *ಹಾಲಕ್ಕಿ ಮಹಿಳೆಯರ ಸಾಮಾಜಿಕ, ಆರ್ಥಿಕ ಪರಿವರ್ತನೆ ನೆಲೆಗಳು,* ಹಂಪಿ: ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಅಪ್ರಕಟಿತ ಪಿಹೆಚ್.ಡಿ ಪ್ರಬಂಧ.

ಹನುಮಂತು ಪ್ರೊ ಮತ್ತು ಇತರರು, (2004), *ಕರ್ನಾಟಕ ಪಂಚಾಯತ್‌ರಾಜ್ ವ್ಯವಸ್ಥೆಯ ಸಶಕ್ತೀಕರಣ: ಜನಾಂದೋಲನಕ್ಕೆ ಆಹ್ವಾನ,* ರಾಣೆಬೆನ್ನೂರು: ಗ್ರಾಮರಾಜ್ಯ ವೇದಿಕೆ,

ಹಿರೇಮಠ ಎಸ್. ಜಿ, (2008), *ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ,* ಸಿಂದಗಿ: ಪ್ರದೀಪ ಪ್ರಕಾಶನ,

ಲೇಖನಗಳು

ಓಂಕಾರ ಕಾಕಡೆ, (2008), *"ಹಿಂದುಳಿದ ಪ್ರದೇಶದ ಮಹಿಳೆಯರ ಸಮಸ್ಯೆಗಳು ಮತ್ತು ಪರಿಹಾರಗಳು"*, *ಯೋಜನಾ*, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಡಿಸೆಂಬರ್.

--- ಮತ್ತು ಇತರರು, (2011), *"ಪಂಚಾಯತ್‌ರಾಜ್: ಮಹಿಳಾ ಸಬಲೀಕರಣ ಮತ್ತು ಮಾಧ್ಯಮ"*, *ಯೋಜನಾ*, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಫೆಬ್ರವರಿ.

ಚಂದ್ರಶೇಖರ ಟಿ. ಆರ್, (2003), *"ಮಹಿಳಾ ವಿಶ್ವವಿದ್ಯಾಲಯ ಒಂದು ಚರ್ಚೆ"*, ಚಂದ್ರಶೇಖರ ಟಿ. ಆರ್ ಮತ್ತು ಚಂದ್ರ ಪೂಜಾರಿ. ಎಂ, (ಸಂ), *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಸಂಪುಟ–2, ಸಂಚಿಕೆ–2, ಜನವರಿ–ಜೂನ್.

--- (2005), *"ಪ್ರಚಲಿತ ಕರ್ನಾಟಕ: ಗ್ರಾಮಪಂಚಾಯಿತಿ: ಪ್ರಸ್ತುತ ಸಮಸ್ಯೆಗಳು"*, ಚಂದ್ರಶೇಖರ. ಟಿ. ಆರ್ ಮತ್ತು ಇತರರು, (ಸಂ), *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ–6*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಸಂಪುಟ–3, ಸಂಚಿಕೆ–2.

--- (2006), *"ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ"*, ಎ. ಶ್ರೀಧರ ಮತ್ತು ಎಚ್.ಡಿ. ಪ್ರಶಾಂತ, (ಸಂ), ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಸಂಪುಟ–5, ಸಂಚಿಕೆ–2, ಜುಲೈ–ಡಿಸೆಂಬರ್.

--- (2006), *"ಅಸ್ಪೃಶ್ಯತೆ, ಆರ್ಥಿಕತೆ ಮತ್ತು ಅಭಿವೃದ್ಧಿ"*, ಎ. ಶ್ರೀಧರ ಮತ್ತು ಎಚ್.ಡಿ. ಪ್ರಶಾಂತ, (ಸಂ), ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಸಂಪುಟ–4, ಸಂಚಿಕೆ–3.

--- (2006), *"ಕರ್ನಾಟಕದ ಅಭಿವೃದ್ಧಿ 50 ವರ್ಷಗಳ ಹಾಡು ಪಾಡು"*, *ಹೊಸತು*, ಬೆಂಗಳೂರು: ನವಕರ್ನಾಟಕ ಪಬ್ಲಿಕೇಶನ್, ವಿಶೇಷ ಸಂಚಿಕೆ.

--- (2006), *"ಆರ್ಥಿಕ ಸಮೀಕ್ಷೆ"*, *ಹೊಸತು*, ಬೆಂಗಳೂರು: ನವಕರ್ನಾಟಕ ಪಬ್ಲಿಕೇಶನ್. ಸಂಚಿಕೆ–6.

ಚಂದ್ರ ಪೂಜಾರಿ ಎಂ, (2006), *"ಭವಿಷ್ಯದ ಸುವರ್ಣ ಕರ್ನಾಟಕ"*, ಎ. ಶ್ರೀಧರ ಮತ್ತು ಪ್ರಶಾಂತ ಎಚ್.ಡಿ, (ಸಂ) *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಸಂಪುಟ–5, ಸಂಚಿಕೆ–2.

ಚಾಮರಾಜ ಸವಡಿ, (2010), *"ಕರ್ನಾಟಕ ಏಕೀಕರಣ"*, *ಜನಪದ*, ಬೆಂಗಳೂರು: ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ, ನವಂಬರ್.

ಜಾರ್ಜ್ ಮ್ಯಾಥ್ಯೂ ಮತ್ತು ನಾಗರಾಜ ವಿ, (2011), *"ಹೊಸತನಕ್ಕೆ ಕಾದಿರುವ ಪಂಚಾಯತ್‌ರಾಜ್ ವ್ಯವಸ್ಥೆ"*, *ಯೋಜನಾ*, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಫೆಬ್ರುವರಿ, ಸಂಪುಟ–27.

ಜೈದೇವಪ್ಪ ಜೈನಕೇರಿ, (2011), *"ಕರ್ನಾಟಕ ಏಕೀಕರಣದಲ್ಲಿ-ಕರ್ನಾಟಕ ಸಂಘಗಳ ಪಾತ್ರ"*, ನಲ್ನುಡಿ, ಬೆಂಗಳೂರು: ಕರವೇ, ಫೆಬ್ರುವರಿ, ಸಂಪುಟ 1, ಸಂಚಿಕೆ 10.

ಥಾಮಸ್ ಐಸಾಕ್. ಟಿ. ಎಂ, ರಿಚರ್ಡ್ ಡಬ್ಲ್ಯು ಫ್ರಾಂಕ್, (2002), *"ಪೀಪಲ್ಸ್ ಕ್ಯಾಂಪೈನ್ ಫಾರ್ ಡಿಸೆಂಟ್ರಲೈಸ್ಡ್ ಪ್ಲ್ಯಾನಿಂಗ್ ಇನ್ ಕೇರಳ"*, ಚಂದ್ರಶೇಖರ ಟಿ. ಆರ್ ಮತ್ತು ಚಂದ್ರ ಪೂಜಾರಿ. ಎಂ, (ಸಂ), ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಸಂಪುಟ-1, ಸಂಚಿಕೆ-2.

ನಾಗೇಂದ್ರ ಖಾರ್ವೆ, (2010), *"ಕರ್ನಾಟಕ ದರ್ಶನ, ಉತ್ತರ ಕನ್ನಡ ಜಿಲ್ಲೆ ದರ್ಶನ"*, *ಪ್ರಜಾವಾಣಿ:* ವಿಶೇಷ ಪುರವಾಣಿ, ದಿನಾಂಕ: 25/2/2010.

ನಿರ್ಮಲ ಬುಚ್, (2009), *"ರಿಝರ್ವೇಶನ್ ಫಾರ್ ವುಮೆನ್ ಇನ್ ಪಂಚಾಯತ್: ಎ ಸಾಪ್ ಇನ್ ಡಿಸ್‌ಗೈಜ್?"*, ಇಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಮುಂಬೈ: ಎ ಸಮೀಕ್ಷ ಟ್ರಸ್ಟ್ ಪಬ್ಲಿಕೇಶನ್, ಅಕ್ಟೋಬರ್, 3-9.

ಭೋಗೇಶ್ವರಪ್ಪ ಕೆ. ಆರ್, (2010), *"ಪಂಚಾಯತ್‌ರಾಜ್ ವ್ಯವಸ್ಥೆ ವಿಕಾಸ"*, *ಯೋಜನಾ*, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ನವೆಂಬರ್, ಸಂಪುಟ 27, ಸಂಚಿಕೆ 4,

ಮಹಿಪಾಲ್, (2008), *"ವೈ ರೀಥಿಂಕ್ ರೋಟೇಶನ್ ಆಫ್ ರಿರ್ಜವೇಷನ್ ಇನ್ ಪಂಚಾಯತ್ಸ್?"*, ಇಕಾಮಿಕ್ಸ್ ಅಂಡ್ ಪೋಲಿಡಿಕಲ್ ವೀಕ್ಲಿ, ಮುಂಬೈ: ಎ ಸಮೀಕ್ಷ ಟ್ರಸ್ಟ್ ಪಬ್ಲಿಕೇಶನ್, ಜೂನ್ 6-12.

ಯರಿಸ್ವಾಮಿ. ಎಂ, (2005), *"ಗ್ರಾಮಪಂಚಾಯಿತಿ ಮತ್ತು ಸಬಲೀಕರಣ"*, ಎ. ಶ್ರೀಧರ, (ಸಂ) *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಸಂಪುಟ-4, ಸಂಚಿಕೆ-2, ಜುಲೈ-ಡಿಸೆಂಬರ್.

ಲಕ್ಷ್ಮೀನಾರಾಯಣ ಎಸ್. ವಿ, (2011), *"ಕರ್ನಾಟಕ ಪಂಚಾಯತ್‌ರಾಜ್ ಸುಧಾರಣೆಯ ಮೈಲುಗಲ್ಲು"*, *ಜನಪದ*, ಬೆಂಗಳೂರು: ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ, ಜೂನ್.

ವಿಲ್‌ಫ್ರೆಡ್ ಡಿಸೋಜಾ, (2011), *"ಗ್ರಾಮಪಂಚಾಯಿತಿಗಳು ಮತ್ತು ಜವಾಬ್ದಾರಿಗಳು"*, *ಯೋಜನಾ*, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಫೆಬ್ರವರಿ, ಸಂಪುಟ 27.

--- (2011), *"ಗ್ರಾಮಪಂಚಾಯಿತಿ: ಪ್ರಕಾರ್ಯಗಳು ಮತ್ತು ಜವಾಬ್ದಾರಿ"*, *ಯೋಜನಾ*, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಜೂನ್. ಸಂಪುಟ 27.

ಶಾಲಾ ಅಭಿವೃದ್ಧಿ ಸಮಿತಿ, *(2011), ಶತಮಾನೋತ್ಸವ ಆಚರಣೆ ಸ್ಮರಣ ಸಂಚಿಕೆ*, ಸಿದ್ದಾಪುರ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೋಲಸಿರ್ಸಿ, ನವೆಂಬರ್.

ಶ್ರೀಧರ. ಎ, (2005), *"ಪ್ರಚಲಿತ ಕರ್ನಾಟಕ: ಪ್ರದೇಶಾಭಿವೃದ್ಧಿ ಮತ್ತು ಪಂಚಾಯತ್"*, ಎ. ಶ್ರೀಧರ, (ಸಂ), *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಸಂಪುಟ-4, ಸಂಚಿಕೆ-2, ಜುಲೈ-ಡಿಸೆಂಬರ್.

--- (2005), "ಪಂಚಾಯತ್ ಮತ್ತು ಮಹಿಳೆ", ಎ. ಶ್ರೀಧರ, (ಸಂ), *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಸಂಪುಟ-4, ಸಂಚಿಕೆ-2, ಜುಲೈ-ಡಿಸೆಂಬರ್.

--- (2006), "ಪಂಚಾಯಿತಿಗಳು ಮತ್ತು ಅಧಿಕಾರ (ವಿ)ಕೇಂದ್ರೀಕರಣ", ಎ. ಶ್ರೀಧರ ಮತ್ತು ಎಚ್.ಡಿ. ಪ್ರಶಾಂತ, (ಸಂ), *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಸಂಪುಟ-5, ಸಂಚಿಕೆ-2, ಜುಲೈ-ಡಿಸೆಂಬರ್.

ಸುಧಾ ಪಿಳ್ಳೈ, ಮಾಳ್ಕೋಡ್, (2001), "ಮಹಿಳೆಯ ಸಬಲೀಕರಣ ಮತ್ತು ಪಂಚಾಯತ್‌ರಾಜ್", *ಯೋಜನಾ*, ಬೆಂಗಳೂರು: ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಭಾರತ ಸರ್ಕಾರ, ಆಗಸ್ಟ್, ಸಂಪುಟ 27, ಸಂಚಿಕೆ 3.

ಸಿದ್ದಗಂಗಮ್ಮ, (2005), "ಕರ್ನಾಟಕದಲ್ಲಿ ಮಹಿಳೆ ಮತ್ತು ಮಕ್ಕಳ ಆರೋಗ್ಯ ಸ್ಥಿತಿ", ಚಂದ್ರಶೇಖರ. ಟಿ. ಆರ್ ಮತ್ತು ಇತರರು, (ಸಂ), *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ-6*, ಸಂಪುಟ-1, ಸಂಚಿಕೆ-2.

--- (2006), "ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ", ಎ. ಶ್ರೀಧರ ಮತ್ತುಎಚ್. ಡಿ. ಪ್ರಶಾಂತ, (ಸಂ), *ಅಭಿವೃದ್ಧಿ ಅಧ್ಯಯನ: ಸಮಾಜ ವಿಜ್ಞಾನ ಪತ್ರಿಕೆ*, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಸಂಪುಟ-5, ಸಂಚಿಕೆ-1.

Ghorpade M. Y, (1996), "*Panchayat Raj in Karnataka*", The Hindu.

ದಾಖಲೆಗಳು

ಅಭಿವೃದ್ಧಿ ಅಧಿಕಾರಿಗಳು, (2010), *ಸಾಮಾನ್ಯ ಅಂಕಿ ಅಂಶಗಳ ಸಮಗ್ರ ಮಾಹಿತಿ ಪುಸ್ತಕ*, ಹೊಸೂರು: ಗ್ರಾಮಪಂಚಾಯಿತಿ ಕಾರ್ಯಾಲಯ,

ಅಭಿವೃದ್ಧಿ ಅಧಿಕಾರಿಗಳು, (2010), *ಸಾಮಾನ್ಯ ಅಂಕಿ ಅಂಶಗಳ ಸಮಗ್ರ ಮಾಹಿತಿ ಪುಸ್ತಕ*, ನಾಗೇನಹಳ್ಳಿ: ಗ್ರಾಮಪಂಚಾಯಿತಿ ಕಾರ್ಯಾಲಯ,

ಅಭಿವೃದ್ಧಿ ಅಧಿಕಾರಿಗಳು, (2010), *ಸಾಮಾನ್ಯ ಅಂಕಿ ಅಂಶಗಳ ಸಮಗ್ರ ಮಾಹಿತಿ ಪುಸ್ತಕ*, ಬೇಡ್ಕಣಿ: ಗ್ರಾಮಪಂಚಾಯಿತಿ ಕಾರ್ಯಾಲಯ,

ಅಭಿವೃದ್ಧಿ ಅಧಿಕಾರಿಗಳು, (2010), *ಸಾಮಾನ್ಯ ಅಂಕಿ ಅಂಶಗಳ ಸಮಗ್ರ ಮಾಹಿತಿ ಪುಸ್ತಕ*, ಕೋಲಸಿರ್ಸಿ: ಗ್ರಾಮಪಂಚಾಯಿತಿ ಕಾರ್ಯಾಲಯ,

ಮುಖ್ಯೋಪಾಧ್ಯಾಯರು, (2011), *ನಾಗೇನಹಳ್ಳಿ ಗ್ರಾಮಪಂಚಾಯಿತಿ: ಕುಟುಂಬ ಗಣತಿ 2010*. ನಾಗೇನಹಳ್ಳಿ, ಬಸವನದುರ್ಗ, ಬೆನಕಾಪುರ, ಮತ್ತು ಕಾಳಘಟ್ಟ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು.

ಮುಖ್ಯೋಪಾಧ್ಯಾಯರು, (2011), *ಹೊಸೂರು ಗ್ರಾಮಪಂಚಾಯಿತಿ: ಕುಟುಂಬ ಗಣತಿ 2010*. ಹೊಸೂರು ಮತ್ತು ಇಪ್ಪಿತೇರಿ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು.

ಮುಖ್ಯೋಪಾಧ್ಯಾಯರು, (2011), *ಬೇಡ್ಕಣಿ ಗ್ರಾಮಪಂಚಾಯಿತಿ: ಕುಟುಂಬ ಗಣತಿ 2010*. ಬೇಡ್ಕಣಿ, ಭಾಸ್ಕುಳಿ, ತ್ಯಾರ್ಸಿ ಮತ್ತು ಮುತ್ತಿಗೆ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು.

ಮುಖ್ಯೋಪಾಧ್ಯಾಯರು, (2011), *ಕೋಲಸಿರ್ಸಿ ಗ್ರಾಮಪಂಚಾಯಿತಿ: ಕುಟುಂಬ ಗಣತಿ 2010*, ಕೋಲಸಿರ್ಸಿ, ಚನ್ಮಾಂವು, ಹಲಗಡಿಕೊಪ್ಪ, ಕಾವಲುಕೊಪ್ಪ, ಹೆಗ್ಗೋಡಮನೆ, ಅವರಗುಪ್ಪ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು.

ಚುನಾವಣಾಧಿಕಾರಿಗಳು, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, (2010), *ಗ್ರಾಮಪಂಚಾಯಿತಿ ಸ್ಥಾನಗಳ ಮೀಸಲಾತಿ ವಿವರ ಮತ್ತು ಚುನಾಯಿತ ಸದಸ್ಯರ ನಮೂನೆ-4*, ಸಿದ್ದಾಪುರ: ಚುನಾವಣಾ ವಿಭಾಗ, ತಹಶೀಲ್ದಾರ್ ಕಛೇರಿ.

ಚುನಾವಣಾಧಿಕಾರಿಗಳು, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, (2010), *ಸಂಸತ್ತು, ಜಿಲ್ಲಾಪಂಚಾಯಿತಿ ಮತ್ತು ಗ್ರಾಮಪಂಚಾಯಿತಿ ಚುನಾವಣೆಗಳು: ಮತದಾನ ಅಂಕಿ ಅಂಶಗಳ ವಿವರ-2009-10*, ಸಿದ್ದಾಪುರ: ಚುನಾವಣೆ ವಿಭಾಗ, ತಹಶೀಲ್ದಾರ್ ಕಛೇರಿ.

ಚುನಾವಣಾಧಿಕಾರಿಗಳು, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, (2010), *ಗ್ರಾಮಪಂಚಾಯಿತಿ ಸ್ಥಾನಗಳ ಮೀಸಲಾತಿ ವಿವರ ಮತ್ತು ಚುನಾಯಿತ ಸದಸ್ಯರ ನಮೂನೆ-4*, ಹೊಸಪೇಟೆ: ಚುನಾವಣಾ ವಿಭಾಗ, ತಹಶೀಲ್ದಾರ್ ಕಛೇರಿ.

ಚುನಾವಣಾಧಿಕಾರಿಗಳು, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, (2010), *ಗ್ರಾಮಪಂಚಾಯಿತಿ ಚುನಾವಣೆಯ ವಿವರ ಪತ್ರಿಕೆ, ಪ್ರಪತ್ರ-36, ಮೇ 17, 2010*, ಹೊಸಪೇಟೆ: ಚುನಾವಣಾ ವಿಭಾಗ, ತಹಶೀಲ್ದಾರ್ ಕಛೇರಿ.

ಚುನಾವಣಾಧಿಕಾರಿಗಳು, ಕರ್ನಾಟಕ ರಾಜ್ಯ ಚುನಾವಣಾ ಆಯೋಗ, (2010), *ಗ್ರಾಮಪಂಚಾಯಿತಿ ಚುನಾವಣೆಯ ವಿವರ ಪತ್ರಿಕೆ, ಪ್ರಪತ್ರ-36, ಮೇ 17, 2010*, ಸಿದ್ದಾಪುರ: ಚುನಾವಣಾ ವಿಭಾಗ, ತಹಶೀಲ್ದಾರ್ ಕಛೇರಿ.

ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, (2009-10), *ಉತ್ತರ ಕನ್ನಡ ಜಿಲ್ಲಾ ಅಂಕಿ ಅಂಶಗಳ ನೋಟ*, ಕಾರವಾರ: ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಮತ್ತು ಜಿಲ್ಲಾಪಂಚಾಯತ್ ಉತ್ತರ ಕನ್ನಡ.

ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, (2010), ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ, ಬಳ್ಳಾರಿ: ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಮತ್ತು ಜಿಲ್ಲಾಪಂಚಾಯತ್, ಬಳ್ಳಾರಿ.

ಸಾಂಖ್ಯಿಕ ಅಧಿಕಾರಿಗಳು, *2001 ಮತ್ತು 2011ರ ಜನಗಣತಿ: ಗ್ರಾಮಪಂಚಾಯಿತಿವಾರು, ಗ್ರಾಮವಾರು ಜನಸಂಖ್ಯೆ ಮಾಹಿತಿ*, ಹೊಸಪೇಟೆ: ಜನಗಣತಿ ಮತ್ತು ಅಂಕಿ ಅಂಶಗಳ ವಿಭಾಗ, ತಹಶೀಲ್ದಾರ್ ಕಛೇರಿ.

ಸಾಂಖ್ಯಿಕ ಅಧಿಕಾರಿಗಳು, *2001 ಮತ್ತು 2011ರ ಜನಗಣತಿ: ಗ್ರಾಮಪಂಚಾಯಿತಿವಾರು, ಗ್ರಾಮವಾರು ಜನಸಂಖ್ಯೆ ಮಾಹಿತಿ*, ಸಿದ್ದಾಪುರ: ಜನಗಣತಿ ಮತ್ತು ಅಂಕಿ ಅಂಶಗಳ ವಿಭಾಗ, ತಹಶೀಲ್ದಾರ್ ಕಛೇರಿ.

Web//.. Articles & Web//.. Sites

Arun & Rashmi, (1997), *"The Role of Women in Panchayti Raj"*, Googal: www. Wikipedia.com, Pdf.file, August 27, 2009, time:12.45pm.

Bhargava B.S & Bhaskara, (1992), *"Women in Grossroots Democracy* - A Study of Kerala", Googal: www. Wikipedia.com, Pdf.file, August 15, 2009, time:11.30am.

Bohra O.P, (1997), *"Women in Decentralized Democracy- A Case Study of Tamil Nadu"*. Googal: www. Wikipedia.com, Pdf.file, August 27, 2009, time:10.30am.

Devaki Jain, (1992), *"Woman: New Vision of Leadership"*, Dublin: A presentation at global forum, Googal: www. Wikipedia.com, Pdf.file, August 15, 2009, time:11.30am.

Govinda Gowda S & others, (1996), *"Developmental Role of Women members of Panchayati Raj Institution: A Study in Karnatka"*, Googal: www. Wikipedia. com, Pdf.file, August 15, 2009, time:11.30am.

Manikyamba P, (1989), *"Woman in Panchayat Structure-Promises and Performances"*, Googal: www. Wikipedia.com, Pdf.file, August 27, 2009, time:10.30am.

Mohanty Bidyut, (2002), *Woman and Political Empowerment,* Googal: www. Wikipedia.com, Pdf.file, August 27, 2009, time:10.30am.

Nirmala Buch, (2000), *Panchayatis and Women: Status of Panchayati Raj in the States and Union Territories of India,* Googal: www. Wikipedia.com, Pdf.file, August 27, 2009, time:10.30am.

Panda Snehalata, (1995), *Gender, Environment and Participation in Politics,* Googal: www. Wikipedia.com, Pdf.file, August 27, 2009, time:10.30am.

--- (1996), *Emerging Pattern of Leadership Among Rural Woman in Orissa,* Googal: www. Wikipedia.com, Pdf.file, August 27, 2009, time:10.30am.

--- (1999), *Political Empowerment of Woman: Case of Orissa Panchayati Raj Institution,* Googal: www. Wikipedia.com, Pdf.file, August 15, 2009, time:11.30am.

Raghavan B. S, (2009), *"50% Reservation for Women in Paanchayat"*, Googal: www. Wikipedia.com, Pdf.file, August 27, 2009, time:11.30am.

Sachchidananda Satpathi, (2002), *Women Empowerment and PanchayatRaj: A case Study of Orissa:* Googal: www. Wikipedia.com, Pdf.file, August 27, 2009, time:10.30am.

Shirana Rai, (2000), *Looking to the Future: Panchayat, Women Representation and Delibaration Politics:* Googal: www. Wikipedia.com, Pdf.file, August 15, 2009, time:11.30am..

The Politics of Presence, (2008), *Woman in Local Government in India,* Googal: www. Wikipedia.com, Pdf.file, june 12, 2009, time:8.30pm.

Usha Narayana, (1996), *"Women in Panchayat: The Path ahead"*, Googal: www. Wikipedia.com, Pdf.file, june 12, 2009, time:9.15pm..

www.Bellary District: A profile, date: 24/12/2011, time: 23:11.

www. Census of India, Directorate of Census Operations-2011, Karnataka: Government of India, 2013, date: 11/08/2013, time:20:35.

www.gramapanchayat .kar.nic pdf. file, time:11.30 am, date:15/6/2010.

www. panchatantra.com, Bedkani Gramapanchayat, 1-1-2012. time 22.35pm.

www. Taluku Profile, Siddapur: Taluku Map, date: 23/11/2011, time 23:53pm

www.Uttara Kannada District Profile, Date:24/11/2011. Time:23:53.